ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

# ಅಂದಾನಪ್ಪ ದೊಡ್ಡಮೇಟಿ



ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

# ಅಂದಾನಪ್ಪದೊಡ್ಡಮೇಟಿ

ಪ್ರೊ ಸಿ.ವಿ. ಕೆರಿಮನಿ

ಪ್ರಕಟಣೆ
ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ
ವಿಧಾನಸೌಧ, ಬೆಂಗಳೂರು

17740-1

**ANDANAPPA DODDAMETTI**
Eminent Parlimentarian Series
Written by **Prof. C.V. KERIMANI**
Rtd., Principal M.A. College, Lakshmeshwar
Dist., Gadag
**Published** by
Karnataka Legislature Library Committee
Vidhana Soudha. Bangalore-560001.
Page: 219 + xi Price: 25-00 Rs.
© **Chairman,** Karnataka Legislative Council
& **Speaker,** Karnataka Legislative Assembly
First Edition: 2008 Copies: 2000
**Printed & Designed by**
Government Press, Bangalore.

**ಅಂದಾನಪ್ಪ ದೊಡ್ಡಮೇಟಿ**
ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ
ಲೇಖಕರು: **ಪ್ರೊ. ಸಿ.ವಿ. ಕೆರಿಮನಿ**
ನಿವೃತ್ತ ಪ್ರಾಚಾರ್ಯರು, ಎಂ.ಎ. ಕಾಲೇಜು,
ಲಕ್ಷ್ಮೇಶ್ವರ, ಗದಗ ಜಿಲ್ಲೆ.
**ಪ್ರಕಾಶನ**
**ಗ್ರಂಥಾಲಯ ಸಮಿತಿ**
**ಕರ್ನಾಟಕ ವಿಧಾನ ಮಂಡಲ**
ವಿಧಾನಸೌಧ, ಬೆಂಗಳೂರು-560 001.
ಪುಟ: 219 + xi ಬೆಲೆ: 25/- ರೂ.
© **ಸಭಾಪತಿಗಳು:** ಕರ್ನಾಟಕ ವಿಧಾನ ಪರಿಷತ್
**ಸಭಾಧ್ಯಕ್ಷರು:** ಕರ್ನಾಟಕ ವಿಧಾನ ಸಭೆ
ಮೊದಲ ಮುದ್ರಣ: 2008 ಪ್ರತಿಗಳು: 2,000
**ಮುದ್ರಣ ಮತ್ತು ವಿನ್ಯಾಸ**
ಸರ್ಕಾರಿ ಮುದ್ರಣಾಲಯ, ಬೆಂಗಳೂರು-560 001.

# ವಿಧಾನ ಮಂಡಲ ಗ್ರಂಥಾಲಯ ಸಮಿತಿ
## 2008–2009

ಅಧ್ಯಕ್ಷರು

**ಶ್ರೀ ವೀರಣ್ಣ ಮತ್ತಿಕಟ್ಟಿ**

ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರು

**ಶ್ರೀ ಜಗದೀಶ ಶೆಟ್ಟರ್**

ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ

**ಶ್ರೀ ಎಂ. ನಾರಾಯಣಸ್ವಾಮಿ**

ವಿಧಾನಸಭಾ ಸದಸ್ಯರು ಹಾಗೂ ಉಪ ಸಮಿತಿಯ ಅಧ್ಯಕ್ಷರು

**ಶ್ರೀ ಕೆ. ಲಕ್ಷ್ಮೀನಾರಾಯಣ**

ವಿಧಾನಸಭಾ ಸದಸ್ಯರು

**ಶ್ರೀ ಎಸ್.ವಿ. ರಾಮಚಂದ್ರ**

ವಿಧಾನಸಭಾ ಸದಸ್ಯರು

**ಶ್ರೀ ಎನ್.ಎ. ಹ್ಯಾರೀಸ್**

ವಿಧಾನಸಭಾ ಸದಸ್ಯರು

**ಶ್ರೀ ಹೆಚ್.ಎಸ್. ಪ್ರಕಾಶ್**

ವಿಧಾನಸಭಾ ಸದಸ್ಯರು

**ಡಾ॥ ಚಂದ್ರಶೇಖರ ಬಿ.ಕಂಬಾರ**

ವಿಧಾನ ಪರಿಷತ್ ಸದಸ್ಯರು

**ಶ್ರೀ ಮುಖ್ಯಮಂತ್ರಿ ಚಂದ್ರು**

ವಿಧಾನ ಪರಿಷತ್ ಸದಸ್ಯರು

**ಡಾ॥ ಶ್ರೀನಾಥ್**

ವಿಧಾನ ಪರಿಷತ್ ಸದಸ್ಯರು

# ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

## ಅಧಿಕಾರಿ – ಸಂಪಾದಕ ವರ್ಗ

## ಕರ್ನಾಟಕ ವಿಧಾನ ಮಂಡಲ

| | |
|---|---|
| ಡಿ'ಸೋಜ ರಾಬಿನ್‌ಸನ್ | ಪ್ರಧಾನ ಕಾರ್ಯದರ್ಶಿ |

## ಕರ್ನಾಟಕ ವಿಧಾನಸಭೆ ಸಚಿವಾಲಯ

| | |
|---|---|
| ಎಸ್.ಬಿ. ಪಾಟೀಲ್ | ಕಾರ್ಯದರ್ಶಿ |
| ಟಿ.ಎನ್. ಧ್ರುವಕುಮಾರ್ | ಅಪರ ಕಾರ್ಯದರ್ಶಿ (ಪ್ರ) |
| ಎಂ. ಗುರುರಾಜ | ಉಪ ಕಾರ್ಯದರ್ಶಿ |
| ಮುನೀರುನ್ನಿಸಾ | ಅಧೀನ ಕಾರ್ಯದರ್ಶಿ (ಪ್ರ) |
| ಅನಸೂಯ ಎನ್.ದೇವಗಿರಿ | ಸಹಾಯಕ ಗ್ರಂಥಪಾಲಕಿ |

## ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

| | |
|---|---|
| ವಿ. ಶ್ರೀಶ್ | ಕಾರ್ಯದರ್ಶಿ |
| ಟಿ. ಕೃಷ್ಣೆಗೌಡ | ಅಪರ ಕಾರ್ಯದರ್ಶಿ |

# ಮುನ್ನುಡಿ

**26 ಡಿಸೆಂಬರ್ 2008**

ಸುವರ್ಣ ಮಹೋತ್ಸವದ ಆಚರಣೆಯ ಅಂಗವಾಗಿ ಈ ದೇಶಕ್ಕಾಗಿ ದುಡಿದ, ಅಗ್ರಮಾನ್ಯ ಸಂಸದೀಯ ಪಟುಗಳಾಗಿ ಕೊಡುಗೆಯನ್ನು ನೀಡಿದ ಮಹನೀಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಪ್ರತಿಭಾವಂತ ಸಂಸದೀಯ ಪಟುಗಳ ಬಗ್ಗೆ ಅನೇಕ ಹೊತ್ತಿಗೆಗಳನ್ನು ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹೊರತಂದಿರುತ್ತಾರೆ. ಅವುಗಳಲ್ಲಿ ಡಾ|| ರಾಮಮನೋಹರ ಲೋಹಿಯಾ, ಡಾ|| ಬಿ.ಆರ್. ಅಂಬೇಡ್ಕರ್, ಡಾ|| ಶಾಂಪ್ರಸಾದ್ ಮುಖರ್ಜಿ, ಡಾ|| ರಾಜೇಂದ್ರ ಪ್ರಸಾದ್ ಮೊದಲಾದ ಗಣ್ಯರ ಪುಸ್ತಕಗಳನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಹೊರತಂದಿರುವ ಸಂತೋಷಕರ ವಿಷಯವನ್ನು ಉಲ್ಲೇಖಿಸಬಯಸುತ್ತೇವೆ.

ರಾಜ್ಯದ ಸಂಸದೀಯ ಪಟುಗಳಾದ ಅನೇಕ ಮಹನೀಯರನ್ನು ಕುರಿತು ಹೊತ್ತಿಗೆಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆಯನ್ನು ಕರ್ನಾಟಕ ವಿಧಾನ ಮಂಡಲವು ಹಮ್ಮಿಕೊಂಡಿದ್ದು, ವಿಧಾನ ಮಂಡಲದ ಗ್ರಂಥಾಲಯ ಸಮಿತಿಯು ಈಗಾಗಲೇ ಪ್ರಕಟಿಸುತ್ತಿದೆ. ಈ ಉಪ ಸಮಿತಿಯು ಕಾರ್ಯಪ್ರವೃತ್ತವಾಗಿ ರಾಜ್ಯದ ಲೇಖಕರ, ವಿದ್ವಾಂಸರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ನಮ್ಮ ನಾಡಿನ ಪ್ರಗತಿಪರ ಚಿಂತಕರು, ರಾಜಕೀಯ ಮುತ್ಸದ್ದಿಗಳ ಆಶಯಗಳನ್ನು ದಾಖಲಿಸಿ ಈ ಮೂಲಕ ಅವರ ಜೀವನ ಚಿತ್ರಣವನ್ನು ಪುಸ್ತಕ ರೂಪದಲ್ಲಿ ತರುತ್ತಿದೆ.

ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಶಾಂತವೇರಿ ಗೋಪಾಲಗೌಡ, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಕೆ.ಸಿ. ರೆಡ್ಡಿ, ಶ್ರೀ ಡಿ. ದೇವರಾಜ ಅರಸು, ಶ್ರೀ ಜೆ.ಹೆಚ್. ಪಟೇಲ್, ಶ್ರೀ ಟಿ.ಆರ್. ಶಾಮಣ್ಣ, ಶ್ರೀ ಎಸ್.ಡಿ. ಗಾಂವಕರ್, ಶ್ರೀಮತಿ ಬಿ.ಎಲ್. ಸುಬ್ಬಮ್ಮ, ಡಾ|| ಲಂಕಾ ಸುಂದರಂ, ಸರದಾರ ಶರಣಗೌಡ ಇನಾಂದಾರ್, ಕೆ.ಹೆಚ್. ರಂಗನಾಥ್ ಮತ್ತಿತರ ಹಲವು ಗಣ್ಯರ ಬಗೆಗಿನ ಪುಸ್ತಕಗಳನ್ನು ಹೊರತರಲಾಗಿದೆ.

**ಪ್ರೊ. ಸಿ.ವಿ. ಕೆರಿಮನಿ** ಅವರು ರಚಿಸಿರುವ ರಾಜ್ಯದ ಹಿರಿಯ ಸಂಸದೀಯ ಪಟುವಾಗಿದ್ದ **ಅಂದಾನಪ್ಪ ದೊಡ್ಡಮೇಟಿ** ಅವರ ಬಗೆಗಿನ ಈ ಪುಸ್ತಕವನ್ನು ತಮ್ಮ ಮುಂದಿಡಲು ಹೆಮ್ಮೆಯೆನಿಸುತ್ತದೆ. ಇವರ ಸದನದ ಭಾಷಣಗಳು ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ನಾಡಿನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಶಯಗಳನ್ನು ಬಿಂಬಿಸುತ್ತವೆ.

ಈ ಪುಸ್ತಕವನ್ನು ರಚಿಸಿದ ಲೇಖಕರಿಗೆ ಹಾಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೆ ಹಾಗೂ ಉಪ ಸಮಿತಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಪುಸ್ತಕವು ಮಾನ್ಯ ಸದಸ್ಯರುಗಳಿಗೆ, ಸಂಶೋಧಕರಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಹೆಚ್ಚಿನ ಅನುಭವ ನೀಡುತ್ತದೆ ಮತ್ತು ಉಪಯುಕ್ತವಾಗುತ್ತದೆಂದು ಭಾವಿಸುತ್ತೇವೆ.

**ವೀರಣ್ಣ ಮತ್ತಿಕಟ್ಟಿ**
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

**ಜಗದೀಶ್ ಶೆಟ್ಟರ್**
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ

# ಲೇಖಕರ ಮಾತು

20ನೇ ಶತಮಾನದಲ್ಲಿ ಕರ್ನಾಟಕದ ಏಕೀಕರಣ ಹಾಗೂ ನಾಮಕರಣ ಮತ್ತು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನಡೆಯಬೇಕೆಂಬ ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಿದವರು ಅಂದಿನ ಸಣ್ಣ ನೀರಾವರಿ ರಾಜ್ಯ ಸಚಿವ ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರು. 'ಅಪ್ಪಟ ಗಾಂಧಿವಾದಿಯಾಗಿದ್ದ ಶ್ರೀಯುತರು ನಡೆದ ಮಾರ್ಗ ಇಂದಿನ ಪೀಳಿಗೆಗೆ ವಿಶೇಷವಾಗಿ ರಾಜಕಾರಣಿಗಳಿಗೆ ಮಾದರಿಯಾಗಿ ನಿಲ್ಲುವಂತಹದು.

ಕರ್ನಾಟಕ ಏಕೀಕರಣ ಹಾಗೂ ಭಾರತ ಸ್ವಾತಂತ್ರ್ಯಾಂದೋಲನ ಎರಡರಲ್ಲೂ ಮಹತ್ವದ ಪಾತ್ರ ವಹಿಸಿದವರು ಶ್ರೀ ದೊಡ್ಡಮೇಟಿ, ಕಾಂಗ್ರೆಸ್ ಸೇರುವ ಮೊದಲೇ ವೈಯಕ್ತಿಕ ಚಳುವಳಿ ಮಾಡಿ ಕರ್ನಾಟಕ ರಾಜ್ಯ ಪ್ರತ್ಯೇಕತೆಗಾಗಿ ಪ್ರತಿಭಟಿಸಿ ನಂತರ ಕಾಂಗ್ರೆಸ್ ಸೇರಿ ಸ್ವಾತಂತ್ರ್ಯ ಹೋರಾಟ ಮಾಡಿ ಜೈಲಿಗೆ ಹೋಗಿ ಬಂದರು. ಮಹಾತ್ಮರವರ ಪ್ರಭಾವಕ್ಕೊಳಗಾಗಿ ಸತ್ಯ, ಅಹಿಂಸೆ, ಸರಳ ಜೀವನ ಶೈಲಿ, ಸಂಪೂರ್ಣ ಪ್ರಾಮಾಣಿಕತೆಯನ್ನು ಪಾಲಿಸಿಕೊಂಡು ಬೆಳೆದು ಬಂದರು. ಇದರಿಂದಾಗಿಯೇ ಜಮಖಂಡಿ ಹಾಗೂ ರಾಮದುರ್ಗ ಸಂಸ್ಥಾನಗಳ ಜನತಾ ಸಭೆಯ ಅಧ್ಯಕ್ಷರಾಗಿ, ಶಾಸಕರಾಗಿ, ಮಂತ್ರಿಗಳಾಗಿ ಹಲವಾರು ಅತ್ಯುನ್ನತ ಹುದ್ದೆಯಲ್ಲಿದ್ದರೂ, ಅಧಿಕಾರ ಭ್ರಷ್ಟತೆಯನ್ನು ಹುಟ್ಟು ಹಾಕುತ್ತದೆ.' ಎಂಬ ಉಕ್ತಿಯನ್ನು ಹುಸಿಗೊಳಿಸಿ ಶುದ್ಧ ಹಸ್ತರಾಗಿ ಉಳಿದವರು. ನಾಡಿಗೆ ಅವರು ಸಲ್ಲಿಸಿದ ಸೇವೆ ಚಿರಕಾಲ ಉಳಿಯುವಂತಹದು.

ಇಂತಹ ಸಾತ್ವಿಕ ರಾಜಕಾರಣಿಯೊಬ್ಬರ ಜೀವನ ಚರಿತ್ರೆ, ಸಾಧನೆಗಳನ್ನು ದಾಖಲಿಸಲು ಸಿಕ್ಕ ಅವಕಾಶಕ್ಕಾಗಿ ನಾನು ಕರ್ನಾಟಕ ವಿಧಾನಸಭಾ ಗ್ರಂಥಾಲಯ ಸಮಿತಿಯ ಅಧ್ಯಕ್ಷರು, ಮತ್ತು ಉಪ ಸಮಿತಿಯ ಅಧ್ಯಕ್ಷರು ಹಾಗೂ ಎಲ್ಲ ಸದಸ್ಯರಿಗೆ ನನ್ನ ಮೊದಲ ವಂದನೆಗಳನ್ನು ಸಲ್ಲಿಸಬಯಸುತ್ತೇನೆ. ಈ ಕಾರ್ಯದ ರೂವಾರಿಯೆನಿಸುವ ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಗಳು, ಹಾಗೂ ಮಾನ್ಯ ವಿಧಾನಸಭಾಧ್ಯಕ್ಷರ ಮಾರ್ಗದರ್ಶನವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ವಿಧಾನ ಸಭೆಯ ಸದಸ್ಯ ಹಾಗೂ ನನ್ನ ಹಿತೈಷಿಗಳಾದ ಮಾನ್ಯ ಶ್ರೀ ಜಿ.ಎಸ್. ಗಡ್ಡದ್ದೇವರಮಠ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಇದಲ್ಲದೆ ಈ ಕೆಲಸದಲ್ಲಿ ಬೇಕಾದ ಸಹಾಯ ಸಹಕಾರ ನೀಡಿದ ವಿಧಾನ ಮಂಡಲದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಈ ಹೊತ್ತಿನಲ್ಲಿ ಸ್ಮರಿಸ ಬಯಸುತ್ತೇನೆ. ಈ ಗ್ರಂಥ ಸಿದ್ಧಗೊಳಿಸುವಾಗ

ಹಾಗೂ ಕರಡು ತಯಾರಿಸುವಲ್ಲಿ ಸಹಾಯ ಮಾಡಿದ ನನ್ನ ಆತ್ಮೀಯ ಶ್ರೀ ಕೊತ್ತಲ ಮಹಾದೇವಪ್ಪ ಹಾಗೂ ಜಕ್ಕಲಿಯ ಮಾಜಿ ಶಾಸಕ ಜ್ಞಾನದೇವ ದೊಡ್ಡಮೇಟಿ ಅವರನ್ನು ಪ್ರತಿಭಾವಂತ ಸಂಸದೀಯಗಳ ಜೀವನ ಮಾರ್ಗ, ಸೇವಾಕಾರ್ಯ ಇತ್ಯಾದಿಗಳನ್ನು ನಾಡಿಗೆ ಪರಿಚಯಿಸುವ ಈ ಗ್ರಂಥ ಮಾಲೆಯ ಸದುದ್ದೇಶವನ್ನು ಕೊಂಡಾಡುತ್ತ ಈ ಭಾಗ್ಯದಲ್ಲಿ ನಾನು ಪಾಲ್ಗೊಳ್ಳುವಂತೆ ಮಾಡಿದ ಸಂಬಂಧಿಸಿದ ಎಲ್ಲರಿಗೂ ಮತ್ತೊಮ್ಮೆ ಕೃತಜ್ಞತೆ ಸಲ್ಲಿಸುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ.

ಲಕ್ಷ್ಮೇಶ್ವರ

**ಪ್ರೊ. ಸಿ. ವಿ. ಕೆರಿಮನಿ.**
ನಿವೃತ್ತ ಪ್ರಾಚಾರ್ಯರು,
ಎಂ.ಎ. ಕಾಲೇಜು, ಲಕ್ಷ್ಮೇಶ್ವರ,
ಗದಗ ಜಿಲ್ಲೆ.

# ಪರಿವಿಡಿ

ಮುನ್ನುಡಿ V
ಲೇಖಕರ ಮಾತು VII

**ಭಾಗ-೧**
**ಶ್ರೀ ಅಂದಾನಪ್ಪ ದೊಡ್ಡಮೇಟಿ: ವ್ಯಕ್ತಿ–ವ್ಯಕ್ತಿತ್ವ**

1. ಬಾಲ್ಯ ಮತ್ತು ವಿದ್ಯಾಭ್ಯಾಸ – 03
2. ರಾಷ್ಟ್ರೀಯ ಭಾವನೆ – 04
3. ಮಹಾತ್ಮ ಗಾಂಧೀಜಿಯವರ ಭೇಟಿ – 05
4. ಹಿಂಡಲಗಿ ತುರಂಗ – 07
5. ಹರಿಜನ ಸಂಘ – 08
6. ಏಕೀಕರಣ ಮತ್ತು ಸಭೆ ಠರಾವು – 09
7. ಉಪವಾಸ ಸತ್ಯಾಗ್ರಹ – 10
8. ಕನ್ನಡ ಡಿಂಡಿಮ ಬಾರಿಸಿದ್ದು ಮುಂಬೈ ಶಾಸನ ಸಭೆಯಲ್ಲಿ – 11
9. ಶ್ರೀ ಅರವಿಂದರ ದರ್ಶನ – 14
10. ಪುನಃ ಜೈಲಿಗೆ – 15
11. ಕರ್ನಾಟಕ ಏಕೀಕರಣ: ದೊಡ್ಡಮೇಟಿ ಮಹತ್ವದ ಪಾತ್ರ – 16
12. ರಾಜ್ಯಕ್ಕೆ ಕರ್ನಾಟಕ ನಾಮಕರಣ – 19

**ಭಾಗ-೨**
**ಮುಂಬೈ ಶಾಸನ ಸಭೆಯ ಕಲಾಪಗಳು** - 27

1. ಭಾಷಾವಾರು ಪ್ರಾಂತ ಕುರಿತು - 29
2. ಶ್ರೀ ನೆಹರೂರವರ ಪ್ರಸ್ತಾವನೆ - 31
3. ಭಾಷಾವಾರು ಪ್ರಾಂತದ ರಚನೆಗೆ ಪ್ರಮುಖರ ಅಭಿಪ್ರಾಯಗಳು - 34
4. ಕರ್ನಾಟಕ ಏಕೀಕರಣಕ್ಕಾಗಿ ದೊಡ್ಡಮೇಟಿಯವರ ಒತ್ತಾಸೆ - 37

## ನವಮೈಸೂರು ವಿಧಾನ ಸಭೆಯ ಕಲಾಪಗಳು


5. ಕರ್ನಾಟಕ ನಾಮಕರಣ - 45
6. ನಾಡಿನ ಪ್ರಗತಿ ಚಿಂತನೆ - 60
7. 1961ರ ಬಜೆಟ್ ಹಾಗೂ ಕರ್ನಾಟಕ ನಾಮಕರಣ - 64
8. ಬರಗಾಲ ಪರಿಹಾರ ಧಾರವಾಡ ಜಿಲ್ಲೆಯಲ್ಲಿ - 76
9. ಭೂ ಸುಧಾರಣಾ ಸಮಿತಿಯ ಪರಿಶೀಲನಾ ಚರ್ಚೆ - 79
10. ರೋಣ ತಾಲ್ಲೂಕಿಗೆ ವಿದ್ಯುಚ್ಛಕ್ತಿ - 83
11. ಕೊಳವೆ ಬಾವಿ ತೊಡಿಸುವ ಬಗ್ಗೆ ಚಿಂತನೆ - 85
12. ಕರ್ನಾಟಕ ನಾಮಕರಣ - 86
13. ರೋಣ ತಾಲ್ಲೂಕಿನಲ್ಲಿ ಬರಗಾಲ - 94
14. 1962-63ರ ಅಂದಾಜು ಪತ್ರಿಕೆ - 97
15. ಹಂಚಿನಾಳ ಗ್ರಾಮಜನರ ಪುನರ್ವಸತಿ - 100
16. ಆಹಾರ ಧಾನ್ಯ ಸಂಗ್ರಹ - 102
17. ಗಜೇಂದ್ರಗಡ ಬಳಿ ಸೇತುವೆ ನಿರ್ಮಾಣ - 108
18. ವಿಜಿಲೆನ್ಸ್ ಕಮೀಷನ್ - 110
19. ಬರಗಾಲ ನಿವಾರಣೆ ಚರ್ಚೆ - 112
20. ಧಾರವಾಡ ಜಿಲ್ಲೆಯ ಬರಗಾಲ - 116
21. ಉತ್ತರ ಕರ್ನಾಟಕದ ದೇವದಾಸಿಯವರಿಗೆ ಇನಾಮಭೂಮಿ ನೀಡಿಕೆ - 130
22. ಘನವೆತ್ತ ರಾಜ್ಯಪಾಲರಿಗೆ ವಂದನೆ - 134
23. ಮಲಪ್ರಭಾ ನೀರಾವರಿ ಯೋಜನೆ - 139
24. ಆಯವ್ಯಯ ಪಟ್ಟಿ 1965-66 - 144
25. ಗೋವಾ ಯಾವ ರಾಜ್ಯದಲ್ಲಿ ಸೇರ್ಪಡೆಯಾಗಬೇಕೆಂಬ ಬಗೆಗೆ ಒಂದು ಚಿಂತನೆ - 150
26. ಸಹಕಾರಿ ಸಂಘಗಳಿಗೆ ರಿಬೇಟು - 160
27. ಕಂದಾಯ ಇಲಾಖೆಗೆ ಕಾಯಕಲ್ಪ - 161
28. ಭೂ-ಸುಧಾರಣೆ ಮಸೂದೆ ಮೇಲೆ ಚರ್ಚೆ - 166
29. ಕಪ್ಪತ್ತೇಶ್ವರ ಕ್ಷೇತ್ರ (ಪ್ರವಾಸಿತಾಣವಾಗಲಿ) - 171
30. ಭ್ರಷ್ಟಾಚಾರ ನಿರ್ಮೂಲನೆ - 173

31. ವಂಶ ಪಾರಂಪರೆ ಬಂದಿರುವ ಹಳ್ಳಿಯ ಶಾನುಭೋಗ ಹಾಗೂ ಪಟೇಲರ ಅಧಿಕಾರ ಮೊಟಕುಗೊಳಿಸುವ ಕುರಿತು - 174

32. ಗಡಿ ಆಯೋಗ ನೇಮಿಸುವ ಬಗೆಗೆ ಚರ್ಚೆ - 177

33. ಕರ್ನಾಟಕ ರಾಜ್ಯವೆಂಬ ನಾಮಕರಣಕ್ಕೆ ಶಿಫಾರಸ್ಸು - 186


## ಭಾಗ-೩
## ಗಣ್ಯರ ಜೊತೆಗೆ ದೊಡ್ಡಮೇಟಿ ಅಂದಾನಪ್ಪನವರ ಸಂಪರ್ಕ


1 ಮಹಾತ್ಮಾ ಗಾಂಧೀಜಿ - 195

2 ಶ್ರೀ ಮುರಾರ್ಜಿ ದೇಸಾಯಿ - 196

3 ಹಿರಿಯರಾದ ದಿವಾಕರ ರಂಗರಾಯರು - 196

4 ರಾಷ್ಟ್ರ ಬಂಧು ಪತ್ರಿಕೆಯ ಸಂಪಾದಕ - 197

5 ಜಮಖಂಡಿ ಸಂಸ್ಥಾನ ಪ್ರಜಾ ಪರಿಷತ್ತು 6ನೆಯ ಅಧಿವೇಶನ ಸಂಶಿ ಮೇ 1938 - 197


## ಭಾಗ-೪


ಶ್ರೀ ಅಂದಾನಪ್ಪ ದೊಡ್ಡಮೇಟಿ ಅವರ ಛಾಯಾಚಿತ್ರಗಳು - 209

# ಭಾಗ-1

# ಆಂದಾನಪ್ಪ ದೊಡ್ಡಮೇಟಿರವರ ಜೀವನದ ಸಂಪೂರ್ಣ ಚಿತ್ರಣ

ಹೆಸರಾಯಿತು ಕರ್ನಾಟಕ
ಉಸಿರಾಗಲು ಕನ್ನಡ
ಹಸಿಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ

- ಚೆನ್ನವೀರ ಕಣವಿ

# ಅಂದಾನಪ್ಪ ದೊಡ್ಡಮೇಟಿ: ವ್ಯಕ್ತಿ–ವ್ಯಕ್ತಿತ್ವ

ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಜಕ್ಕಲಿ ಗ್ರಾಮದಲ್ಲಿ ದಿನಾಂಕ:16.3.1908 ರಂದು ಅಂದಾನಪ್ಪ ಅವರು ಜನಿಸಿದರು. ತಂದೆ-ಜ್ಞಾನಪ್ಪ, ತಾಯಿ-ಬಸಮ್ಮ ದಂಪತಿಗಳ ಕಣ್ಮಣಿಯಾಗಿ ಬೆಳೆದರು. ಇವರದು ಕೃಷಿ ಪ್ರಧಾನ ಕುಟುಂಬ. ಮೇಟಿ ಮನೆತನವೆಂದೇ ಖ್ಯಾತಿ ಪಡೆದಿದ್ದರೂ ಗೌರವ ಹಕ್ಕು ಬಾಬು ಪಡೆಯಲೆಂದು ನ್ಯಾಯಾಲಯ ಕಟ್ಟೆಹತ್ತಿ ವಿಜಯರಾದ ಕಾರಣ ದೊಡ್ಡಮೇಟಿಯೆಂದು ಹೆಸರು ಪಡೆಯಿತು. ಇವರ ಮನೆತನದ ಅಂದಾನಪ್ಪನವರು ರಾಜಕೀಯ ಕ್ಷೇತ್ರದಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೊಡ್ಡಮೇಟಿಯನ್ನು ಸಡಹಾಕಿ ಹಂತಿಯನ್ನು ಕಟ್ಟಿದವರು. ಇವರ ಜೊತೆಗೆ ಸ್ವಾತಂತ್ರ್ಯ ಪಡೆಯೇ ಸಿದ್ಧಗೊಂಡಿತು. ಪ್ರೀತಿ, ವಿಶ್ವಾಸ, ವಾತ್ಸಲ್ಯ, ಅನುಕಂಪ, ದಯಾಗುಣಗಳಿಗೆ ಸಿರಿತನ ಬಡತನ ಅಡೆತಡೆಯಾಗದು ಮಾನವೀಯ ಗುಣಗಳನ್ನು ಅಳವಡಿಸಿಕೊಂಡು ಜನಹಿತ ಕಾರ್ಯಗೈದ ಮನೆತನವಿದು.

## ಬಾಲ್ಯ ಮತ್ತು ವಿದ್ಯಾಭ್ಯಾಸ

ಬಾಲ್ಯದಲ್ಲಿ ತುಂಬಾ ಅಶಕ್ತರಾಗಿದ್ದ ಅಂದಾನಪ್ಪನವರು ಹೆಚ್ಚು ಓದುವುದಾಗಲಿಲ್ಲ. ಮೂರನೆಯ ತರಗತಿಯವರೆಗೂ ಹೆಚ್ಚಿನ ಅಂಕಗಳನ್ನು ಗಳಿಸಿದ್ದು ಸತ್ಯ. ಮುಂದೆ ಮುಲ್ಕಿ ಪರೀಕ್ಷೆ (ಈಗಿನ ಏಳನೆಯ ತರಗತಿ) ವರೆಗೆ ಓದುವುದು, ನಂತರ ಏನು? ಎಂಬ ಪ್ರಶ್ನೆ ಉದ್ಭವಗೊಂಡಿತು. ನಾಲ್ಕನೆಯ ತರಗತಿಯಲ್ಲಿ ಓದುವಾಗಲೇ ಅವರ ತಂದೆಯವರಿಂದ ಜೈಮಿನಿಭಾರತ, ಶಬರ ಶಂಕರ ವಿಳಾಸ, ಗದಾಯುದ್ಧ ಕೈವಲ್ಯ ಕಲ್ಪವಲ್ಲರಿ, ಹರಿಹರನರಗಳೆ, ದೇವಿಭಾಗವತ ಚೆನ್ನಾಗಿ ತಿಳಿದುಕೊಂಡರು. ಮೈಸೂರ ಸ್ಟಾರ್, ವಿಜಯ, ಕರ್ನಾಟಕ ಟೈಮ್ಸ್, ನವಕರ್ನಾಟಕ ಮತ್ತಿತರ ದೈನಿಕ ಪತ್ರಿಕೆಗಳನ್ನು ಓದಿ ತಿಳಿಯುತೊಡಗಿದರು. ತಂದೆಯುವರಿಂದ ಸುಸಂಸ್ಕೃತ ನಾಗರಿಕನಾದರು. ಇಲ್ಲವಾದರೆ ಹಣವಂತ ಅಜ್ಞಾನಿಯಾಗುತ್ತಿದ್ದರು. ತೀಕ್ಷ್ಣ ಬುದ್ದಿಯ ಶ್ರೀ ದೊಡ್ಡಮೇಟಿ ಅವರು ಅರಿವಿನ ಕಣ್ಣುಗಳಿಂದ ಜ್ಞಾನಗಳಿಸಿ ತಮ್ಮ ಬಾಳು ಬೆಳಗಿಸಿಕೊಂಡರು.

## ಕಂಕಣ ಬಲ

ಇವರ ತಂದೆಯವರು ಹಿರಿಯ ಮಗ ಶಿವನಾಗಪ್ಪ ತೀರಿಕೊಂಡ ನಂತರ ಮನಶಾಂತಿಗಾಗಿ ಕಾಶಿ, ರಾಮೇಶ್ವರ, ಯಾತ್ರೆ ಕೈಕೊಂಡು ನಂತರ ಮನೆತನದ ಎಲ್ಲ ಹೊಣೆಗಾರಿಕೆಯನ್ನು ಅಂದಾನಪ್ಪನವರಿಗೆ ಹೊರಿಸಿದರು. ಶಾಲೆಗೆ ತಿಲಾಂಜಲಿ ನೀಡಿದ್ದ ದೊಡ್ಡಮೇಟಿ ಅವರು ಬಡ್ಡಿ ವ್ಯವಹಾರ, ಲೆಕ್ಕ ಪತ್ರ ನೋಡಿಕೊಳ್ಳುವ ಭಾರ ಹೊತ್ತುಕೊಂಡರು. ಹದಿನೆಂಟನೆಯ ವಯಸ್ಸಿನಲ್ಲಿ ಇಬ್ಬರು ಹೆಂಡಿರನ್ನು ಕಟ್ಟಿಕೊಳ್ಳುವ

ಕಂಕಣಭಾಗ್ಯ ಏಕಕಾಲಕ್ಕೆ ಲಭಿಸಿತು. ಸುರಕೋಡ (ತಾಲ್ಲೂಕ ರಾಮದುರ್ಗ) ಗ್ರಾಮದ ಮರ್ಯಾದೆಸ್ಥ ಮನೆತನದ ಹೆಣ್ಣಿನೊಂದಿಗೆ ವಿವಾಹವಾದರು. ಒಬ್ಬಳು ಅನ್ನಪೂರ್ಣಾ, ಮತ್ತೊಬ್ಬಳು ದೇವಿಕಾದೇವಿ. ಲಗ್ನವಾದ ನಂತರ ತಂದೆಯವರನ್ನು ಕಳೆದುಕೊಂಡರು. ಇವರಿಗೆ ಹದಿನೆಂಟು ವರ್ಷಕ್ಕೆ ಕೆಲ ತಿಂಗಳು ಕಡಿಮೆಯಿದ್ದುದರ ಪ್ರಯುಕ್ತ ಅಲ್ಪವಯಿಯೆಂದು ಇವರ ಸಂರಕ್ಷಣೆಗಾಗಿ ಮಾವ ಮಹಾಗುಂಡಪ್ಪ ಅವರನ್ನು ನಿಯಮಿಸಲ್ಪಟ್ಟಿದ್ದರು. ಜನಾಬ ಪಟೇಲ ಸಾಹೇಬರು ವ್ಯವಸ್ಥಾಪಕರಾಗಿದ್ದರು. ಅವರೆಲ್ಲರೂ ಇವರಿಗೆ ತೀರ್ಥಸ್ವರೂಪರಾಗಿದ್ದರು. ಒಕ್ಕಲುತನದ ವಹಿವಾಟನ್ನು ಮಾವನ ತಮ್ಮ ಮಲ್ಲಪ್ಪನವರು ನೋಡಿಕೊಳ್ಳುತ್ತಿದ್ದರು. ಕೆಲ ಸ್ನೇಹಿತರಿಂದ ಅನ್ಯಾಯ ವಾದರೂ ವಿಶ್ವಾಸ ತೋರುವುದನ್ನು ಬಿಡಲಿಲ್ಲ. ಹಳ್ಳಿಯಲ್ಲೆ ಮೋಜು ಮಜಲು ಆಟ, ನೋಟಗಳಿಗೆ ಆಶ್ರಯ ನೀಡಿ ಸಹಾಯ ಹಸ್ತ ಚಾಚಿ ಅನೇಕಾನೇಕ ತೊಂದರೆಗಳನ್ನು ಅನುಭವಿಸಿದರು. ವ್ಯವಹಾರಗಳ ಹಾನಿಯನ್ನು ಕಂತುವಿನ ಪ್ರಕಾರ ತೀರಿಸಿ ಋಣ ಮುಕ್ತರಾದರು.

## ರಾಷ್ಟ್ರೀಯ ಭಾವನೆ:

ಶ್ರೀ ದೊಡ್ಡಮೇಟಿಯವರು ಕಲೆಯ ಅಭಿರುಚಿಯಿಂದ ಶೃಂಗಾರ ಸಾಗರದಲ್ಲಿ ಈಜಾಡಿದರೂ ದೇಶಾಭಿಮಾನವನ್ನು ತಮ್ಮ ತೆಕ್ಕೆಗೆ ದಕ್ಕಿಸಿಕೊಂಡರು ಇವರ ದೇಶಾಭಿಮಾನವು ಕರ್ನಾಟಕ ತುಂಬೆಲ್ಲಾ ಶ್ರೀಗಂಧದ ಪರಿಮಳದಂತೆ ಎಲ್ಲೆಡೆಗೂ ಪಸರಿಸಿತು. ದೇಶಭಕ್ತಿಗೆ ಮೂಲಭೂಮಿಕೆ ನಾಟಕರಂಗ ಶ್ರೀ ವಾಮನರಾವ್ ಮಾಸ್ತರರ ನಾಟಕ ಮಂಡಳಿಯವರ 2ನೇ ಬಾಜೀರಾವ್ ವೆಂಬ ಐತಿಹಾಸಿಕ ನಾಟಕವನ್ನು ಸ್ನೇಹಿತರೊಂದಿಗೆ ವೀಕ್ಷಿಸಿದರು. ಬ್ರಿಟೀಷ್ ಆಡಳಿತದ ಬಗ್ಗೆ ದ್ವೇಷಭಾವನೆ ತುಂಬಿಕೊಂಡರು. ಇದೇ ಕಂಪನಿಯವರ 'ವೀರ ಅಭಿಮನ್ಯು' ನಾಟಕದ ಪ್ರೇರಣೆಯಿಂದ ದೇಶಾಭಿಮಾನದ ಮೊಳಕೆ ಇನ್ನಷ್ಟು ಮೊಳಕೆಯು ಮೂಡಿತು.ಗಾಂಧೀಜಿಯವರ ಲೇಖನಗಳನ್ನು ಪತ್ರಿಕೆಗಳಲ್ಲಿ ಓದಿ ಸತ್ಯಪ್ರಿಯತೆ, ವಿನಯ, ತ್ಯಾಗ ಗುಣಗಳನ್ನು ತಮ್ಮಲ್ಲೆ ಅಳವಡಿಸಿಕೊಂಡು ವ್ಯಕ್ತಿತ್ವ ಪರಿಪೂರ್ಣತೆ ಪಡೆದರು. ಸಾರ್ವಜನಿಕ ಜೀವನದ ಘಟನೆಗಳನ್ನು ದೊಡ್ಡಮೇಟಿಯವರು ಗೌರವಿಸಿದರು. ಪಾದರಸದಮತೆ ಕ್ರೀಯಾಶೀಲರಾಗಿ ಅನೇಕ ಹಿತೈಷಿಗಳನ್ನು, ಸ್ನೇಹಿತರನ್ನು ಗಳಿಸಿ ಜನಪ್ರಿಯವಾದರು. ಸಂಘಟನಾ ಕೌಶಲ್ಯ, ಬಡವರ, ಹಿಂದುಳಿದವರ ಬಗ್ಗೆ ಅನುಕಂಪ, ಕಾಳಜಿಗಳು ಕ್ರೀಯಾಶೀಲ ವ್ಯಕ್ತಿತ್ವಕ್ಕೆ ಜನರ ಅಪಾರ ಗೌರವ, ಜನಬೆಂಬಲ ದೊರಕಿತು.

1930 ಎಪ್ರೀಲ್ ತಿಂಗಳ 13ನೇಯ ದಿನ ಚಕ್ಕಲಿ ಗ್ರಾಮದಲ್ಲಿ ಚೈತನ್ಯವೇ ಎಲ್ಲೆಡೆಗೆ ಜಾಗೃತಗೊಂಡಿತು. ಪರದೇಶಿಬಟ್ಟೆಗಳನ್ನು ಸುಟ್ಟು ದೇಶಾಭಿಮಾನದ ಜ್ವಾಲೆಯನ್ನು ಹೊತ್ತಿಸಿಕೊಂಡು ಖಾದಿ ಬಟ್ಟೆಗಳನ್ನು ತೊಟ್ಟರು. ಸಂಪೂರ್ಣ ಸ್ವರಾಜ್ಯ ನಿರ್ಣಯ, ಗಾಂಧೀಜಿಯವರ ನೇತೃತ್ವದ ರಾಷ್ಟ್ರೀಯ ಆಂದೋಲನ, ಸ್ವಾತಂತ್ರ್ಯ ಸಂಗ್ರಾಮದತ್ತ ಎಳೆದವು. ದೇಶಾಭಿಮಾನದ ಕಿಡಿ ಗ್ರಾಮದ ಯುವಕರ ಎದೆಯನ್ನು ಹೊಕ್ಕು ಅಗ್ನಿಕುಂಡದಂತೆ ತೋರಿತು. ಗದಗ ಕಾಂಗ್ರೆಸ್ ಕಾರ್ಯಕರ್ತರ ಖಾಸಗಿ ಸಭೆಗೆ ಪರಿಚಯ ಮಾಡಿಕೊಂಡು ಸತ್ಯಾಗ್ರಹ ಫಂಡಿಗೆ 50,60, ರೂ. ಸಲ್ಲಿಸಿ ಪ್ರಾಥಮಿಕ ಪಡೆದುಕೊಂಡಿದ್ದರು.

## ಸಾಮಾಜಿಕ ಸಂಘಟನೆ

ಶ್ರೀ ಅಂದಾನಪ್ಪನವರು ಸ್ವಗ್ರಾಮದಲ್ಲಿ ಹತ್ತು ಹಲವು ಚಟುವಟಿಕೆಗಳನ್ನು ಹಮ್ಮಿಕೊಂಡು ದೇಶಭಕ್ತಿಯನ್ನು ಜನರಲ್ಲೆ ಬಿತ್ತಿದರು. ಇದರ ಪರಿಣಾಮವಾಗಿ 'ದೇಶ ಸೇವಾ ಸಂಘ' ವುಜನ್ಮತಾಳಿತು. ಊರಿನ ಜನತೆ ಜಾತಿ ಮತ ಪಂಥ ಬಿಟ್ಟು ರಾಷ್ಟ್ರ ಪ್ರೇಮ ಬೆಳೆಸಿಕೊಂಡು ಮನೆಮನೆಯಲ್ಲಿಯೂ ಚರಕಾಗಳು ತಿರುಗ ತೊಡಗಿದವು. ದೇಶಾಭಿಮಾನ ತುಂಬಲು ಕೀರ್ತನಕಾರ ಕಳ್ಳಿ ತಿಪ್ಪಣ್ಣ ಅವರು ಕೀರ್ತನದ ಮೂಲಕ ಜನತೆಗೆ ಸ್ವಾತಂತ್ರ್ಯದ ಮಹಿಮೆಯನ್ನು ತಿಳಿಸಿದರು. ಅದರಂತೆ ರಾಷ್ಟ್ರೀಯ ಮುಖಂಡರಿಂದ ಭಾಷಣಗಳನ್ನು ಏರ್ಪಡಿಸಿದರು. ಈ ಸಮಯ ದಲ್ಲಿ ಕೌನ್ಸಿಲ್ ಚುನಾವಣಾ ಬಹಿಷ್ಕಾರ ಕಾರ್ಯದಲ್ಲಿ ಲಪ್ಪಗೇರಿಗೆ ಹೋಗಿ ಪಿಕೇಟಿಂಗ್ ನಡಿಸಿ ಯಶಸ್ವಿಯಾದರು. ಶ್ರೀ ಮಲ್ಲಪ್ಪ ಧನಶೆಟ್ಟಿ ಅವರಿಗೆ ಗಲ್ಲು ಶಿಕ್ಷೆಯಾದುದಕ್ಕೆ ದೊಡ್ಡಮೇಟಿಯವರು ಮರುಗಿದರು. ಪ್ರತಿದಿನ ಮುಂಜಾನೆ ಪ್ರಭಾತ ಫೇರಿ ಹೊರಡಿಸಿ ರಾಷ್ಟ್ರ ಪ್ರೇಮದ ದೇಶಭಕ್ತಿ ಗೀತೆ ಹಾಡುತ್ತ ಜನರ ಮನವನ್ನು ಎಚ್ಚರಿಸುತ್ತಿದ್ದರು. ಮಹಾತ್ಮಾ ಗಾಂಧೀಜಿಯವರ ಪ್ರಭಾವಿ ವ್ಯಕ್ತಿತ್ವದ ವಲಯವನ್ನು ಪ್ರವೇಶಿಸಿದರು.

## ಜಕ್ಕಲಿ ಗ್ರಾಮಕ್ಕೆ ಶ್ರೀ ಜವಾಹರಲಾಲ ನೆಹರೂ ಭೇಟಿ

ದೊಡ್ಡಮೇಟಿಯವರಿಗೆ ಪ್ರಥಮದಿಂದಲೂ ಪರಿಚಯವಿದ್ದ ಶ್ರೀ ಅನಂತರಾಯ ಜಾಲಿಹಾಳರ ಮೂಲಕ ಶ್ರೀ ನೆಹರೂರವರನ್ನು ತಮ್ಮ ಜಕ್ಕಲೆ ಗ್ರಾಮಕ್ಕೆ ಬರಮಾಡಿ ಕೊಂಡು ಅವರಿಗೆ 2 (ಎರಡು) ತೊಲೆಯ ಬಂಗಾರ ತಕಲಿಯನ್ನು ಕಾಣಿಕೆಯಾಗಿ ಅರ್ಪಿಸಿದರು. 1931 ಡಿಸೆಂಬರದಲ್ಲಿ ಜರುಗಿದ ಈ ಕಾರ್ಯಕ್ರಮಕ್ಕೆ ಸುಮಾರು 18 ಸಾವಿರ ಜನ ಸೇರಿದ್ದರು. ನೆಹರೂರವರಿಗೆ ಪ್ರಿಯವಾದ ಗುಲಾಬಿಯ ಹೂವಿನ ಹಾರವನ್ನು ಹಾಕಿ ಪುಷ್ಪಗುಚ್ಛವನ್ನು ಕೈಗಿತ್ತರು. ಇದಕ್ಕೆ ಗದುಗಿನ ಬಂಧುಗಳು ಸಹಕಾರ ತೋರಿದ್ದರು. ಶ್ರೀ ಜವಾಹರಲಾಲ ನೆಹರೂರವರನ್ನು ಜಕ್ಕಲಿಗೆ ಆಮಂತ್ರಿಸಿದ ಬಗ್ಗೆ ಬ್ರಿಟೀಷ ಅಧಿಕಾರಿಗಳು ದೊಡ್ಡಮೇಟಿ ಅವರನ್ನು ಪ್ರಶ್ನಿಸಿದಾಗ ಅವರು ನಮ್ಮ ನಾಯಕರು. ಕಾಗಣಿ ಕರೆಯಿಸಲಾಗಿತ್ತು. ಇದು ಬ್ರಿಟೀಷ್ ಸರಕಾರ ಕಾಯಿದೆ ಉಲ್ಲಂಘನೆ ಎಂದು ಹಾರಾಡಿದಾಗ, ನಿಮ್ಮ ಪಂಚಮ ಜಾರ್ಜರು ಮಹಾತ್ಮಾ ಗಾಂಧೀಯವರನ್ನು ಏಕೆ ಕರೆಸಿದ್ದರು? ಎಂದು ಯುವಕ ದೊಡ್ಡಮೇಟಿಯಿಂದಾಗ ಬ್ರಿಟೀಷ್ ಅಧಿಕಾರಿಗಳು ತೆಪ್ಪಗಾದರೂ ಇದರಿಂದ ಅವರಿಗೆ ಗರ್ವಭಂಗವಾಯಿತು.

## ಮಹಾತ್ಮಾ ಗಾಂಧೀಜಿಯವರ ಭೇಟಿ

ಹರಿಜನ ಸೇವೆಗಾಗಿ ದೊಡ್ಡಮೇಟಿಯವರು ತಮ್ಮನ್ನು ಅರ್ಪಿಸಿ ಕೊಂಡರು. ಗಾಂಧೀಜಿಯವರು ಹರಿಜನರಿಗೆ ಪ್ರತ್ಯೇಕ ಮತದಾರ ಸಂಘದ ವಿರುದ್ಧ ಆಮರಣ ಉಪವಾಸವನ್ನು ಕೈಕೊಂಡಿದ್ದರು. ಅಂದಾನಪ್ಪನವರು ಮೂರು ನಾಲ್ಕು ದಿನಗಳಲ್ಲಿ ಸುಮಾರು 30,40 ಗ್ರಾಮಕ್ಕೆ ಭೇಟಿ ನೀಡಿ ಹರಿಜನ ಸಭೆ ಸಂಘಟಿಸಿ ಮತದಾರ ಸಂಘಕ್ಕೆ ಒಪ್ಪಿಗೆ

1740-2

ಪಡೆದು ನಂತರ ಮಹಾತ್ಮಾ ಗಾಂಧೀಜಿಯವರಿಗೆ ಹಾಗೂ ಸರಕಾರಕ್ಕೆ ತಂತಿಮೂಲಕ ಸಂದೇಶ ತಿಳಿಸಿದರು. ಬಾಪೂಜಿಯವರನ್ನು ಕಾಣಬೇಕೆಂಬ ಉತ್ಕಟ ಆಶೆಗೆ ನನಸಾಗುವ ಕಾಲ 1932 ನೆಯ ವರ್ಷವಿರಬಹುದು. ಯರವಡಾ ಸೆರೆಮನೆಗೆ ಸಾಗಿ ತುರಂಗದ ಅಧಿಕಾರಿಗಳಿಗೆ ಅಪ್ಪಣೆ ಪತ್ರ ತೋರಿಸಿ ಗಾಂಧೀಜಿಯವರಿದ್ದ ಯಾರ್ಡಿಗೆ ಹೋಗುವಾಗ ಮಹಾತ್ಮಾ ಗಾಂಧೀಯವರು ಕಾರ್‍ಯದರ್ಶಿ ಮಹದೇವ ದೇಸಾಯಿ ಎದುರಾದರು. ನಂತರ ಅವರೊಂದಿಗೆ ಬಾಪೂಜಿಯವರನ್ನು ಭೇಟಿಯಾದರು."ಆಯಿಯೇ ಆಯಿಯೇ" ಎಂದು ಗಾಂಧೀಜಿಯವರು ಕರೆದು ಉಭಯಕುಶಲೋಪರಿಗೈದರು. ದೊಡ್ಡಮೇಟಿ ಅವರು ತಾವು ಕೈಕೊಂಡ ಚಟುವಟಿಕೆಯನ್ನು ಸಮಗ್ರವಾಗಿ ವಿವರಿಸಿದರು. ಒಂದು ಗಂಟೆಯವರೆಗೆ ಗಾಂಧೀಜಿಯವರ ಸಹವಾಸ ದೊರೆತುದಕ್ಕೆ ನಮಗೆ ಅತ್ಯಂತ ಧನ್ಯತೆ ಎನಿಸಿತು. ಪುಣೆಯಲ್ಲಿದ್ದಾಗ ಭೇಟಿ ನೀಡಿದ ಸುದ್ದಿ ಪತ್ರಿಕೆಯಲ್ಲಿ ಬಂದದ್ದನ್ನು ಕಂಡು ಸಂತೋಷವಾಯಿತು.ಸರಕಾರದ ಸವಲತ್ತು ದುರುಪಯೋಗ ಪಡಿಸಬಾರದೆಂದು ಗಾಂಧೀಜಿ ತಿಳಿಸಿದರು. ಯಾಕೆಂದರೆ ದೊಡ್ಡಮೇಟಿಯವರು ತಮ್ಮ ಸಂಗಡ ಹೋದ ಇಬ್ಬರಿಗೆ ಪರವಾನಗಿ ಇದ್ದಿಲ್ಲ ಕಾರಣ ಈ ಹೇಳಿಕೆ ತುರಂಗ ಅಧಿಕಾರಿಯ ಪರವಾಗಿ ಬಂದಿತ್ತು. ಗಾಂಧೀಜಿಯವರ ಭೇಟಿ ಅಂದಾನಪ್ಪನವರಿಗೆ ಚೈತನ್ಯದಾಯಿಯಾಗಿತ್ತು.

## ಭದ್ರಕಾವಲು

ಎಲ್ಲ ರೀತಿಯಿಂದಲೂ ಸ್ವಾತಂತ್ರ್ಯ ಅಂದೋಲನಕ್ಕೆ ಸಹಾಯ ಸಹಕಾರ ನೀಡುತ್ತಿದ್ದ ಅಂದಾನಪ್ಪ ದೊಡ್ಡಮೇಟಿ ಅವರ ಮೇಲೆ ಸರ್ಕಾರವು ಕಾವಲು ಇರಿಸಿತು. ಆದರೆ ಅವರನ್ನು ಖೈದಿಯನ್ನಾಗಿ ಮಾಡಲಿಲ್ಲ ಅಷ್ಟೇ. ಜೈಲು ಕಂಡ ಪ್ರಥಮ ಸತ್ಯಾಗ್ರಹದ ತಂಡದಲ್ಲಿ ಜಕ್ಕಲಿಗ್ರಾಮದ ರಾಜೇಸಾಬ, ಬಸಪ್ಪ, ಕೃಷ್ಣಾಚಾರ್ಯ ಜೋಶಿ, ಮುಂತಾದವರು ಹಂಪೆಯ ಶ್ರೀ ವಿರೂಪಾಕ್ಷ ದೇವರ ಹಾಗೂ ಶ್ರೀ ಭುವನೇಶ್ವರಿಯ ದರ್ಶನ ಪಡೆದು ಸರಕಾರದ ವಿರುದ್ಧ ಪ್ರತಿಭಟನೆಯ ಘೋಷಣೆಗೈದು ಗದುಗಿನ ಖೈದಿಯಾದರು. ಈ ಚಟುವಟಿಕೆಗೆ ಸಹಕರಿಸಿದನೆಂದು ಶ್ರೀ ಶಿವಪ್ಪ ಕುಬಸದ ಮತ್ತು ಹುಯಿಲಗೋಳ ಕೃಷ್ಣಾಚಾರ್ಯರನ್ನು ಬಂಧಿಸಲಾಯಿತು.

## ಜಿಲ್ಲಾಧಿಕಾರಿಯಿಂದ ತಾಲ್ಲೂಕ ಬಂಧಿ ಆಜ್ಞೆ

ಕರ್ನಾಟಕ ಕಾಂಗ್ರೆಸ್ಸಿನ ಆರನೇ ಸರ್ವಾಧಿಕಾರಿಗಳಾಗಿದ್ದ ಬೆಳಗಾವಿ ಶ್ರೀ ಕೆ.ಎಸ್. ಪಾಟೇಲರನ್ನು 1933 ಜನವರಿ 26 ರಂದು ಸೆರೆಹಿಡಿದರು. ನಂತರ ಏಳನೇ ಸರ್ವಾಧಿಕಾರಿಯಾಗಿ ದೊಡ್ಡಮೇಟಿ ಅವರನ್ನು ಗದುಗಿನಲ್ಲಿ ಫೆಬ್ರುವರಿ 1 ರಂದು ಬಂಧಿಸಿ ಖಟ್ಲೆ ಹಾಕಿ ಜಿಲ್ಲಾಧಿಕಾರಿಗಳ ಎದುರು ನಿಲ್ಲಿಸಿದರು. ಖಟ್ಲೆ ಹಾಕುವುದು ಕಠಿಣವಾಗಿದ್ದರಿಂದ ಬಿಡುಗಡೆ ಮಾಡಿದರು. ಮುಂದೆ ಧಾರವಾಡ ಜಿಲ್ಲೆಯ ಕಲೆಕ್ಟರನ ವಾರಂಟಿನನ್ವಯ 1933

ಫೆಬ್ರವರಿ 4 ರಂದು ಪೋಲಿಸ್ ಪಡೆಯೊಂದಿಗೆ ಮುತ್ತಿಗೆ ಹಾಕಿ ಪ್ರಥಮವಾಗಿ ದೊಡ್ಡಮೇಟಿ ಅವರನ್ನು ಸೆರೆಹಿಡಿದರು. ಮನೆಯ ಅಂಗಳದಲ್ಲಿ ಜನ ಸೇರಿತು. ಪೋಲಿಸರು ಜನರನ್ನು ಚದುರಿಸ ತೊಡಗಿದರು ಜಯ ಘೋಷಣೆ ಮೊಳಗಿದವು. ಪೋಲೀಸ ಕಾವಲಿನಲ್ಲಿ ಧಾರವಾಡಕ್ಕ ತಂದು ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಅರಾಜಕೀಯದಲ್ಲಿ ಬಿದ್ದು ಕೆಡಬೇಡಿರಿ ಎಂದು ಹಿತ ವಚನದ ಜೊತೆಗೆ ಜಿಲ್ಲಾಧಿಕಾರಿಗಳು ತಾಲ್ಲೂಕ ಬಂದಿ ಆಜ್ಞೆಯನ್ನು ಜಾರಿಗೊಳಿಸಿದರು. ಶ್ರೀ ಅಂದಾನಪ್ಪ ಅವರಿಗೆ ತಾಲ್ಲೂಕಿನಲ್ಲಿಯೇ ಆಂದೋಲನ ನಡೆಸಲು ಒಂದು ಅವಕಾಶ ಲಭಿಸಿತು.

ತಮ್ಮ ಮೇಲೆ ವಿಧಿಸಿದ ತಾಲ್ಲೂಕ ಬಂದಿಯ ಆಜ್ಞೆಯನ್ನು 1933 ಮಾರ್ಚ್ 27 ರಂದು ಕಾಲೆಗೊರಸಿ ರೋಣ ತಾಲ್ಲೂಕ ಗಡಿ ಸೀಮೆಯನ್ನೂ ದಾಟಿ ಹೋಗಿದ್ದರು. ಗದುಗಿನಲ್ಲಿ ಕೈಸೆರೆ ಮಾಡಿದರು. ಗಜೇಂದ್ರಗಡಕ್ಕೆ ತಂದರು ಶ್ರೀ ಕೌಂಡಿಣ್ಯ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಅಂದಾನಪ್ಪ ದೊಡ್ಡಮೇಟಿಯವರನ್ನು ಹಾಜರ ಪಡಿಸಿದರು. ಇವರ ಮೇಲೆ ಎರಡು ಆರೋಪಗಳು ಸಿದ್ಧವಾದವು, ಅಕ್ರಮ ಸಂಸ್ಥೆಯಾದ ಕರ್ನಾಟಕ ಕಾಂಗ್ರೇಸ್ ಸಂಸ್ಥೆಯ ಸರ್ವಾಧಿಕಾರಿಯಾದುದಕ್ಕೆ ಒಂದು ಆರೋಪ. ಅಕ್ರಮ ಪುಸ್ತಿಕೆಯಾದ ಕರ್ನಾಟಕ ಕರ ನಿರಾಕರಣೆಯ ಚಳುವಳಿ ಪ್ರಸಿದ್ಧಿಸಿಗೆ ಮತ್ತೊಂದು ಆರೋಪ ಶ್ರೀ ಮಿನರ್ ಅಮೆಂಡಮೆಂಟ್ ಆ್ಯಕ್ಟ್ 17/1, 17/2 ರನ್ವಯ ಪ್ರತಿಯೊಂದು ಆರೋಪಕ್ಕೂ ಆರು ತಿಂಗಳ ಶಿಕ್ಷೆ ಒಂದು ಸಾವಿರ ರೂಪಾಯಿ ದಂಡವನ್ನು ದೊಡ್ಡಮೇಟಿ ಅವರಿಗೆ ವಿಧಿಸಿದರು. ' ಬ' ಕೈದಿಯಾಗಿ ಹಿಂಡಲಗಾ ಜೈಲಿನಲ್ಲಿ ಉಳಿದರು.

## ಹಿಂಡಲಗಿ ತುರಂಗ

ಶಿಕ್ಷೆಯಾದ ನಂತರ ಹಿಂಡಲಗಿ ತುರಂಗಕ್ಕೆ ಕಳಿಸಿದರು. ಮೋಟಾರಿನಿಂದ ಧಾರವಾಡಕ್ಕೆ ಸಾಗಿಸಿದರು. ಉಗಿಬಂಡಿಯಿಂದ ಬೆಳಗಾವಿ ಸ್ಟೇಶನಕ್ಕೆ ಪೋಲಿಸ ಕಾವಲಗಾರರೊಂದಿಗೆ ಹಿಂಡಲಗಿ ಜೈಲಿಗೆ ತಂದರು. ಜಾಳಿಗೆ ಮೋಟಾರದ ಅನುಭವ ರೊಮಾಂಚನ ತಂದಿತು. ಮೋಟಾರದಿಂದ ಇಳಿಸಿದ ನಂತರ ಜೈಲಿಗೆ ಅಧಿಕಾರಿಗಳಿಗೆ ನನ್ನನ್ನು ಹಸ್ತಾಂತರಿಸಿದರು. ಉಡುಪುಗಳನ್ನು ಕಳಚಿಸಿ ಜೈಲಿನ ಉಡುಪುಗಳನ್ನು ನೀಡಿದರು. ಎರಡು ಧೋತರ, ಎರಡು ಅಂಗಿ, ಒಂದು ಉಣ್ಣೆಯ ಬಗಲಬಂಡಿ ಇವಿಷ್ಟು ಬಟ್ಟೆಗಳು 'ಬಿ' ಕ್ಲಾಸ್ ಖೈದಿಗೆ ಕೊಡಬೇಕಾದ ಹಾಸಿಗೆ ಪಾತ್ರೆಗಳನ್ನು ನೀಡಿ ಒಳಗೆ ಕಳಿಸಿದರು. ಹಿಂಡಲಗಿ ಸೆರೆಮನೆಯ 'ಕ' ವರ್ಗ ಮತ್ತು 'ಬ' ವರ್ಗದ ಯಾರ್ಡಿನಲ್ಲಿ ಸಹೋದ್ಯೋಗಿಗಳ ಬಳಿ ತಂದರು ಅಲ್ಲಿದ್ದ ಶ್ರೀ ಆರ್.ಆರ್. ದಿವಾಕರ ಶ್ರೀ ಎಂ.ಪಿ. ಪಾಟೀಲ, ಶ್ರೀ ಕೆ.ಎಸ್. ಪಾಟೀಲ, ಮೊದಲಾದವರು ನನ್ನನ್ನು ಸ್ವಾಗತಿಸಿದರೆಂದು ದೊಡ್ಡಮೇಟಿಯವರು ತುರಂಗದಲ್ಲಿದ್ದಾಗ ಮಹಾತ್ಮಾ ಗಾಂಧೀಜಿಯವರು ಇಪ್ಪತ್ತೊಂದು ದಿನಗಳ ಉಪವಾಸವನ್ನು ಆಚರಿಸಿದರು. ಸಾಮೂಹಿಕ ಕಾಯಿದೆ ಭಂಗ ಆಂದೋಲನವನ್ನು ವೈಯಕ್ತಿಕ ಕಾಯಿದೇಭಂಗದಲ್ಲಿ ಪರಿವರ್ತಿಸಿದರು.

# ಲೇಖಕರಾಗಿ ಸಾಹಿತ್ಯ ಸೇವೆ

ಶ್ರೀ ದೊಡ್ಡಮೇಟಿ ಅಂದಾನಪ್ಪನವರು ಸ್ವಾತಂತ್ರ್ಯ ಹೋರಾಟಗಾರಲ್ಲದೆ ಉತ್ತಮ ಬರಹಗಾರರಾಗಿದ್ದರು. ಅವರು ತಮ್ಮ ದಿನಚರಿಯ ಪುಟದಿಂದ ಸಾದರಪಡಿಸಿದ್ದಾರೆ ಶ್ರೀ ಜವಾಹರಲಾಲ ನೆಹರೂ ಮಗಳಿಗೆ ಪತ್ರ ಬರೆದನೆಂಬ ತೆರನಾಗಿ ತಮ್ಮ ಮಗ ಜ್ಞಾನದೇವ ದೊಡ್ಡಮೇಟಿಯವರಿಗೂ ಹೋರಾಟ ವಿವಿಧ ಮುಖಗಳನ್ನು ತಿಳಿಸಿದ್ದಾರೆ. ಅನೇಕ ಪತ್ರಗಳು ಜೈಲಿನಿಂದ ಬರೆದದ್ದುಂಟು. ಸಾಹಿತ್ಯದಲ್ಲಿ ತುಂಬಾ ಲವಲವಿಕೆಗಳಿಂದ ಕೂಡಿದ್ದರು. ಇವರು "ಕಲ್ಕಿ" ಪತ್ರಿಕೆಯ ಸಂಪಾದಕರಾಗಿದ್ದರು. ಪ್ರಮುಖ ಕೃತಿಗಳೆಂದರೆ ಕರ್ನಾಟಕ ಮಹಿಮಾ ಸ್ತೋತ್ರ "ಸಪ್ನ ಪೂರ್ಣಿಮೆ" "ಮಾತೃ ಕೃಪಾ" ಇವೆಲ್ಲವುಗಳು ಕನ್ನಡದಲ್ಲಿ ಪ್ರಕಟಗೊಂಡಿವೆ. ಸಂಗೀತ ಮತ್ತು ನಾಟಕದಲ್ಲಿಯೂ ವಿಶೇಷ ಆಸಕ್ತಿ ಹೊಂದಿದ್ದರು.

# ಹರಿಜನ ಸಂಘ

ಶ್ರೀ ದೊಡ್ಡಮೇಟಿ ಅಂದಾನಪ್ಪನವರು ಜೈಲಿನಿಂದ ಬಿಡುಗಡೆಯಾದ ನಂತರ ಅನೇಕ ಕಡೆಗೆ ಪ್ರವಾಸವನ್ನು ಮಾಡಿದರು. ರಾಜಕೀಯ ವಾತಾವರಣ ತಣ್ಣಗಾಗಿ ಹೋಗಿತ್ತು. ನಂತರ 'ಹರಿಜನ ಸಂಘ'ವನ್ನು ಕಟ್ಟುವ ಮೂಲಕ ಸಂಘಟನೆಗೆ ಹುಟ್ಟು ಹಾಕಿದರು. ಧಾರವಾಡ ಜಿಲ್ಲಾ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಸ್ವಾತಂತ್ರ ಭಾರತಕ್ಕಾಗಿ ಅನೇಕ ಬಾರಿ ಸೆರೆಮನೆವಾಸ ಅನುಭವಿಸಿದರು. ಕರ್ನಾಟಕ ರಾಜ್ಯ ಪ್ರತ್ಯೇಕತೆಗೆ ಪ್ರೋತ್ಸಾಹಕರಾಗಿ ಕಾರ್ಯಕೈಗೊಂಡು. ಕರ್ನಾಟಕ ಏಕೀಕರಣ ಪರಿಷತ್ತಿನ ಆಡಳಿತ ಕಮಿಟಿಯ ಚೇರಮನ್‌ರಾಗಿ, ಧಾರವಾಡ ಜಿಲ್ಲೆಯಲ್ಲಿ ಹೋರಾಟ ನಡೆಸಿದರು. ಕರ್ನಾಟಕ ನಿರ್ಮಾಣ ಶಿಬಿರದ ಸಂಸ್ಥಾಪಕರಾಗಿ ಜಮಖಂಡಿ ಸಂಸ್ಥಾನವು ಭಾರತ ಸರ್ಕಾರದಲ್ಲಿ ವಿಲೀನವಾಗುವವರೆಗೆ 1932-48ರ ವರೆಗೆ ಜಮಖಂಡಿ ಸಂಸ್ಥಾನ ಜನತಾ ಸಭೆಯ ಅಧ್ಯಕ್ಷ ಸ್ಥಾನ ಅಲಂಕರಿಸಿದ್ದರು. ಭಾರತದಲ್ಲಿಯೇ ಪ್ರಥಮ ಸಂಸ್ಥಾನ ಜಮಖಂಡಿಯು ವಿಲೀನಗೊಳಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ. ಇವರಿಗೆ ಶ್ರೀ ದ. ಪ. ಕರಮಕರ ಶ್ರೀ ನಾರಾಯಣರಾವ ಕೊಪ್ಪಿಕರ, ಶ್ರೀ ಸಾಂಬ್ರಾಣಿಯವರು ಕೂಡಾ ದೊಡ್ಡಮೇಟಿಯವರಿಗೆ ನೆರವಾದರು. ಹರಿಜನ ಸಂಘಕ್ಕೆ ಶ್ರೀ ಸಿದ್ಧಪ್ಪಣ್ಣ ಹೊಸಮನಿ ಅಧ್ಯಕ್ಷರಾಗಿ, ದೊಡ್ಡಮೇಟಿ ಹಾಗೂ ಕೊಪ್ಪಿಕರ ಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟಿದ್ದರು. ಶ್ರೀ ವ್ಹಿ.ವ್ಹಿ. ಪಾಟೀಲ ಕರ್ನಾಟಕ ಪ್ರಾಂತಿಕ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿದ್ದರು. ದೊಡ್ಡ ಮೇಟಿ ಅಂದಾನಪ್ಪನವರ ಬುದ್ಧಿಮತ್ತೆಯನ್ನು ಮೆಚ್ಚಿಕೊಂಡ ದೇಶಭಕ್ತರಾದ ಶ್ರೀ ಹಣಮಂತರಾವ ಕೌಜಲಗಿ ಮತ್ತು ಶ್ರೀ ಗಂಗಾಧರರಾವ ದೇಶಪಾಂಡೆ ಅವರು ಇವರಿಗೆ ಪರಿಚಯವಾದರು.

## ವರ್ಣರಂಜಿತ ಬದುಕು

ಶ್ರೀ ದೊಡ್ಡಮೇಟಿಯವರು ಸತ್ಯಾಶ್ರಯ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಮಠಗಳ ಮಠಾಧೀಶರನ್ನು ಶೈಕ್ಷಣಿಕ ರಂಗದತ್ತ ತಿರುಗಿಸಿದರು. ವರ್ಣರಹಿತ ಸಮಾಜ ಇವರ ಮುಖ್ಯ ಉದ್ದೇಶವಾಗಿತ್ತು. ಅವಿರೋಧ ಆಯ್ಕೆಗೊಂಡಿದ್ದರೂ ಪ್ರವಾಹದಲ್ಲಿ ತೇಲಿಬಂದ ಹೆಣದಂತಿರದೇ ಹೋರಾಟವೇ ಪ್ರಮುಖ ಗುರಿಯನ್ನಾಗಿಸಿಕೊಂಡಿದ್ದರು. ಧಾರ್ಮಿಕ, ಸಾಮಾಜಿಕ, ರಾಜಕೀಯಗಳು ಭ್ರಷ್ಟಾಚಾರ ಕೋಪದಿಂದ ಮೇಲೆದ್ದು ಬರಲು ಸದಾ ಬಯಸುತ್ತಿದ್ದರು. ರಾಜಕೀಯದಲ್ಲಿ ಯಾರ ಹಿಂಬಾಲಕ ಆಗಿರದೇ ಸತ್ಯ ಮಾರ್ಗವನ್ನು ಮೆಟ್ಟಿದ ಅವರು ನಡೆದುದೇ ರಾಜಮಾರ್ಗವೆಂದಿದ್ದರು.

ಅರವಿಂದರ ಸಾಹಿತ್ಯ ಓದುವುದೆಂದರೆ ಅಚ್ಚುಮೆಚ್ಚು. ಪಾಂಡಿಚೇರಿ ಶ್ರೀ ಮಾತಾರ ದರ್ಶನ ಪಡೆದು ಧನ್ಯರಾಗಿದ್ದರು. ಇವಲ್ಲದೆ ನಾಟಕ, ಸಂಗೀತ, ಭಾವಗೀತೆ ಹಾಡಿಸುವುದು ಇವರ ಅಚ್ಚುಮೆಚ್ಚಿನ ಹವ್ಯಾಸ. ಸಾಹಿತಿಗಳ ಸಹವಾಸ ಸಾಕಷ್ಟುಇತ್ತು. 'ಕಲ್ಕಿ' ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಸದಸ್ಯರಾಗಿ ಶ್ರೀ ನಾರಾಯಣ ಸಂಗಮ, ಪ್ರೊ. ಎನ್. ಆರ್. ಅಪರಂಜಿ, ಸತ್ಯಕಾಮ (ಜಮಖಂಡಿ) ಸೇವೆ ಸಲ್ಲಿಸಿದರು. ಆಗಾಗ್ಗೆ ಕನ್ನಡ ಪತ್ರಿಕೆಗಳಿಗೆ ಚಂದಾದಾರಾಗಿ ಪ್ರಕಟಣೆಗೆ ಸಹಕರಿಸುತ್ತಿದ್ದರು. ಮಧುರಚೆನ್ನ, ಸಿಂಪಿಲಿಂಗಣ್ಣ ಮುಂತಾದವರ ನಿಕಟ ಸಂಪರ್ಕವಿದ್ದು ಸಾಹಿತಿಗಳ ಸಂಗಡ ಚರ್ಚಿಸುತ್ತಿದ್ದರು. ಜೀವನದ ಪ್ರತಿಯೊಂದು ರಂಗದಲ್ಲೂ ಹೋರಾಟ! ಹೋರಾಟ!!ಹೋರಾಟ!!!

## ಏಕೀಕರಣ ಮತ್ತು ಸಭೆ ಠರಾವು

ದಾವಣಗೆರೆಯಲ್ಲಿ 1946 ಆಗಸ್ಟ್ 1ಕ್ಕೆ ಕರ್ನಾಟಕಸ್ಥರ ಮಹಾಸಭೆಯನ್ನು ಮುಂಬೈಯಲ್ಲಿ ಕರೆಯಲಾಗಿತ್ತು. ಮಂತ್ರಿಯಾಗಿದ್ದ ಎಂ.ಪಿ. ಪಾಟೀಲರು ಅಧ್ಯಕ್ಷರಾಗಿ ಸಂಘಟಿಸಲಾಯಿತು. ಏಕೀಕರಣದ ವಿಚಾರವನ್ನು ಗಮನಿಸಬೇಕೆಂದು ಸಂವಿಧಾನ ರೂಪಿಸುತ್ತಿರುವ ಘಟನಾ ಸಮಿತಿಯನ್ನು ಒತ್ತಾಯಿಸಿತು. ಇದೇ ವರ್ಷ ಮುಂಬೈ ಮತ್ತು ಮದ್ರಾಸ ವಿಧಾನಸಭೆಗಳು ಭಾಷಾವಾರು ಪ್ರಾಂತ ರಚನೆಯ ಪರ ಠರಾವು ಮಾಡಿದವು. ಮುಂಬೈಯಲ್ಲಿ ಅಂದಾನಪ್ಪದೊಡ್ಡಮೇಟಿ, ಮದ್ರಾಸಿನಲ್ಲಿ ಡಾ: ಸುಬ್ಬರಾಯನ್ ಗೊತ್ತುವಳಿ ಮಂಡಿಸಿದವರು. ಆಗ ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಎಸ್. ನಿಜಲಿಂಗಪ್ಪ ಅವರು ಕರ್ನಾಟಕ ಏಕೀಕರಣ ಮಹಾ ಸಮಿತಿಯ ಅಧ್ಯಕ್ಷರಾದರು. ಅಂದಾನಪ್ಪ ದೊಡ್ಡಮೇಟಿ ಮತ್ತು ಮಂಗಳವೇಡೆ ಶ್ರೀನಿವಾಸರಾಯರು ಕಾರ್ಯದರ್ಶಿಗಳಾದರು. ಹುಬ್ಬಳ್ಳಿಯು ಈ ಸಮಿತಿಯ ಕೇಂದ್ರವಾಗಿ ಮಂಗಳವೇಡೆ ಶ್ರೀನಿವಾಸರಾಯರು ಬಾಗಲಕೋಟೆಯಿಂದ ಹುಬ್ಬಳ್ಳಿಗೆ ಬಂದು ನಿಂತು ಏಕೀಕರಣಕ್ಕೆ ಸಂಬಂಧಿಸಿದ ಚಟುವಟಿಕೆಗಾಗಿ ದುಡಿದರು.

ದೇಶ ಸ್ವತಂತ್ರವಾದಾಗ (1947) ಅನೇಕ ಕಿರು ಸಂಸ್ಥಾನಗಳು ಕರ್ನಾಟಕದಲ್ಲಿ ವಿಲೀನವಾದವು. ಇಂಥ ಸಂಸ್ಥಾನಗಳ ವೀಲೀನಕ್ಕೆ ಮೊದಲು ಒಪ್ಪಿದವರು ಜಮಖಂಡಿಯ ಪಟವರ್ಧನರು. ಜಮಖಂಡಿ, ಮುಧೋಳ, ಸಾಂಗಲಿ ಭಾಗ, ತೇರದಾಳಗಳು ವಿಜಾಪುರ ಜಿಲ್ಲೆಗೆ ಸೇರಿದವು. ರಾಮದುರ್ಗ ಸಂಸ್ಥಾನ, ಸಾಂಗಲಿಯ ಶಹಪೂರ ಹಾಗೂ ದೊಡ್ಡವಾಡ, ಜೂನಿಯರ್ ಕುರುಂದ್‌ವಾಡ್ (ವಡಗಾಂವ್) ಇವೆಲ್ಲ ಬೆಳಗಾವಿಗೆ ಸೇರಿದವು. ಸಾಂಗಲಿಯ ಶಿರಹಟ್ಟಿ ಮೀರಜದ ಲಕ್ಷ್ಮೇಶ್ವರ ಬುಧಗಾಂವ (ಜ್ಯೂನಿಯರ್ ಮೀರಜ್) ನ ಗುಡಗೇರಿ ಜಮಖಂಡಿಯ ಕುಂದಗೋಳ ಹಾಗೂ ಸವಣೂರು ಸಂಸ್ಥಾನ ಧಾರವಾಡ ಜಿಲ್ಲೆಯಲ್ಲಿ ಸೇರಿದವು.

## ಉಪವಾಸ ಸತ್ಯಾಗ್ರಹ

ಕೇಂದ್ರ ಸರ್ಕಾರದ ಆಶ್ವಾಸನೆ ತ್ವರಿತ ಗತಿಯಲ್ಲಿ ಕಾರ್ಯ ರೂಪಕ್ಕಿಳಿಯಬೇಕೆಂಬುದಾಗಿ ಅನೇಕ ಕಡೆ ಚಳವಳಿ ಮಾರ್ದನಿಗೂಡಿಸಿದರು. ಹಲವು ಕಡೆ ಉಪವಾಸ ಸತ್ಯಾಗ್ರಹ ಕೂಡ ಕೈಗೊಳ್ಳಲಾಯಿತು. ಧಾರವಾಡ ಜಿಲ್ಲೆಯ ಜಕ್ಕಲಿಯಲ್ಲಿ ದೊಡ್ಡಮೇಟಿ ಅಂದಾನಪ್ಪನವರು ಏಕೀಕರಣವನ್ನು ಒತ್ತಾಯಿಸಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಅದರಗುಂಚಿ ಎಂಬಲ್ಲಿ ಶಂಕರಗೌಡ ಪಾಟೀಲರು ಏಕೀಕರಣ ಸಾಧನೆಗಾಗಿ ತಮ್ಮ ಜೀವನವನ್ನೇ ಪಣವಾಗಿಟ್ಟು ಅಮರಣಾಂತ ಉಪವಾಸ ಆರಂಭಿಸಿದರು. ಗೊರೂರು ರಾಮಸ್ವಾಮಿ ಅಯ್ಯಂಗಾರರು ಸಂಸ್ಥಾನದ್ಯಾಂತ ಪ್ರವಾಸ ಕೈಕೊಂಡು ಏಕೀಕರಣದ ಬಗ್ಗೆ ಪ್ರಚಾರ ಭಾಷಣ ಗೈದರು. ದೇಶಭಕ್ತ ಬಿ. ಶಿವಮೂರ್ತಿ ಶಾಸ್ತ್ರಿಗಳ ಪಾತ್ರ ಕೂಡ ಸ್ಮರಣೀಯವಾದುದು.

ಪಾಶವೀ ಶಕ್ತಿಯನ್ನು ಎದುರು ಹಾಕಿಕೊಂಡು ಪ್ರಾಣ ಹಾನಿಗೆ ಹಿಂಸೆ ಕೊಡಬಾರದೆಂದು ಸ್ನೇಹಿತರನ್ನು ಸಮಾಧಾನ ಪಡಿಸಿ ಅಂದಿನಿಂದ ಉಪವಾಸ ಸತ್ಯಾಗ್ರಹ ಕೈಕೊಂಡರು. ಅನುಯಾಯಿಗಳು ಆಹಾರವನ್ನು ಮುಟ್ಟಲಿಲ್ಲ. ಅನಿರ್ದಿಷ್ಟ ಕಾಲದವರೆಗೆ ಬಂಧನದಲ್ಲಿರಿಸಲ್ಪಟ್ಟಿದ್ದ ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರು ಜೈಲು ವಾಸದಿಂದ ಅಪಾರವಾದ ಅನುಭವ, ರಾಜಕೀಯ ಪ್ರಜ್ಞೆಯನ್ನು ಪಡೆದುಕೊಂಡರು. ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂದ ದೊಡ್ಡಮೇಟಿ ಅವರು ತಮ್ಮ ಜವಾಬ್ದಾರಿ ತುಂಬಾ ದೊಡ್ಡದಾಗಿ ಗೋಚರಿಸಿಕೊಂಡರು.ಪ್ರತಿ ಮನೆ ಮನೆಗೂ ಸ್ವಾತಂತ್ರ್ಯ ಪ್ರಜ್ಞೆ ಹರಡಬೇಕು. ಸಂಘಟನೆ ಬೆಳೆಯಬೇಕೆಂದು ಆಲೋಚಿಸ ಹತ್ತಿದರು.

ಮಹಾತ್ಮಾ ಗಾಂಧೀಜಿಯವರು ಬ್ರಿಟೀಷರೊಡನೆ ಒಪ್ಪಂದ ಮಾಡಿಕೊಂಡು ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಂಡದ್ದರಿಂದ ಎಲ್ಲಾ ಕೈದಿಗಳು ಬಿಡುಗಡೆ ಹೊಂದಿದರು. ಜೈಲಿನಿಂದ ಹೊರಬಂದ ನಂತರ ಶ್ರೀ ದೊಡ್ಡಮೇಟಿಯವರು ಅನೇಕ ವಿಧಾಯಕ ಕಾರ್ಯಗಳನ್ನೂ ಕೈಕೊಂಡರು ನೂಲುವುದು, ಖಾದಿಯ ಪ್ರಚಾರವನ್ನು ಮಾಡಹತ್ತಿದರು. ಇದರ ವ್ಯಕ್ತಿತ್ವವೇ ಸ್ವಾತಂತ್ರ ಪ್ರೇಮಿಗಳಿಗೆ ಒಂದು ಆದರ್ಶವಾಗಿದೆ. ಶ್ರೀಯುತರು ಸ್ವಾತಂತ್ರಪ್ರೇಮಿ ನಿಸ್ವಾರ್ಥ, ನಿಷ್ಠುರವಾದಿ ವ್ಯಕ್ತಿಗಳಾಗಿ ದೊಡ್ಡ ಶಕ್ತಿಯಾಗಿ ಬೆಳೆದರು.

## ಕನ್ನಡ ಡಿಂಡಿಮ ಬಾರಿಸಿದ್ದು ಮುಂಬೈ ಶಾಸನ ಸಭೆಯಲ್ಲಿ

ಶ್ರೀ ದೊಡ್ಡಮೇಟಿಯವರು ಜಿಲ್ಲಾ ಲೋಕಲ್ ಬೋರ್ಡ್ ಚುನಾವಣೆಯಲ್ಲಿ ಸೋಲನ್ನಪ್ಪಿದರು.1937 ರಲ್ಲಿ ಮುಂಬೈ ಅಸೆಂಬ್ಲಿಗೆ ಆಯ್ಕೆಯಾಗಿ ಧಾರವಾಡ ಉತ್ತರ ಭಾಗದಿಂದ ಶಾಸನ ಸಭೆಗೆ ಪ್ರವೇಶಿಸಿದರು. ಇದು ಅವರ ಪಾಲಿಗೆ ಅನುಭವ ಮಂಟಪವಾಯಿತು. ಪ್ರಭಾವಿ ವ್ಯಕ್ತಿಗಳಾಗಿದ್ದ ವಿಶ್ವನಾಥ, ಎನ್. ಜೋಗ ಅವರು 1938 ಎಪ್ರೀಲ್ 4 ರಂದು ಪ್ರತ್ಯೇಕ ಕರ್ನಾಟಕ ಪ್ರಾಂತ ರಚನೆಗೆ ಗೊತ್ತುವಳಿ ತಂದರು. ಈ ಗೊತ್ತುವಳಿಗೆ ಬೆಂಬಲವಾಗಿ ಅಂದಾನಪ್ಪನವರು ಕನ್ನಡದಲ್ಲಿಯೇ ಮಾತನಾಡಿದಾಗ ಸಭೆಯಲ್ಲಿ ಮುಸು ಮುಸು ನಗೆಕಂಡರು. ಸಭಾಪತಿ ಮಾಳ್ವಣಕರ ಎಲ್ಲರನ್ನು ಸಮಾಧಾನ ಗೈದರು. ಕನ್ನಡದಲ್ಲಿ ಮಾತನಾಡಿದುದ್ದಕ್ಕೆ ಶ್ರೀ ಕಂಬಳಿ ಸಿದ್ದಪ್ಪನವರು ದೊಡ್ಡಮೇಟಿಯವರ ಬೆನ್ನತಟ್ಟಿ ಪ್ರೋತ್ಸಾಹಿಸಿದರು. ಗಂಡು ಭಾಷೆ ಕನ್ನಡವೆಂಬುದು ಗೊತ್ತಾಯಿತು. ಸದಸ್ಯರು ತಮ್ಮ ತಮ್ಮ ಮಾತೃ ಭಾಷೆಯಲ್ಲಿ ಮಾತನಾಡಲು ಸುಲಭ ಮಾರ್ಗವಾಯಿತು. ಗುಜರಾತ, ಮಹಾರಾಷ್ಟ್ರ ಕರ್ನಾಟಕದ ಸದಸ್ಯರು ತಮ್ಮಷ್ಟಕ್ಕೆ ನೇರವಾಗಿ ಮಾತಾಡುವಂತಾಯಿತು. ಕೆಲವರು ಇದು ನೋವುಯೆಂದು ಭಾವಿಸಿದ್ದರು.

ಕರ್ನಾಟಕದ ಜನ ಇಲ್ಲಿಯವರೆಗೂ ತಮಗಾದ ಅವಸ್ಥೆಯನ್ನು ನೋಡಿಯೂ ಸಹಿಸುತ್ತಾ ಬಂದಿರುವವರು. ಕಳೆದ ಹದಿನೈದು ವರುಷಕ್ಕಿಂತಲೂ ಹೆಚ್ಚು ಕಾಲ ಸತತವಾಗಿ ಕನ್ನಡಿಗರು ಹೋರಾಡುತ್ತಲೇ ಬಂದಿರುವರು." ರತ್ನಗಿರಿಯ ಶ್ರೀ ಎಸ್. ಎಲ್. ಕರಂದೀಕರ ಗೊತ್ತುವಳಿಗೆ ಬೆಂಬಲ ನೀಡಿದರು. ಶ್ರೀ ಎಂ. ಪಿ. ಪಾಟೀಲರ ತಿದ್ದುಪಡಿಯೊಂದಿಗೆ ಈ ಗೊತ್ತುವಳಿ ಪಾಸಾಯಿತು. ಅಂದಿನ ಮುಂಬೈ ಪ್ರಾಂತದ ಮುಖ್ಯಮಂತ್ರಿ ಶ್ರೀ ಬಿ. ಜಿ. ಖೇರ ಕನ್ನಡ ಮಾತನಾಡಲು ಬಲ್ಲವರು ದೊಡ್ಡಮೇಟಿಯವರಿಗೆ ಆಗಾಗ ನೆರವು ಕೊಡುತ್ತಿದ್ದರು. ಅವರಿಗಾದ ಅವಸ್ಥೆಗೆ ಮುಖ್ಯಮಂತ್ರಿಗಳಿಗೆ ನೋವು ಎನಿಸಿತು. ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಲು ರಾಜಮಾರ್ಗ ಮಾಡಿಕೊಟ್ಟರು."

## ರಾಮದುರ್ಗ ದುರಂತ

ಕ್ರಿ.ಶ 1937 ಡಿಸೆಂಬರ್ 31 ರಂದು ಕೊಣ್ಣೂರಿನಲ್ಲಿ ನರಗುಂದ ಪೇಠಾ ರೈತರ ಪರಿಷತ್ತು ಸೇರಿತ್ತು. ಅದರ ಅಧ್ಯಕ್ಷತೆಯನ್ನು ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರು ವಹಿಸಿದ್ದರು. ಇದರಲ್ಲೆ ಕೆಲ ರಾಮದುರ್ಗದ ಸಂಸ್ಥಾನದವರು ಬಂದಿದ್ದರು. ರಾಮದುರ್ಗ ಆಳರಸರ ದಬ್ಬಾಳಿಕೆ ಹಾಗೂ ದುರ್ವತನೆಯ ಬಗೆಗೆ ಪ್ರತಿಭಟನಾ ಗೊತ್ತುವಳಿ ತರಲು ಯತ್ನಿಸಿದರು. ಅಧ್ಯಕ್ಷ ಶ್ರೀ ದೊಡ್ಡಮೇಟಿಯವರು ವಿಫಲಗೊಳಿಸಿದರು. ಸಂಸ್ಥಾನಿ ಪ್ರಜೆಗಳ ಗೋಳಿನ ಚಿತ್ರ ಹೀಗೆ ವ್ಯಕ್ತ ಪಡಿಸಿದ ಮಾತುಗಳು......."ಗುಲಾಮರ ಗುಲಾಮರಾದ ಸಂಸ್ಥಾನಿ ಪ್ರಜೆಗಳ ಗೋಳನ್ನಂತೂ ಹೇಳತೀರದು. ಭಾರತದ ಒಂದು ಮೂರಾಂಶ ಪ್ರಜೆಗಳನ್ನು

ಶಾಶ್ವತ ಗುಲಾಮಗಿರಿಯಲ್ಲಿಟ್ಟು ನಾವು ಪಡೆಯುವ ಸ್ವಾತ್ರಂತ್ರ್ಯವಾದರೂ ಎಂತಹದು? ಸಂಸ್ಥಾನಿಕರಂತೂ ಇಂದು ನಮ್ಮ ಪ್ರಗತಿ ಪ್ರವಾಹಕ್ಕೆ ದೊಡ್ಡ ಬಂಡೆಗಲ್ಲಾಗಿದ್ದಾರೆ. ಇವರನ್ನು ಭಾರತೀಯರೆಂದು ಕರೆಯಲು ಕೂಡಾ ನಾಚಿಕೆಯಾಗುವಂತಿದೆ. ಬ್ರಿಟೀಷ ಸಾಮ್ರಾಜ್ಯ ವೃಕ್ಷದ ಈ ಟೊಂಗೆಗಳು ಬೇಗನೆ ಕತ್ತರಿಸಿ ಬಿಟ್ಟಷ್ಟು ನೆಟ್ಟಗೆ. ಬ್ರಿಟೀಷ್ ಸಾಮ್ರಾಜ್ಯವನ್ನು ಎದುರಿಸುವುದರೊಡನೆ ಈ ಸಂಸ್ಥಾನಗಳನ್ನು ಎದುರಿಸುವ ಸಾಮರ್ಥ್ಯ ಇಂದು ದೇಶಕ್ಕಿಲ್ಲವೆ? ಖಂಡಿತವಾಗಿಯೂ ಇದೆ. ಹೆಚ್ಚೇಕೆ ಇವೆರಡೂ ಪ್ರತಿಗಾಮಿ ಶಕ್ತಿಗಳನ್ನು ಒಮ್ಮೆಲೆ ಎದಿರಿಸುವುದರಿಂದಲೇ ಭಾರತ ಸ್ವಾತ್ರಂತ್ರ್ಯದ ಚಳುವಳಿಗೆ ಹೆಚ್ಚಿಗೆ ಪ್ರೋತ್ಸಾಹಕರ ವಾಗಬಹುದೆಂಬು ನಮಗೆನಿಸುತ್ತದೆ.ಹಾಗೇಯೇ ಜನ ಸಾಮಾನ್ಯರಾದ ಒಕ್ಕಲಿಗರನ್ನು ಜುಲುಮೆ ಒಲುಮೆಗೊಳಗಾದ ಇತರ ಬಡವರ್ಗದವರನ್ನು ಸರಿಯಾದ ದಾರಿಯಲ್ಲಿ ಸಂಘಟಿಸಿ ಆ ವರ್ಗಗಳನ್ನು ತಮ್ಮ ಹಕ್ಕು ಭಾಧ್ಯತೆಗಳಿಗಾಗಿ ಹೋರಾಡಲು ಇಂದು ಅಣಿಮಾಡಬೇಕು. ಈ ರೀತಿ ಹೋರಾಟಕ್ಕಾಗಿ ಇಲ್ಲಿ ಎರಡು ವರ್ಗಗಳು ನಿರ್ಮಾಣವಾಗಬಹುದು. ಈ ಹೋರಾಟ ಮನುಷ್ಯತ್ವ ಅಮಾನುಷತ್ವಗಳ ನಡುವೆ ನಡೆಯಬಹುದಲ್ಲದೇ ಕೇವಲ ಶ್ರೀಮಂತ ಬಡವನೆಂದು ನಡೆಯುವುದಿಲ್ಲ"

ಜೈಲಿನಿಂದ ಬಿಡುಗಡೆಯಾಗಿ ಬಹಳ ದಿನಗಳಾಗಿರಲಿಲ್ಲ. 1942 ರ ಆಗಸ್ಟ್ ಚಳುವಳಿ ಪ್ರಾರಂಭವಾಯಿತು. ಗಾಂಧೀಜಿಯವರ ಕರೆಯಂತೆ ದೊಡ್ಡಮೇಟಿಯವರು ದೇಶಭಕ್ತರೊಂದಿಗೆ ಚಳುವಳಿಗಿಳಿದರು. ದೇಶವನ್ನು ಬ್ರಿಟೀಷರ ಕಪಿಮುಷ್ಠಿಯಿಂದ ಬಿಡಿಸುವ ಅನೇಕ ಯೋಜನೆಗಳಿಗೆ ಅಲ್ಲಿಯೇ ರೂಪಕೊಡಲಾಯಿತು. ಮುಂಬಯಿಯ ಜನಾಧಾರಿತ ಆಹಾರ ಸಮಿತಿಯ ಸದಸ್ಯರಾಗಿ 1946 ರಲ್ಲಿ ವಿಜಾಪುರದಲ್ಲಿ. ಜರುಗಿದ ರೈತ ಮಹಾಸಮ್ಮೇಳನದ ಸದಸ್ಯರಾಗಿದ್ದರು. ರಾಮದುರ್ಗ ದುರಂತದಲ್ಲಿ ಇವರ ಸಂಗಡ ಮಾಜಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಎಸ್. ಆರ್. ಕಂಠಿಯವರು ಭೂಗತ ಸಾಹಿತ್ಯ ಒದಗಿಸುವ ಕಾರ್ಯ ಕೈಕೊಂಡರು, ಜೊತೆ ಜೊತೆಯಾಗಿ ಹರಿಜನ ಬೋರ್ಡಿಂಗ್ ನಡೆಸಿದರು. ಖಾದೀ ಪ್ರಚಾರ ಮಾಡಿದರು. ಹಿಂದೀ ಪ್ರಚಾರವನ್ನು ಮಾಡಿದರು. ಕ್ರಿ.ಶ. 1.6.1939 ರಂದು ಶ್ರೀ ಎಂ.ಪಿ. ಪಾಟೀಲರಿಗೆ ದೊಡ್ಡಮೇಟಿ ಅಂದಾನಪ್ಪನವರು ರಾಮದುರ್ಗ ದುರಂತದ ಬಗ್ಗೆ ಸಾಕ್ಷಾಧಾರ ಸಹಿತ ಮಾಡಿದ್ದ ವರದಿಯೊಂದಿಗೆ ಪತ್ರವನ್ನು ಬರೆದು ಅವಶ್ಯವೆಂದು ಕಂಡಲ್ಲಿ ಬಾಪೂಜಿಗೆ ತೋರಿಸಬೇಕೆಂದು ವಿನಂತಿಸಿದರು. ಪತ್ರದ ಕೆಲ ಭಾಗವನ್ನು ಇಲ್ಲಿ ಕೊಟ್ಟಿದೆ. ಅಂದಿನ ರಾಜಕೀಯದ ಮೇಲೆ ಇದು ಬೆಳಕನ್ನು ಚೆಲ್ಲಬಲ್ಲದು.

1) ಇಂತಹ ಹಿಂಸಾ ಪ್ರವೃತ್ತಿಯನ್ನು ಬೆಳಸಿದಲ್ಲಿ ಪ್ರೋತ್ಸಾಹವನ್ನು ಕೊಟ್ಟಲ್ಲಿ ಇಡೀ ಮಾನವ ಜನಾಂಗಕ್ಕೆ ಗಂಡಾಂತರಕಾರಕವಾದುದು.

2) ಈ ದುರ್ದೈವಿ ಪ್ರಸಂಗ ಒಂದು ಧ್ವಜಸ್ತಂಭ ನೆಡುವ ಮುಖವಾಡವನ್ನಾಧರಿಸಿ ನಡೆಯಿತು.

3) ಶ್ರೀ ಗಂಗಾಧರರಾವ್ ದೇಶಪಾಂಡೆಯವರು 12.4.1939 ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಈ ವಿಷಯದ ಬಗ್ಗೆ ಮಾಡಿದ ಆರೋಪವನ್ನು ನೋಡಿದಲ್ಲಿ ಎಲ್ಲದಕ್ಕೆ ಪ್ರಜಾಸಂಘವನ್ನೇ ಅವರು ಹಿಡಿದುಕೊಂಡಿದ್ದಾರೆ. ರಾಜ್ಯ ಪ್ರತಿನಿಧಿಗಳಂತೆ ವರ್ತಿಸಿದ್ದಾರೆ. ಗಂಗಾಧರ ರಾಯರಂತೆ ನಾನು ಎಲ್ಲ ನಿಂದೆಯನ್ನು ಪ್ರಜಾ ಸಂಘದ ಹೆಗಲಿಗೆ ಹೊರಿಸುವುದಿಲ್ಲ.

4) ಪ್ರಜಾ ಸಂಘದ ಸ್ಥಾಪನೆಗೆ ದರಬಾರವು ಪ್ರತ್ಯಕ್ಷ ಅಪ್ರತ್ಯಕ್ಷ ಸಹಾಯವನ್ನು ಮಾಡಿ ತಪ್ಪು ಹಾದಿ ಹಿಡಿದು ....ರಾಮದುರ್ಗ ಸಂಸ್ಥಾನದ ತಮ್ಮ ಪ್ರಜೆಗಳಲ್ಲಿಯೇ ಒಡಕು ಬಿತ್ತಿದೆ. ಪ್ರಜಾ ಸಂಘವನ್ನು ಅಕ್ರಮ ಸಂಸ್ಥೆ ಎಂದು ಸಾರಿದ್ದಕ್ಕೆ ಯಾವುದೇ ಸಕಾರಣಗಳಿಲ್ಲ.

ರಾಮದುರ್ಗ ದುರಂತ ನಂತರ ಕರ್ನಾಟಕದ ಮುಖಂಡರಲ್ಲಿ ಶಾಂತಿಯು ವಾತಾವರಣವು ಉಳಿಯಲಿಲ್ಲ. ರಾಮದುರ್ಗದಲ್ಲಿ ಶಾಂತಿಯನ್ನು ನಿರ್ಮಿಸಲು ಯತ್ನ ಸಫಲಗೊಳ್ಳಲಿಲ್ಲ. 11.11.1939 ರಂದು ನಾರಾಯಣರಾವ ಜೋಶಿ ಹಾಗೂ ದೊಡ್ಡಮೇಟಿ ಅಂದಾನಪ್ಪನವರು ರಾಮದುರ್ಗ ಹಾಗೂ ಕರ್ನಾಟಕ ವಿಷಮ ವಾತಾವರಣವನ್ನು ಚರ್ಚಿಸಲು ಕಾರ್ಯಕರ್ತರ ಸಭೆಯನ್ನು ಬೆಳಗಾಂವಿಯಲ್ಲಿ ಕರೆದರು. ರಾಜ ಪ್ರಜೆಗಳ ನಡುವೆ ಸಂಧಾನಕಾರರಾದರು.

## ಜಮಖಂಡಿ ಸಂಸ್ಥಾನದೆಡೆಗೆ

ರಾಮದುರ್ಗ ಸಂಬಂಧದಲ್ಲಿ ಹತ್ತಿದ ರಕ್ತ ಇನ್ನೂ ಆರಲಿಲ್ಲ ಜಮಖಂಡಿ ಸಂಸ್ಥಾನದ ಪ್ರಜಾ ಪರಿಷತ್ತಿನ ಅಧ್ಯಕ್ಷರಾಗಿ ಮಾರ್ಗದರ್ಶನ ನೀಡಬೇಕೆಂದು ಸ್ವಾಗತ ಸಮಿತಿಯ ಗೌರವ ಕಾರ್ಯದರ್ಶಿ ಶ್ರೀ ಪಾ.ಮ. ಭಂಗಿಯವರ ಮಾತನ್ನು ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರು ಒಪ್ಪಿಕೊಂಡರು. ಅಂದಿನ ವಾತಾವರಣದಲ್ಲಿ ಎಂಥವರಿಗಾದರೂ ಎದೆ ನಡುಗಬೇಕು. ಬೆಳಗಾವಿಯ ಶ್ರೀ ನಾರಾಯಣ ಜೋಶಿಯವರು ತಮ್ಮ 21.5.39 ರ ಪತ್ರದಲ್ಲಿ ಶ್ರೀ ದೊಡ್ಡ ಮೇಟಿಯವರಿಗೆ ಮಿತ್ರನೆಂದು ಅಭಿನಂದಿಸಿ ಕೆಲವು ಸೂಚನೆಗಳನ್ನು ಸಲ್ಲಿಸುವ ಮೂಲಕ ಅಂದಿನ ಉಸಿರುಗಟ್ಟಿದ ವಾತಾವರಣದ ಬಗ್ಗೆ ಹೇಳಿದ್ದಾರೆ. ಅಂದಿನ ಜಮಖಂಡಿಯ ವಾತಾವರಣವು ಸಹ ಸರಿಯಾಗಿಲ್ಲ. ರಾಜ ಪ್ರಜೆಗಳ ನಡುವಿನ ಸಂಬಂಧ ಅಷ್ಟು ಸರಿ ಇರಲಿಲ್ಲ. ಕೆಲವರ ಮೇಲೆ ರಾಜದ್ರೋಹದ ಆರೋಪಗಳು ಖಟ್ಲೆಗಳು ಆಗಿವೆ. ಅಲ್ಲಿಯ ಅಶಿಕ್ಷಿತ ಜನರು ಬೆಂಕಿ ಹಾಗೆ ಅವರ ಜೊತೆ ಆಟವಾಡುವುದು ಬೆಂಕಿಯು ಕೂಡ ಸರಸವಾಡಿದಂತೆ ಭಾಷಣದಲ್ಲಿ ಭಾವನಾ ಪ್ರಧಾನವಾಗಿ ಮಾತನಾಡುವುದು ದೊಡ್ಡ ಮೇಟಿಯವರ ಹುಟ್ಟು ಸ್ವಭಾವವಾಗಿತ್ತು.

# ಶ್ರೀ ಅರವಿಂದರ ದರ್ಶನ

1940 ರಲ್ಲಿ ಶ್ರೀಅರವಿಂದರ ದರ್ಶನವು ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರ ಜೀವನದಲ್ಲಿ ಹೊಸ ಬೆಳಕನ್ನು ತುಂಬಿಕೊಂಡ ವರ್ಷವಾಗಿತ್ತು. ರಾಜಕೀಯ ಮತ್ತು ಮನೆತನದ ವಿಚಾರಗಳಲ್ಲಿ ಮನಸ್ಸು ರೋಷಗೊಂಡಿತ್ತು.

ಶ್ರೀ ಅರವಿಂದ ಹಾಗೂ ಶ್ರೀ ಮಾತಾಜಿ ಅವರ ದರ್ಶನಕ್ಕಾಗಿ ಹಂಬಲಿಸಿ ಹಾತೊರೆಯುತ್ತಿತ್ತು. ಮನಸ್ಸು. 1940 ನೆಯ ಇಸ್ವಿಯಲ್ಲಿಯೇ ಮೂರು ಸಲ ಪಾಂಡಿಚೇರಿಗೆ ಹೋಗಿ ಬಂದರು. ಫೆಬ್ರವರಿ 1940 ರಲ್ಲಿ ಪ್ರಥಮ ದರ್ಶನವನ್ನು ಪಡೆದರು. ಆ ಮೇಲೆ ಪತ್ರದ ಮೂಲಕ ತಮ್ಮ ಪ್ರತಿಯೊಂದು ಸ್ಥಿತಿಗತಿಯನ್ನು ತಾಯಿಯವರಿಗೆ ಬರೆದು ಆಶೀರ್ವಾದಕ್ಕಾಗಿ ಕಾಯುವುದು ದೊಡ್ಡಮೇಟಿ ಅಂದಾನಪ್ಪನವರ ಜೀವನ ಪದ್ಧತಿಯಾಯಿತು. 1939ನೆಯ ಸಾಲಿನಲ್ಲಾದ ಘಟನೆಗಳನ್ನು ವಿವರಿಸಿ ಕನ್ನಡ ನಾಡಿನ ಹಲವು ಅನಾವಶ್ಯಕ ಟೀಕೆಗೆ ಗುರಿಯಾದೆನು. ಹೀಗಾಗಿ ಮನಸ್ಸು ಶಾಂತತೆಯನ್ನು ಅಪೇಕ್ಷಿಸಹತ್ತಿದೆ ಎಂದು ವಿನಂತಿಸಿಕೊಂಡರು. ಇವರಲ್ಲಿದ್ದ ದೈವಿಭಕ್ತಿಗೆ ಹೆಚ್ಚಿನ ಎಚ್ಚರಿಕೆ ದೊರೆಯಿತು.

# ವೈಯಕ್ತಿಕ ಸತ್ಯಾಗ್ರಹ

ಎರಡನೆಯ ಮಹಾಯುದ್ಧ ಸಂದರ್ಭದಲ್ಲಿ ಸರಕಾರದ ನೀತಿಯನ್ನು ಕಾಂಗ್ರೆಸ್ ಬಲವಾಗಿ ಖಂಡಿಸಿತು. ಮಹಾತ್ಮಾ ಗಾಂಧೀಜಿಯವರು ಭಾರತದ ಜನಬೆಂಬಲ ಮತ್ತು ಧನ ಬೆಂಬಲ ಸಿಗಲಾರದು ಎಂದು ಕಾಂಗ್ರೆಸ್ ಮೂಲಕ ಘೋಷಿಸಿಬಿಟ್ಟರು.1940ನೇ ಇಸ್ವಿಯಲ್ಲಿ ಮಹಾತ್ಮಾ ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹದ ಆಂದೋಲನಕ್ಕೆ ಕರೆ ನೀಡಿದರು. ಗಾಂಧೀಜಿಯವರ ಕರೆ ಕರ್ನಾಟಕದ ತುಂಬಾ ವ್ಯಾಪಿಸಿಕೊಂಡಿತು. ಹಿರಿಯ ಕಾಂಗ್ರೆಸಿಗರು ಜೈಲಿನಲ್ಲಿರುವಾಗ ವೈಯಕ್ತಿಕ ಸತ್ಯಾಗ್ರಹದ ಇನ್ನುಳಿದವರು ಸನ್ನದ್ಧರಾದರು.

ಜಕ್ಕಲಿಯ ಶ್ರೀ ವೀರಭದ್ರ ದೇವರ ಗುಡಿಯ ಮುಂದಿನ ಬಯಲಿನಲ್ಲಿ ಯುದ್ಧ ವಿರೋಧಿ ಘೋಷಣಾ ಸಭೆ ಸೇರಿತು. ಕಾನೂನು ಭಂಗವಾದ ಪ್ರಯುಕ್ತ ಕರ್ಣಧಾರತ್ವ ವಹಿಸಿದ್ದ ಶ್ರೀ ದೊಡ್ಡಮೇಟಿ ಅಂದಾನಪ್ಪನವರನ್ನು ಖೈದಿ ಮಾಡಿ ಧಾರವಾಡದ ನ್ಯಾಯಾಧೀಶರ ಮುಂದೆ ಖಟ್ಲೆ ಜರುಗಿಸಿ ಒಂದು ವರ್ಷದ ಶಿಕ್ಷೆಗಾಗಿ ಹಿಂಡಲಗಿ ಸೆರೆಮನೆಗೆ ಕಳುಹಿಸಿದರು.

ಹಿಂಡಲಗಿ ಜೈಲಿನಲ್ಲಿ 19, 872 ನೇ ನಂಬರಿನ ಖೈದಿಯಾಗಿದ್ದರು. ಅಲ್ಲಿ ಶ್ರೀ ಅರವಿಂದರ ಸಾಹಿತ್ಯ ಓದಿ ಅಧ್ಯಾತ್ಮಿಕ ಹಸಿವೆಯನ್ನು ಹಿಗ್ಗಿಸಿ ಕೊಳ್ಳಲು ಯತ್ನಿಸಿದರು. ರಾಷ್ಟ್ರೀಯ ವಚನಗಳ ಸಂಗ್ರಹಗಳನ್ನು ಶ್ರೀ ಭುವನೇಶ್ವರಿ ಅಂಕಿತದೊಂದಿಗೆ ಬರೆಯತೊಡಗಿದರು. ಅವರು ತಮ್ಮ ಮಗನಿಗೆ ಬರೆದ ಪತ್ರವೊಂದರ ಮಾದರಿ ಈ ಕೆಳಗಿನಂತಿದೆ.

ಈ ಸಲದ ಜೈಲು ವಾಸದಿಂದ ನಾನು ಬಂದ ನಂತರ ಈವರೆಗೆ ಮನಸ್ಸಿನ ಮಂಡಿಗೆಯಾಗಿದ್ದ ಹೊಸ ಜೀವನವನ್ನು ವೇಗವಾಗಿ ಪ್ರಾರಂಭಿಸುವಾಗ ಹೊರಗೆ ಬಂದ

ನಂತರ (ಸ್ವಾತಂತ್ರ ಯುದ್ಧ ನಿಂತಲ್ಲಿ) ನಾನು ಕೆಲವು ದಿನ ಶ್ರೀ ಅರವಿಂದಾಶ್ರಮದಲ್ಲಿ ಹಾಗೂ ಹಿಮಾಲಯದ ಕೆಲವು ಸ್ಥಾನಗಳಲ್ಲಿ ಇದ್ದು ಬರಬೇಕೆಂದಿದ್ದೇನೆ. ಅಲ್ಲದೇ ಒಬ್ಬ ಅಧ್ಯಾತ್ಮಿಕ ತಜ್ಞರನ್ನು ಜಕ್ಕಲಿಗೆ ಕರೆದುಕೊಂಡು ಬಂದು ಶ್ರೀ ಅರವಿಂದ ಮಾರ್ಗದರ್ಶನದಲ್ಲಿ ಮುಂದಿನ ಹೆಜ್ಜೆ ಇಡಬೇಕೆಂದಿದ್ದೇನೆ (22.2.1941)

## ಪುನಃ ಜೈಲಿಗೆ

ಬಿಡುಗಡೆಗೊಂಡು ಎಂಟೊಂಭತ್ತು ತಿಂಗಳ ಕಳೆದಿರಲಿಲ್ಲ 1942 ಚಲೇಜಾವ್ ಅಂದೋಲನದ ಕಹಳೆಯು ಮೊಳಗ ತೊಡಗಿತು. ಆಗಸ್ಟ್ 9, 1942 ರಂದು ಜಕ್ಕಲಿಯಲ್ಲಿ ಬಂಧಿಸಿ ಪುನಃ ಹಿಂಡಲಗಿ ಜೈಲಿಗೆ ಕಳಿಸಿದರು. ನೂರಾರು ಜನರು ಕಂಬನಿಸುರಿಸಿ ಕಳಿಸಿದರು. ಇವರನ್ನು ಎರಡುವರೆ ವರ್ಷ ಜೈಲಿನಲ್ಲಿ ಕೊಳೆಹಾಕಿದರು. ಈ ಬಾರೆ ಡೆಟೆನ್ಯೂಕ್ಲಾಸ್ (1) ರಲ್ಲಿ ಇಟ್ಟರು. ಅವರ ಮನಸ್ಸು ತಮ್ಮ ಅಂಗಳದಲ್ಲಿ ಆಡಿ ಬಡಜನರ ಬವಣೆಯಲ್ಲಿ ಮರುಕಗೊಂಡಿದೆ. ಜೈಲಿನಿಂದಲೇ ಮಕ್ಕಳಿಂದ ಪತ್ರಗಳನ್ನು ಬರೆಯುವಂತೆ ತಿಳಿಸಿದರು. ಜೈಲಿನಲ್ಲಿ ಕುಳಿತರೂ ಗ್ರಾಮದ ಆಗುಹೋಗುಗಳನ್ನು ತಿಳಿಯದೇ ಇರುತ್ತಿರಲಿಲ್ಲ ಜಕ್ಕಲಿಯ ಹರಿಜನರಿಗೆ ಮುಸ್ಲಿಂರಿಗೆ, ದುರ್ಬಲ ವರ್ಗದವರಿಗೊಂದು ದೊಡ್ಡ ಮೇಟಿಯವರು ದೊಡ್ಡ ಬಲದವರಾಗಿದ್ದರು. ಜಕ್ಕಲಿಯ ಶ್ರೀಮಂತರಾದವರು ಎಂದಿಗೂ ಒಂದು ಆಣೆಯನ್ನು ಸೋಲುತ್ತಿರಲಿಲ್ಲ. ಕನ್ನಡ ಶಾಲಾ ಕಟ್ಟಡಕ್ಕೆ ಯಾರೂ ಸ್ಥಳದಾನ ಮಾಡಲು ಮುಂದೆ ಬರಲಿಲ್ಲ. ಅಂತಿಮವಾಗಿ ದೊಡ್ಡಮೇಟಿ ಅಂದಾನಪ್ಪ ಅವರೇ ಸ್ಥಳ ನೀಡಿದರು. ಹಳ್ಳಿಯ ಜಾತಿಯ ವಿಷಮ ಪರಿಸ್ಥಿತಿಗೆ ಔಷದೋಪಚಾರ ಮಾಡುವ ವೈದ್ಯರಂತೆ ಕಾರ್ಯಕೈಕೊಂಡರು.

ಹಲವಾರು ಸಮಸ್ಯೆಗಳು ಇವರನ್ನು ಕಾಡತೊಡಗಿದರೂ ಅಧೋಮುಖವಾಗಿ ಹೊರಡದೆ ಊರ್ಧಮುಖವಾಗಿ ಹೋಗುವಂತೆ ಯತ್ನಿಸಿದರು. ಮಹರ್ಷಿ ಅರವಿಂದರ ಪೂಜ್ಯ ಮಾತೆಯವರ ಆಶೀರ್ವಾದ ಬಲ ಇರುವುದರಿಂದ ತಾವು ಯಾತಕ್ಕೂ ಕಾಳಜಿ ಮಾಡುವುದಿಲ್ಲ. ಅಂಜುವುದಿಲ್ಲ ಎಲ್ಲವನ್ನು ದೇವರಿಗೆ ಒಪ್ಪಿಸಿದ್ದೇನೆ ಎನ್ನುವ ನಿಶ್ಚಿಂತತೆ ಅವರ ಮುಖದಲ್ಲಿ ಕಾಣುತ್ತಿತ್ತು.

ಶ್ರೀ ಅರವಿಂದ ಹಾಗೂ ತಾಯಿಯಾದ ಕಡೆಗೆ ಹೆಚ್ಚುಪಾಲದ ಶ್ರೀ ದೊಡ್ಡಮೇಟಿಯವರು ಬಾಪುವಿಗೆ ಎಂದಿನಂತೆ ಸಮಸ್ಯೆಗಳ ಬಗ್ಗೆ ಕಾಗದ ಹಾಕುವುದನ್ನು ನಿಲ್ಲಿಸಿದ್ದು ತಿಳಿದು ಬರುತ್ತದೆ. ಶ್ರೀ ಅರವಿಂದ ಹಾಗೂ ಮಾತೆಯವರ ಆಗಸ್ಟ್ ದರ್ಶನ ಪಡೆದುಕೊಂಡು ಅನೇಕ ಕಾಂಗ್ರೇಸ್ ಮುಖಂಡರು ಮುಂಬರುವ ಮುಂಬೈ ಶಾಸನ ಸಭೆಗೆ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರಾಗಿ ನಿಲ್ಲಬೇಕೆಂದು ಒತ್ತಾಯ ತಂದಾಗ ಶ್ರೀ ಮಾತೆಯವರನ್ನು ಮೊರೆಹೊಕ್ಕರು. ಶ್ರೀ ಮಾತೆಯವರು ತಮ್ಮ ಕಾರ್ಯದರ್ಶಿಯ ಮೂಲಕ "ಈಗ ಸದ್ಯ ಕಾಂಗ್ರೇಸ್ ರಾಜಕಾರಣದಲ್ಲಿ ಬೆರೆಯಬೇಡ ದೂರ ಉಳಿದು ರಾಜಕಾರಣವನ್ನು ನೋಡುತ್ತಿರು" ಎಂದು ಬರೆಯಿಸಿದರು. ನಂತರ ಕಾಂಗ್ರೇಸ್ ಪಕ್ಷದ ರಾಜಕಾರಣದಲ್ಲಿ ಇವರು ಹೆಚ್ಚು ಹೆಚ್ಚಾಗಿ ಭಾಗವಹಿಸಿದ್ದು ಗೋಚರವಾಗಲಿಲ್ಲ.

## ಪುನಃ ಶಾಸನ ಸಭೆಗೆ ಆಯ್ಕೆ

ತಮ್ಮ ಜನಪರ ಕಾರ್ಯಗಳು, ಮೃದು ಸ್ವಭಾವ, ಸರ್ವರನ್ನೂ ಸರಿಸಮಾನಾಗಿ ನೋಡುವ ದೃಷ್ಟಿ ಹಾಗೂ ಆತ್ಮೀಯ ನಡೆನುಡಿಗಳಿಂದಾಗಿ ಜನ ಪ್ರಿಯರಾಗಿ ತಾವು ಸ್ಪರ್ಧಿಸಿದ ಚುನಾವಣೆಯಲ್ಲಿ ಗೆದ್ದು ಬಂದರು. 1935 ರ ಬ್ರಿಟೀಷ್ ಆ್ಯಕ್ಟ್ ಪ್ರಕಾರ 1946 ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಸುವುದೆಂದು ನಿರ್ಣಯವಾಯಿತು. ಈ ಮೊದಲು 1946 ರಲ್ಲಿ ಬ್ರಿಟೀಷ್ ಸರಕಾರದವರು ಇಂಟೇರಿಯಮ್ ಗೌರ್ನಮೆಂಟ್ ಎಂದು ಭಾರತೀಯರಿಗೆ ಅಧಿಕಾರ ಕೊಟ್ಟು ತಮ್ಮ ಪರವಾಗಿ ವೈಸರಾಯರನ್ನು ನಿಯಮಿಸಿದ್ದರು. ಈ ಹಿನ್ನೆಲೆಯಲ್ಲಿ ಕ್ರಿ. ಶ.1946 ರಲ್ಲಿ ಮುಂಬೈ ಅಸೆಂಬ್ಲಿಗೆ ಚುನಾವಣೆ ನಡೆಸಬೇಕೆಂದು ಠರಾವು ಮಾಡಿದರು. ಚುನಾವಣೆಗೆ ಹುರಿಯಾಳಾಗಲು ಕಾಂಗ್ರೇಸ್ ಕೇಂದ್ರ ಸಮಿತಿಯು ದೊಡ್ಡಮೇಟಿಯವರಿಗೆ ತನ್ನ ಅನುಮೋದನೆಯನ್ನು ಕೊಟ್ಟಿತು.

ಧಾರವಾಡ ಜಿಲ್ಲೆಯ ಗ್ರಾಮೀಣ ಉತ್ತರ ಭಾಗದಿಂದ ಮುಂಬೈ ಶಾಸನ ಸಭೆಗೆ ನಿಲ್ಲಲು ಧಾರವಾಡ ಜಿಲ್ಲೆಯ ಚುನಾವಣಾ ಅಧಿಕಾರಿಗಳ ಕಡೆಗೆ ನಾಮಪತ್ರ ಸಲ್ಲಿಸಿದರು. ಸ್ವೀಕೃತವಾಯಿತು. ಕಾಂಗ್ರೇಸ್ ತನ್ನ ಎಲ್ಲ ನಾಲ್ಕು ಸ್ಥಳಗಳಿಂದಲೂ ಹುರಿಯಾಳುಗಳನ್ನು ನಿಲ್ಲಿಸಿತ್ತು. ಕಾಂಗ್ರೇಸ್ ವಿರುದ್ಧ ಒಬ್ಬರೇ ಒಬ್ಬರಾದ ಹುರಿಯಾಳು ಮುಂಬೈ ಪ್ರಾಂತದ ಮಾಜಿ ಸಚಿವ ಕಂಬಳಿ ಸಿದ್ದಪ್ಪನವರು. ದೊಡ್ಡಮೇಟಿಯವರು ತಮ್ಮ ಚುನಾವಣಾ ಭವಿಷ್ಯದ ಬಗ್ಗೆ ಶ್ರೀಮಾತೆಯವರಿಗೆ, ನಾನು ನಿಚ್ಚಳ ಶುದ್ಧವಾಗಿ ಆರಿಸಿಬರುವ ಸಂಭವ ಹೆಚ್ಚು. ಇನ್ನುಳಿದ ಮೂವರು ಕಾಂಗೆಸ್ಸಿಗರೂ ಆರಿಸಿ ಬರುವರೆಂದು ನಂಬುಗೆ ಎಂದು ಬರೆದು ಅವರ ಆಶೀರ್ವಾದವನ್ನು ಬೇಡಿಕೊಂಡರು. ಮಾರ್ಚ್ 11 ಕ್ಕೆ ಚುನಾವಣಾ ಫಲಿತಾಂಶ ಬಂದಾಗ ಕಾಂಗ್ರೇಸ್ಸಿನ ಎಲ್ಲ ಹುರಿಯಾಳುಗಳು ಆಯ್ಕೆಗೊಂಡಿದ್ದರು.

## ಕರ್ನಾಟಕ ಏಕೀಕರಣ: ದೊಡ್ಡಮೇಟಿ ಮಹತ್ವದ ಪಾತ್ರ

ಸ್ವಾತಂತ್ರ್ಯ ಪೂರ್ವದ ಭಾರತ ಹಲವಾರು ಸಂಸ್ಥಾನ ರಾಜ್ಯಗಳಲ್ಲಿ ಹಂಚಲ್ಪಟ್ಟಿತು. ನಂತರ ಬಂದ ಬ್ರಿಟೀಷ್‌ರು ಇಂಡಿಯಾವನ್ನು ಪ್ರಾವಿನ್ಸ್‌ಗಳನ್ನಾಗಿ ಕೇವಲ ರಾಜಕೀಯ ಆಡಳಿತ ಹಾಗೂ ಮಿಲಿಟರಿ ಮಹತ್ವದ ದೃಷ್ಟಿಯಿಂದ ವಿಭಾಗಿಸಿದ್ದರು. ಹೀಗೆ ಮಾಡುವಾಗ ಅವರು ಜನರ ಭಾಷೆ ಮತ್ತು ಭೌಗೋಳಿಕ ಹಾಗೂ ಆರ್ಥಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ. ಅದೊಂದು ಅಸಮಂಜಸ ಮತ್ತು ಅನಾನುಕೂಲ ವ್ಯವಸ್ಥೆಯಾಗಿತ್ತೆಂದು ಇದರಿಂದಾಗಿ ಒಂದು ಭಾಷೆಯನ್ನಾಡುವ ಜನ ಒಂದು ರಾಜ್ಯವಾಗಿರಬೇಕೆಂಬ ಬಹುಸಂಖ್ಯಾತ ನಾಯಕರ ಹಾಗೂ ಜನರ ಆಶೆಗೆ ಮಣ್ಣೇರೆಚಿದಂತಾಗಿತ್ತು.

ಕನ್ನಡಿಗರೂ ತಮಗೊಂದು ಪ್ರತ್ಯೇಕ ರಾಜ್ಯಬೇಕೆಂದು ಇಟ್ಟಿದ್ದು ಸಹಜವೇ ಆಗಿತ್ತು. ಈಗಿನ ಕರ್ನಾಟಕ ಆಗ ಐದು ಪ್ರಾಂತಗಳಲ್ಲಿ ಹರಿದು ಹಂಚಿಹೋಗಿತ್ತು. ಹೈದರಾಬಾದ,

ಮುಂಬೈ, ಮೈಸೂರು, ಮದ್ರಾಸ್, ಕೊಡಗು ಹೀಗೆ ಹರಿದು ಹಂಚಿ ಹೋ...ತ್ತು. ಕನ್ನಡಿಗರನ್ನು ಒಂದಾಗಿಸುವುದು ಕಷ್ಟ ಸಾಧ್ಯವೇ ಸರಿ. ಇದರಿಂದ ಅನೇಕ ದೇಶಭಕ್ತರೂ, ನಾಯಕರು, ಕರ್ನಾಟಕ ಏಕೀಕರಣಕ್ಕೆ ಪಣವನ್ನು ತೊಡಬೇಕಾದ ಪ್ರಸಂಗ ಒದಗಿತು. ಅಂಥವರಲ್ಲಿ ಶ್ರೀದೊಡ್ಡಮೇಟಿ ಅಂದಾನಪ್ಪನವರು ಪ್ರಮುಖರಾಗಿದ್ದರು. ಸ್ವಾತಂತ್ರ್ಯ ಸೇನಾನಿಯಾಗಿ ರಾಷ್ಟ್ರ ಮಟ್ಟದಲ್ಲೇ ಹೋರಾಡಿದಂತೆ ಏಕೀಕರಣ ಚಳುವಳಿ ಪ್ರಮುಖ ಪಾತ್ರ ವಹಿಸಿಕೊಂಡರು.

ಶ್ರೀ ದೊಡ್ಡಮೇಟಿ ಅಂದಾನಪ್ಪನವರು ಮುಂಬೈ ಶಾಸನ ಸಭಾ ಸದಸ್ಯರಾಗಿ 'ಶಾಸಕ ಶಕ್ತಿ' ಪಡೆದಿಕೊಂಡು ಹರಿದು ಹಂಚಿಹೋದ ಕನ್ನಡ ನಾಡಿನ ಭಾಗಗಳನ್ನು ಒಂದೆಡೆತಂದು ನಿಲ್ಲಿಸುವಲ್ಲಿ ಕಂಕಣ ಕಟ್ಟಿಕೊಂಡು ನಿಂತರು. ಮುಂಬೈ ಅಸೆಂಬ್ಲಿಯ ಮೂಲಕ ಮಾತ್ರವಲ್ಲ ಶ್ರೀಸಾಮಾನ್ಯರ ಮೂಲಕವೂ ಈ ದೆಶೆಯಲ್ಲಿ ಜನಜಾಗೃತಿಯನ್ನುಂಟು ಮಾಡಿದರು. ಇವರ ಹೆಗಲ ಮೇಲೆ ಬಿದ್ದ ಜಮಖಂಡಿ ಸಂಸ್ಥಾನ ಪ್ರಜಾ ಪರಿಷತ್ತಿನ ಕಾರ್ಯಗಳಂತೂ ಇವರನ್ನು ಸುತ್ತುಬಳಸಿ ನಿಂತವು. ಸಂಸ್ಥಾನಗಳ ವಿಲೀನಕರಣವನ್ನು ಕೇಂದ್ರ ಮಂತ್ರಿ ಶ್ರೀ ವಲ್ಲಭಬಾಯಿ ಪಟೇಲರು ತಮ್ಮ ಕೈಗೆ ತೆಗೆದುಕೊಂಡು ಜಮಖಂಡಿ ಸಂಸ್ಥಾನದ ಮೂಲಕ ದೊಡ್ಡಮೇಟಿ ಅಂದಾನಪ್ಪನವರು ಏಕೀಕರಣಕ್ಕೆ ನಾಂದಿಯನ್ನು ಹಾಡಿದರು. ಅಂದಿನ ಮಂತ್ರಿಗಳಾಗಿದ್ದ ಶ್ರೀ ಬಿ.ಡಿ. ಜತ್ತಿಯವರು ತಮ್ಮ ನಿರ್ಣಯ ತೋರಿಸಿ ಈ ಪ್ರಕಾರ ಪತ್ರ ಬರೆದರು. ಪರಿಷತ್ತಿನ ಧ್ಯೇಯ ಧೋರಣೆ ಅನುಸರಿಸಿ ಇದುವರೆಗೆ ನಡೆದು ಬಂದಿದ್ದೇನೆ. ಇನ್ನು ಮೇಲೆ ಅದೇ ರೀತಿ ನಡೆಯುತ್ತೇನೆ. ಶ್ರೀಮಾನ್ ಸಾಬಡೆ ಶಿವಾಜಿರಾವ ಮತ್ತು ತಮ್ಮ ಸಲಹೆ ಸೂಚನೆಗಳನ್ನು ಕೇಳಿ ಮಾಡುತ್ತೇನೆ. ದಿ:12.4.1946 ರ ಪತ್ರದಲ್ಲಿ ತಿಳಿಸಿದರು.

1950 ರ ದಶಕದ ಪ್ರಾರಂಭದ ಭಾಗದಲ್ಲಂತೂ ಕನ್ನಡಿಗರ ತಾಳ್ಮೆಯ ಕಟ್ಟೆ ಒಡೆದು ಹೋಯಿತು. ನೋಡಿದಡೆಯೆಲ್ಲ ಚಳುವಳಿ ಹರತಾಳ, ಪ್ರತಿಭಟನೆಗಳು ನಡೆಯ ತೊಡಗಿದ್ದವು. ದೇಶದ ಇನ್ನಿತರ ಕಡೆಯಿಂದ ರಾಜ್ಯಗಳ ವಿಲೀನಕರಣದ ಬೇಡಿಕೆ ಬರತೊಡಗಿದವು. ಶ್ರೀ ದೊಡ್ಡಮೇಟಿಯವರು ಕನ್ನಡಕ್ಕೆ ಯಾವಾಗಲೂ ಅಗ್ರಪೂಜೆಸಲ್ಲಬೇಕೆಂದು ಜೀವನದ ಕೊನೆಯುಸಿರು ಇರುವವರೆಗೂ ಹೋರಾಡಿದರು.

ಐತಿಹಾಸಿಕ ಅಧಿವೇಶನವು ದಿ:21.12.1947 ರಂದು ಬನಹಟ್ಟಿಯಲ್ಲಿ ಜಮಖಂಡಿಯ ಪ್ರಜಾ ಪರಿಷತ್ತಿನ ಹನ್ನೆರಡನೆಯ ಅಧಿವೇಶನದ ಅಧ್ಯಕ್ಷತೆಯನ್ನು ಶ್ರೀ ದೊಡ್ಡಮೇಟಿ ಅಂದಾನಪ್ಪ ಎಂ.ಎಲ್.ಎ. ಅವರು ವಹಿಸಿದ್ದರು. ಠರಾವುಗಳನ್ನು ಕೆಳಗಿನಂತೆ ಕೈಗೊಂಡಿದರು.

1) ಭಾರತ ಒಕ್ಕೂಟದಲ್ಲಿ ವಿಲೀನಗೊಳ್ಳುವುದರ ಮೂಲಕ ಪ್ರಜೆಗಳ ಹಿತ ರಕ್ಷಿಸಿದ ಜಮಖಂಡಿಯ ರಾಜೇಸಾಹೇಬ ಶ್ರೀ ಪರಶುರಾಮ ಪಟವರ್ಧನ ಅವರೇ ಪ್ರಥಮರು ಎಂಬುದು ಗಮನಾರ್ಹ ಘಟನೆಯಾಗಿದೆ.

2) ಭಾರತ ಸರಕಾರದೊಡನೆ ವಿಲೀನಗೊಳ್ಳಲಿರುವ ಜಮಖಂಡಿ ಸಂಸ್ಥಾನದ ದೊರೆ ಹಾಗೂ ಶ್ರೀ ಅಂದಾನಪ್ಪ ದೊಡ್ಡಮೇಟಿ ಅವರು ತೋರಿದ ದೂರದೃಷ್ಟಿಯ ಮುಖಂಡತ್ವದ ಸ್ಫೂರ್ತಿಯು ತಮ್ಮ ಆಶೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಇನ್ನುಳಿದ ಚಿಕ್ಕ ಪುಟ್ಟ ಸಂಸ್ಥಾನಗಳ ಜನತೆಗೆ ನೂತನ ಚೈತನ್ಯವನ್ನು ಒದಗಿಸಲಿ.

3) ಮುಂಬೈ ಪ್ರಾಂತದಲ್ಲಿ ಜಮಖಂಡಿ ಸಂಸ್ಥಾನವನ್ನು ವಿಲೀನಗೊಳಿಸುವ ಪೂರ್ವಭಾವಿಯಾಗಿ ಶ್ರೀ ದೊಡ್ಡಮೇಟಿ ಅಂದಾನಪ್ಪ ಇವರ ಅಧ್ಯಕ್ಷತೆಯಲ್ಲಿ ಐದು ಜನರ ಸಮಾಲೋಚನಾ ಸಮಿತಿಯನ್ನು ನೇಮಿಸಲಾಯಿತಲ್ಲದೇ ಅಧ್ಯಕ್ಷರಿಗೆ ಈ ಗೊತ್ತುವಳಿಯನ್ನು ಕಾರ್ಯರೂಪಕ್ಕೆ ತರಲೂ ಅಧಿಕಾರವನ್ನು ಕೊಟ್ಟಿತು.

ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರು ಅಧ್ಯಕ್ಷರಾದ ಸಮಾಲೋಚನಾ ಸಮಿತಿಗೆ ಕೆ.ಪಿ.ಸಿ.ಸಿ. ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪ, ಜಮಖಂಡಿ ಶಾಸನ ಸಭೆಯ ಅಧ್ಯಕ್ಷ ಶ್ರೀ ವ್ಹಿ. ಎಸ್. ಫಡಕೆ, ಜಮಖಂಡಿ ರಾಜ್ಯದ ಗೃಹ ಮಂತ್ರಿ ಶ್ರೀ ಬಿ.ಡಿ. ಜತ್ತಿ, ಹಣಕಾಸಿನ ಮಂತ್ರಿ ಶ್ರೀ ಬಿ.ಜಿ. ಹೊರ್ತಿ ಇವರು ಸದಸ್ಯರಾಗಿದ್ದರು.

ಏಕೀಕರಣವು ಒಂದು ರಾಜಕೀಯ ಉನ್ಮಾದವಲ್ಲ ಅದು ಕನ್ನಡ ಜೀವದ 'ಜೀವನಸತ್ತೆ' ಅಲ್ಲಿಂದ ಕನ್ನಡ ಜೀವನದಲ್ಲಿ ನವೋದಯವಾಗಬೇಕು. ಕರ್ನಾಟಕ ಪ್ರಾಂತ ರಚನೆಗೆ ಅಹೋರಾತ್ರಿ ಹೋರಾಡುತ್ತಿದ್ದ ಕರ್ನಾಟಕದ ಕೆಲವು ಮುಖಂಡರು ರಾತ್ರೋರಾತ್ರಿ ದಿಲ್ಲಿ ಸಚಿವ ಗಾದಿಗೆ ಹೋದರು. ಆದರೆ ಈ ವಿಷಯದಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ಎಳ್ಳಷ್ಟು ಅಲುಗಾಡಲಿಲ್ಲ. ಅಂತೆಯೇ ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರು ಕರ್ನಾಟಕ ರಾಜ್ಯ ನಿರ್ಮಾಪಕರೊಲ್ಲೊಬ್ಬರಾದ ಶ್ರೀ ಎಸ್. ನಿಜಲಿಂಗಪ್ಪನವರನ್ನು ನಿಷ್ಕಾಮ ಬುದ್ಧಿಯಿಂದ ಪ್ರೀತಿಸಿದ್ದು ಕಂಡು ಬರುತ್ತದೆ. ಏಕೀಕರಣ ಪ್ರಶ್ನೆಯನ್ನು ಹಿಡಿದು ಜನಮತವನ್ನು ಪಡೆದುಕೊಂಡು ಮೂರನೆಯ ಸಲ ಮುಂಬೈ ಶಾಸನ ಸಭೆಗೆ ಆರಿಸಿ ಹೋದ ದೊಡ್ಡಮೇಟಿಯವರು ಭಾಷಾವಾರು ಪ್ರಾಂತ ರಚನೆ ಹಾಗೂ "ಗಡಿ ನಿರ್ಣಾಯಕ ಸಮಿತಿ ನೇಮಿಸುವ ಕುರಿತು ತಮ್ಮ ಖಾಸಗೀ ಗೊತ್ತುವಳಿಯನ್ನು ಶಾಸನ ಸಭೆಯಲ್ಲಿ ಮಂಡಿಸುವ ಸಲುವಾಗಿ ಮುಖ್ಯ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರ ಕಡೆಗೆ ಕಳಿಸಿದರು. ಕರ್ನಾಟಕ ಪ್ರಾಂತ ರಚನೆಯ ಸಲುವಾಗಿ ಕಳಿಸಿದ ಶ್ರೀ ತಂಬಾಕದ ಇವರ ಖಾಸಗಿ ಗೊತ್ತುವಳಿಗೆ ಕಳಿಸಿದ ಉತ್ತರವನ್ನೇ ಶ್ರೀ ಮುರಾರ್ಜಿ ದೇಸಾಯಿಯವರು ಮುಂಬೈ ಕಾಂಗ್ರೇಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿಯು ಮುಖಾಂತರ ಶ್ರೀ ದೊಡ್ಡಮೇಟಿಯವರಿಗೂ ಕಳಿಸಿದರು. 1937 ರಿಂದ ಈಚಿನ ವರೆಗೂ ಎರಡು ಕರ್ನಾಟಕ ಪ್ರಾಂತ ರಚನೆಯನ್ನು ಕುರಿತೇ ಗೊತ್ತುವಳಿಗಳು ಪಾಸಾಗುತ್ತ ಬಂದಿರುವುದರಿಂದ ಸರ್ಕಾರದ ಧೋರಣೆಯೂ ಬದಲಾವಣೆಯಾಗದಿದ್ದರಿಂದ ಗೊತ್ತುವಳಿಯನ್ನು ಮಂಡಿಸುವ ಅವಶ್ಯಕತೆ ಇಲ್ಲಾ ಎಂದು ಬರೆಯಲಾಗಿತ್ತು. ತಮ್ಮ ಅತೃಪ್ತಿಯನ್ನು ತೋರಿದ ಶ್ರೀ ದೊಡ್ಡಮೇಟಿಯವರು

ಕಾಂಗ್ರೇಸ್ ಶಾಸಕಾಂಗ ಪಕ್ಷದ ಧುರೀಣರಿಗೆ ಕಾಲದಿಂದಲೇ ಸುದೀರ್ಘವಾದ ಕಾಗದವನ್ನು ಬರೆದರು. ಹಿಂದೆ ಆದ ಗೊತ್ತುವಳಿಗಳ ಒಳಪದರುಗಳನ್ನು ಬಿಡಿಸಿದ್ದರು ಅವರು ಕಳಿಸಿದ ಗೊತ್ತುವಳಿಯು ಬೇರೆ ಸ್ವರೂಪದ್ದು ಇದ್ದು, ಕರ್ನಾಟಕ, ಮಹಾರಾಷ್ಟ್ರ ಗುಜರಾತ ಪ್ರಾಂತಗಳ ರಚನೆಯ ಸಲುವಾಗಿ ಕೂಡಲೇ ಗಡಿ ನಿರ್ಣಾಯಕ ಸಮಿತಿಯನ್ನು ರಚಿಸಲು ಭಾರತ ಸರಕಾರಕ್ಕೆ ಹಾಗು ಭಾರತ ಪ್ರಜಾ ಗಣತಂತ್ರದ ಅಧ್ಯಕ್ಷರಿಗೆ ಶಿಫಾರಸ್ಸು ಮಾಡಬೇಕೆನ್ನುವ ಆಶಯವನ್ನು ಹೊಂದಿದ್ದ ಶ್ರೀ ದೊಡ್ಡಮೇಟಿಯವರು ಪ್ರಾಮಾಣಿಕವಾಗಿ ಈಡೇರಿಸಿಕೊಳ್ಳಲು ಹೊರಟಿರುವ ನಮ್ಮ ಧ್ಯೇಯ ಧೋರಣೆಗಳಿಗೆ ತಣ್ಣೀರು ಎರಚುವ ಕಾರ್ಯ ತರವಲ್ಲ" ಎಂದು ಮುರಾರ್ಜಿಯವರಿಗೆ ಖಾರವಾಗಿ ಬರೆದರು.

## ಕರ್ನಾಟಕ ರಾಜ್ಯ ನಿರ್ಮಾಣ ಶಿಬಿರ

ಶ್ರೀ ದೊಡ್ಡಮೇಟಿ ಅಂದಾನಪ್ಪನವರು ಅನೇಕ ರಾಜಕೀಯ ಏರಿಳಿತಗಳಿಂದ ಮನನೊಂದರೂ ಮತ್ತೆ ಚೈತನ್ಯ ಶೀಲರಾಗಿ ಬರಬೇಕಾಗಿತ್ತು. ಕರ್ನಾಟಕ ಪ್ರಾಂತ ರಚನೆಯ ಮೇಲೆ ಅನೇಕ ನಿರಾಶೆಯ ಮೋಡಗಳು ಕಂಡರು ಶ್ರೀ ಅರವಿಂದರ ತತ್ವದಲ್ಲಿ ವಿಶ್ವಾಸ ವಿರುವ ಗೆಳೆಯರು ಒಂದಡೆ ಸೇರಿ ಚಿಂತನ ಮಾಡಿ ಮುಂದಿನ ಮಾರ್ಗ ಕಂಡುಕೊಳ್ಳುವುದೆಂದು ನವೆಂಬರ್ 24. 1952 ಶ್ರೀ ಅರವಿಂದರ ಸಿ[illegible] ದಿನದಂದು ನಿರ್ಣಯ ತೆಗೆದುಕೊಂಡರು. ಕರ್ನಾಟಕ ರಾಜ್ಯ ನಿರ್ಮಾಣ ಶಿಬಿರಕ್ಕೆ ತರಬೇತಿ ಪಡೆಯಲು ಬರುವವರು ಪ್ರತಿಜ್ಞಾ ಪತ್ರಕಕ್ಕೆ ಅಂಕಿತ ಹಾಕಬೇಕಿತ್ತು. ನಾಡಿನ ನಾನಾ ಮೂಲೆಗಳಿಂದ ಆಯ್ಕೆ ಮಾಡಿ ಇಪ್ಪತ್ತೊಂದು ಜನರನ್ನು ಆರಿಸಲಾಯಿತು. ಇಪ್ಪತ್ತೊಂದು [illegible]ನ ನಡೆದ ಈ ಶಿಬಿರದಲ್ಲಿ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿ ಅಂದರೆ ಕರ್ನಾಟಕದ ಇತಿಹಾಸ ಹಾಗೂ ಧಾರ್ಮಿಕ ಪರಂಪರೆ ಆರ್ಥಿಕ ಯೋಜನೆಗಳು ಇನ್ನಿತರ ವಿಷಯಗಳ ಬಗ್ಗೆ ಮಂಥನವಾಗುತ್ತಿತ್ತು. ಕಾರಣ ಪುರುಷ ದೊಡ್ಡಮೇಟಿ ಅಂದಾನಪ್ಪನವರಾಗಿದ್ದರು ಈ ಪುರುಷನ ಚಾಲಕ ಶಕ್ತಿಯಾಗಿ ತಂತ್ರಶಾಸ್ತ್ರ ನಿಪುಣಾ ಶಾಕ್ತ ಶ್ರೀ ಸತ್ಯಕಾಮರು ಆಶ್ರಮದ ಚಟುವಟಿಕೆಯಲ್ಲಿ ಪಾದರಸದಂತೆ ಓಡಾಡುತ್ತಿದ್ದರು.

ನಾಡಿನ ನಾನಾ ಮೂಲೆಗಳಿಂದ ಸಾಹಿತಿಗಳನ್ನು ಕಲಾವಿದರನ್ನು ಆರ್ಥಿಕ ಹಾಗೂ ಶಿಕ್ಷಣ ತಜ್ಞರನ್ನು ಆಧ್ಯಾತಿಕ ಹಿನ್ನೆಲೆಯುಳ್ಳ ಸಾತ್ವಿಕ ರಾಜಕಾರಣಿಗಳನ್ನು ಆಹ್ವಾನಿಸಿಕೊಂಡಿದ್ದರು. 11ನೇ ಜನವರಿ 1953 ರಂದು ಜಕ್ಕಲಿಯ ಶ್ರೀ ಅನ್ನದಾನೇಶ್ವರಮಠದ ಪ್ರಶಾಂತ ವಾತಾವರಣದಲ್ಲಿ ಶಿಬಿರ ಜರುಗಿತ್ತು. ಕರ್ನಾಟಕದ ವೈಭವವನ್ನೇ ಜನರ ಕಣ್ಣೆದುರಿಗೆ ಕಟ್ಟಿದ ಕನ್ನಡದ ಕುಲಪುರೋಹಿತ ಆಲೂರ ವೆಂಕಟರಾಯರು 'ಕರ್ನಾಟಕ ರಾಜ್ಯ' ನಿರ್ಮಾಣ ಕರ್ನಾಟಕತ್ವದ ಅಂಶ ಮಾತ್ರ ಸುಮಾರು 50 ವರ್ಷಗಳ ಹಿಂದಿನ ಈ ಕಲ್ಪನೆಯು ರಾಷ್ಟ್ರದಲ್ಲಿ ಉದೆಯವಾಗಿ ಬೇರೂರಿದೆ, ಕರ್ನಾಟಕ ಏಕೀಕರಣ ಬೇಡಿಕೆಯ ಭೂಮಿಕೆಗೆ ಒಂದು ಹದವನ್ನು ತಂದುಕೊಟ್ಟರು.

ಕರ್ನಾಟಕ ರಾಜ್ಯ ನಿರ್ಮಾಣ ಶಿಬಿರ ಪ್ರಾರಂಭದ ದಿನದಂದು ನಡೆದ ಈ ಘಟನೆಯು ಕರ್ನಾಟಕ ಶಕ್ತಿಯ ಉಪಾಸನೆಯ ಫಲವೆಂದು ನಂಬಲಾಗಿದೆ. ಮುಂದೆ ಶ್ರೀ ಕೆಂಗಲ್ ಹನುಮಂತಯ್ಯನವರು ಉತ್ತರ ಕರ್ನಾಟಕ ಪ್ರವಾಸ ಕೈಕೊಂಡಾಗ ಶ್ರೀ ದೊಡ್ಡಮೇಟಿಯವರು ಶ್ರೀ ಭುವನೇಶ್ವರಿಯ ಪೂಜೆಯನ್ನು ಮಾಡಿಸಿ ಕರ್ನಾಟಕ ನಿರ್ಮಾಣ ಪ್ರಶ್ನೆಯನ್ನು ಶ್ರೀ ಕೆಂಗಲ್ ರವರ ಉಡಿಯಲ್ಲಿ ಹಣ್ಣು ಕಾಯಿ ತುಂಬಿ ಕೃತಜ್ಞತೆ ಸಲ್ಲಿಸಿದರು.

ಉತ್ತರ ಕರ್ನಾಟಕದ ತುಂಬೆಲ್ಲಾ ಚೈತನ್ಯ ಹರಿದು ಬಂದು ಜನತೆಯನ್ನು ಎಚ್ಚರಿಸಿತು. ಶ್ರೀ ಅದರಗುಂಚಿ ಶಂಕರಗೌಡ್ರ ಉಪವಾಸದಿಂದ ಪರಿಸ್ಥಿತಿಯು ವಿಧ್ವಂಸದ ರೂಪವನ್ನು ತಳೆದರು ಅದೇ ಶಕ್ತಿಯ ಇನ್ನೊಂದು ಮುಖವಾಗಿ ತನ್ನ ಕೆನ್ನಾಲಿಗೆಯನ್ನು ಚಾಚಿ ನಿಂತು ಕೇಂದ್ರ ಸರ್ಕಾರದ ಕಣ್ಣು ತೆರೆಯಿಸಿತು.

## ಸತ್ಯಾಶ್ರಯ ಸಮಾಜ

ಎರಡು ವರ್ಷ ಕಳೆದರೂ ಏಕೀಕರಣ ಮೌನ ಆವರಿಸಿತು. ಶಾಸನ ಸಭೆಯ ಸದಸ್ಯರಾಗಿ ಮುಂದುವರೆದು ಜನರಿಗೆ ಮೋಸ ಮಾಡಬಾರದೆಂಬ ವಿಚಾರದಿಂದ ತಮ್ಮ ಶಾಸನ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದರು. ಆಗಿನ ಮುಂಬೈ ಮುಖ್ಯಮಂತ್ರಿ ಶ್ರೀ ಮುರಾರ್ಜಿ ದೇಸಾಯಿ ಹಾಗೂ ಶ್ರೀ ಎಸ್. ನಿಜಲಿಂಗಪ್ಪ ಅವರು ಇವರ ರಾಜೀನಾಮೆ ವಾಪಸ್ಸು ಪಡೆಯಲು ತಿಳಿಸಿದರೂ ಕೂಡಾ ಪಟ್ಟು ಹಿಡಿದು ಆಗಸ್ಟ 4 .1954 ರಂದು ಶಾಸನ ಸಭೆಯ ಸ್ಪೀಕರರಿಗೆ ಸಲ್ಲಿಸಿದರು. ನಂತರ ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರು ಸತ್ಯಾಶ್ರಯ ಸಮಾಜ ರಚನೆಯನ್ನು ರಚಿಸಲು ಪ್ರಕಟಣೆಯನ್ನು ಕೊಟ್ಟರು. ಅದು ಅವರ ಮನಕ್ಕೆ ನಿಲುಕಾದಾಯಿತು. ಸಾಮಾನ್ಯರ ಮನಸ್ಸಿಗೆ ನಿಲುಕದ ಮಾತುಗಳು ಸತ್ಯಾಶ್ರಯ ಸಮಾಜ ಒಳಗೊಂಡಿತ್ತು. ಅತೀ ಮಾನಸ ಲೋಕದಲ್ಲಿಯ ಕಲ್ಪನೆಗಳು ಅವು ಅನ್ನಮಯ ಕೋಶದ ಪರಿಶುದ್ಧತೆಗಾಗಿ ನಿರ್ಮಲಭಾವನೆ, ಮನೋಮಯ ಕೋಶದ ವಿಕಾಸಕ್ಕಾಗಿ ವಿಶ್ವ ಬಾಂಧವ್ಯದ ಪ್ರಜ್ಞೆ, ಮನುಕುಲದ ಅನಿವಾರ್ಯ ಪ್ರಗತಿಗಾಗಿ "ಸತ್ಯಾಶ್ರಯ ಸಮಾಜ ರಚನೆ" ಅವಶ್ಯ ಈ ವಿಕಾಸ ಕ್ರಮದ ಸಾಧನೆಯಲ್ಲಿ ಬರುವ ಎಡರು ತೊಡರುಗಳನ್ನು ಜಯಿಸಲು ನೈತಿಕ ಪ್ರತಿಷ್ಠಾಪನೆಯ ಪ್ರಾಥಮಿಕ ಅವಸ್ಥೆಯನ್ನು ಪಡೆಯ ಬೇಕಾಗಿವೆ. ಇವೆ ಅಲ್ಲಿಯ ವಿಚಾರಗಳಾಗಿದ್ದವು.

## ರಾಜ್ಯಕ್ಕೆ ಕರ್ನಾಟಕ ನಾಮಕರಣ ಕಥೆ

ಕ್ರಿ. ಶ.1950 ದಶಕದ ಪ್ರಾರಂಭ ಭಾಗದಲ್ಲಂತೂ ಕನ್ನಡಿಗರ ತಾಳ್ಮೆಯ ಕಟ್ಟೆ ಒಡೆದು ಹೋಯಿತು. ದೇಶದ ಇನ್ನಿತರ ಕಡೆಗಳಿಂದಲೂ ರಾಜ್ಯಗಳ ಪುನರ್ ವಿಂಗಡನೆಗಾಗಿ ಬೇಡಿಕೆಗಳು ಬರತೊಡಗಿದವು. ಫಜಲ್ ಅಲಿ ಆಯೋಗವೇನೋ ಏಕೀಕೃತ ನವ ಮೈಸೂರು

ರಾಜ್ಯದ ರಚನೆಯ ಬೇಡಿಕೆಯನ್ನು ಸಮಂಜಸವೆಂದು ಪರಿಗಣಿಸಿ ಶಿಫಾರಸ್ಸು ಮಾಡಿ ವರದಿ ಸಲ್ಲಿಸಿತು. ಅಂದಿನ ಪ್ರಧಾನಿ ಜವಾಹರಲಾಲ ನೆಹರೂ ಅವರು ರಾಜ್ಯ ರಚನೆಯ ಪರವಾಗಿರಲಿಲ್ಲ. ಅದರಂತೆ ಆಗಿನ ಗೃಹ ಮಂತ್ರಿ ಸರ್ದಾರ ವಲ್ಲಭಭಾಯಿ ಪಟೇಲರು ಈ ಕುರಿತು ತಟಸ್ಥ ಧೋರಣೆ ತಾಳಿದ್ದರು. ಆದರೆ ಕರ್ನಾಟಕದ ಮುಖಂಡರು ಹಕ್ಕೊತ್ತಾಯಕ್ಕೆ ಕೇಂದ್ರ ಕೊನೆಗೂ ಮಣಿಯಬೇಕಾಯಿತು. ಕನ್ನಡಿಗರ ಬಹುದಿನಗಳ ಆಸೆ 1956 ನವೆಂಬರ್ 1 ರಂದು ಈಡೇರಿತು 'ನವ ಮೈಸೂರು' ರಾಜ್ಯ ಉದಯವಾಯಿತು. ದೊಡ್ಡಮೇಟಿ ಅಂದಾನಪ್ಪನವರು ಏಕೀಕರಣದ ರೂವಾರಿಗಳೆನಿಸಿದ್ದರು.

ಒಂದು ಗೂಡಿದ ಕನ್ನಡನಾಡು ಕರ್ನಾಟಕ ವಾಗದೇ ಮೈಸೂರು ಆಗಿಯೇ ಉಳಿಯಿತು. ಆದರೆ ಕರ್ನಾಟಕವಾಗಲಿಲ್ಲ ಎನ್ನುವ ಅಳಕು ಪ್ರಜ್ಞಾವಂತ ಕನ್ನಡಿಗರಿಗೆ ನೋವಾಯಿತು. ನಮ್ಮ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಕರೆಯಬೇಕೆನ್ನುವ ಗೊತ್ತುವಳಿಯನ್ನು ಶ್ರೀ ದೊಡ್ಡಮೇಟಿ ಅಂದಾನಪ್ಪನವರು ಶಾಸಕರಾಗಿ ಸೆಪ್ಟೆಂಬರ್ 1957 ರಂದು ವಿಧಾನ ಸಭೆಯಲ್ಲಿ ಪ್ರ-ಪ್ರಥಮವಾಗಿ ತಂದರು. ' ಕರ್ನಾಟಕ ' ನಾಮಕರಣ ಹೋರಾಟಕ್ಕೆ ನಾಂದಿ ಹಾಕಿದರು. ಕರ್ನಾಟಕ ಹೆಸರಿಗೆ ಹತ್ತಿಕೊಂಡ ಇತಿಹಾಸ ಮೂಲವನ್ನು ಕೆದಕಿ 'ಕರ್ನಾಟಕ ' ಎಂದೆ ಕರೆಯಬೇಕು ಎಂಬ ಮನವಿಯನ್ನು ಪುನಃ 1966 ಜುಲೈ ನಾಮಕರಣಗೊತ್ತುವಳಿ ಮಂಡಿಸಿದರು. ಅದರ ಮಧ್ಯ ಆತಂಕ ಅಡ್ಡಿಗಳ ಸುರಿಮಳೆ ಸುರಿಯಿತು. ಕರ್ನಾಟಕ ಬಯಕೆ ಅವರು ಅಶರೀರರಾದ ಮೇಲೆ ಎಲ್ಲಾ ಶಾಸಕ , ಮಂತ್ರಿ ಮಹೋದಯರ ಬಸಿರು ಹೊಕ್ಕು ಗಡಬಡಿಸಿರಬೇಕು. ನವೆಂಬರ್ 1,1973 ರಂದು ಶ್ರೀ ಡಿ. ದೇವರಾಜ ಅರಸುರವರ ಮುಖ್ಯ ಮಂತ್ರಿತ್ವದಲ್ಲಿ ಕರ್ನಾಟಕವೆಂಬ ನಾಮಕರಣ ಹೊಂದಿತು.

## ಸಣ್ಣ ನೀರಾವರಿ ರಾಜ್ಯ ಸಚಿವ

ಶ್ರೀ ವೀರೇಂದ್ರ ಪಾಟೀಲರವರು ಮುಖ್ಯಮಂತ್ರಿಗಳಾದ ಮೇಲೆ ಸಂಪುಟ ಪುನರ್ ರಚನೆಯಾಯಿತು. ರಾಜಕೀಯ ಕ್ಷೇತ್ರದಲ್ಲಿ ತಾವು ತೋರಿದ ನಿಷ್ಠೆಗಾಗಿ ಯಾವ ಬೇಡಿಕೆಯನ್ನು ಇಡಲಿಲ್ಲ. ಅನೇಕರು ನಾನಾ ತರಹದ ಕಸರತ್ತುಗಳಿಂದ ತಮಗಿಷ್ಟವಾದ ಖಾತೆಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಸ್ವಾತಂತ್ರ್ಯ ಯೋಧರಿಗೆ "ಪೆನ್‌ಶನ್" ಮಂಜೂರು ಮಾಡುವುದೂ ಇವರ ಕಡೆಗೆ ಇತ್ತು. ಮಂತ್ರಿಯಾಗಿ ತಾನು ಒಳ್ಳೆಯವನಾಗಿ ಉಳಿಯಬಲ್ಲೆನೇ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದಕ್ಕೆ ಮಂತ್ರಿಯಾಗಿದ್ದರೆ ಹೊರತು ಅಧಿಕಾರದ ದರ್ಪ ತೋರಿಸುವುದಕ್ಕಲ್ಲ. ಆಗ ಕನ್ನಡದಲ್ಲಿಯೇ ಟಿಪ್ಪಣಿಗಳನ್ನು ಬರೆದ ಕೀರ್ತಿ ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರಿಗೆ ಅಲ್ಲಬೇಕು. ಸಚಿವರಾಗುವ ಮುನ್ನ ಕನ್ನಡದಲ್ಲಿ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು. ಅಧಿಕಾರಿಗಳಿಗೆ ಹೇಳುತ್ತಿದ್ದರು ಕೆಲಸ ಒಪ್ಪತ್ತು ಕಡಿಮೆ ಮಾಡಿದರೂ ಚಿಂತೆ ಇಲ್ಲ ಆದರೆ ಲಂಚವನ್ನು ತಿನ್ನಬೇಡಿ ಏನಾದರೂ ಲಂಚವನ್ನು ತಿಂದಿರುವೆನೆಂದು

ಅನಿಸಿದರೆ ಮಧ್ಯ ರಾತ್ರಿಯೇ ಇರಲಿ ನನ್ನನ್ನು ಎಳೆದು ಬೀದಿಗೆ ತಂದು ಗುಂಡು ಇಕ್ಕಿ ಸಾಯಿಸಿರಿ ಎಂದು ತಮ್ಮ ಭಾಷಣದಲ್ಲಿ ಖಾರವಾಗಿ ಮಾತನಾಡುತ್ತಿದ್ದರು.

ಎಷ್ಟೋ ನೀರಾವರಿ ಕೆಲಸಗಳು ಮಂಜೂರಿಗಾಗಿ ಬಂದು ಸುಖವಾಗಿ ನಿದ್ರಿಸುತ್ತಿದ್ದವು. ಬಹು ದಿನಗಳಿಂದ ಉಳಿದುಕೊಂಡಿದ್ದ ಅನೇಕ ಸಮಸ್ಯೆಯ ಫೈಲುಗಳ ಧೂಳು ಝಾಡಿಸುವ ಪ್ರಾರಂಭ ಮಾಡಿದರು. ಸಣ್ಣ ನೀರಾವರಿ ಸಚಿವರಾಗಿ ಇವರು ಮಾಡಿದ ಕಾರ್ಯಗಳು ಪವಾಡ ಸದೃಶ್ಯವಾದವು. ಯಾರಿಗೂ ಬೇಡವಾದ ಇಲಾಖೆಯ ಮಂತ್ರಿ ಎಲ್ಲರಿಗೂ ಬೇಕಾಗುವಂತೆ ಕಾರ್ಯಗೈದು ಯಶಸ್ವಿಯಾದರು. ಇಲ್ಲಿ ಕೆಲವನ್ನು ಮಾತ್ರ ನೋಡಬಹುದು.

ಬೆಂಗಳೂರಿನ ಪ್ರಸಿದ್ಧ ಹೆಂಡದ ತಯಾರಕರು ದಸರೆ ಹಾಗೂ ದೀಪಾವಳಿ ಕಾಣಿಕೆಗಳನ್ನು ಸಚಿವರಿದ್ದವರಿಗೆ ಕೊಡುವುದು ಒಂದು ವಾಡಿಕೆ. ಅಂತೆಯೇ ಒಬ್ಬ ಬಂದ ಸಚಿವರ ಮುಂದೆ ತಾನು ತಂದ ದೊಡ್ಡದಾದ ಪೆಟ್ಟಿಗೆಯನ್ನು ಇಟ್ಟು ಹೋದನು. ಪೇಡೆ ಇರಬಹುದು ಎಂದು ತಿಳಿಯುಕೊಂಡರು. ಕಾರ್ಯದರ್ಶಿ ಬಿಚ್ಚಿದ ಒಳಗೆ ರೇಶಿಮೆಯ ಸೀರೆ, ಕುಬಸದ ಖಣ ಇತ್ತು. ಯಾರು ಕಳಿಸಿದ್ದರೋ ಅವರಿಗೆ ವಾಪಸು ಕಳಿಸುವಂತೆ ಸೂಚಿಸಿ ಅವರಿಂದ ನನಗೆ ಫೋನು ಮಾಡಿಸು ಎಂದು ಹೇಳಿದರು. ಅವರಿಗೆ ಸೀರೆ ವಾಪಸ್ಸು ಮುಟ್ಟಿದ ಬಗ್ಗೆ ಖಚಿತ ಮಾಡಿಕೊಂಡರು.

ಮತ್ತೊಂದು ಉದಾಹರಣೆಯೆಂದರೆ ಆಸ್ಪತ್ರೆಯಲ್ಲಿ ಶ್ರೀ ದೊಡ್ಡಮೇಟಿಯವರು ಮಲಗಿದ್ದರು. ಅಲ್ಲಿಯೇ ಆಪ್ತ ಕಾರ್ಯದರ್ಶಿ ಕಾಗದಗಳನ್ನು ತೆಗೆದುಕೊಂಡು ಬಂದು ಸಹಿ ಮಾಡಿಸಿಕೊಳ್ಳುತ್ತ ಪುಣೆಯಿಂದ ಅಳಿಯರು ಬಂದಿದ್ದಾರೆ ಜೊತೆಗೆ ಅಮ್ಮನವರೂ ಬಂದಿದ್ದಾರೆ ಎಂದ ಸಂಪ್ರೀತಿಗೊಳಿಸಲು ಒಂದು ಮಾತು ಸೇರಿಸಿದ ತಮಗೆ ಕುದುರೆ ಜೂಜಿನ ಪ್ರವೇಶದ ಕಾಂಪ್ಲಿಮೆಂಟರಿ ಪಾಸುಗಳು ಬಂದಿದ್ದವು "ಏನು ಮಾಡಿದಿರಿ?" "ಅಳಿಯಂದಿರಿಗೆ ಕೊಟ್ಟೆ" ಒಳ್ಳೆಯ ಹಿಗ್ಗಿನಲ್ಲಿದ್ದ ಆಪ್ತ ಕಾರ್ಯದರ್ಶಿಯ ಮುಖಕ್ಕೆ ಬಡಿದಂತೆ ಉತ್ತರ ಬಂತು ಸಚಿವರಿಂದ "ಕೆಂಚನಿರುವ ನಾನು ಎಂದಾದರೂ ಕುದುರೆ ಜೂಜು ನೋಡಲು ಹೋಗುವನೇ? ಈಗ ನಾನು ನೋಡಲು ಹೋದಂತಾಯಿತಲ್ಲವೆ? ಮೊದಲು ಪಾಸುಗಳನ್ನು ಹರಿದು ಹಾಕು" ಎಂದು ಆಜ್ಞಾಪಿಸಿದರು. ಮಂತ್ರಿ ಪದವಿ ಜನರ ಸುಖಕ್ಕೆ ಬಂತು. ಅವರ ಸುಖಕ್ಕೆ ಬರಲಿಲ್ಲ ಪ್ರತಿ ದಿನ ಕಾಗದಗಳಿಗೆ ಉತ್ತರ ಕೊಡುವ ಪದ್ಧತಿ ಇನ್ನುಳಿದವರಿಗೆ ಮಾದರಿಯಾಗಿತ್ತೆಂದು ಹೇಳಬಹುದು. ಪಾಲಿಗೆ ಬಂದ ಇಲಾಖೆಯನ್ನು ಸಮರ್ಥವಾಗಿ ನಿರ್ವಹಿಸಿದರು.

ಈ ಪ್ರಕಾರ ತಮ್ಮ ಜೀವನದ ಪರ್ಯಂತ ಶ್ರೇಷ್ಠ ಮೌಲ್ಯಗಳನ್ನು ಅನುಸರಿಸಿಕೊಂಡು ಬಂದ ಶ್ರೀ ದೊಡ್ಡಮೇಟಿ ಅಂದಾನಪ್ಪ ಅವರು ಭ್ರಷ್ಟಾಚಾರ ಕೀಳು ಮಟ್ಟದ ರಾಜಕೀಯ, ಅಗ್ಗದ ಪ್ರಚಾರ ತಂತ್ರ, ಅನಾರೋಗ್ಯಕರ ಪೈಪೋಟಿಗಳಿಂದ ಬಹು ದೂರವಿದ್ದರು. ಸಂಪೂರ್ಣ

ಖಾದಿಧಾರಿಗಳಾಗಿ ಅತ್ಯಂತ ಸಾದಾ ಸರಳ ಜೀವನ ನಡೆಸಿದರು. ಬಿಡುವಿನ ವೇಳೆಯಲ್ಲಿ ಚರಖಾದಿಂದ ನೂಲು ತೆಗೆಯುತ್ತಿದ್ದರು. ತಮ್ಮ ಬಗ್ಗೆ ತಮ್ಮ ಕುಟುಂಬದ ಬಗ್ಗೆ ಎಂದೂ ಚಿಂತಿಸಿದವರಲ್ಲ. ದೊಡ್ಡಮೇಟಿಯವರು ಸದಾ ಸಮಾಜ ಕಾರ್ಯದ ಚಿಂತನೆ ಮಾಡಿದವರು. ಅವರ ಬದ್ದತೆ ಪ್ರಜಾತಂತ್ರಕ್ಕೆ ಹಾಗೂ ಗಾಂಧೀತತ್ವಕ್ಕೆ ಆಗಿತ್ತು. ಯಾಕೆಂದರೆ ಅವರು ಸ್ವತಃ ಹೊಸ ಇತಿಹಾಸ ನಿರ್ಮಿಸಿದವರು. ಅಂತೆಯೇ ಅವರೇ ಇತಿಹಾಸವಾದವರು. ಪರಿಶುದ್ಧ ಚಾರಿತ್ರ್ಯದ ದ್ಯೋತಕ ಅವರು.

ಶ್ರೀ ದೊಡ್ಡಮೇಟಿ ಅಂದಾನಪ್ಪನವರ ಜೀವನದ ಬಹುಭಾಗ ಸಾರ್ವಜನಿಕ ಸೇವೆಗಾಗಿಯೇ ಕಳೆದು ಹೋಯಿತು. ಒಂದರ್ಥದಲ್ಲಿ ಖಾಸಗಿ ಜೀವನಕ್ಕೆ ಅವಕಾಶವಿರಲಿಲ್ಲ. ಇವರಿಗೆ ಸಾರ್ವಜನಿಕ ಸೇವೆಯೇ ಕುಟುಂಬದ ಸೇವೆ. ಶ್ರೀ ದೊಡ್ಡಮೇಟಿಯವರು ತಮ್ಮ ಮನೆಗೆ ಹಾಗೂ ತಮ್ಮ ಬಂಧುಗಳಿಗೆ ಮಾತ್ರ ಮೀಸಲಾಗಿರಲಿಲ್ಲ. ಕನ್ನಡ ನಾಡಿನ ತುಂಬ ಶ್ರೀಯುತರ ಬಂಧುಗಳು ಹಿತೈಷಿಗಳು ತುಂಬಿಕೊಂಡಿದ್ದರು.

ಶ್ರೀ ದೊಡ್ಡಮೇಟಿಯವರು ಕೈಕೊಂಡ ಪ್ರಗತಿಪರ ಕಾರ್ಯಗಳು ಸೀಮಾತೀತವಾದವುಗಳು. ಯಾವ ಪದವಿ ಇಲ್ಲದೇ ಹೋದರೂ ಪ್ರಾಮಾಣಿಕ ಸೇವಕನಾಗಿರುವೆನೆಂಬ ಅವರ ಮಾತು ಹೃದಯ ಸ್ಪರ್ಶಿಯಾಗಿದೆ. ಜನಸೇವೆಗೆ ತಮ್ಮ ಜೀವನವನ್ನು ಗಂಧದ ಕೊರಡಿನಂತೆ ತೇಯ್ದ ಪುಣ್ಯಾತ್ಮರೆನ್ನಬಹುದು.

## ಕನ್ನಡಾಭಿಮಾನಿ ಕಂದ ದೊಡ್ಡಮೇಟಿ

ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಸೆಪ್ಟೆಂಬರ್ 1957 ರಲ್ಲಿ ಹೇಳಿದ ಭವಿಷ್ಯವಾಣಿ ಸತ್ಯವಾಯಿತು. ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರು ಇಂದಿಲ್ಲ ನಾಳೆ ಆಗುತ್ತದೆ ಯಾವ ಸಂಶಯವೂ ಇಲ್ಲ. ಸಂಕಲ್ಪ ಶಕ್ತಿ ತನ್ನ ಕಾರ್ಯಮಾಡದೇ ಬಿಡದು ಇದು ಅವರ ಅಚಲವಾದ ವಾದವಾಗಿತ್ತು.

ಕನ್ನಡದ ನಾಡು ನುಡಿಗಾಗಿ ಶ್ರೀ ದೊಡ್ಡಮೇಟಿ ಅಂದಾನಪ್ಪನವರು ಸಲ್ಲಿಸಿದ ಬಹುಮುಖ ಸೇವೆ ಅತ್ಯಂತ ಸ್ಮರಣೀಯವಾದುದು. ಅಂತೆಯೇ ನಾಡಿಗಾಗಿ ದುಡಿದವರ ದುಡಿದು ಮಡಿದವರ ಬಗೆಗೆ ಅಪಾರ ಗೌರವನ್ನಿಟ್ಟುಕೊಂಡಿದ್ದರು. ಶ್ರೀ ಮಾತಾಜಿಯವರ ಆಶೀರ್ವಾದದೊಂದಿಗೆ 'ಕಲ್ಕಿ' ವಾರ ಪತ್ರಿಕೆಯು ಜನ್ಮ ತಾಳಿತು. ಸಂಪಾದಕ ಬಳಗದಲ್ಲಿ ಶ್ರೀ ನಾರಾಯಣ ಸಂಗಮ, ಶ್ರೀ ಅಪರಂಜಿ, ಶ್ರೀ ಸತ್ಯಕಾಮ ಇನ್ನೂ ಕೆಲವರು ಇದ್ದರು. ತಮ್ಮ ತೃತೀಯ ಪತ್ನಿ ರತ್ನಾಳಿಗೆ ಜೈಲಿನಿಂದ ಬರೆದ ಅಧ್ಯಾತ್ಮಿಕ ಸಾಧನೆಯಲ್ಲಿ ಪ್ರಥಮ ಪಾಠಗಳು ಎಂಬ ಮಾಲಿಕೆ ಪ್ರಕಟಗೊಂಡಿತು. ಕನ್ನಡ ಚಳುವಳಿಯ ಖ್ಯಾತ ಕಾದಂಬರಿಕಾರರಾದ ಅ.ನ.ಕೃಷ್ಣರಾಯರು ಇವರ ತೀರ ಹತ್ತಿರದವರಾಗಿದ್ದರು. ಪತ್ರಿಕೋದ್ಯಮಿ ಡಾ: ಪಾಟೀಲ ಪುಟ್ಟಪ್ಪನವರು ಅತ್ಯಂತ ಆತ್ಮೀಯರಾಗಿದ್ದರು. ಇಷ್ಟೆ ಅಲ್ಲ 'ಕರ್ನಾಟಕ ಎರಡು' ಆಗಬೇಕೆನ್ನುವ

ಅಪಸ್ವರ ವಿಧಾನಸಭೆಯಲ್ಲಿ ಬಂದಾಗ ಶ್ರೀ ದೊಡ್ಡಮೇಟಿಯವರು ನನ್ನ ದೇಹವನ್ನು ಸೀಳಿ ಎರಡು ಮಾಡಲು ಕೊಡುವೆನು. ಆದರೆ ಕರ್ನಾಟಕವನ್ನು ಎರಡು ಮಾಡಲು ಅವಕಾಶ ಕೊಡಲಾರೆ ಎಂದು ಛಲದಿಂದ ಪಟ್ಟು ಹಿಡಿದರು.

ವಿಧಾನ ಸಭೆಯ ಹಂಗಾಮಿ ಅಧ್ಯಕ್ಷರಾಗಿ ನೂತನವಾಗಿ ಆರಿಸಿ ಬಂದ ಸದಸ್ಯರ ಪ್ರತಿಜ್ಞಾ ವಿಧಿ ಸಮಾರಂಭವನ್ನು ಸಂಪೂರ್ಣವಾಗಿ ಕನ್ನಡ ನುಡಿಯಲ್ಲಿಯೇ ನಡೆಸಿಕೊಟ್ಟ ಕೀರ್ತಿಗೆ ಭಾಜನರಾದರು. ಅಂದು ವಿಧಾನಸಭೆ ಸಂಪೂರ್ಣ ಕನ್ನಡಮಯವಾಗಿ ಕಂಪನ್ನು ಬೀರುತ್ತಿತ್ತು. ಎಲ್ಲ ಹಂತದಲ್ಲಿಯೂ ಕನ್ನಡ ನಾಡು ನುಡಿಗೆ ದುಡಿದು ಹಣ್ಣಾದ ಪುಣ್ಯಾತ್ಮರು. ಇವರ ಕಾರ್ಯ ಅಭಿನಂದನೀಯ.

## ಅಂತಿಮ ಯಾತ್ರೆ

ಕನ್ನಡ ನಾಡಿನಲ್ಲಿ ರಾಜಕೀಯ ಕ್ಷೇತ್ರದಲ್ಲಿ ತಮ್ಮದ್ದೇ ಆದ ಛಾಪನ್ನು ಒತ್ತಿದ ಜೀವಕ್ಕೆ ಕೊನೆ ಕೊನೆಗೆ ಚಿಂತನೆಯ ಚಿಂತೆ ಆವರಿಸಿತು. ಶ್ರೀ ದೊಡ್ಡಮೇಟಿಯವರು ಮರಣದ ಹಾಸಿಗೆಯ ಮೇಲೆ ಮಹಾಭಾರತದ ಭೀಷ್ಮನಂತೆ ಜೀವ ತೇಯತೊಡಗಿತು. ಕ್ರಮೇಣ ಆರೋಗ್ಯ ಕುಸಿಯಿತು. ಕನ್ನಡ ದೀಪ ತನ್ನ ಪ್ರಭೆಯನ್ನು ದಿನ ದಿನವೂ ಕಳೆದುಕೊಳ್ಳತೊಡಗಿತು. 21.2.1972 ರಲ್ಲಿ ಪ್ರಾಣ ಪಕ್ಷಿ ಆತ್ಮದ ಗೂಡಿನಿಂದ ಹಾರಿ ಹೋಯಿತು.

ಶ್ರೀ ದೊಡ್ಡಮೇಟಿಯವರ ನಿಧನ ವಾರ್ತೆಯನ್ನು ಮನೆ ಮಂದಿಗೆಲ್ಲ ಕಳಿಸಿದರು. ಮನೆ ಮಕ್ಕಳು ಎಂಬ ಖಾಸಗಿ ಜೀವನದ ಅಧ್ಯಾಯ ದೊಡ್ಡಮೇಟಿಯವರ ಜೀವನದಲ್ಲಿ ಎಂದೋ ಮುಗಿದಿತ್ತು. ಈ ವಾರ್ತೆ ಆಕಾಶವಾಣಿ ಮತ್ತು ದಿನ ಪತ್ರಿಕೆಯಲ್ಲಿ ನಾಡತುಂಬ ಹಬ್ಬಿತು. ನಾಡಿನ ಜನತೆ ಶೋಕ ಭರಿತರಾದರು. ನಾಡಿನ ಮೂಲೆ ಮೂಲೆಗಳಿಂದ ಅಪಾರ ಅಭಿಮಾನಿಗಳು ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡು ಕಂಬನಿ ಮಿಡಿದರು. ಕನ್ನಡದ ಕಂಠಾಭರಣ ಕನ್ನಡಮ್ಮನ ಕೊರಳಿಂದ ಕಳಚಿ ಬಿದ್ದಿತು. ಹುಬ್ಬಳಿಯ ವೈದ್ಯರ ಹಣೆಬರಹದಲ್ಲಿ ಕನ್ನಡ ದೀಪ ಆರುವುದನ್ನು ತಡೆಯುವಾಗಲಿಲ್ಲ. ಅವರ ಭೌತಿಕ ದೇಹವು ಪಂಚ ಮಹಾಭೂತದಲ್ಲಿ ವಿಲೀನವಾಯಿತು. ಶ್ರೀ ಅಂದಾನಪ್ಪ ದೊಡ್ಡಮೇಟಿ ಅವರು ಲಿಂಗೈಕ್ಯರಾದರು.

## ಕರ್ನಾಟಕ ನಾಮಕರಣ

ದೊಡ್ಡಮೇಟಿ ಅಂದಾನಪ್ಪ ಅವರು ವಿಧಾನಸಭಾ ಸದಸ್ಯರೆಲ್ಲರೂ 'ಕರ್ನಾಟಕ' ಎಂಬ ಹೆಸರನ್ನೇ ಕುರಿತು ಚರ್ಚಿಸಲೆಂದೆ ಒಂದು ವಿಸ್ತೃತರೂಪದ ಕೃತಿಯೊಂದನ್ನು ಸಿದ್ದಪಡಿಸಿ ಹಂಚಿದ್ದರು. ಅಲ್ಲದೆ ಈ ಬಗೆಗೆ 1957ರ ಸೆಪ್ಟೆಂಬರ್ 30 ರಂದು ಪ್ರಸ್ತಾವನೆವೊಂದನ್ನು

ಮಂಡಿಸಿ ಸದನದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟದ್ದೂ ಉಂಟು. ಆದರೆ ಆರು ಗಂಟೆಗಳ ಚರ್ಚೆಯ ಅನಂತರ ಈ ಪ್ರಸ್ತಾವ ಹಳೆಯ ದಾಖಲೆಗಳ ಕಡತ ಸೇರಿತು. 1956ರ ಡಿಸೆಂಬರ್ 12 ರಂದು ಆಗಿನ ವಿರೋಧ ಪಕ್ಷದ ಉಪ ನಾಯಕರಾಗಿದ್ದ ಎಂ. ರಾಮಪ್ಪನವರು ಸಹ ಈ ಗೊತ್ತುವಳಿಯನ್ನು ಮಂಡಿಸಿದರು. ನಾಡಿಗೆ 'ಕರ್ನಾಟಕ' ಎಂದು ಹೆಸರಿಡಲು ಮೂವತ್ತು ಸದಸ್ಯರು ತಮ್ಮ ನಿರ್ಣಯವನ್ನು ತಿಳಿಸುವುದರ ಜೊತೆಗೆ ಎರಡು ದಿನಗಳ ಕಾಲ ಚರ್ಚೆಯು ಆಯಿತು. ಆದರೂ ಉಪಯೋಗ ಆಗಲಿಲ್ಲ. 1960ರ ಏಪ್ರಿಲ್ 6 ರಂದು ರಾಮಪ್ಪನವರ ಈ ಗೊತ್ತುವಳಿ ಮತ್ತೆ ಸದನದ ಮುಂದೆ ಪ್ರಸ್ತಾಪ ಆಯಿತು. ಈ ಬಾರಿಯೂ ನಾಮಕರಣದ ವಿಚಾರವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದ್ದು ದಾಖಲಾಗಿದೆ.

ಇಂಥ ಗೊತ್ತುವಳಿಯ ಮಂಡನೆ, ಚರ್ಚೆ, ಮುಂದೂಡಿಕೆಯ ಪ್ರಸಂಗಗಳು ಸದನದಲ್ಲಿ ಸರ್ವೆ ಸಾಮಾನ್ಯವಾಗ ತೊಡಗಿದವು. ಇದರಿಂದ ರಾಜಕಾರಣಿಗಷ್ಟೇ ಅಲ್ಲದೇ ಜನರಿಗೂ ಹತಾಶೆ ಆಗದಿರಲಿಲ್ಲ. ಲಿಂಗಸುಗೂರಿನ ಶಾಸಕ ಬಸವನಗೌಡ (1961 ಏಪ್ರಿಲ್ 25 ರಂದು) ಆರ್.ಎಸ್. ಪಾಟೀಲ (1962ರ ಆಗಸ್ಟ್ 2 ರಂದು) ರವರುಗಳು ಸದನದಲ್ಲಿ ನಾಮಕರಣದ ವಿಚಾರವನ್ನು ಪ್ರಸ್ತಾಪಿಸಿದರು. 51 ಜನ ಸದಸ್ಯರು ಈ ನಿರ್ಣಯವನ್ನು ತಿಳಿಸಿದ್ದರೂ ಗೊತ್ತುವಳಿ ಮತಕ್ಕೆ ಬಿಳುವಾಗ ನಿರಾಶೆ ಕಾದಿತ್ತು. ಈ ಮಧ್ಯೆ ತುರ್ತು ಪರಿಸ್ಥಿತಿಯ ಕಾರಣಗಳು ನೆಪವಾದವು.

ದೊಡ್ಡಮೇಟಿಯವರು ಈ ನಾಮಕರಣದ ಪ್ರಸ್ತಾವವನ್ನು ಮೇಲಿಂದ ಮೇಲೆ ಸದನದಲ್ಲಿ ಮಂಡಿಸುತ್ತಲೇ ಇದ್ದರು. 'ಕರ್ನಾಟಕ' ಎಂಬ ಹೆಸರನ್ನೂ ನಾಡಿಗೆ ಇಡದೆ ತಮಗೆ ವಿಶ್ರಾಂತಿಯೇ ಇಲ್ಲವೆನ್ನುವಷ್ಟು ಅವರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಕೇವಲ ರಾಜಕಾರಣಿಗಳನ್ನಷ್ಟೇ ಅಲ್ಲದೆ ನಾಡಿನ ಕವಿಗಳು, ಚಿಂತಕರು, ಕಲಾವಿದರೊಂದಿಗೂ ಈ ಕುರಿತ ಚರ್ಚೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ದೊಡ್ಡಮೇಟಿ ಆರು 1966ರ ಜುಲೈ 30 ನವೆಂಬರ್ 24, 26 ರಂದು ಮತ್ತೆ ಮತ್ತೆ ನಾಮಕರಣದ ವಿಚಾರವನ್ನು ಮಂಡಿಸಿದರಾದರೂ ಯಾವುದೇ ಪ್ರಗತಿ ಕಾಣದೆ ಅನಿರ್ದಿಷ್ಟ ಕಾಲ ಈ ಪ್ರಸ್ತಾವವನ್ನೂ ಮುಂದೂಡುತ್ತಲೇ ಹೋಯಿತು. ಆದರೂ ದೊಡ್ಡಮೇಟಿ ಅವರು ತಮ್ಮ ಕಾರ್ಯ ಚಟುವಟಿಕೆಗಳಿಂದ ವಿಮುಖರಾಗದೆ ಇದ್ದುದು ಗಮನಾರ್ಹವಾದುದು.

**ಕೃಪೆ: ಕರ್ನಾಟಕ ಏಕೀಕರಣ ಹಾಗೂ ನಾಮಕರಣ**
**ಡಾ|| ಸಿ.ಆರ್. ಗೋವಿಂದರಾಜು**

ಹೊಸೆದ ಹಾಗೆ ಹುರಿಗೊಳ್ಳುವ
ಗುರಿತಾಗುವ ಕನ್ನಡ
ಕುರಿತೋದದ ಪರಿಣತ ನುಡಿ
ಅರಿತವರಿಗೆ ಹೊಂಗೊಡ

**- ಚೆನ್ನವೀರ ಕಣವಿ**

# ಭಾಗ-2

## ಅಂದಾನಪ್ಪ ದೊಡ್ಡಮೇಟಿರವರ

## ಮುಂಬೈ ಶಾಸನ ಸಭೆಯ ಕಲಾಪಗಳು

## (1947ರಿಂದ 1956)

ಪಡುಗಡಲಿನ ತೆರೆಗಳಂತೆ
ಹೆಡೆಬಿಚ್ಚುವ ಮೊರೆಯು
ಸಹ್ಯಾದ್ರಿಯ ಶಿಖರದಂತೆ
ಬಾನೆತ್ತರ ಕರೆಯುವ

**- ಚೆನ್ನವೀರ ಕಣವಿ**

# ಭಾಷಾವಾರು ಪ್ರಾಂತ ಕುರಿತು

**ಶ್ರೀ ಎ.ಜೆ. ದೊಡ್ಡಮೇಟಿ (ಧಾರವಾಡ ಉತ್ತರ):** ಶ್ರೀ ಅಂದಾನಪ್ಪ ದೊಡ್ಡಮೇಟಿ: ಮಾನ್ಯ ಅಧ್ಯಕ್ಷರೇ, ಈ ನನ್ನ ಗೊತ್ತುವಳಿಯನ್ನು ಮಂಡಿಸಲು ಕೇಳಿಕೊಳ್ಳುತ್ತೇನೆ.

"ಭಾಷೆಗಳ ತಳಹದಿಯ ಮೇಲೆ ಪ್ರಾಂತಗಳನ್ನು ಪುನರ್ರಚಿಸತಕ್ಕದ್ದೆಂಬ ಸಂಗತಿಯು, ಹಿಂದುಸ್ತಾನದ ಸಮಗ್ರ ರಾಜ್ಯರಚನೆಯ ವಿಕಾಸಕ್ಕೆ ಒಂದು ಅತ್ಯಾವಶ್ಯಕವಾದ ಪೀಠಿಕೆಯಾಗಿರುತ್ತದೆಂತಲೂ, ಅದು ಕಾರಣ ಘಟನಾ ಸಮಿತಿಯ ಕಾರ್ಯಕಲಾಪಗಳ ಮೊದಲನೇ ಪರ್ಯಾಯದಲ್ಲಿ ಈ ಪ್ರಶ್ನೆಯನ್ನು ಕುರಿತು ವಿಚಾರ ಮಾಡತಕ್ಕದ್ದೆಂತಲೂ ಈ ಅಸೆಂಬ್ಲಿಯು ಅಭಿಪ್ರಾಯಪಡುತ್ತದೆಂಬ ಸಂಗತಿಯನ್ನು ಹಿಂದುಸ್ತಾನ ಸರಕಾರದವರ ಮುಖಾಂತರ ಘಟನಾ ಸಮಿತಿಗೆ ನಿವೇದಿಸಬೇಕೆಂದು ಈ ಅಸೆಂಬ್ಲಿಯು ಸರಕಾರದವರ ಕಡೆಗೆ ಶಿಫಾರಸ್ಸು ಮಾಡುತ್ತದೆ."

**ಉಪ ಸಭಾಪತಿಗಳು :** ಈ ಸಭೆಯ ಸಂವಿಧಾನತ್ಮಕ ಸಭೆಗೆ ಭಾರತ ಸರಕಾರದ ಮೂಲಕ ತಿಳಿಸುವುದೇನೆಂದರೆ - ಈ ಸಭೆಯಲ್ಲಿ ಮಂಡಿಸಿದ ಗೊತ್ತುವಳಿ ಪ್ರಕಾರ ಭಾಷೆಗಳ ತಳಹದಿ ಮೂಲಕ ಪ್ರಾಂತಗಳನ್ನು ಪುನರ್ರಚಿಸುವಿಕೆಯು ಹಾಗೂ ಅದನ್ನು ಕಾರ್ಯರೂಪಕ್ಕೆ ತರುವುದು ಆದ್ದರಿಂದ ಈ ಪ್ರಶ್ನೆಯನ್ನು ಅದರ ಠರಾವುಗಳ ಪ್ರಥಮ ಹಂತದಲ್ಲಿಯೇ ಪರಿಗಣನೆಗೆ ತೆಗೆದುಕೊಳಲಾಗುವುದು.

**ಶ್ರೀ ಎ.ಜೆ. ದೊಡ್ಡಮೇಟಿ:** ಮಾನ್ಯ ಅಧ್ಯಕ್ಷರೇ, ಈ ಗೊತ್ತುವಳಿಯನ್ನು ಈ ಸಭೆಯಲ್ಲಿ ಮಂಡಿಸಲು ಅವಕಾಶ ದೊರತದ್ದಕ್ಕಾಗಿ ನನಗೆ ಅತ್ಯಂತ ಸಂತೋಷವಾಗುತ್ತದೆ. ಭಾಷಾವಾರು ಪ್ರಾಂತರಚನೆಯ ತತ್ವವು ಬಹುದಿನಗಳಿಂದ ಸಾಮಾನ್ಯವಾಗಿ ಸರ್ವರಿಂದ ಒಪ್ಪಿಗೆ ಪಡೆದ ವಿಷಯವಾಗಿದೆ. ಆದರೂ ಈ ಠರಾವಿನ ಮಹತ್ವವನ್ನೂ ಅದರ ಅವಶ್ಯಕತೆಯನ್ನೂ ಇಲ್ಲಿ ತಿಳಿಸಿ ಕೊಡುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ-

ಅಧ್ಯಕ್ಷ ಮಹಾಶಯರೇ, ಈ ಠರಾವನ್ನು ತಂದಿರುವ ಈಗಿನ ಕಾಲವು ತೀರ ಮಹತ್ವದ್ದಾಗಿದೆ. ಬ್ರಿಟಿಷರು 1948ನೇ ಜೂನ್ ತಿಂಗಳಲ್ಲಿ ಭಾರತದ ಮೇಲಿನ ತಮ್ಮ ಅಧಿಕಾರವನ್ನು ಬಿಟ್ಟು ಈ ದೇಶದಿಂದ ತೆರಳುವವೆಂದು ಘೋಷಿಸಿರುವುದು. ಭಾರತೀಯರು ತಮ್ಮ ರಾಜ್ಯದಾಡಳಿತವನ್ನು ತಾನೇ ಸಾಗಿಸಿಕೊಂಡು ಹೋಗುವ ಕಾಲ ಬರಲಿದೆ. ಭಾರತದ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಸ್ಥಿತಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆಗುವ ಸಮಯ ಉಂಟಾಗಿದೆ. ಸುಮಾರು 20 ವರುಷಗಳವರೆಗೆ ಬ್ರಿಟಿಷರ ದಾಸ್ಯದಲ್ಲಿ ಕೊಳೆಯುತ್ತ ಬಂದ ಭಾರತವು ಸ್ವಾತಂತ್ರ್ಯದ ಹೆಬ್ಬಾಗಿಲಕ್ಕೆ ಬಂದಿರುವ ಶುಭಕಾಲವು ಸಮೀಪಿಸುತ್ತಿದೆ. ಜಾಗತಿಕ ರಾಜಕೀಯ ಪರಿಸ್ಥಿತಿ ವಿಕಸಿತಗೊಂಡ ಭಾರತ ರಾಷ್ಟ್ರ ಪುರುಷನ ಆತ್ಮಶಕ್ತಿ, ಕಳೆದ

25 ವರುಷಗಳಿಂದ ಸ್ವಾತಂತ್ರ್ಯಕ್ಕಾಗಿ ಭಾರತೀಯ ಮಾಡಿದ ತ್ಯಾಗ ಶಕ್ತಿಗಳು, ನಮ್ಮನ್ನು ಇಂದು ಈ ಮೆಟ್ಟಿಲಿಗೆ ತಂದು ಮುಟ್ಟಿಸಿವೆ.

ತತ್ಪರಿಣಾಮವಾಗಿ ಬ್ರಿಟಿಷರು ಈಗ ನಮ್ಮ ಸೊತ್ತನ್ನು ನಮಗೆ ಒಪ್ಪಿಸಲು ಸಿದ್ದರಾಗಿ ಅದಕ್ಕಾಗಿ ಒಂದು- ಸಂವಿಧಾನಾತ್ಮಕ ಸಭೆ ಘಟನಾ ಸಮಿತಿಯನ್ನು ಏರ್ಪಡಿಸಿದ್ದಾರೆ. ಭಾರತದ ಭಾವೀ ರಾಜ್ಯಘಟನೆಯನ್ನು ಭಾರತೀಯರೇ ನಿಶ್ಚಯಿಸಿಕೊಳ್ಳುವ ಕಾಲವು ಬಂದಿದೆ. ಇಂಗ್ಲೆಂಡ್ ಮತ್ತು ಹಿಂದುಸ್ತಾನಗಳ ನಡುವೆ ಸೌಹಾರ್ದಮಯ ಒಪ್ಪಂದವನ್ನು ಸಾಧಿಸಲು ವಿಚಾರ ವಿನಿಮಯ ನಡೆದಿದೆ. ಶಾಂತ ರೀತಿಯಿಂದ ಸ್ವಾತಂತ್ರ್ಯವನ್ನು ಪಡೆಯಲು ಆತುರವಿದ್ದ ಕಾಂಗ್ರೆಸ್ ಧುರೀಣರು ಬ್ರಿಟಿಷ್ ಯೋಜನೆಗಳೊಡನೆ ಸಹಕರಿಸಲು ಒಪ್ಪಿ ಈಗಾಗಲೇ ಬ್ರಿಟಿಷ್ ಮಂತ್ರಿಯವರ ಮೇ 16ನೇ ತಾರೀಖಿನ ಘೋಷಣೆಯ ಪ್ರಕಾರ ನಡುಗಾಲ ಸರಕಾರವನ್ನು ಸ್ಥಾಪಿಸಿ, ಮುಸ್ಲಿಂಲೀಗ ಬಾಂಧವರನ್ನೊಳಗೊಂಡು ಅಧಿಕಾರಸೂತ್ರಗಳನ್ನು ನಡೆಸುತ್ತಿದ್ದಾರೆ. ಈ ಎಲ್ಲ ಸಂಗತಿಯು ತಮಗೆ ತಿಳಿದ ವಿಷಯವಾಗಿದೆ. ಮೇ 16ನೇ ತಾರೀಖಿನ ಘೋಷಣೆಯ ಅನ್ವಯ ಘಟನಾ ಸಮಿತಿಯನ್ನು ಕೂಡ ಸ್ಥಾಪಿಸಿ ಅದರ ಪ್ರಾರಂಭದ ಕಾರ್ಯಕಲಾಪಗಳು ಇಷ್ಟರಲ್ಲಿಯೇ ನಡೆದಿವೆ. ಈ ಘಟನಾ ಸಮಿತಿಯು ಒಂದು ರಾಜ್ಯ ಘಟನೆಯುನ್ನು ಸಿದ್ದಪಡಿಸುವುದು ಮತ್ತು ಅದೇ ಹಿಂದುಸ್ತಾನದ ಭಾವೀ ರಾಜ್ಯಘಟನೆಯಾಗುವುದು. ಈ ರಾಜ್ಯಘಟನೆಯು ಹಿಂದುಸ್ತಾನದ ಸಮಗ್ರ ಜನತೆಗೆ ಸಹಮತವಾಗಲೆಂದು ಕಾಂಗ್ರೆಸ್ ಮುಂದಾಳುಗಳು ಬ್ರಿಟಿಷ್ ಸರಕಾರದ ಡಿಸೆಂಬರ್ 6ನೇ ತಾರೀಖಿನ ಸ್ಪಷ್ಟೀಕರಣವನ್ನು ಒಪ್ಪಿ, ಆ ದಿಶೆಯಲ್ಲಿ ಅವರು ಸತತ ---- ಹತ್ತಿದ್ದಾರೆ. ರಾಜ್ಯ ಘಟನೆಯ ರೂಪರೇಷೆಗಳು ಇಷ್ಟರಲ್ಲಿಯೇ ಸಿದ್ದವಾಗುವುದರಲ್ಲಿ ಇವೆ. ತನ್ನ ಮುಂದಿರುವ ಇನ್ನೂ ಕೆಲವು ಪ್ರಾಥಮಿಕ ಕಾರ್ಯದೊಡನೆ ಮುಂದೆ ಸಾಗಲು ನಾಳೆ ಏಪ್ರಿಲ್ 28ಕ್ಕೆ ಘಟನಾ ಸಮಿತಿಯು ಪುನಃ ಕೂಡುವದಿದೆ.

ಈ ರೀತಿ ಭಾರತವು ತನ್ನ ಹಳೆಯ ಕವಚವನ್ನು ಕಳೆದು ಹೊಸ ರೂಪವನ್ನು ತಳೆಯುವಾಗ, ಭಾರತ ದೇಶದ ಘಟಕಗಳು ಪುನರ್‍ರಚಿಸಲ್ಪಡುವಾಗ ಭಾರತದ ಅರ್ಧಭಾಗವು ತನ್ನ ಭವಿಷ್ಯಕ್ಕಾಗಿ ಹೆಣಗಾಡಬೇಕಾಗಿದೆ. ಇದೆಲ್ಲ ಹೋರಾಟ, ಪ್ರಯತ್ನಗಳು ಆ ಭಾಷಾನುಗುಣ ಪ್ರಾಂತರಚನೆಗಾಗಿ ಜನತೆಯನ್ನು ಒಂದುಗೂಡಿಸುವ ಸಾಧನೆಗಳಲ್ಲಿ, ಸಂಸ್ಕೃತಿ ಆರ್ಥಿಕ ಸ್ವಾವಲಂಬನ, ಭೌಗೋಲಿಕ ಹೊಂದಿಕೆ, ಮೊದಲಾದವುಗಳ ಪರಿಶೀಲನೆ ಅಗತ್ಯವಿದ್ದರೂ ಭಾಷೆಯನ್ನೇ ಪ್ರಾಥಮಿಕ ಹಾಗೂ ಪ್ರಾಮುಖ್ಯವಾಗಿ ಗಣಿಸಲ್ಪಡಬೇಕೆಂಬ ಮಾತು ಸರ್ವ ಮಾನ್ಯವಾದುದು ಅರ್ಥಾತೆ ಭಾಷಾನುಗುಣ ಪ್ರಾಂತರಚನೆಯ ತತ್ವವು ಸಾಮಾನ್ಯವಾಗಿ ಎಲ್ಲರಿಂದಲೂ ಒಪ್ಪಲ್ಪಟ್ಟದ್ದಾಗಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ನನ್ನ ಮಿತ್ರರಾದ ಮಾನ್ಯ ಕರಂದೀಕರರು ಹೇಳಿದ್ದು ಗೊತ್ತು. ಹಿಂದಕ್ಕೆ 1938ನೇ ಇಸವಿಯಲ್ಲಿ ಕರ್ನಾಟಕ ಪ್ರಾಂತೀಕರಣದ ಬಗ್ಗೆ ತಂದ ಠರಾವು

ಇದೇ ಸಭೆಯಲ್ಲಿ ಸ್ವೀಕೃತವಾದಾಗ್ಗ ಭಾಷಾವಾರು ಪ್ರಾಂತ ರಚನೆಯ ತತ್ವವು ಈ ಸಭೆಯಿಂದ ಮನ್ನಿಸಲ್ಪಟ್ಟಿದ್ದು ನನಗೆ ಪೂರ್ಣ ನೆನಪಿದೆ. ಆದರೂ ನನ್ನ ಗೊತ್ತುವಳಿಯ ಪ್ರಸ್ತಾವನೆಯ ಬಗ್ಗೆ ಕೆಲವು ಮಾತು ಹೇಳುವದವಶ್ಯವಿದೆ.

**ಉಪ ಸಭಾಪತಿಗಳು:** ಕರ್ನಾಟಕ ಪ್ರಾಂತವನ್ನು ಒಂದುಗೂಡಿಸಿ ಒಂದು ಹೊಸ ಪ್ರಾಂತವನ್ನು ನಿರ್ಮಿಸುವ ಬಗ್ಗೆ ಇದೇ ಸಭೆಯಲ್ಲಿ ಒಂದು ಠರಾವು ಪಾಸು ಆಗಿದೆ. ಈಗ ನಮ್ಮ ಮುಂದಿರುವ ಈ ಠರಾವಿನಲ್ಲಿ ಕೇವಲ ಭಾಷಾವಾರು ಪ್ರಾಂತರಚನೆಯ ತತ್ವದ ಬಗ್ಗೆ ಅಷ್ಟೇ ಇರುತ್ತದೆ. ಆದ್ದರಿಂದ ಕರ್ನಾಟಕ ಏಕೀಕರಣದ ವಿಷಯಕ್ಕೆ ಈಗ ಮಾತನಾಡುವ ಅವಶ್ಯಕತೆಯಿಲ್ಲ. ಈ ಠರಾವಿನಲ್ಲಿರುವಂತೆ ಭಾಷಾವಾರು ಪ್ರಾಂತ ರಚನೆಯ ತತ್ವದ ವಿಷಯಕ್ಕೆ ಅಷ್ಟೇ ಮಾತನಾಡಬಹುದು.

## ಶ್ರೀ ನೆಹರೂರವರ ಪ್ರಸ್ತಾವನೆ

**ಶ್ರೀ ಎ.ಜೆ. ದೊಡ್ಡಮೇಟಿ:** ಪ್ರಾಂತಗಳನ್ನು ಪುನರ್ರಚಿಸುವುದರಲ್ಲಿ ಭಾಷೆಯ ತಳಹದಿಯ ಮೇಲೆಯೇ ಯಾಕೆ ವಿಚಾರಿಸಬೇಕು ಪ್ರಾಮುಖ್ಯವಾಗಿ ಭಾಷೆಗೆ ಯಾಕೆ ಮಹತ್ವದ ಸ್ಥಾನ ದೊರೆತಿದೆ. ಭಾಷೆಯ ತಳಹದಿಯ ಮೇಲೆ ಪ್ರಾಂತಗಳಿದ್ದರೆ ಅದರಿಂದ ಆಗುವ ಲಾಭಗಳೇನು, ಮುಂತಾದ ಅಂಶಗಳನ್ನು ಇಲ್ಲಿ ವಿಚಾರ ಮಾಡುವುದು ವಿಹಿತವಾಗಿದೆ. ಭಾಷೆಯು ಜನಜೀವನದ ಉಸಿರು, ಆ ಉಸಿರಿನಲ್ಲಿಯೇ ಜನಜೀವನದ ರಾಜ್ಯವು ಪಡೆಯಬೇಕಾದು ನೈಸರ್ಗಿಕ ಹಾಗೂ ಅವಶ್ಯಕ. ಉಳಿದದ್ದೆಲ್ಲಾ ಅನೈಸರ್ಗಿಕ, ಮತ್ತು ಅನವಶ್ಯಕ, ಶಬ್ದ ಅಥವಾ ಭಾಷೆ ನಿಸರ್ಗದ ಒಂದು ದೇಣಿಗೆ ಅದು ಒಂದು ದೈವೀ ಕೃಪೆ. ಈ ದೇಣಿಗೆಯನ್ನು ದುರ್ಲಕ್ಷಿಸಿ ಈ ಕೃತಿಯನ್ನು ಅಲಕ್ಷಿಸಿ ಯಾವುದೇ ಜನಾಂಗವು ತನ್ನ ಬೆಳವಣಿಗೆ ಮಾಡಿಕೊಳ್ಳುವುದು ಸಂಪೂರ್ಣ ಅವಶ್ಯಕವಾದ ಮಾತೇ ಸರಿ, ಭಾಷೆಯ ತಳಹದಿಯ ಮೇಲೆ ಪ್ರಾಂತಗಳಿದ್ದರೆ ಆಯಾ ಪ್ರದೇಶಗಳು ತಮ್ಮದೇ ಆದ ಸಂಸ್ಕೃತಿ, ಶಿಕ್ಷಣ, ಮನೋಭಾವನೆಗನುಗುಣವಾಗಿ ತಮ್ಮ ಸರ್ವತೋಮುಖ ಏಳಿಗೆಯನ್ನು ಮಾಡಿಕೊಳ್ಳಲು ಶಕ್ತರಾಗಬಲ್ಲರೆಂದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾದ ವಿಷಯ. ಈ ಸಂಬಂಧದಲ್ಲಿ ಹೆಸರಾದ ನೆಹರು ರಿಪೋರ್ಟಿನಲ್ಲಿ ಏನು ಹೇಳಿದೆಯೆಂಬುದನ್ನು ಈ ಸಭೆಯ ಮಾನ್ಯ ಸದಸ್ಯರ ವಿಷಯಕ್ಕೆ ತರಬಯಸುತ್ತೇನೆ. ನೆಹರೂ ರಿಪೋರ್ಟಿನಲ್ಲಿ ಹೀಗೆ ಇದೆ:-

ಆ ಪ್ರಾಂತಗಳ ಪುನರ್ವಿಭಜನೆಯಾಗಲೇಬೇಕೆಂಬುದು ಸ್ಪಷ್ಟವಿದೆ. ಶಿಕ್ಷಣದ ಸಾಧನೆಯು ಪರಭಾಷೆಯಾದರೆ. ದೇಶದ ನಿತ್ಯದ ಉದ್ಯೋಗ ವ್ಯವಹಾರಗಳು ಅವಶ್ಯವಾಗಿ ಕುಂಠಿತವಾಗುತ್ತದೆ. ಪ್ರಜಾಪ್ರಭುತ್ವವು ಪರಭಾಷೆಯಿಂದ ಬದುಕಲಾರದು. ಒಂದು ಪ್ರಾಂತವು ಶಿಕ್ಷಣ ಪಡೆಯಬೇಕಾದಲ್ಲಿ ಹಾಗೂ ನಿತ್ಯ ಉದ್ಯೋಗವನ್ನು ತನ್ನ ಭಾಷೆಯ ಮುಖಾಂತರ

ಸಾಧಿಸಬೇಕಾದಲ್ಲಿ ಅದು ಅವಶ್ಯವಾಗಿ ಭಾಷಾವಾರು ಪ್ರದೇಶವಾಗಿರಬೇಕು. ಆದ್ದರಿಂದ ಪ್ರಾಂತಗಳು ಭಾಷಾವಾರು ಪದ್ಧತಿಯಿಂದ ಪುನರ್ರಚಿಸಲ್ಪಡುವುದು ಅತ್ಯಂತ ಯೋಗ್ಯವಾದದ್ದು, ಭಾಷೆಯು ಸಾಮಾನ್ಯವಾಗಿ ವಿಶಿಷ್ಟ ಸಂಸ್ಕೃತಿ ಹಾಗೂ ಸಾಹಿತ್ಯವಾಗಿದೆ.

ಮಾನ್ಯ ಅಧ್ಯಕ್ಷರೇ, ಭಾಷಾವಾರ ಪ್ರಾಂತಗಳ ಪುನರ್ರಚನೆಯ ತತ್ವದ ಸಂಬಂಧದಲ್ಲಿ ಇನ್ನೂ ಕೆಲವು ಹತ್ವದ ಸಂಗತಿಗಳನ್ನು ಈ ಸಭೆಯ ಮಾನ್ಯ ಸದಸ್ಯರ ಲಕ್ಷ್ಯಕ್ಕೆ ತರಬಯಸುತ್ತೇನೆ. ಕ್ಯಾಬಿನೆಟ್ ಕಮಿಶನ್‌ರವರು ಸಹ ಭಾಷಾವಾರು ಪ್ರಾಂತ ರಚನೆಯ ಮಹತ್ವವನ್ನು ಅರಿತಿದ್ದು ಈ ಬಗ್ಗೆ ಅವರು ತಮ್ಮ ಮೇ 16ನೇ ತಾರೀಖಿನ ಪ್ರಕಟನೆಯ 7ನೇ ಪ್ಯಾರಾದಲ್ಲಿ ಈ ಶಬ್ದಗಳನ್ನು ಉಪಯೋಗಿಸಿದ್ದಾರೆ.

"ಪಂಜಾಬ ಮತ್ತು ಬಂಗಾಲ ಇವುಗಳ ತೀವ್ರ ವಿಭಜನೆಯ ಯಾವುದೇ ಮಾರ್ಗವು ಆಯಾ ಪ್ರಾಂತದ ಬಹುಜನ ವಾಸಿಗಳ ಇಚ್ಛೆ ಹಾಗೂ ಹಿತದ ವಿರೋಧವಾಗಿ ಆಗುತ್ತದೆಂದು ನಮಗೆ ಮನವರಿಕೆಯಾಗಿದೆ. ಬಂಗಾಲ ಮತ್ತು ಪಂಜಾಬಕ್ಕೆ ತಮ್ಮ ತಮ್ಮ ಒಂದೇ ಭಾಷೆ ಮತ್ತು ಇತಿಹಾಸ ಹಾಗೂ ಪರಂಪರೆಗಳು ಇರುತ್ತವೆ.

ಒಂದೇ ಭಾಷೆ ಇರುವ ಮೂಲಕ ಬಂಗಾಲ ಮತ್ತು ಪಂಜಾಬ ಪ್ರಾಂತಗಳನ್ನು ವಿಭಜನೆ ಮಾಡುವುದು ಅನವಶ್ಯಕವೆಂಬ ಮಾತು, ಅವರ ಈ ಹೇಳಿಕೆಯಿಂದ ಸ್ಪಷ್ಟವಾಗಿ ಇರುವುದೆಂದು ತೋರುತ್ತದೆ. ಆದ್ದರಿಂದ ಹಿಂದುಸ್ಥಾನದಲ್ಲಿಯ ಪ್ರಾಂತಗಳು ಭಾಷೆಯ ತಳಹದಿಯ ಮೇಲೆ ಪುನರ್ರಚಿಸಬೇಕೆಂಬ ತತ್ವಕ್ಕೆ ಅವರು ಒಪ್ಪಿಕೊಂಡಿದ್ದಾರೆಂದು ನಾನು ತಿಳಿಯುತ್ತೇನೆ.

ಈ ಸಂಬಂಧದಲ್ಲಿ 'ಸೈಮನ್' ಕಮೀಶನ್ ವರದಿಯಲ್ಲಿ ಏನು ಹೇಳಿದೆಯೆಂಬುದನ್ನು ಓದಿ ತೋರಿಸುತ್ತೇನೆ. ಸೈಮನ್ ಕಮೀಶನ್ ರಿಪೋರ್ಟ್ ಭಾಗ, ಶಿಫಾರಸುಗಳ ಪಾಸು 24,25 ರಲ್ಲಿ ಹೀಗೆ ಅದೆ.

"ಒಂದಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ಈಗಿದ್ದ ಪ್ರಾಂತಗಳ ಹದ್ದುಗಳು ಸ್ವಾಭಾವಿಕ ಸಂಬಂಧತೆ ಇಲ್ಲದೆ ಜನರನ್ನು ಮತ್ತು ಪ್ರದೇಶಗಳನ್ನು ಒಳಗೊಂಡಿರುತ್ತವೆ. ಮತ್ತು ಕೆಲವು ಸಲ ಬೇರೊಂದು ಯೋಜನೆಯ ಪ್ರಕಾರ ಸ್ವಾಭಾವಿಕವಾಗಿ ಕೂಡಬಹುದಾದ ಜನರನ್ನು ಬೇರ್ಪಡಿಸುತ್ತದೆ. ಸ್ಥಾನಮಾನದಿಂದ ಬೇರೆ ಪ್ರಾಂತವಾಗಿ ಇರಲಿಕ್ಕೆ ಶಕ್ಯವಿದ್ದಲ್ಲಿ, ಒಂದೇ ಭಾಷೆಯನ್ನು ಮಾತಾಡುವ ಜನರನ್ನು ಸ್ವಸಾಮರ್ಥ್ಯವಿದ್ದ ಆ ಪ್ರದೇಶದಲ್ಲಿ ತಂದಲ್ಲಿ ಪ್ರಾಂತಿಕ ಸ್ವಾಯತ್ತತೆಯ ತಳಹದಿಯು ಸ್ವಾಭಾವಿಕವಾದ ಒಂದೇ ಭಾಷೆಯ ಮೇಲೆ ಇದೆ ಎಂದು ಅನ್ನಲಿಕ್ಕೆ ಸಂಶಯವಿಲ್ಲ."

ಮತ್ತು ಇದೇ ಪ್ರಶ್ನೆಯ ಬಗೆಯಲ್ಲಿ 1925ರ ಇಂಡಿಯನ್ ಕಾನ್‌ಸ್ಟಿಟ್ಯೂಶನ್ ರಿಫಾರ್ಮಿನ ಸಂಯುಕ್ತ ಸಮಿತಿಯವರಿಗೆ ಇಂಗ್ಲೆಂಡಿನ ಈಗಿನ ಪ್ರಧಾನ ಸಚಿವರಾದ ಶ್ರೀ ಸಿ.ಆರ್. ಆಟ್ಲೆ ಯವರು ಹೇಳಿದ ಒಂದೇ ಮಾತನ್ನು ಇಲ್ಲಿ ಹೇಳಬಯಸುತ್ತೇನೆ.

"ಹೊಸ ಘಟನೆಯು ಅಸ್ತಿತ್ವದಲ್ಲಿ ಬಂದ ಕೂಡಲೇ ಹಿಂದೀ ವಿಧಿಮಂಡಲವು ಒಂದು ಮೇರೆಗಳ ಸಮಿತಿಯನ್ನು ನಿಯಮಿಸಬೇಕು. ಮತ್ತು ಪ್ರಾಂತಗಳ ಮೇರೆಗಳನ್ನು ಮಿತಗೊಳಿಸುವುದಲ್ಲದೆ ಅಂತ ವ್ಯವಸ್ಥೆಯಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಬಹುದೇ ಎಂಬುದನ್ನು ಅದು ನೋಡಬೇಕು. ಸಾಮಾನ್ಯವಾಗಿ ಆಡಳಿತದ ದೃಷ್ಟಿಯಿಂದ ಎಷ್ಟೇ ಅನುಕೂಲಕಂಡರೂ, ಏಕಮಾತ್ರ ರಾಜ್ಯ ವ್ಯವಸ್ಥೆಯಲ್ಲಿ, ಒಂದು ಜನಾಂಗದ ಬೆಳವಣಿಗೆಯ ಮೇಲ್ಮಟ್ಟದಲ್ಲಿ ಕಾರಭಾರವು ಸುಗಮವಾಗಿ ಸಾಗಲು ಅವುಗಳಲ್ಲಿ ಅನೇಕ ಪ್ರಾಂತಗಳು ತೀರ ದೊಡ್ಡವಾಗಿರುವುವು. ಈಗಾಗಲೆ ಅಲ್ಲಿ ಆ ಪ್ರಾಂತದ ಅಭಿಮಾನವು ಅಂಕುರಿಸಿದ ಮಾತು ಒಪ್ಪಬೇಕಾದುದೆಂಬುದು ಬೇರೆ. ಅಂತೆಯೆ ಹಿಂದಿ ನಿವಾಸಿಗಳ ಪ್ರತಿ ನಿಧಿಗಳಿಂದಲೇ ನಿಶ್ಚಿತಗೊಳ್ಳಬೇಕಾದ ವಿಷಯವಿದು ಎಂದು ನನ್ನ ಅಭಿಪ್ರಾಯ. ಆದರೂ ಇಲ್ಲಿ ಆರ್ಥಿಕ ಸಾಮರ್ಥ್ಯವಿಲ್ಲದ ಯಾವ ಪ್ರದೇಶವನ್ನು ಪ್ರಾಂತವೊಂದನ್ನಾಗಿ ಮಾಡುವಂತಿಲ್ಲ ಎಂಬ ಒಂದು ಮಾತಿನ ಪ್ರಸ್ತಾವವನ್ನೆತ್ತಬೇಕಾಗಿದೆ. ಈ ವಾದ ಸರಣಿಯು ನಮಗೆ ಸಮ್ಮತವಿಲ್ಲ. ಆರ್ಥಿಕ ದೃಷ್ಟಿಯಿಂದ ತೀರ ವಿಭಿನ್ನವಾದ ಹಿಂದುಸ್ತಾನದ ಅನೇಕ ಪ್ರಾಂತಗಳು ಮತ್ತು ಭಾಗಗಳಲ್ಲಿ, ಕೊರತೆಯುಳ್ಳ ಒಂದು ಪ್ರಾಂತವನ್ನು ತಣಿಸಲು ಅದರೊಡನೆ ಇನ್ನೊಂದು ಭಾಷೆ ಸಂಸ್ಕೃತಿಗಳಿಂದ ಭಿನ್ನವಾಗಿದ್ದ ಪ್ರಾಂತವು ಏಕೆ ಸೇರಬೇಕೋ ತಿಳಿಯದು.

ಘಟನಾ ಸಮಿತಿಯ ರಾಜ್ಯಾಂಗ ರಚನೆಯ ಮೊದಲನೇಯ ಪರ್ಯಾಯದಲ್ಲಿಯೇ ಭಾಷೆಯ ತಳಹದಿಯ ಮೇಲೆ ಪ್ರಾಂತಗಳನ್ನು ಪುನರ್ರಚಿಸುವ ಬಗ್ಗೆ ವಿಚಾರ ಮಾಡಬೇಕಾದ ಅವಶ್ಯಕತೆಯನ್ನು ಕುರಿತು ಇನ್ನು ಹೇಳಬಯಸುತ್ತೇನೆ.

**ಶ್ರೀ ಬಿ.ಜಿ. ಖೇರ್:** ನನ್ನದು ಒಂದು ಸೂಚನೆಯು ಹೀಗೆ ಅದೆ. ಈ ಠರಾವಿನ ಕಡೆಯ ಸಾಲಿನಲ್ಲಿ ಇರುವ the first ಶಬ್ದಗಳು ಬದಲು an early ಅಂತಾ ಇದ್ದರೆ ಬಹಳ ಚೆನ್ನಾಗಿ ಆಗುತ್ತದೆ. ಯಾಕೆಂದರೆ Constituent Assembly ಯ ಕೆಲಸ ಪ್ರಾರಂಭವಾಗಿದೆ. ಈ ವಿಷಯನ್ನು ಕುರಿತು at an early stage ವಿಚಾರ ಮಾಡಲು ಬಹಳ ಛಲೋ ಆಗುತ್ತದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ನಾನು ಈ ತಿದ್ದುಪಡಿಯನ್ನು ಸ್ವೀಕರಿಸುತ್ತೇನೆ.

**ಉಪ ಸಭಾಪತಿಗಳು:** ಸನ್ಮಾನ್ಯ ಪ್ರಧಾನ ಮಂತ್ರಿಗಳು ತಿದ್ದುಪಡಿ ಮಾಡಿದ್ದು, ಕೊನೆಯ ಸಾಲಿನಲ್ಲಿ 'ಪ್ರಥಮ' (The First) ಎಂಬುದರ ಬದಲಾಗಿ 'ಮುಂಚಿತವಾಗಿ' (an early) ಎಂದು ತಿದ್ದುಪಡಿಯಾಗಿದ್ದು, ಆ ತಿದ್ದುಪಡಿ ಸ್ವೀಕೃತವಾಗಿದ್ದು, ಒಪ್ಪಿಗೆ ಕೊಡಲಾಗಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಈ ಭಾಷಾನುಗುಣ ಪ್ರಾಂತರಚನೆಯ ಅವಶ್ಯಕತೆಗಾಗಿ 1946 ಕಾಯಿದೆ ಮಂಡಳಿಗಳ ತನ್ನ ಚುನಾವಣೆಯ ಘೋಷಣೆಯಲ್ಲಿ ಕಾಂಗ್ರೇಸ್ಸು ಹೀಗೆ ಹೇಳಿದೆ.

"ತಮ್ಮ ಅಭಿರುಚಿ ಮತ್ತು ಅರ್ಹತೆಗಳ ಮೇರೆಗೆ ಬೆಳೆಯುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುವುದಕ್ಕಾಗಿ ವಕಾಶವನ್ನು ಕಲ್ಪಿಸಿಕೊಡುವುದೇ ಕಾಂಗ್ರೆಸ್ಸಿನ ಉದ್ದೇಶವಾಗಿದೆ. ಹಾಗೆಯೇ ಇಡೀ ನಾಡಿನಲ್ಲಿ ಯಾವುದೇ ಭಾಗವು ತನ್ನ ಉನ್ನತಿಯನ್ನು ಸಾಧಿಸಿಕೊಳ್ಳುವ ಸ್ವತಂತ್ರತೆಗಾಗಿಯೂ ಕಾಂಗ್ರೆಸ್ಸು ಹೆಣಗುತ್ತಲಿದೆ. ಅಂತೆಯೇ ಭಾಷೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಪ್ರಾಂತಗಳ ಪುನರ್‌ರಚನೆಯು ಅತ್ಯಗತ್ಯ."

## ಭಾಷಾವಾರು ಪ್ರಾಂತದ ರಚನೆಗೆ ಪ್ರಮುಖರ ಅಭಿಪ್ರಾಯಗಳು

ಭಾಷಾನುಗುಣ ಪ್ರಾಂತ ರಚನೆಯ ತತ್ವವನ್ನು ಕಾಂಗ್ರೆಸ್ಸು ಮಾತ್ರವಲ್ಲ ಇನ್ನುಳಿದ ಪಕ್ಷಗೂ ಒಪ್ಪಿಕೊಂಡಿವೆ. ಸದ್ಯದ ಪ್ರಾಂತ ರಚನೆನ್ನು ಕುರಿತು ಸುಪ್ರಸಿದ್ಧ ಘಟನಾ ಬರಹಗಾರರಾದ ಲಿಯೋನಲ್ ಕರ್ಟಿಸ್ ಎಂಬವರು ಹೀಗೆ ಹೇಳುತ್ತಾರೆ.

"ಪೌರ್ವಾತ್ಯದಲ್ಲಿ ಮಂಡಲಾಧಿಕಾರಿಯ ಕ್ರೂರ ಶಾಸನದ ಅಧೀನ ಅಥವಾ ಆಶ್ರಯದ ರಾಜ್ಯವಿದ್ದಂತೆ ಈಗಿರುವ ಬಹುತರ ಎಲ್ಲ ಪ್ರಾಂತಗಳು ಕೃತಕವಾಗಿದ್ದು ಅನುವಂಶಿಕವಾಗಿ ಬಂದ ಕೆಂದ್ರೀಕೃತ ಸರಕಾರದ ಸಲುವಾಗಿ ರಚಿಸಲ್ಪಟ್ಟಿರುತ್ತವೆ. ಆದರೆ ಯೋಗ್ಯಾದ ಪ್ರಾಂತಗಳ ಭಾಗಗಳನ್ನು ರಚಿಸುವುದರ ಬಗ್ಗೆ ವಿಚಾರ ಮಾಡುವುದು ಈಗ್ಗೆ ಅತ್ಯಂತ ಅವಶ್ಯಕವಾದ ವಿಷಯಾಗಿದೆ. ಸಿಂಧ್ ಪ್ರಾಂತದಂತೆ ಐತಿಹಾಸಿಕ ದೃಷ್ಟಿಯಿಂದ ಇರುವ ಭಾಗಗಳನ್ನು ಬೇರ್ಪಡಿಸಬೇಕು. ಅದರಲ್ಲಿಯೂ ಭಾಷೆ, ಜನಾಂಗ ಮತ್ತು ಜಾತಿ ಈ ವಿಷಯಗಳಾದರೂ ಮಹತ್ವದವು ಇರುತ್ತವೆ. ಇವೆಲ್ಲಗಳಲ್ಲಿಯೂ ಭಾಷೆಯ ತಳಹದಿಯು ಅತ್ಯಂತ ಮಹತ್ವದ ವಿಷಯವಾಗಿದೆ."

ಈ ಸಮಯದಲ್ಲಿ ಇನ್ನೊಂದು ಗಮನಾರ್ಹವಾದ ಹೇಳಿಕೆಯನ್ನು ನಾವು ಅತ್ಯವಶ್ಯಕವಾಗಿ ಲಕ್ಷಿಸಬೇಕಾಗಿದೆ. ಮದ್ರಾಸದ ಹಿಂದಿನ ಮಂತ್ರಿಗಳಾದ ಶ್ರೀ ಎ. ರಂಗನಾಥ್ ಮುದಲಿಯಾರರು 1929ರಲ್ಲಿ ಬೆಳಗಾವಿಯಲ್ಲಿ ಸೇರಿದ್ದ 4ನೇಯ ಏಕೀಕರಣ ಪರಿಷತ್ತಿನಲ್ಲಿ ಅಧ್ಯಕ್ಷ ಭಾಷಣ ಮಾಡುತ್ತ ಈ ರೀತಿ ಹೇಳಿದ್ದರು.

"ಸಾರ್ವತ್ರಿಕ ಶಿಕ್ಷಣವಿಲ್ಲದೇ ಪ್ರಜಾಪ್ರಭುತ್ವವು ನಡೆಯಲಾರದು. ಮಾತೃ ಭಾಷೆಯಿಲ್ಲದೇ ಸಾರ್ವತ್ರಿಕ ಶಿಕ್ಷಣ ದೊರೆಯಲಾರದು. ಭಾಷೆಯ ತಳಹದಿಯ ಮೇಲೆ ಪ್ರಾಂತಗಳನ್ನು ಪುನರ್‌ರಚಿಸದೆ ಮಾತೃಭಾಷೆಯು ಉಳಿಯಲಾರದು.

ಇದೇ ವಿಚಾರವಾಗಿ ಡಾ. ಪಟ್ಟಾಭಿ ಸೀತಾರಾಮಯ್ಯನವರು ಕೊಟ್ಟ ಒಂದು ಹೇಳಿಕೆಯನ್ನು ನಾವು ಗಮನಿಸಬೇಕಾಗಿದೆ.

"ರಾಷ್ಟ್ರೀಯ ಪ್ರಗತಿಗೆ ಹಳ್ಳಿಯನ್ನೇ ಮುಖ್ಯವಾಗಿಟ್ಟುಕೊಂಡ ಸ್ವರಾಜ್ಯವಿರಬೇಕು. ರಾಷ್ಟ್ರದ ಸಂಸ್ಕೃತಿಗೆ ಹಳ್ಳಿಯ ಭಾಷೆಯೇ ಭಂಡಾರವಾಗಿದೆ. ಭಾಷೆಯ ತಹದಿಯ

ಮೇಲೆ ಪ್ರಾಂತಗಳನ್ನು ರಚಿಸಲ್ಪಟ್ಟ ಮೇಲೆಯೇ ರಾಷ್ಟ್ರದ ಚಟುವಟಿಕೆಗಳಲ್ಲಿ ಹಳ್ಳಿಯು ತನ್ನ ನ್ಯಾಯವಾದ ಕಾರ್ಯವನ್ನು ಮಾಡಬಹುದು."

ಇದಲ್ಲದೇ ಇದೇ ಮುಂಬಯಿ ನಗರದಲ್ಲಿ ಸೇರಿದ ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನದ ಹತ್ತನೆಯ ಅಧಿವೇಶನದ ಸಮ್ಮೇಳನಾಧ್ಯಕ್ಷರಾಗಿದ್ದ ಮತ್ತು ನಮ್ಮ ಮುಖ್ಯ ಮಂತ್ರಿಗಳಾಗಿರುವ ಮಾನ್ಯ ಶ್ರೀ ಖೇರರವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದ್ದಾರೆ-

"ಜನತೆಯನ್ನು ಒಂದುಗೂಡಿಸುವ ಸಾಧನಗಳಲ್ಲಿ ಭಾಷೆ ತೀರ ಪ್ರಾಮುಖ್ಯವಾದದ್ದು"

ಅದೇ ಸಮ್ಮೇಳನದಲ್ಲಿ ಸರದಾರ ವಲ್ಲಭಾಯಿ ಪಟೇಲವರು ತಮ್ಮ ಭಾಷಣಲ್ಲಿ ಹೀಗೆ ಹೇಳಿದ್ದಾರೆ.

"ಸದ್ಯಕ್ಕಿದ್ದ ಹಿಂದುಸ್ತಾನದಲ್ಲಿಯ ಪ್ರಾಂತರಚನೆಯು, ಎಲ್ಲ ರೀತಿಯಿಂದಲೂ ನಿರಾಧಾರವಾಗಿದೆ ಎಂಬುದು ಎಲ್ಲರೂ ಒಪ್ಪಿದ ಮಾತಾಗಿದೆ. ಅದಕ್ಕೆ ಐತಿಹಾಸಿಕ, ಭೌಗೋಲಿಕ, ಆರ್ಥಿಕ ಅಥವಾ ಭಾಷಾ ಸಂಸ್ಕತಿಗಳ ಯಾವ ಸಂಬಂಧವೂ ಇಲ್ಲ. ಬ್ರಿಟಿಷರು ತಮ್ಮ ಶಕ್ತಿಯನ್ನು ನಮ್ಮ ನಾಡಿನಲ್ಲಿ ಬೆಳೆಸುವ ಕಾಲಕ್ಕೆ ಆ ಕಾಲದ ಅನುಕೂಲತೆಗಳನ್ನು ಮಾತ್ರ ನೋಡಿ, ಜನರ ಸಂಸ್ಕೃತಿಯ ಸಂರಕ್ಷಣೆಯ ಲೆಕ್ಕವಿಲ್ಲದೇ ಪ್ರಾಂತಗಳನ್ನು ಕೂಡಿಸಿದ್ದಾಗಿದೆ ಇಷ್ಟೆ ಅಲ್ಲದೆ ಹಾಗೆ ಆ ಪ್ರಾಂತೀಕರಣದ ವಿಷಯದಲ್ಲಿ ಜನರ ಯಾವ ಆಶೆಗಳಿಗೂ ಸ್ಥಾನವಿರಲಿಲ್ಲ. ಕೇವಲ ಆಡಳಿತದಂತಹ ಕ್ಷುಲ್ಲಕವಾದ ದೃಷ್ಟಿಯಿಂದಲೂ ಸಹಿತ ಈಗಿನ ಪ್ರಾಂತ ಸೃಷ್ಟಿಯೂ ಸಫಲವಾಗಿಲ್ಲ. ಹಿಂದುಸ್ತಾನ ಸ್ವತಂತ್ರವಾದ ನಂತರ ಮಾಡಬೇಕಾದ ಕೆಲವು ಕೆಲಸಗಳಲ್ಲಿ ಮುಖ್ಯವಾದುದು ದೇಶದಲ್ಲಿಯ ಏಕ ಭಾಷೆಯ ಪ್ರದೇಶಗಳ ಮೇಲೆ ಬ್ರಿಟಿಷ ರಾಜ್ಯಭಾರವು ಹೇರಿದ ಈ ಒಡೆತನದ ಎಡರನ್ನು ತೊಡೆದು ಹಾಕುವುದು. ಹಿಂದುಸ್ತಾನದ ಪ್ರಗತಿಯು ಶೀಘ್ರವಾಗಬೇಕಾದರೆ ಭಾಷಾನುಗುಣ ಪುನರಚನೆಯು ಆಗಲೇಬೇಕು. 1920ರಲ್ಲಿ ನಾಗಪೂರದಲ್ಲಾದ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಸಿದ್ಧವಾದ ಕಾಂಗ್ರೆಸ್ಸಿನ ಘಟನೆಯಲ್ಲಿ ಭಾಷಾನುಗುಣ ಪ್ರಾಂತರಚನೆಯ ಮುಖ್ಯ ವಿಷಯವಾಗಿತ್ತು."

ಪ್ರಜಾಪ್ರಭುತ್ವದ ಯಶಸ್ಸು ಬಹುಮಟ್ಟಿಗೆ ಭಾಷಾನುಗುಣ ಪ್ರಾಂತರಚನೆಯನ್ನೇ ಅವಲಂಬಿಸಿದೆ ಎಂಬುದು ಮೇಲಿನ ಹೇಳಿಕೆಗಳ ಆದೇಶವಾಗಿದೆ. ಪ್ರಭುತ್ವದ ಪ್ರತಿಯೊಂದು ಕಾರ್ಯದಲ್ಲಿ ಜನತೆ ಆಸ್ಥೆ ಆಸಕ್ತಿಯನ್ನು ವಹಿಸಬೇಕಾದರೆ ಭಾಷಾವಾರು ಪ್ರಾಂತಗಳು ಅನಿವಾರ್ಯವೆಂಬುದು ನಿರ್ವಿವಾದ. ಬ್ರಿಟಿಷ ಸರಕಾರದವರು ಕೂಡ ಈ ತತ್ವದ ಮೇಲೆ ಕೆಲವು ಪ್ರಾಂತಗಳನ್ನು ರಚಿಸಿದ್ದಾರೆ. ಬಂಗಾಲ, ಬಿಹಾರ, ಓಡಿಸಾ ಸಿಂಧ್ ಮುಂತಾದ ಪ್ರಾಂತಗಳು ಆ ತಳಹದಿಯ ಮೇಲೆ ರಚಿತವಾಗಿದೆ.

ಹೀಗೆ ಕೆಲವು ಭಾಗಗಳು ಭಾಷಾವಾರ ಪ್ರಾಂತರಚನೆಯ ತತ್ವವನ್ನು ಅನುಸರಿಸಿ ತೀರ್ಮಾನವಾಗಿದ್ದರೂ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳು, ಕೇರಳ, ಗುಜರಾತ ಮುಂತಾದವುಗಳ ಮಾತ್ರ, ದುರ್ದೈವದಿಂದ ಹಾಗೆಯೇ ಉಳಿದುಕೊಂಡವೊ'. ಈಗ ಸೂಚಿಸಿದ ಪ್ರಾಂತಗಳು ಪ್ರತ್ಯೇಕ ಪ್ರಾಂತವಾಗಿ ಬಾಳುವುದಕ್ಕೆ ಹಲಕೆಲವು ಅಡ್ಡಿ ಆತಂಕಗಳು ಉಂಟೆಂದು ಹೇಳಲಾಗುತ್ತದೆ ಆದರೆ ಆವೆಲ್ಲ ಪ್ರಬಲವಾದ ಆತಂಕಗಳೆಂದು ನಾನು ನಂಬುವುದಿಲ್ಲ.

ಈವರೆಗೆ ನಾನು ವಿವರಿಸಿದ ಪ್ರತಿಪಾದನೆಯನ್ನು ಅನುಲಕ್ಷಿಸಿದಲ್ಲಿ ಭಾಷಾವಾರು ಪ್ರಾಂತ ರಚನೆಯ ತೀವ್ರ ಅಗತ್ಯವು ನಮಗೆಲ್ಲ ಹೊಳೆಯದಿರದು.

ಮಾನ್ಯ ಅಧ್ಯಕ್ಷರೇ, ಇಂದಿನ ನನ್ನ ಗೊತ್ತುವಳಿಯ ಮುಖ್ಯ ಉದ್ದೇಶವೆಂದರೆ ಭಾಷಾನುಗುಣ ಪ್ರಾಂತರಚನೆಯ ತತ್ವಕ್ಕೆ ಈ ಸಭೆಯ ಒಪ್ಪಿಗೆ ಪಡೆಯುವುದು ಮಾತ್ರವಲ್ಲ. ಈ ಅಸೆಂಬ್ಲಿಯು ಅದರಂತೆ ಮದ್ರಾಸ್ ಅಸೆಂಬ್ಲಿಯು 138 ರಲ್ಲಿಯೇ ಕರ್ನಾಟಕ ಪ್ರಾಂತೀಕರಣದ ಗೊತ್ತುವಳಿಗಳ ಮೂಲಕ ಈ ತತ್ವವನ್ನು ಸ್ವೀಕರಿಸಿ ಬಿಟ್ಟಿವೆ. ಆದರೆ ಈ ತತ್ವಕ್ಕೆ ಅನುಗುಣವಾಗಿ ಭಾಷಾನುಗುಣ ಪ್ರಾಂತ ರಚನೆಗಳು ಈ ಕೂಡಲೇ ಈ ಹೊಸ ರಾಜ್ಯ ಘಟನೆಯೊಡನೆಯೇ ಅಸ್ತಿತ್ವದಲ್ಲಿ ಬರಬೇಕೆಂದು ಘಟನಾ ಸಮಿತಿಯವರಿಗೆ ಶಿಫಾರಸ್ಸು ಮಾಡವುದೇ ಇಂದಿನ ನಮ್ಮ ಮುಖ್ಯ ಕೆಲಸವಾಗಿದೆ. ಸದ್ಯಕ್ಕೆ ದಿಲ್ಲಿಯಲ್ಲಿ ಪ್ರಾರಂಭವಾಗಿರುವ ಘಟನಾ ಸಮಿತಿಯಲ್ಲಿ ಹಿಂದುಸ್ಥಾನದ ರಾಜ್ಯ ಘಟನೆಯನ್ನು ತಯಾರಿಸುವ ಕಾರ್ಯಕಲಾಪಗಳು ಪ್ರಾರಂಭವಾಗಿವೆ. ಆದುದರಿಂದ ಹಿಂದುಸ್ತಾನದ ಸಮಗ್ರ ರಾಜ್ಯಾಂಗ ರಚನೆಯ ವಿಕಾಸಕ್ಕೆ ಭಾಷೆಗಳ ತಳಹದಿಯ ಮೇಲೆ ಪ್ರಾಂತಗಳನ್ನು ಪುನರ್ರಚಿಸಬೇಕೆಂಬ ಸಂಗತಿಯು ಅತ್ಯವಶ್ಯಕ ಪೀಠಿಕೆಯಾಗಿರುವುದರಿಂದ, ಘಟನಾ ಸಮಿತಿಯು ತಾನು ಬೇಗನೆ ಕೈಕೊಳ್ಳುವ ಕಾರ್ಯಕಲಾಪಗಳಲ್ಲಿಯೇ ಈ ಪ್ರಶ್ನೆಯನ್ನು ಕುರಿತು ವಿಚಾರ ಮಾಡತಕ್ಕದ್ದು ತೀರ ಅವಶ್ಯವಿದೆ. ಆ ಘಟನಾ ಸಮಿತಿಯು ಈ ಪ್ರಶ್ನೆಯನ್ನು ಕುರಿತು ಕೂಡಲೇ ಯಾಕೆ ವಿಚಾರಿಸಬೇಕೆಂದು ಬಗ್ಗೆ ಅನೇಕ ಸಬಲ ಕಾರಣಗಳಿವೆ. ಸಿದ್ಧವಾಗಲಿರುವ ಈ ಹೊಸ ರಾಜ್ಯಘಟನೆಯಲ್ಲಿ ಭಾಷಾವಾರು ಪ್ರಾಂತಗಳು ಆಗದೆ ಉಳಿದಲ್ಲಿ ಹಿಂದುಸ್ತಾನದ ರಾಜ್ಯ ಘಟನೆಯು ಸಮಗ್ರ ರೀತಿಯಿಂದ ಬಲಿಷ್ಟವಾಗಲಾರದು. ಹೆಚ್ಚೇಕೆ ಅರ್ಧ ಹಿಂದುಸ್ಥಾನವೇ ದುರ್ಬಲವಾಗಿ ಅದಕ್ಕೆ ಅರ್ಧಾಂಗ ವಾಯು ರೋಗ ತಗಲಿತೆಂದೇ ಹೇಳಬೇಕು. ಸಮಗ್ರ ಹಿಂದುಸ್ತಾನವು ಬಲಿಷ್ಟವಾಗಿ ಉಳಿಯಬೇಕಾದರೆ ಆದರ ಅಂಗಗಳಾದ ಪ್ರಾಂತಗಳು ಸಹ ಬಲಿಷ್ಠವಾಗಿರಲಿಕ್ಕೇ ಬೇಕು. ಭಾಷಾವಾರು ಪ್ರಾಂತ ರಚನೆಯ ಬೇಡಿಕೆಯು ಹಿಂದುಸ್ತಾನದ ದಾಸ್ಯವಿಮೋಚನೆಯ ಕಾರ್ಯಭಾರದಲ್ಲಿ ಹಲವು ದಿನಗಳಿಂದ ಮುಂದುವರಿಯುತ್ತಾ ಬಂದಿರುವುದು. ನಾವೇ ನಮ್ಮ ರಾಜ್ಯ ಘಟನೆಯನ್ನು ಸಿದ್ಧಮಾಡುವ ಈ ಕಾಲದಲ್ಲಿ ನಮ್ಮೆಲ್ಲರಿಗೆ ಯೋಗ್ಯವಾಗಿರುವ ರಾಜ್ಯಘಟನೆಯನ್ನು ತಯಾರಿಸುವುದೇ ಅತ್ಯಂತ ಅವಶ್ಯಕ ಮತ್ತು ವಿಹಿತವಾದದ್ದು ಅದೆ.

ಪ್ರಾಂತ ರಚನೆಯು ಈ ಹೊಸ ರಾಜ್ಯ ಘಟನೆಯೊಡನೆಯೇ ನಿರ್ಮಾಣವಾಗುವ ಆವಶ್ಯಕತೆಯ ಬಗ್ಗೆ ಮತ್ತು ಹೇಳಬೇಕಾದುದೇನೆಂದರೆ, ಈಗ ಈ ಪ್ರಶ್ನೆಯನ್ನು ಬಿಡಿಸದಿದ್ದಲ್ಲಿ ಮುಂದೆ 10 ವರುಷವೋ, 20 ವರುಷವೋ ಈ ವಿಷಯವು ಹಾಗೆ ಉಳಿಯಬಹುದು. ಪ್ರಾಂತಗಳ ಪುನರ್ವಿಭಜನೆಯಾಗದೆ ಉಳಿದರೆ ಈಗಿದ್ದ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಭಾಗವು ಒಂದಿಲ್ಲೊಂದು ರೀತಿಯಿಂದ ಗುಲಾಮಗಿರಿಯಲ್ಲಿ ಉಳಿದು ಅವು ದುರ್ಬಲ ಪ್ರದೇಶವಾಗುವುದು ನಿಶ್ಚಯ. ಕರ್ನಾಟಕ ಮಟ್ಟಿಗಂತೂ ಭಾಷಾವಾರು ಪ್ರಾಂತವು ದೊರೆಯದಿದ್ದರೆ ಕೆಲವು ವರುಷಗಳಲ್ಲಿ ಅದರ ಅಸ್ತಿತ್ವವೇ ನಾಶವಾಗುವ ಭೀತಿ ಇದೆ.

ಮಾನ್ಯ ಅಧ್ಯಕ್ಷರೇ, ಘಟನಾ ಸಮಿತಿಯ ಮುಂದೆ ಅನೇಕ ಅಡಚಣೆಗಳಿವೆ ಎಂಬ ಅರಿವು ನಮಗಿದೆ. ಆದರೆ ಕಾಂಗ್ರೆಸ್ಸು ಹಲವು ತೊಡಕಿನ ಅಡಚಣೆಗಳನ್ನು ಸುಲಭವಾಗಿ ಬಿಡಿಸುತ್ತಿರುವಾಗ ಇದನ್ನು ಸಹ ಬಿಡಿಸಲು ಹಣಗಬೇಕಾದ್ದು ಅದರ ಕರ್ತವ್ಯ.

ಇಲ್ಲಿಯವರೆಗೆ ಕರ್ನಾಟಕ ಮುಂತಾದ ಪ್ರಾಂತಗಳು ತಮ್ಮ ಪ್ರಾಂತಗಳನ್ನು ರಚಿಸಿಕೊಳ್ಳುವ ಹಲವು ಸಂಧಿಗಳನ್ನು ಕಾಂಗ್ರೆಸ್ಸಿನ ಶಿಸ್ತು ಹಾಗೂ ಗೌರವ ಪಾಲಿಸವುದರ ಸಲುವಾಗಿ ಕಳೆದುಕೊಂಡಿವೆ. ಉದಾಹರಣೆಗಾಗಿ ಹೇಳಬೇಕೆಂದರೆ ಕರ್ನಾಟಕವು ಸೈಮನ್ ಕಮೀಶನ್‌ದ ವೇಳೆಗೆ ಸಹಕರಿಸಿದ್ದರೆ ಸಿಂಧ್‌ದಂತೆ ಸ್ವತಂತ್ರ ಪ್ರಾಂತವಾಗಬಹುದಾಗಿತ್ತು ಎಂದು ಈಗಲೂ ಎಷ್ಟೋ ಕನ್ನಡಿಗರು ವಾದಿಸುತ್ತಿದ್ದಾರೆ. ಇಲ್ಲಿಯವರೆಗೆ ತ್ಯಾಗ ಮಾಡಿದ ದಕ್ಷಿಣ ಹಿಂದುಸ್ತಾನವನ್ನು ಕಾಂಗ್ರೆಸು ನಿರ್ದಾಕ್ಷಿಣ್ಯದಿಂದ ಈಗ ಕೈಬಿಡುವುದಿಲ್ಲವೆಂದು ನಂಬುತ್ತೇನೆ.

ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನದ ಹತ್ತನೆಯ ಅಧಿವೇಶನದಲ್ಲಿ ಸರದಾರ ವಲ್ಲಭಭಾಯಿ ಪಟೇಲರವರ ಭಾಷಣದಲ್ಲಿಯ ವಾಕ್ಯವು ಸಹ ಈ ಪ್ರಶ್ನೆಯ ಅವಸರವನ್ನು ತೋರಿಸುತ್ತಿದೆ. ಅವರು ಹೀಗೆ ಹೇಳಿದ್ದಾರೆ.

## ಕರ್ನಾಟಕ ಏಕೀಕರಣಕ್ಕಾಗಿ ಶ್ರೀ ದೊಡ್ಡಮೇಟಿಯವರ ಒತ್ತಾಸೆ

"ಹಿಂದುಸ್ತಾನವು ಸ್ವತಂತ್ರವಾದ ನಂತರ ಮಾಡಬೇಕಾದ ಕೆಲವು ಕೆಲಸಗಳಲ್ಲಿ ಮುಖ್ಯವಾದುದು ದೇಶದಲ್ಲಿಯ ಏಕಭಾಷೆಯ ಪ್ರದೇಶಗಳ ಮೇಲೆ ಬ್ರಿಟಿಷ್ ರಾಜ್ಯಾಧಿಕಾರವು ಹೇರಿದ ಈ ಒಡೆತನದ ಎಡರನ್ನು ತೊಡೆದು ಹಾಕುವುದು. ಹಿಂದುಸ್ತಾನದ ಪ್ರಗತಿಯು ಶೀಘ್ರವಾಗಬೇಕಾದರೆ ಭಾಷಾನುಗುಣ ಪ್ರಾಂತ ರಚನೆಯ ಆಗಲೇಬೇಕು."

ಈಗಾಗಲೇ ಮಹಾರಾಷ್ಟ್ರದಲ್ಲಿ ಸಂಯುಕ್ತ ಮಹಾರಾಷ್ಟ್ರ ಪ್ರಾಂತವನ್ನು ನಿರ್ಮಿಸುವ ಬಗ್ಗೆ ಅನೇಕ ಪ್ರಯತ್ನ ನಡೆದಿವೆ. ಅದರಂತೆಯೇ ಗುಜರಾತ್ ಪ್ರಾಂತದಲ್ಲಿಯೂ ಸಹ ಗುಜರಾತದ ಏಕೀಕರಣ ಬಗ್ಗೆ ಅನೇಕ ಸಭೆ ಸಮ್ಮೇಳಗಳು ನಡೆದು ಪ್ರಯತ್ನ ನಡೆದಿದೆ.

1740-4

ಗುಜರಾತವಲ್ಲಿ ಶ್ರೀ ಕೆ.ಎಮ್. ಮುನಶಿಯವರ ಅಧ್ಯಕ್ಷತೆಯಲ್ಲಿ ಕೂಡಿದ ಬ್ರಹತ್ ಗುಜರಾತ್ ಪರಿಷತ್ತನ್ನು ಇಲ್ಲಿ ಉಲ್ಲೇಖಿಸಬಹುದು.

**ಶ್ರೀ ಬಿ.ಜಿ. ಖೇರ್:** ಬೃಹತ್ ಗುಜರಾತ್ ಎಂಬುದು ಇರುವುದಿಲ್ಲ. ಆದರೆ ನವ ಗುಜರಾತ್ ಅಂತಾ ಇರುವುದು.

**ಶ್ರೀ ಎ.ಜೆ. ದೊಡ್ಡಮೇಟಿ:** ಆ ಪರಿಷತ್ತು ಬೃಹತ್ ಅಂತಾ ಇರದೇ ನವ ಗುಜರಾತ್ ಅಂತಾ ಇರಬಹುದು. ಆದರೆ ಗುಜರಾತಿ ಭಾಷೆಯನ್ನಾಡುವ ಎಲ್ಲ ಭಾಗಗಳನ್ನು ಒಂದುಗೂಡಿಸಿ ಪ್ರತ್ಯೇಕವಾದ ಒಂದು ಗುಜರಾತ್ ಪ್ರಾಂತವನ್ನು ನಿರ್ಮಿಸುವುದೇ ಅವರ ಪ್ರಯತ್ನವಿರುತ್ತೆ. ಆದರೆ ಮಹಾರಾಷ್ಟ್ರದ ಜನರಿಗೆ ಏಕೀಕೃತವಾದ ಮಹಾರಾಷ್ಟ್ರ ಪ್ರಾಂತ ಬೇಕಾಗಿದೆ. ಅದಕ್ಕಾಗಿ ಸತತ ಪ್ರಯತ್ನ ನಡೆಸಿದ್ದಾರೆ. ಅದರಂತೆಯೇ ಕನ್ನಡಿಗರಿಗಾದರೂ ಕನ್ನಡ ಭಾಷೆಯಿರುವ ಎಲ್ಲ ಭಾಗಗಳನ್ನು ಒಂದುಗೂಡಿಸಿದ ಪ್ರತ್ಯೇಕ ಕರ್ನಾಟಕ ಪ್ರಾಂತ ಬೇಕಾಗಿದೆ. ಸ್ವತಂತ್ರ ಗುಜರಾತ್, ಸ್ವತಂತ್ರ ಮಹಾರಾಷ್ಟ್ರ, ಸ್ವತಂತ್ರ, ಕರ್ನಾಟಕ ಪ್ರಾಂತಗಳು ನಮಗಿಂದು ಸ್ವರಾಜ್ಯದಷ್ಟೇ ಮಹತ್ವದ ವಿಷಯವಾಗಿದೆ. (Hear, Hear.)

ಸದ್ಯಕ್ಕಿರುವ ಪ್ರಾಂತಗಳಲ್ಲೂ ಯಾವ ತತ್ವವನ್ನು ಅನುಸರಿಸದೆಯೇ ಬೆಳೆದಿದ್ದು ಅವುಗಳಲ್ಲಿಯ ವಿಭಾಗಗಳು ಕೇವಲ ಕೃತಕವಾಗಿವೆ. ಅದರಲ್ಲಿಯ ವಿಭಾಗಗಳು ಪ್ರಾದೇಶಿಕ ವಿಭಜನೆಯ ತತ್ವವನ್ನು ಅನುಸರಿಸದೆ ಕೇವಲ ಪ್ರದೇಶಗಳನ್ನು ಬೆಳೆಸುವುದಕ್ಕಾಗಿಯೇ ಅಥವಾ ಗೆದ್ದ ಪ್ರದೇಶವನ್ನು ತಮ್ಮಲ್ಲಿ ಒಳಪಡಿಸುವುದಕ್ಕಾಗಿಯೇ ರಚಿಸಲ್ಪಟ್ಟಿರುತ್ತವೆ. ಹೀಗೆ ಹರಿದು ಹಂಚಿಹೋದ ಪ್ರದೇಶಗಳನ್ನು ಒಂದು ಮಾಡುವುದೇ ಮುಂದೆ ಬರುವ ನಮ್ಮ ಸ್ವತಂತ್ರ ಭಾರತ ಸರಕಾರದ ಮುಖ್ಯ ಕಾರ್ಯವಾಗಬೇಕಾಗಿದೆ. ಸದ್ಯಕ್ಕಿರುವ ಪ್ರಾಂತ ರಚನೆಯನ್ನು ಕನ್ನಡಿಗರು, ಆಂಧ್ರರು, ಕೇರಳರು, ಮರಾಠಿಗರು, ಗುಜ್ಜರು ಒಪ್ಪುವುದಿಲ್ಲ. ಅರ್ಥಾತ್ ಈ ಸಮಸ್ಯೆಯು ಕೇವಲ ಕರ್ನಾಟಕದ್ದಲ್ಲ. ಕೇವಲ ಆಂಧ್ರದ್ದಲ್ಲ. ಕೇವಲ ಮಹಾರಾಷ್ಟ್ರದ್ದಲ್ಲ. ಇದು ಅರ್ಧ ಹಿಂದುಸ್ಥಾನದ ಪ್ರಶ್ನೆಯಾಗಿದೆ. ಭಾಷಾವಾರು ಪ್ರಾಂತರಚನೆಯಾಗದಿದ್ದಲ್ಲಿ ಅರ್ಧ ಹಿಂದುಸ್ತಾನಕ್ಕೆ ಸ್ವರಾಜ್ಯದಿಂದ ದೊರೆಯಬೇಕಾದ ಸುಖಶಾಂತಿಗಳು ದೊರೆಯಲಾರವು. ಭಾಷಾವಾರು ಪ್ರಾಂತೀಕರಣದ ಈ ಬೇಡಿಕೆಯು ಕೇವಲ ಪ್ರಾಂತಾಭಿಮಾನದಿಂದ ಬಂದಿದೆಯೆಂದು ಮಾತ್ರ ಯಾರೂ ತಿಳಿಯಬಾರದು. ಅಥವಾ ಅದು ಕೇವಲ ಭಾವನಾಪೂರಿತವಾದದ್ದೂ ಅಲ್ಲ. ಅದಕ್ಕೊಂದು ತತ್ವಜ್ಞಾನವಿದೆ. ಒಂದು ಸಿದ್ಧಾಂತವಿದೆ. ಹೆಚ್ಚೇನು ಅದಕ್ಕೆ ನಿಸರ್ಗದ ಬೆಂಬಲವಿದೆ.

ಅಧ್ಯಕ್ಷ ಮಹಾಶಯರೇ, ಈ ರೀತಿ ನಿರ್ಮಿತವಾದ ಪ್ರಾಂತಗಳು ತನ್ನ ಉತ್ಕರ್ಷವನ್ನು ಸಾಧಿಸಿಕೊಂಡು ಸಮಗ್ರ ಹಿಂದುಸ್ತಾನದ ವಿಕಾಸಕ್ಕೆ ಪರಿಪೋಷಕವಾಗಬಲ್ಲದೇ ಹೊರತು ಅದರಿಂದ ಹಿಂದುಸ್ತಾನದ ಐಕ್ಯಕ್ಕೆ ಹಾನಿಯಂತೂ ಇಲ್ಲ. ದೇಶದ ಕೆಲವು ಘಟಕಗಳು ಅರ್ಥಾತ್ ಕೆಲವು ಪ್ರಾಂತಗಳು ಬಲಿಷ್ಠರಾದರೇನೇ ಸಮಗ್ರ ಹಿಂದುಸ್ತಾನವು ಬಲಿಷ್ಠವಾಗಬಲ್ಲದು. ಈ

ಮಾತನ್ನು ಅನುಲಕ್ಷಿಸಿಯೇ 1935ರ ಹಿಂದುಸ್ತಾನ ಕಾಯಿದೆಯ ನಿಯಮ 290ರಲ್ಲಿದ್ದ ಪ್ರಾಂತಗಳಲ್ಲಿಯ ಭಾಗಗಳನ್ನು ಬೇರ್ಪಡಿಸಿ ಹೊಸ ಪ್ರಾಂತಗಳನ್ನು ನಿರ್ಮಿಸುವುದನ್ನು ಸೂಚಿಸಲಾಗಿದೆಯೆಂದು ನಾನು ತಿಳಿಯುತ್ತೇನೆ. ಕಾರಣಾಂತರಗಳಿಂದ ಈ ಕಲಮಿನ ಉಪಯೋಗ ಮಾಡಿಕೊಳ್ಳುವುದು ನಮಗಾಗಲಿಲ್ಲ, ಇರಲಿ, ಮಾನ್ಯರೇ, ಸ್ವಾಭಾವಿಕ ಸಂಬಂಧವಿಲ್ಲದ ಜನರನ್ನು ಒಂದೆಡೆ ಸೇರಿರುವ ಮತ್ತು ಬೇರೊಂದು ಯೋಜನೆಯ ಪ್ರಕಾರ ಸ್ವಾಭಾವಿಕವಾಗಿ ಕೂಡಬಹುದಾದ ಜನರನ್ನು ಬೇರ್ಪಡಿಸಿರುವ ಶ್ರೇಷ್ಠ ಉದಾಹರಣೆಯೆಂದರೆ ಮುಂಬಯಿ ಮತ್ತು ಮದ್ರಾಸ್ ಇಲಾಖೆಗಳು.

ಈ ಸಂಬಂಧದಲ್ಲಿ ಆಗುವ ಹೆಚ್ಚುಕಡಿಮೆಗಳು ನಮ್ಮ ಮುಂಬಯಿ ಪ್ರಾಂತಕ್ಕೆ ಹೇಗೆ ಅನ್ವಯಿಸಲ್ಪಡಬಹುದು ಎಂಬುದನ್ನು ಸ್ವಲ್ಪ ವಿಚಾರ ಮಾಡುವಾ; ಮುಂಬಯಿ ಪ್ರಾಂತದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ಹೀಗೆ ಮೂರು ಭಾಗಗಳು ಆಗಬಹುದು. ಈ ಪ್ರಕಾರ ಉಂಟಾಗುವ ಮೂರು ಪ್ರಾಂತಗಳ ಅರ್ಹತೆಯನ್ನು ನಾವು ವಿವೇಚಿಸುವುದು ಸಮಯೋಚಿತವಾಗಿದೆ. ಗುಜರಾತದ ಮಟ್ಟಿಗೆ ಹೇಳಬೇಕೆಂದರೆ ಭಾರತದಲ್ಲಿಯೇ ಹೆಚ್ಚಿನ ಉದ್ಯೋಗ ಹಾಗೂ ಧನಶಕ್ತಿಯನ್ನು ಪಡೆದು ಇಂದು ತಾನು ಒಂದು ಮೂಲೆಯಲ್ಲಿ ಇದ್ದರೂ ಇಡೀ ಹಿಂದುಸ್ತಾನದ ಮೇಲೆ ಒಂದು ಹಿಡಿತವನ್ನು ಸ್ಥಾಪಿಸಿದ ಗುಜರಾತ ಪ್ರಾಂತದ ಅರ್ಹತೆಯನ್ನು ಸಿದ್ಧ ಮಾಡಹೋಗುವುದು ಹುಚ್ಚುತನವಾದೀತು. ಕಾರಣ ಅದರ ಯೋಗ್ಯತೆಯ ಸ್ವಯಂ ಸಿದ್ಧವಿದೆ. ಇನ್ನು ಮಹಾರಾಷ್ಟ್ರದ ಬಗ್ಗೆ ಹೇಳಬೇಕಾದರೆ ಶಿವಾಜಿ ಮಹಾರಾಜ ಹಾಗೂ ಪೇಶ್ವೆಯ ಕಾಲದಿಂದ ಒಂದು ಐತಿಹಾಸಿಕ ಉಜ್ವಲತೆಯನ್ನು ಪಡೆದು ಇಂದು ಮುಂಬಯಿ ಪ್ರಾಂತದ ವಿಸ್ತಾರವಾದ ಭಾಗವನ್ನು ವ್ಯಾಪಿಸಿ, ಮಧ್ಯಪ್ರಾಂತದಲ್ಲಿಯೂ ಸಾಕಷ್ಟು ಪ್ರದೇಶವುಳ್ಳ ಆ ನಾಡು ಒಂದು ಪ್ರಾಂತವಾಗಲು ತೀರ ತಕ್ಕದೆಂದು ಹೇಳಬಹುದು. ಈ ಬಗ್ಗೆ ಹೆಚ್ಚಿನ ವಿವರವನ್ನು ಆಯಾ ಪ್ರಾಂತದ ಮಾನ್ಯ ಸದಸ್ಯರೇ ತಿಳಿಸಿದಲ್ಲಿ ಹೆಚ್ಚು ನೆಟ್ಟಗಾದೀತು. ಇನ್ನು ಕರ್ನಾಟಕದ ಬಗ್ಗೆ ತುಸು ವಿವರವಾಗಿ ಹೇಳುವುದು ನನ್ನ ಕರ್ತವ್ಯವಾಗಿರುತ್ತದೆ.

ಕನ್ನಡ ಪ್ರಾದೇಶಿಕ ಭಾಷೆಯಿರುವ ಕರ್ನಾಟಕ ಪ್ರಾಂತವನ್ನು ನಿರ್ಮಿಸುವ ಬಗ್ಗೆ ಈ ಸಭೆಯಲ್ಲಿಯೇ ನನ್ನ ಮಿತ್ರರಾದ ಮಾನ್ಯ ಶ್ರೀ ಜೋಗರವರಿಂದ ಮಂಡಿಸಲ್ಪಟ್ಟ ಗೊತ್ತುವಳಿಯು 1938ನೇ ಇಸವಿಯ, ಏಪ್ರಿಲ್ 5ನೇ ತಾರೀಖಿನ ದಿವಸ ಅಂಗೀಕರಿಸಲ್ಪಟ್ಟಿದೆ. ಆ ಗೊತ್ತುವಳಿಯು ಹೀಗೆ ಅದೆ.

"ಕನ್ನಡ ಭಾಷೆಯನ್ನೇ ಮುಖ್ಯವಾಗಿ ಮಾತನಾಡುವ ಎಲ್ಲ ಭಾಗಗಳನ್ನು ಸೇರ್ಪಡಿಸಿ, ಸ್ವಯಂ ಶಾಸನದ ಆಡಳಿತ, ಕರ್ನಾಟಕ ಪ್ರಾಂತವೆಂಬ ಹೆಸರಿನ ಒಂದು ಹೊಸ ಪ್ರಾಂತವನ್ನು ನಿರ್ಮಿಸುವುದಕ್ಕಾಗಿ ವ್ಯವಸ್ಥೆಯನ್ನು ಆದಷ್ಟು ತೀವ್ರವಾಗಿ ಮಾಡಬೇಕೆಂಬ ಈ ಸಭೆಯ ಅಭಿಪ್ರಾಯವನ್ನು ಸಾರ್ವಭೌಮ ಸರಕಾರಕ್ಕೆ ತಿಳಿಸಬೇಕೆಂದು, ಈ ಅಸೆಂಬ್ಲಿಯು ಸರಕಾರಕ್ಕೆ ಶಿಫಾರಸ್ಸು ಮಾಡುತ್ತದೆ."

ಈ ಸಭಾಗೃಹದಲ್ಲಿ ಈ ಗೊತ್ತುವಳಿಯ ಚರ್ಚೆಯ ಕಾಲಕ್ಕೆ ಸುದೀರ್ಘವಾಗಿ ಎಲ್ಲವೂ ವಿವೇಚಿಸಲ್ಪಟ್ಟಿದೆ. ಕಾರಣ ಇನ್ನೂ ಹೆಚ್ಚು ದೀರ್ಘವಾಗಿ ಆ ವಿಷಯದಲ್ಲಿ ಪ್ರವೇಶಿಸಲು ನಾನು ಇಚ್ಛಿಸುವುದಿಲ್ಲ. ಆದರೆ ಕೆಲವು ಮಾತುಗಳನ್ನು ಸ್ಪಷ್ಟೀಕರಿಸುವುದು ಅವಶ್ಯವಿದೆ.

ಮಹಾಶಯರೇ, ಕರ್ನಾಟಕ ಪ್ರಾಂತೀಕರಣವೆಂದರೆ ಏನಲ್ಲ ಎಂಬುದನ್ನು ನಾನು ಮೊದಲಿಗೆ ಸ್ಪಷ್ಟಪಡಿಸುತ್ತೇನೆ. ಇದು ಕೇವಲ ಪ್ರಾಂತಾಭಿಮಾನದ ಬಗ್ಗೆ ಇರುವ ನಮ್ಮ ಭಾವನೆ ಅಲ್ಲ. ಇಂದು ರಾಷ್ಟ್ರೀಯತೆಯೆಂಬುದು ಕೂಡ ಒಂದು ಉಪಹಾಸಕ್ಕೆ ಈಡಾಗಿ ಜಗತ್ತಿನಲ್ಲಿ ವಿಶ್ವದೃಷ್ಟಿ, ವಿಶ್ವಬಾಂಧವ್ಯ ಬೆಳೆದು ಬರುತ್ತಿರುವುದನ್ನು ನಾವು ಕಣ್ಣಾರೆ ಕಂಡು ಕೇವಲ ಪ್ರಾಂತಾಭಿಮಾನಕ್ಕಾಗಿ ಬಡಿದಾಡುತಿರುವರೆಂದು ಯಾರಾದರೂ ತಿಳಿದಲ್ಲಿ ಅದೊಂದು ಅಗಾಧ ಅಜ್ಞಾನವೆಂದೇ ಹೇಳಬಹುದು. ನಮ್ಮ ಬೇಡಿಕೆಗೆ ನಿಸರ್ಗದ ಬೆಂಬಲವಿದೆ. ಅದು ಶಾಸ್ತ್ರ ಶುದ್ಧವಾದುದು. ತರ್ಕಬದ್ಧವಾದುದು. ಇದನ್ನೆಲ್ಲಾ ಈ ಮೊದಲೇ ಸಾಕಷ್ಟು ವಿವೇಚಿಸಿದ್ದೇನೆ. ಏಕತೆಯಲ್ಲಿ ವಿವಿಧತೆಯು ದೇವನ ಲೀಲೆ ಅನಿವಾರ್ಯವಾದ ಸಮನ್ವಯ, ವಿವಿಧತೆಯನ್ನು ಅದಕ್ಕೆ ಅನುಗುಣವಾಗಿ ಬೆಳೆಸಲೇಬೇಕು. ಈ ಹಿನ್ನೆಲೆಯಿಂದಲೇ ನಾವು ಪ್ರತ್ಯೇಕ ಪ್ರಾಂತವನ್ನು ಕೇಳುತ್ತಿದ್ದೇವೆ. ಕರ್ನಾಟಕ ಪ್ರಾಂತವು ಕಾಲಗತಿಯಿಂದ ಬೇರೆ ಬೇರೆ ಆಡಳಿತಕ್ಕೆ ಒಳಪಟ್ಟು ಇಂದು 9 ತುಂಡುಗಳಾಗಿ ಕತ್ತರಿಸಟ್ಟಿವೆ. ಎಂಬುದು ಎಷ್ಟು ಶೋಚನೀಯವಾದುದೆಂಬದನ್ನು ಸಭೆಯೇ ವಿಚಾರಿಸಲಿ. ಈ 19 ತುಂಡುಗಳು ಮದ್ರಾಸ, ಮುಂಬಯಿ, ಕೊಡಗು, ಮೈಸೂರು ಹೈದ್ರಾಬಾದ್ ಹಾಗೂ ಇನ್ನುಳಿದ ಚಿಕ್ಕಪುಟ್ಟ ಸಂಸ್ಥಾನಗಳಲ್ಲಿ ವಿಭಾಗಿಸಲ್ಪಟ್ಟಿವೆ. ಈ ಎಲ್ಲ ಭಾಗಗಳನ್ನು ಒಂದೇ ಆಡಳಿತದಯಲ್ಲಿ ತಂದು ಒಂದು ಸ್ವಾಯತ್ ಪ್ರಾಂತವನ್ನು ನಿರ್ಮಿಸುವುದೇ ಇಂದು ಕನ್ನಡಿಗರ ಅಂದೋಲನದ ಉದ್ದೇಶವಾಗಿದೆ. ಆದುದರಿಂದ ಕರ್ನಾಟಕಕ್ಕೆ ಒಂದು ಸ್ವತಂತ್ರ ಪ್ರಾಂತ ಬೇಕಾಗಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಈ ರೀತಿ ಹೊಸ ಪ್ರಾಂತವನ್ನಾಗಿ ನಿರ್ಮಿಸಲ್ಪಡುವ ಅಖಂಡ ಕರ್ನಾಟಕವು 1,47,268 ಚ.ಮೈಲು ವಿಸ್ತಾರವುಳ್ಳದ್ದೂ, 1,90,00,000 ಜನಸಂಖ್ಯೆವುಳ್ಳದ್ದೂ. ಸುಮಾರು 20 ಕೋಟಿ ರೂಪಾಯಿಗಳ ಆದಾಯುವುಳ್ಳ ಪ್ರಾಂತದವಾಗಬಲ್ಲದಾದ ಬಲಿಷ್ಠ ಪ್ರದೇಶವಿದೆ. ಸದ್ಯದ ಬ್ರಿಟಿಷ್ ಕರ್ನಾಟಕವೆಂದು ಕರೆಯಲ್ಪಡುವುದನ್ನೆಷ್ಟೇ ತೆಗೆದುಕೊಂಡರೆ, 47,778 ಚ. ಮೈಲು ವಿಸ್ತೀರ್ಣವು, 82,58,240 ಜನಸಂಖ್ಯೆಯುಳ್ಳದ್ದೂ, ಸುಮಾರು 10 ಕೋಟಿ ರೂಪಾಯಿ ಉತ್ಪನ್ನವುಳ್ಳದ್ದಾದ ಪ್ರಾಂತವಾಗುತ್ತದೆ. ಕರ್ನಾಟಕವು ಎಂದಿನಿಂದಲೂ ಸಾಮ್ರಾಜ್ಯವಾಗಿ ಮೆರೆದದ್ದು ಅದು ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ, ಅದಿಲ್‌ಶಾಹಿ ಹಾಗೂ ಹೈದರಾಲಿ ವಂಶಜರು ಇವರೆಲ್ಲ ತಮ್ಮ ರಾಜ್ಯಭಾರವನ್ನು ನಡೆಸಿದರು. ಕರ್ನಾಟಕವು ಒಂದು ಕಾಲಕ್ಕೆ ನಾಗರೀಕತೆಯ ಶಿಖರವನ್ನು ಏರಿತ್ತು. ವಿಜಯನಗರ ಸಾಮ್ರಾಜಯದ ವೈಭವವನ್ನು ನೆನೆದರಂತೂ ಮೈ ರೋಮಾಂಚನಗೊಳ್ಳುತ್ತದೆ. ಈ ಬಗ್ಗೆ ಪಂಡಿತ ಜವಾಹರಲಾಲ ನೆಹರು

ಇವರ ಜಾಗತಿಕ ಇತಿಹಾಸದ ಇಣುಕು ನೋಟ ಎಂಬ ಜಾಗತಿಕ ಚರಿತ್ರೆಯಲ್ಲಿ ಇರುವ ವರ್ಣನೆಯನ್ನು ಮಾನ್ಯ ಸದಸ್ಯರು ಓದಬೇಕೆಂದು ಸೂಚಿಸುತ್ತೇನೆ. ಜಕ್ಕಣಾಚಾರ್ಯರ ಶಿಲ್ಪಕಲೆಯು ಇಂದು ಕರ್ನಾಟಕದ ಕೀರ್ತಿಯನ್ನು ಕೈಯೆತ್ತಿ ತೋರಿಸುತ್ತದೆ. ಪಂಪ, ರನ್ನ, ಪೊನ್ನ, ಷಡಕ್ಷರಿ, ಕುಮಾರವ್ಯಾಸ, ಲಕ್ಷ್ಮೀಶಹರಿಹರ ಮುಂತಾದ ಕವಿಗಳ ಕಾವ್ಯ ಸಾಮ್ರಾಜ್ಯವು ನಮ್ಮೆಲ್ಲರನ್ನು ಬೆರಗುಗೊಳಿಸುತ್ತದೆ. ಶಿವಶರಣರ ವಚನಗಳು, ದಾಸರ ಕೀರ್ತನೆಗಳು ಶರೀಫ ಸಾಹೇಬರ ಲಾವಣಿಗಳು ನಮ್ಮೆಲ್ಲರನ್ನು ಅಧ್ಯಾತ್ಮಸಾಗರದಲ್ಲಿ ತೇಲಿಸುತ್ತವೆ. ಇಷ್ಟೆಲ್ಲ ವೈಭವ ಪೂರ್ಣವಾದ ಕರ್ನಾಟಕಕ್ಕೆ ಇಂದು ಒದಗಿದ ಗತಿಯು ಕಡು ಕಲ್ಲೆದೆಯವರನಿಗೂ ಕನಿಕರ ಹುಟ್ಟಿಸುವಂತೆಯಾಗಿದೆ. ಪ್ರತಿಯೊಂದಕ್ಕೂ ಹೆರವರ ಮುಖ ನೋಡಬೇಕಾಗಿದೆ. ಸ್ವತಂತ್ರ ಅಸ್ತಿತ್ವವಿರುವ ತನ್ನದಾದ ಬಾಳು ಅದಕ್ಕೆ ಇಂದು ಇಲ್ಲದಾಗಿದೆ. ಈ ಅಸ್ತಿತ್ವವನ್ನು ಮರಳಿ ತಂದುಕೊಡಬೇಕೆಂಬುದು ಏಕೀಕರಣ ಕೂಗಿನ ಹೆಗ್ಗುರಿಯಾಗಿದೆ. ಇಂದಾದರೂ ಕರ್ನಾಟಕದಲ್ಲಿ ಬಲಿತು ಬಾಳಲು ಸಾಕಷ್ಟು ಸಾಧನ ಸಾಮಗ್ರಿಯಿದೆ. ವಿಶಾಲವಾದ ಭೂಪ್ರದೇಶ ಸುಮಾರು 300 ಮೈಲು ವಿಸ್ತಾರವಾದ ಕರಾವಳಿ ಪ್ರದೇಶ, ಅತ್ಯುತ್ತಮ ಬಂದರಕ್ಕೆ ಅನಕೂಲವಿದ್ದ ಕಾರವಾರ, ಭಟ್ಕಳ ಮುಂತಾದ ಸ್ಥಳಗಳು, ಕಾರವಾರ ಜಿಲ್ಲೆಯ ನಿಬಿಡವಾದ ಅರಣ್ಯ, ಈ ಎಲ್ಲ ಅನುಕೂಲತೆಯುಳ್ಳ ನಾವು ಯೂತರಲ್ಲಿ ಕಡಿಮೆಯೆಂದು ಹೇಳಬಹುದು? ಹಲವಾರು ಕಲಾ ಕೈಗಾರಿಕೆಯನ್ನು ಹೊರಡಿಸಲು ನಮ್ಮಲ್ಲಿ ಅವಶ್ಯಕ ಸ್ಥಾನ ಹಾಗೂ ಸಾಮಗ್ರಿಗಳ ಯಾದಿಯನ್ನೇ ನಾನು ಹೇಳಬಹುದು. ಆದರೆ ಅಷ್ಟು ವೇಳೆ ಇಲ್ಲಾ. ತನ್ನದೇ ಆದ ಪ್ರಾಂತವನ್ನು ರಚಿಸಿಕೊಂಡಲ್ಲಿ ಅದು ಯಾವ ರೀತಿ ಬೆಳೆಯಬಲ್ಲದು ಎಂಬ ಬಗ್ಗೆ ಒಂದು ಶ್ರೇಷ್ಠ ಉದಾಹರಣೆಯನ್ನು ಇಲ್ಲಿ ಕೊಡಬಯಸುತ್ತೇನೆ. ನನ್ನ ನಾಡಿನದೇ ಒಂದು ಭಾಗವಾದ ಮೈಸೂರು ಇಂದು ಅಲ್ಲಿ ಪ್ರಜಾಸತ್ತಾತ್ಮಕ ರಾಜ್ಯವಿಲ್ಲ. ಆದರೂ ರಾಜ ಸತ್ತಾತ್ಮಕ ಆಡಳಿತವಿದೆ. ಆದರೂ ಅಲ್ಲಿಯ ಪ್ರಗತಿಯನ್ನು ನೋಡಿ, ಮೈಸೂರ ಸಂಸ್ಥಾನವಾದರೂ 29,458 ಚದುರ ಮೈಲು ವಿಸ್ತೀರ್ಣವಿದ್ದು ಬ್ರಿಟಿಷ್ ಕರ್ನಾಟಕಕ್ಕಿಂತಲೂ ವಿಸ್ತೀರ್ಣದಲ್ಲಿ ಸಂಣದು ಇರುತ್ತದೆ. ಆದರೂ ಅಲ್ಲಿ 144 ಜವಳಿ ಕಾರ್ಖಾನೆಗಳು ಇವೆ. ಖನಿಜ ಮತ್ತು ಧಾತು (ಲೋಹ) ಕಾರ್ಖಾನೆಗಳು 29 ಇವೆ. ಜಿನ್ ಮತ್ತು ಪ್ರೆಸ್‌ಗಳು 29 ಅವೆ. ಈ ರೀತಿ ಎಲ್ಲ ಬಗೆಯ ಔದ್ಯೋಗಿಕ ಕಾರ್ಖಾನೆಗಳು 513 ಇರುತ್ತವೆ. ಅಲ್ಲದೇ ಶಿಕ್ಷಣದ ದೃಷ್ಟಿಯಿಂದ ವಿಚಾರಿಸಿದಲ್ಲಿ ಅಲ್ಲಿ.

| | | |
|---|---|---|
| ಮಹಾವಿದ್ಯಾಲಯಗಳು | - | 12 |
| ತರಬೇತಿ ಸಂಸ್ಥೆಗಳು | - | 6 |
| ಬಾಲಕರ ಪ್ರೌಢ ಶಾಲೆಗಳು | - | 18 |
| ಬಾಲಕಿಯರ ಪ್ರೌಢ ಶಾಲೆಗಳು | - | 4 |
| ಅನುದಾನಿತ ಬಾಲಕರ ಪ್ರೌಢ ಶಾಲೆಗಳು | - | 19 |
| ಅನುದಾನಿತ ಬಾಲಕಿಯರ ಪ್ರೌಢ ಶಾಲೆಗಳು | - | 7 |

| | |
|---|---|
| ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಗಳು | - 277 |
| ಸರಕಾರಿ ಕನ್ನಡ ಹೆಣ್ಣುಮಕ್ಕಳ ಹಿರಿಯ ಪ್ರಾಥಮಿಕ ಶಾಲೆಗಳು | - 22 |
| ಸರಕಾರಿ ಉರ್ದು ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಗಳು | - 38 |
| ಬಾಲಕರ ಕನ್ನಡ ಪ್ರಾಥಮಿಕ ಶಾಲೆಗಳು | - 3,460 |
| ಬಾಲಕಿಯರ ಕನ್ನಡ ಪ್ರಾಥಮಿಕ ಶಾಲೆಗಳು | - 176 |

ಈ ಪ್ರಕಾರ ಶೈಕ್ಷಣಿಕ ಬೆಳವಣಿಗೆಯಾಗಿದೆ. ಇದೆಲ್ಲಾ ಏತರ ಪರಿಣಾಮ? ಅದೊಂದು ಒಂದೇ ಭಾಷೆಯಾಡುವ ಪ್ರತ್ಯೇಕ ಪ್ರಾಂತವಿರುವುದರ ಪರಿಣಾಮೇ ಸರಿ.

ಇಂಥ ಉದಾಹರಣೆಯುನ್ನು ಕಣ್ಣೆದುರು ನೋಡುತ್ತಿದ್ದೂ ನಮ್ಮೆಲ್ಲರೂ ಒಂದಾಗಬೇಕೆಂದು ಪ್ರಯತ್ನಿಸದಿದ್ದರೆ ಎಷ್ಟು ತಪ್ಪಾದೀತು? ಕನ್ನಡಿಗರು ಇನ್ನೂ ಸಹಿಸಬೇಕೆಂದು ಹೇಳುವುದು ತೀರ ನಿರ್ದಯದ ಮಾತು. ಇನ್ನು ಅವರು ಸಹಿಸಲಾರರು. ಕನ್ನಡಿಗರ ಈ ಬೇಡಿಕೆಯ ಅಂದೋಲನವು 1907 ರಿಂದ ಕಳೆದ 40 ವರ್ಷಗಳ ವರೆಗೆ ಒಂದೇ ಸವನೇ ಅವಿಶ್ರಾಂತವಾಗಿ ನಡೆದದ್ದಾಗಿದೆ. ಒಂದಿಲ್ಲೊಂದು ಕಾರಣದಿಂದ ಅದು ಮುಂದೆ ಬೀಳುತ್ತಾ ಹೊರಟಿದೆ. ಇನ್ನು ಮುಂದೆ ಬೀಳಗೊಡಲಾರೆವು. ನಾವೆಲ್ಲರೂ ಒಕ್ಕಟ್ಟಿನಿಂದ ಯತ್ನಿಸಿದರೆ ಜಗತ್ತಿನ ಯಾವ ಶಕ್ತಿಯೂ ನಮ್ಮ ಕನ್ನಡ ನಾಡಿನ ಏಕೀಕರಣಕ್ಕೆ ತಡೆಯನ್ನುಂಟು ಮಾಡಲಾರದು. ಇಂದು ಈ ಪ್ರಶ್ನೆ ಕರ್ನಾಟಕಲ್ಲಿ ಎಷ್ಟು ಗಂಭೀರ ಸ್ವರೂಪ ತಾಳಿದೆ ಎಂಬುದನ್ನು ಕರ್ನಾಟಕದಲ್ಲಿ ಇಂದು ಜರಗುತ್ತಲಿರುವ, ಸಭೆ ಸಮ್ಮೇಳನಗಳ ನಡವಳಿಕೆಗಳನ್ನು ನಿರೀಕ್ಷಿಸಿದರೆ ತಾನೇ ಗೊತ್ತಾಗುತ್ತದೆ. ಪ್ರತಿಯೊಂದು ಒಕ್ಕಲಿಗರ ಸಭೆ, ಕೂಲಿಕಾರರ ಸಭೆ, ಮುಂತಾದ ಸಾಮಾನ್ಯರ ಸಭೆಗಳಲ್ಲಿಯೂ ಈ ಬಗ್ಗೆ ಇಂದು ಆಳವಾಗಿ ವಿಚಾರವಾಗುತ್ತಿದೆ. ವ್ಯಾಪಾರಿ ಹಾಗೂ ಇನ್ನಿತರ ಸುಶಿಕ್ಷಿತ ವರ್ಗವಂತೂ ಎಂದಿನಿಂದಲೂ ಈ ಬಗ್ಗೆ ಹೆಣಗಾಡುತ್ತಿದೆ. ಇತ್ತೀಚೆಗೆ ಪಾಸಾದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಠರಾವುಗಳು ಈ ಪ್ರಶ್ನೆಯ ಗಾಂಭೀರ್ಯವನ್ನು ಚೆನ್ನಾಗಿ ಕಿತ್ತಿ ತೋರಿಸುತ್ತವೆ.

"ಸ್ವತಂತ್ರ ಹಿಂದುಸ್ತಾನದ ಹೊಸ ರಾಜ್ಯ ಘಟನೆಯನ್ನು ರಚಿಸುವುದಕ್ಕಾಗಿ ಏರ್ಪಡಿಸಿದ ಘಟನಾ ಸಮಿತಿಗೆ ಯಶಸ್ಸನ್ನು ಹಾರೈಸುತ್ತೇನೆ. ಮತ್ತು ಅದೇ ಕಾಲಕ್ಕೆ ಭಾಷೆಗಳ ತಳಹದಿಯ ಮೇಲೆ ಪ್ರಾಂತಗಳನ್ನು ರಚಿಸುವ ಕಾರ್ಯವನ್ನು ಕೈಕೊಂಡು, ಖಂಡ ಕರ್ನಾಟಕವನ್ನು ಪುನರ್ರಚಿಸುವರೆಂದು ಬಲವಾಗಿ ನಂಬಿದ್ದೇನೆ. ಅಖಂಡ ಇಲ್ಲವೆ ಸ್ವತಂತ್ರ ಕರ್ನಾಟಕದ ಬೇಡಿಕೆಯ ಯಾವತ್ತೂ ಕನ್ನಡಿಗರಿಂದ ಬಂದಿರುವುದಲ್ಲದೆ ಅತ್ಯಾವಶ್ಯಕವಿದ್ದು ನಮ್ಮ ಮುಖ್ಯ ಧ್ಯೇಯವನ್ನು ತಿಳಿಸುವ ಠರಾವಿನಲ್ಲಿ ಅನುಮಾನವಿಲ್ಲದೆ ಸ್ಪಷ್ಟೀಕರಿಸಿದೆ. ಒಂದು ವೇಳೆ ಸ್ವತಂತ್ರ ಕರ್ನಾಟಕವನ್ನು ರಚಿಸುವ ಕಾರ್ಯವು ಯಾವುದೇ ಕಾರಣದಿಂದ ಕೈಕೊಳ್ಳಲ್ಪಡದೇ

ಇದರೆ, ತೀವ್ರ ಅಸಂತೋಷವುಂಟಾಗಿ ಕಾಂಗ್ರೆಸ್ಸಿನ ಸಂಘಶಕ್ತಿ ಮತ್ತು ನೈತಿಕ ಬಲಕ್ಕೆ ಕರ್ನಾಟಕಲ್ಲಿ ಕುಂದು ಬರಬಹುದೆಂದು ಸಭೆಯು ಸ್ಪಷ್ಟವಾಗಿ ಇಲ್ಲಿ ತಿಳಿಸಬಯಸುತ್ತದೆ (ತಾರೀಖು 2.1.1947)

"ಭಾರತದ ಹೊಸ ರಾಜ್ಯ ಘಟನೆಯೊಡನೆಯೇ ಕರ್ನಾಟಕ ಪ್ರಾಂತ ನಿರ್ಮಾಣವಾಗುವುದಕ್ಕಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಸಮಯೋಚಿತವಾಗಿ ಎಲ್ಲ ಬಗೆಯ ತ್ಯಾಗ ಮತ್ತು ಧೈರ್ಯಯುತವಾದ ಕಾರ್ಯವನ್ನು ಕೈಕೊಳ್ಳಲು ಹಿಂದೆಮುಂದೆ ನೋಡಲಿಕ್ಕಿಲ್ಲರೆಂದು ಈ ಸಭೆಯು ಕರ್ನಾಟಕದ ಜನತೆಗೆ ಆಶ್ವಾಸನವೀಯುತ್ತದೆ. (ತಾರೀಖು:7.2.1947)"

ಕರ್ನಾಟಕ ವಣಿಕ ಸಂಘದವರಂತೂ ಇನ್ನೂ ಹೆಚ್ಚು ಮುಂದೆ ಹೋಗಿ ತಮ್ಮ ಠರಾವಿನಲ್ಲಿ ಕರ್ನಾಟಕ ಪ್ರಾಂತ ರಚನೆ ಇಲ್ಲದ ಯಾವುದೇ ರಾಜ್ಯ ಘಟನೆಯನ್ನು ಕನ್ನಡಿಗರು ಒಪ್ಪಲಾರರೆಂದು ಖಂಡಿತವಾಗಿ ಸಾರಿಬಿಟ್ಟಿದ್ದಾರೆ. ಕರ್ನಾಟಕ ಪ್ರಾಂತದ ಈ ಪ್ರಶ್ನೆಯು ಕನ್ನಡಿಗರ ಮಟ್ಟಿಗೆ ಸಾವು-ಜೀವದ ಸಮಸ್ಯೆಯಾಗಿದೆ. ಸದ್ಯದ ಮುಂಬಯಿ ಸರಕಾರದ ಮಾನ್ಯ ಮಂತ್ರಿಗಳಾದ ಶ್ರೀ ಮಲ್ಲನಗೌಡ ಪಾಟೀಲರ ಅಧ್ಯಕ್ಷತೆಯಲ್ಲಿ ದಾವಣಗೆರೆಯಲ್ಲಿ ಸೇರಿದ ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತೂ, ಮತ್ತು ರಬಕವಿಯ ಅಖಿಲ ಕರ್ನಾಟಕ ಸಂಸ್ಥಾನೀ ಪರಿಷತ್ತೂ, ಪೂರ್ವ ಕರ್ನಾಟಕ ಮಹಾ ಪರಿಷತ್ತೂ, ಕರ್ನಾಟಕ ವಿಭಾಗ ಸ್ಥಾನಿಕ ಸಂಸ್ಥೆಗಳ (ಹುಬ್ಬಳ್ಳಿಯಲ್ಲಿ ಶ್ರೀ ಎಸ್.ಕೆ. ಪಾಟೀಲರ ಅಧ್ಯಕ್ಷತೆಯಲ್ಲಿ ಕೂಡಿದ) ಪರಿಷತ್ತೂ ಹಾಗೂ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತೂ ತಮ್ಮ ತಮ್ಮ ಠರಾವುಗಳಲ್ಲಿ ಒಂದಿಲ್ಲೊಂದು ರೀತಿಯಿಂದ ಈ ಪ್ರಶ್ನೆಯ ಅವಸರನ್ನು ಸಾರಿ ಹೇಳಿರುತ್ತವೆ.

ಈ ನಮ್ಮ ಪ್ರಶ್ನೆಗೆ ಪೂಜ್ಯ ಗಾಂಧೀಜಿಯರ ಆಶೀರ್ವಾದ ಬೆಂಬಲವಿದೆ. ಮುಂಬಯಿ, ಮದ್ರಾಸ ಅಸೆಂಬ್ಲಿಗಳು ಈ ಮೊದಲೇ ಒಪ್ಪಿವೆ. ನೆಹರು ಕಮೀಟಿಯವರು ಈ ರೀತಿ ಇದಕ್ಕೆ ಬೆಂಬಲವನ್ನು ಇತ್ತಿದ್ದಾರೆ.

'ಕರ್ನಾಟಕ ಪ್ರಕರಣವು ನೆಮ್ಮದುರಿಗೆ ಕರ್ನಾಟಕ ಏಕೀಕರಣ ಸಂಘವು ಪ್ರತಿನಿಧಿಗಳಿಂದ ಹಾಗೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ವತಿಯಿಂದ ಇಡಲ್ಪಟ್ಟಿತ್ತು. ಅದು ಅತ್ಯಂತ ಸಲುವಾಗಿ ಐತಿಹಾಸಿಕ ಸಾಸ್ಕೃತಿಕ ಹಾಗೂ ಅಂಕೆಸಂಖ್ಯೆಗಳಿಂದ ಯೋಗ್ಯ ಮಾಹಿತಿಯನ್ನೊಳಗೊಂಡು ತಯಾರಿಸಿದ್ದು ಅದೆ. ನಮ್ಮೆಲ್ಲ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ದೊರೆತಿದೆ. ಹಾಗೂ ಏಕೀಕರಣಕ್ಕೆ ಮತ್ತು ಕರ್ನಾಟಕ ಪ್ರಾಂತವನ್ನು ಪ್ರತ್ಯೇಕ ನಿರ್ಮಾಣ ಮಾಡುವ ಬಗ್ಗೆ ಸುಸ್ಪಷ್ಟವಾಗಿ ಪ್ರಕರಣವು ತಯಾರಿಸಲ್ಪಟ್ಟಿದೆ ಎಂದು ನಮ್ಮ ಅಭಿಪ್ರಾಯವಿದೆ. ಆರ್ಥಿಕ ದೃಷ್ಟಿಯಿಂದ ಕರ್ನಾಟಕದ ಸ್ಥಿತಿಯು ಅತ್ಯಂತ ಭದ್ರವಾದದ್ದಿದೆ ಹಾಗೂ ಈಗ ಸಹ ಬ್ರಿಟಿಷ ಕರ್ನಾಟಕವು ಸಾಕಷ್ಟು ಉಳಿತಾಯದ ಪ್ರದೇಶವಾಗಿದೆ."

ಅಲ್ಲದೆ ಸರದಾರ ವಲ್ಲಭಭಾಯಿ ಪಟೇಲರವರು ನಮ್ಮ ಬೇಡಿಕೆಯ ಮಿತವಾದದ್ದೂ ನ್ಯಾಯವಾದದ್ದೂ ಆಗಿದೆಯೆಂದು ಹೇಳಿದ್ದಾರೆ. ಕರ್ನಾಟಕದಲ್ಲಿಯ ಇತರ ಸಂಘ ಸಂಸ್ಥೆಗಳಾದ ಕಮ್ಯುನಿಸ್ಟ ಪಾರ್ಟಿಯವರೂ, ರಾಡಿಕಲ್ ಪಾರ್ಟಿಯವರೂ ಸಹ ತಮ್ಮ ನಿಶ್ಚಿತ ಬೆಂಬಲವನ್ನು ಇಟ್ಟಿದ್ದಾರೆ.

ಅಲ್ಲದೇ ಸೊಂಡೂರ ರಾಜೇಸಾಹೇಬರು ಕರ್ನಾಟಕ ಏಕೀಕರಣದ ಬಗೆ ತಮ್ಮ ಹೆಚ್ಚಿನ ಪ್ರೀತಿಯನ್ನು ಅಡಿತೋರಿಸಿದ್ದಾರೆ. "ಭಾಷಾವಾರ ಪ್ರಾಂತರನೆಯ ಕಡೆಗೆ ನಮ್ಮ ಪಕ್ಷಪಾತವಿದೆ. ಅದರಲ್ಲಿಯೂ ಕರ್ನಾಟಕ ಪ್ರಾಂತದ ಕಡೆಗೆ ನಮ್ಮ ಮನಸ್ಸು ಮುಖ್ಯವಾಗಿ ಎಳೆಯುತ್ತಿದೆ" ಎಂದು ಮುಂತಾಗಿ ಹೇಳಿರುವರು. ಅಲ್ಲದೇ ದಕ್ಷಿಣ ಸಂಸ್ಥಾನದ ಅರಸರು ಕರ್ನಾಟಕ ಪ್ರಾಂತೀಕರಣಕ್ಕೆ ಇದ್ದ ತಮ್ಮ ಒಪ್ಪಿಗೆಯನ್ನು ಆ ಸಂಸ್ಥಾನಗಳ ಒಕ್ಕೂಟದ ಯೋಜನೆಯ ಸ್ಪಷ್ಟೀಕರಣದ ಮೂಲಕ ವ್ಯಕ್ತಪಡಿಸಿದ ಸಂಗತಿಯು ವೃತ್ತ ಪತ್ರದಲ್ಲಿ ಪ್ರಸಿದ್ಧವಾದದ್ದು ತಮಗೆಲ್ಲ ಗೊತ್ತಿರಲು ಸಾಕು.

ಈ ರೀತಿ ಸರ್ವಸಾಮಾನ್ಯವಾದ ನಮ್ಮ ಬೇಡಿಕೆಯು ಈಗಾಗಲೇ ಈ ಹೊಸ ರಾಜ್ಯ ಘಟನೆಯೊಡನೆಯೇ ಪೂರೈಸಲೇಬೇಕು. ಇನ್ನು ಈ ಸಮಯದಲ್ಲಿ ನಮ್ಮ ಮುಸ್ಲಿಂ ಲೀಗ ಬಾಂಧವರಿಗೆ ನನ್ನ ವಿನಂತಿ ಏನೆಂದರೆ ಈ ಪ್ರಶ್ನೆಯತ್ತ ಅವರು ಪಕ್ಷಾತೀತ ಮತ್ತು ಜಾತ್ಯತೀತ ದೃಷ್ಟಿಯಿಂದ ನೋಡಲಿ; ದೇಶದ ಉಳಿದ ಭಾಗದಲ್ಲಿ ದುರ್ಲಲವಾದ ಹಿಂದು ಮುಸಲ್ಮಾನರ ಐಕ್ಯವನ್ನು ಕರ್ನಾಟಕದಲ್ಲಿ ನೀವು ಕಾಣಬಹುದು. ಕರ್ನಾಟಕವು ಎಂದಿನಿಂದಲೂ ಹಿಂದು ಮುಸಲ್ಮಾನರ ಐಕ್ಯಕ್ಕಾಗಿ ಹೆಸರಾಗಿದೆ. ಎಲ್ಲರನ್ನೂ ಔದಾರ್ಯದಿಂದ ತಾಳ್ಮೆಯಿಂದ ನೋಡುವ ಗುಣವು ಕರ್ನಾಟಕಲ್ಲಿ ಎಂದಿನಿಂದಲೂ ಅದೆ. ನಾಳೆ ಕರ್ನಾಟಕವು ಪ್ರತ್ಯೇಕ ಪ್ರಾಂತವಾದಲ್ಲಿ ಮುಸಲ್ಮಾನ ಬಹುಮತವುಳ್ಳ ಪ್ರಾಂತಗಳಂತೆಯೇ ಕರ್ನಾಟಕದಲ್ಲಿ ಮುಸಲ್ಮಾನರು ಸುಖದಿಂದ ಇರಬಲ್ಲರು. ಕರ್ನಾಟಕ ಜನಸಾಮಾನ್ಯರಾದ, 100ಕ್ಕೆ 90 ರಷ್ಟು ಜನರ ಪ್ರಶ್ನೆಯು ಕರ್ನಾಟಕದ ಬಡ ಮುಸಲ್ಮಾನರಿಂದ ಯಾವ ರೀತಿಯಿಂದಲೂ ಭಿನ್ನವಾಗಿಲ್ಲ. ಕರ್ನಾಟಕದಲ್ಲಿ ನಮ್ಮಿರ್ವರ ಪ್ರಶ್ನೆಯು ಸಾಮಾನ್ಯವಾಗಿದೆ. ಕಾರಣ ನಮ್ಮಿರ್ವರಲ್ಲಿ ಯಾವ ರೀತಿಯಿಂದಲೂ ಭಿನ್ನತೆ ಬೆಳೆಯುವ ಸಂಭವವಿಲ್ಲ. ಆದುದರಿಂದ ಈ ಬಗ್ಗೆ ಮುಸ್ಲಿಂ ಲೀಗ್ ಪತ್ರದ ಮುಖಂಡರು ನಿರ್ಮಲ ಮನಸ್ಸಿನಿಂದ ವಿಚಾರ ಮಾಡುವರೆಂದು ನಾನು ನಂಬುತ್ತೇನೆ.

ಹೇಳುವುದನ್ನೆಲ್ಲವನ್ನೂ ಹೇಳಿದ್ದೇನೆ. ಹೇಳಬೇಕಾದುದು ಇನ್ನೂ ಅದೆ. ಆದರೆ ಇದು ಸಮಯವು ಅಲ್ಲ. ಈ ಸಭೆಯು ಈ ಪ್ರಶ್ನೆ ಮಹತ್ವವನ್ನು ಅರಿತು ನನ್ನ ಗೊತ್ತುವಳಿಯನ್ನು ಒಮ್ಮತದಿಂದ ಸ್ವೀಕರಿಸುವುದೆಂದು ನಾನು ಹಾರೈಸುತ್ತೇನೆ.

# ನವಮೈಸೂರು ವಿಧಾನ ಸಭೆಯ ಕಲಾಪಗಳು

## (1959 ರಿಂದ 1970)

## ಕರ್ನಾಟಕ ನಾಮಕರಣ

**ಶ್ರೀ ಎ.ಜೆ. ದೊಡ್ಡಮೇಟಿ(ರೋಣ):** ಸ್ವಾಮೀ, ಈ ಸಭೆಯ ಮುಂದಿರುವ ನಿರ್ಣಯಕ್ಕೆ ನಾನು ಹೃತ್ಪೂರ್ವಕವಾದ ಸ್ವಾಗತವನ್ನು ಬಯಸುತ್ತೇನೆ. ಹಾಗೂ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಈ ನಿರ್ಣಯವು ಯಾವ ವ್ಯಕ್ತಿಯಿಂದ ಬಂದಿದೆ, ಯಾವ ಪಕ್ಷದಿಂದ ಬಂದಿದೆ ಎನ್ನುವ ಮಾತನ್ನು ನಾನು ವಿಚಾರ ಮಾಡುವುದಿಲ್ಲ.

(Mr. Deputy Speaker in Chair.)

ಈಗ ಈ ಪ್ರಶ್ನೆ ಯಾವುದೇ ಒಂದು ಪಕ್ಷದಿಂದ, ಯಾವುದೇ ಒಂದು ವ್ಯಕ್ತಿಯಿಂದ ನಿರ್ಮಾಣವಾಗತಕ್ಕದ್ದಲ್ಲ. ಇದು ಯಾವುದೇ ಒಂದು ವ್ಯಕ್ತಿಗೆ, ಯಾವುದೇ ಒಂದು ಪಕ್ಷಕ್ಕೆ ಸಂಬಂಧಪಟ್ಟ ವಿಷಯಲ್ಲ ಇದು ನಮ್ಮ ರಾಜ್ಯದ ಎರಡು ಕೋಟಿ ಜನಾಂಗದ ಪ್ರಶ್ನೆಯಾಗಿದೆ ಯಾರೊಬ್ಬರಿಗೂ ನೋವುಂಟಾಗದಂತೆ ನನ್ನ ಅಭಿಪ್ರಾಯಗಳನ್ನು ಮಾತ್ರ ಈ ಸಭೆಯ ಮುಂದೆ ಇಡುತ್ತೇನೆ. ತತ್ಪೂರ್ವದಲ್ಲಿ 30.9.59 ರಲ್ಲಿ ನಾನೇ ಈ ಗೊತ್ತುವಳಿಯನ್ನು ತಂದಾಗ ಅನೇಕ ವಾದ ವಿವರಗಳನ್ನು ಈ ಸಭೆಯ ಮುಂದೆ ಒದಗಿಸಿದ್ದೇನೆ. ಮತ್ತೆ ಈ ಬಗ್ಗೆ ಅವಶ್ಯಕವಾದ ಒಂದು ಪುಸ್ತಕವನ್ನು ಸಹ ಸದಸ್ಯರಿಗೆಲ್ಲ ನಾನು ಕೊಟ್ಟಿದ್ದೆ. ಆ ಸಮಯದಲ್ಲಿ ನಮ್ಮ ಎಲ್ಲಾ ಅಭಿಪ್ರಾಯಗಳು ಬಂದಿವೆ. ಅಂತಹ ಅಭಿಪ್ರಾಯಗಳನ್ನು ಪುನರುಚ್ಚಾರಮಾಡದೆ ಹೊಸದಾದ ಕೆಲವು ವಿಚಾರಗಳನ್ನು ಮಾತ್ರ ಹೇಳಲಿಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತೇನೆ.

ಸ್ವಾಮೀ 30.9.59ರಲ್ಲಿ ಈ ನಿರ್ಣಯವು ಬಂದಾಗ ನಮ್ಮ ಈ ಅಧಿವೇಶನದಲ್ಲೇ ಸಾಧಾರಣವಾಗಿ ಮೂರು ಗಂಟೆಗಳವರೆಗೆ ದರ ಬಗ್ಗೆ ಚರ್ಚೆ ನಡೆಯಿತು. ಅನಂತರ ಇದರ ಬಗ್ಗೆ ಪತ್ರಿಕೆಗಳೂ ಕೂಡ ಒಳ್ಳೊಳ್ಳೆಯ ಅಭಿಪ್ರಾಯಗಳು ವ್ಯಕ್ತಪಡಿಸಿದೆ. ಸಾಮಾನ್ಯವಾಗಿ ನನಗೆ ಗೊತ್ತಿದ್ದಂತೆ ತಮಗೂ ಗೊತ್ತಿದ್ದಂತೆ ಇಂಗ್ಲಿಷು ಅಥವಾ ಕನ್ನಡದ ಯಾವ ಪತ್ರಿಕೆಯಲ್ಲಾದರೂ ಈ ವಿಷಯವನ್ನು ವಿರೋಧಿಸಿಲ್ಲ. ಎಲ್ಲರಿಗೂ ಈ ಸೂಚನೆಯ ಬಗ್ಗೆ ಸಂಪೂರ್ಣವಾಗಿ ಬೆಂಬಲವಿದೆ ಎನ್ನುವ ಮಾತನ್ನು ನಾವು ಗಮನಿಸಬೇಕು. ಅದೇ ರೀತಿ ಬೆಂಗಳೂರಿನ ಸಾಹಿತಿಗಳು ಮುಖ್ಯವಾಗಿ ಮೊದಲಿನಿಂದಲೂ ಈ ಕರ್ನಾಟಕ ರಾಜ್ಯ ನಿರ್ಮಾಣದ ಬಗ್ಗೆ ತಮ್ಮ ಅನುಕೂಲವಾದ ಅಭಿಪ್ರಾಯನ್ನು ವ್ಯಕ್ತ ಮಾಡಿ ಪ್ರಕಟಣೆಗಳನ್ನು ಕೂಡ ತಂದಿದ್ದರು ಎನ್ನುವುದನ್ನು ತಾವು ನೋಡಬೇಕು. ಈ ಎಲ್ಲ ಪ್ರತಿಕ್ರಿಯೆಗಳ ಪರಿಣಾಮವಾಗಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ತನ್ನ ಅರಸೀಕೆರೆ ಅಧಿವೇಶನದಲ್ಲಿ ಈ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಎಂದು ಬದಲಾಯಿಸಲು ಗೊತ್ತುವಳಿಯನ್ನು ತರಲಾಗಿತ್ತು ಎನ್ನುವುದನ್ನು ನೋಡಿರಬಹುದು. ಇದೇ

ರೀತಿ ಇನ್ನೂ ಎಷ್ಟೋ ಕಡೆಗಳಿಂದ ಅಭಿಪ್ರಾಯಗಳು ಬಂದಿವೆ. ಈ ಗೊತ್ತುವಳಿಯನ್ನು ಅಪಾರಮಸ್ತಕ ವಿರೋಧ ಮಾಡುತ್ತಿದ್ದವರೂ ಸಹ, ತಮ್ಮ ಭಾಷಣದಲ್ಲಿ "ಕರ್ನಾಟಕ" ಎನ್ನುವುದಕ್ಕೆ ನಮ್ಮ ವಿರೋಧವಿಲ್ಲ; ಬೇಕಾದರೆ ಬ್ರಾಕೆಟ್ಟಿನಲ್ಲಿ "ಕರ್ನಾಟಕ" ಎಂದು ಹಾಕಿಕೊಳ್ಳಿ ಎಂದು ಹೇಳಿದರು. ಅವರೆಲ್ಲರೂ ಯಾವ ರೀತಿಯಾದ ಅಭಿಪ್ರಾಯಗಳನ್ನು ವ್ಯಕ್ತಿಪಡಿಸಿದ್ದಾರೆ ಎನ್ನುವುದನ್ನು ಈ ಸಭೆಯಲ್ಲಿ ನಾವು ಈಗಾಗಲೇ ಕೇಳಿದ್ದೇವೆ. ಇನ್ನು ಬೇರೆ ಬೇರೆ ಸಂಘ ಸಂಸ್ಥೆಗಳೂ ಬಹಳ ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿವೆ, ನನ್ನ ತಿಳಿವಳಿಕೆಯ ಪ್ರಕಾರ ಯಾವುದೇ ಒಂದು ಪಕ್ಷದಲ್ಲಿ ನೀವು ಈ ಬಗ್ಗೆ ಒಂದು ಮತವನ್ನು ಕೇಳುವುದಾದರೆ ನಿಸ್ಸಂಶಯವಾಗಿ ತಮ್ಮ ಮೆಂಬರುಗಳ ಬಹುಮತದಿಂದ ಈ ನಿರ್ಣಯದ ಪರವಾಗಿಯೇ ತೀರ್ಮಾನ ಮಾಡುತ್ತಾರೆ. ಈ ಬಗ್ಗೆ ನೀವೆಲ್ಲರೂ ಒಪ್ಪುವಂತೆ ಆಗುತ್ತದೆ. ಕೆಲವರು ಹೇಳಬಹುದು, ಈ ಮಾತನ್ನು ಕೆಲವರ ಮನಸ್ಸು ನೋಯುವ ಹಾಗೆ ಅವರಿಗೆ ತೊಂದರೆ ಕೊಟ್ಟು ಈ ಪ್ರಶ್ನೆಯನ್ನು ನಿರ್ಣಯ ಮಾಡಬಾರದು. ಇದಕ್ಕೆ ಸ್ವಲ್ಪ ಕಾಲಾವಕಾಶಬೇಕು. ಎಂದು. ತಾತ್ವಿಕವಾಗಿ ಇಂತಹ ವಾದಕ್ಕೆ ನಾವು ತಲೆ ಬಾಗಬೇಕಾಗುತ್ತದೆ. ಹೀಗಾಗಿ ಮೂರು ವರ್ಷಗಳಿಂದಲೂ ಈ ನಿರ್ಣಯವನ್ನು ತಳ್ಳುತ್ತ ತಳ್ಳುತ್ತ ಬಂದಿದೆ. ಈ ಪ್ರಸಂಗ ಮೊದಲು 30.9.59ಕ್ಕಿಂತ ಹಿಂದಿನ ಅಧಿವೇಶನದಲ್ಲೇ ಬಂದರೆ ಬಡ್ಜೆಟಿನ ಅಧಿವೇಶನದಲ್ಲಿ ಗೊತ್ತುವಳಿ ರೂಪದಲ್ಲಿ ಬಂದಿತ್ತು. ಆ ಹೊತ್ತು ಇದನ್ನು ಪರಿಶೀಲನೆ ಮಾಡಲಿಲ್ಲ ಅದರಿಂದಾಗಿ ಆ ನಿರ್ಣಯ ಲ್ಯಾಪ್ಸ್ ಆಯಿತು. ಅನಂತರ ಸೆಪ್ಟೆಂಬರಿನ ಅಧಿವೇಶನದಲ್ಲಿ ಸಾಕಷ್ಟು ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಂತರ ಯಾವ ನಿರ್ಣಯವೂ ಅಂಗೀಕೃತವಾಗದೆ ರೆಸಲೂಷನ್ ಪುನಃ ಲ್ಯಾಪ್ಸ್ ಆಯಿತು. ಕಳೆದ ಅಧಿವೇಶನದ ಒಂದು ಮಾತನ್ನು ಲಕ್ಷದಲ್ಲಿಡಬೇಕು. ಈ ಸಭೆಗೆ 27 ಜನರು ಈ ನಿರ್ಣಯವನ್ನು ಕಳುಹಿಸಿದ್ದಾರೆ. ಈ 27 ಜನರಲ್ಲಿ ಹಳೆಯ ಮೈಸೂರಿಗೆ ಸೇರಿದಂತಹ ಸದಸ್ಯರು ಈ ಗೊತ್ತುವಳಿಯನ್ನು ಕಳುಹಿಸಿದ್ದರೆನ್ನುವುದನ್ನು ತಾವು ಲಕ್ಷದಲ್ಲಿಡಬೇಕು. ಇವೊತ್ತಿನ ದಿವಸ ಈ ನಿರ್ಣಯ ಬಂದಿರುವುದು ಹಳೆಯ ಮೈಸೂರಿಗೆ ಸೇರಿದ ಒಬ್ಬ ಮಾನ್ಯ ಸದಸ್ಯರಿಂದಲೇ ಬಂದಿದೆ ಎನ್ನುವುದನ್ನೂ ತಾವು ಲಕ್ಷ್ಯದಲ್ಲಿಡಬೇಕು.

**ಶ್ರೀ ಎ.ಜೆ. ದೊಡ್ಡಮೇಟಿ:** ಇರ ಹಿನ್ನಲೆಯನ್ನು ವಿಚಾರ ಮಾಡಿ ನೋಡಿದರೆ ಎರಡು ಕೋಟಿ ಜನರ ಅಭಿಪ್ರಾಯ ಎತ್ತಕಡೆ ವಾಲುತ್ತದೆ ಎಂಬುದನ್ನು ತಿಳಿಯಬಹುದು. ಆದರೆ ಹಟಕ್ಕಾಗಿ ವಿರೋಧ ಮಾಡಬಾರದು ಮತ್ತು ಹಟಕ್ಕಾಗಿ ಬೆಂಬಲಕೊಡಬಾರದು. ಈ ಎರಡು ಮಾರ್ಗಗಳಲ್ಲಿ ಹಟವಿರಬಾರರದೆಂಬುದನ್ನು ಒಪ್ಪುತ್ತೇನೆ. ಆದರೆ ಈ ಪ್ರಶ್ನೆಯನ್ನು ನಿರ್ಧರಿಸುವುದಕ್ಕೆ ಮುಂಚೆ ಯಾವ ಯಾವ ಅಂಶಗಳನ್ನು ಲಕ್ಷ್ಯದಲ್ಲಿಟ್ಟು ಈ ಪ್ರಶ್ನೆಯ ಮೇಲೆ ತೀರ್ಮಾನಕ್ಕೆ ಬರಬೇಕು, ನಿರ್ಧಾರಕ್ಕೆ ಬರಬೇಕು ಎನ್ನುವುದನ್ನು ವಿಚಾರ

ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ವಿಚಾರ ಮಾಡುವಾಗ ಮೊಲನೆಯದಾಗಿ ಈ ಗೊತ್ತುವಳಿಯನ್ನು ವಿರೋಧ ಮಾಡಿದವರ ಅಭಿಪ್ರಾಯವನ್ನು ಸ್ವಲ್ಪ ಪರಿಶೀಲನೆ ಮಾಡುವಾ. ಹೋದಸಲ ಮತ್ತು ಈ ಸಲ ತೆರೆದ ಮನಸ್ಸಿನಿಂಡ ಮುಕ್ತ ಮನಸ್ಸಿನಿಂದ ವಿರೋಧ ಮಾಡುವವರಲ್ಲಿ ಏನಾದರೂ ಪಾಯಿಂಟ್ಸ್ ಇವೆಯೇ ಎಂದು ವಿಚಾರ ಮಾಡತಕ್ಕ ಅಂಶವು ಆ ಪ್ರಶ್ನೆಯಲ್ಲಿದೆ. ನಾನು ಧರ್ಮದೃಷ್ಟಿಯಿಂದ, ತೆರೆದ ಮನಸ್ಸಿನಿಂದ ಮುಕ್ತಮನಸ್ಸಿನಿಂದ ಇದನ್ನು ವಿಚಾರ ಮಾಡಿ ನೋಡಿದ್ದರಲ್ಲಿ ವಿರೋಧಮಾಡುವವರ ವಾದದಲ್ಲಿ ಯಾವ ಸತ್ವವೂ ಕಾಣಲಿಲ್ಲ. ನನ್ನ ಎಡಪಕ್ಷದಲ್ಲಿ ಕುಳಿತಿರುವ ಮಾನ್ಯ ಸದಸ್ಯರು ಈ ಗೊತ್ತುವಳಿಯನ್ನು ವಿರೋಧ ಮಾಡಿದರು. ಎಷ್ಟೋ ಸಲ ಅವರು ಮಾತನಾಡುವಾಗ ನಾನು ಎಲ್ಲವನ್ನು ಕಠೋರವಾಗಿ ವಿರೋಧಿಸುತ್ತಿದ್ದೇನೆ. ಎಂದು ಹೇಳುತ್ತ ಇದ್ದರು. ಅವರ ಪಾಯಿಂಟ್ಸ್ ಏನೆಂದರೆ, ಹೆಸರಿನ ವಿಷಯದಲ್ಲಿ ಅಗ್ರಿಮೆಂಟ ಆಗಿದೆ ಒಡಂಬಡಿಕೆಯಾಗಿದೆ, ಆ ಕಾರಣಕ್ಕಾಗಿ ಈ ಪ್ರಶ್ನೆಯನ್ನು ಪುನಃ ಎತ್ತುವುದು ಬೇಡ ಎಂದು ಡಿಕ್ಷನರಿಯಲ್ಲಿ ಇದಕ್ಕೆ ಒಂದು ಸರಳವಾದ ಅರ್ಥವಿದೆ ಆದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಇದು gentlemen's agreement ಎಂದು ಹೇಳಬಹುದು ಇದು ದೇಶಕ್ಕೆ ತಳಹದಿಯಾಗುವಂಥ ಪ್ರಶ್ನೆ. ಪ್ರಶ್ನೆ ಸಣ್ಣದು ಎಂದು ಹೇಳುವುದಿಲ್ಲ ಇದು ಬಹಳ ಮಹತ್ವದ್ದು, ಅತಿ ಅವಶ್ಯವಾದದ್ದು. ಅವಶ್ಯವಷ್ಟೇ ಅಲ್ಲ ಅನಿವಾರ್ಯವಾದುದು. ಇದನ್ನು ಇಂದಲ್ಲ, ನಾಳೆ ಒಪ್ಪಬೇಕಾಗುತ್ತದೆ. ಇಂಥ ಮಹತ್ವದ ಪ್ರಶ್ನೆಯ ಮೇಲೆ ಹೆಚ್ಚಿನ ವೇಳೆಯನ್ನು ತೆಗೆದುಕೊಳ್ಳಬಾರದೆಂದು ಹೇಳಿದರೆ ಒಪ್ಪುತ್ತೇನೆ. ಈ ವಿಷಯದ ಮೇಲೆ ಬಹಳ ವೇಳೆ ಹೋಗಿದೆ ಎಂದು ಕೆಲವು ಸದಸ್ಯರು ಹೇಳಿದರು. ನಾವು ಹೆಚ್ಚಿಗೆ ಚರ್ವಿತ ಚರ್ವಣ ಮಾಡದೆ ಇದನ್ನು ಒಪ್ಪಿಕೊಳ್ಳಬೇಕೆಂದು ನಿರ್ಣಯ ಮಾಡಿದರೆ ಈ ಪ್ರಶ್ನೆಗೆ ಹೆಚ್ಚಿನ ವೇಳೆ ಹಿಡಿಯುವುದಿಲ್ಲ.

ಮೈಸೂರು ಎನ್ನುವ ಹೆಸರು ಎಂದೆಂದಿಗೂ ಬದಲಾಗಬಾರದು ಎಂದು ಒಪ್ಪಂದಾಗಿದೆಯೇ ಅಥವಾ ಇಂತಿಷ್ಟು ಕಾಲ ಇರಬೇಕು ಎಂಬ ಒಪ್ಪಂದವಾಗಿದೆಯೇ ಎಂದು ವಿಚಾರ ಮಾಡಬೇಕು. ಒಪ್ಪಂದವಾಗಿದೆ ಎಂದು ಹೇಳತಕ್ಕ ವಿಷಯಕ್ಕೆ ಅನೇಕ ಮಹಾಶಯರು ಅವಾಸ್ತವವಾದ ಮಹತ್ವವನ್ನು ಕೊಡುತ್ತಿದ್ದಾರೆ. ಆ ಒಪ್ಪಂದ ಯಾವುದೇ ರೀತಿಯಲ್ಲಿ ಆದದ್ದು, ವಿಧಾನ ಸಭಾ ಸದಸ್ಯರಾದ ನಮಗೆ ಗೊತ್ತಿಲ್ಲ. ನಾವು ಕೇವಲ ಭಾರತ ಸರ್ಕಾರಕ್ಕೆ ಒಂದು ಸಿಫಾರಸ್ಸು ಮಾಡಬೇಕು ಎಂದು ಹೇಳುತ್ತಿದ್ದೇವೆ. ಶಿಫಾರಸ್ಸು ಮಾಡಿದರೆ ನಮ್ಮ ಶಿಫಾರಸ್ಸು ಅವರು ಒಪ್ಪಬಹುದು ಅಥವಾ ಒಪ್ಪದೆ ಇರಬಹುದು. ಒಂದು ಮನೆಯೊಳಗೆ ಒಂದು ಮಗು ಜನಿಸಿದರೆ ತಾಯಿ ಒಂದು ಹೆಸರನ್ನಿಡಬೇಕೆಂದು ತಂದೆ ಇನ್ನೊಂದು ಹೆಸರಿಡಬೇಕೆಂದೂ ಅವರಿಬ್ಬರೊಳಗೆ ಒಂದು ವಾದ ಬಂದರೆ, ಕಡೆಯ ತೀರ್ಮಾನವಾಗತಕ್ಕದ್ದು ಅಜ್ಜನಿಂದ, ಆ ದೃಷ್ಟಿಯಿಂದ ನಾವು ಈ ಪ್ರಶ್ನೆಯ ಕಡೆಗೆ ಬಹಳ ವಿಶಾಲ ಮನಸ್ಸಿನಿಂದ ಸರಳ ಮನಸ್ಸಿನಿಂದ

ನೋಡಬೇಕು. ಇದು ಯಾವುದೇ ಒಂದು ಪಕ್ಷದ ಪ್ರಶ್ನೆಯಲ್ಲ. ಕಾಂಗ್ರೇಸ್ ಪಕ್ಷ ತಂದರೆ ವಿರೋಧ ಪಕ್ಷ ವಿರೋಧಿಸಬೇಕೆಂಬ ಮಾತಲ್ಲ. ನೂರು ರೂಪಾಯಿಗಳನ್ನು ಶಾಸಕರ ಸಾಲರಿ ಹೆಚ್ಚು ಮಾಡಬೇಕು ಎನ್ನುವ ಗೊತ್ತುವಳಿಗೆ ಒಪ್ಪಿಗೆಯನ್ನು ಕೊಟ್ಟು ಪಾಸ್ ಮಾಡಿಕೊಂಡಿದ್ದೇವೆ ಇದನ್ನು ತಂದವರು ಎದುರು ಪಕ್ಷದವರಾದರೂ ನಾವೆಲ್ಲರೂ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಈ ಪ್ರಶ್ನೆ ಪಕ್ಷದ ಪ್ರಶ್ನೆಯಲ್ಲ, ಇದರಲ್ಲಿ ಸರ್ಕಾರದರು ನ್ಯೂಟ್ರಲ್ ಇರುತ್ತಾರೆಂದು ಹೇಳಬಹುದು. ಆದರೆ ನನ್ನ ತಿಳುವಳಿಕೆಯಲ್ಲಿ ಸರ್ಕಾರದವರು ಈ ಬಗ್ಗೆ ನ್ಯಾಯವಾದ ತೀರ್ಮಾನ ಮಾಡಬೇಕಾಗುತ್ತದೆ. ಇಲ್ಲವಾದರೆ ಸದಸ್ಯರಿಗೆ ಮತಸ್ವಾತಂತ್ರ್ಯವನ್ನು ಕೊಡಬೇಕಾಗುತ್ತದೆ. ಈ ಗೊತ್ತುವಳಿಯ ಬಗ್ಗೆ ವಿರೋಧ ಮಾಡುವುದರೊಳಗೆ ಯಾವುದೇ ಅರ್ಥವಿದೆ ಎಂದು ನನಗನ್ನಿಸುವುದಿಲ್ಲ.

ನನ್ನ ಇನ್ನೊಬ್ಬ ಸ್ನೇಹಿತರಾದ ಶ್ರೀಮಾನ್ ಆರ್ಮುಗಂ ಅವರು ಮೈಸೂರಿಗೆ ಬಹಳ ಹೆಸರಿದೆ. ಪರದೇಶಗಳಲ್ಲೆಲ್ಲ 'ಮೈಸೂರು' ಎಂದರೆ ವ್ಯಾಪಾರ ದೃಷ್ಟಿಯಿಂದ ಬಹಳ ಮುಂದುವರಿದುದು ಮೈಸೂರು ಸ್ಯಾಂಡಲ್ ಸೋಫ್, ಮೈಸೂರು ಗಂಧದೆಣ್ಣೆ, ಗಂಧದ ಕಟ್ಟಿಗೆ ಹೀಗೆಲ್ಲ ಹೆಸರುವಾಸಿಯಾಗಿದೆ. ಎಂದು ಹೇಳಿದರು. ಒಂದು ಮಾತನ್ನು ಅವರು ಮರೆತಿದ್ದಾರೆ. ಮೈಸೂರು ಗಂಧದೆಣ್ಣೆ ಹೆಸರನ್ನೂ, ಮೈಸೂರು ಸಾಬೂನಿನ ಹೆಸರನ್ನೂ ಬದಲು ಮಾಡಲು ಯಾರೂ ಹೇಳುತ್ತಿಲ್ಲ, ಮೈಸೂರು ಗಂಧದ ಕಟ್ಟಿಗೆಗೆ ಕರ್ನಾಟಕ ಬಂಧದ ಕಟ್ಟಿಗೆ ಎಂದೂ ಮೈಸೂರು ಆನೆಗೆ ಕರ್ನಾಟಕ ಆನೆಯೆಂದೂ ಕರೆಯಬೇಕೆಂದು ಹೇಳುತ್ತಿಲ್ಲ, ಇವೊತ್ತು ವ್ಯಾಪಾರದ ದೃಷ್ಟಿಯಿಂದ, ಯಾವ ರೀತಿಯಲ್ಲಿ ಹೆಸರಿಟ್ಟರೆ ಉಚಿತವೋ ಆ ರೀತಿ ನಡೆದುಕೊಂಡು ಹೋಗುವುದಕ್ಕೆ ಒಪ್ಪುತ್ತೇನೆ. ನಾನು ಒಬ್ಬ ಮೈಸೂರಿನವ ಎಂದು ಹೇಳಿಕೊಳ್ಳಲಿಕ್ಕೆ ಅಸಮಾಧಾನವಿಲ್ಲ. ಆದರೆ ಹೆಚ್ಚು ಮಾನಸಿಕ ಏಕೀಕರಣವಾಗುವುದಕ್ಕೆ, ಇಂಥ ಪ್ರಶ್ನೆಗಳನ್ನು ಮುಂದೊಡ್ಡಿದರೆ, ತೊಂದರೆಯಾಗುತ್ತದೆಂದು ಹೇಳುತ್ತೇನೆ.

ಮೈಸೂರು ಹಿಂದಿನ ಮಹಿಷ ಮಂಡಳ ಅಥವಾ ಮಾಹಿಷ್ಮತೀ ನಗರವಾಗಿತ್ತು ಎನ್ನುವುದು ವಾದ ಗ್ರಸ್ತವಾದ ಅಂಶ. ನಿನ್ನೆಯ ದಿನದ 'ಪ್ರಜಾವಾಣಿ' ಪತ್ರಿಕೆಯಲ್ಲಿ ಂದು ಲೇಖನ ಪ್ರಸಿದ್ಧವಾಗಿದೆ. ಅದನ್ನು ನೋಡಿದ್ದರೆ ಗೊತಾಗುತ್ತಿತ್ತು. 'ಮಹಿಷ ಮಂಡಲ' ಎಂಬುದೇ ಮೈಸೂರು ಎಂದು ಒಪ್ಪುವುದಾದರೂ ಮೈಸೂರಿನ ಕೆಲು ಪ್ರದೇಶಗಳು, ಅಥವಾ ಒಂದು ತಾಲ್ಲೂಕಿನಷ್ಟು ಪ್ರದೇಶವಿತ್ತು ಎಂದು ಹೇಳಬಹುದು. ಅದು ವಿಜಯನಗರದ ಯೊಳಗೆ ಇತ್ತು. ವಿಜಯನಗರದ ಅರರು "ಕರ್ನಾಟಕ ರತ್ನ ಸಿಂಹಾಸನಾಧೀಶ್ವರ" ಎಂಬ ಹೆಸರನ್ನು ಪಡೆದಿದ್ದರು. ಅದೇ ಹೆಸರು ಮೈಸೂರು ಸಂಸ್ಥಾನಾಧೀಶರಿಗೂ ಬಂತು. ಇಂದಲ್ಲ ನಾಳೆ ನಮ್ಮ ರಾಜ್ಯ ಇಡಿಯ ಕರ್ನಾಟಕಕ್ಕೆ ವಿಸ್ತರಿಸಲ್ಪಡಬೇಕು ಎನ್ನುವ ಅಪೇಕ್ಷೆಯನ್ನೂ ಅಂದಿನ ಅರಸರು ಮತ್ತು ಪ್ರಜೆಗಳು ಹೊಂದಿದ್ದರು. ಮತ್ತು ಆ ರೀತಿ ಸಂಕಲ್ಪ ಮಾಡಿದ್ದರೆಂದು ಗೊತ್ತಾಗಿದೆ. ಈಗ ದೇವರ ದಯೆಯಿಂದ ಅಂಥ ಸಂಕಲ್ಪ ಈಡೇರಿ ಸಿದ್ಧಿಯನ್ನು ಪಡೆದಿದ್ದೇವೆ. ನಾಡಿನ ಏಕೀಕರಣವಾಗಿದೆ. ಈ ಸಿದ್ಧಿಯನ್ನು ಪಡೆದಿರುವಾಗ ಈ ನಾಡಿಗೆ "ಕರ್ನಾಟಕ" ಎಂದು ಹೆಸರಿಸಲು ಏಕೆ ವಿಳಂಬ ಮಾಡಬೇಕು?

ಈಗ ವಿರೋಧ ಮಾಡಿದಂಥವರ ಅಭಿಪ್ರಾಯನ್ನೂ ವಿಚಾರ ಮಾಡ ಪ. ವಿರೋಧ ಮಾಡುವವರಲ್ಲಿ ಒಂದು ರೀತಿಯ ಭಯವಿರಬಹುದು. ಕರ್ನಾಟಕ ಎಂದರೆ ಕನ್ನಡ ದೇಶ ಎಂದು ಆಗುತ್ತದೆ. ಮತ್ತು ಭಾಷಾವಾರು ಅಲ್ಪಸಂಖ್ಯಾತರಿಗೆ ಸ್ಥಾನ ಸಿಕ್ಕುವುದಿಲ್ಲ ಎನ್ನುವ ಭಯವಿರಬಹುದು. ಇದು ನಿರಾಧಾರವಾದ ಭಯವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಕರ್ನಾಟಕ ಎನ್ನುವುದು ಕೇವಲ ಭಾಷೆಯ ದೃಷ್ಟಿಯಿಂದ ಬಂದದ್ದಲ್ಲ. 'ಕರ್ನಾಟಕ' ಎನ್ನುವುದಕ್ಕೆ ಭಾಷೆಯೂ ಒಂದು ಕಾರಣ ಅಷ್ಟೆ, 'ಕರ್ನಾಟಕ' ಎಂಬ ಹೆಸರು ಯಾವ ಯಾರ ಕಾರಣಕ್ಕಾಗಿ ಬಂದಿದೆ ಎಂಬುದನ್ನೂ ಹಿಂದಿನ ಸಲ ನಾನು ಹೇಳಿದ್ದೇನೆ. ಅದನ್ನೇ ಇನ್ನೂ ಒಮ್ಮೆ ಹೇಳುತ್ತೇನೆ. ಕರ್ನಾಟಕ ಎನ್ನುವುದು 'ಕರುನಾಡು', ಕಮ್ಮಿತ್ತು ನಾಡು 'ಕಂ ನಾಡು' ಎಂಬುದರಿಂದ ಬಂದದ್ದು ಎಂದು ಹೇಳಿದ್ದೇನೆ. 'ದಿನ್ನೆ ನಾಡು' ಎಂದು ಸಹ ಹೇಳುತ್ತಿದ್ದರು. ಇದರ ಅರ್ಥ ಕೇವಲ ಕನ್ನಡ ಎನ್ನುವುದನ್ನೂ ಒಳಗೊಂಡಿಲ್ಲ. ಆದುದರಿಂದ ಭಾಷಾವಾರು ಅಲ್ಪಸಂಖ್ಯಾತ ಮಿತ್ರರಿಗೆ ಏನಾದರೂ ಭಯವಿದ್ದರೆ ಅದನ್ನು ತೆಗೆದುಹಾಕಬೇಕು. ಅಲ್ಪಸಂಖ್ಯಾತರಿಗೆ ತೊಂದರೆ ಕೊಡಬೇಕೆಂಬ ಉದ್ದೇಶ ನಮಗಿಲ್ಲ. ಮೈಸೂರು ಎಂದು ಇದ್ದರೆ ಹೇಗೆ ತೊಂದರೆ ಬರುವುದಿಲ್ಲವೋ ಹಾಗೆಯೇ 'ಕರ್ನಾಟಕ' ಎಂದು ಬದಲಾಯಿಸಿದರೂ ತೊಂದರೆ ಬರುವುದಿಲ್ಲವೆಂಬ ಭರವಸೆನ್ನೂ ಕೊಡುತ್ತೇನೆ. ಆದುದರಿಂದ ಭಾಷಾವಾರು ಅಲ್ಪಸಂಖ್ಯಾತರು ಇದನ್ನು ಪುರಸ್ಕರಿಸಬೇಕು ಎಂದು ಹೇಳುತೇನೆ.

ಕನ್ನಡಿಗರಾಗಿ ಕರ್ನಾಟಕ ಬೇಡ ಎಂದು ಹೇಳುವವರಲ್ಲಿ ಪ್ರಗತಿಪರ ವಿಚಾರ ಇದ್ದರೆ ಅದರ ಕಾರಣ ಏನೆಂದು ನನಗೆ ಗೊತ್ತಾಗುವುದಿಲ್ಲ. ಇದರ ಕಾರಣ ಏನೇ ಇರಲಿ ವಿಚಾರ ಮಾಡೋಣ, ಮೈಸೂರು ಎನ್ನುವ ಹೆಸರಿಗೆ ಮಾರ್ಕೆಟ್ ಇದೆ ಎಂಬುದು ಒಂದು ದೊಡ್ಡ ಕಾರಣ. ಆ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಅವರು ಏನು ಪ್ರಯತ್ನ ಮಾಡಿದ್ದಾರೆ ಆ ಪ್ರಯತ್ನ ನಡೆಯಲಾರದು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಕೆಲವರು ಮಾತನಾಡುತ್ತಾ ಕರ್ನಾಟಕ ಎನ್ನುವುದಕ್ಕೆ ತಮಿಳಿನಲ್ಲಿ ಒಂದು ಕೆಟ್ಟ ಅರ್ಥವಾಗುತ್ತದೆ ಎಂದು ಹೇಳಿದರು. ಅಷ್ಟು ಗಂಭೀರವಾದ ಹೆಸರಿನ ಹಿಂದೆ ಏನಿದೆ ಎಂಬುದನ್ನು ತಿಳಿದುಕೊಂಡಿಲ್ಲ. ಹಾಗೆ ಹೇಳಿದವರು ಕರ್ನಾಟಕದವರು, ಚಿತ್ರದುರ್ಗದೊಳಗೆ ನಾಯಕರ ಇತಿಹಾಸವನ್ನು ತೆಗೆದು ನೋಡಿದರೆ ಕರ್ನಾಟಕ ಎಷ್ಟು ಭಾಗಗಳಲ್ಲಿ ವಿಸ್ತರಿಸಿತ್ತು ಎಂಬುದು ಗೊತ್ತಾಗುತ್ತದೆ. ಶ್ರೀಮಾನ್ ನಾಯಕರು ಆ ರೀತಿ ಏತಕ್ಕೆ ಮಾತನಾಡಿದರು? ಎಂಬುದು ಗೊತ್ತಾಗುವುದಿಲ್ಲ. ಅವರು ನನಗೆ ಇತಿಹಾಸವನ್ನು ಹೇಳಿ ಕೊಡಬೇಕಾಗಿಲ್ಲ. ಕರ್ನಾಟಕ ಎಂಬುದಕ್ಕೆ ಒಂದು ಗಂಭೀರವಾದ ಅರ್ಥ ಇದೆ. ಯಾರೂ ಸೆರ್ಟ್ಸ್ ಕಂಡ್‌ಮೈಷನ್ ಮಾಡುವುದಿಲ್ಲ. ಆ ರೀತಿ ಮಾಡುವುದಿಂದ ಅದರಲ್ಲಿ ನಾವೆಲ್ಲರೂ ಸೇರುತ್ತೇವೆ. ಕೊನೆಯಾದಾಗಿ ಹೇಳುವುದಾದರೆ ಕರ್ನಾಟಕ ಎಂಬ ಶಬ್ದದ ಪ್ರಾಧಾನ್ಯತೆ ಆಂದೋಳನಕ್ಕೆ ಬಂದಾಗ ಹೊರಪಡುತ್ತದೆ. ಇದನ್ನು ವಿರೋಧ ಮಾಡತಕ್ಕ ಅಲ್ಪ ಸಂಖ್ಯಾತರ ಸಲುವಾಗಿ ಹೇಳಿದ್ದೇನೆ ಇದನ್ನು ವಿರೋಧ ಮಾಡತಕ್ಕ ಕನ್ನಡ ಬಾಂಧವರ

ಸಲುವಾಗಿ ಸ್ವಲ್ಪ ಹೇಳತಕ್ಕದ್ದು ಇದೆ. ಸ್ವಾಮಿ, ಕನ್ನಡ ಒಂದು ಸಂಸ್ಕೃತಿ ಮತ್ತು ಒಂದು ಭಾಷೆ ಈ ರಾಜ್ಯದೊಳಗೆ ಇರಬೇಕು ಎಂದು ಅಪೇಕ್ಷೆ ಮಾಡುತ್ತೇನೆ. ಆ ರೀತಿ ಅಪೇಕ್ಷೆ ಮಾಡುವುದು ನಿಶ್ಚಯ ಆಗಬೇಕಾದರೆ ಈ ನಿರ್ಣಯಕ್ಕೆ ಒಪ್ಪಿಗೆ ಕೊಡಬೇಕು. ಕರ್ನಾಟಕ ಎಂಬ ಹೆಸರನ್ನು ಅಳಿಸಿದರೆ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಕನ್ನಡ ಭಾಷೆ ಎಂಬುದು ಇತ್ತು ಎಂಬ ವಿಷಯ ಮುಂದಿನ ಜನಾಂಗದವರಿಗೆ ಮರೆತು ಹೋಗಿ ತಾಳೆಗರಿ, ಅಥವಾ ಇತರ ಪುಸ್ತಕಗಳಿಂದ ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ವಿವೇಚನಾ ದೃಷ್ಟಿಯಿಂದ ವಿಚಾರ ಮಾಡಬೇಕು, ನಾವು ಕೇವಲ ಒಂದು ರಾಜ್ಯವನ್ನು ಕಟ್ಟುವ ಮನೋವೃತ್ತಿಯಿಂದ ವಿಚಾರ ಮಾಡುತಿದ್ದೇವೆ. 100 ವರ್ಷಗಳ ಅನಂತರ ಯಾವುದೋ ವ್ಯಕ್ತಿಗಳ ಪ್ರಭಾವದಿಂದ ಸಾಧಿಸಿದ್ದನ್ನು ಇಂಥಾ ಸಮಯ ಬಂದಾಗ ಕಳೆದುಕೊಂಡರೆ ನಾಳೆ ನಮ್ಮ ಮಕ್ಕಳು ನಮಗೆ ಶಾಪ ಕೊಡಬಹುದು, ಎನ್ನುವುದನ್ನು ವಿಚಾರ ಮಾಡಬೇಕು. ಈ ದೃಷ್ಟಿಯಿಂದ ನಾವು ಇದರ ಕಡೆ ಲಕ್ಷ್ಯ ಕೊಡಬೇಕಾಗಿದೆ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಮಕ್ಕಳು ಮುಂದೆ ಇದು ಕನ್ನಡ ನಾಡಾಗಿದ್ದರೂ ಏತಕ್ಕೆ ಇದನ್ನು ಕರ್ನಾಟಕ ಎಂಬ ಹೆಸರಿನಿಂದ ಕರೆಯಲಿಲ್ಲಾ ಎಂಬ ಸಂಶಯ ಅವರಿಗೆ ಬರಬಾರದು. ಈ ದೇಶ ಆದದ್ದು ಒಂದು ಸಂತೋಷದ ವಿಷಯ, ಮೈಸೂರು ಎಂದು ಆಗಿರುವುದಕ್ಕೆ ನಿಜವಾಗಿಯೂ, ಹೆಮ್ಮೆಪಡುತ್ತೇನೆ. ಅದಕ್ಕೆ ಕಾರಣವೇನೆಂದರೆ ಮೈಸೂರು ಎನ್ನುವುದು ಅಸ್ತಿತ್ವದಲ್ಲಿ ಇಲ್ಲದೆ ಇದ್ದರೆ ಕರ್ನಾಟಕ ಇಷ್ಟೊತ್ತು ರಚನೆಯಾಗುತ್ತಿರಲಿಲ್ಲ ತತ್‌ಪರಿಣಾಮವಾಗಿ ಕನ್ನಡ ಮಾತನಾಡುವ ಜನರು ಒಂದುಕಡೆ ಸೇರಿ ಈ ಭವ್ಯವಾದ ವಿಧಾನ ಸಭೆಯಲ್ಲಿ ಕುಳಿತು ಮಾತನಾಡುತ್ತಿದ್ದೇವೆ. ಮೊದಲು ಕರ್ನಾಟಕ ಎಂದು ಹೆಸರಿಡಬೇಕೆಂದು ಪ್ರಾಂತ ಪುನರ್ ವಿಂಗಡಣಾಕಾಲಕ್ಕೆ ಡಿಕ್ಲೇರ್ ಮಾಡಿದರು. ಕೊನೆ ಕೊನೆಗೆ ಪಾರ್ಲಿಮೆಂಟ್‌ನಲ್ಲಿ ಬದಲಾವಣೆ ಆಯಿತು. ಪಾರ್ಲಿಮೆಂಟಿನಲ್ಲಿ ಬದಲಾವಣೆ ನಿಶ್ಚಿತವಾಗಿಯೂ, ಅವಸರದಲ್ಲಿ ಆದದ್ದು ಇದನ್ನು ಸಿಂಹಾವಲೋಕನ ಮಾಡಿದರೆ ಕರ್ನಾಟಕ ಎಂದು ಇಡುವುದು ನಿಜವಾಗಿಯೂ ನಮ್ಮೆಲ್ಲರಿಗೂ ಸ್ಫೂರ್ತಿಯನ್ನು ಉಂಟು ಮಾಡುತ್ತದ. ಮನಸ್ಸಿನ ಏಕೀಕರಣವನ್ನು ಮುಂದಿನ ಕೆಲಸಕ್ಕೆ ತಳಹದಿ ಹಾಕಲಿಕ್ಕೆ ಅಸ್ಪದ ಕೊಡುತ್ತದೆ. ಇದನ್ನು ಕೇವಲ ರಾಜಕೀಯ ದೃಷ್ಟಿಯಿಂದ ವಿಚಾರ ಮಾಡಬಾರದು. ಇದು ರಾಜಕೀಯಕ್ಕಿಂತ ಅಮೋಘವಾದದ್ದು, ಮತ್ತು ಅಮೂಲ್ಯವಾದದ್ದು. ಕೆಲವು ರಾಜಕಾರಣಿಗಳು ಕೂಡಿ ಇಟ್ಟಂತ ಹೆಸರಲ್ಲ. ಪೂರ್ವದ ಋಷಿಗಳು, ಕೋಲಾರದ ನಂದಿ ಬೆಟ್ಟದಲ್ಲಿದ್ದ ಜೈನ ಮಹರ್ಷಿಗಳು ಈ ನಾಡನ್ನು ಕರ್ನಾಟಕ ಎಂದು ಕರೆದಿದ್ದಾರೆ. ಆರನೆಯ ಶತಮಾನಕ್ಕಿಂತ ಮೊದಲಿನಿಂದ ಈ ಹೆಸರು ಇದೆ. ನನ್ನ ಸ್ನೇಹಿತರೊಬ್ಬರು ತಮಿಳು ನಾಡಿನ ಅರ್ಕಾಟ್ ಮುಂತಾದ ಪ್ರದೇಶಗಳು ಸೇರಿ ಕರ್ನಾಟಕ ಆಯಿತು ಎಂದು ಹೇಳಿದ್ದಾರೆ. ಅವರೂ ಸಹ ಕರ್ನಾಟಕ ಎಂದು ಇಟ್ಟುಕೊಂಡರೆ ನನ್ನ ಆಕ್ಷೇಪಣೆಯಿಲ್ಲ. ಅವರು ಹಾಗೆ ಮಾಡಲಾರರು. ಕರ್ನಾಟಕ ಪ್ರದೇಶ ಈಗ ಅಷ್ಟು ವಿಸ್ತಾರವಾಗಿಲ್ಲ. ಕಾವೇರಿಯಿಂದ ಗೋದಾವರಿವರೆಗೆ ಇದ್ದ ಪ್ರದೇಶವೆಲ್ಲಾ ಕರ್ನಾಟಕಕ್ಕೆ

ಸೇರಿತ್ತು. ಕರ್ನಾಟಕಕ್ಕೆ 3-4 ಲಕ್ಷ ಹೊರಗಿನಿಂದ ಬರತಕ್ಕವರು ಇದ್ದಾರೆ ಅವರಿಗೆ ಸ್ಫೂರ್ತಿ ಕೊಡಬೇಕು ಅವರು ಕರ್ನಾಟಕಕ್ಕೆ ಬರುತ್ತೇನೆಂದು ಚಳುವಳಿ ಮಾಡುತ್ತಿದ್ದಾರೆ.

ಹೊರಗಿನಿಂದ ಬರುವವರಿಗೆ ಸಹಕಾರ ನೀಡಬೇಕು. ಈ ಪ್ರಶ್ನೆಯನ್ನು ಯೋಗ್ಯ ದೃಷ್ಟಿಯಿಂದ ವಿಚಾರ ಮಾಡುವುದು ಅವಶ್ಯಕ. ನಾನು ಇದನ್ನು ಸಾವಿರಾರು ಉದಾಹರಣೆಗಳಿಂದ ಸ್ಪಷ್ಟೀಕರಿಸಬಲ್ಲೆ, ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಅಳರಸರು ಇಟ್ಟಂತಹ ಹೆಸರು ಇದು. ಮೈಸೂರು ಎನ್ನುವ ಭೂ ಪ್ರದೇಶ ಕರ್ನಾಟಕದ ಒಂದು ಅಂಗ. ಕರ್ನಾಟಕ ರಾಜ್ಯ ಹಿಂದೆ ಇತ್ತು ಎಂದು ನನ್ನ ಅನೇಕ ಸ್ನೇಹಿತರು ಹೇಳಿದರು. ಯಾವುದೇ ಒಂದು ರಾಜ್ಯ ಈ ರೀತಿ ಹೆಸರನ್ನು ಹೊಂದಿಲ್ಲ. ಕರ್ನಾಟಕ ಎಂಬ ರಾಜ್ಯ ಭೂ ಪ್ರದೇಶತದಲ್ಲಿ ಇಲ್ಲ, ಎಂದು ಹೇಳುವುದಕ್ಕಾಗುವುದಿಲ್ಲ. ಈ ಮಾತನ್ನು ಎರಡು ಸಾವಿರ ವರ್ಷಗಳ ಇತಿಹಾಸದಿಂದ ತೋರಿಸಬಹುದು. ತತ್ಪೂರ್ವದಲ್ಲಿ ಇದು ಪುರಾಣದ ಮಾತು. ಅದನ್ನೆಲ್ಲಾ ನೋಡಿದರೆ ಭಾರತ ಎನ್ನುವ ಹೆಸರು ಎಂಥಾದ್ದೆ ಇಡಿಯ ಭರತಖಂಡದ ಸಂಸ್ಕೃತಿಯ ಅರಿವುಂಟಾಗುತ್ತದೆ; ಇದರಿಂದ ನಮ್ಮೆಲ್ಲರಿಗೂ ಸ್ಫೂರ್ತಿ ದೊರೆಯುತ್ತದೆ ಎಂಬ ಉದಾತ್ತ ಭಾವನೆಯುಂದಲೇ, ನಮ್ಮ ದೇಶಕ್ಕೆ ಭಾರತ ಎಂದು ಹೆಸರನ್ನು ಇಟ್ಟುಕೊಂಡಿದ್ದೇವೆ. ಆ ದೃಷ್ಟಿಯಿಂದ ಬ್ರಿಟಿಷರಲ್ಲೂ ಭಾರತ ಎಂದರೆ ಒಂದು ಗೌರವ ಇದೆ. ಅನೇಕ ಕಾರಣಗಳಿಂದ ವಿಚಾರ ಮಾಡಿ ನೋಡಿದರೆ ಈ ನಿರ್ಣಯ ವಿರೋಧಿಸತಕ್ಕವರ ಮಾತಿನಲ್ಲಿ ನಿಜವಾಗಿ ಸತ್ಯಾಂಶವಿದೆ ಎಂಬುದು ನನಗೆ ಕಂಡು ಬರಲಿಲ್ಲ. ಮೈಸೂರು ಎನ್ನುವ ಭೂ ಪ್ರದೇಶ ಕರ್ನಾಟಕದ ಭಾಗವೋ ಅಲ್ಲವೋ, ಕರ್ನಾಟಕದ ಭಾಗ ಎಂದು ಸಿದ್ಧವಾಗಿದ್ದರೆ ಮಾಡಿ; ಇಲ್ಲವಾದರೆ ಬೇಡಿ, ದೈವವಶಾತ್ ಏಕೀಕರಣವಾಗಿದೆ. ಆದ್ದರಿಂದ ಈ ಭಾಗಕ್ಕೆ ಕರ್ನಾಟಕ ಎಂದು ಹೆಸರು ಬರುವುದು ಅವಶ್ಯಕ. ಈಗ ಇದಕ್ಕೆ ಕೆಲವರು ವಿರೋಧ ಮಾಡುತ್ತಿದ್ದಾರೆ. ಅದಕ್ಕೇನೂ ಕಾರಣವಿಲ್ಲ. ಈ ಪ್ರಶ್ನೆಯ ಕಡೆ ಒಳ್ಳೆಯ ದೃಷ್ಟಿ ಮನಸ್ಸಿನಿಂದ ಎಲ್ಲರೂ ತಮ್ಮ ಒಮ್ಮತ್ತಗೊಟ್ಟು ಈ ನಿರ್ಣಯ ಪಾಸಾಗಿ ಬರುವುದಕ್ಕೆ ಈಗಿರತಕ್ಕ ಎಲ್ಲಾ ಅಂಶಗಳನ್ನು ಗಮನಿಸಬೇಕೆಂದು ಹೇಳುತ್ತೇನೆ.

11.30 ಎ.ಎಂ.

ನನ್ನ ಸ್ನೇಹಿತರಾದ ಶ್ರೀಮಾನ ಆರ್ಮುಗಂ ಅವರು ಇಲ್ಲಿಗೆ ಬಂದ ಲಾಗಾಯಿತು ಒಳ್ಳೆಯ ಪ್ರಗತಿಪರ ಮನೋವೃತ್ತಿಯುಳ್ಳವರಾಗಿದ್ದಾರೆ. ಅವರು ಈ ನಿರ್ಣಯವನ್ನು ಯಾವ ರೀತಿ ವಿಚಾರ ಮಾಡುತ್ತಾರೋ ಅದು ನನಗೆ ಗೊತ್ತಿಲ್ಲ. ಆ ದೃಷ್ಟಿಯಿಂದ ನೋಡಿದರೆ ನಿಜವಾಗಿ ಅವರೂ ಈ ನಿರ್ಣಯವನ್ನು ಒಪ್ಪಿದ್ದಾರೆಂದು ನಾನು ತಿಳಿಯುತ್ತೇನೆ. ಮೈಸೂರು ಎಂಬುದು ಪ್ರತಿಗಾಮಿಯೋ, ಕರ್ನಾಟಕವೆಂಬುದು ಪ್ರತಿಗಾಮಿಯೋ ಎಂಬುದನ್ನು ವಿಚಾರ ಮಾಡಿದರೆ ರಾಜ್ಯಾಂಗದ ಕಾನೂನುಗಳ ಪ್ರಕಾರ ಅನೇಕ ಕಾಯದೆಗಳು ಏಕರೂಪವಾಗಿ ಜಾರಿಗೆ ಬರುತ್ತಿರುವುದರಿಂದ, ಮುಕ್ತ ಮನಸ್ಸಿನಿಂದ ಕರ್ನಾಟಕವೆಂಬ ಹೆಸರು

ಪ್ರಗತಿಪರವಾದುದೆಂದು ಹೇಳಬಹುದು. ರಾಜಕೀಯ ರೀತಿಯನ್ನು ಬಿಟ್ಟು ಇದನ್ನು ವಿಚಾರ ಮಾಡಬೇಕು. ಬಿಚ್ಚು ಮನಸ್ಸಿನಿಂದ ವಿಚಾರ ಮಾಡಬೇಕು. ಕರ್ನಾಟಕವೆಂಬ ಹೆಸರಿನ ನಿರ್ಣಯ ಇನ್ನು 3-4 ತಿಂಗಳೊಳಗೆ ಈ ಸಭೆಯಲ್ಲಿ ಪಾಸಾಗಬೇಕು. ಈಗಾಗಲೇ ಈ ಆ ನಿರ್ಣಯವನ್ನು ಪಾಸ್ ಮಾಡಬೇಕಾಗಿತ್ತು. ಆದರೆ ಈ ಚರ್ಚೆ ಮುಂದೆ ಹೋಗುವುದಕ್ಕೆ ನನ್ನ ಅಭ್ಯಂತರವಿಲ್ಲ. ಕೊನೆಯದಾಗಿ ನಾನು ಸ್ಪಷ್ಟವಾದ ಒಂದು ಮಾತನ್ನು ಹೇಳುತ್ತೇನೆ. ಮುಂದಿನ ಬಡ್ಜೆಟ್ ಅಧಿವೇಶನದೊಳಗೆ ನಮ್ಮ ಈ ವಿಶಾಲ ಮೈಸೂರು ರಾಜ್ಯಕ್ಕೆ ಕರ್ನಾಟಕವೆಂಬ ಹೆಸರು ಪಡದೇ ಇನ್ನೂ ಮುಂದೆ ಹೋದರೆ ಅದರಿಂದ ಕೆಡಕು ಜಾಸ್ತಿಯಾಗುತ್ತದೆ, ಸರ್ಕಾರ ತಪ್ಪು ಮಾಡಿದಂತಾಗುತ್ತದೆ. ಆಗ ಈ ಸಭೆ ಸರ್ವಾಧಿಕಾರವನ್ನು ತರುವುದಕ್ಕೆ ಅಪೇಕ್ಷೆ ಮಾಡುತ್ತದೆ. ಈ ನಿರ್ಣಯದ ವಿಷಯದಲ್ಲಿ ತೀವ್ರತೆ ಇರುವವರು ಬಹಳ ಜನರು ಇದ್ದಾರೆ. ಈ ಬಗ್ಗೆ ಸುಮ್ಮನೆ ಏನೋ ಒಂದು ಆರೋಪಣೆ ಇದೆ. ನನಗಿಂತಲೂ ತಿಳಿದವರೂ ಹೆಚ್ಚು ಮಂದಿ ಇದ್ದಾರೆ. ತೀವ್ರತೆಯನ್ನು ಈ ರೀತಿ ನಾವು ಹಿಂದೆಯೇ ವ್ಯಕ್ತ ಮಾಡಿದ್ದರೆ, ಈ ನಿರ್ಣಯವನ್ನು ಈ ಸಭೆಯಲ್ಲಿ ಹಿಂದೆಯೇ ತಂದಿದ್ದರೆ, ಈ ಮೂರು ವರ್ಷಗಳ ಕೆಳಗೇ ನಮ್ಮ ಈ ವಿಶಾಲ ಮೈಸೂರು ಕರ್ನಾಟಕವೆಂಬ ಹೆಸರನ್ನು ತರಬಹುದಾಗಿತ್ತು. ಈ ಹೆಸರು ಬರಬೇಕು ಎನ್ನುವುದರ ಜೊತೆಗೆ ಈ ಬಗ್ಗೆ ಕೆಲವರು ವಿರೋಧ ಮಾಡುವವರ ಮನಸ್ಸು ಕೆಡಬಾರದು. ಅಂತಹವರನ್ನು ನಮ್ಮ ಹತ್ತಿರಕ್ಕೆ ಕರೆತರಬೇಕು. ನಮ್ಮ ಅಭಿಪ್ರಾಯಕ್ಕೆ ಸಮ್ಮತಿಸುವ ರೀತಿಯಲ್ಲಿ ಅವರ ಮನಸ್ಸನ್ನು ಮೃದು ಮಾಡಬೇಕು. ಈ ಮಧ್ಯೇ ಏನೋ ಒಂದು ತಪ್ಪು ಮಾಡಿದ್ದೇವೆ ಎಂಬ ಭಾವನೆ ಅವರಲ್ಲಿ ಮೂಡಬಾರದು ಎಂದು ನನ್ನ ಅಪೇಕ್ಷೆ. ಈಗಾಗಲೇ ಸಾಕಷ್ಟು ಕಾಲವಾಗಿದೆ. ವಿಶಾಲ ಮೈಸೂರು ರಾಜ್ಯವಾಗಿ ಮೂರು ವರ್ಷಗಳಾಗಿವೆ. ಇನ್ನೂ ಹೆಚ್ಚು ವರ್ಷಗ ಕಾಲ ಈ ಪ್ರಶ್ನೆಯನ್ನು ಬಗೆ ಹರಿಸದೇ ಮುಂದುವರಿಸುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಅದಕ್ಕೆ ಒಂದು ಉದಾಹರಣೆಯನ್ನು ಹೇಳಬಹುದು. ಮಗು ಜನನವಾದ 10-11 ದಿವಸಗಳ ಮೇಲೆಯೇ ಏನಾದರೊಂದು ಹೆಸರಿಡುತ್ತಾರೆ. ಅದು ವಾಡಿಕೆ. 4 ವರ್ಷಗಳಾದ ಮೇಲೆ ಹೆಸರಿಸಡುವುದು ಅಷ್ಟಾಗಿ ಸರಿಯಾದುದಲ್ಲ. ಈಗ ನಾವೂ, ನೀವೂ ಕೂಡಿದ್ದೇವೆ ಹಿಂದೆ ಯಾವಾಗಲೋ ಮೈಸೂರು ಎಂದು ಹೆಸರಿತ್ತು ಅದನ್ನೇ ನಾವೆಲ್ಲರೂ ಇದುವರೆಗೂ ಕರೆಯುತ್ತಿದ್ದೇವೆ. ಈಗ ವಿಶಾಲ ಮೈಸೂರು ರಾಜ್ಯವಾದ ಮೇಲೆ ಇನ್ನು ಮುಂದೆ ಕರ್ನಾಟಕವೆಂಬ ಹೆಸರನ್ನಿಡುವುದು ಸೂಕ್ತ. ಯಾವುದಕ್ಕೂ ಮಂತ್ರಿಗಳು ಉತ್ತರ ಕೊಡಬೇಕು. ಈ ಪ್ರಶ್ನೆಯ ಬಗ್ಗೆ ಹೆಚ್ಚುಕಾಲ ತೆಗೆದುಕೊಳ್ಳುವುದು ಬೇಡ; ಅನಾವಶ್ಯಕ. ದೇಶದ ಇಂತಹ ಪ್ರಶ್ನೆಯನ್ನು ಬಗೆಹರಿಸಬೇಕಾದರೆ ಮೊದಲು ಮನಸ್ಸಿನ ಪರಿವರ್ತನೆಯಾಗಬೇಕು. ಈಗ ಕಾಂಗ್ರೆಸ್ ಪಕ್ಷ ಪಿ.ಎಸ್.ಪಿ. ಸ್ವತಂತ್ರರೂ ಎಲ್ಲರೂ ಇದಕ್ಕೆ ಒಪ್ಪಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯವರು ಈ ನಿರ್ಣಯ ಸರಿಯಾದುದೆಂದು ಹೇಳಿದ್ದಾರೆ. ಆದುದರಿಂದ ಈ ನಿರ್ಣಯಕ್ಕೆ ಎಲ್ಲರೂ ಒಮ್ಮತ ಕೊಟ್ಟಿದ್ದಾರೆಂದಾಯಿತು. ಈ ಬಗ್ಗೆ ಯಾರೂ ವಿರೋಧಿಸಲಾರರು ಎಂದು ನಾನು ತಿಳಿದಿದ್ದೇನೆ.

**ಶ್ರೀ ಎಂ.ಸಿ. ನರಸಿಂಹನ್** (ಕೋಲಾರ ಚಿನ್ನದಗಣಿ)**:** ಕಾಂಗ್ರೆಸ್ ಪಕ್ಷ ಮೊದಲೇ ಒಪ್ಪಿದ್ದರೆ ಈ ತೊಂದರೆಯಾಗುತಿರಲಿಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ಮೈಸೂರು ಕಾಂಗ್ರೆಸ್ ಕಮೀಟಿ ಅಭಿಪ್ರಾಯ ಬೇರೆ. ಇತರ ಪ್ರದೇಶಗಳ ಕಾಂಗ್ರೇಸ್ ಕಮೀಟಿ ಅಭಿಪ್ರಾಯ ಬೇರೆ ಎಂಬ ಪ್ರಶ್ನೆಯನ್ನು ನಾವು ಸರಿಯಾಗಿ ತಿಳಿದುಕೊಳ್ಳಬೇಕು;

**ಶ್ರೀ ಬಿ.ಡಿ.ಜತ್ತಿ** (Chief Minister):- ಅವರು ವಿವರಾಗಿ ವಿವರಿಸುವರು ತಾಳ್ಮೆ ಇರಲಿ ಆ ಮಾನ್ಯ ಸದಸ್ಯರಿಗೆ ಸರಿಯಾಗಿ ಅದನ್ನು ಎಕ್ಸ್‌ಪ್ಲೇನ್ ಮಾಡಿದರೆ ಗೊತ್ತಾಗುತ್ತದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಈ ಪ್ರಶ್ನೆಯ ಬಗ್ಗೆ ಯಾರಿಗೂ ವಿರೋಧವಿಲ್ಲ. ಆದರೂ ಈ ಪ್ರಶ್ನೆ ಬಗೆಹರಿಸುವುದು ನಿಧಾನವಾಗಿದೆ. ಇದು ಬಹಳ ಅಶ್ಚರ್ಯಪಡಬೇಕಾದ ಸಂಗತಿ.

**ಶ್ರೀ ಎಂ. ರಾಮಪ್ಪ (ಹರಿಹರ):** ಕಾಂಗ್ರೆಸ್ ಲೆಜಿಸ್ಲೇಚರ್ ಪಾರ್ಟಿ ಈ ವಿಷಯದಲ್ಲಿ ಈಗಾಗಲೇ ಒಂದು ನಿರ್ಣಯವನ್ನು ತೆಗೆದುಕೊಂಡಿದೆ.

**ಶ್ರೀ ಬಿ.ಡಿ. ಜತ್ತಿ:** ಕಾಂಗ್ರೆಸ್ ಪಕ್ಷ ಏನು ನಿರ್ಣಯ ಮಾಡಬೇಕೋ ಅದನ್ನು ಮಾಡಿದೆ. ಆದರೆ ಆ ನಿರ್ಣಯವನ್ನು ಜಾರಿ ಮಾಡುವಾಗ ಒಂದು ಕೊನೆ ಮಾತು. ಆ ಪಕ್ಷಕ್ಕೆ ತೊಂದರೆಯಾದರ ಮೂರನೆಯುವರಿಗೆ ಆ ವಿಷಯುದಲ್ಲಿ ವ್ಯತಿರಿಕ್ತವಾಗಿ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ಈ ಪ್ರಶ್ನೆಯನ್ನು ದೇಶದ ದೃಷ್ಟಿಯಿಂದ ವಿಚಾರ ಮಾಡಬೇಕೆಂಬುದು ಹೇಳತಕ್ಕ ಕಾಂಗೇಸ್ಸಿನವರು ಕೆಲವರು ಇದ್ದಾರೆ. ಈ ನಿರ್ಣಯಕ್ಕೆ ಬೆಂಬಲ ಕೊಡಬಾರದು ಎಂದು ಹೇಳತಕ್ಕವರೂ ಇದ್ದಾರೆ. ಒಟ್ಟಿನಲ್ಲಿ ಅಂತಹವರ ಮನಸ್ಸನ್ನು ಸ್ವಲ್ಪ ಮೃದು ಮಾಡಿ ಅವರಿಗೆ ಈ ನಿರ್ಣಯದ ಮಹತ್ವ ಚೆನ್ನಾಗಿ ಅರಿವಾಗಲಿ ಎಂದು ಇಲ್ಲಿ ಈ ನಿರ್ಣಯವನ್ನು ಇಟ್ಟಿದ್ದಾರೆ. ಮುಖ್ಯವಾಗಿ ಈ ನಿರ್ಣಯಕ್ಕೆ ಯಾವ ತರಹದ ವಿರೋಧವೂ ಹೆಚ್ಚಿಗೆ ಬಂದಿಲ್ಲವೆಂದು ನಾನು ತಿಳಿದಿದ್ದೇನೆ. ಹಿಂದಿನ ಸಲ ಈ ನಿರ್ಣಯ ಚರ್ಚೆಯಾದಾಗ ಹಳೆಯ ಮೈಸೂರಿನ 30 ಜನ ವಿರೋಧ ಪಕ್ಷದ ಸದಸ್ಯರು ಮತ್ತು ಕಾಂಗ್ರೇಸ್ ಪಕ್ಷದ 20 ಜನ ಸದಸ್ಯರು ಒಪ್ಪಿಗೆ ಕಳುಹಿಸಬೇಕಾದರೆ, ಈ ಸಭೆಯಲ್ಲಿ ಮುಂದೆ ಅದು ಇನ್ನೊಂದು ಸಾರಿ ಚರ್ಚೆ ಬಂದಾಗ ತಮ್ಮ ಒಪ್ಪಿಗೆಯನ್ನು ಕೊಡುತ್ತೆವೆಂದು ವಾಗ್ದಾನ ಮಾಡಿ ಹೇಳಿದ್ದಾರೆ. ದಕ್ಷಿಣ ಕರ್ನಾಟಕದಿಂದ ಬಂದ ಕೆಲವು ಸದಸ್ಯರೂ ಸಹ ತಮ್ಮ ಒಪ್ಪಿಗೆಯನ್ನು ಈ ನಿರ್ಣಯಕ್ಕೆ ಮುಂದೆ ಕೊಡುತ್ತೇವೆಂದು ಈ ಸಭೆಯಲ್ಲಿ ಹಿಂದೆ ಭಾಷಣ ಮಾಡಿದ್ದಾರೆ.

1740-5

**ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಕುಂದಾಪೂರ):** ಮುಖ್ಯ ಮಂತ್ರಿಗಳು ಏನು ಹೇಳಿದರು?

**ಶ್ರೀ ಎ.ಜೆ. ದೊಡ್ಡಮೇಟಿ:** ಅವರು ಆಗ ಇಲ್ಲಿ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಅವರ ಜಮಖಂಡಿ ಕ್ಷೇತ್ರವನ್ನು ಬಿಟ್ಟು ಕೊಟ್ಟಿದ್ದು ಕರ್ನಾಟಕ ಸಂಸ್ಥಾನ ಆಗುವುದಕ್ಕಾಗಿಯೇ, ಹೀಗಿರುವಾಗ ಮುಖ್ಯ ಮಂತ್ರಿಗಳ ಅಭಿಪ್ರಾಯವೇನಿದೆ ಎಂದು ಕೇಳಿದರೆ ಹೇಗೆ?

**ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ):** ಮುಖ್ಯಮಂತ್ರಿಗಳು ಏನು ಹೇಳುತ್ತಾರೋ ಅದನ್ನು ಏಕೆ ಸುಮ್ಮನೇ ಚರ್ಚಿಸಿ?

**ಶ್ರೀ ಬಿ.ಡಿ. ಜತ್ತಿ:** ಈ ಪ್ರಶ್ನೆ ನಮ್ಮೆಲ್ಲರಿಗೂ ಅತೀ ಮಹತ್ವದ್ದು ಇರುತ್ತದೆ ಸದಸ್ಯರು ಎರಡೂ ಕಡೆಯಿಂದಲೂ ಸರಿಯಾಗಿ ತಿಳಿದುಕೊಳ್ಳಲೇಬೇಕು. ಆದ್ದರಿಂದಲೇ ನಾವು ತೀರ್ಮಾನವೇ ಬರುವ ಪೂರ್ವದಲ್ಲಿ ಸಂಪೂರ್ಣವಾಗಿ ಚರ್ಚಿಸಲೇಬೇಕು.

**ಶ್ರೀ ಎಂ. ಸಿ ನರಸಿಂಹನ್:** ಈ ಪ್ರಶ್ನೆಗೆ ದ್ವಿಮುಖ ರೂಪಗಳಿವೆ, ಬಹುಶಃ ಶ್ರೀ ಚನ್ನಬಸಪ್ಪನವರು ಆ ಪ್ರಶ್ನೆಗೆ ವಿರೋಧಿಸಲ್ಪಡಬಹುದು.

**ಶ್ರೀ ಎ. ಜೆ. ದೊಡ್ಡಮೇಟಿ:** ಅದು : ಅದು ನನಗೆ ಗೊತ್ತಿಲ್ಲ. ಇತರರೂ ಮಾತನಾಡಿದ್ದಾರೆ. ಶ್ರೀಮಾನ್ ದೀನದಯಾಳು ನಾಯ್ಡು ಏನು ಮಾತನಾಡಿದ್ದಾರೋ ಅದು ಗೊತ್ತಿಲ್ಲ.

**ಶ್ರೀ ವಿ.ಪಿ. ದೀನದಯಾಳು ನಾಯ್ಡು (ಕಬ್ಬನ್ ಪೇಟೆ)** - ಅವರು ಅತಿ ಕಠೋರವಾಗಿ ವಿರೋಧಿಸುತ್ತಿದ್ದಾರೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಅವರು ಅತಿ ಕಠೋರವಾಗಿ ವಿರೋಧಿಸುತ್ತಿದ್ದಾರೆ.

ಆದರೆ ಈ ನಿರ್ಣಯವನ್ನು ರಾಜಕೀಯ ದೃಷ್ಟಿಯಿಂದ ವಿಚಾರ ಮಾಡುವುದು ಬೇಡ. ಯಾರನ್ನೂ ಈ ಬಗ್ಗೆ ಎತ್ತಿ ಕಟ್ಟಬಾರದು. ಈ ನಿರ್ಣಯದ ಮೆರಿಟ್ ಮೇಲೆ ಇದನ್ನು ಇಲ್ಲಿ ಒಂದು ಘನತೆಯಿಂದ ಚರ್ಚೆಮಾಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ಈಗ ಕರ್ನಾಟಕವೆಂದು ಹೇಳತಕ್ಕವರು ಕನ್ನಡಿಗರೇ, ಹಿಂದೆ ವಿಜಯನಗರವೆಂದು ಇರಲಿ ಎಂದು ಹೇಳಿದವರು ಕನ್ನಡಿಗರೇ ಹಿಂದಿನ ತೆಲುಗರು ಕೆಲವರು ಈಗ ಕನ್ನಡಿಗರಾಗಿದ್ದಾರೆ. ಕನ್ನಡಿಗರು ಕೆಲವರು ಈಗ ತೆಲುಗರು ಸಹ ಆಗಿದ್ದಾರೆ. ಕರ್ನಾಟಕ ರಾಜ್ಯ ಸ್ಥಾಪನೆ ನಮ್ಮ ಭಾರತ ದೃಷ್ಟಿಯಿಂದ ಆಗಬೇಕು. ಕನ್ನಡ ಭಾಷೆಗೆ ಉತ್ತೇಜನ ಹುಟ್ಟಬೇಕು. ಕನ್ನಡ ಭಾಷೆಗೆ ಪ್ರೋತ್ಸಾಹ ಕೊಡಬೇಕು ಎನ್ನುವುದು ಬಹುಶಃ ಪುಸ್ತಕದಲ್ಲಿದೆಯಲ್ಲಾ ಎಂಬ ಪರಿಸ್ಥಿತಿಯಾಗಕೂಡದು. ಈಗ ಬೆಂಗಳೂರು ನಗರದಲ್ಲಿನ ಸ್ಥಿತಿಯನ್ನು ನಾನು ನೋಡಿದ್ದೇನೆ. ಇಲ್ಲಿ ಕನ್ನಡಭಾಷೆ ಯಾವ ರೀತಿ ಕುಸಿದು ಬೀಳುತ್ತಿದೆ ಎಂಬುದು ನನಗೆ ಗೊತ್ತಿದೆ. ಕೆಲವರು ಮಾತ್ರ ಇದಕ್ಕೆ ವಿರೋಧ ಮಾಡುವಾಗ ಅಂತಹವರ ಮನಸ್ಸನ್ನು ಮೃದು

ಮಾಡಿ ಅವರ ಅಭಿಪ್ರಾಯವನ್ನು ಬದಲಾಯಿಸಬೇಕು. ಆದರೆ ಬಹಳ ಅವಸರವಾಗಿ ಇದನ್ನು ಚರ್ಚೆ ಮಾಡಿ ಈ ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂಬುದಾಗಿ ನಾನು ಹೇಳಲಿಲ್ಲ. ಈಗಾಗಲೇ ಕಾಲ ಸಾಕಷ್ಟು ಆಗಿದೆ. ಈ ಬಗ್ಗೆ ಚರ್ಚೆ ಹಿಂದೆ ಸ್ವಲ್ಪ ಮಟ್ಟಿಗೆ ಆಗಿದ್ದರೂ ಮೊನ್ನೆ ಈ ಬಗ್ಗೆ ವಿರೋಧ ಮಾಡಿದವರು ಸಾಕಷ್ಟು ಅವಕಾಶವನ್ನು ತೆಗೆದುಕೊಂಡು ನ್ಯಾಯದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಇನ್ನೂ ಹೆಚ್ಚಿನ ಕಾಲ ಚರ್ಚಿಸಿ ಕೊನೆಯ ಪಕ್ಷ ಮುಂದಿನ ಬಡ್ಜೆಟ್ ಅಧಿವೇಶನದೊಳಗೆ ಈ ಸಭೆ ತನ್ನ ಮತವನ್ನು ಯಾವ ರೀತಿ ವ್ಯಕ್ತ ಮಾಡುವುದೋ ಆ ರೀತಿ ನಿರ್ಣಯವಾಗಲಿ

**ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು)** - ಅಲ್ಲಿಯವರೆಗೆ;

**ಶ್ರೀ ಜಿ. ಜೆ. ದೊಡ್ಡಮೇಟಿ**- ಅಲ್ಲಿಯವರೆಗೂ ಇದನ್ನು ಚರ್ಚೆಮಾಡಲಿ ಅಷ್ಟು ಹೊತ್ತಿಗೆ ಒಂದು ತೀರ್ಮಾನಕ್ಕೆ ನಾವು ಬರಬೇಕು. ಇವ್ಹೋತ್ತು ನೀವು ಆ ರೀತಿ ಪರೀಕ್ಷೆ ಮಾಡಿದರೆ ನನ್ನ ವಿರೋಧ ಏನೂ ಇಲ್ಲ. ಅನೇಕ ಸಮಸ್ಯೆಗಳನ್ನು ದೂರೀಕರಿಸುವುದಕ್ಕೆ ಸ್ವಲ್ಪ ವೇಳೆ ಆಗುತ್ತದೆಯೇ ಹೊರತು ಅದಕ್ಕಿಂತ ಬೇರೆ ಏನೂ ಇಲ್ಲ. ಕೆಲವರ ಅಪೇಕ್ಷೆಯನ್ನು ನಾವು ಮುರಿಯಬಾರದು ಎಂಬ ಕಾರಣದಿಂದ ನಾವು ಇದನ್ನು ಇನ್ನೂ ದೀರ್ಘವಾಗಿ ವಿಚಾರಮಾಡಿ ನೋಡೋಣ. ಈ ನಿರ್ಣಯ ಸಂಪೂರ್ಣವಾಗಿ ಎಲ್ಲ ಸದಸ್ಯರ ಅನುಗ್ರಹವನ್ನು ಪಡೆಯೋಣ. ನೀವು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಶಿಫಾರಸು ಮಾಡಬೇಕು. ಈ ಶಿಫಾರ್ಸಿಗೆ ಎಷ್ಟು ಬೆಂಬಲ ಕೇಂದ್ರ ಸರ್ಕಾರದಿಂದ ದೊರಕುತ್ತದೆಯೋ ಅಷ್ಟು ಬೇಗ ಕಾರ್ಯವಾಗುತ್ತದೆ. ಈಗ ನೂರಕ್ಕೆ ನೂರು ಸಿಕ್ಕುವುದು ಕಷ್ಟ. ಆದರೆ ನೂರಕ್ಕೆ ಎಂಬತ್ತೈದು ಸಿಕ್ಕಿದರೆ ಸಾಕು. ಈ ಒಂದು ದೃಷ್ಟಿಯಿಂದಾದರೂ ವಿಚಾರ ಮಾಡಬೇಕು. ಈ ದೃಷ್ಟಿಯಲ್ಲಿ ಪ್ರಾಥಮಿಕವಾಗಿ ಈ ನಿರ್ಣಯ ಪಾಸ್ ಆಗಬೇಕೆಂದು ಕೆಲವರು ಇದ್ದಾರೆ. ಅದಕ್ಕಾಗಿ ಅನೇಕರು ಹೆಚ್ಚಿನ ಬೆಂಬಲವನ್ನು ಕೊಟ್ಟಿದ್ದಾರೆ. ಯಾರು ಈ ನಿರ್ಣಯಕ್ಕೆ ಹೆಚ್ಚಿಗೆ ವಿರೋಧ ಮಾಡುತ್ತಾರೋ ಅವರ ಮನಸ್ಸನ್ನು ಒಲಿಸಬೇಕು. ಹಿಂದಿನ ಕರ್ನಾಟಕದಲ್ಲಿ ಮೂಲನಿವಾಸಿಗಳಾದ ಆದಿಕರ್ನಾಟಕದವರೂ ದ್ರಾವಿಡರೂ, ಹೊಯ್ಸಳರೂ ಇದ್ದರು. ಆದರೆ ಶ್ರೀಮಾನ್ ಟಿ. ಸುಬ್ರಹ್ಮಣ್ಯರಾದರೋ ಹೊಸ ಕರ್ನಾಟಕದವರು ಹಳೆಯ ಕರ್ನಾಟಕದವರು ಬೇರೆ ಇದ್ದಾರೆ.

**ಶ್ರೀ ಜಿ.ಎನ್. ಪುಟ್ಟಣ್ಣ:** ತಾವು ಇದ್ದೀರಿ.

**ಶ್ರೀ ಎ. ಜೆ. ದೊಡ್ಡಮೇಟಿ:** ಮುಖವಾಗಿ ಕರ್ನಾಟಕ ಶಬ್ದದ ಮೂಲೋತ್ಪತ್ತಿ ಇದಕ್ಕೆ ಪ್ರೋತ್ಸಾಹ, ಇದರ ಬೆಳವಣಿಗೆ ಎಲ್ಲಾ ಹಳೆಯ ಮೈಸೂರಿನಲ್ಲಿದೆ. ಆದುದರಿಂದ ಈ ನಿರ್ಣಯುವನ್ನು ಪುನರಾಲೋಚನೆ ಮಾಡಬೇಕು. ಯಾರೂ ಭಿನ್ನ ಭೇದಕ್ಕೆ ಹೋಗಕೂಡದು. ಮುಖ್ಯ ಮಂತ್ರಿಗಳು ಈಗ ಉತ್ತರ

ಕರ್ನಾಟಕದಲ್ಲಿರತಕ್ಕ ಮಂತ್ರಿಗಳು ವಿಷಯದಲ್ಲಿ ಪ್ರಯತ್ನ ಮಾಡುತ್ತಿರುವುದು ಇನ್ನೂ ಸಾಲದೇ ಎಂದು ಹೇಳಿದರು. ಈಗಿನ ಸಂದರ್ಭದಲ್ಲಿ ಉತ್ತರ ಕರ್ನಾಟಕದವರು ಎಂದು ಉತ್ತರ ಕರ್ನಾಟಕದಲ್ಲಿ ಯಾರು ಹೇಳುತ್ತಾರೆ. ಹಳೆಯ ಮೈಸೂರಿನವರು, ದಕ್ಷಿಣ ಕರ್ನಾಟಕದವರು ಎಂದು ಯಾರು ಹೇಳುತ್ತಾರೆ? ಆದುದರಿಂದ ಕೂಡಲೇ ಕರ್ನಾಟಕವೆಂದು ಹೆಸರು ಒಪ್ಪಿಗೆಯಾಗುತ್ತದೋ ಅವರು ಇಲ್ಲಿ ಬರುತ್ತಾರೆ. ಉತ್ತರ ಕರ್ನಾಟಕದವರನ್ನೇ ಈ ಕಾರ್ಯಕ್ಕೆ ಚುನಾವಣೆ ಮಾಡಿದ್ದಾರೆಂದು ಯಾರದರೂ ತಿಳಿದಿದ್ದರೆ ಅದು ತಪ್ಪು. ಆ ದೃಷ್ಟಿಯಿಂದ ಏನಾದರೂ ತಾವೂ ವಿಚಾರ ಮಾಡುತ್ತಿದ್ದರೆ ಅದು ತಪ್ಪು. ಇನ್ನು ಹೆಚ್ಚಿನ ಮಾಹಿತಿಗಳನ್ನು ನಾನು ವಿಚಾರ ಮಾಡುವುದಿಲ್ಲ. ಮುಖ್ಯವಾಗಿ ಇದನ್ನು ರಾಜಕೀಯ ದೃಷ್ಟಿಯಿಂದ ವಿಚಾರ ಮಾಡಬಾರದು, ಈಗಿರುವುದಕ್ಕಿಂತ ಹೆಚ್ಚಿಗೆ ಉತ್ತಮ ಸಾಧನೆಗಳಿಂದ ಈ ಪ್ರಶ್ನೆಯನ್ನು ವಿಚಾರ ಮಾಡಬೇಕೆಂದು ಹೇಳಿ ಮತ್ತೊಮ್ಮೆ ನಿರ್ಣಯಕ್ಕೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ವಿ. ಶ್ರೀನಿವಾಸ ಶೆಟ್ಟಿ:** ಸ್ವಾಮಿ , ಬರಿಯ ಕೆಲವು ನಿಮಿಷಗಳವರೆಗೆ ಮಾತನಾಡಿ ನನ್ನ ಭಾಷಣವನ್ನು ಮುಗಿಸಬೇಕೆಂದಿದ್ದೇನೆ. ಇದು ಬಹಳ ಆಶ್ಚರ್ಯಕರವಾದ ವಿಷಯ ಇದರ ಮೇಲೆ ಚರ್ಚೆ ನಡೆಯುತ್ತಿದೆ. ನಾನು ಮೈಸೂರಾಗಬೇಕು ಅಥವಾ ಕರ್ನಾಟಕವಾಗಬೇಕು ಎಂದು ಬಹಳ ಬಿರುಸಿನಿಂದ ಮಾತನಾಡಬೇಕೆಂದು ಬಂದವನಲ್ಲ. ದಕ್ಷಿಣ ಕನ್ನಡದಲ್ಲಿ ಕನ್ನಡ ಮಾತನಾಡುವ ಜಿಲ್ಲೆಯಲ್ಲಿ ಶೇಕಡಾ 70 ಅಥವಾ 80 ರಷ್ಟು ಜನ ತುಳು ಭಾಷೆಯಲ್ಲಿ ಮಾತನಾಡುತ್ತಾರೆ. ಅವರು ಅಲ್ಲಿ ತುಳು ಭಾಷೆಯಾಗಬೇಕೆಂದು ಹೇಳುತ್ತಾರೆ. ಆದರೆ ಇಲ್ಲಿ ಇಂತಹ ಒಂದು ಹೆಸರಿಗಾಗಿ ಹೊಡೆದಾಡುವುದು ಎಷ್ಟರಮಟ್ಟಿಗೆ ನ್ಯಾಯವೆಂಬುದನ್ನು ಹೇಳಬೇಕು. ಇದು ಒಂದು ದೊಡ್ಡದಾದ ವಿಷಾದದ ವಿಷಯ.

**ಶ್ರೀ ಎ.ಜಿ. ದೊಡ್ಡಮೇಟಿ:** ಮೆತ್ತಗಾಗಿಲ್ಲ.

**ಶ್ರೀ ವಿ. ಶ್ರೀನಿವಾಸ ಶೆಟ್ಟಿ:** ಮೆತ್ತಗಾಗದಿದ್ದರೆ ಬಹಳ ಸಂತೋಷ. ಸುಮಾರು ಮೂರು ವರ್ಷಗಳಿಂದ ಮೈಸೂರು ರಾಜ್ಯ ಏಕಾಏಕಿ ಕರ್ನಾಟಕ ರಾಜ್ಯವಾಗಬೇಕು ಎಂದು ಹೇಳುತ್ತಿದ್ದವರು ಇದ್ದಕ್ಕಿದ್ದ ಹಾಗೆ ಈಗ ಒಮ್ಮೆ ಬೆಣ್ಣೆಯಾಗಿ ಏಕೆ ಆದರು ಎಂದು ನಾನು ಊಹೆ ಮಾಡುತ್ತೇನೆ.

**ಶ್ರೀ ಎ.ಜೆ. ದೊಡ್ಡಮೇಟಿ:** ನನ್ನ ಅಭಿಪ್ರಾಯ ಊಹೆಗಳಿಂದಾಗಿಲ್ಲ. ನಮ್ಮಿಬ್ಬರ ಪ್ರಶ್ನೆಯಲ್ಲ ಇದು ದೇಶದ ಪ್ರಶ್ನೆ. ನಾನು ನಿಶ್ಚಯವಾಗಿ ಇರತಕ್ಕ ರೀತಿಯನ್ನು ಹೇಳುತ್ತಿದ್ದೇನೆ.

**ಶ್ರೀ ವಿ. ಶ್ರೀನಿವಾಸ ಶೆಟ್ಟಿ:** ನನ್ನ ಅಭಿಪ್ರಾಯ ಸ್ವಲ್ಪ ತಪ್ಪಾಗಿರಬಹುದು. ನನಗೇನು ಅನ್ನಿಸಿತು ಅಂದರೆ ಸುಮ್ಮನೆ ಕೂಗಾಡಬೇಡಿ. ಮತ್ತೆ ಈ ಬಗ್ಗೆ ವಿರೋಧವಿರುವವರನ್ನು ನಿಮ್ಮ ಕಡೆ ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದು ನಾನು ಹೇಳುತ್ತೇನೆ.

ಇನ್ನು ಎರಡು ವರ್ಷಗಳಲ್ಲಿ ಜನರಲ್ ಇಲೆಕ್ಷನ್ ಇದೆ. ಆಗ ಕಾಂಗ್ರೆಸ್ ಸರಕಾರವೇ ಇರುತ್ತದೋ ಅಥವಾ ಬೇರೆ ಸರ್ಕಾರವಿರುತ್ತದೋ ಎಂಬುದನ್ನು ಸ್ವಲ್ಪ ದಿವಸಗಳು ಕಾದು ನೋಡೋಣ ಎಂದು ನಾನಂದುಕೊಂಡೆ. 1962 ನೇಯ ಇಸವಿಯಲ್ಲಿ ಯಾವ ಸರ್ಕಾರ ಬರುತ್ತದೋ ಅದನ್ನು ನೋಡೋಣ.

**ಶ್ರೀ ಎ. ಜೆ. ದೊಡ್ಡಮೇಟಿ:** ಮುಂದಿನ ಅಧಿವೇಶನದೊಳಗೆ ಮೈಸೂರಿಗೆ ಕರ್ನಾಟಕವೆಂಬ ಹೆಸರನ್ನು ಇಡಬೇಕೆಂದು ನನ್ನ ಕೊನೆಯ ಮಾತು.

**ಶ್ರೀ ವಿ. ಶ್ರೀನಿವಾಸ ಶೆಟ್ಟಿ:** ಯಾರದು ಕೊನೆಯಾಗುತ್ತದೆ. ಯಾರದು ಏನಾಗುತ್ತದ ಎಂದು ಹೇಳುವುದು ಬಹಳ ಕಷ್ಟಕರವಾದ ಸಂಗತಿ. ಏಕೆಂದರೆ ಈ ಪ್ರಾಮಾಣಿಕತೆ ಎಲ್ಲಿದೆ ಎಂಬ ಪ್ರಶ್ನೆ ಬಂತು. ನಾವು ಇಲ್ಲದೇ ಇರುವಾಗ ಈ ಅಸೆಂಬ್ಲಿಯಲ್ಲಿ ನೀವೇ ಎಷ್ಟೋಸಾರಿ ಎಷ್ಟೋ ಠರಾವುಗಳನ್ನು ಓಟಿಗೆ ಹಾಕಿದ್ದೀರಿ, ಆ ರೀತಿ ಇದನ್ನು ಒಂದೆರಡು ದಿವಸಗಳಿರುವಂತೆಯೇ ಏತಕ್ಕೆ ಒಟ್ಟಿಗೆ ಹಾಕಬಾರದು? ಕರ್ನಾಟಕ ರಾಜ್ಯವಾಗಬೇಕು ಎನ್ನುವವರಲ್ಲಿ ನಾನೂ ಒಬ್ಬ ಈ ರೀತಿಯಾದರ ಒಳ್ಳೆಯ ಬಹುಮತ ಜನರು ಕರ್ನಾಟಕ ರಾಜ್ಯವಾಗಲೇಬೇಕು ಎಂದು ಹೇಳಿರುವಾಗ ಪ್ರಜಾಪ್ರಭುತ್ವದಲ್ಲಿ ಏಕೆ ಆಗಬಾರದು? ಕೆಲವೇ ಮಂದಿ ಅದಕ್ಕೆ ವಿರೋಧವಾಗಿ ಇರಬಾರದು ಎಂದು ಹೇಳುವವನಲ್ಲ ನಾನು ಒಬ್ಬ ಮಾನ್ಯ ಶ್ರೀ ದೊಡ್ಡಮೇಟಿಯವರು ಹೇಳಿದ ಪ್ರಕಾರ ಕಾಂಗ್ರೆಸ್ ಪಕ್ಷದಲ್ಲಿ ಮತ್ತು ವಿರೋಧ ಪಕ್ಷದಲ್ಲಿ ಬಹುಮತವಿದ್ದಿದ್ದರೆ ಈ ವಿಷಯ ಎಷ್ಟೋಸಾರಿ ಠರಾವು ರೂಪದಲ್ಲಿ ಇಲ್ಲಿ ಚರ್ಚೆಗೆ ಬಂದಿದ್ದರೂ, ಒಪ್ಪಿಗೆ ಇನ್ನೂ ಏಕೆ ಬರುವುದಿಲ್ಲ. ಸರ್ಕಾರ ಏಕೆ ಅಡ್ಡಿ ಬರುತ್ತದೆ ಎಂಬುದು ನನಗೆ ಆಶ್ಚರ್ಯವಾಗಿದೆ. ಎಲ್ಲರೂ ಸೇರಿ ಒಟ್ಟಿಗೆ ಹಾಕೋಣ, ಇದು ಒಂದು ನಿರ್ಣಯದ ರೂಪದಲ್ಲಿ ಪಾಸ ಆಗಬೇಕೆಂದು ಸರ್ಕಾರ ಏಕೆ ಹೇಳುವುದಿಲ್ಲವೋ ನನಗೆ ಗೊತ್ತಿಲ್ಲ. ಅದು ಮಹತ್ವವಾದಂಥ ಪ್ರಶ್ನೆ. ಕರ್ನಾಟಕ ರಾಜ್ಯವಾಗಬೇಕು ಎಂಬ ವಿಷಯವನ್ನು ಒಟ್ಟಿಗೆ ಹಾಕಿದರೆ ಬಹುಮತ ಸಿಕ್ಕೀತು ಎಂದು ಮಾನ್ಯ ಮಂತ್ರಿಗಳಿಗೂ ಸರ್ಕಾರಕ್ಕೂ ನಮಗೂ ಗೊತ್ತಿದೆ. ಇವೊತ್ತಿಗೆ ಅದರಲ್ಲಿ ಒಂದು ಸ್ಕೋಪಿದೆ. ಒಟ್ಟಿಗೆ ಹಾಕಿದರೆ ಅದು ಹೇಗೆ ಆಗುತ್ತದೋ ಗೊತ್ತಿಲ್ಲ. ಯಾವಾಗಲೂ ಶ್ರೀಮಾನ್ ದೊಡ್ಡಮೇಟಿಯವರು ಕರ್ನಾಟಕವಾಗಬೇಕೆಂದು ಹೇಳುತ್ತಿರುವ ಪ್ರಕಾರ ಈ ಸಭೆಯಲ್ಲಿ ಈ ವಿಷಯವನ್ನು ಒಟ್ಟಿಗೆ ಹಾಕಬೇಕೆಂದು ನಾನು ಹೇಳುತ್ತೇನೆ.

ತಾವು ಸ್ವಾತಂತ್ರ್ಯ ಕೊಟ್ಟಿಲ್ಲ. ಕರ್ನಾಟಕ ಎಂದೋ, ಅಥವಾ ಮೈಸೂರು ರಾಜ್ಯ ಎಂದೋ ಯಾವ ಹೆಸರನ್ನು ಇಡಬೇಕೆಂದು ಕೇಳಿದರೆ ಬಹುತೇಕವಾಗಿ ಕಾಂಗ್ರೆಸ್ಸಿನವರೆಲ್ಲರೂ ಸೇರಿ ವೋಟು ಮಾಡುವುದಾದರೆ ಈ ನಿರ್ಣಯದ ಬಗ್ಗೆ ಹೆಚ್ಚು ಮಂದಿ ವೋಟನ್ನು ಮಾಡುತ್ತಾರೆ ಎನ್ನುವುದು ನಿಸ್ಸಂಶಯ. ಇದು ಗೊತ್ತಿದ್ದರು ನಿಮ್ಮ ಮನಸ್ಸು ಸಾಕಷ್ಟು

ಹಿಂದಕ್ಕೆ,ಮುಂದಕ್ಕೆ ಹೋಗುತ್ತಿರುವುದರ ಒಳಗುಟ್ಟಾದರೂ ಏನು? ಏಕೆ ಒಪ್ಪಿಗೆ ಕೊಟ್ಟಿಲ್ಲ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ I don't know

**ಶ್ರೀ ಎಂ.ಸಿ. ನರಸಿಂಹನ್:** ಶ್ರೀ ದೊಡ್ಡಮೇಟಿಯವರು ಈ ಠಾರವಿಗೆ ಬಜೆಟ್ ಅಧಿವೇಶನದವರಿಗೆ ಮುಂದೂಡಲು ಏಕೆ ಬಯಸಿದ್ದಾರೆ?

**ಶ್ರೀ ಬಿ. ಡಿ. ಜತ್ತಿ:** ನನ್ನ ವಿವರಣೆಗೆ ಎಲ್ಲಿ ಪ್ರಶ್ನೆ ಇದೆ? ಶ್ರೀ ನರಸಿಂಹನ್‌ರಿಗೆ ತನ್ನ ಅಂತರ್ಯ ಚೆನ್ನಾಗಿ ಗೊತ್ತು ಅಲ್ಲದೇ ಅವರಿಗೆ ಶ್ರೀ ದೊಡ್ಡಮೇಟಿಯವರ ಮನಸ್ಸು ಗೊತ್ತು ಹೀಗಿದ್ದರೂ ನಾನು ಏಕೆ ವಿವರಿಸಬೇಕು?

**ಶ್ರೀ ವಿ. ಶ್ರೀನಿವಾಸ ಶೆಟ್ಟಿ:** ಸ್ವಾಮಿ, ಏಕೆಂದರೆ ಇವೊತ್ತಿನ ದಿನ ಇಂತಹ ವಿಷಯದ ಚರ್ಚೆಯನ್ನು ಮುಂದೂಡುವುದಕ್ಕೆ ಅವಕಾಶ ಕೊಡಬಾರದು. ಮಾನ್ಯ ಮಂತ್ರಿಗಳು ತಾವೇ ಮುಂದೆ ಒಂದು ಈ ನಿರ್ಣಯದ ವಿಚಾರದಲ್ಲಿ ವೋಟು ಮಾಡುವುದಕ್ಕೆ ಅವಕಾಶಒದಗಿಸಿ ಕೊಡಬೇಕಾದ್ದಿತು. ಆದರೆ ಹಾಗೆ ಮಾಡದೇ, ಹೀಗೆ ಹಾಗೆ ಮಾಡಿ, ತ್ರಿಶಂಕುವಿನಂತೆ ಇತ್ತ ಕಡೆಯೂ ಹೋಗುವಂತಿಲ್ಲ, ಅತ್ತ ಕಡೆಯೂ ಹೋಗುವಂತಿಲ್ಲ ಎನ್ನುವಂತಾಗಿದೆ. ಹೀಗಾಗಿ ಈ ನಿರ್ಣಯ ಆಗಾಗ್ಗೆ ಬರುತ್ತಿದೆ.

**ಶ್ರೀ ಎಂ. ಕೆ. ಬೊಮ್ಮೆಗೌಡ:** ಈ ನಿರ್ಣಯವನ್ನು ತಂದಿರುವವರು ಕುಡಲೇ ವಾಪಸ್ಸು ತೆಗೆದುಕೊಳ್ಳಲಿ. ದೇಶದಲ್ಲಿ ಮೊದಲು ಮುಖ್ಯವಾಗಿರತಕ್ಕ ಅನೇಕ ದೊಡ್ಡ ದೊಡ್ಡ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ಮಾಡೋಣ. ಸುಮ್ಮನೆ ರಾಜ್ಯದಲ್ಲಿರತಕ್ಕ ವಾತಾವರಣವನ್ನು ಕಲಕಿ ಜನಗಳ ಮನಸ್ಸನ್ನೂ ಸಹ ಕಲಕುವಂತೆ ಮಾಡಬೇಡಿ. ಶ್ರೀಮಾನ್ ದೊಡ್ಡಮೇಟಿಯವರು ಹೇಳಿದ್ದನ್ನೆಲ್ಲಾ ನಾನು ಚೆನ್ನಾಗಿ ಕೇಳಿದ್ದೇನೆ. ಮೈಸೂರು ಎಂಬತಕ್ಕ ಬಗ್ಗೆ ವಿಶೇಷವಾಗಿ ವ್ಯಾಖ್ಯಾನ ಮಾಡಿ ಒಂದು ಪುಸ್ತಕವನ್ನೇ ಬರೆದುಕೊಟ್ಟಿದ್ದಾರೆ.

**ಶ್ರೀ ಎ.ಜೆ. ದೊಡ್ಡಮೇಟಿ:** ನಾನು ಎಂದಿಗೂ ಬರೆದಿಲ್ಲ. ನಾನು ಈ ರೀತಿ ಏನೂ ಹೇಳಿಲ್ಲ, ಅವರ ಮಾತನ್ನು ಯಾರೂ ಒಪ್ಪುವಂತಿಲ್ಲ.

**ಶ್ರೀ ಎಂ. ಕೆ. ಬೊಮ್ಮೇಗೌಡ:** ನನ್ನ ಮಿತ್ರರು ಅನೇಕರು ಯಾವುದೋ ಒಂದು ಕಾರಣದಿಂದ ಮೈಸೂರು ಎಂಬ ಹೆಸರು ಬೇಡ ಎಂದು ಹೇಳುವುದು ಸರಿಯಲ್ಲ. ಕರ್ನಾಟಕವೆಂದು ಇರಬೇಕೆಂದು ಹೇಳುವುದಾದರೆ, ಅದರಲ್ಲಿ ಅರ್ಥವೇನು? ಎರಡು ಕೋಟಿ ಜನಾಂಗದ ಆಗುಹೋಗುಗಳನ್ನು ನಾವು ನೀವು ನೋಡಬೇಕಾಗಿದೆ. ಬಗೆಹರಿಸಬೇಕಾಗಿದೆ. ಈಗ ಇಂತಹ ದೊಡ್ಡ ಪ್ರಶ್ನೆ ನಮ್ಮ ಮುಂದೆ ಇದೆ. ನಾವು ಹೋರಾಟ ಮಾಡತಕ್ಕ ವಿಷಯಗಳು ದೇಶದಲ್ಲಿ ಅನೇಕವಿವೆ. ಅವನ್ನು ಬಿಟ್ಟು ಈ ಒಂದು ಹೆಸರಿನ

ಬದಲಾವಣೆಯನ್ನು ಕುರಿತೂ ಇಷ್ಟು ಒಂದು ದೊಡ್ಡ ಆಂದೋಳನ ಮಾಡುವುದು ಖಂಡಿತವಾಗಿ ಸರಿಯಲ್ಲ.ಮತ್ತು ನ್ಯಾಯವಲ್ಲ. ಈಗ ತಂದಿರತಕ್ಕ ನಿರ್ಣಯ ಸರಿಯಾದುದಲ್ಲ. ನನ್ನ ಮಾನ್ಯ ಸ್ನೇಹಿತರು ತಮ್ಮ ನಿರ್ಣಯವನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು ಮೈಸೂರು ಎಂದರೆ ಯಾರು ತಲೆ ತಗ್ಗಿಸಿ ಬಾಳಬೇಕಾದ ಪ್ರಸಂಗವಿಲ್ಲ. ಇಡಿಯ ಜಗತ್ತಿನಲ್ಲಿ ಇದು ಘನತೆಯನ್ನು ಸಂಪಾದಿಸಿದೆ. ಅನೇಕ ಜನರು ಹಿಂದೆ ಬಹಳವಾಗಿ ದುಡಿದು ಈ ಹೆಸರನ್ನು ಸಂಪಾದಿಸಿದ್ದಾರೆ. ನಮ್ಮ ಮೈಸೂರು ಒಂದು ಸಣ್ಣ ದೇಶವಾಗಿದ್ದರೂ, ಅದರ ಒಂದು ಘನತೆ ಎಲ್ಲೆಲ್ಲಿಯೂ ಆವರಿಸಿದೆ. ಅಂತಹ ದೇಶದ ಮೇಲೆ ಈ ರೀತಿ ವ್ಯಾಖ್ಯಾನ ಮಾಡಿ ಮಾತನಾಡಿದರೆ ಹೇಗೆ?

**ಶ್ರೀ ಕೆ.ಪಿ. ರೇವಣಸಿದ್ದಪ್ಪ:** ಮೈಸೂರು ದೇಶದ ಹೆಸರನ್ನು ಬದಲಾವಣೆ ಮಾಡಲಿಕ್ಕೆ ರಾಜ್ಯಪಾಲರ ಅಭಿಪ್ರಾಯವೇನೆಂಬುದು ತಮಗೆ ಗೋತ್ತೋ?

**ಶ್ರೀ ಎಂ.ಕೆ. ಬೊಮ್ಮೆಗೌಡ:** ಅದರ ಅಭಿಪ್ರಾಯವನ್ನು ಕೇಳುವ ಅಗತ್ಯವಿಲ್ಲ

**ಶ್ರೀ ಎ.ಜೆ. ದೊಡ್ಡಮೇಟಿ:** ಅವರ ಅಭಿಪ್ರಾಯವನ್ನು ಶ್ರೀಮಾನ್ ಬೊಮ್ಮೇಗೌಡರೇ ಹೇಳುತ್ತಿದ್ದಾರೆ

**ಶ್ರೀ ಎಂ.ಕೆ. ಬೊಮ್ಮೆಗೌಡ:** ಬಹುಕಾಲದಿಂದ ಈ ಪ್ರಶ್ನೆ ಇಲ್ಲಿ ಚರ್ಚೆಯಾಗಿದೆ. ದೇಶದಲ್ಲಿ ಸಾರ್ವತ್ರಿಕ ಅಭಿಪ್ರಾಯವಿರುವ ಹಾಗೆ ದೇಶದ ಜನಜೀವನದ ಮಟ್ಟ ಹೆಚ್ಚಾಗಬೇಕು. ಯಾವ ಒಂದು ಉದ್ದೇಶ ಸಾಧನೆಗೋಸ್ಕರ ಸ್ವಾತಂತ್ರ್ಯವನ್ನು ಗಳಿಸಿದವೋ ಆ ಉದ್ದೇಶ ಸಫಲವಾಗಬೇಕು. ಪ್ರಪಂಚದಲ್ಲಿ ಇಂಡಿಯಾ ದೇಶಕ್ಕೆ ಒಂದು ಸ್ಥಾನಮಾನವಿದೆ ಎನ್ನುವ ಅಂಶ ಪ್ರತಿಯೊಬ್ಬರಿಗೂ ಗೊತ್ತಿದೆ. ಆದುದರಿಂದ ಕೇವಲ ಈ ಒಂದು ಹೆಸರಿಗಾಗಿ ಹೊಡೆದಾಡುವುದು ಬೇಡ. ಹಿಮಾಲಯ ಪರ್ವತದಿಂದ ಹಿಡಿದು ಕನ್ಯಾಕುಮಾರಿಯವರೆಗೆ ನಾವು ಒಂದು ರಾಷ್ಟ್ರದವರು, ನಾವು ಭಾರತೀಯರು ಎಂದು ಹೇಳುವ ಜನ ಏನೋ ಕಾರಣಾಂತರಗಳಿಂದ ರಾಜಕೀಯ ಆಡಳಿತಗೊಸ್ಕರವಾಗಿ ಭಾಷಾವಾರು ಪ್ರಾಂತ್ಯ ರಚನೆ ಆಗಬೇಕೆಂದು- ಸಾರಿ ಹಿಂದೆ ಹೇಳಿದ ಮೇಲೆ ನೀವೂ ನಾವೂ ಪುನಃ ಈಗ ಈ ಒಂದು ಹೆಸರಿನ ಬದಲಾವಣೆಗಾಗಿ ತಿಕ್ಕಾಟ ಮಾಡುವುದು ಬೇಡ. ಉತ್ತರ ಪ್ರದೇಶ ಹಿಂದಿ ದೇಶ. ಆದುದರಿಂದ ಅದನ್ನು ಮಾತ್ರ ಹಿಂದಿ ದೇಶವೆಂದು ಏತಕ್ಕೆ ಕರೆಯಬಾರದು? ಅದು ದೊಡ್ಡ ದೊಡ್ಡ ನಾಯಕರಾದಂತಹ ಶ್ರೀ ಗೋವಿಂದ ಪಂತ, ಶ್ರೀ ವಲ್ಲಭಾಯ್ ಪಟೇಲ್, ಶ್ರೀ ನೆಹರೂ ಇಂತಹವರು ಹುಟ್ಟಿದ ಸ್ಥಳ ಅಂತಹ ಸ್ಥಳಕ್ಕೆ ಅವರ ಹೆಸರನ್ನು ಇಡದೆ ಏತಕ್ಕೆ ಆ ರೀತಿ ಉತ್ತರ ಹಿಂದೂಸ್ಥಾನವೆಂದು ಕರೆಯುತ್ತಾರೆಂಬುದನ್ನು ನಾವು ಯೋಚಿಸಬೇಕು. ಅದು ಬಹುಕಾಲದಿಂದ ಬಂದಿರತಕ್ಕ ಹೆಸರು.

ಶ್ರೀ ಕೆ. **ಪುಟ್ಟಸ್ವಾಮಿ:** ಅವರು ಮಾಡಿದರೆ ನಾವು ಮಾಡೋಣವೆಂದು ಕುಳಿತ್ತಿದ್ದಾರೆ.

ಶ್ರೀ **ಎಂ.ಕೆ. ಬೊಮ್ಮೆಗೌಡ:** ಅದು ಹಾಗಿರಲಿ, ಮೈಸೂರು ಕರ್ನಾಟಕವಾಗಬೇಕೆಂದು ಮೈಸೂರಿನ ಹೊರಗಿನವರು ಹೇಳುತ್ತಾರೆ.ಆದ ಕಾರಣ ಇದನ್ನು ದೀರ್ಘವಾಗಿ ವಿಚಾರ ಮಾಡಿ ಮೈಸೂರು ಎಂದರೆ ಏನು ಅವಮಾನವಾಗುತ್ತದೆ? ಹೊರಗಿನವರು ಏಕೆ ನಾವು ಮೈಸೂರಿನವರು ಎಂದೆನಿಸಿಕೊಳ್ಳುವುದು ಎಂದು ಹೇಳಬಹುದು. ಆದರೆ ಮೈಸೂರಿನೊಳಗೆ ಇರುವವರೂ ಆ ರೀತಿಯೇ ಹೇಳಬೇಕಾದರೆ ಇದರಲ್ಲಿ ಯಾವುದಾದರೂ ಕೆಲವು ರಾಜಕೀಯ ಸನ್ನಿವೇಶಗಳಿರಬಹುದು. ಬಾರ್ಡರ್‌ಗಳಿಂದ ಇವರಿಗೆ ಓಟು ಬರಬಹುದು ಎಂದು ಮಾಡುತ್ತಿದ್ದೇವೆಂದು ಅವಮಾನಗುವುದು ಬೇಡವೆಂದು ನಾನು ಹೇಳುತ್ತೇನೆ.

**ಅಧ್ಯಕ್ಷರು :** ಈಗ ಟೈಂ ಆಯಿತು. ಮುಂದಿನ ಅಧಿವೇಶನದಲ್ಲಿ ಈ ವಿಷಯದ ಮೇಲೆ ಚರ್ಚೆ ಮುಂದುವರಿಯುತ್ತದೆ. ಆಗ ಮುಂದೆ ನೀವೆ ಕಂಟಿನ್ಯೂ ಮಾಡಿ. ಈಗ ಸಿಲ್ಲಿಸಿ, ತಮಗೆ ಮತ್ತೊಂದು ಸಾರಿ ಮಾತನಾಡಲು ಆಗ ಅವಕಾಶ ಸಿಕ್ಕುತ್ತದೆ.

## ನಾಡಿನ ಪ್ರಗತಿ ಚಿಂತನೆ

ಶ್ರೀ ಎ. **ಜೆ. ದೊಡ್ಡಮೇಟಿ (ರೋಣ):** ಸ್ವಾಮಿ, ಈ ಸಭೆಯ ಎದುರಿನಲ್ಲಿರುವ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಕೊಡುತ್ತಾ ಕೆಲವು ಸಲಹೆಗಳನ್ನು ಕೊಡಲು ಅಪೇಕ್ಷಿಸುತ್ತೇನೆ. ಈ ಬೇಡಿಕೆಗಳ ವಿಷಯದಲ್ಲಿ ನಿನ್ನೆ ಮತ್ತು ಈ ದಿನ ಕೆಲವು ಮಾನ್ಯ ಸ್ನೇಹಿತರು ಮಾತನಾಡಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀ ಹನುಮಂತಯ್ಯನವರು ಮುಂಬಯಿ ಮತ್ತು ಮದರಾಸು ರಾಜ್ಯಗಳಿಂದ ಬರಬೇಕಾದಂಥ ನಮ್ಮ ಬಾಕಿ ಮೊಬಲಗನ್ನು ವಸೂಲು ಮಾಡಬೇಕೆಂದು ಹೇಳಿದ್ದಾರೆ. ಯಾವ ವೇಳೆಯಲ್ಲಿ ರಾಜ್ಯಗಳ ಹಂಚಿಕೆಯಾಯಿತೋ ಆ ವೇಳೆಯಲ್ಲಿ ಅಥವಾ ಅದಕ್ಕಿಂತ ಪೂರ್ವದಲ್ಲಿ ಇದ್ದಂಥ ಮೈಸೂರು ಸರ್ಕಾರ ಈ ಬಗ್ಗೆ ಲಕ್ಷ್ಯ ವಹಿಸಿದ್ದರೆ ಹೆಚ್ಚು ಸುಲಭವಾಗುತ್ತಿತ್ತೆಂದು ಕಾಣುತ್ತದೆ. ಆದರೆ ದುರ್ದೈವದಿಂದ ಆಗ ಶ್ರೀ ಹನುಮಂತಯ್ಯನವರ ಆರು ತಿಂಗಳ ಮುಂಚೆಯೇ ಹೊರಟು ಹೋದರು. ಅವರು ಇದ್ದಿದ್ದರೆ ನಿಜವಾಗಿಯೂ ಒಳ್ಳೆಯದಾಗುತ್ತಿತ್ತು. ನಾವು ಅವರೇ ಇರಬೇಕೆಂದು ಪ್ರಯತ್ನ ಸಹ ಮಾಡಿದೆವು. ಅದು ಸಾಧ್ಯವಾಗಲಿಲ್ಲ. ಆಗ ಅನೇಕ ಕಾರಣಗಳಿಂದ ಆ ಪರಿಸ್ಥಿತಿಯೊದಗಿತು. ಈಗ ಪುನಃ ಮುಂಬಯಿ ರಾಜ್ಯ ವಿಭಜನೆಯಾಗುವಾಗ ಅಂಥ ಪ್ರಸಂಗ ನಮ್ಮೆದುರಿಗೆ ಬಂದಿದೆ. ಈ ವಿಚಾರದಲ್ಲಿ ಏನು ಮಾಡಬೇಕೆಂಬುವುದು ಸರ್ಕಾರದವರು ಪರಿಶೀಲಿಸಬೇಕು. ಯಾವಾಗಲೂ ಕೇಂದ್ರವೇ ಆಗಲೀ ಯಾವ ಸರ್ಕಾರವೇ ಆಗಲಿ ಬಹಳ ಜೊಬ್ಬಾಟ ಮಾಡುವ ಕಡೆ ಲಕ್ಷ್ಯ ಕೊಡುವುದು

ಈಚೆಗೆ ಸಾಂಪ್ರದಾಯಕವಾಗಿದೆ. ಆ ಸಾಂಪ್ರದಾಯ ಸಕಾರಣವಾಗಿರಲಿಲ್ಲ ಅಥವಾ ಇಲ್ಲದಿರಲಿ ಅದನ್ನು ನಮ್ಮ ಸರ್ಕಾರ ಅನುಸರಿಸುವುದು ಅವಶ್ಯ ಎಂದು ಹೇಳಬಹುದು. ತಾವು ರೈಲ್ವೆ ಮತ್ತು ಬಂದರುಗಳ ಬಗ್ಗೆ ಕಳೆದ ಮೂರು ವರ್ಷಗಳಿಂದ ಒಂದು ಬಗೆಯ ಸೌಮ್ಯ ಪ್ರಯತ್ನವನ್ನು ನಡೆಸಿದ್ದೀರಿ. ಅದರಿಂದ ಅಷ್ಟು ಉಪಯೋಗವಾಗುವುದಿಲ್ಲ. ಬಾರ್ಡರ್ ಇಷ್ಯೂ ಹೇಗೆ ಪ್ರಾಮುಖ್ಯತೆ ತಾಳಿದೆಯೋ ಅದೇ ರೀತಿ ಬಂದರುಗಳು ಮತ್ತು ರೈಲ್ವೆ ಸೌಕರ್ಯ ದೊರಕಿಸಿಕೊಳ್ಳುವುದರಲ್ಲಿಯೂ ಪ್ರಾಮುಖ್ಯತೆ ತಾಳಬೇಕು. ಆ ಸೌಕರ್ಯ ದೇಶದ ಉನ್ನತಿಗೆ ಅವಶ್ಯಕ ಆದಕ್ಕೆ ತಾವು ಕೇಂದ್ರದ ಮೇಲೆ ಸರಿಯಾದ ರೀತಿಯಲ್ಲಿ ಒತ್ತಾಯ ತರಬೇಕು. ತಂದು ತೃತೀಯ ಪಂಚವಾರ್ಷಿಕ ಯೋಜನೆಯವರೆಗೆ ಕಾಯದೇ ಆ ಕೆಲಸವನ್ನು ಜಾಗ್ರತೆ ಸಾಧಿಸಲೇಬೇಕು. ಶಕ್ಯವಿದ್ದಷ್ಟು ಚಳುವಳಿಯನ್ನು ಈ ಬಾಬಿನ ವಿಷಯದಲ್ಲಿ ಪ್ರಾರಂಭಿಸಿ ಸರಿಯಾದ ರೀತಿಯಿಂದ ಪ್ರಯತ್ನ ಮಾಡಬೇಕು. ಈ ವಿಚಾರದಲ್ಲಿ ವಿರುದ್ಧ ಪಕ್ಷ ಅಥವಾ ಕಾಂಗ್ರೆಸ್ ಪಕ್ಷ ಎಂಬ ಬೇಧವಿಲ್ಲದೇ ಎಲ್ಲರೂ ಖಂಡಿತವಾಗಿ ಸರ್ಕಾರಕ್ಕೆ ಹೃತ್ಪೂರ್ವಕವಾಗಿ ಬೆಂಬಲ ನೀಡುತ್ತಾರೆ. ಈ ಬೆಂಬಲವನ್ನು ತೆಗೆದುಕೊಳ್ಳುವುದೋ ಬಹಳ ಅವಶ್ಯ ಮತ್ತು ಸಕಾಲಿಕವೆಂದು ನಾನು ಇಲ್ಲಿ ಮಾಡಲಿಕ್ಕೆ ಅಪೇಕ್ಷೆ ಮಾಡುತ್ತೇನೆ.

ಸಾಮಾನ್ಯವಾಗಿ ನಮ್ಮ ಆಡಳಿತದಲ್ಲಿ ಕೆಲವೊಂದು ಬದಲಾವಣೆಗಳೂ, ಸುಧಾರಣೆಗಳೂ ಆಗುತ್ತ ನಡೆದಿವೆ. ಅದರಲ್ಲಿ ಲೋಕೋಪಯೋಗಿ ಖಾತೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಕಂದಾಯ ಖಾತೆಯೊಳಗ ಬಹಳ ಶಾಖೆಗಳು ಜಾಗ್ರತವಾಗಿದ್ದರೂ ಇನಾಂ ಶಾಖೆಯಲ್ಲಿರುವವರ ಇನಾಂದಾರರಾಗಿದ್ದಾರೆ. ಏಕೆ ಆ ರೀತಿ ಆಗಿದ್ದಾರೋ ಗೊತ್ತಿಲ್ಲ. ಇನಾಂದಾರದೆಂದರೆ ಏನು ಒಂದು ಉದಾಸೀನ ಸ್ವಭಾವ ಇರಬೇಕೋ ಆ ಎಲ್ಲ ಸ್ವಭಾವ ಈ ಇನಾಂ ಶಾಖೆಯೊಳಗೆ ಬಂದಿದೆ. ಒಂದು ಉದಾಹರಣೆ ಹೇಳುವುದಾದರೆ.ನಾಲ್ಕು ತಿಂಗಳ ಕೆಳಗೆ ಇನಾಂ ಶಾಖೆಯಿಂದ ಉತಾರ ಬೇಕು ಎಂದು ಒಬ್ಬರು ಅರ್ಜಿ ಮಾಡಿದರು. ಉತಾರ ಮಾಡುವಂಥ ನಿಮ್ಮ ಅರ್ಜಿ ಮುಟ್ಟಿದೆ ಎಂದು ಅವರಿಗೆ ಉತ್ತರ ಸಹ ಮುಟ್ಟಲಿಲ್ಲ. ಆದಕ್ಕೆ ನಾನು ಹತ್ತು ಸಲ ಸೆಕ್ರೆಟರಿಗಳ ಕಡೆಗೆ ಹೋಗಿ, ಎಲ್ಲೋ ಕಾಗದಗಳ ಸಂದಿನಲ್ಲಿ ಇದ್ದಂಥ ಆ ಕಾಗದವನ್ನು ಹುಡುಕಿಸಿ, ಆದಕ್ಕೆ ಉತ್ತರವನ್ನು ಪೋಸ್ಟ್ ಮಾಡುವತನಕ ಅದರ ಬೆನ್ನು ಹತ್ತಬೇಕಾಯಿತು. ಹೀಗೆ ಈ ಇನಾಂ ಶಾಖೆ ಇದೆ. ಕಂದಾಯ ಮಂತ್ರಿಗಳು ಬಹಳ ಒಳ್ಳೆಯವರನ್ನುವುದರಲ್ಲಿ ಅವರ ವಿರೋಧಗಳೂ ಭಿನ್ನಾಭಿಪ್ರಾಯ ಪಡಲಾರರು. ಮಾನ್ಯ ಮಂತ್ರಿಗಳು ಈ ವಿಚಾರದ ಕಡೆ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ. ಜೈಲುಗಳ ವಿಷಯ ಜೈಲು ಸುಧಾರಣೆಗಳನ್ನು ಕಾಲಕಾಲಕ್ಕೆ ಏನೇನೋ ಪ್ರಯತ್ನಗಳನ್ನು ಮಾಡಿದ್ದಾರೆ. ಎಂದು ಮಾಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಈ ಕಮೀಟಿಯ ಅವರು ರಾಜಕೀಯ ದೃಷ್ಟಿಯನ್ನು ಇಡಬಾರದು ಸರವಾಗಿ, ಸಾಧಾರಣವಾಗಿ ಯಾರು ಯಾವ ಕೆಲಸಕ್ಕೆ ಯೋಗ್ಯರೋ ಆ ದೃಷ್ಟಿಯಿಂದ ಸಮಿತಿಯ ಸದಸ್ಯರನ್ನು ಆರಿಸಬೇಕು ಅದರಲ್ಲಿ ವಿರೋಧ ಪಕ್ಷದವರೂ ಇರಲಿ,

ತೊಂದರೆ ಇಲ್ಲ. ಸರಕಾರವು ವಿರೋಧ ಪಕ್ಷದವರೂ ಹೌದು, ಕಾಂಗ್ರೆಸ್ ಪಕ್ಷದವರೂ ಹೌದು ದೇಶ ಮತ್ತು ರಾಷ್ಟ್ರ ಎನ್ನುವ ಚಿಂತನೆ ಇಲ್ಲದವರು ಕಮ್ಯುನಿಷ್ಟರು; ಕ್ಯಾಪಿಟಲಿಷ್ಟರ ಮತ್ತು ಕಮ್ಯೂನಿಷ್ಟರು ಮಾತ್ರ ಎಲ್ಲೆಲ್ಲಿ ಕ್ಯಾಪಿಟಲ್ ಇದೆ; ಅಮೆರಿಕದಲ್ಲಿದ್ದರೆ ಆ ಪಾರ್ಟಿ, ಜಾತಿಯ ಪಕ್ಷಗಾಗಲಿ ಅಥವಾ ದಕ್ಷಿಣ ಆಫ್ರಿಕದಲ್ಲಿರಲಿ ಆಯಾ ಪಾರ್ಟಿ ಎಂದು ಹೋಗುವುದು ಸಂಪ್ರದಾಯ ಆದರೆ ನಾವು ಇಲ್ಲಿ ನಡೆಸಬೇಕಾದ್ದು ಆ ದೃಷ್ಟಿಯಿಂದಲ್ಲ.ನಾವು ಒಂದು ರಾಷ್ಟ್ರೀಯ ಭಾವನೆಯನ್ನು ಅದೇ ರೀತಿ ಅದರ ರಾಷ್ಟ್ರೀಯ ಭಾವನೆಯನ್ನು ಅದೇ ರೀತಿ ನಮ್ಮ ರಾಜ್ಯಭಿಮಾನವನ್ನು ಸಹ ಒಂದಕ್ಕೊಂದನ್ನು ಕೊಂಡು ಹೋಗಬೇಕಾದರೆ ಅನೇಕ ಬದಲಾವಣೆಗಳಾಗುವುದು ಅತ್ಯವಶ್ಯ. ಸಾಮಾನ್ಯವಾದ ಜನರಲ್ಲಿ ಅಂಥ ಮನೋಭಾವ ಮೂಡು ಬರಬೇಕಾದರೆ ಅದಕ್ಕೆ ತಳಹದಿ ಶಿಕ್ಷಣ ಅಂಥ ಶಿಕ್ಷಣ ವಿಲ್ಲವೆಂದು ಕೇಂದ್ರದವರೂ ಹೇಳುತ್ತಿದ್ದಾರೆ. ಇತರರೂ ಹೇಳುತ್ತಿದ್ದಾರೆ. ಡಾಕ್ಟರ ರಾಜೇಂದ್ರ ಪ್ರಸಾದರಂಥವರು ಕೂಡ ಹೇಳುತ್ತಿದ್ದಾರೆ. ಆದರೆ ಸರಿಯಾದವನ್ನು ಯಾರು ಕಲಿಸಬೇಕು ಎನ್ನುವುದು ಅರ್ಥವಾಗುವುದಿಲ್ಲ. ಶ್ರೀ ಟಿ.ಸಿದ್ದಲಿಂಗಯ್ಯನವರು ಈ ಒಂದುಗೊತ್ತುವಳಿಯನ್ನು ಕಳಿಸಿದ್ದಾರೆ. ಅದಕ್ಕೆ ಮೊದಲನೆಯ ಪ್ರಾಶಸ್ತ್ಯ ದೊರಕಿದೆ ಆ ತಳಹದಿಯ ಮೇಲೆ ನಮ್ಮ ಸಮಾಜ ಆಸರೆಯಾಗಬೇಕು. ಅದು ನಿಜವಾಗಿ ನಮ್ಮನ್ನು ಬಹಲ ಘಟ್ಟಿಗರನ್ನಾಗಿ, ಬಲಶಾಲಿಗಳನ್ನಾಗಿ, ವೀರರನ್ನಾಗಿ ಮಾಡಬೇಕು. ಆ ದೃಷ್ಟಿಯಿಂದ ಕೆಲಸ ಮಾಡಬೇಕಾಗಿದೆ.

ನಮ್ಮ ದೇಶದಲ್ಲಿ ನಾವು ಮೊಟ್ಟ ಮೊದಲನೆಯದಾಗಿ ಉತ್ತಮವಾದ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕಾಗಿದೆ. ಇದನ್ನು ಕಡ್ಡಾಯವಾಗಿ ಜಾರಿಗೆ ತರಬೇಕಾದರೆ ಜನರು ನಮ್ಮ ಹಿತಕ್ಕೆ ಸಿಕ್ಕುತ್ತಾರೋ ಇಲ್ಲವೋ ಗೊತ್ತಿಲ್ಲ. ಜೈಲಿನಲ್ಲಿರುವ ಕೈದಿಗಳು ಮಾತ್ರ ನಮ್ಮ ಹಿಡಿತಕ್ಕೆ ಸಿಕ್ಕುತ್ತಾರೆ. ಆ ಜೈಲಿನ ಆಡಳಿತವನ್ನು ಇನ್ನು ಜೈಲುಗಳ ಭಾಗಗಳಂತೆ ಅಭಿವೃದ್ಧಿಯಾಗಿವೆ. ಆದರೆ ಈ ಮಟ್ಟಕ್ಕೆ ಕಡೆಯ ಜೈಲುಗಳು ಇನ್ನೂ ಬಂದಿಲ್ಲ. ಅದಕ್ಕೆ ಇತರ ಕಾರಣಗಳಿರಬಹುದು. ಆ ಕಾರಣಗಳನ್ನು ಶೋಧನೆ ಮಾಡಬೇಕು ಮತ್ತು ಕ್ರಿಮಿನಲ್ಸ್ ಯಾರಾದರೂ ಇದ್ದರೆ ಅವರ ಬಗ್ಗೆ ಅಧಿಕಾರಿಗಳು ಭಾವನೆಯನ್ನು ತಾಳದೆ ಅವರೂ ನಮ್ಮ ಎನ್ನುವ ಭಾವನೆಯನ್ನು ತಾಳಬೇಕು. ಅಥವಾ ಅಪರಾಧ ಮಾಡುವ ಮನೋಭಾವ ಆಗಿರಲಾರದು ಎನ್ನುವ ಭಾವನೆಯನ್ನು ಇಟ್ಟುಕೊಳ್ಳಬಾರದು ಇಲ್ಲಿ ನಮ್ಮಲ್ಲಿರುವವರಿಗಿಂತ ಅವರು ಎಂದು ಹೇಳುವುದಕ್ಕಾಗುವುದಿಲ್ಲ ಖೂನಿ, ದರೋಡೆ, ಇವುಗಳನ್ನು ಮಾಡತಕ್ಕ ಜನರಲ್ಲಿ ವಾಸಮಾಡಿದರೆ ಅಸೆಂಬ್ಲಿಯಲ್ಲಿ ನಡೆಯುವ ಅನೇಕ ಮಾತುಗಳಿಗಿಂತ ಅವರ ಮಾತುಗಳು ವಾಸಿ ಎನ್ನುವ ಭಾವನೆ ಬರುತ್ತದೆ ಆದುದರಿಂದ ಜೈಲುಗಳ ಆಡಳಿತ ತಾವೆ ಒಳ್ಳೆಯ ಕೆಲಸ ಮಾಡಿ ಒಳ್ಳೆಯ ಅದವಾಗಿ ಮಾಡಬೇಕೆಂದು ನಾನು ಹೇಳಲಿಕ್ಕೆ ಅಪೇಕ್ಷೆ ಮಾಡುತ್ತೇನೆ.

ಪೋಲಿಸ ವಿಚಾರದಲ್ಲಿ ಬೆಳಗಾಂ ಆಂದೋಳನದ ಬಗ್ಗೆ ಶ್ರೀ ಪಾಟೀಲ್‌ರವರು ಕೆಲವು ಮಾತುಗಳನ್ನು ಹೇಳಿದರು. ಯಾವುದೇ ಪ್ರಶ್ನೆಯನ್ನು ತಮಗೆ ಬೇಕಾದ ರೀತಿಯಲ್ಲಿ

ಆವಾದ ಸರಣಿಯಲ್ಲಿ ಎತ್ತಬಾರದು ಅದು ಅರಿಯದ ಮಾತಲ್ಲ ನಿಜವಾಗಿ ಪೋಲಿಸರ ಅತಿ ಸಾಧುಗಳು ಅವರು ನಿರ್ವೀರ್ಯರು, ಅವರ ಕತೆಯಿಂದ ಏನೂ ಆಗಲಾರದು ನಮ್ಮ ರಾಜ್ಯ ಏನು ಮಾಡಿದರು ನಡೆಯುತ್ತದೆಂದು ಹೇಳುವಂತೆ ಇದುವರೆಗ ಆಡಿ ಬಿಟ್ಟರೆ ಇವೋತ್ತು ಸ್ವಲ್ಪ ಉಗ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಕಾರಣವಾಗಿದೆ. ಇವೊತ್ತು ಅವರು ಅನುಸರಿಸಿದ ರೀತಿ ನೀತಿಯೊಳಗೆ, ಅವರು ಹೇಳಿದ ಹಾಗೆ ಏನೋ ಒಂದು ದೋಷವಿದೆ ಎಂದರೆ ಇದೇ ಮಾರ್ಗವನ್ನು ಮುಂಬೈ ರಾಜ್ಯದಿಂದ ಕರ್ನಾಟಕಕ್ಕೆ ಬರಬೇಕಾದಂಥ ಅನೇಕ ಭಾಗಗಳಲ್ಲಿ ಅನುಸರಿಸಿದರೆ ಮುಂಬೈ ಸರ್ಕಾರ ಏನು ಮಾಡುತ್ತಿತ್ತು ಎನ್ನುವುದನ್ನು ಆಲೋಚನೆ ಮಾಡಿದರೆ ನೆಟ್ಟಗೆ ಬೆಳಗಾಂ ಪ್ರದೇಶದಲ್ಲಿ ನಡೆದಂಥ ಆಂದೋಳನ ಬೆಳಗಾವಿಯುವರಿಂದ ಪ್ರಚೋದಿತವಾದುದಲ್ಲವೆನ್ನುವುದು ಅವರ ಮಾತಿನಿಂದಲೇ ವ್ಯಕ್ತವಾಗಿದೆ ಮುಂಬೈನ ಬಾಬುರಾವ್ ಪಟೇಲ್ ರವರ ನೇತೃತ್ವದಲ್ಲಿ ನಡೆದಿದೆ ಎಂದು ಹೇಳಬಹುದು. ಹೊರಗಿನವರ ನೇತೃತ್ವದಿಂದ ಸ್ಪೂರ್ತಿಯನ್ನು ಪಡೆಯದು ಆಂದೋಳನ ನಡೆಸಿದರು ಎನ್ನುವುದು ವಿಚಾರ ಮಾಡಬೇಕಾದ ಮಾತು. ಕಾರಣ ಇನ್ನು ಮೇಲೆ ಬೆಳಗಾಂ ಪ್ರಶ್ನೆ, ಬೊಂಬಾಯಿ ಪ್ರಶ್ನೆ, ಇವುಗಳ ಅಧ್ಯಾಯವನ್ನು ಮುಚ್ಚಿಬಿಡಿ. ನಾವೆಲ್ಲ ಒಂದೇ, ನಾವೆಲ್ಲ ಕರ್ನಾಟಕ ತಾಯಿಯ ಮಕ್ಕಳಿದ್ದೇವೆ. ಇನ್ನು ಅದರಲ್ಲಿ ಭಿನ್ನ ಭೇದ ಮಾಡುವುದು ಅನಾವಶ್ಯಕ ನಿಮಗೆ ಬೇಕಾದ ಸೌಕರ್ಯವನ್ನು ಕೇಳಿ ಮಹಾರಾಷ್ಟ್ರದಲ್ಲಿ ಅನೇಕ ಮಂದಿ ಕನ್ನಡಿಗರಿದ್ದಾರೆ. ಅವರಿಗೆ ಕೊಡಬೇಕಾದ ಸವಲತ್ತುಗಳಿಗಿಂತ ಹೆಚ್ಚಿನ ಸವಲತ್ತುಗಳು ಬೇಕು ಎಂದರೆ ಅದನ್ನು ಕೋಡೋಣ, ನಾವು ನೀವು ಕೈಕೈ ಹಚ್ಚಿ ಇನ್ನು ಮೇಲೆ ಮುಂಬೈ ಕಡೆಗೆ ಹೋಗುವ ಇಚ್ಚೆಯನ್ನು ಬಿಡಿ, ನಾವೆಲ್ಲರೂ ಕೂಡಿಕೊಂಡಿರೋಣವೆಂದು ವಿನಂತಿ. ಮಾಡಿಕೊಳ್ಳುತ್ತೇನೆ. ಅವರ ವಿಶ್ವಾಸಗಳಿಸುವ ರೀತಿಯೊಳಗೆ ನಾವೂ ಪ್ರಯತ್ನ ಮಾಡಬೇಕು. ಅವರು ನಮ್ಮನ್ನು ಬಿಟ್ಟುಹೋಗುವಂಥ ಯಾವ ಕಾರ್ಯವನ್ನೂ ಮಾಡಬಾರದೆನ್ನುವ ರೀತಿಯೊಳಗೆ ಸರ್ಕಾರ ಯತ್ನ ಮಾಡಬೇಕು. ಕೇವಲ ದಮನಮಾಡಿ ಯಾರನ್ನೂ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಕೊನೆಯದಾಗಿ ಹಿಂದುಳಿದವರ ಬಗ್ಗೆ ಡಾಕ್ಟರ್ ನಾಗನಗೌಡರ ಒಂದು ವರದಿಯನ್ನು ಕೊಟ್ಟಿದ್ದಾರೆ ಡಾ:ನಾಗನಗೌಡರು ಆ ರೀತಿ ಕೊಟ್ಟಿದ್ದರೊಳಗೆ ಬೇರೆ ಬೇರೆ ಜನರು ಬೇರೆ ಬೇರೆ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಆದರೆ ನನ್ನ ತಿಳುವಳಿಕೆಯೊಳಗೆ ಬಹಳ ಓಬೀರಾಯನ ಕಾಲದ ಪದ್ಧತಿಯನ್ನು ಹಿಡಿದು ಮಾಡಿದ್ದಾರೆಂದು ಅತೀ ಸ್ವಷ್ಟವಾಗಿ ಹೇಳದೆ ಗತಿ ಇಲ್ಲ. ಒಂದು ವರ್ಷಕ್ಕೆ 1.200 ರೂಪಾಯಿ ಉತ್ಪನ್ನಕ್ಕಿಂತ ಯಾರಿಗೆ ಕಡಿಮೆ ಉತ್ಪನ್ನವಿರಲಿ, ಅವರು ಯಾವ ಜಾತಿಯವರೇ ಇರಲಿ ಅವರೆಲ್ಲ ಹಿಂದುಳಿದವರು.

# 1961ರ ಬಜೆಟ್ ಹಾಗೂ ಕರ್ನಾಟಕ ನಾಮಕರಣ

**ಶ್ರೀ ಎ.ಜೆ. ದೊಡ್ಡಮೇಟಿ (ರೋಣ):** ಸ್ವಾಮಿ, ಈ ನಮ್ಮ ಅರ್ಥ ಮಂತ್ರಿಗಳು ಈ ಸಭೆಯ ಎದುರಿಗೆ ಇರಿಸಿರತಕ್ಕ ಬಡ್ಜೆಟ್ಟನ್ನು ಸಾಧಾರಣವಾಗಿ ಸ್ವಾಗತಿಸುತ್ತ ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ.

ಆಮೇಲೆ ಈಗ ಬಡ್ಜೆಟ್ಟಿನಲ್ಲಿ ಸೂಚಿಸಲಾಗಿರತಕ್ಕ ಕರಗಳ ಬಗ್ಗೆ ಒಂದು ವಿಷಯವನ್ನು ವಿವೇಚನೆ ಮಾಡುವುದು ನನ್ನ ಮೊದಲನೇ ಕರ್ತವ್ಯ. ಹೀಗೆ ಈಗ ಹೇಳಿರತಕ್ಕ ಕರಗಳ ಬಗ್ಗೆ ಕಂದಾಯದ ಬಗ್ಗೆ ಅಥವಾ ಈ ಸರ್ ಛಾರ್ಜುಗಳ ಬಗ್ಗೆ ಕಂದಾಯದ ಬಗ್ಗೆ ಯಾಗಲೇ ಇವು ಕೆಲವು ಮಟ್ಟಿಗೆ ನನ್ನ ವಿವೇಚನೆಗೊಳಗಾಗಿರುವುದಿಲ್ಲ ಇವು ಯಾವ ರೀತಿಯಾವೆ ಎಂದರೆ ಈಗ ಭೂಕಂದಾಯದ ಮೇಲೆ ಸರ್ ಛಾರ್ಜುಹಾಕುವುದೆಂದರೆ ತತ್ವಶಃ ನಾನು ಇದಕ್ಕೆ ಒಪ್ಪಿಕೊಳ್ಳುತ್ತೇನೆ. ಕೆಲವು ಕಡೆ ಈ ಬಗ್ಗೆ ವಿನಾಯ್ತಿ ಕೊಡುವುದಕ್ಕೂ ನಾನು ಒಪ್ಪಿಕೊಳ್ಳುತ್ತೇನೆ. ಈ ಸಣ್ಣ ಹಿಡುವಳಿದಾರರ ಮೇಲೆ ಇಡೀ ಕಂದಾಯವನ್ನೇ ಹಾಕದಿದ್ದರೂ ಅದಕ್ಕೂ ನನ್ನ ಅಭ್ಯಂತರವೇನಿಲ್ಲ. ಆದರೆ ಇದರಲ್ಲಿ ಒಂದು ವಿಚಾರವೇನಿದೆ ಎಂದರೆ ಈಗ ವಿಧಿಸತಕ್ಕ ಸರ್ ಛಾರ್ಜ ಏನಿದೆ ಇದು ಮುಂದೆ ಭೂಕಂದಾಯಗಳ ಪುನರ್ ಪರಿಶೀಲನೆ ಆದಾಗ ಹೊಸ ಕಂದಾಯ ಜಾರಿಗೆ ಬಂದ ಮೇಲೆ ಈ ಸರ್ ಛಾರ್ಜನ್ನು ನಿಲ್ಲಿಸುತ್ತೇವೆಂಬ ಒಂದು ಭರವಸೆಯನ್ನು ಆಶ್ವಾಸನವನ್ನು ನಮಗೀಗ ಸರ್ಕಾರದವರು ನೀಡಬೇಕಾಗಿದೆ. ಮೇಲಾಗಿ ಈ ವಿಚಾರದಲ್ಲಿ ಒಂದು ಕಾನೂನು ಕೂಡ ಮಾಡಬೇಕಾಗಿರುತ್ತದೆಂದು ಹೇಳುತ್ತೇನೆ ಈ ದಿವಸ ಈ ಸರ್ ಛಾರ್ಜನ್ನು ನಿರೂಪಿಸಿವಲ್ಲಿ ಹಳ್ಳಿಯ ಜನರಿಗೆ ಒಂದು ವಿಪರೀತವಾಗಿರುತ್ತೆ. ಅದು ಯಾವ ರೀತಿಯಲ್ಲಿ ಎಂದರೆ ಈ ತೆರಿಗೆಗಳು ಏಕರೂಪತೆ ಯಾವ ಪ್ರದೇಶಕ್ಕೆ ಯಾವ ರೀತಿ ಅನ್ವಯಿಸುತ್ತದೋ ಆ ರೀತಿ ನೀವು ಈ ಕಂದಾಯವನ್ನು ಹೇರಬೇಕಾಗಿದೆ. ಇದರಿಂದ ಪ್ರತಿಯೊಂದು ಜಿಲ್ಲೆಗೂ ಸರಾಸರಿ ಎಕರೆಗೆಷ್ಟು ಕಂದಾಯ ಬೀಳುತ್ತೆ ಅನ್ನುವುದನ್ನು ಸರ್ಕಾರ ಪರಿಶೀಲನೆ ಮಾಡಬೇಕು.

ಇನ್ನು ಎರಡನೆಯದಾಗಿ ಮುಂಬೈ ಪ್ರದೇಶದಲ್ಲಿ ವಿಲೀನವಾದ ಸುಮಾರು 19 ಸಣ್ಣ ಸಣ್ಣ ಸಂಸ್ಥಾನಗಳಿದ್ದವು. ಅಲ್ಲಿನ ಭೂಕಂದಾಯ ಭೂಒಡೆಯರಿಗೆ ಗೇಣಿದಾರರು ಕೊಡುತ್ತಿದ್ದ ಲಾವಣಿಯೂ ಸ್ವಲ್ಪ ಹೆಚ್ಚು ಕಡಿಮೆ ಅಷ್ಟೆ ಇರುತ್ತಿತ್ತು ಎಂದರೆ ಅದೇನು ಒಂದು ಅತಿಯೋಕ್ತಿಯಲ್ಲ. ಈ ದಿವಸ ನಮ್ಮ ಮುಖ್ಯ ಮಂತ್ರಿಗಳು ಬಂದಿರುವ ಸಂಸ್ಥಾನ ಅದರ ಜಮಖಂಡಿ ಸಂಸ್ಥಾನದಲ್ಲಿ ಕೆಲವು ಕಡೆ ಎಕರೆಗೆ ಈ ಹಿಂದೆ ನಾಲ್ಕು ಐದು ರೂಪಾಯಿಗಳ ಭೂಕಂದಾಯವಿತ್ತು ಸ್ವಾತಂತ್ರ ಹೋರಾಟ ನಡೆಸಿದವರಿಗ ಇದು 100 ಕ್ಕೆ 25 ದಷ್ಟು ಕಮ್ಮಿ ಮಾಡಲಾಯಿತು.

ರಾಮದುರ್ಗ ಸವಣೂರ ಮುಂತಾದ ಹಿಂದಕ್ಕೆ ಇದ್ದ 19 ಸಣ್ಣ ಸಣ್ಣ ಸಂಸ್ಥಾನಗಳ ಪ್ರದೇಶದಲ್ಲಿ ಭೂಕಂದಾಯದ ಪ್ರಮಾಣ ಹೆಚ್ಚಾಗಿದೆ. ಭೂ ಕಂದಾಯ ಮಾಡಬೇಕಾಗಿದೆ. ಮುಖ್ಯವಾಗಿ ಒಂದು ಮಾತು ಹೇಳಬೇಕಾಗಿದೆ. ಭೂ ಕಂದಾಯ ವಸೂಲು ಮಾಡಿ ಬೆಂಗಳೂರು ಟ್ರೆಜರಿಗೆ ಭರ್ತಿ ಮಾಡಬಾರದು ಸರಭಾರ್ಜರೂಪದಿಂದ ಬರತಕ್ಕ ಹಣವನ್ನು ಪಂಚಾಯತಿಗಳಿಗೆ ತಾಲ್ಲೂಕು ಬೋರ್ಡುಗಳಿಗೆ ಕೊಟ್ಟು ಬಿಡುವುದು ಒಳ್ಳೆಯದು. ಈ ಹಣ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಅವಶ್ಯಕ. ಹಳ್ಳಿಗಾಡಿನಿಂದ ಬರತಕ್ಕ ಹಣವನ್ನು ಹಳ್ಳಿಗಳ ಅಭಿವೃದ್ಧಿಗಾಗಿ ಉಪಯೋಗಿಸಬೇಕಾದುದು ನ್ಯಾಯ. ಈ ರೀತಿ ಮಾಡಲಾಗುವುದಿಲ್ಲವೆಂದು ಅನೇಕ ದಿನಗಳಿಂದ ಕೂಗು ಇದೆ. ಇದು ಪೂರ್ತಿಯಾಗಿ ಸುಳ್ಳು ಎಂದು ಹೇಳುವುದಕ್ಕಾಗುವುದಿಲ್ಲ. ಪಟ್ಟಣದಲ್ಲಿರತಕ್ಕ ಜನರಿಗೆ ಹೆಚ್ಚು ಸೌಕರ್ಯ ಒದಗಿಸಿಕೊಡುತ್ತಿರುವುದರಿಂದ ಅವರಂಥವರ ಮೇಲೆ ಹೆಚ್ಚಿನ ತೆರಿಗೆ ಭಾರ ಹಾಕಬಹುದು. ತೆರಿಗೆ ಉತ್ಪತ್ತಿ ಬೆಳೆಸುವುದಕ್ಕೆ ಇನ್ನೂ ಅನೇಕ ಮಾರ್ಗಗಳಿವೆ.ಇವುಗಳನ್ನು ಯೋಜನೆ ಮಾಡಬೇಕು. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ಏತಕ್ಕೆ ಯೋಚನೆ ಮಾಡಬಾರದು? ಶ್ರೀಮಂತರ ಮೇಲೆ ಹೆಚ್ಚಿನ ಹಾಕಬಹುದು. ತೆರಿಗೆ ವಿಧಿಸುವ ಮೂಲ ಉದ್ದೇಶ ಏನಿದೆಯೆಂದರೆ ಪ್ರದೇಶದಲ್ಲಿರುವ ಬಡತನ ಶ್ರೀಮಂತಿಕೆ ನಡುವೆ ಇರತಕ್ಕ ಅಂತರ ಕಡಿಮೆಯಾಗಬೇಕು. ಆದ್ದರಿಂದ ತೆರಿಗೆಯ ಭಾರವನ್ನು ಶ್ರೀಮಂತರ ಮೇಲೆ ಹಾಕುವುದು ಒಳ್ಳೆಯದು. ಇದನ್ನು ವಿಚಾರ ಮಾಡುವುದು ಅಗತ್ಯ. ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ $2\frac{1}{2}$ ಕೋಟಿ ರೂಪಾಯಿಯಷ್ಟು ಹೆಚ್ಚಿಗೆ ತೆರಿಗೆ ಹಾಕಿದ್ದೀರಿ.ಒಟ್ಟಿಗೆ ಐದು ವರ್ಷಗಳಲ್ಲಿ ಸುಮಾರು 16 ಕೋಟಿ ರೂಪಾಯಗಳಷ್ಟು ಹಣ ಈ ಬಾಬಿನಿಂದ ಬರಬೇಕಾಗಿದೆ. ಇಷ್ಟು ಹಣ ಸಂಪಾದಿಸುತ್ತೀರಿ? ಅದರ ರೂಪರೇಷೆ ಏನಾದರೂ ಹೇಳಿದರೆ ಒಳ್ಳೆಯದಾಗುತ್ತದೆ. ಬಡತನ ಮತ್ತು ಶ್ರೀಮಂತರ ಮಧ್ಯೆ ಇರುವ ಅಂತರ ಕಡಿಮೆ ಮಾಡಬೇಕಾದುದು ಅಗತ್ಯ ಎಂಬ ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಮುಂದೆ ಸಾಗಬೇಕು ಎಂದು ನಾನು ಈ ಸಂದರ್ಭದಲ್ಲಿ ಮತ್ತೊಮ್ಮೆ ಹೇಳುತ್ತೇನೆ. ಈ ದೃಷ್ಟಿಯಿಂದ ಒಂದೆರಡು ಸೂಚನೆಗಳನ್ನು ಕೊಡುತ್ತೇನೆ. ಲೋಕೋಪಯೋಗಿ ಖಾತೆಯು ಸರಕಾರದ ಕಣ್ಣು ಇದ್ದ ಹಾಗೆ ಇದೆ. ಅನೇಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿದೆ. ಕೆಲವು ಕಡೆ ಕೈಕೊಂಡ ಕೆಲಸಗಳನ್ನು ಪೂರ್ತಿಯಾಗಿಲ್ಲ. ಸರಕಾರದ ಹಣ ಈ ಇಲಾಖೆಯ ಮೂಲಕ ಅನೇಕ ಯೋಜನೆಗಳಿಗಾಗಿ ಖರ್ಚಾಗುತ್ತಿದೆ. ಈ ಕಾರ್ಯಗಳನ್ನು ಮಿತವ್ಯಯದಿಂದ ಮಾಡಿಸಬೇಕು. ಯಾವುದೇ ರೀತಿ ದುಂದುಗಾರಿಕೆ ಆಗಬಾರದು. ಒಂದು ಉದಾಹರಣೆ ಹೇಳಬೇಕೆಂದಿದ್ದೇನೆ. ಖಾದಿ ಯೋಜನೆಯಲ್ಲಿ ಒಂದು ರೂಪಾಯಿ ಖಾದಿ ಬಟ್ಟೆ ಕೊಂಡುಕೊಂಡರೆ ಮೂರು ಆಣೆ ರಿಬೇಟ್ ಕೊಡಲಾಗುತ್ತಿದೆ. ಈ ರೀತಿ ರಿಬೇಟ್ ಕೊಟ್ಟು ಇಂಥ ಉದ್ಯಮವನ್ನು ಎಷ್ಟು ದಿವಸ ನಡೆಸಿಕೊಂಡು ಬರಲು ಸಾಧ್ಯವಿದೆ? ಪ್ರಾರಂಭದಲ್ಲಿ ಪ್ರಚಾರ ಮಾಡುವುದಕ್ಕೆ ಹಾಗೆ ಮಾಡಬಹುದು. ಆದರೆ

ಕೊನೆಯುವರೆಗೆ ಹಾಗೆ ಮಾಡುವುದು ಸರಿಯಲ್ಲ. ಇಂಥ ಗ್ರಾಮ ಕೈಗಾರಿಕೆಗಳು ಸ್ವಾವಲಂಬನವಾಗಬೇಕು. ಈ ದೃಷ್ಟಿಯಿಂದ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಅದನ್ನು ಆಲೋಚನೆ ಮಾಡುವುದು ಅಗತ್ಯ. ಇದರಲ್ಲಿ ಬಹಳ ದೋಷಗಳಿವೆ ಇವನ್ನೆಲ್ಲಾ ಹೇಳುವುದಕ್ಕೆ ಅಪೇಕ್ಷಿಪಡುವುದಿಲ್ಲ. ಇದನ್ನು ಒಂದು ದೃಷ್ಟಿಯಿಂದ ತಾವು ವಿಚಾರ ಮಾಡಬೇಕು.

**ಶ್ರೀ ಕೆ. ಪಿ. ರೇವಣಸಿದ್ದಪ್ಪ:** ಇನ್ನು ನಾಲ್ಕು ಜನ ಮಂತ್ರಿಗಳಾದರೆ ಸುಖೀ ರಾಜ್ಯವಾಗುತ್ತದೆ?

**ಶ್ರೀ ಎ. ಜಿ. ದೊಡ್ಡಮೇಟಿ:** ನಾನು ವಿರೋಧ ಪಕ್ಷದವರಂತೆ ಕೇವಲ ಪಾಕ್ಷಿಕವಾಗಿ ಮಾತನಾಡುವುದಿಲ್ಲವೆಂದು ಈಗಿನ ತನಕ ನಡೆದ ನನ್ನ ಮಾತಿನ ಮೇಲಿಂದ ತಿಳಿದುಕೊಳ್ಳಬಹುದು. ಇದ್ದುದನ್ನು ಸ್ಪಷ್ಟವಾಗಿ ಹೇಳುವುದು ಮತ್ತು ಅವರನ್ನು ದಾರಿಗೆ ತರುವುದಕ್ಕೆ ಪ್ರಯತ್ನ ಮಾಡತಕ್ಕದ್ದು ಮತ್ತು ಎಲ್ಲ ಒಳ್ಳೆಯ ದಾರಿಯಲ್ಲಿದ್ದಾರೆ ಅಲ್ಲಿ ನಮ್ಮ ಕೈಜೋಡಿಸಿ ಅವರ ಬಲಪಡಿಸಬೇಕು. ಈ ರೀತಿ ಕಾಂಗ್ರೆಸ್ ಪಕ್ಷದವರೂ ಮಾಡಬೇಕು. ವಿರೋಧಿ ಪಕ್ಷದವರೂ ಮಾಡಬೇಕು. ಸುಮ್ಮನೇ ವಿರೋಧಕ್ಕಾಗಿ ವಿರೋಧ ಮಾಡಬಾರದು.

ಸಾಧಾರಣವಾಗಿ ಲೋಕೋಪಯೋಗಿ ಶಾಖೆಯಲ್ಲಿ ಕಾಮಗಾರಿಗಳು ನಿಧಾನವಾಗುತ್ತಿವೆ ಎನ್ನುವುದಕ್ಕೆ ಕೆಲವೊಂದು ಉದಾಹರಣೆಗಳನ್ನು ನಾನು ಹೇಳಬೇಕು. ಶ್ರೀಮಾನ್ ಚನ್ನಬಸಪ್ಪನವರು ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿದ್ದಾಗ ಸುಮಾರಿಗೆ ಒಂದು ಒಂದೂವರೆ ವರ್ಷದ ಹಿಂದೆ ಕೆಲವು ಚಿಕ್ಕ ನೀರಾವರಿ ಕೆರೆಗಳಿಗೆ ಭೇಟಿಕೊಟ್ಟು ಅವುಗಳನ್ನು ಆದಷ್ಟು ಬೇಗನೆ ಚಾಲು ಮಾಡಲಿಕ್ಕೆ ಅಭಯ ಕೊಟ್ಟು ಆ ರೀತಿ ಕಾರ್ಯ ನಡೆಸಲಿಕ್ಕೆ ಹೇಳಿದರು ಆದರೆ ನನಗೆ ಗೊತ್ತಿದ್ದಂತೆ ಕೆಲವು ಕೆರೆಗಳು ದಾಖಲೆಗಳು ಸುಮಾರಿಗೆ 10.15 ಸಲ ಚೀಫ್ ಇಂಜಿನಿಯರ್ ಆಫೀಸಿನಿಂದ ಸೂಪರಿಟೆಂಡಿಂಗ್ ಇಂಜಿನಿಯರ್ ಆಫೀಸಿಗೆ, ಅಲ್ಲಿಂದ ಎಕ್ಸಿಕ್ಯುಟಿವ್ ಇಂಜಿನಿಯರ್ ಆಫಿಸಿಗೆ ಮರಳಿ ಪ್ರಯಾಣ ಮಾಡುತ್ತಿದೆ. ಮರಳಿ ಮರಳಿ ಪ್ರಯಾಣ ಎಷ್ಟು ವೆಚ್ಚದ್ದು ಎಷ್ಟು ಕಷ್ಟಕರದ್ದು ಮತ್ತು ಎಷ್ಟು ಆಯುಸ್ಸು ಬೇಕು ಎನ್ನುವುದನ್ನು ತಾವು ವಿಚಾರ ಮಾಡಬೇಕು. ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಬರಗಾಲ ಪ್ರಸಂಗ ಒದಗಿದಾಗ್ಗೆ ರೋಣ ತಾಲ್ಲೂಕಿನ ಪಾರ್ವತಿ ಕೊಳ ಮತ್ತು ನಾಗೇಂದ್ರದ ಗಡ, ಈ ಎರಡು ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟರು. ಇವೊತ್ತಿನ ತನಕ ಅದನ್ನು ತೆಗೆದುಕೊಳ್ಳಲಿಲ್ಲ. ಆಮೇಲೆ ಬರಗಾಲ ಮುಗಿಯಿತು ಎಂದುಬಿಟ್ಟರು ಇವು ಬರಗಾಲಕ್ಕಾಗಿ ತೆಗೆದುಕೊಳ್ಳುವಂಥ ಕಾಮಗಾರಿಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಚಿಕ್ಕ ನೀರಾವರಿ ಯೋಜನೆಯಲ್ಲಿ

ತೆಗೆದುಕೊಳ್ಳುವಂಥಾದ್ದು. ಇದನ್ನು ತೆಗೆದುಕೊಂಡರೆ ಬರಗಾಲದಲ್ಲಿ ಉಪಯೋಗವಾಗುತ್ತಿತ್ತು ಎಂದು ಹೇಳುವಂಥಾದ್ದು. ಅದು ಇನ್ನೂವರೆಗೂ ಆಗಿಲ್ಲ ಸ್ವತಃ ಚೀಫ್ ಇಂಜಿನಿಯರನ್ನು ಭೇಟಿಯಾಗಿ ಅವರಿಂದ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಡಿ.ಓ.ಲೆಟರ್ ಬರೆಸಿದೆ. ಇನ್ನು ಐದಾರು ದಿವಸಗಳಲ್ಲಿ ಆ ಕೆಲಸವನ್ನು ಮಾಡಲಾಗುತ್ತದೆ ಎಂದು ಕಾಗದ ಬರೆದರು. ಐದಾರು ತಿಂಗಳಾದರೂ ಇನ್ನೂ ಆಗಿಲ್ಲ ಇದನ್ನು ಉದಾಹರಣಾರ್ಥವಾಗಿ ಹೇಳುತ್ತಿದ್ದೇನೆ. ಇದಲ್ಲದೆ ಹಲವಾರು ಸೇತುವೆಗಳು ಮಂಜೂರಾಗಿವೆ. ಆ ಸೇತುವೆಗಳು ಮಂಜೂರಾದದ್ದು ಅನೇಕ ಕಾರಣಗಳಿಂದ ಆ ಕಾಮಗಾರಿಗಳೂ ಪ್ರಾರಂಭವಾಗಿಲ್ಲ. ಇದಕ್ಕೆ ಮುಖ್ಯ ಕಾರಣವೇನೆಂದರೆ ಯೋಗ್ಯ ಕಂಟ್ರಾಕ್ಟರುಗಳ ಅಭಾವ, ಯೋಗ್ಯ ಕಂಟ್ರಾಕ್ಟರುಗಳ ಪುರವರೆಗೂ, ಅವರನ್ನು ಒದಗಿಸುವುದಕ್ಕೂ ಸರ್ಕಾರ ಕೆಲವೊಂದು ಯೋಜನೆಗಳನ್ನು ಸಿದ್ದ ಮಾಡಿದಂತೆ ಕಾಣುತ್ತದೆ. ಆದರೆ ಅದು ಸಾಕಷ್ಟು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಆ ಯೋಜನೆಯನ್ನು ಪುನಸಮರ್ಪಿಸಬೇಕು ಮತ್ತು ಸಾಕಷ್ಟು ಕಂಟ್ರಾಕ್ಟರುಗಳಿಂದ ದೂರುಗಳು ಕೇಳಿಬರುತ್ತಿವೆ. ನಾನು ಕೆಲವರಿಗೆ ಪುಸಲಾಯಿಸಿ ಕಂಟ್ರಾಕ್ಟ ಕೆಲಸಕ್ಕೆ ಏಕೆ ಹೋಗುವುದಿಲ್ಲ, ಕಂಟ್ರಾಕ್ಟಿಗೆ ಹೋಗಿರಿ ಎಂದು ಹೇಳಿದ್ದಕ್ಕೆ ನಾವೇನೋ ಕೆಲಸ ಮಾಡುತ್ತೇವೆ ಆದರೆ ದುಡ್ಡು ಕೊಡುವುದಕ್ಕೆ ಮಧ್ಯ ಏನೇನೋರೀತಿಯೊಳಗೆ ತೊಂದರೆ ಕೊಡುತ್ತಾರೆಂದು ಹೇಳಿದರು. ಈ ರೀತಿಯ ಕೆಲವು ದೂರುಗಳಿವೆ. ಆರೀತಿ ಆಗದ ಹಾಗೆ ಮಾಡಬೇಕು. ಕಂಟ್ರಾಕ್ಟರುಗಳು ಮುಂದೆ ಬರಬೇಕು. ಅವರಿಂದ ಒಳ್ಳೆಯ ಕೆಲಸವಾಗಬೇಕು ಎಂದರೆ ಅವರಿಗೆ ಅಫೀಸಿನಿಂದ ಹೆಚ್ಚಿನ ಅಡಚಣೆ ಆಗಬಾರದು ಮತ್ತು ಅವರು ಪ್ರಾಮಾಣಿಕತೆಯಿಂದ ನಡೆಯುತ್ತಾರೆಯೋ ಇಲ್ಲವೊ ಎಂದು ನೋಡಬೇಕು. ಈ ರೀತಿ ವಿಚಾರ ಮಾಡಿ ಲೋಕೋಪಯೋಗಿ ಶಾಖೆಯ ಕಾರ್ಯವನ್ನು ಯಶಸ್ವಿಗೊಳಿಸಬೇಕು. ಮುಂದಿನ ಮುಂದಿನ ಒಂದು ವರ್ಷದೊಳಗೆ ಮುಗಿಸಬೇಕೆಂಬ ಜಿಗುಟುತನದಿಂದ 1962 ನೇಯ ಇಸವಿಯಲ್ಲಿ ಹೊಸ ಬಟ್ಜೆಟ್ ಮಂಡಿಸುವುದರೊಳಗೆ ಮುಗಿಸಬೇಕು ಎನ್ನುವ ಹಠದಿಂದ ಕೆಲಸ ಮಾಡಬೇಕು. ಈಗ ಎರಡು ವರ್ಷಗಳಲ್ಲಿ ಹೊಳೆ ಆಲೂರ ಹತ್ತಿರ ಮಲಪ್ರಭಾ ನದಿಗೆ ಒಂದು ಸೇತುವೆಯನ್ನು ಕಟ್ಟುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು ಕಳೆದ ಬಜೆಟ್ಟಿನಲ್ಲಿ ಇದಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ಹಾಕಿದ್ದಾರೆ. 14 ಲಕ್ಷ ರೂಪಾಯಿ ಎಸ್ಟೀಮೇಟು ಆದಂಥ ಸೇತುವೆಗೆ ವರ್ಷ ಹತ್ತು ಸಾವಿರ ರೂಪಾಯಿಗಳನ್ನು ಹಾಕುತ್ತಾ ಹೋದರೆ ಎಂದಿಗೆ ಈ ಕಾರ್ಯವನ್ನು ತಾವು ಮಾಡಬಲ್ಲಿರಿ? ಇದರ ಚಮತ್ಕಾರ ಸರಿಯಾಗಿ ಅರ್ಥವಾಗುವುದಿಲ್ಲ.

ಪಾನ ಪ್ರತಿಬಂಧದ ವಿಷಯದಲ್ಲಿ, ಧೋರಣೆ ಮತ್ತು ತತ್ವದ ವಿಷಯದಲ್ಲಿ ಬಹುಶಃ ಯಾರು ವಿರೋಧ ಮಾಡುತ್ತಿದ್ದಾರೆಂದು ಕಾಣುವುದಿಲ್ಲ.ಆದರೆ ಕಾರ್ಯಾಚರಣೆಯ ವಿಷಯದಲ್ಲಿ ಯಶಸ್ವಿಯಾಗಿದೆ ಎಂದು ಕೆಲವರೂ, ಯಶಸ್ವಿಯಾಗಿಲಿಲ್ಲವೆಂದು ಕೆಲವರೂ ಹೇಳಬಹುದು. ಅದನ್ನು ಯಶಸ್ವಿ ಮಾಡಬೇಕು.

**ಶ್ರೀ ಸಿ.ಹೆಚ್.ಆರ್. ಮುಗನ್ (ಕೆ.ಜಿ.ಎಫ್):** ಎಲ್.ಎಚ್.ಎ. ಸರಕಾರವು ಬೆಂಗಳೂರಿನಲ್ಲಿ ಪಾನ ಪ್ರತಿಬಂಧ ಮಾಡಲಾರದು ಹಾಗೂ ಅದು ಯಶಸ್ವಿಯಾಗುತ್ತದೆಯೋ ಅಥವಾ ಇಲ್ಲವೋ ಎಂದು ಏಕೆ ತಿಳಿದುಕೊಳ್ಳಬಾರದು? ಅದರ ಪರಿಣಾಮ ತಿಳಿದುಕೊಳ್ಳಬೇಕಾದರೆ ಸರಕಾರವು ಬೆಂಗಳೂರಿನಲ್ಲಿ ಮಂತ್ರಿಗಳು ಹಾಗೂ ಉನ್ನತ ಅಧಿಕಾರಿಗಳು ವಾಸಿಸುವ ಸ್ಥಳದಲ್ಲಿ ಜಾರಿಗೊಳಿಸಲೇಬೇಕು. ನನಗೆ ತೋರುವ ಮಟ್ಟಿಗೆ ಬೆಂಗಳೂರಿನಲ್ಲಿ ಪಾನನಿಷೇಧ ಜಾರಿಗೊಳಿಸಲಾರದು, ಏಕೆಂದರೆ ಮಂತ್ರಿಗಳು ಹಾಗೂ ಉನ್ನತ ಅಧಿಕಾರಿಗಳು ಇಲ್ಲಿ ವಾಸವಾಗಿದ್ದಾರೆ. ಆದರೆ ಬಡವರೇ ವಾಸಿಸುವ ಕೆ.ಜಿ.ಎಫ್. ನಲ್ಲಿ ಅದನ್ನು ಜಾರಿಗೊಳಿಸಲಾಗಿದೆ. ಇದು ಒಬ್ಬ ವೈದ್ಯನು ತನ್ನ ಶಸ್ತ್ರ ಚಿಕಿತ್ಸೆ ಪ್ರಯೋಗವನ್ನು ಒಬ್ಬ ಬಡತನ ದೇಹದ ಮೇಲೆ ಪರೀಕ್ಷಿಸುವಂತಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಕೇವಲ ನೀವು ಜಿಲ್ಲೆಗಳ ವಿಸ್ತರಣೆಯನ್ನು ಹೆಚ್ಚು ಮಾಡುತ್ತಾ ಹೋಗುತ್ತಿದ್ದರೆ ಯಶಸ್ವಿಯಾಗುತ್ತಿದೆ ಎಂದು ತಿಳಿದುಕೊಂಡಿದ್ದಾರಾ? ನೀವು ಎಷ್ಟು ಕ್ಷೇತ್ರಗಳನ್ನು ಮಾಡಿದರೂ ಅದರೊಳಗೆ ನೂರಕ್ಕೆ ನೂರು ಭಾಗ ಯಶಸ್ವಿಯಾಗುತ್ತದೆಯೇ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಈಗ ನೀವು ಮಾಡಿರುವ ಆಲೋಚನೆ ಸರಿಯಾದುದಲ್ಲ. ಇದನ್ನು ಸರಿಪಡಿಸಲು ಯಾವ ಕಾರ್ಯಕ್ರಮ ಕೈಕೊಂಡಿದ್ದೀರಿ ಈಗ ಕೈಗೊಂಡಿರುವ ಕ್ರಮ ದೋಷಯುಕ್ತವಿದೆ ಮತ್ತು ತಪ್ಪುತ್ತಿದೆ ಎನ್ನುವುದನ್ನು ಬಹುಶಃ ತಾವು ಒಪ್ಪಿಕೊಳ್ಳಬೇಕು ಅದರಲ್ಲಿ ಮೂಲಭೂತವಾದ ಒಂದು ದೋಷವಿದೆ ಈ ಪಾನ ಪ್ರತಿಬಂಧಕವನ್ನು ಪೋಲಿಸು ಇಲಾಖೆಗೆ ಒಪ್ಪಿಸಿದ್ದಾರೆ. ಈ ಪೋಲಿಸು ಶಾಖೆಯಲ್ಲಿ ಕುಡಿಯದೆ ಇರುವ ಜನಸಂಖ್ಯೆ ಕಡಿಮೆ ಮಾಡಿದರೆ ಇಂತಹವರ ಕಡೆಗೆ ಈ ಕೆಲಸವನ್ನು ಒಪ್ಪಿಸುವುದರಿಂದ ಇದರಲ್ಲಿ ಯಶಸ್ಸು ಆಗುತ್ತಿಲ್ಲವೋ ಏನೋ ಎನ್ನುವುದನ್ನು ತಿಳಿಯಬೇಕು. ಇದೂ ಅಲ್ಲದೆ ಕೆಲವರು ಇಲಾಖೆಯಲ್ಲಿ ಕುಡಿಯದೆ ಇರುವಮತಹ ಪೋಲಿಸ್ ಅಧಿಕಾರಿಗಳನ್ನೂ ನೋಡಿ ಆರಿಸಿ ಅಂತಹವರನ್ನು ಇಲ್ಲಿ ಕೆಲಸ ಮಾಡಲಿಕ್ಕೆ ಹಾಕುವುದು ಒಳ್ಳೆಯದು ಎಂದು ಸಲಹೆ ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ಪಾನ ಪ್ರತಿಬಂಧಕವನ್ನು ಜಾರಿಗೆ ತರಬೇಕೆಂದು ಈಗಾಗಲೇ ಒಂದು ತೀರ್ಮಾನವನ್ನು ತೆಗೆದು ಕೊಂಡಿರುವುದರಿಂದ ಈ ಕೆಲಸವನ್ನು ಪೋಲಿಸು ಇಲಾಖೆಗೆ ಕೊಡುವುದು ಉತ್ತಮವೇ ಎನ್ನುವ ಪ್ರಶ್ನೆ ಬಂದಿದೆ. ಈ ಪ್ರಶ್ನೆಯನ್ನು ವಿಚಾರ ಮಾಡುವಾಗ ಒಂದು ದೃಷ್ಟಿಯಲ್ಲೇ ಇದನ್ನು ಸಂಪೂರ್ಣವಾಗಿ ಪೋಲಿಸಿನವರು ಹತೋಟಿಯಲ್ಲಿರುವುದಕ್ಕೆ ಇದನ್ನು ಬೇರೆ ಆಡಳಿತ ಯಂತ್ರಕ್ಕೆ ಇಡುವುದು ಒಳ್ಳೆಯದು

**ಉಪಾಧ್ಯಕ್ಷರು:** ಆರ್ಡರ್,ಆರ್ಡರ್ ಅವರು ಯಿಲ್ಡ್ ಆಗಿದ್ದಾಗ ಮುಕ್ಕಣ್ಣಪ್ಪನವರು ಕಡೆ ಮಾತನಾಡುತ್ತಾರೆ?

**ಶ್ರೀ ಬಸವನಗೌಡ:** ಈ ನಮ್ಮ ಹೊಸ ರಾಜ್ಯ ನಿರ್ಮಾಣವಾದ ಕಾಲಕ್ಕೆ ಕರ್ನಾಟಕ ವೆಂಬ ಹೆಸರಿಡಬೇಕೆಂದು ಚರ್ಚೆಯಾದದ್ದನ್ನು ಪೇಪರಿನಲ್ಲಿ ಓದಿದ್ದೇನೆ.

ಆ ಕಾಲಕ್ಕೆ ಅಡ್ಡಿ ಅಡಚಣೆಗಳು,ಒಂದು ಹೆಸರು ಬದಲಾಯಿಸುವ ಸೂಚನೆಯನ್ನು ಮುಂದಕ್ಕೆ ಹಾಕಲಾಯಿತು. ಇದ್ದ ಹೆಸರನ್ನೇ ಮುಂದುವರಿಸಿಕೊಂಡ ಮುಂದೆ ಶಾಂತಿ ವಾತಾವರಣ ಹುಟ್ಟಿಸಿಕೊಂಡು ಯೋಚನೆ ಮಾಡೋಣವೆಂದು, ಇವತ್ತಿನ ದಿವಸದವರೆಗೂ ಕರ್ನಾಟಕವೆಂಬ ಹೆಸರಿದ್ದು ನಿರ್ಣಯ ಹಾಗೆಯೇ ಬಂದಿದೆ. ನಮ್ಮ ರಾಜ್ಯದ ಎಷ್ಟೇ ರಾಜಕೀಯ ಪಕ್ಷಗಳ,ಸೇವಾ ಸಂಘಗಳ ಹೆಸರುಗಳನ್ನು ಸ್ವಲ್ಪ ನೋಡಿಕೊಂಡರೆ, ಅವುಗಳು ಕರ್ನಾಟಕವೆಂದೇ ಪ್ರಾರಂಭವಾಗುವುವು, ಕರ್ನಾಟಕ ಗಾಂಧೀ ಸೇವಾ ಸಂಘ, ಕರ್ನಾಟಕ ಪ್ರಾಂತೀಯ ಜನಸಂಘ ಕರ್ನಾಟಕ ಸೋಶಿಯಲಿಸ್ಟ್ ಪಾರ್ಟಿ, ಕರ್ನಾಟಕ ಪ್ರಜಾಸೋಶಿಯಲಿಸ್ಟ್ ಪಾರ್ಟಿ ಎಂಬುದಾಗಿ ಏಕೆ ಕರೆದುಕೊಳ್ಳುತ್ತಾರೆಯೋ ಯೋಚಿಸಬೇಕು. ಅದಕ್ಕೆ ಉತ್ತರವೇನೂ ಇಲ್ಲ ಹಾಗೆ ಕರೆದುಕೊಳ್ಳುತ್ತಾರೆಯೋ ಯೋಚಿಸಬೇಕು. ಅದಕ್ಕೆ ಉತ್ತರವೇನೂ ಇಲ್ಲ ಹಾಗೆ ಕರೆದುಕೊಳ್ಳದೆ ವಿಧಿಯಿಲ್ಲ. ಕರೆಯದಿದ್ದರೆ ಸರಿಯಾದ ಭಾವನೆ ಬರುವುದಿಲ್ಲ. ಈ ಸಂಸ್ಥಾನದ ಕಾಂಗ್ರೆಸ್ಸಿಗೆ ಕೆ.ಪಿ.ಸಿ.ಸಿ. ಎಂದು ನಾಮಕರಣವಾಗಿತ್ತು. ಮೈಸೂರು ಸಂಸ್ಥಾನದವರು ಆಮೇಲೆ ಬೇರೆ ಮಾಡಿಕೊಂಡರು ಮೊದಲು ಕೆ.ಪಿ.ಸಿ.ಸಿ. ಎಂದು ಈ ಕಾರಣದಿಂದಲೇ ಹೆಸರಿಡಲಾಗಿತ್ತು.

**ಶ್ರೀ ಎಂ.ಸಿ. ನರಸಿಂಹನ್:** ಕರ್ನಾಟಕ ಪಿ.ಸಿ.ಸಿ.ಕೇವಲ ಇಂಟಿಗ್ರೇಟೆಡ್ ಏರಿಯಾದಲ್ಲಿ ಮಾತ್ರವಿತ್ತು.

**ಶ್ರೀ ಬಸನಗೌಡ:** ಅದು ಮೈಸೂರು ಒಳಗೊಂಡಿತ್ತು.

**ಡಾ. ಬಿ.ಕೆ. ನಾಗೂರ್:** ಹಳೆಯ ಮೈಸೂರು ಕೂಡ ಅದರಲ್ಲಿ ಇತ್ತು.

**ಶ್ರೀ ಬಸನಗೌಡ:** ಮೈಸೂರು ಅದರಲ್ಲಿ ಕೂಡಿಕೊಂಡಿತ್ತು. ಸಾಹಿತ್ಯ ಪರಿಷತ್ತು ಕೂಡ ಕರ್ನಾಟಕವೆಂದು ಕರೆಯುವ ಸೂಚನೆಗೆ ಬೆಂಬಲ ಕೊಟ್ಟು ಕೊಂಡು ಬಂದಿದೆ.ಶ್ರೀ ಕೆ.ವಿ. ಪುಟ್ಟಪ್ಪನವರೂ ಹಿಂದೆ ಧಾರವಾಡದಲ್ಲಿ ಕರ್ನಾಟಕವೆಂಬ ಹೆಸರನ್ನಿಡಬೇಕೆಂದು ಹೇಳಿದ್ದಾರೆ. ಉಡುಪಿಯಲ್ಲಿ ಮೊನ್ನೆ ಸೇರಿದ್ದ ಕರ್ನಾಟಕ ಸಾಹಿತ್ಯ ಪರಿಷತ್ ಸಮ್ಮೇಳನದಲ್ಲಿ ಕೂಡ ಅ.ನ. ಕೃಷ್ಣರಾಯರು "ಕರ್ನಾಟಕ" ವೆಂಬ ಹೆಸರು ಈ ರಾಜ್ಯಕ್ಕೆ ಆದಷ್ಟು ಬೇಗ ಬರಲಿ ಎಂದು ಹಾರೈಸಿ ಇದ್ದಾರೆ. ಕರ್ನಾಟಕ ಸಾಹಿತ್ಯ ಪರಿಷತ್ತಿಗೂ ಒಂದು ದೊಡ್ಡ ಚರಿತ್ರೆ ಇದೆ.

**ಶ್ರೀ ಎಂ.ಸಿ. ನರಸಿಂಹನ್:** ಎಂ.ಪಿ.ಸಿ.ಸಿ.ಯಲ್ಲಿ ಏಕೆ ಒಂದು ಸ್ಪಷ್ಟ ನಿರ್ಣಯವನ್ನು ಏಕೆ ಸ್ವೀಕರಿಸಬಹುದು?

**ಶ್ರೀ ಬಸನಗೌಡ:** ಎಂ.ಪಿ.ಸಿ.ಸಿ. ಅರಸೀಕೆರೆ ಸ್ಪೇಶನ್ನಿನಲ್ಲಿ ಒಂದು ಗೊತ್ತುವಳಿಯನ್ನು ಪಾಸು ಮಾಡಿಕೊಂಡಿದ್ದಾರೆ. ಕೆಲವು ಕಾರಣಗಳಿಂದಾಗಿ ಅದು ಹಾಗೇಯೇ ಉಳಿದುಕೊಂಡು

ಹೋಗಿತ್ತು. ಅದಕ್ಕೆ ಸ್ವರೂಪ ಕೊಡಬೇಕೆಂದು ರೆಸಲ್ಯೂಶನ್ ಆಗಿದೆ. ಭಿನ್ನಾಭಿಪ್ರಾಯಗಳು ಇರುತ್ತವೆ. ಅವುಗಳನ್ನು ಸರಿಪಡಿಸಬೇಕು. ಒಮ್ಮತ್ರದಿಂದ ಮಾಡಿದರೆ ಒಳ್ಳೆಯದೆಂದು ಕಾದಿದ್ದಾಯಿತು. ಬರಿ ಮೆಜಾರಿಟಿ ತೀರ್ಮಾನವಾದರೆ, ಆದಷ್ಟು ಒಮ್ಮತ್ರದಿಂದ ಈ ಕೆಲಸ ಮಾಡಬೇಕೆಂದು ಅಭಿಪ್ರಾಯ ಹೊಂದಿದ್ದೇವೆ. ಆವಾಗ ದೇಶಕ್ಕೂ ಉಪಯೋಗವಾಗುತ್ತದೆ. ಜನತೆಗೂ ಉಪಯೋಗವಾಗುತ್ತದೆ. ಹೀಗೆ ನಾವೆಲ್ಲರೂ ಒಂದು ಒಮ್ಮತ್ರದಿಂದ ಏನೇ ಒಂದು ಕೆಲಸ ಮಾಡಲಿ ಅದು ನಮಗೆ ಎಲ್ಲರಿಗೂ ಸಮಾಧಾನನಾಗಿರುತ್ತೆ. ಜನರಿಗೂ ಸಮಾಧಾನವಾಗುತ್ತೆ. ಆದಕ್ಕಾಗಿ ತಾವೆಲ್ಲರೂ ಈ ಠರಾವನ್ನು ಬಹಳ ವಿಶಾಲ ದೃಷ್ಟಿಯಿಂದ ನೋಡಿ ಸರ್ವರೂ ಒಮ್ಮತ್ರದಿಂದ ಇದನ್ನು ಪಾಸ್ ಮಾಡಿಸಬೇಕಂತ ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಇಲ್ಲಿ ಕೆಲವರು ಏನೋ ಒಂದು ಹಿಂದಿನ ಭಾವನೆಯಿಟ್ಟುಕೊಂಡು ಹಿಂದಿನ ಹೆಸರನ್ನೇ ಮುಂದುವರಿಸೋಣ ಎಂದರೆ ಅದರಿಂದ ನಾವು ಬಹಳ ತಪ್ಪು ಮಾಡಿದ ಹಾಗಾಗುತ್ತದೆ ಇದೇ ಬೆಂಗಳೂರು ನಗರದಲ್ಲಿ ಹೊರಡುತ್ತಿರುವ ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಮತ್ತು ತಾಯಿನಾಡು ಈ ದಿನ ಪತ್ರಿಕೆಗಳಲ್ಲ 1952 ರಲ್ಲಿ ಈ ಠರಾವಿನಲ್ಲಿ ನಾನೀಗ ಏನು ಅಭಿಪ್ರಾಯ ಸೂಚಿಸಿದ್ದೇನೋ ಅದನ್ನು ಈ ಪತ್ರಿಕೆಗಳಲ್ಲಿ 1952 ರಲ್ಲಿ ಒಪ್ಪಿಕೊಂಡಿರುತ್ತವೆ. ಈ ವಿಚಾರದಲ್ಲಿ ಪಿ.ಎಸ್.ಪಿ. ಪಾರ್ಟಿಯವರೂ ಸಹ ಈಗಾಗಲೇ ಒಂದು ನಿರ್ಣಯವನ್ನು ಪಾಸ್ ಮಾಡಿ ಈ ಠರಾವನ್ನು ಅಂಗೀಕರಿಸಬೇಕಂತಾ ತೀರ್ಮಾನ ಮಾಡಿಕೊಂಡಿದ್ದಾರೆ.

**ಶ್ರೀ ಎಂ.ಸಿ. ನರಸಿಂಹನ್ (ಕೆ.ಜಿ.ಎಫ್):** ಆದರೆ ಈಗ ನಿಮ್ಮ ಪಾರ್ಟಿಯವರೇ ಈ ಠರಾವಿಗೆ ವಿರುದ್ಧವಾಗಿ ತಿದ್ದುಪಡಿ ಕಳುಹಿಸಿದ್ದಾರಲ್ಲ?

**ಶ್ರೀ ಬಸನಗೌಡ:** ಬರಲಿ, ವಿಚಾರ ಮಾಡೋಣ, ಒಪ್ಪತಕ್ಕದಿದ್ದರೆ ಒಪ್ಪೋಣ ಆ ವಿಚಾರದಲ್ಲೂ ನಾವು ಮುಂದೆ ಒಂದು ತೀರ್ಮಾನಕ್ಕೆ ಬರಲೇಬೇಕಾಗಿದೆ ನೋಡೋಣ

**ಶ್ರೀ ಸಿ.ಜೆ. ಮುಕ್ಕಣಪ್ಪ:** ಎಸ್.ಆರ್.ಸಿ. ಒಂದಿದ್ದ ಕಾಲಕ್ಕೆ ಈ ಹೊಸ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿಡಲೇಬೇಕು ಎಂತ ಆಗ ಏಕೆ ನೀವು ಅಜಿಟೇಟ್ ಮಾಡಲಿಲ್ಲ?

**ಶ್ರೀ ಎ.ಜೆ.ದೊಡ್ಡಮೇಟಿ:** ಎಸ್.ಆರ್.ಸಿ. ರಿಪೋರ್ಟಿನ ಚರ್ಚೆಕಾಲದಲ್ಲಿ ಇದನ್ನೆಲ್ಲಾ ಹೇಳಿ ಆಗಿದೆ ಫಸ್ಟ ಡಿಕ್ಲರೇಷನ್ನಿನಲ್ಲೂ ಈ ವಿಚಾರವನ್ನು ಹೇಳಿದೆ.

**ಶ್ರೀ ಬಸನಗೌಡ:** ನಮ್ಮ ಹಿಂದಿನ ಇತಿಹಾಸಗಳಲ್ಲಿ ಕೆಲವನ್ನು ತೆಗೆದು ನೋಡಬಹುದು ಅದರಲ್ಲಿ ಕೆಲವು ರಾಷ್ಟ್ರಗಳ ಇತಿಹಾಸವನ್ನು ನೋಡಿದರೆ ಅಂದರೆ ಈ ಹಿಂದೆ ಇಲ್ಲಿ ರಾಜ್ಯವಾಳಿದ ಅಂಥ ಗಂಗರಸರ, ರಾಷ್ಟ್ರಕೂಟರ ಹಾಗೂ ಚಾಳುಕ್ಯರ, ಪಲ್ಲವರ ಮತ್ತು ಇತರ ಪಾಳೇಗಾರರ ಇತಿಹಾಸಗಳನ್ನು ತಿರುವಿ ಹಾಕಿದರೆ ಆಗಿನಿಂದಲೂ ಅವರೆಲ್ಲರೂ ಈ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರಿಟ್ಟುಕೊಂಡು ಬಂದಿರುವ ಅಂಶ ತಮಗೆಲ್ಲರಿಗೂ

ವೇದ್ಯವಾಗುತ್ತದೆ. ಆಗ ಈ ಕರ್ನಾಟಕ ರಾಜ್ಯಕ್ಕಿದ್ದ ಒಂದು ಸಂಸ್ಕೃತಿ, ಚಾರಿತ್ರಿಕ ಹಿನ್ನೆಲೆ, ಭೌಗೋಳಿಕ ಹಾಗೂ ಜನರ ನಡೆನುಡಿ, ಅವರ ಪದ್ಧತಿ, ಆಗಿದ್ದ ಜನರ ಸ್ಥಿತಿಗತಿಗಳನ್ನು ನಾವು ಆಲೋಚನೆ ಮಾಡಿದರೆ ನಿಜವಾಗಿಯೂ ಅವು ನಮ್ಮೆಲ್ಲರಿಗೂ ಒಂದು ಒಳ್ಳೆ ಭಾವನೆಯನ್ನು ತಂದುಕೊಡುತ್ತವೆ. ಆದರೆ ಆಗಿದ್ದ ಕರ್ನಾಟಕ ರಾಜ್ಯಕ್ಕೆ ಸೇರಿದ್ದ ಕೆಲವು ಪ್ರದೇಶಗಳು ಇನ್ನೂ ಬೇರೆ ಬೇರೆ ರಾಜ್ಯಗಳಲ್ಲೇ ಸೇರಿಕೊಂಡಿರುತ್ತವೆ. ಆದರೆ ಮೊನ್ನೆ ಈ ರಾಜ್ಯಗಳು ಭಾಷೆ ಆಧಾರದ ಮೇಲೆ ವಿಭಾಗವಾಗುವಾಗ ತಿಳಿದೇನೋ ಅಥವಾ ತಿಳಿಯದೇನೋ ಕೆಲವು ಕರ್ನಾಟಕ ಭಾಗಗಳು ಬೇರೆ ರಾಜ್ಯದಲ್ಲಿ ಇನ್ನೂ ಉಳಿದಿರುತ್ತವೆಂಬ ಅಂಶವನ್ನು ನಾವು ಹಿಂದಿನ ಇತಿಹಾಸ ನೋಡಿದರೆ ಗೊತ್ತಾಗುತ್ತದೆ. ಆ ಭಾಗಗಳನ್ನೂ ನಾವು ಈ ಕರ್ನಾಟಕಕ್ಕೆ ಸೇರಿಕೊಂಡರೆ ಆ ನಮ್ಮ ಕನ್ನಡಿಗರಿಗೂ ಒಂದು ಆಗುತ್ತೆ. ನಾವು ಆಗ ಒಂದು ಹೊಸ ಸಮಾಜ ನಿರ್ಮಾಣ ಮಾಡುವುದಕ್ಕೆ ತುಂಬಾ ಅನುಕೂಲವಾಗಿ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಮತ್ತಷ್ಟು ಉತ್ತಮವಾಗಲು ಅವಕಾಶವಾಗುತ್ತದೆ. ಈಗೇನು ಮಾತೆತ್ತಿದರೆ ಕೆಲವರು ಸೌತ್ ಕ್ಯಾನರಾ, ಮದ್ರಾಸ್ ಕರ್ನಾಟಕ, ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಅಂತ ಹೇಳೋ ಪರಿಸ್ಥಿತಿ ಇದೆ ಇದು ಅದಷ್ಟು ಬೇಗ ಹೋಗಬೇಕು. ಇಲ್ಲವಾದರೆ ಜನರೆಲ್ಲರೂ ಒಂದು ಸಾಮರಸ್ಯದಿಂದ ಬಾಳಲು ಅವಕಾಶವಿರುವುದಿಲ್ಲ. ಆದುದರಿಂದ ನಾವು ಈ ಅಸಂಬದ್ಧ ನಡವಳಿಕೆಯನ್ನು ತೊಡೆದು ಹಾಕಿದರೆ ಮುಂದೆ ನಾವೆಲ್ಲರೂ ಅನ್ಯೋನ್ಯತೆಯಿಂದ ಒಡಗೂಡಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಜನರಲ್ಲೂ ಒಂದು ಮನೋಭಾವನೆ ಬೆಳೆಯಲು ಇದರಿಂದ ಅವಕಾಶವಾಗುತ್ತದೆ.

**ಶ್ರೀ ಎನ್.ಜಿ. ನರಸಿಂಹೇಗೌಡ:** ಎರಡು ರಾಜ್ಯಗಳನ್ನು ಮಾಡ ಬೇಕೆಂಬ ಈ ಹುಚ್ಚನ್ನು, ತಲೆನೋವನ್ನು ಏಕೆ ಈಗಲೇ ಹಚ್ಚಿಕೊಂಡಿದ್ದೀರಿ? ಹೊಸರಾಜ್ಯ ಬಂದು ಇನ್ನು ಸ್ವಲ್ಪ ದಿನವಾಗಿಲ್ಲ. ಇನ್ನು ಸ್ವಲ್ಪ ಕಾಲ ಕಳೆದ ಮೇಲೆ, ನಮ್ಮ ಮನೆಗೆ ಹೆಣ್ಣು ಕೊಟ್ಟು ನಿಮ್ಮ ಮನೆಯಿಂದ ಹೆಣ್ಣು ತಂದು, ಬಾಂಧವ್ಯ ನಮ್ಮಲ್ಲಿ ನಿಮ್ಮಲ್ಲಿ ಚೆನ್ನಾಗಿ ಬೆಳೆದ ಮೇಲೆ ನಮ್ಮ ಮೊಮ್ಮಕ್ಕಳು ಕರ್ನಾಟಕವೆಂದು ಕರೆಯುವುದು ಬೇಡ ಮೈಸೂರನ್ನುವುದೇ ಚೆನ್ನಾಗಿದೆ ಎಂದು ಹೇಳಬಹುದು. ಕರ್ನಾಟಕವೆಂದು ಕರೆಯಬೇಕೆಂದರೆ ಆ ಕನಸನ್ನು ನಮ್ಮ ಮಕ್ಕಳು ಕಾಣುವ ಕಾಲ ಬರಲಿ ಈಗ ಇರುವ ಪ್ರಶ್ನೆ, ಪಾರ್ಲಿಮೆಂಟಿನ ಪ್ರಶ್ನೆ ಅಲ್ಲ. ಇದು ಯಾರನ್ನೂ ಇಕ್ಕಟ್ಟಿಗೆ ಸಿಕ್ಕಿಸುವ ಪ್ರಶ್ನೆ ಅಲ್ಲ. ಆಡಳಿತ ಪಕ್ಷ ಇದರ ಬಗ್ಗೆ ಒಂದು ಸೆಟಲ್‌ಮೆಂಟಿಗೆ ಬಂದಿಲ್ಲ. ರಾಜ್ಯದ ಆಡಳಿತದ ಪಕ್ಷದಲ್ಲಿ ಒಡಕು ಇದ್ದೇ ಇರುತ್ತದೆ. ಇದು ಜನತೆಯ ಪ್ರಶ್ನೆ. ಈ ವಿಷಯದಲ್ಲಿ ಒಂದು ಒಳ್ಳೆಯ ವಾತಾವರಣ ಉಂಟಾಗಲಿ ಎಂಬ ಉದ್ದೇಶದಿಂದ ತಂದಿರುವ ತಿದ್ದುಪಡಿ ಸಾಧುವಾಗಿದೆ. ಈ ಪ್ರಶ್ನೆಯನ್ನು ಸಾಧುವಾಗಿ ಬಿಡಿಸುವುದು ಉತ್ತಮ. ಅದು ಬಿಟ್ಟು ದೇಶದಲ್ಲಿ ಈ ಬಗ್ಗೆ ಏನು ಒಂದು ಆಂದೋಳನವನ್ನು ನಡೆಸುವುದಕ್ಕೆ ದೊಡ್ಡಮೇಟಿಯವರು ಹೊರಟಿದ್ದಾರೆಯೋ, ಅದನ್ನು ಬಿಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ.

ಸೂರ್ಯನಾರಾಯಣರಾಯರು ತಂದಿರತಕ್ಕಂಥ ಅಮೆಂಡ್ ಮೆಂಟನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ರಾಜ್ಯದಲ್ಲಿ ಒಂದು ಒಳ್ಳೆಯ ಪರಿಸ್ಥಿತಿ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಿದ ಮೇಲೆ ಈ ಠರಾವನ್ನು ಪರಿಶೀಲಿಸಬೇಕು. ದೊಡ್ಡಮೇಟಿಯವರು ಆತುರ ಆತುರವಾಗಿ ತಮ್ಮ ಇಷ್ಟವನ್ನು ಸಾಧಿಸಬೇಕೆಂದಿದ್ದಾರೆ. ಶ್ರೀನಿವಾಸಶೆಟ್ಟರೂ ಆತುರರಾಗಿದ್ದಾರೆ. ಮೊದಲು ಮಗುವನ್ನು "ಬಾಬು" ಎಂದು ಕರೆದು ಆಮೇಲೆ "ರಾಮ" ಎಂದು ಕರೆಯಬಹುದು ಮೊದಲೇ ಯಾವ ಹೆಸರನ್ನು ಕರೆಯಬೇಕೆಂಬ ವಿಚಾರದಲ್ಲಿ ಕಿತ್ತಾಡುವುದು ಬೇಡ. ಮನಸ್ಸು ವಿಶಾಲವಾಗಲಿ, ದೇಶದ ಸಮಸ್ಯೆಗಳನ್ನು ತೊಡಕುಗಳನ್ನು ಬಗೆಹರಿಸಿಕೊಳ್ಳೋಣ. ಮೊದಲು ಈ ಕಡೆಗೆ ಗಮನ ಕೊಡಬೇಕು. ಕೆ.ವಿ. ಪುಟ್ಟಪ್ಪನವರು ಹೇಳಿದ್ದಾರೆ ಒಪ್ಪಿಕೊಳ್ಳಿ ಎನ್ನುತ್ತಾರೆ. ಪಂಪ ಹೇಳಿದ್ದಾನೆ, ಒಪ್ಪಿಕೊಳ್ಳಿ ಎನ್ನುತ್ತಾರೆ. ಪುಟ್ಟಪ್ಪ, ಪಂಪ ಹೇಳಿದ್ದನ್ನು ನಾವು ಏಕೆ ಒಪ್ಪಿಕೊಳ್ಳಬೇಕು? ನಾವು ಹೇಳಿದ್ದನ್ನು ಏಕೆ ಒಪ್ಪಿಕೊಳ್ಳಬಾರದು? ಪಂಪ, ರನ್ನ ಹೇಳಿದ್ದಾರೆ ಆದ್ದರಿಂದ ಆಗಿಬಿಡಬೇಕೆಂದು ಹೇಳುವುದು ಅಲ್ಲ. ಶ್ರೀಮಾನ್ ದೊಡ್ಡಮೇಟಿಯವರು ಸೂರ್ಯ ನಾರಾಯಣರಾಯರು ತಂದಿರತಕ್ಕಂಥ ತಿದ್ದುಪಡಿಯನ್ನು ಒಪ್ಪಿಕೊಳ್ಳಲಿ ಅವರು ಒಂದು ಪುಸ್ತಕವನ್ನು ಹಂಚಿದ್ದರಲ್ಲ ಅಂಥ ಪುಸ್ತಕವನ್ನು ಹಂಚಬಾರದಿತ್ತು. ಮೈಸೂರು ಅನಾಮಧೇಯ ರಾಜ್ಯವಲ್ಲ. ಇದು ನೋಡಿ ಸ್ವಾಮಿ, ನಮ್ಮ ರಾಜ್ಯಕ್ಕೆ ಹೆಸರೆ ಇಲ್ಲವೇ? ಎಸ್.ಆರ್.ಸಿ. ರಿಪೋರ್ಟಿನಲ್ಲಿ ವಿಶಾಲ ಮೈಸೂರು ಎಂದು ಹೇಳಿದ್ದಾರೆ. ಮೈಸೂರು ಸರ್ಕಾರವಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಎಸ್.ಆರ್.ಸಿ. ರಿಪೋರ್ಟಿನಲ್ಲಿರುವುದನ್ನು ನಾನು ಹೇಳಬಲ್ಲೆ. ಈಗ ಆ ಪ್ರಶ್ನೆ ನಮ್ಮ ಮುಂದಿಲ್ಲ. ಈಗ ಈ ಠರಾವು ಜುಲೈವರೆಗೆ ಮುಂದಕ್ಕೆ ಹೋಗಬೇಕೇ ಬೇಡವೇ ಎಂಬುದು ಪ್ರಶ್ನೆ ಹೋಗಬೇಕೆಂದು ನಾವು ಒಪ್ಪಿದ್ದೇವೆ. ನೀವೂ ಒಪ್ಪಿದ್ದೀರಿ.

**ಶ್ರೀ ಜೆ.ಬಿ. ಮಲ್ಲಾರಾಧ್ಯ:** ದುರ್ವಾಸನೆಯೋ ಸುವಾಸನೆಯೋ ಎಂದು ಹೇಳಲಿಲ್ಲ, ಸ್ವಾಮಿ? (ನಗು)

**ಅಧ್ಯಕ್ಷರು:** ಅದೇನೇ ಇರಲಿ ಈಗ .....ಮೇಲೆ ಮಾತನಾಡಿದರೆ ಒಳ್ಳೆಯದು.

**ಶ್ರೀ ಎ.ಜೆ. ದೊಡ್ಡಮೇಟಿ:** ಅದರ ಗಾಂಭಿರ್ಯವನ್ನು ಮಾತ್ರ ಅರ್ಥ ಮಾಡಿಕೊಳ್ಳಬೇಕು ಪ್ರಕಟಣೆಯ ಹಿನ್ನಲೆ ಏನು ಕಾಣುವುದೆಂದರೆ ಸರ್ಕಾರ ತಮ್ಮ ಮಂತ್ರಿ ಮಂಡಲದ ಒಬ್ಬ ಸದಸ್ಯರು ಮಾಡಿದ ಸೂಚನೆಗಳನ್ನು ಅಮಲಿನಲ್ಲಿ ತರಲಿಲ್ಲವೆನ್ನುವ ಭಾವನೆ ಇದೆಯೋ ಗೊತ್ತಾಗಲಿಲ್ಲ.

**ಶ್ರೀ ಜೆ.ಬಿ. ಮಲ್ಲಾರಾಧ್ಯ:** ಪ್ರತಿಯೊಬ್ಬ ಮಂತ್ರಿಗಳೂ ಒಂದೊಂದು ಜಿಲ್ಲೆಗೆ ಹೋಗಿ ವಿಷಯ ತಿಳಿದು ಕೊಳ್ಳಬೇಕೆಂದು ನಾನೇ ಈ ಸಭೆಯಲ್ಲಿ ಸಲಹೆ ಮಾಡಿದ್ದೇನೆ. ಆ ಪಕ್ಷದವರೇ ಈ ರೀತಿ ಹೇಳುವುದು ಸರಿಯಾಗಿದೆಯೇ?

ಒಬ್ಬ ಸದಸ್ಯರು.. ಆ ಮಂತ್ರಿಗಳು ಹೋಗಬಾರದು ಎಂದಿರಬಹುದು.

**ಶ್ರೀ ಎ.ಜೆ. ದೊಡ್ಡಮೇಟಿ:** ಆ ಮಂತ್ರಿಗಳು ಹೋಗಬಾರದೆಂದಲ್ಲ. ಅವರು ಅಲ್ಲಿಗೆ ಹೋದುದಕ್ಕೆ ಬಹಳ ಸಂತೋಷ ಪಡುತ್ತೇನೆ.

**ಶ್ರೀ ಕೆ.ಎಫ್. ಪಾಟೀಲ್:** ನಾನು ಹತ್ತು ಹನ್ನೆರಡು ದಿವಸ ಪ್ರವಾಸ ಮಾಡಿದ್ದೇನೆ. ಹೆಚ್ಚಿಗೆ ಪಬ್ಲಿಸಿಟಿ ಕೊಟ್ಟಿಲ್ಲ. ದುರ್ದೈವ ಹೇಗೆ ಹೇಗಿದೆಯೋ ಗೊತ್ತಿಲ್ಲ. ಪರಿಸ್ಥಿತಿ ಬಹಳ ಕೆಟ್ಟಿದೆ ಎಂದು ಮಾತ್ರ ಹೇಳುತ್ತೇನೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಮಂತ್ರಿಗಳು ಮಾಡಿದ್ದು.....

**ಶ್ರೀ ಕಡಿದಾಳ್ ಮಂಜಪ್ಪ:** ನಾವು ಅದನ್ನು ನಿಲ್ಲಿಸಬೇಕು ಎಂದು ನನಗೆ ಅನಿಸಿದೆ ನಾನು ಶ್ರೀ ದೊಡ್ಡಮೇಟಿಯವರಿಗೆ ಮುಂದಿನ ವಿಷಯ ಮುಂದುವರೆಸಲು ವಿನಂತಿಸುತ್ತೇನೆ.

**ಅಧ್ಯಕ್ಷರು:** ನಿನ್ನೆಯೇ ನಾನು ಮುಗಿಸಿದ್ದರೆ ಚೆನ್ನಾಗಿರುತ್ತಿತ್ತು. ಈ ತರಹ ಗದ್ದಲವೇ ಆಗುತ್ತಿರಲಿಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ಶ್ರೀಮಾನ್ ಕೆ.ಎಫ್. ಪಾಟೀಲರು ಸೂಚಿಸಿರುವ ಮೂರು ನಾಲ್ಕು ಅಂಶಗಳ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆಯೇ? ಹೇಗೆ? ಕಾಗದದೊಳಗೆ ಕ್ರಮ ತೆಗೆದುಕೊಳ್ಳುವುದಿಲ್ಲ. ಅದು ಪ್ರತ್ಯಕ್ಷ ಮುಟ್ಟಿದೆಯೋ ಹೇಗೆ? ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಕಾಳು,ತಗಡು,ಬಟ್ಟೆ ಮುಂತಾದುವನ್ನು ಕಳಿಸಿದ್ದಾರೆನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಲೇಟೆಸ್ಟ್ ಬಾತ್ಮಿ ಹೇಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಧಾರವಾಡ ಜಿಲ್ಲೆಯಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚಿಗೆ ದನಗಳು ಬಯಲಿನಲ್ಲಿ ಕೂಳು ಇಲ್ಲದೆ ನಿಂತಿವೆ. ಜನಗಳಿಗೆ ಸಾಮೂಹಿಕ ಅಡಿಗೆ ವ್ಯವಸ್ಥೆ ಮಾಡಿದ್ದೀರಿ. ಹಾಗೆಯೇ ದನಗಳಿಗೆ ಎಲ್ಲಿಯಾದರೂ ಗುಡ್ಡಗಾಡು ಪ್ರದೇಶದಲ್ಲಿ ಸರ್ಕಾರದವರು ಸಾಮೂಹಿಕವಾದ ಒಂದು ಗೋಶಾಲೆಯನ್ನು ಏರ್ಪಡಿಸಬೇಕು.

ಜನರ ಪರಿಸ್ಥಿತಿ ಈಗ ಬಹಳ ದಾರುಣವಾಗಿದೆ ನನಗೆ ಒಂದು ಟೆಲಿಫೋನ್ ಮೆಸೇಜ್ ಬಂದಿದೆ. ಅದರೊಳಗೆ ಜನರು ದೊಡ್ಡ ಒಡ್ಡಿನ ಕೆಳಗೆ ತಗ್ಗುತೆಗೆದು ಮಲಗಿಕೊಂಡು ಅಡಿಗೆ ಮಾಡಿಕೊಂಡು ಕಾಲಕಳೆಯುವ ಪರಿಸ್ಥಿತಿ ಕೆಲವು ಕಡೆ ಪ್ರಾರಂಭವಾಗಿದೆಯೆಂದು ತಿಳಿಸಿದೆ. ಶ್ರೀ ವೀರಣ್ಣಗೌಡರು ಧಾರವಾಡ ಜಿಲ್ಲೆಯ ಕೆಲವು ಮಾಹಿತಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಇನ್ನೂ ಹೆಚ್ಚಿನ ವಿವರ ಕೊಡಬೇಕಾಗಿದ್ದಿತು. 75 ಲಕ್ಷ ರೂಪಾಯಿಗಳನ್ನು ಈ ಜಿಲ್ಲೆಯಲ್ಲಿ ಹಾನಿಯಾಗಿದೆ ಎಂದು ಹೇಳಿದ್ದಾರೆ. ಇಂತಿಷ್ಟೇ ಹಾನಿಯಾಗಿದೆಯೆಂದು ಹೇಗೆ ನಿರ್ಣಯಮಾಡಿದಿರಿ? ಇದು ವಿಚಾರ ಮಾಡಬೇಕಾದ ಸಂಗತಿ ನನ್ನ ಅಭಿಪ್ರಾಯದ ಪ್ರಕಾರ ನಷ್ಟವನ್ನು ಸರಿಯಾಗಿ ಈಗಲೇ ಅಂದಾಜು ಮಾಡುವುದು ಕಷ್ಟ ಕೆಲವು ಕಾಲ ಹೋದನಂತರ

ಎಲ್ಲಿ ಏನು ಹಾನಿಯಾಗಿ ಏನು ಪರಿಹಾರ ನೀಡಬೇಕು ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬಹುದು. ಹಾವೇರಿ ತಾಲ್ಲೂಕಿನ ಹತ್ತು ಹಳ್ಳಿಗಳು ಪೂರ್ಣ ಜಲಮಯವಾಗಿವೆ.

**ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು):** ಫ್ಲಡ್ ಸುರುವಾದ ತಕ್ಷಣ ಇಲ್ಲಿಗೆ ಬಂದಿರುವಂಥ ಮೆಂಬರುಗಳು ತಕ್ಷವೇ ಆಯಾ ಸ್ಥಾನಗಳಿಗೆ ಹೋಗಿ, ಪ್ರವಾಹದ ಮಾಹಿತಿ ಮಾಡಿಕೊಂಡು ಬಂದು ಅಸೆಂಬ್ಲಿಯಲ್ಲಿ ಹೇಳಿದರೆ ಚೆನ್ನಾಗಿತ್ತು. ಅದನ್ನು ಬಿಟ್ಟು ಅವರ ಊರಿಗೆ ಹೋಗದೆ ಇಲ್ಲಿಯೇ ಕುಳಿತುಕೊಂಡು ಭಾಷಣ ಮಾಡಿಬಿಟ್ಟರೆ ಯಾರ ದೋಷ ಅದು? ಏನು ಮಿನಿಸ್ಟರುಗಳು ಹೋಗಿಬಿಟ್ಟು ದನಗಳನ್ನು ಕಾಯುವುದಕ್ಕೆ ಆಗುತ್ತದೆಯೇ? ಮೆಂಬರುಗಳು ಅಫೆಕ್ಟೆಡ್ ಸ್ಥಳಗಳಿಗೆ ಏಕೆ? ಹೋಗಲಿಲ್ಲ?

(ಶ್ರೀ ರಾಮಕೃಷ್ಣ ಹೆಗಡೆಯವರು ಎದ್ದು ನಿಂತರು)

ಸದಸ್ಯರು ವಿರೋಧಿಸಿದರು. ನಾನು ಇನ್ನು ತನಕ ನನ್ನ ಮಾತು ಮುಗಿಸಿಲ್ಲ. ನಾನು ನಿಂತೇ ಇದ್ದೇನೆ.

**ಅಧ್ಯಕ್ಷರು:** ತೀವ್ರ ಮುಗಿಸಿ,

**ಶ್ರೀ ಎ.ಜೆ. ದೊಡ್ಡಮೇಟಿ:** ಹೆಲ್ಪ್ ಆಗಿಲ್ಲವೆಂದು ಹೇಳಿಕೊಂಡಿದ್ದೇವೆ ಅಧ್ಯಕ್ಷರು ಹೇಳದೇ ಅವರು ಮುಗಿಸುವುದಿಲ್ಲ.

**ಶ್ರೀ ಜಿ.ಎನ್. ಪುಟ್ಟಣ್ಣ:** ಇಷ್ಟೇ ನನ್ನ ಪ್ರಾರ್ಥನೆ, ಈ ಫ್ಲಡ್ ವಿಚಾರದಲ್ಲಿ ಸರ್ಕಾರದ್ದು ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ಪ್ರತಿಯೊಬ್ಬ ಮೆಂಬರಿಗೂ ಇದೆ. ಅಸೆಂಬ್ಲಿಗೆ ಬಂದಿರತಕ್ಕಂಥ ಮೆಂಬರುಗಳು ಫ್ಲಡ್ ಬಂದ ತಕ್ಷಣ ಅಸೆಂಬ್ಲಿ ಬಿಟ್ಟು ಪ್ರವಾಹ ಪೀಡಿತ ಪ್ರದೇಶಗಳಿಗೆ ಹೋಗಿ ಕೆಲಸ ಮಾಡಿ, ಪರಿಸ್ಥಿತಿ ಪರಿಶೀಲನೆ ಮಾಡಿ ಏನು ಪರಿಸ್ಥಿತಿ ಇದೆ ಎಂದು ಹೇಳಬೇಕಾಗಿತ್ತು. ಸುಮ್ಮನೆ ಇಲ್ಲಿ ಕುಳಿತುಕೊಂಡು ಡಿ. ಎ. ತೆಗೆದುಕೊಂಡು, ಹೋಗುವುದಕ್ಕೆ ಬರುವುದಕ್ಕೆ ಟಿ. ಎ. ತೆಗೆದುಕೊಂಡು, ಮಿನಿಸ್ಟರು ದನಕಾಯಲಿ, ಎಂದು ಮುಂತಾಗಿ ಹೇಳಿದರೆ ಏನು ಪ್ರಯೋಜನ? ನಮ್ಮ ಡ್ಯೂಟಿ ಮಾಡಿದ್ದೇವೆಯೇ? ಈ ರೀತಿಯ ವ್ಯಾಖ್ಯಾನ ಬೇಡ.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ:** ಪುಟ್ಟಣ್ಣನವರು ದೊಡ್ಡಮೇಟಿಯವರ ಭಾಷಣ ಕೆಡಿಸಿಬಿಟ್ಟರು.

**ಶ್ರೀ ಎ.ಜೆ. ದೊಡ್ಡಮೇಟಿ:** ಅವರು ಸರಿ ಮಾಡಿದರು. ಪಾಪ, ಪುಟ್ಟಣ್ಣನವರು ಇನ್ನೇನು ಮಾಡಿಯಾರು; ಅವರಿಗೆ ಸರಿಯಾದ ಕಲ್ಪನೆ ಇಲ್ಲ ಪೂರ್ಣ ಗೊತ್ತಿಲ್ಲದ ಮಾತನಾಡುವುದು ಕೆಲವರ ಸ್ವಭಾವ ಅದಕ್ಕೆ ಏನು ಮಾಡುವುದಕ್ಕಾಗುವುದಿಲ್ಲ

ಇರಲಿ? ಪ್ರತಿಯೊಬ್ಬ ಮನುಷ್ಯ ಮಂತ್ರಿಯೇ ಆಗಲೀ, ಮೆಂಬರೇ ಆಗಲೀ ಮಣ್ಣು ಕಡಿಯುವ ದನಕಾಯುವ ಪ್ರಶ್ನೆ ಇರುವುದಿಲ್ಲ.

ನನ್ನ ಮಟ್ಟಿಗೆ ಹೇಳಬೇಕಾದರೆ, ನಾನು ಈಚೆಗೆ 18ನೇಯ ತಾರೀಖು ಬಂದ ನಂತರ ಈ ಫ್ಲಡ್ ಬಂದಿದೆಯೆಂದು ಗೊತ್ತಾಯಿತು. ಆ ಮೇಲೆ ನನಗೆ ಜ್ವರ ಬಂದು ಬಿಟ್ಟಿತು. ಹೀಗಾಗಿ ಪ್ರವಾಸ ಮಾಡಲಿಲ್ಲ. ದಿನಂಪ್ರತಿ ಸಂಪರ್ಕವನ್ನಿಟ್ಟು ಹೊಸಹೊಸ ಮಾಹಿತಿ ತರಿಸಿ, ಇತ್ತೀಚೀನ ಸಂಗತಿ ತರಿಸಿಕೊಂಡು ತಿಳಿದ ಸಂಗತಿಗಳ ಮೇಲೆ ನಾನು ಮಾತನಾಡುತ್ತಾ ಇದ್ದೇನೆ. ಅದೇನೆ ಇರಲಿ, ಸರ್ಕಾರದವರೇ ಈ ಜಿಲ್ಲೆಯಲ್ಲಿ 18 ಸಾವಿರ ಜನ ನಿರಾಶ್ರಿತರಾಗಿದ್ದಾರೆಂದು ಒಪ್ಪಿಕೊಂಡಿದ್ದಾರೆ. ಆ. 18,000 ಜನರಿಗೆ ಯಾವ ರೀತಿ ಪುನರ್ವ್ಯವಸ್ಥೆ ಮಾಡಿದ್ದೀರಿ? ಈ ಎಲ್ಲಾ ಮಾತುಗಳನ್ನೂ ಸರ್ಕಾರದವರು ಹೇಳಬೇಕು.

ಇಲ್ಲಿ ಇನ್ನೊಂದು ಮಹತ್ವದ ಮಾತನ್ನು ವಿಚಾರ ಮಾಡಬೇಕು. ಭೂಕಂಪವಾದಾಗ, ಬಂಡಾಯವಾದಾಗ ನೈಸರ್ಗಿಕ ಆ ವಸ್ತುಗಳು ಒದಗಿದಾಗ ಕೆಲವು ಅಪವ್ಯಯಗಳು ಆಗುವುದಕ್ಕೆ ಆಸ್ಪದವಿರುತ್ತದೆ. ಅಂಥ ಆಸ್ಪದಗಳು ಎಲ್ಲಿಯಾದರೂ ಅಲ್ಪ ಸ್ವಲ್ಪ ವಿರುವುದು ಕ್ಷಮ್ಯವಾದಿತು. ಆದರೆ ಬಹಳ ದೊಡ್ಡ ಪ್ರಮಾಣದಲ್ಲಿ ನಿರಾಶ್ರಿತರ ಹೆಸರಿನಲ್ಲಿ ಮಧಾರಿ ಜನಗಳು ಕೈಯಾಡಿಸುವುದು ಸಂಭವನೀಯ; ಅದು ಅಸಾಧ್ಯವಾದುದಲ್ಲ. ಅದು ಆಗದ ರೀತಿಯಲ್ಲಿ ಒಂದು ವ್ಯವಸ್ಥೆಮಾಡಬೇಕು. ಸ್ಥಾನಿಕ ಕಮಿಟಿಗಳೊಳಗೆ, ಸರ್ಕಾರಿ ಅಧಿಕಾರಿಗಳೂ, ಅಧಿಕಾರೇತರರೂ ಒಳಗೊಂಡ ಸಂಯುಕ್ತ ಕಮಿಟಿ ಇರಬೇಕು. ಈ ಉಭಯತರಲ್ಲಿಯೂ ಒಂದು ಪರಸ್ಪರ ಹೊಂದಾಣಿಕೆ ಇದ್ದರೆ ಬಹಳ ಕೆಲಸವಾದೀತು.

ಹಾವೇರಿ ಭಾಗದಂತಹ ಒಂದು ಸಣ್ಣ ಕ್ಷೇತ್ರದಲ್ಲಿ 52 ಹಳ್ಳಿಗಳ ಜನರು ತೊಂದರೆಗೀಡಾಗಿದ್ದಾರೆ. ಸರ್ಕಾರದವರು ಆದಷ್ಟು ಬೇಗನೆ ಪ್ರವಾಹದಿಂದ ಉಂಟಾದ ಪರಿಸ್ಥಿತಿಯನ್ನು ನಿವಾರಣೆ ಮಾಡುವ ಕಾರ್ಯಕ್ಕೆ ತೊಡಗಬೇಕೆಂದು ಹೇಳಿ ತಮ್ಮ ಅಪ್ಪಣೆಯನ್ನು ತೆಗೆದುಕೊಳ್ಳುತ್ತೇನೆ.

# ಬರಗಾಲ ಪರಿಹಾರ ಧಾರವಾಡ ಜಿಲ್ಲೆಯಲ್ಲಿ

**ಶ್ರೀ ಎ.ಜೆ. ದೊಡ್ಡಮೇಟಿ (ರೋಣ):** ಸ್ವಾಮಿ 11.3.1961 ರಲ್ಲಿ ಚರ್ಚೆಯಾದ 9ನೆಯ ಪಟ್ಟಿಯಲ್ಲಿರುವ 209ನೇಯ ಪ್ರಶ್ನೆ ಈ ರೀತಿ ಇದೆ.

ಎ) ಧಾರವಾಡ ಜಿಲ್ಲೆಯಲ್ಲಿ ಕೈಕೊಂಡ ಪರಿಹಾರ ಕಾಮಗಾರಿಗಳ ವಿವರಗಳೇನು (ತಾಲ್ಲೂಕುವಾರು),

ಬಿ) ಆ ಪೈಕಿ ಪೂರ್ತಿಯಾದ ಕಾಮಗಾರಿಗಳ ಸಂಖ್ಯೆ ಎಷ್ಟು?

ಸಿ) ಸುರಕ್ಷಿತವಾದ ಹಂತದವರೆಗೆ ತಲುಪಿರುವ ಕಾಮಗಾರಿಗಳ ಸಂಖ್ಯೆ ಎಷ್ಟು?

ಡಿ) ಪೂರ್ತಿಯಾಗಿರದ ಕಾಮಗಾರಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಸಂಖ್ಯೆಗಳನ್ನು ಕಾಮಗಾರಿಗಳ ಹೆಸರುಗಳನ್ನೂ ಒದಗಿಸಬೇಕು)

ಇ) ಮೇಲ್ಕಂಡ ಕಾಮಗಾರಿಗಳ ಪೈಕಿ ರಸ್ತೆ ನಿರ್ಮಾಣದ ಕಾಮಗಾರಿಗಳನ್ನು ಜಿಲ್ಲೆ ಅಥವಾ 'ಗ್ರಾವೆಲ್' ಹಾಕಿ ಮಿಗಿಸದೇ ಇರುವುದರಿಂದ ಜನಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದವರಿಗೆ ತಿಳಿದಿದೆಯೇ?

ಎಫ್) ಈ ರಸ್ತೆಗಳನ್ನು ಒಳ್ಳೆಯ ಸ್ಥಿತಿಗೆ ತರಲು ಸರ್ಕಾರದವರು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಯೋಚಿಸಿದ್ದಾರೆ? ಇದಕ್ಕೆ ಉತ್ತರವಾಗಿ (ಎ) ಯಿಂದ (ಡಿ) ವಿವರಗಳನ್ನು ಸಭೆಯ ಮುಂದಿಡಲಾಗಿದೆ (ಇ) ಸುರಕ್ಷಿತವಾದ ಹಂತದವರೆಗೆ ತರದೆ ಅಂತಹ 35 ಕಾಮಗಾರಿಗಳನ್ನು ನಿಲ್ಲಿಸಲಾಗಿದೆಯೆಂದು ಈಗ ವರದಿಯಾಗಿದೆ.

ಜಿ) ಮುಂದೆ ಅವುಗಳನ್ನು ಸುರಕ್ಷಿತವಾದ ಹಂತಕ್ಕೆ ತರಲು ಕ್ರಮವನ್ನು ಕೈಕೊಳ್ಳಲಾಗುವುದು?

ನಾನು ಸರ್ಕಾರಕ್ಕೆ ಹೇಳಬೇಕಾದುದು ಇಷ್ಟು. ಸರ್ಕಾರದವರು ಕೊಟ್ಟ ಉತ್ತರದ ಪ್ರಕಾರ 35 ಕಾಮಗಾರಿಗಳನ್ನು ಇನ್ನೂ ಒಂದು ಸುರಕ್ಷಿತ ಸ್ಥಿತಿಗೆ ತರಲಿಲ್ಲ ಸುರಕ್ಷಿತ ಸ್ಥಿತಿ ಎಂದರೇನು? ಸರ್ಕಾರದ ಕಾನೂನಿನ ಪ್ರಕಾರ ಇದಕ್ಕೇನು ಅರ್ಥವೆಂಬುದು ಗೊತ್ತಾಗುವುದಿಲ್ಲ. ನನ್ನ ದೃಷ್ಟಿಯ ಪ್ರಕಾರ ಕನಿಷ್ಟ ರಸ್ತೆಯ ನಿರ್ಮಾಣವೆಂದರೆ ಅದರ ಮೇಲೆ ಖಡಿ ಹಾಕಿ ಸಾಧಾರಣ ಕಲ್ವರ್ಟ ನಿರ್ಮಾಣ ಮಾಡಿಕೊಟ್ಟು ರಸ್ತೆಯ ಮೇಲೆ ಬಂಡಿ ಮತ್ತಿತರ ವಾಹನಗಳು ಓಡಾಡುವ ರೀತಿಯಲ್ಲಿ ಮಾಡಿದರೆ ಅದು ಸುರಕ್ಷಿತ ಹಂತವೆಂದು ಹೇಳಬಹುದು. ಖಡಿ ಹಾಕುವುದು ಮಟ್ಟ ಮಾಡುವುದು ಎರಡನೇಯ ಘಟ್ಟ. ಧಾರವಾಡ ಜಿಲ್ಲೆಯಲ್ಲಿ 35 ರಸ್ತೆಗಳನ್ನು ಸುರಕ್ಷಿತವಾದ ಹಂತಕ್ಕೆ ತಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ, ಸುರಕ್ಷಿತವಾದ ಹಂತಕ್ಕೆ ತರಲು ಕ್ರಮ ಕೈಕೊಳ್ಳಲಾಗುವುದು ಎಂದು ಹೇಳಿದ್ದಾರೆ ಈ ಉತ್ತರ ಕೊಟ್ಟಿರುವುದು

ಆರು ತಿಂಗಳ ಕೆಳಗೆ ಈ ಆರು ತಿಂಗಳಲ್ಲಿ ನಾನು ಆ ಪ್ರದೇಶದ ಕೆಲವು ಕಡೆ ಪ್ರವಾಸ ಮಾಡಿದ್ದೇನೆ. ಈ ಬಗ್ಗೆ ಕ್ರಮ ಕೈಕೊಂಡಿರುವುದು ಪ್ರತ್ಯಕ್ಷವಾಗಿ ಎಲ್ಲಿಯೂ ನನಗೆ ಕಂಡುಬಂದಿಲ್ಲ.ಜಿಲ್ಲಾ ಮಟ್ಟದಲ್ಲಿ ವರದಿ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ.

**ಶ್ರೀ ಕಡಿದಾಳ್ ಮಂಜಪ್ಪ:** ನಿಗದಿತ ವೇಳೆಯಲ್ಲಿ ಎಂದು ಹೇಳಿದ್ದೇನೆ

**ಶ್ರೀ ಎ.ಜೆ. ದೊಡ್ಡಮೇಟಿ:** ನಿಗದಿತ ವೇಳೆಯಲ್ಲಿ ಎಂದರೇನು ಯಾವ ಶಬ್ದವನ್ನು ಬೇಕಾದರೂ ಉಪಯೋಗ ಮಾಡಲಿ ಕೆಲಸ ಆಗಬೇಕು, course of time ಎಂದರೆ ಯಾವಾಗಲಾದರೂ ಆದೀತು. ಹಳ್ಳಿಗಾಡಿನಲ್ಲಿ ಅಲ್ಲಿನ ಜನರ ಅನುಕೂಲಕ್ಕಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳ ಬೇಕಾದರೆ ರಸ್ತೆಗಳು ಅಗತ್ಯ. ಈಗ ಏನಾಗಿದೆಯೆಂದರೆ ಎಷ್ಟೋ ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ ನಾವು ಮುಂಚೆ ಹೋಗಿ ಬೇಕಾದ ಭೂಮಿಯನ್ನು ಜನರಿಂದ ಕೊಡಿಸಿದ್ದೇನೆ ಒಳ್ಳೆ ಭೂಮಿಯಲ್ಲಿ ರಸ್ತೆಗಾಗಿ ತಕ್ಕಷ್ಟನ್ನು ಕೊಡಿಸಬೇಕೆಂದು ಎಕ್ಸಿಕ್ಯೂಟಿವ್ ಇಂಜಿನಿಯರು ಕೇಳಿದಾಗ ಅದನ್ನು ಕೊಡಿಸಿದ್ದೇವೆ.

ಕಾಲುದಾರಿಯಲ್ಲಿ ಅಡ್ಡಾಡುವುದಕ್ಕೆ ಬರುವುದಿಲ್ಲ. ಬೇರೆ ದಾರಿಯಲ್ಲಿ ಅಡ್ಡಾಡಿ ಅವು ಮೂರು ಮೂರು ಪಟ್ಟು ಕೆಟ್ಟಿರುವುದರ ಉದಾಹರಣೆ ಇದೆ. ಕೆಲವೊಂದು ಉದಾಹರಣೆಗಳನ್ನು ಅಪೇಕ್ಷೆ ಪಡುತ್ತೇನೆ.

**ರೋಣ ತಾಲ್ಲೂಕಿನಲ್ಲಿ:**

| | |
|---|---|
| ಹೊಸಹಳ್ಳಿ-ಇಟಗಿ | 3ಮೈಲಿ |
| ಜಗಳೂರು ಅಪ್ರೋಚ್ | 1,, |
| ಹಿರೇಮಣ್ಣೂರ-ಹುನಗುಂಡಿ | 5,, |
| ಸೋಮನಕಟ್ಟೆ-ಮಳವಾಡಿ | 6,, |
| ದಿಂಡೂರು-ಅಪ್ರೋಜ್ | 1 |
| | 16 ,, |

**ಗದಗ ತಾಲ್ಲೂಕಿನಲ್ಲಿ:**

| | |
|---|---|
| ನೀರಲಗಿ-ಬೆನಕೊಪ್ಪ | 3 ಮೈಲಿ |
| ಗದಗ-ಹಾಲ್‌ಗೇರಿ : | 3 ,, |
| ನರಗುಂದ್- | |
| ಕಲಿಹಿಳ-ಚಿಕ್ಕನರಗುಂದ | 7 ,, |
| ಶಿರೋಳ-ಹದ್ದಿ | 6 ,, |
| ಅಳಗವಾಡಿ-ನರಗುಂದ | 6 ,, |

ಕಲಕೇರಿ ಕಣಿಲೆಕಟ್ಟಿ

ನವಲಗುಂದ್-

| | |
|---|---|
| ಬ್ಯಾಹಟ್ಟಿ ಅಳಗವಾಡಿ | 16 ,, |
| ಅಣ್ಣಿಗೇರಿ-ಬಸ್ನೂರ | 12 ,, |
| ನವಲಗುಂದ-ಕೈತಾಳ | 11 ,, |
| ಶಿಶ್ವಿನಹಳ್ಳಿ-ಸ್ಟೇಷನ್ | 11 ,, |

ಮುಂಡರಗಿ ಪೇಠದಲ್ಲಿ ಸಹಿತ ಕೆಲವಾರು ಮಾರ್ಗಗಳು ದುರಸ್ತಾಗದೇ ಉಳಿದಿವೆ ಬೇಗನೆ ಸುರಕ್ಷತೆಗೆ ತಂದೇ ತರುತ್ತೇವೆ ಎಂದು ಆಗಲೇ ಹೇಳಿದ್ದೀರಿ ಎಂದು ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಿಲ್ಲ. ತಾಲ್ಲೂಕು ಬೋರ್ಡಿಗೆ ಒಪ್ಪಿಸುವುದಕ್ಕೆ ಮುಂಚೆ ಸೇಫ್ ಸ್ಟೇಜಿಗೆ ಆದರೆ ಒಳ್ಳೆಯದು ಮುಂದೆ ತಾಲ್ಲೂಕು ಬೋರ್ಡಿನವರು ತಮಗೆ ಅನುಕೂಲವಾದರೆ ಇಟ್ಟುಕೊಳ್ಳಬಹುದು ಬೇಡವಾದರೆ ಪಿ.ಡಬ್ಲ್ಯು.ಡಿ.ಗೆ ಒಪ್ಪಿಸಬಹುದು. ಆದ್ದರಿಂದ ಈ ಕಾಮಗಾರಿಯನು ಅದಷ್ಟು ಬೇಗ ಸುರಕ್ಷಿತ ಸ್ಥಿತಿಗೆ ತರಲು ಪ್ರಯತ್ನಮಾಡಬೇಕು ಇಲ್ಲದೇ ಇದ್ದರೆ ಅವು ಈಗ ಗೇಣಿ ಶಾಸನ ಜಾರಿಗೆ ತರುತ್ತೀರಿ. ಅದನ್ನು ತರುವುದರ ಉದ್ದೇಶ ರೈತರು ಹೆಚ್ಚು ಬೆಳೆ ಬೆಳೆಯಬೇಕೆಂದು ಆಗದೆ. ರೈತನ ಭೂಮಿಯಲ್ಲಿ ಸಮಾರು ಒಂದು ಮೈಲಿಮಾರ್ಗ ಮಾಡಿ ಪೋಟಿನ ಮೂರು ಮಾರ್ಗಗಳನ್ನು ಮಾಡಿದರೆ ಎಷ್ಟು ಭೂಮಿ ಹೋಗುತ್ತೆ? ತ್ರೈರಾಸಿ ಮಾಡಿನೋಡಿ ಹೀಗೆಲ್ಲಾ ರೈತರಿಗೆ ಬಹಳಷ್ಟು ತೊಂದರೆಯಾಗಿದೆ. ಆ ಕಾರಣಕ್ಕಾಗಿ ತಾವು ಎಷ್ಟು ಹೆಚ್ಚು ವಿಳಂಬ ಮಾಡದೇ ಯಾವ ಕಾಮಗಾರಿ ತೆಗೆದುಕೊಂಡಿದ್ದಿರೋ ಅವನ್ನು ಪೂರ್ಣವಾಗಿ ಸೇಫ್ ಸ್ಟೇಜಿಗೆ ತರಬೇಕು. ಇಲ್ಲದೇ ಇದ್ದರೆ ಸರ್ಕಾರದ ದುಡ್ಡು ಹಾಳಾಗುತ್ತದೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತೀರಿ. ಭಾರಿ ಮಳೆ ಆಯಿತು ಎಂದರೆ ಎಲ್ಲಾ ಹಾಳಾಗಿ ಹೋಗುತ್ತದೆ ಆಮೇಲೆ ಮೊದಲು ಎಲ್ಲಿದ್ದವೋ ಅಲ್ಲಿಯೇ ಉಳಿಯುತ್ತವೆ ಆದ ಕಾರಣ ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಈ ವಿಚಾರದಲ್ಲಿ ಯಾವ ರೀತಿಯಾದ ಅಲಕ್ಷ್ಯ ಆಗದ ರೀತಿಯಲ್ಲಿ ಅವನ್ನು ಸುರಕ್ಷತೆಗೆ ತಂದೇ ತರಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ಫಂಡ್‌ನಲ್ಲಿ ಎಷ್ಟು ತೆಗೆದುಕೊಳ್ಳಬೇಕು ಅವೇಲೇಬಲ್ ಆಗಿದೆ ಎಂಬುದನ್ನು ಹೇಳುವುದು ನನ್ನ ಕರ್ತವ್ಯವಲ್ಲ ಎಲ್ಲಾದರೂ ಹಣ ತೆಗೆದುಕೊಳ್ಳಿ ತೆರಿಗೆ ಹಾಕಿರಿ ಅಂತೂ ಒಟ್ಟಿನ ಮೇಲೆ ಈ ಕಾರ್ಯಗಳು ಮಾತ್ರ ಆಗಬೇಕು. ಹಳ್ಳಿಯವರು ಪಟ್ಟಣಕ್ಕೆ ಬಂದು ನೋಡಿದಾಗ ನಮಗೆ ಮಾತ್ರ ಸಿಮೆಂಟ್ ಇಲ್ಲ ಎನ್ನುತ್ತಾರೆ. ಇಲ್ಲಿ ನೋಡಿ ಒಂದರಮೇಲೊಂದು ಮನೆ ಕಟ್ಟಲಿಕ್ಕೆ ಹತ್ತಿದ್ದಾರೆ ನಾವು ಕೆಸರಿನಲ್ಲಿ ಮಣ್ಣು ಬಟ್ಟೆ ಉಟ್ಟುಕೊಂಡು ಒಡಾಡಬೇಕು. ಇದೇನು ನ್ಯಾಯ ಎಂದು ಕೇಳುತ್ತಾರೆ. ನೀವೂ ಹಳ್ಳಿಯವರೇ ರೈತರು ರೈತರಿಗೆ ಬೇಕಾದ್ದನ್ನು ಮಾಡುವಾಗ ಮಾತ್ರ ಜಾಗ್ರತೆ ಮಾಡುವುದಿಲ್ಲ. ಈ ಕಾರ್ಯಗಳು ಪ್ರತ್ಯಕ್ಷವಾಗಿ ಕೃತಿಗೆ ಇಳಿಯದಿರುವುದು ದುರ್‌ದೈವದ ಸಂಗತಿ ಆದ ಕಾರಣ ಈ ವಿಷಯದಲ್ಲಿ ಸ್ಪಷ್ಟವಾಗಿ ನಿರ್ದಿಷ್ಟವಾದ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ

# ಭೂ ಸುಧಾರಣಾ ಸಮಿತಿಯ ಪರಿಶೀಲನಾ ಚರ್ಚೆ

**ಶ್ರೀ ಎ.ಜೆ. ದೊಡ್ಡಮೇಟಿ** (ರೋಣ)**:** ಸ್ವಾಮಿ ಭೂಸುಧಾರಣೆ ಪರಿಶೀಲನಾ ಸಮಿತಿ ವರದಿಯೊಡನೆ ಬಂದಂಥ ಈ ಕಾನೂನನ್ನು ನಾನು ಸಮರ್ಥನೆ ಮಾಡುತ್ತಾ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇನೆ. ಈ ಭೂಸುಧಾರಣೆ ಮಾಡುವುದಕ್ಕೆ ಮುಖ್ಯವಾಗಿ ನಾಲ್ಕು ವರ್ಷಗಳಿಂದಲೂ ನಮ್ಮ ದೇಶದಲ್ಲಿ ಉಂಟಾಗಿರತಕ್ಕ ಅನೇಕ ವಾದ ವಿವಾದಗಳು ಕೆಲವು ಮೂಲ ಭೂತವಾದ ತತ್ವಕ್ಕೆ ಅನಾನುಕೂಲವಾಗುತ್ತವೆ ಎಂಬುದಾಗಿ ನಾನು ಹೇಳಬೇಕಾಗಿದೆ. ಸಾಮಾನ್ಯವಾಗಿ ಈ ಭೂಸುಧಾರಣೆಯನ್ನು ಸಾಮಾಜಿಕದಲ್ಲಿ ನ್ಯಾಯ ಕಲ್ಪಿಸುವ ಹಾಗೆ ಮಾಡಿರುವುದಕ್ಕಾಗಿ ಸಾಗುವಳಿದಾರರಿಗೂ ಮತ್ತು ಭೂಮಾಲೀಕರಿಗೂ ಇರತಕ್ಕ ವ್ಯತ್ಯಾಸ ಅಡ್ಡಿ ಆಂತಕಗಳನ್ನು ನಿವಾರಣೆ ಮಾಡುವ ಉದ್ದೇಶದಿಂದಲೂ ಆಹಾರ ಧ್ಯಾನ್ಯಗಳನ್ನು ಹೆಚ್ಚು ಮಾಡಬೇಕಾದ ಸಾಧನೆಯಿಂದ ಮತ್ತು ವ್ಯವಸಾಯದ ಕೂಲಿಗಾರರಿಗೆ ಹೆಚ್ಚಿನ ಕೂಲಿ ದೊರಕಬೇಕು ಎನ್ನುವ ಉದ್ದೇಶದಿಂದ ತಂದಿದ್ದಾರೆ. ಅಂದರೆ ಮೇಲೆ ಈ ಭೂಸುಧಾರಣೆಯು ಮೂಲತತ್ವ ಏನೆಂಬುದನ್ನು ನಾವು ಗ್ರಹಿಸಬೇಕು. ಅಲ್ಲದೆ ಅದಕ್ಕನುಸಾರವಾಗಿ ಈ ಕಾನೂನುಗಳಲ್ಲಿ ಯಾವುದನ್ನು ಹೆಚ್ಚು ಕಡಿಮೆ ಮಾಡಬೇಕು ಮತ್ತು ಯಾವ್ಯಾವ ಅಂಶಗಳು ಹಾಗೇಯೇ ಇರಬೇಕು ಎಂಬುದನ್ನು ನಾವೆಲ್ಲರೂ ಈ ಸಂದರ್ಭದಲ್ಲಿ ವಿಚಾರ ಮಾಡಬೇಕು. ಆ ದೃಷ್ಟಿಯಿಂದ ನಾವು ಮೊದಲನೆಯದಾಗಿ ಯಾವ್ಯಾವ ವಿಷಯಗಳನ್ನು ಪರಿಶೀಲನೆ ಮಾಡಬೇಕು ಎಂಬುದನ್ನು ಗಮನಿಸಬೇಕು. ಭೂಸುಧಾರಣೆಯನ್ನು ಮಾಡಬೇಕಾದರೆ ಒಂದು ಪರಿಮಿತಿ ಅವಶ್ಯಕತೆ ಇರುವುದು ಸರಿಯಾದುದು. ಆದರೆ ಈಚೆಗೆ ಪರಿಮಿತಿಯನ್ನು 18 ಎಕರೆ ಎಂತಲೂ ಇನ್ನು ಕೆಲವರು 13 ಎಕರೆಗಳಿಗಿಂತಲೂ ಮತ್ತೆ ಕೆಲವರು 30 ಎಕರೆ ಗಳಿಂತಲು ಇನ್ನೂ ಕೆಲವರು 36 ಎಕರೆಗಳಿಗಿಂತಲೂ ಒಂದು ಸ್ಟಾಂಡರ್ಡ್ ಇರಬೇಕೆಂದು ಹೇಳುತ್ತಾರೆ. ನಾನು ಹೇಳುವುದಿಷ್ಟೆ ಇದು ಒಂದು ಸ್ಥಿರವಾಗಿ ಇಷ್ಟೇ ಸ್ಟಾಂಡರ್ಡ್ ಎಕರೆಯೆಂದು ಸ್ಥಿರವಾಗಿ ಹೇಳುವುದಕ್ಕಾಗುವುದಿಲ್ಲ ಇದು ಕಾಲಕಾಲಕ್ಕೆ ಬದಲಾವಣೆಯಾಗಬೇಕಾದುದು ಅಗತ್ಯವಿದೆ. ಒಂದು ಕಾಲಕ್ಕೆ ನಮ್ಮ ವ್ಯವಸಾಯ ಕೇವಲ ಹಿಂದಿನ ಮತ್ತು ಹಳೆಯ ಪದ್ಧತಿಯಿಂದ ನಡೆಯುತ್ತಿತ್ತು. ಆಗ ಬೆಳೆಯುವ ಪದಾರ್ಥಗಳು ಹೆಚ್ಚಿಗೆ ದೇಶದಲ್ಲಿ ದೊರೆಯುತ್ತದೆ ನಮ್ಮ ದೇಶ ಒಂದು ಕಲ್ಯಾಣ ಭೂಮಿಯಹಾಗೆ ಹೆಸರನ್ನು ಪಡೆದು ಗ್ರಾಮಗಳಲ್ಲಿ ಮತ್ತು ಊರಿನಲ್ಲಿ ಒಳ್ಳೆಯ ಜೀವನ ನಡೆಯುತ್ತಿತ್ತು ಈಗ ಹೊಸ ಯಾಂತ್ರಿಕ ಸುಧಾರಣೆಯೊಡನೆ ನಾವು ವ್ಯವಸಾಯ ನಡೆಸಬೇಕಾಗಿರುವುದರಿಂದ ಕೆಲಮಟ್ಟಿಗೆ ಹೆಚ್ಚಿನ ಭೂಮಿ ಅವಶ್ಯಕತೆ ಇದೆ ಎಂದು ನಾವು ವಾದಮಾಡಬೇಕಾಗುತ್ತದೆ. ಅದನ್ನು ನಾವೆಲ್ಲರೂ ಸಾಮಾನ್ಯವಾಗಿ ಒಪ್ಪಿಕೊಳ್ಳಬಹುದು.

ಹೀಗೆ ಹೆಚ್ಚು ಎಕರೆ ಭೂಮಿ ಭೂಮಾಲೀಕರಿಗೆ ಇರಬೇಕಾದ್ದು ಅಗತ್ಯ. ಈ ಬಗ್ಗೆ ಕೆಲವರು ಏನೊಂದು ವಾದ ಮಾಡಿದ್ದಾರೆಂದರೆ ಈ ದಿವಸ ನಮ್ಮಲ್ಲಿ ಅನೇಕರು ನೌಕರಿ ಮಾಡುತ್ತಿದ್ದಾರೆ ಇನ್ನು ಕೆಲವರು ಕೆಲವು ಉದ್ಯೋಗಗಳಲ್ಲಿದ್ದಾರೆ ಕೆಲವರು ವ್ಯಾಪಾರೋದ್ಯಮದಲ್ಲಿದ್ದಾರೆ ಹೀಗೆ ನಾನಾದಂಧೆಗಳಲ್ಲಿರತಕ್ಕವರು ಹೆಚ್ಚು ಹೆಚ್ಚು ಹಣಗಳಿಸುತ್ತಿದ್ದಾರೆ ಈ ದಿವಸ ಒಬ್ಬ ಐ.ಸಿ.ಎಸ್. ಆಫೀಸರನು ತಿಂಗಳಿಗೆ 3 ಸಾವಿರ ರೂಪಾಯಿಗಳ ಪ್ರಕಾರ ಪಡೆಯುತ್ತ ವರ್ಷಕ್ಕೆ (3000) ಮೂವತ್ತಾರು ಸಾವಿರ ರೂಪಾಯಿಗಳ ವರಮಾನ ಪಡೆಯುತ್ತಾನೆ. ಇನ್ನು ಕೆಲವರು ವಾಣಿಜ್ಯೋದ್ಯಮಗಳಲ್ಲಿ ವರ್ಷಂಪ್ರತಿ 30-40 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಗಳಿಸತಕ್ಕವರೂ ಇದ್ದಾರೆ. ಹೀಗೆಲ್ಲ ಇರುವಾಗ ಈ ದಿವಸ ರೈತಾಪಿ ಕಸುಬಿನಲ್ಲಿರತಕ್ಕ ಮನುಷ್ಯನೂ ಕೂಡಾ ಒಂದು ಡಿಸೆಂಟ್ ಲೈಫನ್ನ ಲೀಡ್ ಮಾಡಬೇಕಾಗಿದ್ದರೆ ಆತನಿಗೆ ವರ್ಷಕ್ಕಿಷ್ಟು ಉತ್ಪನ್ನ ಬರಬೇಕು ಎಂಬುದನ್ನು ಗಣನೆಯಲ್ಲಿಟ್ಟುಕೊಂಡು ಈ ದಿವಸ ಭೂ ವ್ಯವಸಾಯಗಾರನಿಗೆ ಇಂತಿಷ್ಟು ಜಮೀನಿರಲೇಬೇಕಾದ್ದು ಅತ್ಯಗತ್ಯ ಅಂತ ಈ ತೀರ್ಮಾನಕ್ಕೆ ಬಂದಿದ್ದಾರೆ ಆದುದರಿಂದ ಈಗ ವ್ಯವಸಾಯಗಾರರಿಗೆ ಹೆಚ್ಚಿನ ಭೂಮಿ ಇರಬೇಕಾದ್ದು ಅವಶ್ಯಕವೆಂದಾಯಿತು. ಆದರೆ ಭೂ ವ್ಯವಸಾಯಗಾರರಿಗೆ ಹೆಚ್ಚಿನ ಭೂಮಿ ಇರಬೇಕಾದ್ದು ಅವಶ್ಯಕವೆಂದಾಯಿತು. ಆದರೆ ಭೂ ಸಾಗುವಳಿದಾರರೆಲ್ಲ ಈ ವ್ಯವಸಾಯ ಒಂದನ್ನೇ ವರ್ಷಾದ್ಯಂತವು ಅವಲಂಬಿಸಿ ಕೊಂಡಿಯಿರುವುದಿಲ್ಲ. ಅಂಥವರು ಬಹಳ ಕಡಿಮೆ ಇದರಲ್ಲಿ ಅನೇಕರು ಅನೇಕ ಉಪ ದಂಧೆಗಳನ್ನುಟ್ಟು ಕೊಂಡಿರುತ್ತಾರೆ ಈ ಎಲ್ಲ ದೃಷ್ಟಿಗಳಿಂದಲೂ ಇದನ್ನು ವಿಚಾರ ಮಾಡಿ ನೋಡಿದರೆ ಈಗ ಈ ಪರಿಶೀಲನಾ ಸಮಿತಿಯವರೇನು ಈ 27 ಸ್ಟ್ಯಾಂಡರ್ಡ್ ಎಕರೆಗಳನ್ನು ನಿಗದಿ ಮಾಡಿದ್ದಾರೋ ಅದು ನ್ಯಾಯವಾಗಿರುತ್ತಂದೆಂದು ನಾನು ಹೇಳುತ್ತೇನೆ. ಆದರೆ ಮುಂದಿನ ಜನಾಂಗದವರಿಗೂ ಇದೆ ಪರಿಮಿತಿಯನ್ನು ಇರುವುದಾದರೆ ನಾಳೆ ಯಾರೊಬ್ಬರಿಗೂ ಭೂರಹಿತ ಜನಗಳಿಗೆ ಜಮೀನು ಸಿಗಲಿಕ್ಕಿಲ್ಲ ಸರ್ವರನ್ನು ಒಂದು ಸಮಾಧಾನಕರವಾದ ಪರಿಸ್ಥಿತಿಯಲ್ಲಿಡಲಿಕ್ಕೆ ಸಾಧ್ಯವಾಗುವುದಿಲ್ಲ. ಪ್ರತಿಯೊಬ್ಬರು ನಾಳೆ ಹೆಚ್ಚು ಜಮೀನು ಆಕ್ರಮಣ ಮಾಡುತ್ತ ಹೊರಟರೆ ಭೂಹೀನರಿಗೆ ಭೂಮಿ ಸಿಗಲಿಕ್ಕಿಲ್ಲ. ಆದ ಕಾರಣ ಮುಂದಿನ ಜನಾಂಗಕ್ಕೆ 18 ಸ್ಟ್ಯಾಂಡರ್ಡ್ ಎಕರೆಗಳಿರಬೇಕಂತ ಏನು ಈ ಮಸೂದೆಯಲ್ಲಿ ಸೂಚನೆ ಮಾಡಿದ್ದಾರೆ ಅದು ಸರಿಯಾಗಿರುತ್ತೆಂದು ನನ್ನ ಭಾವನೆ ಇದೆ.

ಇನ್ನು ವಿನಾಯಿತಿಗಳ ವಿಚಾರಕ್ಕೆ ಬಂದರೆ ಕೆಲವರು ಸ್ತ್ರೀಧನಕ್ಕೆ ವಿನಾಯಿತಿ ಇರಬೇಕೆಂದರೆ, ಇನ್ನು ಕೆಲವರು ದೇವಸ್ಥಾನದ ಜಮೀನುಗಳಿಗೆ ವಿನಾಯ್ತಿಬೇಕೆಂದು ಕೇಳುತ್ತಿದ್ದಾರೆ ಮತ್ತೆ ಕೆಲವರು ವಿಧವೆಯರಿಗೆ, ಅವಿವಾಹಿತ ಹೆಣ್ಣು ಮಕ್ಕಳಿಗೆ ವಿನಾಯಿತಿ ಇರಬೇಕೆಂದು ಕೇಳುತ್ತಿರುವಾಗ ಮತ್ತೆ ಕೆಲವರು ಕಾಫಿ ರಬ್ಬರ್ ಈ ಬೆಳೆಗೂ ವಿನಾಯಿತಿ ಇರಬೇಕೆಂದು ಕೇಳುತ್ತಿರುವುದರಿಂದ ಕೆಲವರು ಅಡಕೆ ಮತ್ತು ತೆಂಗಿನ ಬೆಳೆಗೂ ವಿನಾಯಿತಿ

ತೋರಿಸಬೇಕೆಂದು ಹೀಗೆ ಪ್ರತಿಯೊಬ್ಬರೂ ಒಂದೊಂದು ವಿನಾಯಿತಿ ಕೇ ..ತ್ತಾ ಹೊರಟರೆ ಕೊನೆಗೆ ಈ ಕಾನೂನೇ ಅವಶ್ಯಕವೆಂದು ಹೇಳಬೇಕಾಗುತ್ತವೆ.ಮೇಲಾಗಿ ಇದು ಬಹಳ ಅಪಹಾಸ್ಯಕ್ಕೆ ಈಡಾಗಬೇಕಾದ ಪ್ರಸಂಗವಾಗುತ್ತದೆ. ಆದರೆ ಇಂಥ ಒಂದು ವಿನಾಯಿತಿ ಕೊಡಬೇಕಾಗಿ ಬಂದ ಸಂದರ್ಭದಲ್ಲಿ ನಾವು ಮುಖ್ಯವಾಗಿ ಆಲೋಚಿಸಬೇಕಾಗಿರುವ ಒಂದು ಅಂಶವೇನೆಂದರೆ ಈ ವಿನಾಯಿತಿಗಳನ್ನು ನಾವು ಎಲ್ಲಿಯವರೆಗೆ ಕೊಡುತ್ತಾ ಹೋಗುತ್ತೇವೋ ಅಲ್ಲಿಯವರೆಗೂ ನಾವು ಗೇಣಿದಾರರ ವರ್ಗವನ್ನು ಮತ್ತು ಭೂಮಾಲೀಕರ ವರ್ಗವನ್ನು ತಲೆಯ ಮೇಲೆ ಹೊತ್ತುಕೊಂಡಿರಲೇ ಬೇಕಾಗುತ್ತದೆಂಬ ಅಂಶವನ್ನು ತಾವುಗಳಾರೂ ಮರೆಯಬಾರದು ಅಂದರೆ ಎಲ್ಲಿಯತನಕ ಭೂಮಾಲೀಕರ ವರ್ಗಗಳಿರುತ್ತವೆಯೋ ಅಲ್ಲಿಯು ತನಕ ಈ ಎರಡು ವರ್ಗಗಳಿಗೂ ವ್ಯಾಜ್ಯ ತಪ್ಪಿದ್ದಲ್ಲ. ಈ ವ್ಯಾಜ್ಯ ತಪ್ಪಬೇಕಾಗಿದ್ದರೆ ಈ ವರ್ಗಗಳನ್ನು ನಾವು ತಪ್ಪಿಸಲೇ ಬೇಕು ಈ ಒಂದು ಗುರಿಯನ್ನು ನಾವೆಲ್ಲರೂ ಮನಸ್ಸಿನಲ್ಲಿಟ್ಟುಕೊಂಡು ಈ ವಿನಾಯಿತಿ ಪ್ರಶ್ನೆಯನ್ನು ಪರಿಶೀಲಿಸಿ ನಿರ್ಧಾರ ಮಾಡಬೇಕಾಗಿದೆ. ಆದರೆ ನಾವೀ ದಿವಸ ಕಾಫೀ ರಬ್ಬರ್ ಬೆಳೆಗೆ ವಿನಾಯಿತಿ ಕೊಟ್ಟಿರಬಹುದು ಆದರೆ ನಾವು ಈ ತತ್ವವನ್ನು ಒಪ್ಪದಿದ್ದರೂ ಸಧ್ಯದಲ್ಲಿ ಇದಕ್ಕೆ ಈ ಒಂದು ವಿನಾಯಿತಿ ಕೊಡಬೇಕಾದರೆ. ಈ ದಿವಸ ನಾವು ವಿನಾಯಿತಿ ಕೊಟ್ಟಿದ್ದರೂ ನಾಳೆ ಇದು ರದ್ದಾಗುವ ಪ್ರಸಂಗ ಒದಗಬಹುದು.ಆದರೆ ಈ ದಿವಸ ದೇಶದ ಒಂದು ಆರ್ಥಿಕ ದೃಷ್ಟಿಯಿಂದ ಈ ಸೀಲಿಂಗ್ ಲಿಮಿಟ್ ಇರಬೇಕಾದುದು ಅವಶ್ಯವೆಂದು, ಕಾಫಿ ರಬ್ಬರ್ ಬೆಳೆಗೆ ವಿನಾಯಿತಿ ಕೊಟ್ಟಿರುವುದು ಸದ್ಯದ ಪರಿಸ್ಥಿತಿಗೆ ಸಾಧುವಾದುದೆಂದು ನಾನು ಹೇಳುತ್ತೇನೆ ಇನ್ನು 3-4 ವರ್ಷಗಳಲ್ಲಿ ಇದನ್ನು ಪುನರ್ ಪರಿಶೀಲನೆ ಮಾಡುವ ಪ್ರಸಂಗ ಬರದೆ ಇರಲಾರದು ಆಗ ಪುನಾಃ ಇದನ್ನು ವಿಚಾರ ಮಾಡಲಿಕ್ಕೆ ಬೇಕಾಗುತ್ತದೆ. ಆದರೆ ನಾವು ಈಗೇನು ಒಂದು ಈ ವಿನಾಯಿತಿಯನ್ನು ಈ ಎರಡು ಪ್ಲಾಂಟೇಶನ್‌ಗಳವರೆಗೆ ಕೊಡುತ್ತಿದ್ದೆವೆಯೋ ಅದು ಸೂರ್ಯ ಚಂದ್ರರುಗಳಿರುವ ತನಕ ರದ್ದು ಅಗತಕ್ಕದ್ದವೆಂದು ಯಾರು ತಿಳಿದುಕೊಳ್ಳಬಾರದು. ಈ ದೃಷ್ಟಿಯಿಂದ ರಬ್ಬರ್ ಮತ್ತು ಕಾಫಿ ಬೆಳೆಗಳಿಗೆ ಈಗ ವಿನಾಯಿತಿ ತೋರಿಸುವುದು ಅಗತ್ಯವೆಂದು ನಾನು ಹೇಳುತ್ತೇನೆ. ಆದರೆ ಈಗ ಕೆಲವರು ಇದನ್ನೇ ಒಂದು ಕಾರಣವಾಗಿಟ್ಟುಕೊಂಡು ಅಡಕೆ ಮತ್ತು ತೆಂಗಿನ ತೋಟಗಳಿಗೆ ವಿನಾಯಿತಿ ಕೇಳುತ್ತಿದ್ದಾರೆ ಇವರಿಗೆ ವಿನಾಯ್ತಿ ಕೊಟ್ಟರೆ ನಾಳೆ ನಾವು ಆ ಹತ್ತಿ ಬೆಳೆಯತಕ್ಕವರಿಗೂ ಈ ವಿನಾಯ್ತಿಯನ್ನು ಮುಂದುವರಿಸಬೇಕಾಗುತ್ತದೆ. ಇವೆಲ್ಲವೂ ರೊಕ್ಕದ ಮೂಲಗಳೇ ಆಗಿವೆ. ಈಗಾಗಲೇ ಅನೇಕರು ಈ ವಿಚಾರದಲ್ಲಿ ಕರಪತ್ರಗಳನ್ನು ಮನವಿಗಳನ್ನು ಕಳುಹಿಸಲಿಕ್ಕೆ ಹತ್ತಿದ್ದಾರೆ. ಆದುದರಿಂದ ನಾವು ಹೀಗೆ ಒಂದೊಂದಕ್ಕೂ ವಿನಾಯಿತಿ ಕೊಡುತ್ತಾ ಹೋದರೆ ಇದಕ್ಕೆ ಕೊನೆಮೊದಲಿಲ್ಲದಂತಾಗುತ್ತದೆ. ಆದ ಕಾರಣ ಈಗ ಏನು ಒಂದು ವಿನಾಯಿತಿ ಆ ಕಾಫಿ ರಬ್ಬರ್ ಇತ್ಯಾದಿಗಳಿಗೆ ಕೊಡಲಾಗಿದೆಯೋ ಅದನ್ನು ಬಿಟ್ಟು ಬೇರೆಯಾವ ಬೆಳೆಗೂ ವಿನಾಯ್ತಿ ಕೊಡಬಾರದೆಂದು ನಾನು ಹೇಳುತ್ತೇನೆ.

ಆದರೆ ಕೆಲವು ಮಾನ್ಯ ಸದಸ್ಯರ ಮಾತನಾಡುವಾಗ ಈ ದಿವಸ ಮಂತ್ರಿಗಳು ತಿಂಗಳಿಗೆ ಒಂದು ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ ಅಧಿಕಾರಿಗಳು ತಿಂಗಳಿಗೆ ಮೂರು ಸಾವಿರ ದುಡಿಯುತ್ತಿದ್ದಾರೆ, ಇದೆಲ್ಲ ಪಾಪವಲ್ಲವೇ, ಎಂತ ಕೇಳಿದರು. ಒಬ್ಬ ಡಾಕ್ಟರನು ನೀರಿನ ಇಂಜಕ್ಷನ್ ಚುಚ್ಚಿ ದುಡ್ಡುದುಡಿಯುತ್ತಾನೆ ಅದು ಪಾಪವಲ್ಲವೇ ಲಾಯರ್ ರೊಕ್ಕಗಳಿಸುವುದು ಪಾಪವಲ್ಲವೆ ಎಂತ ಹೇಳಿದರು ಆದರೆ ಹಾಗೆ ಅವರು ಹೇಳಿದುದು ತಪ್ಪೇನು ಅಲ್ಲ ಅದು ನ್ಯಾಯವಾಗೇ ಇದೆ. ಆದರೆ ಅದನ್ನೆಲ್ಲಾ ತಪ್ಪಿಸುವಂಥ ಒಂದು ಸಾಮರ್ಥ್ಯ ನಮ್ಮ ಸರ್ಕಾರಕ್ಕಿನ್ನೂ ಬಂದಿಲ್ಲ ಎಂಬುದನ್ನು ನಾವು ನೀವು ಎಲ್ಲರೂ ಒಪ್ಪಿಕೊಳ್ಳಲೇಬೇಕು ದೇಶದಲ್ಲಿ ಇದೇ ರೀತಿಯಾಗಿ ಇನ್ನು ಮುಂದೆಯು ಬಡತನ ಉಳಿಯುವುದಾದರೆ ಕಾಂಗ್ರೆಸ್ ಬದಲು ಕಮ್ಯುನಿಸ್ಟರು ಅಧಿಕಾರಕ್ಕೆ ಬಾರದೇ ಇರುವ ಸಂಭವವೇನಿಲ್ಲ. ಯಾವ ರಾಜ್ಯ ಬಂದರೂ ಜನ ನೋಡುವುದು ಇಷ್ಟೆ. ಹೊಟ್ಟೆಗೆ ಅನ್ನ, ಹೊದೆಯಲು ಬಟ್ಟೆ ವಾಸಕ್ಕೆ ಮನೆ ಮಕ್ಕಳಿಗೆ ಶಿಕ್ಷಣ ಇಷ್ಟು ದೊರೆಯಬೇಕೆಂದು ಜನ ಅಪೇಕ್ಷಿಸುತ್ತಾರೆ. ಆದ್ದರಿಂದ ಈ ದೃಷ್ಟಿಯಿಂದ ವಿಚಾರ ಮಾಡಬೇಕು. ಧಾರ್ಮಿಕ ಸಂಸ್ಥೆಗಳಿಗೆ ವಿನಾಯಿತಿಕೊಟ್ಟಿದ್ದು ಸಾಕಾಗುವುದಿಲ್ಲ ಶೇಕಡ $4^1/_2$ ಬಡ್ಡಿ ಬರತಕ್ಕ ಬಾಂಡ್ ಕೊಟ್ಟು ಗ್ಯಾರಂಟಿ ಕೊಡಬೇಕು. ಅಂಥ ಭೂಮಿಗಳ ಬಗ್ಗೆ ಟೆನ್ಯೂಅರ್ ಇಡಬಾರದು. ಅವರ ಮೂಲ್ಕಿ ಮಾಡಿದರೆ ಸಂದಿಗ್ಧ ಪರಿಸ್ಥಿತಿ ಉಳಿಯುವುದಿಲ್ಲ.

ಇನ್ನು ಸ್ತ್ರೀಧನದ ವಿಷಯದಲ್ಲಿ ತೊಂದರೆ ಏನಿದೆಯೆಂದರೆ ಅದಕ್ಕೆ ವಿನಾಯಿತಿ ಕೊಟ್ಟರೆ ಮೂಲತತ್ವಕ್ಕೆ ತೊಂದರೆ ಬರುತ್ತದೆ ಸ್ತ್ರೀ ಧನ ಎಂಬುದು ಕೊನೆಯವರೆಗೆ ಉಳಿಯುತ್ತದೆ. ಅದಕ್ಕೆ ಕೊನೆಯಿಲ್ಲ. ಆದ್ದರಿಂದ ಎರಡು ವರ್ಗ ಮಾಡಬೇಕಾಗುತ್ತದೆ. ಆದರೆ ವಿಧವೆ ಮತ್ತು ಅವಿವಾಹೀತ ಹೆಣ್ಣು ಮಕ್ಕಳಿಗೆ ವಿನಾಯಿತಿ ಕೊಡಬಹುದು ಇದು ಕೊನೆಯವರೆಗೆ ಉಳಿಯುವುದಿಲ್ಲ ಆದ್ದರಿಂದ ಇವರಿಗೆ ವಿನಾಯಿತಿ ಅವಶ್ಯ ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರ ಹೇಳಬೇಕಾಗುತ್ತದೆ ಅನೇಕ ಕಟ್ಟಡಗಳನ್ನು ಕಟ್ಟಿಸಿ ಪ್ರತಿ ವರ್ಷ ಹೆಚ್ಚು ಹೆಚ್ಚು ಶ್ರೀಮಂತರು ಕೆಲವರು ಆಗುತ್ತಿದ್ದಾರೆ ಅವರ ಉತ್ಪತ್ತಿಯ ಮೇಲೆ ನಿಯಂತ್ರಣ ಹಾಕುವುದಕ್ಕೆ ಒಂದು ಬಿಗಿ ಇರುವುದಕ್ಕೆ ಯೋಜನೆ ಮಾಡಬೇಕು. ಇದನ್ನು ಸಮಾಲೋಚನೆ ಮಾಡಿ ಅತೀ ಶ್ರೀಮಂತ ವರ್ಗ ಕೆಳಗಿನವರ್ಗ ಎಂಬ ಭೇಧ ಭಾವ ಅಳಿಯುವುದಕ್ಕೆ ಪ್ರಯತ್ನ ಮಾಡಬೇಕು. ನಿಜವಾಗಿಯೂ ರೈತರಿಗೆ ಕಲ್ಯಾಣವಾಗುವುದಕ್ಕೆ ಆಸ್ಪದವಾಗುವ ರೀತಿಯಲ್ಲಿ ಈ ಸಮಯದಲ್ಲು ಕಂದಾಯ ಮಂತ್ರಿಗಳು ನಮ್ಮ ಮುಂದೆ ಈ ಮಸೂದೆಯನ್ನು ಇಟ್ಟಿದ್ದಾರೆ. ಪರಮೇಶ್ವರನು ಅವರಿಗೆ ದೀರ್ಘಆಯುರಾರೋಗ್ಯ ಸಂಪತ್ತನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ. ಇಷ್ಟು ಹೇಳಿ ನಾನು ಭಾಷಣವನ್ನು ಮುಗಿಸುತ್ತೇನೆ.

# ರೋಣ ತಾಲ್ಲೂಕಿಗೆ ವಿದ್ಯುಚ್ಛಕ್ತಿ

**ಶ್ರೀ ಎ.ಜೆ. ದೊಡ್ಡಮೇಟಿ** (ರೋಣ): ಸ್ವಾಮೀ, ಕಳೆದ ಏಪ್ರೀಲ್ ತಿಂಗಳಿನಲ್ಲಿ ಸರಕಾರದವರು ರೋಣ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಕೆಲಸವನ್ನು ಪೂರೈಸಲು ಒಂಬತ್ತು ತಿಂಗಳು ಬೇಕಾಗುತ್ತದೆ ಎಂದು ಹೇಳಿದ್ದರು. ರೋಣ ತಾಲ್ಲೂಕಿನ ಮುಖ್ಯ ಗ್ರಾಮಗಳಾದ ಸವಡಿ, ಯಾವಗಲ್, ಹೊಳೆ ಆಲೂರು, ಬೆಳವಣಿಕೆ ಇಲ್ಲಿಗೆ ಶಕ್ಯವಿದ್ದಷ್ಟು ಬೇಗನೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿತ್ತು. ಏಕೆಂದರೆ ಇಲ್ಲಿಯವರು ಫಾರಂಗಳನ್ನೆಲ್ಲಾ ಕೊಟ್ಟಿರುವುದರಿಂದ ಬೇಗನೆ ವಿಚಾರ ಮಾಡುತ್ತೇವೆಮದು ಹೇಳಿದರು. ಇದರ ಸಲುವಾಗಿ ಆಗಿನ ಪಿ.ಡಬ್ಲ್ಯು.ಡಿ ಮಿನಿಸ್ಟರಾಗಿದ್ದ ಶ್ರೀಮಾನ್ ಚೆನ್ನಬಸಪ್ಪನವರು ಹೊಳೆ ಆಲೂರು ಗ್ರಾಮಕ್ಕೆ ಭೇಟಿ ಕೊಟ್ಟಾಗ ಆದಷ್ಟು ಬೇಗನೆ ಹೊಳೆ ಆಲೂರು ಗ್ರಾಮಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಸಿ ಕೊಡುತ್ತೇವೆಂದು ವಚನಕೊಟ್ಟಿದ್ದರು. ಆ ಪ್ರಕಾರ ಅದೇ ಪ್ಲಾನು ಮತ್ತು ಎಸ್ಟಿಮೇಟುಗಳು ಮಾಡಿದ್ದು ಇನ್ನೂ ಚೀಫ್ ಇಲೆಕ್ಟ್ರಿಕಲ್ ಆಫೀಸರರಿಗೆ ಬಂದಿಲ್ಲ. ನಿನ್ನೆಯ ದಿನ ಇದರ ಬಗ್ಗೆ ಪ್ಲಾನು ಎಸ್ಟಿಮೇಟು ಬಂದವೋ ಏನೋ ಎಂದು ಚೀಫ್ ಇಲೆಕ್ಟ್ರಿಕಲ್ ಆಫೀಸರ್‌ರವರ ಕಡೆಗೆ ಹೋಗಿ ಮಾಡಿದ್ದರಲ್ಲಿ ಪ್ಲಾನು ಸಾಂಕ್ಷನ್ನು ಆದ ಹಾಗೆ ಕಾಣಲಿಲ್ಲ ಮತ್ತು ಇಲ್ಲಿನ ಕೆಲಸಗಳು ಬಹಳ ಮಂದಗತಿಯಿಂದ ನಡೆಯುತ್ತಿರುವುದರಿಂದ ಇನ್ನು ಒಂದು ಒಂದುವರೆ ವರ್ಷಗಳಾದರೂ ಈ ಕೆಲಸಗಳು ಪೂರೈಸುವ ಹಾಗೆ ಕಾಣುವುದಿಲ್ಲ. ಸರಕಾರದವರು ಕಳೆದ ಏಪ್ರೀಲ್‌ನಲ್ಲಿ 9 ತಿಂಗಳ ಕಾಲದಲ್ಲಿ ಪೂರೈಕೆಯಾಗಬಹುದು ಎಂದು ಹೇಳಿದ್ದರೂ ಈಗಾಗಲೇ ನಾಲ್ಕೈದು ತಿಂಗಳು ಕಳೆದರು ಇದರ ಬಗ್ಗೆ ಪ್ಲಾನು, ಎಸ್ಟಿಮೇಟು ಏಕೆ ಪೂರೈಕೆ ಮಾಡಬಾರದು ಎಂದು ನಾನು ಕೇಳುತ್ತೇನೆ ಅಲ್ಲಿ ಕೆಲಸಗಳು ಪೂರೈಕೆಯಾಗದಿರಲು ಮುಖ್ಯವಾದ ಕೊರತೆ ಎಂದರೆ ಅದಕ್ಕೆ ಬೇಕಾದ ಉಪಕರಣಗಳು ಸಿಗದೇ ಇರುವುದು ಇದಕ್ಕೆ ಕಾರಣವೆಂದು ಅಲ್ಲಿನ ಎಕ್ಸಿಕ್ಯೂಟೀವ್ ಆಫೀಸರುಗಳು ಹೇಳುತ್ತಾರೆ. ಈ ರೀತಿಯಾಗಿ ಬೇಕಾಗುವ ಮಟೀರಿಯಲ್ಲುಗಳನ್ನು ಸರ್ಕಾರದವರು ಬೋರ್ಡಿಗೆ ಸಕಾಲದಲ್ಲಿ ಒದಗಿಸಿ ಕೊಡಬೇಕು. ಹೀಗೆ ಮೆಟೀರಿಯಲ್ಲುಗಳನ್ನು ಒದಗಿಸಿಕೊಟ್ಟರೆ ಬೋರ್ಡಿನವರು ಕೆಲಸ ಮಾಡಲಿಕ್ಕೆ ಸಾಧ್ಯವಿದೆ. ಬೋರ್ಡಿನ ಅಧಿಕಾರಿಗಳು ಈ ಬಗ್ಗೆ ಸಕಾಲದಲ್ಲಿ ಅರ್ಜೆಂಟಾಗಿ ಸಾಧ್ಯವಾದಷ್ಟು ಮಟ್ಟಿಗೂ ಕೆಲಸವನ್ನು ಪೂರೈಕೆ ಮಾಡಿಕೊಳ್ಳಲು ತಕ್ಕ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲು ಸರಕಾರ ಯೋಚನೆ ಮಾಡಬೇಕು ರೋಣ ತಾಲ್ಲೂಕಿನೊಳಗೆ ಈಗ ಸುಮಾರು 120 ಪಂಪು ಸೆಟ್ಟುಗಳು ಬೇಕೆಂದು ಹೇಳಿದ್ದಾರೆ. ವ್ಯವಸಾಯಕ್ಕಾಗಿ ಅದನ್ನು ಉಪಯೋಗಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡು ಐದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನೀರಾವರಿಗಾಗಿ ಭಾವಿಗಳನ್ನು ಮಾಡಿಸಿಕೊಡಬೇಕಾಗಿತ್ತು. ಎಂದು ಹಿಂದೆ ಸರಕಾರದವರು ಹೇಳಿದ್ದರು. ಹಿಂದೆ ನಾವು ಮುಂಬಯಿ ರಾಜ್ಯದಲ್ಲಿದ್ದಾಗ

ಇಲ್ಲಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕು ಮತ್ತು ಇದಕ್ಕೆ ಪ್ಲಾನು ಆಗಬೇಕು ಎಂದು ಹೇಳಿದ್ದರು. ಆಗ ಹೊಳೆಆಲೂರು ಮತ್ತು ಗಜೇಂದ್ರಗಡ ಇಲ್ಲಿಗೆ ಡೀಸಲ್ ಆಯಿಲ್ ಎಂಜನ್ನುಗಳನ್ನು ಹಾಕಬೇಕು ಎಂದಿತ್ತು. ಅದಕ್ಕೆ ಪ್ಲಾನು ಆಗಲಿಲ್ಲ. ಇವು ಬಹಳ ದೊಡ್ಡ ವ್ಯಾಪಾರ ಕೇಂದ್ರ ಮತ್ತು ರೋಣ ಕೂಡ ಒಂದು ಮುಖ್ಯವಾದ ವ್ಯಾಪಾರ ಕೇಂದ್ರ. ಇದೂ ಅಲ್ಲದೆ ಬಾಗಲಕೋಟೆ ಮತ್ತು ಗದಗ ಇವು ದೊಡ್ಡ ವ್ಯಾಪಾರ ಕೇಂದ್ರಗಳು. ಇಂತಹ ಕಡೆಗಳಲ್ಲಿ ಇನ್ನೂ ವಿದ್ಯುಚ್ಛಕ್ತಿಯ ಕೆಲಸಗಳು ಆಗಲಿಲ್ಲ. ಸರಕಾರದವರ ಈ ಕೆಲಸಗಳಿಗೆಗಾಗಿ ಸ್ಯಾಂಕ್ಷನ್ ಕೊಟ್ಟಿದ್ದರೂ ಇದನ್ನೂ ಬೇಗ ಮುಗಿಸಲು ಶಕ್ಯವಿದ್ದನ್ನು ಮಾಡಬೇಕು. ಹೊಳೆ ಆಲೂರಿಗೆ ಆದಷ್ಟು ಬೇಗ ಮಂಜೂರು ಆಗಬೇಕು. ಯಾವ ಯಾವ ಹಳ್ಳಿಗಳಲ್ಲಿ ಪ್ಲಾನು ಎಸ್ಟೀಮೇಟುಗಳು ತಯಾರಾಗಲಿಲ್ಲವೋ ಅಲ್ಲಿಗೆ ಬೇಗನೆ ಮಾಡಲು ಯತ್ನ ಮಾಡಬೇಕು. ಈ ಬಗ್ಗೆ ಸರಕಾರ ಸಮರ್ಪಕವಾದ ಉತ್ತರ ಕೊಡಬೇಕು ಮತ್ತು ಆ ರೀತಿ ಹೇಳುತ್ತಾರೆಂದು ನಂಬುತ್ತೇನೆ ಇವೊತ್ತು ಪಿ.ಡಬ್ಲ್ಯು.ಡಿ ಮಂತ್ರಿಗಳಾಗಿರುವವರು ನಮ್ಮ ಭಾಗದಲ್ಲಿ ಅಡ್ಡಾಡಿದರೆ ಮತ್ತು ನಮ್ಮ ಭಾಗದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿಕೊಂಡಿದ್ದಾರೆ ಮತ್ತು ಸಹಾನುಭೂತಿಯುಳ್ಳವರು ವ್ಯವಸಾಯಗಾರರ ಮನೆತನದಿಂದ ಬಂದವರು. ಈ ದೃಷ್ಟಿಯಿಂದ ಅವರು ಈ ಕಾರ್ಯವನ್ನು ಮನಸ್ಸು ಮಾಡಿದರೆ ಇದೇನು ಅಸಾಧ್ಯವಲ್ಲ. ಅವರು ಸ್ವಲ್ಪ ಮನಸ್ಸು ಮಾಡಿದರೆ ಈ ಕೆಲಸಗಳು ಬೇಗನೆ ಆದೀತು. ಅವರು ಹಾಗೆ ಮನಸ್ಸು ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಚ್.ಕೆ. ವೀರಣ್ಣಗೌಡ** (**ಲೋಕೋಪಯೋಗಿ ಶಾಖೆಯ ಮಂತ್ರಿಗಳು**) **:** ಸ್ವಾಮಿ ಶ್ರೀಮಾನ್ ದೊಡ್ಡಮೇಟಿಯವರು ಇಲ್ಲಿ ಅರ್ಧಗಂಟೆಯ ಕಾಲ ಚರ್ಚೆಗೆ ಅವಕಾಶ ಮಾಡಿಕೊಂಡಿರುವ ಪ್ರಶ್ನೆಯ ವಿಚಾರದಲ್ಲಿ ನಾನು ಹೇಳಬೇಕಾದ ಅನೇಕ ಅಂಶಗಳನ್ನು ಅವರೇ ಹೇಳಿಬಿಟ್ಟಿದ್ದಾರೆ. ಅವರ ಉದ್ದೇಶವೇನು ಎಂದರೆ ಕೆಲಸವನ್ನು ಬೇಗನೇ ಮಾಡಿಲ್ಲ ಎಂದು ಅದನ್ನು ಮಾಡುತ್ತೇವೆ. ಅದರಲ್ಲಿ ಭಿನ್ನಾಭಿಪ್ರಾಯವೇನು ಇಲ್ಲ. ಆದುದರಿಂದ ಚರ್ಚೆಗೆ ಅವಕಾಶ ಇಲ್ಲ. ಅವರಿಗೆ ಹಿಂದೆ ಉತ್ತರ ಕೊಟ್ಟಾಗ ಒಂಬತ್ತು ತಿಂಗಳೊಳಗೆ ಕೆಲಸವನ್ನು ಪೂರೈಸಿ ಮುಗಿಸುತ್ತೇವೆಂದು ಹೇಳಲಾಗಿತ್ತು. ಈಗ ಶೇಕಡ ಐವತ್ತು ಭಾಗದ ಕೆಲಸ ಮಾಡಿ ಮುಗಿಸಿದ್ದಾರೆ. ಇನ್ನೂ ನಾಲ್ಕೈದು ತಿಂಗಳುಗಳು ಕಾಲಾವಕಾಶವಿದೆ. ಈಗ ಹೇಳಬೇಕಾದರೆ ಶೇಕಡ ತೊಂಬತ್ತು ಭಾಗದಷ್ಟು ಕೆಲಸವಾಗಿದೆ. ಇನ್ನು ಬಾಕಿಯಾಗಿರುವ ಶೇಕಡ ಹತ್ತರಷ್ಟು ಕೆಲಸ ಇನ್ನುಳಿದಿರುವ ನಾಲ್ಕೈದು ತಿಂಗಳಲ್ಲಿ ಈ ಕೆಲಸಗಳು ಆಗುತ್ತವೆ. ಇನ್ನೂ ಹೇಳಬೇಕಾದರೆ ರೋಣದಲ್ಲಿ ಇಷ್ಟರಲ್ಲಿ ವಿದ್ಯುಚ್ಛಕ್ತಿಯ ಕೊಡುವಿಕೆಯ "Switch on ceremony" ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಇನ್ನು ಕೆಲವು ಗ್ರಾಮಗಳಿಗೆ 33 ಕೆ.ವಿ. ಲೈನನ್ನು ಹಾಕಿಸಬೇಕಾಗಿದೆ. ಅದಕ್ಕಾಗಿ ಬೇಕಾಗಿರುವ ಸಾಮಾನುಗಳು ತಂತಿ, ಕಂಬಗಳು ಸಾಕಷ್ಟು ಸರಬರಾಜು ಆಗುತ್ತಿಲ್ಲ. ಆದರೂ ನಾವು ಅವು ಸಿಕ್ಕುವವರೆಗೂ ಕಾಯುವ ಹಾಗಿಲ್ಲ 11 ಕೆವಿ ಲೈನು ಆದರೂ ಹಾಕಿ ತಕ್ಷಣ ಈ ಕಾರ್ಯವನ್ನು ಮುಗಿಸಿ ಮುಂದೆ 33 ಕೆ. ವಿ. ಲೈನುಗಳಿಗೆ ಅದನ್ನು

# ಕೊಳವೆಬಾವಿ ತೋಡಿಸುವ ಬಗ್ಗೆ ಚಿಂತನೆ

ನವಲಗುಂದ, ನರಗುಂದ ಮತ್ತು ರೋಣ ತಾಲ್ಲೂಕಿನ ಪಶ್ಚಿಮದ ಭಾಗದ ಹಳ್ಳಿಗಳಲ್ಲಿ ನೀರಿನ ಕೊರತೆ ಇರುವಲ್ಲಿ ಕೊಳವೆ ಬಾವಿಗಳನ್ನು ತೋಡಿಸುವುದು.

ಪ್ರ.ಸಂ. 61, ಶ್ರೀ ಎ.ಜೆ. ದೊಡ್ಡಮೇಟಿ -(ರೋಣ)

ಸರಕಾರ ಉತ್ತರಿಸುವ ಕೃಪೆ ಮಾಡಬೇಕು.

(ಎ)ಧಾರವಾಡ ಜಿಲ್ಲೆಯ ನವಲಗುಂದ, ನರಗುಂದ, ಮತ್ತು ರೋಣ ತಾಲ್ಲೂಕಿನ ಪಶ್ಚಿಮದಲ್ಲಿ ಕಪ್ಪು (ಎರೆ) ಮಣ್ಣು ಇರುವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ ಇರುವುದು, ಸರಕಾರದ ಗಮನಕ್ಕೆ ಬಂದಿದೆಯೇ?

(ಬಿ)ಕೊಳವೆ ಭಾವಿಗಳನ್ನು ಹಾಕಿಸಿ ಶಾಶ್ವತ ಪರಿಹಾರ ಕ್ರಮ ಕೈಕೊಳ್ಳಬೇಕು ಎಂದು ರೋಣ ತಾಲ್ಲೂಕ ಅಭಿವೃದ್ಧಿ ಮಂಡಳಿಯ ಸಲಹಾ ಸಮಿತಿಯು ಸರಕಾರಕ್ಕೆ ಪ್ರಸ್ತಾವನೆಯನ್ನೂ ಸಲ್ಲಿಸಿದ್ದು ನಿಜವೇ?

(ಸಿ) ಹಾಗಿದ್ದಲ್ಲಿ ಅಂಥ ಪ್ರಸ್ತಾವನೆಯನ್ನು ಎಂದು ಕಳಿಸಲಾಗಿದೆ?

(ಡಿ)ಆ ವಿಷಯವಾಗಿ ಸರಕಾರ ಏನು ಕ್ರಮ ಕೈಕೊಂಡಿದೆ?

**ಉತ್ತರ: ರಾಮಕೃಷ್ಣ ಹೆಗಡೆ, (ಸಹಕಾರ ಮತ್ತು ಅಭಿವೃದ್ಧಿ ಸಚಿವರು)**

(ಎ)ಹೌದು

(ಬಿ)ಹೌದು

(ಸಿ) 10ನೇ ಡಿಸೆಂಬರ್ 1952

(ಡಿ)ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ತಾಂತ್ರಿಕ ಪರಿಣಿತರ ಸಲಹೆ ಮೇರೆಗೆ ಅದನ್ನು 1960 ರಲ್ಲಿ ಕೈಬಿಡಲಾಗಿದೆ. ಆದರೂ ಅಲ್ಲಿಯ ಕುಡಿಯುವ ನೀರಿನ ಪರಿಸ್ಥಿತಿ ಸುಧಾರಿಸುವ ದೃಷ್ಟಿಯಿಂದ ಅಲ್ಲಿರುವ ಕುಡಿಯುವ ನೀರಿನ ಕೆರೆಗಳನ್ನು ಹೂಳು ಎತ್ತಿಸುವ ಮತ್ತು ಆಳ ಹೆಚ್ಚಿಸುವ ಕೆಲಸವನ್ನೂ ಬರಗಾಲ ಕಾಮಗಾರಿ ಅಡಿಯಲ್ಲಿ ಸ್ಥಾನಿಕ ಆಡಳಿತದವರಿಂದ ನಡೆದಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** 1960ನೆಯ ಇಸವಿಯಲ್ಲಿ ಪರೀಕ್ಷೆ ನಡೆಸಿದುದರ ಫಲಿತಾಂಶದ ಮೇಲೆ ಈ ಪ್ರೊಪೋಜಲ್‌ನ್ನು ಕೈಬಿಟ್ಟರು ಎಂದು ಹೇಳಿದಿರಿ. ಈ ಉತ್ತರವನ್ನು ತಿಳಿಸುವುದಕ್ಕೆ ಮುಂಚೆ, ಸಂಬಂಧಪಟ್ಟವರು ನೆರವನ್ನು ನೋಡಿ ಹೇಳಿದರೋ ಅಥವಾ ಬರೀ ಕಾಗದ ಪತ್ರಗನ್ನು ಪರಿಶೀಲಿಸಿ ಹೇಳಿದರೋ?

**ಶ್ರೀ ಕೊಂಡಜ್ಜಿ ಬಸಪ್ಪ** (ಸಹಕಾರ ಶಾಖೆಯ ಉಪಮಂತ್ರಿಗಳು): ಜಿಯಲಾಜಿಕಲ್ ಇಲಾಖೆಯವರು ಎಕ್ಸಪರ್ಟನ್ನು ಕಳುಹಿಸಿದ್ದರು. ಅವರು ಪರೀಕ್ಷೆ ಮಾಡಿ ಬೋರ್‌ವೆಲ್ ಆಗಲೀ ಟ್ಯೂಬ್‌ವೆಲ್ ಮಾಡುವುದಕ್ಕಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಭೂಮಿ ನೋಡುವುದಕ್ಕೆ ಯಾವ ತಾರೀಖು ಹೋಗಿದ್ದರು.

**ಶ್ರೀ ಕೊಂಡಜ್ಜಿ ಬಸಪ್ಪ: (ಸಹಕಾರ ಇಲಾಖೆಯ ಉಪ ಸಚಿವರು)**

ಮಾನ್ಯರೇ,

ನಾನು ಈಗಾಗಲೇ ಇದಕ್ಕೆ ಉತ್ತರಿಸಿದ್ದೇನೆ. ಒಬ್ಬ ಭೂಗರ್ಭಶಾಸ್ತ್ರಜ್ಞರನ್ನು ಅಲ್ಲಿಗೆ ಕಳಿಸಿ ಪರೀಕ್ಷಿಸಿದೆ. ಅವರ ಅಭಿಪ್ರಾಯದ ಮೇರೆಗೆ ಆ ಭಾಗದಲ್ಲಿ ಕೊಳವೆ ಹಾಕುವುದು ಸಾಧ್ಯವಿಲ್ಲ. ಹಾಕಿದ್ದು ಯಶಸ್ವಿ ಆಗಿಲ್ಲ.

**ಶ್ರೀ ಕೆ. ಲಕ್ಕಣ್ಣ:** ಸರಕಾರ ಭೂಗರ್ಭ ಶಾಸ್ತ್ರಜ್ಞರ ವರದಿಯನ್ನು ಯಾವಾಗ ತರಿಸಿಕೊಂಡಿದೆ.

**ಶ್ರೀ ಕೊಂಡಜ್ಜಿ ಬಸಪ್ಪ:** 18ನೇ ಜುಲೈ 1962 ರಲ್ಲಿ ನವಲಗುಂದ ನರಗುಂದ ತಾಲ್ಲೂಕುಗಳು ಮತ್ತು ರೋಣ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಬಹಳ ಆಳದವರೆಗೆ ಎರೆಮಣ್ಣು ಇರುವುರಿಂದ ಅಲ್ಲಿ ಅಂತರ್ಜಲ ಇರುವುದು ಕಡಿಮೆ ಇಂಥಲ್ಲಿ ಕೊಳವೆ ಭಾವಿಗಳನ್ನು ಹಾಕಲು ಸಾಧ್ಯವಿಲ್ಲ. ಇತ್ತೀಚೆಗೆ ಭೂಗರ್ಭ ಶಾಸ್ತ್ರಜ್ಞರೊಬ್ಬರು ಆ ಪ್ರದೇಶವನ್ನು ಪರೀಕ್ಷಿಸಿ ಅಲ್ಲಿ ಈವರೆಗೂ ಕೊಳೆ ಬಾವಿಗಳನ್ನು ಹಾಕಿಲ್ಲ, ಹಾಕಿದರೂ ಯಶಸ್ವಿಯಾಗಿಲ್ಲ. ಎಂಬ ಖಚಿತ ಅಭಿಪ್ರಾಯ ಹೇಳಿದ್ದಾರೆ.

## ಕರ್ನಾಟಕ ನಾಮಕರಣ

**ಶ್ರೀ ಅವಲರೆಡ್ಡಿ (ಶಿಡ್ಲಘಟ್ಟ):** ಸ್ವಾಮಿ ಈ ದಿವಸ ಮೈಸೂರು ದೇಶಕ್ಕೆ ಕರ್ನಾಟಕ ಎಂದು ಹೆಸರಿಡಬೇಕೆಂದು ತಂದಿರುವ ನಿರ್ಣಯದ ವಿಷಯದಲ್ಲಿ ನಮ್ಮ ಸ್ನೇಹಿತರನೇಕರು ಬಹಳವಾಗಿ ಮಾತನಾಡಿದ್ದಾರೆ. ನಾನು ಈ ನಿರ್ಣಯವನ್ನು ವಿರೋಧಿಸುತ್ತಾ ಹಲವಾರು ಮಾತುಗಳನ್ನಾಡಬೇಕೆಂದು ಇಚ್ಛೆಸುತ್ತೇನೆ. ಮೈಸೂರು ಎಂಬ ಹೆಸರಿರಬೇಕೇ ಅಥವಾ ಕರ್ನಾಟಕ ಎಂದು ಹೆಸರಿಡಬೇಕೇ ಎಂಬ ವಿಷಯದಲ್ಲಿ ಮೆರಿಟ್ ಮತ್ತು ಡೀಮೇರಿಟ್ ವಿಚಾರ ಮಾತನಾಡಲು ನಾನು ಇಚ್ಛೆಸುವುದಿಲ್ಲ. ಮೈಸೂರಿನ ಒಂದು ವೈಶಿಷ್ಟ್ಯ ಚರಿತ್ರೆ ಮುಂತಾದ್ದನ್ನು ಮಾನ್ಯ ಮಿತ್ರರನೇಕರು ಬಹಳ ಚೆನ್ನಾಗಿ ಹೇಳಿದ್ದಾರೆ. ಇದನ್ನೂ, ಮಾನ್ಯ ಮಿತ್ರರ ಅಭಿಪ್ರಾಯವನ್ನೂ ನೋಡಿದರೆ ಎರಡು ಗುಂಪುಗಳು ಈ ಸಭೆಯಲ್ಲಿರುವುದು ಎದ್ದು

ಕಾಣುತ್ತದೆ. ಅನೇಕ ಜನರು ಕರ್ನಾಟಕ ಎಂಬ ಹೆಸರು ಬಹಳ ಸೂಕ್ತ, ಬಹಳ ಸರಿಯಾಗಿದೆ ಎಂದು ಹೇಳುತ್ತಿದ್ದಾರೆ. ಹಾಗೆಯೇ ಅನೇಕ ಮಂದಿಮೈಸೂರು ಎಂಬುದು ಹಳೆಯ ಹೆಸರು, ಪುರಾಣ ಕಾಲದಿಂದ ಮೈಸೂರಿನಲ್ಲಿ ನಾವು ಬೆಳೆದಿದ್ದೇವೆ, ಅದೇ ಇರಬೇಕು ಎಂದು ಹೇಳುತ್ತಿದ್ದಾರೆ. ನಾನೂ ಮೈಸೂರು ಎಂಬ ಹೆಸರೇ ಇರಬೇಕೆಂದು ಹೇಳುವವರಲ್ಲಿ ಒಬ್ಬ. ನಮ್ಮ ಮಿತ್ರರು ಬಹಳ ಚೆನ್ನಾಗಿ ಹೇಳಿದ್ದಾರೆ. ರಾಜ್ಯ ದೊಡ್ಡದಾದಾಗ ಹೊರಗಿನಿಂದ ಬಂದ ನಾಯಕರು ಮತ್ತು ಹಳೆಯ ಮೈಸೂರಿನ ನಾಯಕರು ಸೇರಿ ಹೊಸ ರಾಜ್ಯಕ್ಕೆ ಒಂದು ಹೆಸರಿಟ್ಟಿದ್ದಾರೆ. ಆ ಹೆಸರಿಟ್ಟು ಕೇವಲ ಆರು ವರ್ಷಗಳಾಗಿವೆ. ಆದಾದಮೇಲೆ ಆ ಹೆಸರನ್ನು ಬದಲಾಯಿಸಬೇಕೆಂದು ಆ ಲಾಗಾಯ್ತು ಇಲ್ಲಿನವರೆಗೆ ಪರಂಪರೆಯಾಗಿ ನಿರ್ಣಯವನ್ನು ಈ ಸಭೆಯ ಮುಂದೆ ತರುತ್ತಿದ್ದಾರೆ.

ಮಾನ್ಯ ಮಂಜಪ್ಪನವರು ಹೇಳಿದ ಹಾಗೆ ಭಾವೈಕ್ಯತೆ ಇನ್ನೂ ನಮ್ಮಲ್ಲಿ ಬೆಳೆದಿಲ್ಲ. ಇನ್ನೂ ಅದು ಶೈಶಾವಸ್ಥೆಯಲ್ಲಿದೆ. ಇನ್ನೂ ಹಲವರಾರು ವರ್ಷಗಳು, ಅದು ಬೆಳೆಯುವ ತನಕ ಈ ಪ್ರಶ್ನೆಯನ್ನು ಬಿಡುವುದು ಒಳ್ಳೆಯದೆಂದು ಒಂದು ಒಳ್ಳೆಯ ಸೂಚನೆಯನ್ನು ಅವರು ಸಭೆಯ ಮುಂದಿಟ್ಟರು. ಹಾಗೆ ಹೇಳಿದ್ದರೂ, ಕರ್ನಾಟಕದ ಪರವಾಗಿ ಮಾತನಾಡಿದ ನಮ್ಮ ಮಿತ್ರರು ಬಹಳ ಜೋರಾಗಿ, ಹಠ ಹಿಡಿದು ಕರ್ನಾಟಕವೆಂದು ಇಂದೇ ಹೆಸರಿಡಬೇಕೆಂದು ಹೊರಟಿದ್ದಾರೆ. ಅಷ್ಟೇ ಭಕ್ತಿ ನಿಷ್ಠೆಯಿಂದ 'ಮೈಸೂರು' ಪರವಾದ ಮಿತ್ರರೂ ಸಭೆಯ ಮುಂದೆ ತಮ್ಮ ವಾದವನ್ನು ಒತ್ತಿ ಹೇಳಿ ಅದಕ್ಕನುಸಾರವಾಗಿ ಟೀಕೆ ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಆದರೆ, ಒಟ್ಟಿನಲ್ಲಿ ಈ ಸಭೆಗೆ ಬಂದಿರತಕ್ಕ ಯಾವ ಸದಸ್ಯರೂ ಕೂಡ ತಮ್ಮ ಚುನಾವಣೆಯ ಕಾಲದಲ್ಲಿ ತಾವು ಮೈಸೂರಿನ ಹೆಸರನ್ನು ಬದಲಾಯಿಸುವುದನ್ನು ತೀರ್ಮಾನ ಮಾಡುವುದಕ್ಕೆ ಹೋಗುತ್ತಿದ್ದೇವೆಂದು ಹೇಳಿ, ಆ ಅಭಿಮತಕ್ಕೆ ಬೆಂಬಲ ಕೊಡಬೇಕೆಂದು ಹೇಳಿದ್ದರೆ, ಅನೇಕ ಜನ ಸದಸ್ಯರು ಹಳೆಯ ಮೈಸೂರಿನ ಚುನಾವಣೆಯಲ್ಲಿ ಗೆದ್ದು ಬರುತ್ತಿದ್ದಾರೆ. ಏಕೆಂದರೆ, ನಮ್ಮಲ್ಲಿ ಅನೇಕ ಜನ ಮೈಸೂರಿನ ಮೇಲೆ ಹೆಮ್ಮೆಯಿಟ್ಟಿದ್ದಾರೆ. ಶಾಸನ ಒಂದು ಕ್ರಿಯೇಶನ್ ಈ ಪ್ರಶ್ನೆ, ಪ್ರಜೆಗಳ ಅರಿವಲ್ಲವೆಂದು "ನಮ್ಮ ಮಿತ್ರರು ಹೇಳಿದರು ಅದಕ್ಕೊಂದು ಉದಾಹರಣೆ ಹೇಳುತ್ತೇನೆ. ನಾನು ಕೋಲಾರ ಜಿಲ್ಲೆಗೆ ಹೋಗಿದ್ದಾಗ ಅಲ್ಲಿ ಹೊಲಕ್ಕೆ ಹೋಗುತ್ತಿದ್ದ ಒಬ್ಬ ರೈತನಲ್ಲಿಗೆ ಹೋಗಿ ಕಾರು ನಿಲ್ಲಿಸಿ ನನ್ನ ಕರೆದು, ಏನಪ್ಪಾ ಈ ರಾಜ್ಯಕ್ಕೆ ಹೆಸರು ಬದಲಾಯಿಸಬೇಕೆಂದು ಹೇಳುತ್ತಿದ್ದಾರೆ, ಅದಕ್ಕೆ ನೀನು ಏಕೆ ಹೇಳುತ್ತಿಯಾ ಎಂದೆ.

**ಶ್ರೀ ಕೆ.ಪಿ. ರೇವಣಸಿದ್ದಪ್ಪ :** ಆ ರೈತ ಏನು ಹೇಳಿದನೋ ತನಗೆ ಹೊಟ್ಟೆಗೆ ಹಿಟ್ಟಿಲ್ಲ ಮೈಗೆ ಅರಿವೆಯಿಲ್ಲವೆಂದು.

**ಸಭಾಪತಿಗಳು :** ಒಂದು ವೇಳೆ ಅವನು ಕೆಲಸ ಮಾಡುತ್ತಿದ್ದರೆ, ಮಾನ್ಯ ಸದಸ್ಯರು ಅವನಿಗೆ ತೊಂದರೆ ಕೊಡಲೇಬಾರದು. ಅದು ಕೂಡಾ ತಪ್ಪು ಹಾದಿ ತೋರಿಸುತ್ತದೆ. ನನ್ನ ಅನಿಸಿಕೆಯಂತೆ ಅದು ಅಡ್ಡ ಬರುವ ವಿರೋಧ ಪಕ್ಷದವರ ಕುತೂಹಲ.

**ಶ್ರೀ ಆವಲರೆಡ್ಡಿ:** ಆತ ಹೇಳಿದ, "ರಾಜ್ಯದ ಏರಿತನವನ್ನು ಯಾರೇ ನಡೆಸಲು, ನಾನು ಕರ್ತವ್ಯನಾಗಿ ಬೆಳೆಯನ್ನು ಬೆಳೆದು ರಾಜ್ಯಕ್ಕೆ ಸಂಪಾದಿಸಿ ಕೊಡುತ್ತೇನೆ. ಆದರೆ ಹೆಸರನ್ನು ಬದಲಾಯಿಸಿದರೆ ಅದಕ್ಕೆ ವಿರುದ್ಧವಾಗಿ ನಾನು ಏನು ಮಾಡಲು ಸಿದ್ಧವಾಗಿದ್ದೇನೆ" ಎಂದ. ಹೀಗೆ ಕೇವಲ ಹೆಸರು ಬದಲಾಯಿಸುತ್ತಾರೆ ಎಂದು ಹೇಳಿದ್ದಕ್ಕೆ ಇಷ್ಟೊಂದು ಆಕ್ರೋಶ ಉಂಟಾಯಿತು. ಇದಕ್ಕೆ ಹಳೆಯ ಮೈಸೂರಿನಲ್ಲಿರತಕ್ಕ ಎಲ್ಲ ರೈತರು ಇದೇ ರೀತಿ ವರ್ತಿಸುತ್ತಾರೆಂಬುದರಲ್ಲಿ ಸಂಶಯವಿಲ್ಲ. ಆಗ ನಾನು ಕೋಲಾರ ಜಿಲ್ಲೆಯ ಪ್ರಜೆಗಳ ವಿಷಯ ಹೇಳುವುದಾದರೆ, ನನಗೆ ಈಗಾಗಲೇ ನೂರು ಟೆಲಿಗ್ರಾಂಗಳು ದಿನವೂ ಬರುತ್ತಿವೆ. ನೂರಾರು ಜನ ನನ್ನ ರೂಮಿನ ಹತ್ತಿರ ಕಾದಿರುತ್ತಾರೆ. ಆ ವೇಳೆ ಈ ಸಭೆ ಹೆಸರನ್ನು ಬದಲಾಯಿಸಲು ಒಪ್ಪಿದರೆ ಸತ್ಯಾಗ್ರಹ ಹೂಡಿ, ಮೈಸೂರಿನ ಹೆಸರು ಉಳಿಸಿಕೊಳ್ಳುತ್ತೇವೆ. ಅದಕ್ಕೆ ಕಾಲ ಯಾವಾಗ ಎಂದು ಹೇಳುತ್ತಿದ್ದಾರೆ. ಇದೇ ರೀತಿ ಈ ಕೋಲಾರ ಜಿಲ್ಲೆಯ ಜನ ನಾಯಕರೂ ಕೂಡ ಈ ವಿಷಯ ಪರ್ಯಾಲೋಚನೆ ಮಾಡುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ. ಈ ರಾಜ್ಯವೇನು ಹೊಸದಾಗಿ ಮಾರ್ಪಾಡಾಗಿಲ್ಲ. ಹೆಸರು ಬದಲಾವಣೆಯಾಗಿ ರಾಜ್ಯದ ಅಭಿವೃದ್ಧಿ ಸಾಧನೆಯಾಗುವುದಿಲ್ಲ. ಹಿಂದಿನ ಡಿಸ್ಟ್ರಿಕ್ಟ್‌ಗಳು ಹೋಗುವುದಿಲ್ಲವೆಂಬುದಾಗಿ ವಾದ. ಅಲ್ಲದೇ, ಈ ಸಂಸ್ಥಾನವನ್ನು ಬಹಳ ಹಿಂದೆ ಹೈದರಾಲಿ ಟಿಪ್ಪುಸುಲ್ತಾನ್ ಮುಂತಾದ ದೊರೆಗಳು ಆಳುತ್ತಿದ್ದರು. ಟಿಪ್ಪು ಕೊಲಾರ ಜಿಲ್ಲೆಯವನು. ಒಳ್ಳೆಯ ಮಂತ್ರಿಯಾಗಿದ್ದರು. ಅವರ ರಾಜ್ಯ ಸೇಲಂ, ಮಂಗಳೂರುವರೆಗೂ ವಿಸ್ತರಿಸಿತ್ತು. ಮಂತ್ರಿಯಾದ ಪೂರ್ಣಯ್ಯನವರು ಈ ರೀತಿ ಹೆಸರು ಬದಲಾಯಿಸುವುದನ್ನು ಯೋಚಿಸಬಹುದಾಗಿತ್ತು. ಅದನ್ನವರು ಯೋಚನೆ ಮಾಡಲಿಲ್ಲ ಮೈಸೂರಿನ ಕೀರ್ತಿ ಕರ್ನಾಟಕದ ಜನರಮೇಲೆ ಅವಲಂಬಿಸಿ ಆಗಿನ ಮಹಮ್ಮದೀಯ ಅರಸರು ಕರ್ನಾಟಕ ಎಂದು ಇಡಬಹುದಾಗಿತ್ತು. ಅವರು ಸ್ವತಂತ್ರ ಅರಸರಾಗಿ ಇದ್ದರು. ಆದರೂ ಅವರು ಅದನ್ನು ಮಾಡಲಿಲ್ಲ. ಮೈಸೂರೆಂಬ ಹೆಸರನ್ನೇ ಉಳಿಸಿಕೊಂಡರು, ಇದನ್ನರಿತೇ ನಮ್ಮ ನಾಯಕರು ಎಸ್‌ಆರ್‌ಸಿ ನಮ್ಮ ನಾಯಕರು ಎಸ್‌ಆರ್‌ಸಿ ರಿಪೋರ್ಟ್ ಶಾಸನ ಸಭೆಯ ಮುಂದೆ ಬಂದಾಗ ಈ ಹೆಸರಲೇ ಈ ರಾಜ್ಯಕ್ಕಿರಬೇಕು, ಆ ಷರತ್ತಿನ ಮೇಲೆಯೆ ಒಪ್ಪುತ್ತೇವೆಂದು ಹೇಳಿ ರುಜು ಹಾಕಿದರು. ಆಗ ಈ ನಿರ್ಣಯದ ಪರವಾಗಿ ಮಾತನಾಡಿದ ಮಾನ್ಯ ಸ್ನೇಹಿತರುಗಳು ಕೂಡ ಒಪ್ಪಿದರು. ಈಗ ಆ ತೀರ್ಮಾನವನ್ನು ಬದಲಾಯಿಸುವುದಕ್ಕೆ ಪ್ರಯತ್ನ ಮಾಡಕೂಡದೆಂದು ಹೇಳುತ್ತೇನೆ. ಕೆಲವು ಕವಿಗಳು ಈ ರಾಜ್ಯವನ್ನು 'ಕರ್ನಾಟಕ' ಎಂದು ಹೇಳಿ ಹೊಗಳಿದ್ದಾರೆ, ಪಂಪ, ರನ್ನ ಎಲ್ಲರೂ ಕರ್ನಾಟಕ ಎಂಬ ಹೆಸರನ್ನೇ ಬಯಸಿದ್ದಾರೆ ಎಂದು ನಮ್ಮ ಮಿತ್ರರರು ಹೇಳಿದರು. 'ರವಿ ಕಾಣದ್ದನ್ನು ಕವಿ ಕಂಡ ಎಂದು ನಾಣ್ನುಡಿಯಿದೆ. ಅವರು ಕಲ್ಪನಾ ಪ್ರಪಂಚದಲ್ಲಿರುವರು; ರಾಜರ ಕೃಪಾ ಪೋಷಣೆಯಲ್ಲಿ ಬೆಳೆಯುವವರು, ಬೊಮ್ಮನ ಪೋತನ್ನ ಎಂಬ ಒಬ್ಬ ಆಂಧ್ರ ಕವಿ ರಾಜನ ಇಷ್ಟದಂತೆ ಕವಿತೆಯನ್ನು ಬರೆಯದೆ ಇದ್ದುದಕ್ಕಾಗಿ ರಾಜ ಆತನ ಹಲ್ಲುಗಳನ್ನು ಕೀಳಿಸಿದನಂತೆ, ಹೀಗಿರುವಾಗ ಕವಿಗಳು ಬರಹಗಾರರು ಕರ್ನಾಟಕದ ಹೆಸರನ್ನು ಹೊಗಳಿದ್ದಾರೆಂದು ಕೇಳಿ ನಾವು ಈಗ ಅದಕ್ಕೆ ಪ್ರಶಸ್ತಿ ಕೊಡಬೇಕೆಂದು

ಹೇಳುವ ವಾದವನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ನಮ್ಮ ಮಾನ್ಯ ಸ್ನೇಹಿತರು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡು ಸರಿಯಾದ ವಾತಾವರಣ ಒದಗಿದಾಗ ತರಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

**ಶ್ರೀ ಎಚ್.ಡಿ. ದೇವೇಗೌಡ** (ಹೊಳೆನರಸೀಪುರ)**:** ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು ವಿರೋಧಿಸುತ್ತಾ ನಾನು ಈ ಸನ್ನಿವೇಶದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗಾಗಲೇ ಬಹುಮಂದಿ ಸದಸ್ಯರು ಈ ನಿರ್ಣಯದ ಪರ ಮತ್ತು ವಿರೋಧವಾಗಿ ಮಾತನಾಡಿರುವುದನ್ನು ಎರಡು ದಿವಸಗಳಿಂದಲೂ ನಾನು ಕೇಳಿದ್ದೇನೆ. ಅನೇಕ ಸದಸ್ಯರು ಈ ನಿರ್ಣಯವನ್ನು ಬಹಳ ತೆರದಲ್ಲಿ ಪುಷ್ಟೀಕರಿಸಿದ್ದಾರೆ. ಆದರೆ ಹೆಸರನ್ನು ಬದಲಾವಣೆ ಮಾಡುವ ಈ ಸಂದರ್ಭದಲ್ಲಿ ಇದು ಎಂಥ ಒಂದು ಕೆಟ್ಟ ಪರಿಣಾಮಕ್ಕೆ ಎಡೆಗೊಡುತ್ತದೆಂಬುದು ಎಲ್ಲರೂ ಯೋಚನೆ ಮಾಡಬೇಕಾದ ಅಂಶ. ಈ ಕೆಟ್ಟ ಪರಿಣಾಮಕ್ಕೆ ಅವಕಾಶ ಕೊಡುವುದಕ್ಕೆ ಮುಂಚೆ, ಈ ನಿರ್ಣಯಕ್ಕೆ ಇನ್ನೂ ಸರಿಯಾದ ಕಾಲ ಬಂದಿಲ್ಲ. ಅದರ ಪರವಾಗಿ ಬಹುಮಂದಿ ಇದ್ದರೂ, ವಿರೋಧವಾಗಿ ಸ್ವಲ್ಪ ಜನರಾದರೂ ಇದ್ದಾರೆ, ಅವರ ಮನಸ್ಸು, ಪರಿವರ್ತನೆಯಾಗುವವರೆಗೂ ಅದನ್ನು ಮುಂದೂಡುವುದು ಉತ್ತಮ ಮಾರ್ಗವೆಂದು ಬಹುಮತವಿರತಕ್ಕ ಸದಸ್ಯರು ಅರಿತುಕೊಳ್ಳುವುದು ಉತ್ತಮ, ರಾಜಕಾರಣಿಗಳ ಲಕ್ಷಣವೆಂದು ಹೇಳುತ್ತೇನೆ. ಏಕೆಂದರೆ ಈ ದಿವಸ ರಾಜಕೀಯದ ಜಾಣ್ಮೆಯಿಂದ ಈ ಹೆಸರನ್ನು ಮೈಸೂರು ಅಥವಾ ವಿಶಾಲ ಮೈಸೂರೆಂದೇ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು ಆದರೆ, ಎಸ್‌ಆರ್‌ಸಿ ರಿಪೋರ್ಟಿನಲ್ಲಿರತಕ್ಕ ಒಂದು ತೀರ್ಮಾನವನ್ನು ಶ್ರೀಮಾನ್ ಡಿ.ಎಂ. ಸಿದ್ದಯ್ಯನವರು ಉದಾಹರಿಸುವಂತೆ ಪ್ರಜಾಪ್ರಭುತ್ವದ ದೃಷ್ಟಿಯಿಂದ ಬಹುಮಂದಿ ಅದರ ಪರವಾಗಿ ಇರುವ ಸನ್ನಿವೇಶದಲ್ಲಿ ಬಹುಮತಾಭಿಪ್ರಾಯಕ್ಕೆ ತಲೆಬಾಗುವುದು ಸೂಕ್ತವೆಂದು ಅನೇಕರು ವಾದ ಮಾಡಿದ್ದಾರೆ. ಈ ನಿರ್ಣಯವನ್ನು ವಿರೋಧ ಮಾಡಿರುವವರು ಅಲ್ಪ ಸಂಖ್ಯಾತರಾದರೂ ಅವರ ಮನಸ್ಸಿಗೆ ಇದು ನೋವಾಗುತ್ತದೆ. ಆದ್ದರಿಂದ ಒಂದು ಕೆಟ್ಟ ಪರಿಣಾಮವಾಗುತ್ತದೆ. ಇದನ್ನು ಬಹುಮತದ ಸದಸ್ಯರು ಅರಿತುಕೊಂಡು ಈ ನಿರ್ಣಯವನ್ನು ಮುಂದೂಡುವುದಕ್ಕೆ ಏರ್ಪಾಡು ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

7-00 ಪಿ.ಎಮ್.

**ಶ್ರೀ ಎ.ಜೆ.ದೊಡ್ಡಮೇಟಿ** (ರೋಣ)**:** ಸ್ವಾಮಿ ಈಗ ಕರ್ನಾಟಕವೆಂಬ ಹೆಸರಿನ ನಿರ್ಣಯ ನಮ್ಮ ಮುಂದಿದೆ. ಇನ್ನು ಈ ಪ್ರಶ್ನೆ ಮೇಲೆ ವಿಚಾರ ಮಾಡುವ ಹೊತ್ತಿಗೆ ಕೆಲವರು ಈ ರಾಜ್ಯವನ್ನು ಹಳೆಯ ಮೈಸೂರು ಮತ್ತು ಹೊಸ ಮೈಸೂರಿನವರವಾದವೆಂಬ ಒಂದು ಅಭಿಪ್ರಾಯವನ್ನು ತಾಳಿದ್ದಾರೆ. ಈ ವಾದ

ಖಂಡಿತವಾಗಿ ಸರಿಯಲ್ಲ. ಅದು ತಪ್ಪು ವಾದವೆಂದು ನಾನು ಹೇಳುತ್ತೇನೆ. ಇದಕ್ಕಿಂತ ಹೆಚ್ಚಿನ ಅಘಾತ ದೇಶಕ್ಕೆ ಉಂಟು ಮಾಡುವುದು ಮತ್ತೊಂದು ಬೇರೆ ಯಾವುದೂ ಇಲ್ಲ ಈಗ ನಾವೆಲ್ಲಾ ಒಂದೇ ರಾಜ್ಯದಲ್ಲಿ ಕೂಡಿದ್ದೇವೆ. ಆದ್ದರಿಂದ ಈ ರಾಜ್ಯಕ್ಕೆ ಏನು ಹೆಸರು ಇರಬೇಕೆಂಬುದನ್ನು ಈಗಲೇ ಆಲೋಚನೆ ಮಾಡಬೇಕಾಗಿದೆ.ಈ ವಿಷಯವನ್ನು ನಾನು ಈ ಸಭೆಯಲ್ಲಿ ಮೇಲಿಂದ ಮೇಲೆ ಒತ್ತಾಯ ಮಾಡಿ ಹೇಳುತ್ತಲೇ ಇದ್ದೇನೆ. ನನ್ನ ಅನೇಕ ಹಿರಿಯ ಮಿತ್ರರು, ಕರ್ನಾಟಕವೆಂಬ ಹೆಸರನ್ನು ಈ ರಾಜ್ಯಕ್ಕೆ ಇಡುವುದೇ ಒಳ್ಳೆಯದೆಂದು ಒಪ್ಪಿಕೊಂಡಿದ್ದಾರೆ. ಪಾರ್ಲಿಮೆಂಟಿನೊಳಗೆ ಹಿಂದೆ ಕಾನೂನು ಸಹ ಆಗಿದೆ ಎಂದು ನಾನು ಹೇಳುತ್ತೇನೆ. ಮೊದಲೇ ಇದನ್ನು ಯಾವ ರೀತಿ ಅವರು ಒಪ್ಪಿಕೊಂಡಿದ್ದಾರೆ ಎಂಬುದನ್ನು ಯೋಚನೆ ಮಾಡಬೇಕು. ಹಿಂದೆ ಕರ್ನಾಟಕವೆಂಬ ಹೆಸರು ನಮ್ಮ ಕನ್ನಡ ನಾಡಿಗೆ ಇದ್ದುದು ಅದು ಯಾವ ಒಂದು ಪರಿಸ್ಥಿತಿಯಿಂದ ಈಗಿನ ರೀತಿ ಬದಲಾವಣೆಯಾಯಿತೋ ನನಗೆ ಗೊತ್ತಿಲ್ಲ. ಈಗ ಸಭೆಯು ತನ್ನ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದೆ. "ಈಗಿನ ಅಭಿಪ್ರಾಯ ಹಿಂದೆ ಮಾಡಿದಂಥ ಕರಾರಿಗೆ ವಿರೋಧವಿದೆ. ಆ ರೀತಿ ನಿರ್ಣಯ ಹೋಗಬೇಕಾಗಿತ್ತು" ಒಂದು ಅಭಿಪ್ರಾಯ ಆದ್ದರಿಂಧ ಕೇಂದ್ರ ಸರ್ಕಾರಕ್ಕೆ ಹೋಗಿ ಅವರು ಇವರು ಒಂದು ಕಡೆ ಸೇರಿ ಒಂದು ತೀರ್ಮಾನಕ್ಕೆ ಬಂದು ನಮಗೆ ಸರ್ವ ಸಮ್ಮತವಾದ ಒಂದು ರಾಜೀ ಸೂತ್ರವನ್ನು ಏರ್ಪಡಿಸುವುದು ಸರಿಯೆಂದು ನನಗೆ ಕಾಣುತ್ತದೆ. ನಮ್ಮ ಅಭಿಪ್ರಾಯವನ್ನು ಅಲ್ಲಿ ಹೇಳಲಿಕ್ಕೇನು ತೊಂದರೆ? ಬೇರೆ ಕಾನೂನು ಮಾಡುವ ಹಾಗಿಲ್ಲ. ಪ್ರಾಯಶ ಈ ರೀತಿಯೇ ಇದೆ ಎಂಬುದಾಗಿ ಕೇಂದ್ರ ಸರ್ಕಾರಕ್ಕೆ ತಿಳಿಸುವುದಕ್ಕೆ ಅಡ್ಡಿ ಮಾಡುವುದು ಸರಿಯಲ್ಲ. ಅದರಿಂದ ಏನು ಪ್ರಯೋಜನವಾಗುತ್ತದೋ ಗೊತ್ತಿಲ್ಲ. ಪ್ರಜಾಪ್ರಭುತ್ವದ ಜವಾಬ್ದಾರಿಯನ್ನು ಹೊತ್ತಿರುವ ಪ್ರಜಾಪ್ರತಿನಿಧಿಗಳಾದ ನಮ್ಮ ಅಭಿಪ್ರಾಯವನ್ನು ತಿಳಿಸುವ ಬಗ್ಗೆ ಕುಂಠಿತಮಾಡುವುದು ನ್ಯಾಯವಾದುದಲ್ಲ ಆ ರೀತಿ ಮಾಡಬೇಡಿ ಯಾರ್ಯಾರು ಏನೇನು ಅಭಿಪ್ರಾಯಗಳನ್ನು ಈ ಬಗ್ಗೆ ವ್ಯಕ್ತ ಮಾಡಬೇಕೆಂದು ಬಯಸುತ್ತಾರೋ ಅವರಿಗೆಲ್ಲರಿಗೂ ಸಾಕಷ್ಟು ಅವಕಾಶ ಕೊಡಿ. ವಿಧಾನಸಭೆಗೆ ಹೆಚ್ಚಿನ ಸಂಸತ್ ಇತ್ಯಾದಿ ಇರುವುದರಿಂದ ಅಂತಿಮ ನಿರ್ಧಾರವನ್ನು ಕೈಗೊಳ್ಳುವಾಗ ಮತ್ತು ತನ್ನ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವ ಬಗ್ಗೆ ಇಷ್ಟೊಂದು ಆಟಾಟೋಪಗಳನ್ನು ಕೆಲವು ಸದಸ್ಯರು ತಾಳಿರುವುದು ಖಂಡಿತವಾಗಿ ಸರಿಯಾದುದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಂತ್ಯ ತೀರ್ಮಾನದ ಬಗ್ಗೆ ಒಂದು ಕರಾರು ಆಗಬೇಕಾಗಿದೆ. ಆಮಾತಿನ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಬಹುದು. ಆದರೆ ಕೇಂದ್ರ ಸರ್ಕಾರದಲ್ಲಿ ಇದನ್ನು ಒಪ್ಪದೇ ಹೋದರೆ ನಾವು ಏನು ಮಾಡುವುದಕ್ಕೂ ಆಗುವುದಿಲ್ಲ. ಇಲ್ಲಿ ಒಂದು ಸಾರಿ ತೀರ್ಮಾನವಾದ ಕೂಡಲೇ ಆಮೇಲೆ ನಮ್ಮ ಪಕ್ಷದ ನಾಯಕರು ಹೋಗಿ ಅಲ್ಲಿ ಅದನ್ನು ಅಸ್ತು ಎಂದೆನ್ನಿಸಿಕೊಂಡು ಬಂದ ಮೇಲೆ ನಂತರ ಯಾವ ಒಂದು ರೀತಿಯ ಆಕ್ಷೇಪಣೆಯೂ ಇಲ್ಲಿ ಬರಲಾರದು ಎಂದು ನಾನು ಹೇಳುತ್ತೇನೆ.

ಎರಡನೆಯದಾಗಿ ಶ್ರೀಮಾನ್ ವಿ.ಎಸ್.ಪಾಟೀಲ್ ರವರು ಇತ್ತೀಚೆಗೆ ಮಹಾರಾಷ್ಟ್ರ ಏಕೀಕರಣ ಸಮಿತಿಯುವರು ಈ ಒಂದು ಧೋರಣೆಯನ್ನು ಬದಲಾವಣೆ ಮಾಡಿದ್ದಾರೆಂದು ಹೇಳಿದರು. ನಾನು ಅದಕ್ಕೆ ಉತ್ತರ ಹೇಳುವುದಿಲ್ಲ ಇನ್ನು ಕೆಲವರು ಮೈಸೂರು ಹೆಸರೇ ಇರಬೇಕೆಂದು ಹೇಳಿದರು. ಈ ವಿಷಯದಲ್ಲಿ ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ನಮ್ಮ ಭಾಗದೊಳಗೆ ದೊಡ್ಡ ಮನೆತನವಿದೆ. ಆ ಮನೆತನದಲ್ಲಿ ಒಬ್ಬಳೇ ಹೆಣ್ಣುಮಗಳು, ಆ ಮಗುವನ್ನು ಬಿ.ಎ.ಪಾಸ್ ಆಗುವವರೆಗೂ ಮತ್ತು ಸುಮಾರು 18-21 ವರ್ಷ ವಯಸ್ಸಿನವರೆಗೂ ಆ ಮಗುವಿನ ಅಪ್ಪ, ಅಮ್ಮ ಒಂದು, ಮಮತೆಯಿಂದ ಬೇಬಿ, ಬೇಬಿ ಎಂದು ಕರೆಯುತ್ತಿದ್ದರು. ಆಕೆಯ ನಿಜವಾದ ಹೆಸರು ಚಂದ್ರಮುಖಿಯೆಂದು, ಕೆಲವು ವರ್ಷಗಳ ನಂತರ ಆಕೆಯನ್ನು ಲಗ್ನ ಮಾಡಿಕೊಟ್ಟರು, ಆಕೆ ಗಂಡನ ಮನೆಗೆ ಹೋದ ಮೇಲೆ ಆಕೆಯನ್ನು ಗಂಡಾನಾದವನು ಚಂದ್ರಮುಖಿ, ಚಂದ್ರಮುಖಿ, ಎಂದು ಕರೆಯಲಾರಂಭಿಸಿದನು. ಕೂಡಲೇ ಆ ಹೆಣ್ಣು ಮಗು ಗಾಬರಿಯಿಂದ ನಾನು ಚಂದ್ರಮುಖಿಯಲ್ಲ, ನನ್ನ ಹೆಸರು ಬೇಬಿ ಎಂದು ಹೇಳುವುದಕ್ಕೆ ಶುರು ಮಾಡಿದಳು. ಆಗ ಗಂಡನು ನೀನು ಇಷ್ಟು ಎತ್ತರವಾಗಿ ಬೆಳೆದಿದ್ದೀಯೇ, ನಿನ್ನನ್ನು ಯಾರು ಬೇಬಿ ಎಂದು ಕರೆಯುತ್ತಾರೆಂದು ಕೇಳಿದನು. ಅಲ್ಲದೇ ನಿನ್ನ ಹೆಸರು ಲಗ್ನವಾದಾಗ ಚಂದ್ರಮುಖಿಯೆಂದು ಹೇಳಿದರು. ಆಗ ನೀನು ಬೇಬಿ ಎಂದು ಸುಳ್ಳು ಹೇಳುತ್ತಿದ್ದೀಯ ನಿನ್ನ ನಿಜವಾದ ಹೆಸರು ಸರಿಯಾಗಿ ಹೇಳು ಎಂದು ಕೇಳಿದ. ಆಗ ಅವಳು ನನ್ನ ಹೆಸರು ಬೇಬಿನೇ, ಬೇಕಾದರೆ ನನ್ನ ಅಪ್ಪ, ಅಮ್ಮನನ್ನು ಕರೆದು ಕೇಳಿರಿ ಎಂದು ಹೇಳಿದರು. ಆಗ ಆ ಹೆಣ್ಣು ಮಗುವಿನ ತಂದೆ ತಾಯಿಯರನ್ನು ಕರೆಸಿ ಈ ವಿಷಯ ಕೇಳಿದಾಗ ತಂದೆ ತಾಯಿಗಳು ಆ ಮಗುವಿಗೆ ನಿನ್ನ ನಿಜವಾದ ಹೆಸರೇನೋ ಚಂದ್ರಮುಖಿ ಎಂಬುದು ಚಿಕ್ಕ ವಯಸ್ಸಿನಿಂದ ಬೇಬಿ ಎಂದು ಕರೆಯುತ್ತಿದ್ದೇವು ಅಷ್ಟೇ ಮತ್ತೇನು ಇಲ್ಲ ಎಂದು ಅವರು ಆ ಹೆಣ್ಣು ಮಗುವಿಗೂ, ಅವಳ ಗಂಡನಿಗೂ ತಿಳಿಸಿದರು. ಹಾಗೆ ಹಿಂದಿನ ಕಾಲದಲ್ಲಿ ಇಲ್ಲಿನ ವೈಶಿಷ್ಟ್ಯವನ್ನೂ ನೋಡಿ ಏನೋ ಒಂದು ಮಮತೆಯಿಂದ ದೇಶವಾತ್ಸಲ್ಯದಿಂದ ಮೈಸೂರು ಎಂಬುದಾಗಿ ನಾಮಕರಣ ಮಾಡಿದ್ದಾರೆಯೇ ವಿನಃ ಮತ್ತೇನೂ ಬೇರೆ ಇದರಲ್ಲಿ ಹೆಚ್ಚಿನದೇನು ಇಲ್ಲ. ಈಗಲೂ ಮೈಸೂರು ಎನ್ನುವುದು ಹಲವಾರು ಕರ್ನಾಟಕ ಪ್ರದೇಶಗಳಲ್ಲಿ ಒಂದು ಸಣ್ಣ ಪ್ರದೇಶವಾಗಿ ಉಳಿದಿದೆ ಈ ಸಣ್ಣ  ಒಂದು ಪ್ರದೇಶವನ್ನೇ ಕರ್ನಾಟಕವೆಂದು ಹಿಂದೆ ಕರೆಯಲಿಕ್ಕಾಗಲಿಲ್ಲ. ಅದಕ್ಕೋಸ್ಕರವಾಗಿಯೇ ಮೈಸೂರು ಎಂಬುದಾಗಿ ಇದುವರೆಗೂ ಕರೆಯುತ್ತಿದ್ದರು. ಮತ್ತು ಮೈಸೂರಿನ ಹೆಸರಿನ ಬಗ್ಗೆ ನಿಮಗಿಂತಲೂ ಹೆಚ್ಚು ಮಮತೆ ನಮಗೆ ಇದೆ ಕೆಲವು ಜಿಲ್ಲಾ ಅಥವಾ ತಾಲ್ಲೂಕುಗಳಿಗೆ ಇದ್ದ ಹೆಸರನ್ನೇ ಹತ್ತೊಂಬತ್ತು ಜಿಲ್ಲೆಗಳ ಮೇಲೆ ಹೇಳುವುದು ಸರಿಯಲ್ಲ ಇದನ್ನು ಯಾರೂ ಒಪ್ಪುತ್ತಾರೆ? ಯಾರೂ ಒಪ್ಪುವುದಿಲ್ಲ. ಈಗಿನ ಜಿಲ್ಲೆಗಳಲ್ಲಿ ನಾನಾ ವಿಧವಾದ ಜಾತಿ ಮತ್ತು ಕೋಮುಗಳಿರುತ್ತವೆ. ನಾನಾ ಭಾಷೆಗಳ ಜನಗಳೂ ಇರುತ್ತಾರೆ ಅಂದ ಮೇಲೆ ಆಯಾ ಜಿಲ್ಲೆಗಳ: ಹೆಸರುಗಳನ್ನು ಈ ರಾಜ್ಯಕ್ಕೆ ಇಡುವುದೂ ಸರಿಯಾದ್ದು ಅಲ್ಲದೆ ಈ ರಾಜ್ಯಕ್ಕೆ ಎರಡು ಸಾವಿರ ವರ್ಷಗಳಿಂದ ಈ ಭಾರತ ದೇಶದಲ್ಲಿ ಕರ್ನಾಟಕವೆಂಬ

ಹೆಸರು ಇದೆ. ಆ ಕಾಲದಿಂದಲೂ ಈ ಹೆಸರನ್ನು ಕರ್ನಾಟಕ ರಾಜ್ಯವೆಂದು ಆ ಕಾಲದಲ್ಲಿ ಬರೆದಿದ್ದಾರೆಯೇ ಹೊರತು ಮೈಸೂರು ಎಂಬುದಾಗಿ ಬರೆದಿಲ್ಲಾ. ಎಲ್ಲಾ ಪ್ರದೇಶಗಳು ಈಗ ಕೂಡಿ ಒಂದು "ಕರ್ನಾಟಕ ವಾಗುತ್ತಿರುವಾಗ" ಇದಕ್ಕೆ ಕರ್ನಾಟಕವೆಂದು ಹೆಸರಿಡುವುದು ಬಹು ಸೂಕ್ತವೆಂದು ನಾನು ಹೇಳುತ್ತೇನೆ. ಕವಿ ಕುವೆಂಪು ಅವರು "ಉದಯವಾಗಲಿ ಕರ್ನಾಟಕವಾಗಲಿ" ಎಂದು ಹಿಂದೆ ಹೇಳಿದ್ದು, ನಾನು ಇದನ್ನು ಪ್ರತಿಭಟಿಸಿ ಕೇಳುತ್ತಿಲ್ಲ. ನನ್ನ ಕೋರಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ ಸಮುದ್ರದೊಳಗೆ ಹೊಳೆ ಸೇರುತ್ತದೆಯೇ ಹೊರತು ಹೊಳೆಯೊಳಗೆ ಸಮುದ್ರ ಸೇರುವುದಿಲ್ಲ ಎಂಬುದು ಮಾನ್ಯ ಸದಸ್ಯರೆಲ್ಲರೂ ಗಮನಿಸಬೇಕು. ಕರ್ನಾಟಕ ರಾಜ್ಯವೆಂಬುದಾಗಿ ಈ ಮೈಸೂರು ಕರೆಯುವುದಕ್ಕಾಗಿ ಸುಮಾರು 30 ಪುಟಗಳ ಒಂದು ಪುಸ್ತಕವನ್ನೇ ಮೈಸೂರಿನ ಅರಸರ ಬಗ್ಗೆ ಬರೆದಿದ್ದೇನೆ. ಅದರೊಳಗೆ ಇದಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳೂ ಅಡಕವಾಗಿವೆ. ಬೇಕಾದರೆ ಇಲ್ಲಿ ಕೆಲವು ವಾಕ್ಯಗಳನ್ನು ಓದಿ ಹೇಳುತ್ತೇನೆ

**ಅಧ್ಯಕ್ಷರು:** ಆ ಪುಸ್ತಕವನ್ನು ಸದಸ್ಯರಿಗೆ ಕೊಡಲಾಗಿದೆಯೇ?

**ಶ್ರೀ ಎ.ಜೆ. ದೊಡ್ಡಮೇಟಿ:** ಹೌದು ಬೇಕಾದರೂ ಕೊಡುತ್ತೇನೆ. ಆದರೆ ಇಲ್ಲಿ ಓದುವುದು ಬೇಡ, ವರ್ತಮಾನ ಪತ್ರಿಕೆಯಲ್ಲಿ ಬಂದಿದೆ, ಎಲ್ಲರೂ ಓದಿದ್ದಾರೆ ಒಂದೇ ಮಾತನ್ನು ಹೇಳುತ್ತೇನೆ 1698 ರಲ್ಲಿ ....

**ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ):** ಅವರು ಯಾವುದೋ ಪುಸ್ತಕವನ್ನು ಓದುತ್ತೇನೆ, ಅವರೇ ಬರೆದಿರತಕ್ಕ ಪುಸ್ತಕವನ್ನು ಅವರೇ ಓದಿದ್ದಾರೆ

**ಶ್ರೀ ಎ.ಜೆ.ದೊಡ್ಡಮೇಟಿ:** ನಾನು ಬರೆದದ್ದು ಅಲ್ಲ. ಇದು 1698ರಲ್ಲಿ ಚಿಕ್ಕದೇವರಾಜ ಒಡೆಯರ ಮತ್ತು ಅವರ ಆಸ್ಥಾನದಲ್ಲಿದ್ದ ತಿರುಮಲ ಎಂಬ ಮಂತ್ರಿಗಳು ಬರೆದ ಮೈಸೂರು ಒಡೆಯರ ವಂಶಾವಳಿಯ ಪುಸ್ತಕ ಕರ್ನಾಟಕ ವೆಂಬ ಬಗ್ಗೆ ಯಾವ ರೀತಿ ಮತ್ತು ಅವರ ಜಾತಕ ,ಇತ್ಯಾದಿಗಳೊಳಗೊಂಡಿದೆ ಅಲ್ಲದೇ ಅದರಲ್ಲಿ ಕರ್ನಾಟಕ, ಕಾವೇರಿಯಿಂದ ಗೋದಾವರಿ ನದಿಯವರೆಗೂ ಹೊಂದಿತ್ತು ಎಂದು ಹೇಳಿದ್ದಾರೆ.

**ಶ್ರೀ ಬಿ. ಚನ್ನಬೈರೆಗೌಡ:** ಇದು ಕರ್ನಾಟಕ ದೇಶಕ್ಕೆ ಸಂಬಂಧಪಟ್ಟಿದ್ದು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆಯೇ ಹೊರತು ಈ ಪುಸ್ತಕ ಯಾರ ಇತಿಹಾಸವು ಅಲ್ಲ, ಪುರಾಣದ ಕಥೆಯೂ ಅಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:**ಅವರಿಗೇನೋ ಬಹಳ ಗಾಬರಿಯಾಗಿದೆ.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ:** ಚಿಕ್ಕದೇವರಾಜ ಒಡೆಯರ ಜಾತಕಕ್ಕೂ ಮತ್ತು ಶ್ರೀಮಾನ್ ದೊಡ್ಡಮೇಟಿಯವರ ಈ ವಾದಕ್ಕೂ ಏನು ಸಂಬಂಧ?

**ಶ್ರೀ ಎ.ಜೆ. ದೊಡ್ಡಮೇಟಿ:** ಕಾವೇರಿ ತೀರದಲ್ಲಿ ಹಿಂದೆ ಮೈಸೂರಿನ ಅರಮನೆಯಿತ್ತೆಂದು ಹೇಳುತ್ತಿದ್ದರು. ಈ ಮೈಸೂರು ಕರ್ನಾಟಕದ ಒಂದು ಭಾಗವೆಂದು ಹಿಂದೆಯೇ ಅವರು ಒಪ್ಪಿಕೊಂಡಿದ್ದಾರೆ. ಅದ್ದರಿಂದ ಹಿಂದೆಯೇ ಕರ್ನಾಟಕವೆಂಬುದಾಗಿ ಒಂದು ಹೆಸರು ಈ ರಾಜ್ಯಕ್ಕೆ ಇತ್ತೆಂಬುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ.

**ಶ್ರೀ ಡಿ. ವೆಂಕಟರಾಮಯ್ಯ (ರಾಬರ್ಟಸನ್):** ಪುಸ್ತಕಕ್ಕೆ ಹೆಸರೇ ಇಲ್ಲ ಅದೇನು ವರದಿಯೋ: ಗೊತ್ತಿಲ್ಲ ಅದಿಲ್ಲದೆಯೇ

**ಶ್ರೀ ಸಭಾಪತಿ :** ಮಾನ್ಯ ಸದಸ್ಯರು ತಾವು ಇಡೀ ಪುಸ್ತಕವನ್ನು ಓದುತ್ತಾ ಇರುವುದಿಲ್ಲ ಎಂಬುದನ್ನು ನೆನಪು ಮಾಡಿಕೊಳ್ಳಲೇಬೇಕು. ಅವರು ಪಾಯಿಂಟ್‌ಗೆ ಸರಿಯಾಗಿ ವಿವರಿಸಬೇಕು.

**ಶ್ರೀ ಎ.ಜೆ. ದೊಡ್ಡಮೇಟಿ :** ಮೈಸೂರಿನ ಅರಸ ಆಗಿದ್ದ ಚಿಕ್ಕದೇವರಾಯ ವಂಶಾವಳಿಯಯಿ ಇದು ಉಲ್ಲೇಖಿಸಲ್ಪಟ್ಟಿದೆ. ಆ ಮೇಲೆ ಮುಂದೆ "ಶ್ರೀ ರಂಗಪಟ್ಟಣ ಕರ್ನಾಟಕವೆಂಬ ನಾರಿಯ ನೊಸಲೊಳು ಜಾರುರನ್ನದ ಬುಟ್ಟಿನಂತಿಹುದು" ಎಂದು ಬರೆದಿದ್ದಾರೆ. ಮೈಸೂರು ಎನ್ನುವ ಹೆಸರು ಕರ್ನಾಟಕದೊಳಗಿತ್ತು ಎನ್ನುವುದನ್ನು ತಾವುಗಳು ಬರೆದುಕೊಳ್ಳಬೇಕು. ನಾಳೆಯ ದಿವಸ ಕರ್ನಾಟಕ ಹೋಗುತ್ತದೆ ಆಗ ಅದು ನಿಜವಾಗಿಯೂ ಹಳೆಯ ಮೈಸೂರಿನವರಿಗೆ ಹೆಚ್ಚಿನ ಅಭಿಮಾನ. ಈ ಕರ್ನಾಟಕ ಚಳವಳಿಯನ್ನು ಹಳೆಯ ಮೈಸೂರಿನಿಂದಲೇ ಹುಟ್ಟಿಸಿದ್ದಾರೆ. ನಾಳೆಯ ದಿವಸ ಕರ್ನಾಟಕ ಆದರೆ ಅದರ ಕೀರ್ತಿ ಕರ್ನಾಟಕದ ರತ್ನ ಸಿಂಹಾಸನಕ್ಕೆ ಹೋಗುತ್ತದೆ. ಕರ್ನಾಟಕದ ಕವಿಗಳ ಚರಿತ್ರೆಗೆ ಸ್ಫೂರ್ತಿ ಬರುತ್ತದೆ. ಕೋಲಾರ ಜಿಲ್ಲೆಯಲ್ಲಿದ್ದ ಕುಮುದೇಂದು ಮುನಿಯೆಂಬ ಜೈನ ಋಷಿಗಳು ಮೈಸೂರಿಗೆ ಕರ್ನಾಟಕವೆಂದು ಹೆಸರಿಡಬೇಕೆಂದು ಹೇಳಿದ್ದಾರೆ ಅದರ ಕೀರ್ತಿ ಕೋಲಾರ ಜಿಲ್ಲೆಯಲ್ಲಿ ಎಲ್ಲರಿಗೂ ಹೋಗುತ್ತದೆ. ನಿಮಗೆ ಕನ್‌ವಿನ್ಸ್ ಮಾಡಬೇಕಾದರೆ ನೀವು ಒಂದು ಮೀಟಿಂಗ್ ಮಾಡಿ, ನಾನು ತಮ್ಮಲ್ಲಿಗೆ ಬಂದು ತಮ್ಮ ಮನಸ್ಸು ಬದಲಾವಣೆ ಆಗುವ ಹಾಗೆ ಮಾಡುತ್ತೇನೆ. ಆ ಸಾಮರ್ಥ್ಯ ನನಗೆ ಇದೆ. ಕುವೆಂಪು ಅವರು ಏನು ಪ್ರಾರ್ಥನೆ ಮಾಡಿಕೊಂಡಿದ್ದಾರೆಂದರೆ ಕರ್ನಾಟಕವಾದದ್ದು ಇಂದು ಬಂದು ನಾಳೆ ಹೊರಟುಹೋಗುವ ಮಂತ್ರಿ ಮಂಡಲಕ್ಕಲ್ಲ. ಅದು ಸರಸ್ವತಿಯು ರಚಿಸಿದೊಂದು ರುಚಿಕರ ಕಂಡಲ್ಲಿ ಅಲ್ಲಿ ನಿತ್ಯ ಸಚಿವರು ನಿಮ್ಮನ್ನು ನೀವೇ ಮಾಡಿಕೊಳ್ಳಬಾರದು, ಬೇರೆ ಯಾರನ್ನೂ ಕುವೆಂಪುವನ್ನು ಕರೆಯುತ್ತಾರೆಯೇ? ನೂರಾರು ಮಂತ್ರಿಗಳ ಹೆಸರನ್ನು ಹೇಳುವುದಿಲ್ಲ. ಕರ್ನಾಟಕ ಹೆಸರು ಸೂರ್ಯಚಂದ್ರರು ಇರುವ ತನಕ ಇರುತ್ತದೆ ಹಿಡಿದ ತೀರ್ಮಾನವನ್ನು ಬದಲಾಯಿಸಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಅಂದಾನಯ್ಯ (ಕುಣಗಲ್):** ಸ್ವಾಮಿ ಈ ದಿವಸ ಈ ಸಭೆಯ ಮುಂದೆ ಮಂಡಿಸಿರುವ ನಿರ್ಣಯದ ಮೇಲೆ ಈಗಾಗಲೇ ಎರಡು ದಿವಸಗಳಿಂದಲೂ ಚರ್ಚೆ ನಡೆದಿದೆ. ನನಗಾದರೂ ಅನಿಸುತ್ತದೆ, ಈ ಒಂದು ಸಣ್ಣ ವಿಷಯಕ್ಕೋಸ್ಕರ ನಮ್ಮ ಅಮೂಲ್ಯವಾದ ವೇಳೆಯನ್ನು ವ್ಯರ್ಥವಾಗಿ ಕಳೆಯುತ್ತಿದ್ದೇವಲ್ಲ ಎಂದು ನನ್ನ ಮನಸ್ಸಿಗೆ ವ್ಯಥೆಯಾಗುತ್ತದೆ. ಈ ಸಂದರ್ಭದಲ್ಲಿ ನನಗೆ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ "ಗಂಜೀಕು ಗತ್‌ನೈ ನಂಜೀಕು ಬುಲಾವ್" ಎಂದು ದೇಶದಲ್ಲಿ ಸಕಾಲದಲ್ಲಿ ಮಳೆ ಬೆಳೆಗಳಾಗದ ಅಭಾವ ಪರಿಸ್ಥಿತಿಯುಂಟಾಗಿ ಜನಗಳು ತೊಂದರೆಯನ್ನು ಅನುಭವಿಸುತ್ತಿರುವಾಗ, ದೇಶದಲ್ಲಿ ಅವಿದ್ಯಾವಂತರ ಸಂಖ್ಯೆ ಜಾಸ್ತಿಯಾಗುತ್ತಿರುವಾಗ ನಾವು ಜವಾಬ್ದಾರಿಯುತವಾಗಿ ಇಲ್ಲಿ ಗಂಟೆಗಟ್ಟಲೆ ಕುಳಿತುಕೊಂಡು ಈ ಒಂದು ಸಣ್ಣ ವಿಷಯವನ್ನು ನಾವು ಚರ್ಚೆಮಾಡುತ್ತಿರುವುದು ಬಹಳ ಶೋಚನೀಯವಾಗಿದೆ. " ಮೈಸೂರು" ಎನ್ನುವ ಹೆಸರನ್ನು ಅಳಿಸಿ "ಕರ್ನಾಟಕ" ಎಂದು ಇಡುವುದಕ್ಕೆ "ಮೈಸೂರು" ಎನ್ನುವ ಹೆಸರಿನಲ್ಲಿ ಏನು ಕೆಟ್ಟಿದೆ? ಈ ಹೆಸರು ಬಹಳ ಹಿಂದಿನಿಂದ ಮತ್ತು ಚರಿತ್ರಾರ್ಹವಾಗಿದೆ. ಹಿತವಾಗಿದೆ. ಇಂಥಾ ಹೆಸರನ್ನು ಬದಲಾಯಿಸುವ ಪ್ರಮೇಯ ಏನು ಬಂದಿದೆಯೋ ನನಗಂತೂ ಅರ್ಥವಾಗುವುದಿಲ್ಲ.

## ರೋಣ ತಾಲ್ಲೂಕಿನಲ್ಲಿ ಬರಗಾಲ

**ಧಾರವಾಡ ಜಿಲ್ಲೆ ರೋಣ ತಾಲ್ಲೂಕಿನಲ್ಲಿ ಬರಗಾಲ ಪರಿಸ್ಥಿತಿ.**

**ಪ್ರ.ನಂ. 204 ಶ್ರೀ ಎ.ಜೆ. ದೊಡ್ಡಮೇಟಿ (ರೋಣ)**

ಸರಕಾರ ಉತ್ತರಿಸುವ ಕೃಪೆಮಾಡಬೇಕು.

ಅ) ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಕಳೆದೆರಡು ವರ್ಷಗಳಿಂದ ವಿಶೇಷವಾಗಿ 1961-62 ರಲ್ಲಿ ಮಳೆ ಅಭಾವದಿಂದ ಬೆಳೆಗಿಡಾಗಿ ಬರಗಾಲ ಬಿದ್ದಿರುವದು, ಸರಕಾರದ ಗಮನಕ್ಕೆ ಬಂದಿದೆಯೇ?

ಬ) ಹಾಗಿದ್ದಲ್ಲಿ ತಾಲ್ಲೂಕಿನ ಹಳ್ಳಿಗಳಲ್ಲಿ ರೈತರಿಂದ ಕಂದಾಯ (ಲೆವ್ವಿ) ಸಂಗ್ರಹಣೆ ಕೈಬಿಡಲಾಗಿದೆಯೇ?

ಕ) ಬರಗಾಲ ಕಾಮಗಾರಿ ಪ್ರಾರಂಭವಾಗಿವೆಯೇ? ಆಗಿದ್ದರೆ ವಿವರ.

ಡ) ದನಕರುಗಳಿಗೆ ಮೇವು ಕೊಳ್ಳಲು ರೈತರಿಗೆ ತಕಾವಿ ಸಾಲ ನೀಡಲಾಗಿದೆಯೇ? ಕೊಟ್ಟಿದ್ದರೆ ಅದಕ್ಕಾಗಿ ಮಂಜೂರಾದ ಹಣ ಎಷ್ಟು?

ಇ) ಜನರಿಗೆ ಪರಿಹಾರ ರೂಪವಾಗಿ ಸರಕಾರ ಮತ್ತೇನಾದರೂ ಕ್ರಮಕೈಕೊಂಡಿದೆಯಾ?

ಉತ್ತರ: ಶ್ರೀ ಆರ್. ಎಂ. ಪಾಟೀಲ (ಗೃಹ ಸಚಿವರು-ಕಂದಾಯ ಸಚಿವ ಶ್ರೀ ಎಮ್.ವ್ಹಿ. ಕೃಷ್ಣಪ್ಪ ಅವರ ಪರವಾಗಿ)

ಅ) ಮಳೆಯ ಅಭಾವದಿಂದ ಕಳೆದೆರಡು ವರ್ಷಗಳಿಂದಲೂ ರೋಣ ತಾಲ್ಲೂಕಿನಲ್ಲಿ ಬರಗಾಲದಂಥ ಪರಿಸ್ಥಿತಿ ತಲೆದೋರಿದೆ 1961-62 ರಲ್ಲಿ ಮಳೆ ಆಗದೆ ಮುಂಗಾರು ಮತ್ತು ಹಿಂಗಾರು ಬೆಳೆಗಳು ಬಾರದೆ ಹಾನಿ ಆಗಿದೆ.

ಬ) ತಾಲ್ಲೂಕಿನಲ್ಲಿ ಮುಂಗಾರು ಫಸಲು ಅವಲಂಬಿಸಿರುವ ಆರು ಹಳ್ಳಿಗಳಲ್ಲಿ ಕಂದಾಯ ಸಂಗ್ರಹಣೆಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಉಳಿದ ಹಳ್ಳಿಗಳು ಹಿಂಗಾರು ಬೆಳೆಯನ್ನು ಅವಲಂಬಿಸಿದೆ. ಅವುಗಳ ವಿಷಯವಾಗಿ ಸರಕಾರ ಪರಿಶೀಲನೆ ನಡೆಸಿದೆ ಧಾರವಾಡ ಜಿಲ್ಲಾಧಿಕಾರಿಗಳು ಆ ಬಗ್ಗೆ ಅಂತಿಮ ಆದೇಶವನ್ನು ಇಷ್ಟರಲ್ಲಿ ಮಾಡಲಿದ್ದಾರೆ.

ಕ) ಒಟ್ಟು 33 ಪ್ರಾಯೋಗಿಕ ಬರಗಾಲ ಕಾಮಗಾರಿಯನ್ನು ಮತ್ತು ಆ ತಾಲ್ಲೂಕಿಗೆ ಮಂಜೂರು ಮಾಡಿದೆ. ಅವುಗಳಲ್ಲಿ ಒಂದನ್ನು ಕೈ ಬಿಡಲಾಗಿದೆ. ಉಳಿದಿರುವ 32 ರಲ್ಲಿ10 ಕೆಲಸಗಳನ್ನು ಸಂಪೂರ್ಣ ಆಗಿವೆ. 6 ಪ್ರಗತಿಯಲ್ಲಿವೆ. 17 ಕಾಮಗಾರಿಗಳು ಇಷ್ಟರಲ್ಲಿ ಪ್ರಾರಂಭ ಆಗಲಿವೆ ಈ ಕಾಮಗಾರಿಗಳಿಗೆ ಸಂಬಂಧಿಸಿದ ಮಾಹಿತಿ ಒದಗಿಸಲಾಗಿದೆ.

ಡ) 1961-62 ರಲ್ಲಿ ರೋಣ ತಾಲ್ಲೂಕಿಗೆ 40,000 ರೂ. ಗಳನ್ನು ಒಕ್ಕಲುತನದ ಸಾಲ ಮತ್ತು ಭೂ ಸುಧಾರಣೆ ಸಾಲ ಎಂದು ವಿತರಿಸಲಾಗಿದೆ. ಮೇವು ಖರೀದಿಸಲು ಯಾವ ಸಾಲ ಮಂಜೂರು ಆಗಿಲ್ಲ ಏಕೆಂದರೆ ಆಗ ಅಂಥ ಬೇಡಿಕೆಗಳು ಬಂದಿರಲಿಲ್ಲ.

ಇ) "ತಕಾವಿ" ಮುಂತಾದ ಸರಕಾರಿ ಬಾಗಿಗಳಿಗೆ ಸಂಬಂಧಿಸಿದ ವಸೂಲಿಗಳನ್ನು "ಆಣೆವಾರಿ" ಪ್ರಕಾರ ಮಾಡಲಾಗುತ್ತಿದೆ. ಅದೇ ದರದಲ್ಲಿ ರೈತರಿಗೆ ಕಂದಾಯದ ವಸೂಲಿಯಲ್ಲಿ ಪರಿಹಾರ ನೀಡಲಾಗುತ್ತಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಸ್ವಾಮಿ, ಮೊದಲ ಕೆಲಸವಾಗಿ ಈ ಬರಗಾಲ ಪೋಲಿಸ್ ಖಾತೆಗೆ ಏಕೆ ಕೊಟ್ಟಿದ್ದೀರಿ? ಪೂರ್ತಿ ಆದ ಕೆಲಸಗಳ ಬಗ್ಗೆ ಇದು ವರೆಗೂ ವೆಚ್ಚವಾದ ಹಣ ಎಷ್ಟು?ಎಸ್ಟಿಮೇಟ್ ಎಷ್ಟು?

**ಶ್ರೀ ಆರ್. ಎಂ. ಪಾಟೀಲ್:** ಆ ಲೆಕ್ಕವನ್ನು ತರಿಸಬೇಕು ಸ್ವಾಮಿ.

**ಶ್ರೀ ಎ.ಜೆ. ದೊಡ್ಡಮೇಟಿ:**ನಿಜವಾಗಿ ವೆಚ್ಚ ಅಂದಾಜು ಎಷ್ಟು ಎಂಬುದು ತಿಳಿಯದಿದ್ದರೆ ಮುಂದೆ ಇತ್ತ ಹೇಳುವುದು ಹೇಗೆ ಸ್ವಾಮಿ? ಪರಿಶಿಷ್ಟದಲ್ಲಿ ತೋರಿಸಿರುವ ಐಟಮ (11) ರ ಬಗ್ಗೆ ಗ್ರಾಮ ಪಂಚಾಯತಿ ಕೊಡಲ್ಪಟ್ಟಿದೆ ಅಥವಾ ತೆಗೆದುಕೊಂಡಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ?

**ಶ್ರೀ ಆರ್.ಎಂ. ಪಾಟೀಲ್:** ಅದು ಮೆಂಬರಿಗೆ ಹಾಗೆ ಕಾಣುತ್ತದೆ ಸರಕಾರದವರಿಗೆ ಗೊತ್ತಾದ ಮೇಲೆ ಏನು ಹೇಳುತ್ತಾರೊ?

**ಶ್ರೀ ಎ.ಜೆ. ದೊಡ್ಡಮೇಟಿ:** ಈಗ ಗ್ರಾಮ ಪಂಚಾಯತಿಯಿಂದ ಅರ್ಧ ಫಂಡು ವಸೂಲು ಮಾಡಲ್ಪಟ್ಟಿದೆ. ಸ್ಕೇರ್ಸಿಟಿ ಏರಿಯಾದೊಳಗೆ ಗ್ರಾಮ ಪಂಚಾಯತಿಯಿಂದ ಹಣ ತೆಗೆದುಕೊಳ್ಳುವುದು ಸರಿಯಾದ ಪದ್ಧತಿ ಎಂದು ನನಗೆ ಕಾಣುವುದಿಲ್ಲ. ಕಾರಣ ಹಾಗೆ ವಸೂಲು ಮಾಡಲ್ಪಟ್ಟಿದ್ದರೆ ಆ ಹಣವನ್ನು ರೀ-ಫಂಡ್ ಮಾಡುವ ಸಲುವಾಗಿ ಸರ್ಕಾರದವರು ಆಲೋಚನೆ ಮಾಡುತ್ತಾರೆಯೇ?

**ಶ್ರೀ ಆರ್.ಎಂ. ಪಾಟೀಲ್:** ಈ ಎರಡು ವಿಷಯಗಳನ್ನು ಪರಿಶೀಲನೆ ಮಾಡಲಾಗುವುದು.

**ಶ್ರೀ ಎ.ಜೆ. ದೊಡ್ಡಮೇಟಿ:** ಈಗ ಆದದ್ದು ಆಗಿ ಹೋಯಿತು. ಮುಂದೆ ಆದರೂ ಹಣ ವಸೂಲು ಮಾಡದೇ ಎಸ್ಟಿಮೇಟ ಕಾಪ್ಸ ಪ್ರಕಾರ ಸರಕಾರದವರು ತಮ್ಮ ಫಂಡಿನಿಂದ ಹಣ ಖರ್ಚುಮಾಡಿ ಮುಂದಿನ ಕೆಲಸ ಮುಂದುವರಿಯದ ಬಗ್ಗೆ ಅಪ್ಪಣೆ ಕೊಡಿಸುತ್ತಾರೋ?

**ಶ್ರೀ ಆರ್.ಎಂ. ಪಾಟೀಲ್:** ಸ್ಕೇರ್ಸಿಟಿ ವರ್ಕ್ ತೆಗೆದುಕೊಂಡಿದ್ದು ಗ್ರಾಮಸ್ಥರು ಅಥವಾ ಗ್ರಾಮ ಪಂಚಾಯ್ತಿಯಿಂದ ಹಣ ವಸೂಲು ಮಾಡಿದ್ದು ನನಗೆ ತಿಳಿಯದು ಇದು ಹೊಸದು ಎಂದು ಹೇಳಬಹುದು. ಯಾವ ಆತುರತೆಯಿಂದ ಅಲ್ಲಿನ ಮೆಂಬರುಗಳು ಹಣ ಕೊಡಿಸಿದರೋ ನನಗೆ ಗೊತ್ತಿಲ್ಲ.

**ಶ್ರೀ ಬಿ. ಹುಚ್ಚೇಗೌಡ:** ಪ್ರಶ್ನೆಯ (ಬಿ) ಭಾಗಕ್ಕೆ ಕೊಟ್ಟಿರುವ ಉತ್ತರದಲ್ಲಿ ಕಂದಾಯ ವಸೂಲಿಯನ್ನು ನಿಲ್ಲಿಸತಕ್ಕ ವಿಷಯ ಪರಶೀಲನೆಯಲ್ಲಿದೆ ಎಂದು ಹೇಳಲಾಗಿದೆ.ಕಂದಾಯ ವಸೂಲಿಯ ಕಾಲ ಆಯಿತೋ ಇಲ್ಲವೋ?

**ಶ್ರೀ ಆರ್.ಎಂ. ಪಾಟೀಲ್:** ರಾಗಿ ಸೀಸನ್ ಜುಲೈ ತಿಂಗಳ ಕೊನೆಯ ತಾರೀಖು

**ಶ್ರೀ ಬಿ. ಹುಚ್ಚೇಗೌಡ:** ಈಗ ಕಂದಾಯ ವಸೂಲಾಗಿಲ್ಲವೆ?

**ಶ್ರೀ : ಆರ್.ಎಂ. ಪಾಟೀಲ್:** ಈ ವಸೂಲಿಗೆ ಏಪ್ರಿಲ್ ತಿಂಗಳು ಕಡೆಯ ತಾರೀಖು

**ಶ್ರೀ ಬಿ. ಹುಚ್ಚೇಗೌಡ:** ಕಂದಾಯದ ವಸೂಲಿಯ ಕಾಲ ಮುಗಿದ ಮೇಲೆ ಇನ್ನೂ ಪರಶೀಲನೆಯಲ್ಲಿದೆ ಎಂದರೇನರ್ಥ? ಈಗಾಗಲೇ ಕಂದಾಯ ವಸೂಲು ಮಾಡಿಲ್ಲವೆ?

# 1962-63 ರ ಅಂದಾಜು ಪತ್ರಿಕೆ

**ಶ್ರೀ ಎ.ಜೆ. ದೊಡ್ಡಮೇಟಿ (ರೋಣ):** ಮಾನ್ಯ ಅಧ್ಯಕ್ಷರೇ ಈ ಅಂದಾಜು ಪತ್ರಿಕೆಯನ್ನು ಸ್ವಾಗತಿಸುತ್ತಾ ಕೆಲವು ಕೆಲವು ಸೂಚನೆಗಳನ್ನು ನಾನು ಕೂಡ ಬಯಸುತ್ತೇನೆ ನಿನ್ನೆಯಿಂದ ನಡೆದಿರುವ ಚರ್ಚೆಯನ್ನು ಸಾಧಾರಣವಾಗಿ ಪರಿಶೀಲಿಸಿದ್ದರಲ್ಲಿ. ನಮ್ಮ ವಿರೋಧ ಪಕ್ಷದ ಸ್ನೇಹಿತರು ಟೀಕೆ ಮಾಡಿದ್ದರಲ್ಲಿ ಕಲವು ಮಾತುಗಳನ್ನು ಸರ್ಕಾರದವರು ಸಹಾನುಭೂತಿಯಿಂದ ನೋಡುವುದಕ್ಕೆ ಅವಕಾಶವಿದ್ದರೂ, ಕೆಲವು ವಿಷಯಗಳಲ್ಲಿ ಅತಿಶಯೋಕ್ತಿಗಳು ತಲೆದೋರಿ ಆ ಸಹಾನುಭೂತಿಯೂ ದೊರೆಯದೆ ಹೋಗಬಹುದೆಂಬ ಭೀತಿ ಇದೆ. ಯಾವುದೇ ಮಾತನ್ನು ನಾವು ಎದುರಿಗೆ ಇಡುವಾಗಲೂ ಅತಿಶಯೋಕ್ತಿಯಾಗಲೀ ಅತಿರಂಜಿತ ವಿಷಯ ಪ್ರತಿಪಾದನೆಯಾಗಲೇ ಇದ್ದರೆ ಹೆಚ್ಚು ಪರಿಣಾಮಕಾರಿಯಾಗಿರುವುದಿಲ್ಲ ನಿನ್ನೆಯ ದಿವಸವೆಲ್ಲಾ ಮಂತ್ರಿ ಮಂಡಳದ ವಿಸ್ತರಣೆಯ ಬಗ್ಗೆ ಮಾತನಾಡಿದುದುದೆಲ್ಲಾ ಈ ರೀತಿಯಲ್ಲಿಯೇ ಇದೆಯೆನ್ನಬಹುದು. ಬಹುಶಃ ಮಂತ್ರಿಗಳು ವಿಸ್ತಾರದ ಮನೆಯನ್ನು ಮಾಡಿಕೊಂಡಿದ್ದು, ಹೊಸದಾಗಿ ಮೋಟಾರ್ ತೆಗೆದುಕೊಂಡಿದ್ದು ಅವಶ್ಯಕತೆಗಿಂತ ಹೆಚ್ಚಿನ ಪ್ರತಿಷ್ಠೆಯನ್ನು ತೋರಿಸುವುದಕ್ಕೆ ಪ್ರಯತ್ನಿಸುವುದು ಇವೆಲ್ಲಾ ಟೀಕಿಸಿದ್ದೆನೋ ಒಪ್ಪತಕ್ಕದ್ದೇ. ಏಕೆಂದರೆ ಈ ವಿಷಯಗಳಲ್ಲಿ ಅವಶ್ಯಕವಿದ್ದಷ್ಟು ಇದ್ದರೆ ಸಾಕು. ಉದಾಹರಣಾರ್ಥವಾಗಿ ಮೊನ್ನೆತಾನೆ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಹೊಸದಾಗಿ ಒಂದು ಮನೆಗೆ ಹೋದರು. ಹಿಂದೆ ಅವರು ಸ್ಪೀಕರ್ ಆಗಿದ್ದಾಗ ಒಂದು ಬಂಗಲೆಯ ಮುಂಭಾಗದಲ್ಲಿ ಅವರು ಇದ್ದೊಂಡು, ಹಿಂಭಾಗದಲ್ಲಿ ಒಬ್ಬ ಡೆಪ್ಯೂಟಿ ಮಿನಿಸ್ಟರ್‌ರವರಿದ್ದರು. ಪಕ್ಕದ ಬಂಗಲೆಯಲ್ಲಿ ಮಂತ್ರಿಗಳಾದ ಪಾಟೀಲ್‌ರವರಿದ್ದರು. ಹಾಗಿದ್ದವರು ಈಗ ಎರಡು ಮನೆಗಳೂ ತಮ್ಮ ಉಪಯೋಗಕ್ಕೆ ಬೇಕೆಂದು ಹೇಳಿ ತೆಗೆದುಕೊಂಡಿದ್ದಾರೆ. ಈಗೇನೋ ಒಂದನ್ನು ಬಿಟ್ಟುಕೊಡಲಿಕ್ಕೆ ಒಪ್ಪಿದ್ದಾರೆ ಸಂತೋಷ.ಈ ರೀತಿ ಕೆಲವು ವಿಷಯಗಳಲ್ಲಿ ತಿದ್ದುವಡಿ ಮಾಡಿಕೊಂಡು ಜನರಲ್ಲಿ ಅಸೂಯಾ ಭಾವನೆ ಬೆಳೆಯದಂತೆ ಮಂತ್ರಿಗಳು ವರ್ತಿಸುವುದು ಒಳ್ಳೆಯದು. ಈ ದೃಷ್ಟಿಯಿಂದ ನೋಡಿದರೆ ಕಾಂಗ್ರೆಸ್ಸಿನ ಧೋರಣೆ, ಕೀರ್ತಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆಂದು ನಾನು ಹೇಳತ್ತೇನೆ. ಟೀಕೆ ಮಾಡತಕ್ಕವರಿಗೂ ಕೂಡ ಅವಸರ ಅವಸರವಾಗಿ ಒಂದಕ್ಕೆ ಹತ್ತರಷ್ಟು ಅತಿರಂಜಿತೋಕ್ತಿಯಲ್ಲಿ ತುಚ್ಛವಾಗಿ ಹೇಳುವುದಕ್ಕೆ ಬದಲು ಅಯ್ಯಾ-ಅಪ್ಪಾ ಎಂದು ಒಳ್ಳೆಯ ಮಾತಿನಲ್ಲಿ ಹಾಗೆ ಮಾಡಿ, ಹೀಗೆ ಮಾಡಿ ಎಂದು ಸೂಚನೆಗಳನ್ನು ಕೊಡುವುದು ಒಳ್ಳೆಯದು ಮತ್ತು ಪರಿಣಾಮಕಾರಿಯಾಗುತ್ತದೆ.

ಇನ್ನು ಬಡ್ಜೆಟ್ಟಿನ ವಿಷಯವಾಗಿ ಹೇಳುವುದಾದರೆ ಸರ್ಕಾರದವರು ಮುಖ್ಯವಾಗಿ ಹಳ್ಳಿಗಳ ಸೌಕರ್ಯಗಳ ಬಗ್ಗೆ ಗಮನ ಕೊಡುವುದು ಅವಶ್ಯಕವಾಗಿದೆ. ಈ ದೃಷ್ಟಿಯಿಂದ ಏನೇನು ಮಾಡಬೇಕೆಂಬುದನ್ನು ನಾನು ಹೇಳುತ್ತೇನೆ.

ಒಟ್ಟಾರೆ ನೋಡುವುದಾದರೆ ಈ ಸರ್ಕಾರದವರು ಹಳ್ಳಿಗಳ ಕಡೆ ಹೆಚ್ಚುಗಮನ ಕೊಡುತ್ತಿಲ್ಲವೆಂಬುದು ಈ ಬಡ್ಜೆಟ್ಟಿನಲ್ಲಿ ಕಂಡುಬರುತ್ತದೆ. ಉದಾಹರಣೆಗಾಗಿ ಮಾರ್ಗ ಸೌಕರ್ಯ ನೋಡಿ. ಈ ವಿಷಯದಲ್ಲಿ ಈಗ ಆರು ಎಂಟು ವರ್ಷಗಳಿಂದಲೂ ಎಷ್ಟೋ ಬೇಡಿಕೆಗಳು ಬರುತ್ತಿವೆ. ಆ ಬೇಡಿಕೆಗಳಿಗನುಸಾರವಾಗಿ ಒಂದು ಮಾರ್ಗವು ನಿರ್ಮಾಣವಾಗುತ್ತಿಲ್ಲ. ನಿರ್ಮಾಣವಾದ ಮಾರ್ಗಗಳು ಒಳ್ಳೆಯ ರೀತಿಯಲ್ಲಿ ಇಡಲ್ಪಡುತ್ತಿಲ್ಲ ಈ ಮಾರ್ಗಗಳನ್ನು ಸರಿಯಾಗಿ ದುರಸ್ತಿಯಲ್ಲಿಡುವುದಕ್ಕೆ ಸೇತುವೆಗಳನ್ನು ಕಟ್ಟುವುದಕ್ಕೆ ತಾಲ್ಲೂಕ ಬೋರ್ಡುಗಳಲ್ಲಿ ದುಡ್ಡಿಲ್ಲವೆಂಬುದನ್ನು ಸರ್ಕಾರದವರೂ ಒಪ್ಪುತ್ತಾರೆ ಏನೇ ಇದ್ದರೂ ಹಳ್ಳಿಗಳ ಕಡೆ ಒಳ್ಳೆಯ ಮಾರ್ಗಗಳು ಇಲ್ಲದಿದ್ದರೆ ಅಲ್ಲಿ ಉತ್ಪತ್ತಿಯಾದ ಸಾಮಾನುಗಳು ಪಟ್ಟಣಗಳಿಗೆ ಬರುವುದಕ್ಕೆ ಸಾಧ್ಯವಿಲ್ಲ. ಪಟ್ಟಣಗಳ ಸಂಪರ್ಕವಿಲ್ಲದ ಮೇಲೆ ಹಳ್ಳಿಗಳಲ್ಲಿ ಬೆಳೆದ ವಸ್ತುಗಳಿಗೆ ಒಳ್ಳೆಯ ಧಾರಣೆ ಬರುವುದಿಲ್ಲ ಹಳ್ಳಿಗಳವರ ನಾಗರಿಕತೆಯೂ ಬೆಳೆಯುವುದಿಲ್ಲ. ಈ ದೃಷ್ಟಿಯಿಂದ ಹಳ್ಳಿಗಳ ಕಡೆ ಉತ್ತಮ ಸಂಚಾರ ಮಾರ್ಗಗಳನ್ನೇರ್ಪಡಿಸಿ ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಹಳ್ಳಿಗಳವರ ಪುರೋಭಿವೃದ್ಧಿಯಾಗಬೇಕೆಂದಿದ್ದರೆ, ನಿಮಗೆ ನಿಜವಾಗಿ ಸಮಾಜ ಸತ್ಕಾಲದಲ್ಲಿ ನಿಶ್ಚಿತ ನಂಬಿಕೆಯಿದ್ದರೆ ಹಳ್ಳಿಗಳ ಕಡೆ ಮಣ್ಣಿನ ರಸ್ತೆಗಳನ್ನಾದರೂ ಬೆಳಸಲಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಮೊನ್ನೆ ಹಳ್ಳಿಯಿಂದ ಬೆಂಗಳೂರಿಗೆ ಬಂದ ಕೆಲವು ಹಳ್ಳಿಯವರು ಇಲ್ಲಿನ ರಸ್ತೆಗಳನ್ನು ನೋಡಿ ನಮ್ಮ ದೇವರ ಮನೆ ಕೂಡ ಹೀಗಿಲ್ಲವಲ್ಲ, ಇಲ್ಲಿ ರಸ್ತೆಯ ಮೇಲೆಯೇ ಮಲಗಿಕೊಳ್ಳಲೇ ಎಂದು ಆಶೆಯಾಗುತ್ತದೆ ಎಂದುಕೊಂಡರು. ಆದ್ದರಿಂದ ಹಳ್ಳಿಗಳ ಜನರ ಕಷ್ಟವನ್ನೂ ನೀವು ನೋಡಬೇಕು. ಒಂದು ಮನೆ ಕಷ್ಟವನ್ನು ನೀವು ನೋಡಬೇಕು. ಒಂದು ಮನೆಯಿಂದ ಇನ್ನೊಂದು ಮನೆಗೆ ಹೋಗುವುದಕ್ಕೂ ಆಗುತ್ತಿರುವುದಿಲ್ಲ ಹತ್ತು ಸಾರಿ ಚಪ್ಪಲಿ ಒಗ್ಗಾಲಿಯಾಗಿರುತ್ತವೆ. ಈ ಕಷ್ಟಗಳನ್ನೆಲ್ಲಾ ನಾನು ವಿವರಿಸಿ ಹೇಳಿ ಹೊರಡಲಾರೆ. ದಯವಿಟ್ಟು ನಿಮ್ಮ ಪುನರಚನೆಯ ಕೆಲಸದಲ್ಲಿ 3/4 ಭಾಗವನ್ನಾದರೂ ಹಣವನ್ನು ಹಳ್ಳಿಗಳಿಗೆ ಕೊಡಬೇಕು. ದೊಡ್ಡ ನೀರಾವರಿ ತೆಗೆದುಕೊಳ್ಳಿ, ವಿದ್ಯುಚ್ಛಕ್ತಿಯ ವಿಷಯವನ್ನು ತೆಗೆದುಕೊಳ್ಳಿ, ಶಿಕ್ಷಣ, ಮಾರ್ಗಸೌಕರ್ಯ ಯಾವುದೇ ತೆಗೆದುಕೊಳ್ಳಿ ಹಳ್ಳಿಗಳು ಹಿಂದುಳಿದಿವೆ. ಮಾರ್ಗ ಸೌಕರ್ಯ ಎಲ್ಲಿದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ವ್ಯವಹಾರ ಮಾಡಿ ಹಣ ಸಹಾಯವನ್ನು ನಿವಾರಣೆಗಾಗಿ ಪಡೆಯಲು ಕೈ ಹಚ್ಚಬೇಕು. ಕೆಲವು ನನ್ನ ಸ್ನೇಹಿತರು ಇಲ್ಲ ಸಲ್ಲದ ಆರೋಪಣೆಗಳನ್ನು ಮಾಡಿದರು. ಅವುಗಳಿಂದ ಏನೂ ಪ್ರಯೋಜನವಿಲ್ಲ. ಮತ್ತೊಮ್ಮೆ ನಮ್ಮ ಸರ್ಕಾರದವರು ಹಳ್ಳಿಗಳ ಅಭಿವೃದ್ಧಿ ಕಡೆ ಹೆಚ್ಚಿನ ಹಣ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಪ್ರದೇಶದಲ್ಲಿರತಕ್ಕ ಕೆಂಪು ಭೂಮಿಯೊಳಗೆ ನಮ್ಮ ಜನಗಳಿಂದ ಬಲವಂತದಿಂದಾದರೂ ಸಾಗು ಮಾಡಿಸುವ ಪ್ರಯತ್ನ ಮಾಡಬೇಕು . ಕನಿಷ್ಟ ಒಂದೊಂದು ತಾಲ್ಲೂಕಿನೊಳಗೆ ಅಥವಾ ಒಂದೊಂದು ಜಿಲ್ಲೆಯೊಳಗೆ ಈ ಯೋಜನೆಯನ್ನು ಕಾರ್ಯಗತ ಮಾಡಬೇಕು. ಪ್ರತಿಯೊಂದು ಗ್ರಾಮದಲ್ಲೂ

ಈ ಗ್ರೋ-ಮೋರ್-ಫುಡ್ ಕಾಂಪೇನನ್ನು ಜಾರಿಗೆ ತರುವ ಪೈರು ಹೆಚ್ಚು ಬೆಳೆಯುವಂತೆ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಪರದೇಶಗಳಿಂದ ಟ್ರ್ಯಾಕ್ಟರುಗಳನ್ನು ಮತ್ತು ಬುಲ್‌ಡೋಜರುಗಳನ್ನು ತರಿಸುವುದು ಬಹಳ ಒಳ್ಳೆಯದು. ಆದರೆ ಅನೇಕ ಲಗ್ಜುರಿ ಸಾಮಾನುಗಳನ್ನು ತರಿಸುವುದನ್ನು ಮಾತ್ರ ಕೂಡಲೇ ನಿಲ್ಲಿಸಿ, ಒಕ್ಕಲುತನದ ಅಭಿವೃದ್ಧಿಗೆ ಮತ್ತು ಭೂಸುಧಾರಣೆಗೆ ಬೇಕಾದಂತಹ ಉಪಯುಕ್ತವಾದ ಸಾಮಾನುಗಳನ್ನು ತಾವು ತರಿಸುವುದಕ್ಕೆ ಪ್ರಯತ್ನ ಮಾಡಬೇಕು. ಒಂದೊಂದು ಹಳ್ಳಿಯಲ್ಲೂ ಹೆಚ್ಚಿಗೆ ಆಹಾರ ಬೆಳೆಯಲಿಕ್ಕೆ ಸಕಲ ಪ್ರಯತ್ನಗಳನ್ನು ಮಾಡಿ ಆ ಬೆಳೆಗಳಿಗೆ ಸರಿಯಾಗಿ ಉತ್ತಮ ಬೆಲೆ ದೊರೆಯುವಂತೆ ಸರ್ಕಾರದವರು ಏರ್ಪಾಡು ಮಾಡುವುದು ಈಗಿನ ಸಂದರ್ಭದಲ್ಲಿ ಅತ್ಯಗತ್ಯವಾಗಿದೆ. ಇನ್ನು ತಾವು ಕೆಲವು ಕರಗಳನ್ನು ಬೇರೆ ಸೂಚಿಸುತ್ತಿದ್ದೀರಿ. ಆದರೆ ಹಳ್ಳಿಗಾಡುಗಳಲ್ಲಿ ಸರಿಯಾದ ಉತ್ಪನ್ನ ಬಾರದಿದ್ದರೂ ಅವರಿಂದ ಅಪ್ರತ್ಯಕ್ಷವಾಗಿಯಾದರೂ ಸರ್ಕಾರಕ್ಕೆ ಬಹಳ ಲಾಭ ಸಿಗುತ್ತಿದೆ. ಆದರೂ ಹಳ್ಳಿಗಾಡುಗಳಲ್ಲಿ ಹೆಚ್ಚಿನ ಮಟ್ಟಿಗೆ ಅಭಿವೃದ್ಧಿ ಕೆಲಸಕಾರ್ಯಗಳು ಚೆನ್ನಾಗಿ ನಡೆಯುತ್ತಿಲ್ಲ. ನಮ್ಮ ಕಡೆ ಷೆಡ್ಯೂಲ್ ಕ್ಯಾಸ್ಟ್ ಹಾಸ್ಟೆಲ್ ತೆಗೆಯುತ್ತೇವೆಂದು ಕಳೆದ ಸೆಪ್ಟೆಂಬರ್‌ನಲ್ಲಿಯೇ ಆಶ್ವಾಸನೆಯನ್ನು ಕೊಟ್ಟಿದ್ದರು. ಹಾಸ್ಟೆಲ್ ಕೇವಲ 60 ಸಾವಿರ ರೂಪಾಯಿಗಳಲ್ಲಿ ಆಗುವುದಿಲ್ಲ ಮತ್ತೆ 40 ಸಾವಿರ ರೂಪಾಯಿಗಳು ಬೇಕು ಎಂದು ಹೇಳಿದರು. ಅದೇನಾಯಿತೋ ಗೊತ್ತಿಲ್ಲ. ಅದು ಇನ್ನೂ ರೆಡ್‌ಟೇಪಿಜಂ ಒಳಗೆ ಓಡಾಡುತ್ತಿದೆ. ಏನು ಕಾರಣವೆಂಬುದನ್ನು ಸರ್ಕಾರದವರು ವಿಚಾರ ಮಾಡಬೇಕು. ಹರಿಜನ ಗಿರಿಜನರನ್ನು ಹೆಚ್ಚಿಗೆ ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಮುಂದಿನ ಚುನಾವಣೆಯ ಹೊತ್ತಿಗೆ ಇದೆಲ್ಲಾ ಸರಿಯಾದ ರೀತಿಯಲ್ಲಿ ಆಗಬೇಕೆಂಬ ಗುರಿಯನ್ನು ಸರ್ಕಾರದವರು ಇಟ್ಟು ಕೊಂಡು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕು ಎಂಬುದಾಗಿ ನಾನು ಸಲಹೆ ಮಾಡುತ್ತೇನೆ. ಒಂದು ಉತ್ತಮ ಮನೋವೃತ್ತಿಗೆ ಬೆಳೆದುಕೊಂಡು ಬರುವ ಹಾಗೆ ಶಿಕ್ಷಣ ತಳಹದಿಯನ್ನು ಹಾಕಬೇಕು. ಈ ವಿಷಯವನ್ನು ನಾನು ಹೋದ ಸಾರಿ ಬಡ್ಜೆಟ್ ಭಾಷಣ ಮಾಡುವಾಗಲೂ ಹೇಳಿದ್ದೇನೆ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೆಸಿಡೆನ್ಸಿಯಲ್ ರಿಲಿಜಿಯಸ್ ಸ್ಕೂಲ್ ಅದರಲ್ಲೂ ಆಧ್ಯಾತ್ಮಿಕ ವಿಚಾರ ತಳಹದಿ ಇರತಕ್ಕ ಶಾಲೆಗಳನ್ನು ಏರ್ಪಾಡು ಮಾಡಬೇಕು ಕೆಲವು ಶಿಕ್ಷಣ ಅಧಿಕಾರಿಗಳನ್ನು ಅದಕ್ಕಾಗಿ ನೇಮಿಸಬೇಕು ಈಗ ಮೈಸೂರಿನಲ್ಲಿರತಕ್ಕ ಶ್ರೀ ರಾಮಕೃಷ್ಣಾಶ್ರಮ ನಮೂನೆಯಲ್ಲಿ ಕೆಲವು ಆಧ್ಯಾತ್ಮಿಕ ಶಾಲೆಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಬೇಕು. ಇನ್ನು ಗೃಹ ಕೈಗಾರಿಕೆಗಳ ವಿಷಯದಲ್ಲಿ ಸರ್ಕಾರದವರು ಸೂಕ್ತವಾದ ವ್ಯವಸ್ಥೆಗಳನ್ನು ಏರ್ಪಾಡು ಮಾಡಿ ಆ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿಗೆ ಹಣ ಸಹಾಯ ಮಾಡಿ ಬಡಜನರ ಹಿತವನ್ನು ಸಾಧಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

# ಹಂಚಿನಾಳ ಗ್ರಾಮ ಜನರ ಪುರ್ನವಸತಿ

**ಶ್ರೀ ಎ.ಜೆ ದೊಡ್ಡಮೇಟಿ** (ರೋಣ)**:** ಸರಕಾರ ತಿಳಿಸುವ ಕೃಪೆ ಮಾಡಬೇಕು.

ಹಿಂದಿನ ಜಮಖಂಡಿ ಸಂಸ್ಥಾನದ ಕುಂದಗೋಳ ಪೇಠಾದಲ್ಲಿ ಬರುವ ಹಂಚಿನಾಳ ಗ್ರಾಮವು ಹಳ್ಳದಿಂದ ಸುತ್ತುವರಿದಿದ್ದು ಮಳೆಗಾಲದಲ್ಲಿ ಅಲ್ಲಿಯ ಜನರ ಮನೆ-ಮಠ ಆಸ್ತಿಗಳು ಹಾಳಾಗುತ್ತಿರುತ್ತವೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಎ.ಜೆ. ದೊಡ್ಡಮೇಟಿ (ರೋಣ):** ಸ್ವಾಮಿ ವಿಳಂಬವಾದ ವಿಲಕ್ಷಣವಾದ ಸಮನ್ವಯವನ್ನು ಈ ವಿಧೇಯಕದಲ್ಲಿ ಮಾಡಲಾಗಿದೆ. ಸಮನ್ವಯ ಇದು ವಿಲಕ್ಷಣ ಈ ವಿಲಕ್ಷಣವನ್ನು ಸಮನ್ವಯ ಮಾಡುವ ಬುದ್ಧಿವಂತಿಕೆಯನ್ನು ಕಂದಾಯ ಮಂತ್ರಿಗಳು ತೋರಿಸಿದ್ದಾರೆ ಮತ್ತು ಅವರು ರೈತ ಹಿತವನ್ನು ಒಳ್ಳೆಯ ಸ್ಥಿರಮನಸ್ಸಿನಿಂದ ಕಾಯುವವರು ಎನ್ನುವುದರಲ್ಲಿ ನಾವು ಯಾರೂ ಅನುಮಾನ ಪಡಬೇಕಾದ ಕಾರಣವಿಲ್ಲ. ಶ್ರೀಮಾನ್ ಎ.ಎಸ್. ಪಾಟೀಲ್ ರವರು ಸಹ ಅಷ್ಟೇ ನಿರ್ದಿಷ್ಟ ಭಾವದಿಂದ ಅವರ ಮೇಲೆ ವಿಶ್ವಾಸ ವಿಡಬೇಕು ಈಗ ನಾಲ್ಕೈದು ದಿವಸಗಳ ಈ ಚರ್ಚೆಯನ್ನು ಸೂಕ್ಷ್ಮವಾಗಿ ಅವಲೋಕಿಸುವಲ್ಲಿ ಕಾಂಗ್ರೇಸ್ ಪಕ್ಷದವರೂ ಮಾತನಾಡಿದ್ದಾರೆ. ಪಿ.ಎಸ್.ಪಿ.ಪಕ್ಷದವರೂ ಸ್ವತಂತ್ರರೂ ಮಾತನಾಡಿದ್ದಾರೆ ಅದರಂತೆ ಬ್ರಾಹ್ಮಣೇತರರೂ ಮಾತನಾಡಿದ್ದಾರೆ. ಈ ಎಲ್ಲ ಭಿನ್ನ ಪಕ್ಷ ಹಾಗೂ ಮತಿಯರಲ್ಲಿ ಈ ವಿಧೇಯಕದ ಬಗ್ಗೆ ಹಲವೊಂದು ಮಹತ್ವದ ಸಂದರ್ಭಗಳಲ್ಲಿ ಎಲ್ಲರೂ ಏಕಾಭಿಪ್ರಾಯವನ್ನು ತೋರಿದ್ದಾರೆ. ಇದು ಏಕೆ ಹೇಳುತ್ತೇನೆ ಎಂದರೆ ಇದನ್ನು ನೋಡಿದಲ್ಲಿ ಪಕ್ಷ ಮತ್ತು ಜಾತಿ ಎನ್ನುವ ಪ್ರಚಾರವು ಎಷ್ಟರ ಮಟ್ಟಿಗೆ ನಿಜಾಂಶದಿಂದ ಕೂಡಿದೆ ಎಂಬುದು ವೇದ್ಯವಾಗುತ್ತದೆ.

ಯಾರಿಗೆ ಭೂಮಿ ಇದೆ. ಆ ಇದ್ದ ಭೂಮಿಯನ್ನು ಯಾರು ಏನೂ ಶ್ರಮಪಡದೇ, ಬೇರೆಯವರ ದುಡಿಮೆಯನ್ನು ಅವಲಂಬಿಸಿ ತಾವು ಐ.ಎ.ಎಸ್. ಅನ್ನು ಅಥವಾ ಮತ್ತಾವ ಪರೀಕ್ಷೆಯನ್ನೋ ಪಾಸು ಮಾಡಿಕೊಂಡು ಮೇಲುಪ್ಪರಿಗೆಯ ಮನೆಯ ಮೇಲೆ ಕುಳಿತುಕೊಂಡು ಎರಡು ಸಾವಿರ, ನಾಲ್ಕು ಸಾವಿರ ರೂಪಾಯಿ ವೇತನ ತೆಗೆದುಕೊಳ್ಳುವವರದು ಒಂದು ಜಾತಿ, ಇನ್ನಿತರರು ಮತ್ತೊಂದು ಜಾತಿ ಎಂದು ತಾನೇ ಕಂಡುಬರುತ್ತದೆ.

ಒಟ್ಟಿನಲ್ಲಿ ಹೇಳುವುದೇನೆಂದರೆ ಈ ಬಗ್ಗೆ ಪಕ್ಷವೂ ಇಲ್ಲ, ಜಾತಿಯೂ ಇಲ್ಲ ರೈತರು ಒಬ್ಬರು ಮತ್ತು ಆ ರೈತರನ್ನು ಉಪಯೋಗ ಮಾಡಿಕೊಳ್ಳುವವರು ಇನ್ನೊಬ್ಬರು. ಹೀಗಿರುವುದು ಇಂದಿನ ನಿಜವಾದ ಚಿತ್ರ. ಇದು ನಮ್ಮ ಕಣ್ಣೆದುರಿಗೆ ಕಾಣುತ್ತಿದೆ.

ಈ ಚಿತ್ರವನ್ನು ವಿಚಾರ ಮಾಡಿದ್ದಲ್ಲಿ ಈ ಸಮಸ್ಯೆಯನ್ನು ಕಂದಾಯ ಮಂತ್ರಿಗಳು ಸಮನ್ವಯವಾಗಿ ಬಿಡಿಸಿದ್ದಾರೆಂದು ನಾನು ಹೇಳಬಲ್ಲೆ. ಭೂಮಾಲಿಕತ್ವದ ಪದ್ಧತಿಯಲ್ಲಿಯ ನಾನಾ ಪ್ರಕಾರವನ್ನು ಅವರು ಈ ವಿಧೇಯಕವನ್ನು ತರುವ ಮೊದಲು ಸಮನ್ವಯಗೊಳಿಸಿದ್ದಲ್ಲಿ

ಹೆಚ್ಚು ಸುಗಮವಾಗುತ್ತಿತ್ತು. ಭೂಸುಧಾರಣ ಪದ್ಧತಿಯಲ್ಲಿ ಈಗ ಏಕರೂಪತೆ ಇಲ್ಲಿ ಕೆಲವರು ಸರಂಜಾಮದಾರರು, ಕೆಲವರು ಹಲವು ವಿಧದ ಇನಾಂದಾರರು, ಕೆಲವರು ವತನದಾರರು, ಇನ್ನೂ ಕೆಲವರು ಹಣಕೊಟ್ಟು ಅದರಿಂದ ಜಮೀನನ್ನು ಶೋಧನೆಗಾಗಿ ಇಲ್ಲವೇ ಜೀವನದ ಭದ್ರತೆಗಾಗಿ, ತೆಗೆದುಕೊಂಡಿರುವವರು, ಕೆಲವರು ಅದರಲ್ಲಿ ಉದ್ಯೋಗ ಮಾಡಬೇಕೆಂದು ಹಣ ಕೊಟ್ಟು ಭೂಮಿಯನ್ನು ತೆಗೆದುಕೊಂಡಿರುವವರೂ ಇದ್ದಾರೆ. ಆ ಕಾರಣಕ್ಕಾಗಿ ಬೇರೆ ಬೇರೆ ಭೂಸುಧಾರಣೆ ಮಾಡುವವರಲ್ಲಿ ಸಮನ್ವಯ ಮಾಡಬೇಕಾದರೆ ಸಾಮಾನ್ಯವಾಗಿ ಎರಡು ಭಾಗವಾಗಿ ವಿಂಗಡಿಸಬಹುದು. ಏನೆಂದರೆ ವಂಶಪಾರಂಪರ್ಯವಾಗಿ ಶಾಶ್ವತವಾಗಿ ನಿರ್ದಿಷ್ಟವಾದ ಉತ್ಪನ್ನ ನಾಲ್ಕಾರು ಗಾಡಿಗಳಲ್ಲಿ ತುಂಬಿ ತಾನು ಲೋಡಿಗೆ ವರಗಿಕೊಂಡು ಇದ್ದರೂ ಬರಬೇಕು ಎನ್ನುವ ಮನೋಭಾವದ ಜನ ಒಂದು ವಿಧ ಮತ್ತೆ ಭೂಮಿ ತಾಯಿಯ ಸೇವೆ ಮಾಡಿ ಅದರಿಂದ ಉತ್ಪನ್ನ ತೆಗೆದು ಊಟ ಮಾಡಬೇಕೆಂಬ ಭೂಮಾಲೀಕರದು ಇನ್ನೊಂದು ವಿಧ. ಇದರಲ್ಲಿ ಮೊದಲನೆಯ ವರ್ಗದವರ ಮಟ್ಟಿಗೆ ನಾವು ಹೆಚ್ಚಿಗೆ ಸಹಾನುಭೂತಿ ತೋರಿಸುವ ಅಗತ್ಯವಿಲ್ಲವೆಂದು ನನ್ನ ಅಭಿಪ್ರಾಯವಾಗಿದೆ. ಆದರೆ ಎರಡನೆಯ ವರ್ಗದ ಭೂಮಾಲೀಕರ ವಿಷಯದಲ್ಲಿ ಮಾತ್ರ ಸರಕಾರವು ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗಿದೆ.

ಸೀಲಿಂಗ್ ಬಗ್ಗೆ ಕೆಲವು ಮಾತುಗಳನ್ನು ಆಡಲಿಷ್ಟ ಪಡುತ್ತೇನೆ. ಸೀಲಿಂಗು ಪರಸನಲ್ ಕಲ್ಟಿವೇಶನ್ ಇರಬೇಕೋ ಬೇಡವೋ ಎನ್ನುವುದು ಒಂದು ಪ್ರಶ್ನೆ. ವ್ಯವಸಾಯದ ಉದ್ಯೋಗವನ್ನೇ ಯಾರು ಅನುಭವಿಸಿಕೊಂಡಿರುತ್ತಾರೋ ಅಂತಹ ರೈತರ ಉದ್ಯೋಗದ ಮೇಲೆ ನಾವು ನಿರ್ಬಂಧವನ್ನು ಹಾಕುವುದು ಸಾಧ್ಯವೆ ಹೇಗೆ? ಇದಕ್ಕೆ ನಿರ್ಬಂಧ ಹೈ ಕಮಾಂಡಿನಿಂದಾಗಲೀ ಇಲ್ಲವೇ ಲೋ ಕಮಾಂಡಿನಿಂದಾಗಲೀ ಬರಲಿ ಹೈಕಮಾಂಡಿನಿಂದ ಬಂದದ್ದೇ ಪೂರ್ಣವಾಗಿರುತ್ತದೆನ್ನುವ ಮನೋಭಾವನೆ ಇರಬಾರದು. ಇದು ಯಾವ ಕಮ್ಯಾಂಡಿನಿಂದಲೇ ಬರಲಿ, ಲೋ ಕಮಾಂಡನ್ನು ಅಭ್ಯಾಸ ಮಾಡದೇ ಹೈ ಕಮ್ಯಾಂಡಿನಿಂದಲೇ ಬರಲಿ ಲೋ ಕಮಾಂಡನ್ನು ಅಭ್ಯಾಸ ಮಾಡದೇ ಹೈ ಕಮ್ಯಾಂಡಿನಿಂದ ಒಮ್ಮೆಲೇ ಬರುತ್ತದೆ ಎಂದರೆ ಸರಿಯಾಗಿರುವುದೆಂದು ಹೇಳಲಿಕ್ಕಾಗುವುದಿಲ್ಲ ಕೆಂಪು,ಹುಳುಕು, ಎಂಥೆದ ತರಹದೋ ಭೂಮಿ ತರುತ್ತದೆ. ಇದನ್ನು ಎಂತಹದು ಎಂದು ವಿಚಾರ ಮಾಡುವುದಿಲ್ಲ. ಅನೇಕ ವೇಳೆ ಭೂ ಸುಧಾರಣೆಯನ್ನು ವಿಚಾರ ಮಾಡುವಾಗ ಕೊಡುವುದು ತಪ್ಪಾಗಿ ಹೋಗುತ್ತದೆ. ಸೀಲಿಂಗ್ ಮಟ್ಟಿಗೆ ಹಾಗೂ ವೈಯಕ್ತಿಕ ಸುಖಕ್ಕಾಗಿ ನಿರ್ಬಂಧ ಹಾಕುವುದಾದರೆ ಟೆನೆಂಟಿಗೆ ಹಾಕವುದಾದರೂ ಚಿಂತೆಮಾಡುವುದಿಲ್ಲ ಏಕೆಂದರೆ ಇದರ ಪರಿಣಾಮ ಹೇಗಾದರೂ ಯಾವುದೋ ಒಂದು ಉತ್ಪತ್ತಿ ಮಾಡುವ ಉದ್ಯೋಗದ ಮೇಲೆ ಅವಲಂಬಿಸಿರಬೇಕು, ಇದರೊಳಗೆ ಪ್ಲಾಂಟೇಶನ್‌ಗಳಿಗೆ ತಾವು ಸೀಲಿಂಗು ಹಾಕದೆ ಇನ್ನೊಂದು ಭಾಗಕ್ಕೆ ಹಾಕುವುದಾದರೂ ಪ್ರತಿಗ್ರಾಹಿ ಸಮಾಜದೊಳಗೆ ನಿರ್ಮಾಣ ಹೇಗೆ ಆಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕು. ಪ್ಲಾಂಟೇಷನ್ನುಗಳಿಗೆ ಹಾಕದಿರುವದಕ್ಕೆ ತಮಗಿರುವ ಅನಾನುಕೂಲತೆಗಳೇ ಕಾರಣ ಎಂದು

ನಾನು ಆ ರೀತಿ ಭಾವಿಸುತ್ತೇನೆ ಪ್ಲಾಂಟೇಶನ್ನುಗಳಿಗೆ ಸಹಕರಿಸಲು ಏನು ತೊಂದರೆ ಇದೆ ಎಂದರೆ, ಇದನ್ನು ಬಹುಕಾಲದಿಂದಲೂ ಸಹ ಇನ್‌ವೆಸ್ಟ್ ಮಾಡಿ ಅನೇಕ ರೀತಿಯ ತೊಂದರೆಗಳನ್ನು ಪಟ್ಟುಕೊಂಡು ಮಾಡಿರುವ ಟೆನೆಂಟಗಳಿಂದ ಕಿತ್ತುಕೊಳ್ಳುವುದು ಕಷ್ಟ. ಆ ಭೂಮಿಯ ಸ್ವಾಮಿತ್ಯ ಯಾವ ರೀತಿ ಬಂದಿದೆ? ಅದನ್ನು ಸರಿಯಾದ ರೀತಿಯಲ್ಲಿ ಖರೀದಿಕೊಟ್ಟು ತೆಗೆದುಕೊಂಡವರದು ಒಂದು ಜಾತಿ, ಸಹಜವಾಗಿ ಬಂದಿರುವಂತಹದು ಎಂದರೆ ಯಾರ ದಯದಿಂದಲೋ ಬಂದಿರುವಂತಹದು ಎಂದು ತಿಳಿದುಕೊಂಡು ಕೊಡಬೇಕು, ಆದರೆ ನೀವು ಇನ್ನೊಬ್ಬರ ಸಲುವಾಗಿ, ಇದನ್ನು ಸ್ವಲ್ಪ ವಿಚಾರ ಮಾಡಬೇಕು, ಯಾರು ಸುಲಭವಾಗಿ ಮಾರುತ್ತಾರೋ ಅದರ ಬೆಲೆಯನ್ನು ನಿರ್ಣಯ ಮಾಡುವಾಗ ಮುಂದೆ ಅದರ ಬೆಲೆಯನ್ನು ಸರಿಯಾಗಿ ನಿರ್ಣಯ ಮಾಡಿ ಅದರ ಬೆಲೆಯನ್ನು ಕೊಡಿರಿ.ಆದರೆ ಸರಕಾರ ಪರಿಹಾರ ಕೊಡುವಾಗ ಈ ಮಾತನ್ನು ಲಕ್ಷ್ಯದಲ್ಲಿಡಬೇಕು. ಇದಕ್ಕೆ ಸರಿಯಾದ ಪ್ರಾವಿಷನನ್ನು ಮಾಡಬೇಕು. ಉದ್ಯೋಗದ ಸಲುವಾಗಿ ಭೂಮಿಯಲ್ಲಿ ವ್ಯವಸಾಯ ಮಾಡವವರ ಸಲುವಾಗಿ ಒಂದು ಮಾರ್ಗ.

**ಶ್ರೀ ಕಡಿದಾಳ್ ಮಂಜಪ್ಪ:** ಅದು ಹೇಗೆ ಮಾಡಬೇಕು?

**ಶ್ರೀ ಎ.ಜೆ ದೊಡ್ಡಮೇಟಿ:** ನಿಮ್ಮ ರಿಕಾರ್ಡುಗಳನ್ನೇ ನೋಡಿದರೆ ನಿಮಗೆ ಗೊತ್ತಾಗುತ್ತದೆ. ಆದರೆ ಈಗ ರೊಕ್ಕಕೊಟ್ಟು ತೆಗೆದುಕೊಂಡಿರುವವರು,ಎರಡು ವರ್ಷಕ್ಕೆ ಹಿಂದೆ ಅಥವಾ ನಾಲ್ಕು ವರ್ಷಕ್ಕೆ ಹಿಂದೆ ತೆಗೆದುಕೊಂಡಿರುವ ರೈತರು ಹೇಗೆ ಸಾಗು ಮಾಡಬೇಕು?

## ಆಹಾರ ಧಾನ್ಯ ಸಂಗ್ರಹ

**ಶ್ರೀ ಎ.ಜೆ. ದೊಡ್ಡಮೇಟಿ (ರೋಣ):** ಸ್ವಾಮಿ, ನಮ್ಮ ಸರ್ಕಾರದವರು ತ್ವರಿತವಾಗಿ ಕೇಂದ್ರದಿಂದ ಆಹಾರ ಧಾನ್ಯವನ್ನು ನಮ್ಮ ರಾಜ್ಯಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಆದರೆ ಇಷ್ಟರಿಂದಲೇ ನಮ್ಮ ಒಂದು ಕೆಲಸ ಪೂರ್ತಿ ಆಯಿತು ಎಂದು ನಮಗೆ ಕಾಣುವುದಿಲ್ಲ. ಹೆಚ್ಚಿನ ಆಹಾರ ಧಾನ್ಯಗಳ ಪೂರೈಕೆ ಆಗಬೇಕಾದರೆ ನಾನು ಕೆಲವೊಂದು ಸೂಚನೆಯನ್ನು ಮಾಡುತ್ತೇನೆ. ಸರ್ಕಾರದ ಗೊಡಾನಿನಲ್ಲಿ ಸೊಸೈಟಿಗಳಲ್ಲಿ ಮತ್ತು ವರ್ತಕರ ಏನೊಂದು ಆಹಾರ ಧಾನ್ಯದ ಸಂಗ್ರಹ ಇದೆ ಎನ್ನುವಂತಹ ಒಂದು ಮಾಹಿತಿಯನ್ನು ಸರ್ಕಾರದವರು ಸಂಗ್ರಹ ಮಾಡಬೇಕು ಮತ್ತು ಒಳಗಡೆ ಇರತಕ್ಕ ಆಹಾರ ಧಾನ್ಯವನ್ನು ಹೊರಗಡೆಗೆ ತೆಗೆದು ಅದನ್ನು ವಿತರಣೆ ಮಾಡುವುದಕ್ಕೆ ಏನು ಕ್ರಮವನ್ನು ಅನುಸರಿಸಬೇಕು ಎನ್ನುವುದನ್ನು ವಿಚಾರ ಮಾಡಬೇಕು. ಸಹಕಾರ ಸಂಘಗಳ ಗೊಡಾನ್ ವರ್ತಕರ ಗೊಡಾನ್, ಇವುಗಳಲ್ಲಿ ಆಹಾರ ಧಾನ್ಯ ಏನಿದೆಯೋ ಅದನ್ನು ಆದಷ್ಟು ಜಾಗ್ರತೆ

ಹೊರಗಡೆ ತೆಗೆಯುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕು ಈಗ ಆಹಾರ ಧಾನ್ಯಗಳ ಬೆಲೆ ಏರಿಕೆ ಏನಿದೆಯೋ ಅದನ್ನು ಇಳಿಸಿ ಒಂದು ಅವರೇಜ್ ರೇಟ್ ನಿಗದಿ ಮಾಡುವುದಕ್ಕೆ ಸರ್ಕಾರದವರು ಏನಾದರೂ ಯೋಜನೆ ಮಾಡಿದ್ದಾರೆಯೇ ಹೇಗೆ ಎಂಬುದನ್ನು ಹೇಳಬೇಕು. ಏತಕ್ಕೆಂದರೆ ಇದರಲ್ಲಿ ಎರಡು ಮಗ್ಗುಲೂ ಹರಿಯುತ್ತವೆ.ಆಹಾರ ಧಾನ್ಯಗಳ ಬೆಲೆಗಳನ್ನು ಇಳಿಸಿದರೆ ರೈತನಿಗೆ ತೊಂದರೆಯಾಗುತ್ತದೆ. ಇನ್ನೊಂದು ಕಡೆ ಆಹಾರ ಧಾನ್ಯಗಳ ಬೆಲೆಗಳು ಏರಿದರೆ ಬಡಬಗ್ಗರಿಗೆ ತೊಂದರೆಯಾಗುತ್ತದೆ. ಇದರಲ್ಲಿ ಯಾರಿಗೂ ಉತ್ಸಾಹವಿಲ್ಲ. ರೈತನಿಗೆ ಆದಾಯ ಕಡಿಮೆಯಾಗಬಾರದು ಉತ್ಪತ್ತಿ ಕಡಿಮೆಯಾಗಬಾರದು ಎಂದು ಎಷ್ಟೋ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಆಹಾರ ಧಾನ್ಯಗಳ ಬೆಲೆ ಎಷ್ಟೇ ಏರಿದರೂ ಸಹ ಅದು ರೈತನಿಗೆ ಸಿಕ್ಕುವುದಿಲ್ಲ. ಒಂದು ವೇಳೆ ಅದು ಸಿಕ್ಕಿದರೂ ಕೂಡ ವ್ಯವಸಾಯ ಉದ್ಯೋಗ ಎನ್ನುವುದು ಲಾಭದಾಯಕವಾದ ಉದ್ಯೋಗವಾಗಿಯೇ ಎಂಬುದನ್ನು ಸರ್ಕಾರದವರು ಸಂಪೂರ್ಣವಾಗಿ ವಿಚಾರ ಮಾಡಬೇಕು. ಈಗ ನಾವು ಅಭಾವ ದೃಷ್ಟಿಯಿಂದ ವಿವಾದ ಮಾಡುವುದಾದರೆ ಯಾವ ಯಾವ ಹಳ್ಳಿಯಲ್ಲಿ ಮಳೆ ಆಗಿದೆ ಯಾವ ಯಾವ ಹಳ್ಳಿಯಲ್ಲಿ ಮಳೆ ಆಗಿಲ್ಲ ಎನ್ನುವುದನ್ನು ನೋಡುವುದಾದರೆ ಇದು ಬಹಳ ವಿಚಿತ್ರವಾದ ಮಾತಾಗುತ್ತದೆ.ಕೆಲವು ಕಡೆ ಮಳೆ ಆಗಿದೆ. ಕೆಲವು ಕಡೆ ಮಳೆ ಆಗಿಲ್ಲ ರೋಣ ತಾಲ್ಲೂಕಿನಲ್ಲಿ ಪಶ್ಚಿಮ ಭಾಗದಲ್ಲಿ ವಿಶೇಷವಾಗಿ ಮಳೆ ಆಗಿದೆ ಎಂದು ವರದಿ ಬಂದಿದೆ ಆದರೆ ದಕ್ಷಿಣ ಭಾಗದಲ್ಲಿ 10-18 ಹಳ್ಳಿಗಳಲ್ಲಿ ಪೂರ್ತಿ ಮಳೆ ಆಗಿಲ್ಲ. ಬಿತ್ತನೆ ಸಹ ಸರಿಯಾಗಿ ಆಗಿಲ್ಲ ಎಂದು ನನಗೆ ಕೆಲವಾರು ಕಾಗದಗಳು ಬಂದಿವೆ. ಈ ಮಾತನ್ನು ಸರಿಯಾಗಿ ವಿಚಾರ ಮಾಡಬೇಕು. ಸರ್ಕಾರಿ ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ ತಾಲ್ಲೂಕು ಕೇಂದ್ರಗಳಲ್ಲಿ ಮಳೆಯು ಬಿದ್ದಾಗ ಅದನ್ನು ಅಳೆಯತಕ್ಕಂಥ ಮಾಪಕಗಳನ್ನು ಇಟ್ಟಿರುತ್ತಾರೆ. ಅಲ್ಲಿ ಒಂದು ವೇಳೆ ಮಳೆ ಬಿದ್ದರೆ ಅದನ್ನು ನೋಡಿಕೊಂಡು ಇಡೀ ತಾಲ್ಲೂಕಿನಲ್ಲಿಯೇ ಮಳೆಯಾಗಿದೆ ಎಂದು ಇಡೀ ತಾಲ್ಲೂಕಿನಡೆ ಅದನ್ನು ಅನ್ವಯಿಸುವುದು ಸರಿಯಲ್ಲ. ಈ ದೃಷ್ಟಿಯಿಂದ ಅಲ್ಲಿ ಏನು ನಿಜವಾದ ಪರಿಸ್ಥಿತಿಯಿದೆ ಎನ್ನುವ ವಿವರಗಳನ್ನು ಸರಿಸಿಕೊಂಡು, ಅದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಈಗ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುವಾಗ ಹೊಸ ಮಾರ್ಗಗಳನ್ನು ತೆಗೆದುಕೊಳ್ಳುವುದಕ್ಕಿಂತ ಹಳೆಯ ಮಾರ್ಗಗಳು ಎಂದರೆ ಪಬ್ಲಿಕ್ ವರ್ಕ್ಸ್ ರೋಡುಗಳು, ಮತ್ತು ತಾಲ್ಲೂಕು ಬೋರ್ಡು ರಸ್ತೆಗಳು ಏನಿವೆ ಅವುಗಳನ್ನು ಹೆಚ್ಚು ಸುಧಾರಣೆ ಮಾಡಬೇಕು. ಹೆಚ್ಚು ಅಗಲ ಮಾಡಿಸಬೇಕು. ಆ ರೀತಿ ಮಾಡುವುದಾದರೆ ಸರ್ಕಾರ ವೆಚ್ಚ ಮಾಡಿದಂತಹ ಹಣ ಉಪಯೋಗ ಆದೀತು. ನನ್ನ ತಾಲ್ಲೂಕಿನ ಮಟ್ಟಿಗೆ ನಾನು ಹೇಳುವುದಾದರೆ, ಬರಗಾಲದಲ್ಲಿ ಮಾಡಿರತಕ್ಕಂಥ ಕೆಲವು ರೋಡುಗಳು ಏನಿದೆ ಅವುಗಳೆಲ್ಲವೂ ನಾಶವಾಗಿವೆ. ಅವುಗಳನ್ನು ಮೇಂಟೇನ್ ಮಾಡುವ ದೃಷ್ಟಿಯಿಂದ ವಿಸ್ತೀರ್ಣ ಮಾಡುವ ದೃಷ್ಟಿಯಿಂದ ಅವಶ್ಯಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಈ ವಿಷಯದಲ್ಲಿ ಸರ್ಕಾರಕ್ಕೆ ಒಂದು ತಿಳುವಳಿಕೆಯನ್ನು ಹೇಳುತ್ತೇನೆ. ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಬಹಳ ವಿಳಂಬವಾಗುತ್ತದೆ.

ಇನ್ನೂ ಗಜೇಂದ್ರಗಡ ಭಾಗದೊಳಗೆ ಬಹಳ ಭೀಕರ ಪರಿಸ್ಥಿತಿ ಇದೆ. ಅದು 15 ಸಾವಿರ ಜನಸಂಖ್ಯೆ ಇರತಕ್ಕ ಊರು. ಕೇವಲ ನೇಕಾರರು ಅಲ್ಲಿ ಸಾವಿರಾರು ಜನ ಕೂಡಿಕೊಂಡು ಪೋಲಿಸ್ ಕಚೇರಿ ಮೇಲೆ ದೌಡ್ ಹೋದುದು ಆಗಿದೆ. ಇದು 20 ದಿವಸಗಳ ಕೆಳಗೆ ನಡೆದ ಸಂಗತಿ ಈಗ ಆಹಾರ ಧಾನ್ಯಗಳ ಪೂರೈಕೆ ಚೆನ್ನಾಗಿಲ್ಲವೆಂದು ನಿನ್ನೆ ಕಾಗದ ಬಂದಿದೆ. ಈಗ ವಿಳಂಬವೇನೋ ಜಾಸ್ತಿಯಾಗುತ್ತಿದೆ. ದೊಡ್ಡ ದೊಡ್ಡ ನಗರಗಳಿಗೇನೋ ಬಹಳ ಬೇಗ ಆಹಾರ ಧಾನ್ಯಗಳನ್ನು ಪೂರೈಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸ್ಥಳಗಳಿಗೆ ಸರ್ಕಾರದವರು ಹೆಚ್ಚಿಗೆ ಲಕ್ಷ್ಯ ಕೊಡದಿದ್ದರೆ ಅಲ್ಲಿ ಅಸಮಾಧಾನ ನಿರ್ಮಾಣವಾದೀತು ಎಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಇದನ್ನು ಸಾಕಷ್ಟು ಗಂಭೀರತೆಯಿಂದ ವಿಚಾರ ಮಾಡಬೇಕು. ಇದುವರೆಗೆ ಸಾಮಾನ್ಯವಾಗಿ ವರ್ಷ ವರ್ಷ ಮಳೆ ಬೆಳೆ ಚೆನ್ನಾಗಿ ನಡೆದಿದ್ದರೆ ನರಗುಂದ, ನವಲಗುಂದ್ ಪ್ರದೇಶಗಳಿಗೆ ಹೆಚ್ಚಿನ ಅನುಕೂಲವಿರುತ್ತಿತ್ತು. ಏಕೆಂದರೆ ಅಲ್ಲಿ ಮಲಪ್ರಭದಿಂದ ಅವಶ್ಯಕತೆ ಹೆಚ್ಚು ಇರುವಾಗ ಅದರ ಕೆಲಸ ನಿಶ್ಚಯವಾಗಿ ಚೆನ್ನಾಗಿ ನಡೆದಿಲ್ಲ. ಈಗಾಗಲೇ ಅಲ್ಲಿನ ಕಾಲುವೆ ಕಟ್ಟುವ ಕೆಲಸವನ್ನು ಏಕೆ ಪ್ರಾರಂಭ ಮಾಡಬಾರದು ಎಂಬುದಾಗಿ ನಾನು ಈಗ ಸರ್ಕಾರದವರನ್ನು ಕೇಳುತ್ತೇನೆ. ಇದರಿಂದ ಸರ್ಕಾರದ ಕೆಲಸವೂ ಆಗುತ್ತದೆ. ಜನರಿಗೆ ಕೂಲಿ ಸಹ ಸಿಗುತ್ತದೆ. ಆದ್ದರಿಂದ ಏಕೆ ಮಾಡಬಾರದು? ಈ ದೃಷ್ಟಿಯಿಂದ ನಿಶ್ಚಯವಾಗಿ ಮಲಪ್ರಭಾ ಯೋಜನೆ ಯಾವ ಯಾವ ಹಂತದಲ್ಲಿದೆ, ಯಾವ ಮಟ್ಟದಲ್ಲಿದೆ ಎಂಬುದನ್ನು ಪ್ರಗತಿ ನಕ್ಷೆಯನ್ನು ನಮಗೆ ತಿಳಿಸಬೇಕು. ಅದರಿಂದ ಆಗ ನಮಗೆ ಬಹಳ ಉಪಕಾರವಾಗುತ್ತದೆ ಇವತ್ತು ನಾವು ಬೇರೆ ಬೇರೆ ಸೊಸೈಟಿಗಳ ಮೂಲಕ ಕೇವಲ ವ್ಯಾಪಾರ ಮಾಡಬೇಕೆಂಬ ವಿಚಾರ ಏನಿದೆ ಅದು ಅಷ್ಟು ಸರಿಯಾದ ವಿಚಾರವಲ್ಲ. ಕೆಲವು ಸಣ್ಣ ಪುಟ್ಟ ವರ್ತಕರಿಗೆ ಲೈಸೆನ್ಸ್ ಕೊಟ್ಟು ಸರ್ಕಾರದವರೇ ಫೇರ್ ಪ್ರೈಸ್ ಡಿಪೋಗಳನ್ನು ತೆಗೆಯಬೇಕು. ಸೊಸೈಟಿ ಎಂದಾಕ್ಷಣಕ್ಕೆ ಸ್ವರ್ಗವೆಂದು ನಾನು ತಿಳಿಯುವುದಿಲ್ಲ. ಇದರಲ್ಲಿ ಅನೇಕ ರೀತಿಯ ಲೋಪದೋಷಗಳಿವೆ. ಒಬ್ಬನೇ ಕೂತರೆ ಗಾಡಿಯನ್ನು ಸುಲಭವಾಗಿ ಎಳೆಯಬಹುದು 10 ಮಂದಿ ಕೂತಿರುವ ಗಾಡಿಯನ್ನು ಎಳೆಯಬೇಕಾದರೆ ಶಕ್ತಿ ಕಡಿಮೆಯಾಗುತ್ತದೆ. ಹೀಗೆಯೇ ಸಕ್ಕರೆ ಹಂಚುವ ವಿತರಣೆಯಲ್ಲಿ ಅನೇಕ ಲೋಪದೋಷಗಳು ಕಂಡು ಬಂದಿವೆ ಆ ಕಾರಣದಿಂದ ಇದನ್ನು ಒಂದೇ ದೃಷ್ಟಿಯಿಂದ ವಿಚಾರ ಮಾಡಬೇಕು. ಸಣ್ಣ ಪುಟ್ಟ ವರ್ತಕರು ಫೇರ್‌ಪ್ರೈಸ್ ಡಿಪೋಗಳನ್ನು ತೆರೆಯುವಾಗ ವಿವಿಧ ಮುಖಗಳಿಂದ ಆಹಾರ ಧಾನ್ಯಗಳು ವಿತರಣೆಯಾಗಬೇಕು ಸಂಗ್ರಹಣಾ ಕಾರ್ಯವನ್ನೂ ಸಹ ಚೆನ್ನಾಗಿ ಮಾಡಬೇಕು. ವಿತರಣೆಯ ಬಗ್ಗೆ ಹೆಚ್ಚಿನ ಸಾಮರ್ಥ್ಯತೆ ಮತ್ತು ದೃಢತೆ ಇರಬೇಕು. ಇದು ಒಂದು ಯಶಸ್ವಿಯಾಗಿ ನಡೆದರೆ ಸರ್ಕಾರ ಈಗ ಮಾಡುತ್ತಿರುವ ಪ್ರಯತ್ನಕ್ಕೆ ಒಂದು ಒಳ್ಳೆಯ ಪರಿಣಾಮವಾಗುತ್ತದೆ. ಮುಖ್ಯವಾಗಿ ಈ ಪ್ರಶ್ನೆಯಲ್ಲಿ ವಿಳಂಬವಾಗದಂತೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕು.

**ಶ್ರೀ ಎ.ಜೆ. ದೊಡ್ಡಮೇಟಿ:** ಅಲ್ಲಿನ ಕೆಲವು ಸಂಸ್ಥೆಗಳ ಬೇಡಿಕೆಗಳ ಪ್ರಕಾರ ಜುಲೈ ತಿಂಗಳವರೆಗೆ ಎಷ್ಟು ಟನ್ನುಗಳಷ್ಟು ಅಕ್ಕಿಯನ್ನು ಸರಬರಾಜು ಮಾಡಬೇಕಾಗಿತ್ತು?

**ಶ್ರೀ ಎಂ.ವಿ. ಕೃಷ್ಣಪ್ಪ:** ಸಪ್ಲೈ ಮಾಡುವ ಪ್ರಶ್ನೆಯಲ್ಲ. ಕೇಂದ್ರ ಸರ್ಕಾರದವರು ನಮಗೆ ಎಷ್ಟು ಸರಬರಾಜು ಮಾಡುತ್ತಾರೋ ಅದರ ಮೇಲೆ ನಾವು ಅಲಾಟ್ ಮಾಡಬೇಕಾಗುತ್ತದೆ. ಹೋದ ವರ್ಷ 5 ಸಾವಿರ ಟನ್ನುಗಳಷ್ಟು ಅಕ್ಕಿಯನ್ನು ಕೊಟ್ಟಿದ್ದರು. ಅದರಲ್ಲಿ ಒಂದು ಸಾವಿರ ಟನ್ನುಗಳಷ್ಟು ಅಕ್ಕಿಯನ್ನು ಧಾರವಾಡಕ್ಕೆ ಕೊಟ್ಟಿದೆ ಅದನ್ನು 3 ತಿಂಗಳುಗಳಲ್ಲಿ ಕೊಟ್ಟಿದ್ದೇವೆ. ಒಂದೊಂದು ತಿಂಗಳು 500,300, 200, ಟನ್ನುಗಳಷ್ಟು ಅಕ್ಕಿಯನ್ನು ಅವರಿಗೆ ಸರಬರಾಜು ಮಾಡಿದ್ದೇವೆ. ಆದರೆ ಜನವರಿಯಿಂದ ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿಲ್ಲ ನಾವು ಅವರಿಗೆ ಕೊಟ್ಟಿಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ಧಾರವಾಡದ ನ್ಯಾಯಬೆಲೆ ಅಂಗಡಿಗಳಿಗೆ ಇತರ ಧಾನ್ಯಗಳೂ ಸಹ ಸರಬರಾಜು ಆಗಿಲ್ಲ. ತತ್ಪರಿಣಾಮವಾಗಿ ಅಲ್ಲಿನ ಜನರಿಗೆ ವಿಶೇಷವಾಗಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಎಂ.ವಿ. ಕೃಷ್ಣಪ್ಪ:** ಈಗ ಕೇಂದ್ರ ಸರ್ಕಾರದವರು ಸುಮಾರು ನಾಲ್ಕೈದು ತಿಂಗಳುಗಳಿಂದಲೂ ಗೋಧಿಯನ್ನು ತಿಂಗಳಿಗೆ ಲಕ್ಷ ಪಲ್ಲದಂತೆ ಕೊಡುತ್ತಿದ್ದಾರೆ. ಅಲ್ಲಿ ಫುಡ್ ಡಿಪಾರ್ಟಮೆಂಟ್ ಇರಲಿಲ್ಲ. ಫುಡ್ ಮಿನಿಸ್ಟರ್ ಇದ್ದರು ಆಗಿನಿಂದಲೂ ನಮಗೆ ಕೋಟಾ ಬಂದಿದೆ. ನಾವು ಡಿ.ಸಿ.ಗೆ ಅದನ್ನು ಕೊಡುತ್ತಿದ್ದೆವು. ಅವರು 3 ತಿಂಗಳುಗಳಿಂದಲೂ ಅಲ್ಲಿರತಕ್ಕ ಸೊಸೈಟಿಗಳಿಗೂ ಮತ್ತು ಯಾರಾದರೂ ಕೆಲವರು ಹಿಂದಿನಿಂದಲೂ ಲೈಸೆನ್ಸ್ ಪಡೆದು ಫೇರ್ ಪ್ರೈಸ್ ಡಿಪೋಗಳನ್ನು ಇಟ್ಟಿದ್ದರೆ ಅಂತಹವರಿಗೆ ಅಲಾಟ್ ಮಾಡುತ್ತಿದ್ದರು. ಈಗ ಕೆಲವು ಕಡೆಗಳಲ್ಲಿ ಅಭಾವ ಪರಿಸ್ಥಿತಿ ಇರುವುದರಿಂದ ಕೇಂದ್ರದಿಂದ ಬರತಕ್ಕ ದಾಸ್ತಾನುಗಳನ್ನು ನಾವೇ ಅಲಾಟ್ ಮಾಡುತ್ತೇವೆ. ಈಗಾಗಲೇ ಅಭಾವ ಉಂಟಾಗಿರುವ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳ ಸರಬರಾಜು ಕೆಲಸವನ್ನು ಸಮರ್ಪಕವಾಗಿ ನಡೆಸುವಂತೆ ಸರ್ಕಾರದವರು ತಕ್ಕ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

**ಶ್ರೀ ಸಿದ್ದಯ್ಯ ಕಾಶೀಮಠ್:** ಹಾನಗಲ್ ಮತ್ತು ಹಿರೇಕೆರೂರು ಪ್ರದೇಶಗಳಲ್ಲಿ ಪ್ರೊಕ್ಯೂರ್‌ಮೆಂಟ್ ಆದ ದಾಸ್ತಾನು ಏನಾಯಿತು?

**ಶ್ರೀ ಎಂ.ವಿ. ಕೃಷ್ಣಪ್ಪ:** ಆ ಏರಿಯಾದಲ್ಲಿ ಅದು ಬೊಂಬಾಯಿ ಕಡೆಗೆ ಸ್ಮಗಲ್ ಆಗುತ್ತಿದೆ. ಕೇರಳಾ ಕಡೆಗೆ ನ್ಯಾಚುರಲ್ ಫ್ಲೋ ಆಗುತ್ತದೆ.

**ಶ್ರೀ ಸಿ.ಎಸ್. ಹುಲ್ಕೋಟಿ:** ಧಾರವಾಡ ಜಿಲ್ಲೆಯಲ್ಲಿ ಗೋಧಿ ಸರಬರಾಜು ಜನವರಿಯಿಂದ ಇಲ್ಲಿಯವರೆಗೂ ಅಷ್ಟು ಮಾಡಿದ್ದಾರೆ?

**ಶ್ರೀ ಕೆ.ಪಿ. ಗದಗ:** May I know the number of Fair Price Depots in Dharwar district now?

**ಶ್ರೀ ಎಂ.ವಿ. ಕೃಷ್ಣಪ್ಪ:** ಈಗ ಕೇಂದ್ರ ಸರ್ಕಾರದವರು 2 ಲಕ್ಷ ಪಲ್ಲಾ ಗೋಧಿ ಮತ್ತು 1 ಲಕ್ಷ ಪಲ್ಲಾ ಅಕ್ಕಿಯನ್ನು ಕೊಟ್ಟಿದ್ದಾರೆ. ಹೀಗೆ ಒಟ್ಟು 3 ಲಕ್ಷ ಪಲ್ಲಾದಷ್ಟು ಆಹಾರ ಸಾಮಾಗ್ರಿ ಬಂದಿದೆ. ಮೊನ್ನೆ ಜಿಲ್ಲಾಧಿಕಾರಿಗಳು ಇಲ್ಲಿಗೆ ಬಂದಿದ್ದರು ಅವರು ಎಷ್ಟೆಷ್ಟು ಕೇಳುತ್ತಾರೆಂಬ ಬಗ್ಗೆ ಅವರೊಡನೆ ಸಂಪರ್ಕ ಇಟ್ಟುಕೊಂಡಿದ್ದೇವೆ. ಅವರೆಲ್ಲರಿಗೂ ಆ ದಾಸ್ತಾನನ್ನು ಅಲೋಕೇಟ್ ಮಾಡುತ್ತಿದ್ದೇವೆ. ಅಷ್ಟರಲ್ಲೇ ಎಲ್ಲಾ ಕಡೆಗೂ ಆ ಆಹಾರ ಸಾಮಾಗ್ರಿ ಹೋಗುತ್ತದೆ.

**ಶ್ರೀ ಎಸ್.ಎಂ. ಗುರಡ್ಡಿ:** ಕೇಂದ್ರ ಸರ್ಕಾರದವರನ್ನು ಕೇಳಿದ ನಂತರ ಅವರು ಧಾರವಾಡ ಜಿಲ್ಲೆಗೆ ಎಷ್ಟು ಪಲ್ಲಾ ಅಕ್ಕಿಯನ್ನು ಕೊಟ್ಟಿದ್ದಾರೆ? ಅದರಲ್ಲಿ ರಾಜ್ಯ ಸರ್ಕಾರದವರು ಎಷ್ಟು ಸರಬರಾಜು ಮಾಡಿದ್ದಾರೆ? ಅದು ಅಲ್ಲಿನ ಜನಗಳಿಗೆ ಹೋಗಿ ಸೇರಿದೆಯೇ?

**ಶ್ರೀ ಎಂ.ವಿ. ಕೃಷ್ಣಪ್ಪ:** ಕೇಂದ್ರ ಸರ್ಕಾರದವರು ಧಾರವಾಡ ಜಿಲ್ಲೆಗೆಂದು ಮಾತ್ರ ಕೊಡುವುದಿಲ್ಲ. ಸಂಸ್ಥಾನಕ್ಕೆಲ್ಲಾ ಎಂದು ಕೊಟ್ಟಿದ್ದಾರೆ ಜಿಲ್ಲಾಧಿಕಾರಿಗಳು ಇಷ್ಟಿಷ್ಟು ಬೇಕೆಂದು ಕೇಳಿದರೆ, ನಮ್ಮಲ್ಲಿ ಎಷ್ಟು ಸ್ಟಾಕ್ ಇದೆಯೆಂಬುದನ್ನು ನೋಡಿಕೊಂಡು ಅಲಾಟ್ ಮಾಡುತ್ತೇವೆ.

**ಶ್ರೀ ಕೆ.ಪಿ. ಗದಗ:** ನಾನು ಧಾರವಾಡ ಜಿಲ್ಲೆಯಲ್ಲಿರುವ ಈಗಿನ ನ್ಯಾಯಬೆಲೆ ಅಂಗಡಿಗಳು ಎಷ್ಟಿವೆ ಎಂಬುದನ್ನು ತಿಳಿದುಕೊಳ್ಳಬಹುದೇ?

**ಶ್ರೀ ಎಂ.ವಿ. ಕೃಷ್ಣಪ್ಪ:** ಅದನ್ನು ಫೇರ್ ಷಾಪ್ ಎಂದು ಕರೆಯುವುದಿಲ್ಲ. ಕೇಂದ್ರದಿಂದ ಅಡ್‌ಹಾಕ್ ಕೋಟಾ ಬಂದಾಗ ಸಪ್ಲೈ ಮಾಡುತ್ತೇವೆ. ಶೇಕಡ 60-70 ರಷ್ಟು ಸೊಸೈಟಿಗಳಿಗೆ ಕೊಡುತ್ತೇವೆ ಆ ಮೇಲೆ ವರ್ತಕರಿಗೆ ಸ್ವಲ್ಪ ಸ್ವಲ್ಪ ಕೊಡುತ್ತೇವೆ.

**ಶ್ರೀ ಟಿ.ಕೆ. ಕಂಬ್ಳೆ:** ಧಾರವಾಡ ಜಿಲ್ಲೆಯೊಳಗೆ 90 ಅಂಗಡಿಗಳನ್ನು ತೆರೆಯುತ್ತೇವೆಂದು ಹೇಳಿದ್ದೀರಿ ಅವನ್ನು ತಾಲ್ಲೂಕುವಾರ್ ಅಥವಾ ಮುನಿಸಿಪಲ್ ಏರಿಯಾವಾರು ನೋಡಿಕೊಂಡು ತೆರೆಯುತ್ತಿರೋ?

**ಶ್ರೀ ಎಂ.ವಿ. ಕೃಷ್ಣಪ್ಪ:** ಕೊ ಆಪರೇಟಿವ್ ಸೊಸೈಟಿಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲಾ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಲಾಗುವುದು, ಅದರ ಜೊತೆಗೆ ಎಲ್ಲಾದರೂ ಅಭಾವವಿದ್ದರೆ ಖಾಸಗೀ ಜನಗಳಿಗೂ ಲೈಸೆನ್ಸ್ ಕೊಡುತ್ತೇವೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಧಾರವಾಡದ 17 ಸಾವಿರ ಜನಸಂಖ್ಯೆ ನೇಕಾರರು ಸಹಕಾರ ಸಂಘಗಳಿಂದ ಅಕ್ಕಿ ಸರಬರಾಜು ಆಗಲಿಲ್ಲವೆಂದು ಪೋಲಿಸರ ಠಾಣೆಗೆ ಹೋಗಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಎಂ.ವಿ. ಕೃಷ್ಣಪ್ಪ:** ಪೋಲಿಸ್ ಸ್ಟೇಶನ್ನಿನಲ್ಲಿ ಅಕ್ಕಿ ಸರಬರಾಜು ಇಲ್ಲದೇ ಇರುವಾಗ ಅವರು ಪೋಲಿಸ್ ಸ್ಟೇಶನ್ನಿಗೆ ಏಕೆ ಹೋದರು ಯಾರೋ ಬಹುಶಃ ಕೆಲವರು ಕುಚೇಷ್ಟೆಗೋಸ್ಕರ ಪೋಲಿಸ್ ಸ್ಟೇಶನ್ನಿಗೆ ಹೋಗಿರಬಹುದು. ಅಲ್ಲಿಗೆ ಅವರು ಹೋಗುವುದಕ್ಕೆ ಬದಲು ಡಿಪೋಗಳಿಗೆ ಮುತ್ತಿಗೆ ಹಾಕಿದ್ದರೂ ಉಪಯೋಗವಾಗುತ್ತಿತ್ತು.

**ಶ್ರೀ ಎ.ಜೆ. ದೊಡ್ಡಮೇಟಿ:** ಅದು ಒಂದು ಸರ್ಕಾರದ ಏಜೆನ್ಸಿಯೆಂದು ತಿಳಿದುಕೊಂಡು ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಲು ಅಲ್ಲಿಗೆ ಹೋದುದು ತಮ್ಮ ಗಮನಕ್ಕೆ ಬಂದಿದೆಯೇ?

**ಶ್ರೀ ಎಂ.ವಿ. ಕೃಷ್ಣಪ್ಪ:** ಈಗಾಗಲೇ ಅಕ್ಕಿಯನ್ನು ಕಳುಹಿಸಿದ್ದೇವೆ ಗೋಧಿಯನ್ನೂ ಸಹ ಗಜೇಂದ್ರಗಡದ ನೇಕಾರರಿಗೆ ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಬಹುಶಃ ಇನ್ನು 10-12 ದಿವಸಗಳಲ್ಲಿ ಅವರಿಗೆ ಕಳುಹಿಸುತ್ತೇವೆ.

12-30 ಪಿ.ಎಂ.

**ಶ್ರೀ ಬಿ. ಭಾಸ್ಕರ ಶೆಟ್ಟಿ:** ಜನಗಳಿಗೆ ನ್ಯಾಯವಾದ ಬೆಲೆಗೆ ಆಹಾರ ಸಾಮಗ್ರಿಗಳನ್ನು ಒದಗಿಸುವುದಕ್ಕಾಗಿ ಸರ್ಕಾರದವರು ಆಹಾರ ಧಾನ್ಯವನ್ನು ಮಾರತಕ್ಕ ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆಯುವುದು ಸರ್ಕಾರದ ನೀತಿ ಅಲ್ಲವೇ?

**ಶ್ರೀ ಎಂ.ವಿ. ಕೃಷ್ಣಪ್ಪ:** ನಾವು ನಮ್ಮ ದೇಶದಲ್ಲಿ ಕಂಟ್ರೋಲ್ ತೆಗೆದು ಬಹಳ ದಿವಸಗಳಾಯಿತು. 1952-53 ನೇ ಇಸವಿಯಲ್ಲಿಯೇ ಕೊಪನ್ ಮತ್ತು ರೇಶನ್ ಪದ್ಧತಿ ಹೋಯಿತು. ಆಹಾರ ಧಾನ್ಯಕ್ಕೆ ಸದರನ್ ಜೋನ್ ಎಂದು ಮಾಡಿಕೊಂಡು ಆಹಾರ ಧಾನ್ಯಗಳ ವಿನಿಮಯವನ್ನು ನಡೆಸಿಕೊಂಡು ಬಂದಿದ್ದೇವೆ. ಕಂಟ್ರೋಲು ರೇಷನ್ ಕೂಪನ್ ಯಾವುದನ್ನು ಇಟ್ಟುಕೊಳ್ಳದೆ 7-8 ವರ್ಷಗಳಿಂದ ನಡೆಮುಕೊಂಡು ಬರುತ್ತಿದೆ. ಈಗ ಎರಡು ಮೂರು ತಿಂಗಳಿಂದಲೂ ಕೆಲವು ಕಾರಣಗಳಿಂದ ಸ್ವಲ್ಪ ತೊಂದರೆ ಬಂದಿದೆ.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ:** ಈಗ ತಾನೆ ತಾವು ಅಪ್ಪಣೆ ಕೊಡಿಸಿದಿರಿ, ಕೇಂದ್ರದಿಂದ ಗೋಧಿ ಬರುತ್ತದೆ ಎಂದು, ತಾವು ಕೇಂದ್ರ ಸರ್ಕಾರದವರಿಗೆ ತಮ್ಮ ಬೇಡಿಕೆಯನ್ನು ತಿಳಿಸಿದ ಮೇಲೆ ಸರ್ಕಾರದವರು ನಮಗೆ ಕೊಟ್ಟಿರತಕ್ಕ ಅಕ್ಕಿ ಎಷ್ಟು, ಗೋಧಿ ಎಷ್ಟು?

**ಶ್ರೀ ಕೆ. ಮಲ್ಲಪ್ಪ:** ಕ್ರಾಫ್ಟ್ ಕೆಲಸ ಮಾಡತಕ್ಕಂಥವರಿಗೆ ಸಹಾಯ ಕೊಡಲಾಗುವುದು. ಇದು ಮಹಿಳಾ ಸಮಾಜ ಹಳ್ಳಿಯಲ್ಲಿಯ ಬಡ ಜನರ ಸಮಾಜ ಎಂಬ ವ್ಯತ್ಯಾಸ ಹಣ ಮಂಜೂರ್ಮಾಡುವ ಬಗ್ಗೆ ಮಾಡುವುದಿಲ್ಲ. ಯಾವ ಸಮಾಜದಲ್ಲಿ ಕ್ರಾಫ್ಟ್ ಕೆಲಸ ನಡೆಯುತ್ತದೆಯೋ ಅವರಿಗೆ ಗ್ರಾಂಟ್ ಕೊಡುತ್ತೇವೆ.

# ಗಜೇಂದ್ರಗಡ ಬಳಿ ಸೇತುವೆ ನಿರ್ಮಾಣ

**ಶ್ರೀ ಎ.ಜೆ. ದೊಡ್ಡಮೇಟಿ:** ಈ ಎರಡು ಸೇತುವೆ ಕಟ್ಟುವ ಕೆಲಸ ವಿಳಂಬವಾಗುತ್ತಾ ಹೊರಟಿದೆ. ಐದುವರೆ ವರ್ಷ ವಿಳಂಬವಾದುದು ಸಣ್ಣ ವಿಳಂಬವಲ್ಲ. ಈ ರೀತಿ ವಿಳಂಬವಾಗುವುದಕ್ಕೆ ಕಾರಣವೇನು?

**ಶ್ರೀ ಜಿ.ಬಿ. ಶಂಕರರಾವ್:** ಕೆಲಸ ಪ್ರಾರಂಭವಾದ ಮೇಲೆ ಆ ಫೌಡೇಶನ್ ಸಲುವಾಗಿ ಪುನಃ ಅಂದಾಜು ಮಾಡಬೇಕಾಯಿತು. ಎಕ್ಸಟ್ರಾ ಕಾಸ್ಟ್ ಕೊಡಬೇಕು ಅಂತಾ ಕೇಳಿದ್ದರಿಂದ ಕೆಲಸ ನಿಲ್ಲಿಸಬೇಕಾಯಿತು. ಪುನಃ ಎಸ್ಟಿಮೇಟು ರಿವೈಜ್ ಮಾಡಲಾಯಿತು. ಈ ಸಮಯದಲ್ಲಿ ಕೆಲಸ ಮುಂದುವರಿಯಲಿಲ್ಲ. ರಿವೈಸ್ಡ್ ರೇಟ್ಸ್ ಹೇಳಿದ ಮೇಲೆ ಕಂಟ್ರಾಕ್ಟರ್ ಕೆಲಸ ಮಾಡಲು ಒಪ್ಪಿಕೊಂಡಿದ್ದಾರೆ. ಹಣ ಕೊಟ್ಟಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಇದು ಯಾವ ಹಳ್ಳದ ಸೇತುವೆಗೆ ಸಂಬಂಧಪಟ್ಟಿದ್ದು

**ಶ್ರೀ ಜಿ.ಬಿ. ಶಂಕರರಾವ್:** ಇದು ಹಿರೇಹಳ್ಳದ ಸೇತುವೆಗೆ ಸಂಬಂಧಪಟ್ಟದ್ದು.

**ಶ್ರೀ ಎ.ಜೆ. ದೊಡ್ಡಮೇಟಿ:** ಗಜೇಂದ್ರ ಗಡದ ಹತ್ತಿರ ಇರುವ ಹಳ್ಳದ ಸೇತುವೆ ಬಗ್ಗೆ ಏನು ಮಾಡಲಾಗಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಗಜೇಂದ್ರಗಡದ ಸಮೀಪದಲ್ಲಿರುವ ಸರ್ಕಾರೀ ಹಳ್ಳದ ಸೇತುವೆಯ ಕಟ್ ಆಫ್ ಗೋಡೆಗಳಿಗೆ ಸಂಬಂಧಪಟ್ಟ ಕಾಮಗಾರಿಗಳನ್ನು ಕೈಕೊಂಡು ಪೂರೈಸಲಾಯಿತು. ಮುಂದಿನ ಕೆಲಸ ನಿಲ್ಲಿಸಿದ್ದರಿಂದ ಕಂಟ್ರಾಕ್ಟರನಿಗೆ ನೋಟೀಸು ಕೊಟ್ಟು ಆದಷ್ಟು ಜಾಗ್ರತೆ ಕೆಲಸ ಪೂರೈಸಬೇಕು ಎಂದು ತಿಳಿಸಿದೆ.

**ಶ್ರೀ ಸಿದ್ದಯ್ಯ ಕಾಶೀಮಠ:** ಈ ಎರಡು ಹಳ್ಳಗಳ ಸೇತುವೆ ಕೆಲಸ ಪೂರ್ತಿ ಮಾಡದೆ ನಿಲ್ಲಿಸಿದ ಬಗ್ಗೆ ಕಂಟ್ರಾಕ್ಟರನ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

**ಶ್ರೀ ಜಿ. ಬಿ. ಶಂಕರರಾವ್:** ಅಗ್ರಿಮೆಂಟ್ ಪ್ರಕಾರ ನಿಗದಿ ಮಾಡಿದ ಅವಧಿಯಲ್ಲಿ ಕೆಲಸ ಪೂರೈಸದೇ ಇದ್ದರೆ ಫೈನ್ ಹಾಕಬೇಕು ಎಂದು ಅಗ್ರಿಮೆಂಟ್‌ನಲ್ಲಿ ಇದೆ. ಇದನ್ನು ಒಪ್ಪಿಕೊಂಡು ಅಗ್ರಿಮೆಂಟ್ ಬರೆದುಕೊಟ್ಟಿರುತ್ತಾರೆ. ಅದಕ್ಕೆ ಅನುಸಾರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಕೆ.ಪಿ. ರೇವಣ್ಣಸಿದ್ದಪ್ಪ:** ಹತ್ತಾರು ಲಕ್ಷ ರೂಪಾಯಿ ಲುಕ್ಸಾನಾದ ಕೆಲಸದ ವಿಚಾರದಲ್ಲಿ ಐದು ಹತ್ತು ರೂಪಾಯಿ ಫೈನ್ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅನೇಕ ಸಲ ಅಧಿಕಾರಿಗಳು ಕಂಟ್ರಾಕ್ಟರು ಒಂದಾಗಿ ಕೆಲಸ

ಮಾಡುತ್ತಾರೆ. ಒಂದು ವರ್ಷದಲ್ಲಿ ಕೆಲಸ ಮುಗಿಯದಿದ್ದರೆ ಅವರ ಲೈಸನ್ಸ ಕ್ಯಾನ್ಸಲ್ ಮಾಡಬೇಕು. ಇದನ್ನು ಸರಿಪಡಿಸಲು ಏನು ಯೋಚನೆ ಮಾಡಿದ್ದೀರಿ?

**ಶ್ರೀ ಜಿ.ಬಿ. ಶಂಕರ್‌ರಾವ್:** ಕೆಲಸ ಬಹಳ ನಿಧಾನವಾದರೆ ಸೂಕ್ತವಾದ ರೀತಿಯಲ್ಲಿ ಫೈನ್ ಹಾಕುತ್ತೇವೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಈ ಕೆಲಸ ಐದೂವರೆ ವರ್ಷ ನಿಧಾನವಾಗಿದೆ. ಎಷ್ಟು ವರ್ಷದಲ್ಲಿ ಈ ಕೆಲಸ ಮುಗಿಸಬೇಕು ಎಂದು ಕಂಟ್ರಾಕ್ಟ್ ಅಗ್ರಿಮೆಂಟಿನಲ್ಲಿದೆ? ಈ ಎರಡು ಕಾಮಗಾರಿಗಳನ್ನು ಒಬ್ಬನೇ ಕಂಟ್ರಾಕ್ಟರ್ ತೆಗೆದುಕೊಂಡಿರುವನಲ್ಲವೇ?

**ಶ್ರೀ ಜಿ.ಬಿ. ಶಂಕರರಾವ್:** ಅಗ್ರಿಮೆಂಟ್ ಪ್ರಕಾರ ಹಿರೇಹಳ್ಳ ಸೇತುವೆ ಕೆಲಸ 24.2.1961ಕ್ಕೆ ಮುಗಿಯಬೇಕಾಗಿತ್ತು. ಈ ಎರಡೂ ಕೆಲಸಗಳನ್ನು ಒಬ್ಬನೇ ಕಂಟ್ರಾಕ್ಟರ್ ತೆಗೆದುಕೊಂಡಿದ್ದಾನೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಇದುವರೆಗೆ ಈ ಕೆಲಸದ ಪ್ರಗತಿಗಾಗಿ ಎಷ್ಟು ಹಣ ಕೊಟ್ಟಿದೆ?

**ಶ್ರೀ ಜಿ.ಬಿ. ಶಂಕರರಾವ್:** ಈ ವಿವರ ಈಗ ಇಲ್ಲಿಇಲ್ಲ ಮಾನ್ಯ ಸದಸ್ಯರಿಗೆ ಅದು ಬೇಕಾದರೆ ತರಿಸಿಕೊಡುತ್ತೇನೆ.

**ಶ್ರೀ ಜಿ.ವಿ. ಗೌಡ:** ಕೆಲಸ ಪ್ರಾರಂಭವಾದ ಮೇಲೆ ಫೌಂಡೇಶನ್ ಸಲುವಾಗಿ ಎಸ್ಟೀಮೇಟು ರಿವೈಜ್ ಮಾಡಬೇಕಾಯಿತು ಎಂದು ಉತ್ತರ ಹೇಳಿದಿರಿ ಹಾಗಾದರೆ ಮೊದಲು ಎಷ್ಟಿಮೇಟು ತಯಾರ್ಮಾಡುವಾಗ್ಗೆ ನಡೆಸಿದ ಇನ್‌ವೆಸ್ಟಿಗೇಷನ್ ಡಿಫೆಕ್ಟಿವ್ ಆಗಿತ್ತಲ್ಲವೇ?

**ಶ್ರೀ ಜಿ.ಬಿ. ಶಂಕರರಾವ್:** ಹಾಗೆ ಹೇಳಲಿಲ್ಲ. ಫೌಂಡೇಷನ್ ಪುನಃ ಹತ್ತು ಅಡಿ ಆಳ ತೆಗೆಸಬೇಕಾದ್ದರಿಂದ ಎಕ್ಸ್‌ಟ್ರಾ ಕೊಡಬೇಕಾಯಿತು.

**ಶ್ರೀ ಎ.ಜೆ. ದೊಡ್ಡಮೇಟಿ:** ಈ ಕೆಲಸ ನಿಧಾನವಾಗುವುದಕ್ಕೆ ಮೂಲ ಕಾರಣ ಪಿ.ಡಬ್ಲ್ಯು.ಡಿ. ಇಲಾಖೆಯು ಕಂಟ್ರಾಕ್ಟ್‌ದಾರನಿಗೆ ಕೊಡತಕ್ಕ ತೊಂದರೆ ಮತ್ತು ಇನ್ನಿತರ ಅನ್ಯಾಯಗಳು ಕಾರಣವಾಗಿವೆ. ಈ ತೊಂದರೆಗಳನ್ನು ನಿವಾರಣೆ ಮಾಡಿ ಕೆಲಸ ಪ್ರಾರಂಭ ಮಾಡುತ್ತೀರಾ?

**ಶ್ರೀ ಜಿ.ಬಿ. ಶಂಕರರಾವ್:** ಇದರಲ್ಲಿ ನಿಧಾನವಾಗಿದೆ. ಇದಕ್ಕೆ ಕಾರಣವೇನು ಎಂಬುದನ್ನು ಪರಿಶೀಲಿಸಿ ರಿಪೋರ್ಟು ತರಿಸಲು ಹೇಳಿದ್ದೇನೆ.

# ವಿಜಿಲೆನ್ಸ್ ಕಮೀಷನ್

**ಶ್ರೀ ಎಸ್.ಎಂ. ಕೃಷ್ಣ:** ಈ ವಿಜಿಲೆನ್ಸ್ ಕಮೀಷನ್‌ನ್ನು ಹಿಂದೆ ಒಂದುವಾರ ಎಂಟು ದಿವಸದಲ್ಲಿ ನೇಮಕ ಮಾಡುತ್ತೇವೆ ಎಂದು ಹೇಳಿದ್ದೀರಿ. ಇಲ್ಲಿಯವರೆಗೂ 8 ದಿವಸ 8 ತಿಂಗಳೂ ಕಳೆದರೂ ನೇಮಕ ಮಾಡದೇ ಇರುವುದಕ್ಕೆ ಕಾರಣವೇನು?

**ಶ್ರೀ ಎಸ್. ನಿಜಲಿಂಗಪ್ಪ:** 8 ದಿವಸ ಎನ್ನುವುದೂ ಸರಿ, 8 ತಿಂಗಳು ಎನ್ನುವುದೂ ಸರಿ ಅದಷ್ಟು ಜಾಗ್ರತೆ ಮಾಡುತ್ತೇವೆ ಎಂದು ಹೇಳಿದ್ದೆ. ಜನ ಸಿಕ್ಕುವುದು ಬಹಳ ಕಷ್ಟ ಇದೆ, ಎರಡು ಮೂರು ಕಡೆಯಲ್ಲಿ ಪ್ರಯತ್ನ ಪಟ್ಟರೂ ಸಾಧ್ಯವಾಗಿಲ್ಲ ಹುಡುಕುತ್ತಾ ಇದ್ದೇವೆ.

**ಶ್ರೀ ಕೆ. ಲಕ್ಕಪ್ಪ:** ಕೇಂದ್ರ ಗೃಹ ಮಂತ್ರಿ ನಂದಾ ಅವರು ಸದಾಚಾರ ಸಮಿತಿಯನ್ನು ಅತೀ ಶೀಘ್ರವಾಗಿ ಎಲ್ಲಾ ಸ್ಟೇಟ್‌ಗಳಲ್ಲೂ ನೇಮಕ ಮಾಡಬೇಕೆಂದು ಆದೇಶ ನೀಡಿದ್ದಾರೆ ಎಂದು ವರ್ತಮಾನ ಬಂದಿದೆ. ಈ ಬಗ್ಗೆ ಸರ್ಕಾರದವರು ಏಕೆ ಸುಮ್ಮನೆ ಇದ್ದಾರೆ?

**ಶ್ರೀ ಎಸ್. ನಿಜಲಿಂಗಪ್ಪ:** ಸದಾಚಾರ ಸಮಿತಿಗೂ ಈ ಪ್ರಶ್ನೆಗೂ ಸಂಬಂಧವಿಲ್ಲ

**ಶ್ರೀ ಜಿ.ವಿ. ಗೌಡ:** ಒಂದು ವೇಳೆ ಖಾಸಗಿ ವ್ಯಕ್ತಿಗಳು ಈ ಕಾನೂನುಬಾಹಿರ ಅಥವಾ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ ಸರಕಾರವು ಮಧ್ಯ ಪ್ರವೇಶಿಸಿ ಅದನ್ನು ಏಕೆ ತಡೆಯಬಾರದು ಎಂದು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಎಸ್. ನಿಜಲಿಂಗಪ್ಪ:** ಒಂದು ವೇಳೆ ನನ್ನ ಮಿತ್ರರು ಖಾಸಗಿ ವ್ಯಕ್ತಿಯ ಬಗ್ಗೆ ದೂರು ಹೊಂದಿದ್ದರೆ, ಅವರು ನ್ಯಾಯಾಲಯಕ್ಕೆ ಹೋಗಬಹುದು.

**ಶ್ರೀ ಎ.ಜೆ. ದೊಡ್ಡಮೇಟಿ:** ಸ್ಥಾನಿಕ ರಾಜ್ಯ ಸಂಸ್ಥೆಗಳು ಅಥವಾ ಕೋ-ಅಪರೇಟಿವ್ ಸಂಸ್ಥೆಗಳು ಮತ್ತು ಶಾಸನ ಸಭಾ ಸದಸ್ಯರು ಇವರೆಲ್ಲರೂ ಖಾಸಗೀ ಜನರೊಳಗೆ ಬರುತ್ತಾರೆಯೇ ಅಥವಾ ಒಂದು ಸಂಸ್ಥೆಯೇ?

**ಶ್ರೀ ಎಸ್. ನಿಜಲಿಂಗಪ್ಪ:** ಈ ಸಭೆಯ ಸದಸ್ಯರು ಖಾಸಗಿಯಲ್ಲಿ ಬರುತ್ತಾರೆ ಕೋ-ಅಪರೇಟಿವ್ ಸಂಸ್ಥೆಗಳವರು ಕೋ-ಅಪರೇಟಿವ್ ಡಿಪಾರ್ಟ್‌ಮೆಂಟಿನ ವ್ಯಾಪ್ತಿಯೊಳಗೆ ಬರುತ್ತಾರೆ.

ಸರಕಾರಿ ಒಡೆತನಕ್ಕೆ ಸೇರಿದ ನೌಕರರು ಹಾಗೂ ಸರಕಾರದಲ್ಲಿ ಬಹುಪಾಲು ಶೇರುಗಳನ್ನು ಹೊಂದಿದ ಸಂಸ್ಥೆಯವರು ಈ ವ್ಯಾಪ್ತಿಯೊಳಗೆ ಬರುತ್ತಾರೆ.

**ಶ್ರೀ ಸಿದ್ದಯ್ಯ ಕಾಶೀಮಠ್:** ಭ್ರಷ್ಟಾಚಾರ ನಿರ್ಮೂಲ ಮಾಡಬೇಕೆಂದು ನೇಮಕ ಮಾಡತಕ್ಕ ಸಮಿತಿಯಲ್ಲಿ ಎಂತಹವರು ಇರಬೇಕೆಂಬುದನ್ನು ಸರ್ಕಾರದವರು ನಿರ್ಧರಿಸಿದ್ದಾರೆಯೇ?

**ಶ್ರೀ ಎಸ್. ನಿಜಲಿಂಗಪ್ಪ:** ವಿಜಿಲೆನ್ಸ್ ಕಮೀಷನ್‌ನಲ್ಲಿ ನೇಮಕ ಮಾಡತಕ್ಕವರು ಸಾಧಾರಣವಾಗಿ ಹೈಕೋರ್ಟಿನ ಜಡ್ಜ್ ಆಗಿದ್ದವರು ಆ ಮಟ್ಟದವರು ಆಗಿರಬೇಕೆಂದು ತೀರ್ಮಾನವಾಗಿದೆ.

**ಶ್ರೀ ಎಸ್. ಶಿವಪ್ಪ:** ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಪ್ರಕಾರ ಸರಕಾರವು ಇನ್ನೂ ತನಕ ಯೋಗ್ಯ ವ್ಯಕ್ತಿಗಳನ್ನು ಹುಡುಕುತ್ತಾ ಇದೆ. ಕಾರಣ ವರು ಅಂಥಹ ಯೋಗ್ಯ ವ್ಯಕ್ತಿಗಳಿಗಾಗಿ ರಾಜ್ಯದೊಳಗೆ ಅಥವಾ ರಾಜ್ಯದಾಚೆನ ರಾಜ್ಯಗಳಲ್ಲಿ ಹುಡುಕುತ್ತಿದ್ದಾರೆಯೆ ಎಂದು ತಿಳಿದುಕೊಳ್ಳಬಹುದೇ?

**ಶ್ರೀ ಎಸ್. ನಿಜಲಿಂಗಪ್ಪ:** ನಾವು ವ್ಯಕ್ತಿಗಳಿಗಾಗಿ ರಾಜ್ಯದೊಳಗೆ ಹಾಗೂ ರಾಜ್ಯದಾಚೆನ ರಾಜ್ಯಗಳಲ್ಲಿ ಹುಡುಕುತ್ತಿದ್ದೇವೆ.

**ಶ್ರೀ ಕೆ. ಲಕ್ಕಪ್ಪ:** ಈಗಾಗಲೇ ಇಬ್ಬರು ಸೆಕ್ರೆಟರಿಗಳಾಗಿದ್ದಂಥವರನ್ನು ಅದಕ್ಕೆ ಮಾಡಲು ಸರ್ಕಾರದವರು ಕೇಳಿಕೊಂಡಾಗ ಅವರು ನಿರಾಕರಿಸಿದ್ದಾರೆ ಎಂಬ ವರ್ತಮಾನ ಬಂದಿದೆ ಅದು ನಿಜವೇ?

**ಶ್ರೀ ಎಸ್. ನಿಜಲಿಂಗಪ್ಪ:** ಯಾವ ಸೆಕ್ರೆಟರಿಗಳನ್ನೂ ಕೇಳಿಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ಈಗ ದೇಶದಲ್ಲಿ ಸಕ್ಕರೆ ಒಳಗಾಗಲಿ, ಗೋಧಿ ಒಳಗಾಗಲೀ ಭ್ರಷ್ಟಾಚಾರ ನಡೆಯುತ್ತದೆ ಎಂಬುದು ನಮ್ಮ ಲಕ್ಷ್ಯಕ್ಕೆ ಬಂದಿದೆ. ಅದನ್ನು ಖಾಸಗಿ ಜನರು ಎಂದು ತಿಳಿದುಕೊಳ್ಳಬೇಕೋ ಅಥವಾ ಸಂಸ್ಥೆಗಳು ಎಂದು ತಿಳಿದುಕೊಳ್ಳ ಬೇಕೋ? ಸಕ್ಕರೆ ಬ್ಲಾಕ್ ಮಾರ್ಕೆಟ್ಟು, ಗೋಧಿ ಬ್ಲಾಕ್ ಮಾರ್ಕೆಟ್ಟು ನಡೆಯುತ್ತಾ ಇದೆ.

**ಶ್ರೀ ಎಸ್. ನಿಜಲಿಂಗಪ್ಪ:** ಅದನ್ನು ವ್ಯಾಪಾರಸ್ಥರು ಮಾಡಿದರೆ ಇದಕ್ಕೆ ಸಂಬಂಧ ಹತ್ತುವುದಿಲ್ಲ. ನೀವೇ ಹೋಗಿ ಅವರ ಮೇಲೆ ಕಂಪ್ಲೇಂಟ್ ಕೊಡಬೇಕು

**ಶ್ರೀ ಕೆ.ಪಿ. ರೇವಣ್ಣಸಿದ್ದಪ್ಪ:** ಸರಿಯಾದವರು ಸಿಕ್ಕಿಲ್ಲ ಎಂದು ಹೇಳಿದಿರಿ ನಮ್ಮ ದೇಶದವರು ಸರಿಯಾದವರು ಇಲ್ಲ ಎಂದು ಹೊರಗಿನವರನ್ನು ತರಬೇಕೆಂದು ಯೋಚನೆ ಮಾಡದೇ ನಮ್ಮ ದೇಶದಲ್ಲೇ ಇರತಕ್ಕ ಬುದ್ಧಿವಂತರನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?

**ಶ್ರೀ ಎಸ್. ನಿಜಲಿಂಗಪ್ಪ:** ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಸಾಧ್ಯವೇ ಆಗುವುದಿಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ಅಧಿಕಾರಿಗಳ ಭ್ರಷ್ಟಾಚಾರಕ್ಕಿಂತಲೂ ರಾಜಕೀಯ ಭ್ರಷ್ಟಾಚಾರದಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಾ ಇದೆ. ಆ ಕಾರಣದಿಂದ ರಾಜಕೀಯ ಭ್ರಷ್ಟಾಚಾರವನ್ನು ನಿಲ್ಲಿಸಲಿಕ್ಕಾಗಿ ವಿಜಿಲೆನ್ಸ್ ಕಮೀಶನನ್ನು ಏರ್ಪಾಡು ಮಾಡಲಿಕ್ಕೆ ಬಯಸಿದ್ದೀರಾ? ಅದರ ಬಗ್ಗೆ ಯಾವ ಮಟ್ಟದ ಕ್ರಮ ತೆಗೆದುಕೊಂಡಿದ್ದೀರಿ?

**ಶ್ರೀ ಎಸ್. ನಿಜಲಿಂಗಪ್ಪ:** ಖಾಸಗೀ ಜನರ ಭ್ರಷ್ಟಾಚಾರದ ವಿಷಯದಲ್ಲಿ ಯಾವ ರೀತಿ ಕ್ರಮ ಅನುಸರಿಸುತ್ತಾರೆ ಆದರಂತೆ ನಡೆಯಬೇಕಾಗುತ್ತದೆ.

**ಶ್ರೀ ಕೆ. ಲಕ್ಕಪ್ಪ:** ಈ ದೇಶದಲ್ಲಿ ಭ್ರಷ್ಟಾಚಾರ ಎನ್ನುವುದು ಖಾಸಗೀ ಜನರು ಆಡಳಿತ ನಡೆಸತಕ್ಕ ಅಧಿಕಾರ ವರ್ಗದವರಲ್ಲಿ ಮತ್ತೆ ಎಲ್ಲಾ ಸಂಘ ಸಂಸ್ಥೆಗಳಲ್ಲಿ ಜಾಸ್ತಿಯಾಗಿರುವುದರಿಂದ ಅತಿ ಜಾಗ್ರತೆಯಾಗಿ ವಿಜಿಲೆಲ್ಸ್ ಕಮೀಷನನ್ನು ನೇಮಕ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

**ಶ್ರೀ ಎಸ್. ನಿಜಲಿಂಗಪ್ಪ:** ಅದಕ್ಕೆ ಜವಾಬು ಹೇಳಿದ್ದೇನೆ.

**ಶ್ರೀ ವಿ.ಎಸ್. ಪಾಟೀಲ :** ಮಾನ್ಯರೇ, ನಾನು ಈ ತೆರನಾದ ಪ್ರಶ್ನೆಗೆ ಉತ್ತರಿಸಲು ಅರ್ಥವಾಗುತ್ತಿಲ್ಲ. ಅಂದರೆ ಖಾಸಗಿ ವ್ಯಕ್ತಿಗಳ ವ್ಯವಹಾರ ಸಂಬಂಧಪಟ್ಟ ಅಧಿಕಾರಿಗಳ ಒಪ್ಪಿಗೆ ಇಲ್ಲದೇ ನಡೆಯುತ್ತದೆಯೋ? ನನಗೆ ಅದು ಈ ಕಮೀಷನ್ನಿಗೆ ಒಳಪಡುತ್ತದೆ ಎಂದು ಅನಿಸುವುದಿಲ್ಲ.

## ಬರಗಾಲ ನಿವಾರಣೆ ಚರ್ಚೆ

**ಶ್ರೀ ಎ.ಜೆ. ದೊಡ್ಡಮೇಟಿ** (ರೋಣ): ಸ್ವಾಮಿ, ನಾನು ನಮ್ಮ ಎದುರಿಗಿರುವ ಗೊತ್ತುವಳಿಯ ಮೇಲೆ ಮಾತಾಡಲು ಒಂದು ಸಂಧಿಯನ್ನು ಒದಗಿಸಿಕೊಟ್ಟಿದ್ದಕ್ಕೆ ಈ ಸೂಚನೆಯನ್ನು ತಂದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಮತ್ತು ಸಾಮಾನ್ಯ ವಿವೇಚನೆಗೊಳಪಟ್ಟು ಕೆಲವು ವಿಷಯ ನಾನು ಮೊದಲು ಹೇಳಿ, ಆಮೇಲೆ ಒಂದು ಪ್ರತ್ಯೇಕವಾದ ವಿಷಯಕ್ಕೆ ಬರುತ್ತೇನೆ.

ಸಾಮಾನ್ಯವಾಗಿ ಈವರೆಗೆ ನಿನ್ನೆಯಿಂದ ನಮ್ಮ ಅನೇಕ ಸ್ನೇಹಿತರು ಈ ಬರಗಾಲದ ವಿಷಯದಲ್ಲಿ ಬರಗಾಲದ ನಿವಾರಣೆ ವಿಷಯದಲ್ಲಿ ಮತ್ತು ಇವುಗಳ ಬಗ್ಗೆ ನಿರಂತರವಾದ ವ್ಯವಸ್ಥೆ ಯಾವ ರೀತಿ ಮಾಡಬೇಕೆಂಬುದು ಬಗ್ಗೆ ಅನೇಕ ಸೂಚನೆಗಳನ್ನು ಮಾಡಿರುತ್ತಾರೆ, ಈ ದೃಷ್ಟಿಯಿಂದ ಮುಖ್ಯವಾಗಿ ನಾವು ಆಲೋಚನೆ ಮಾಡಬೇಕಾದುದು ಏನೆಂದರೆ ಈಗ ಯಾವ ದೊಡ್ಡ ನೀರಾವರಿ ಯೋಜನೆಗಳು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿವೆ ಮತ್ತು ಮಂಜೂರಾಗಿವೆ (ಅಥವಾ ಅರ್ಧಬಂರ್ಧ ಮಂಜೂರಾಗಿವೆ) ಅವುಗಳನ್ನೆಲ್ಲಾ ಬೇಗನೆ ಪ್ರಾರಂಭ ಮಾಡಬೇಕು ಕೃಷ್ಣ ಮತ್ತು ಮಲಪ್ರಭಾ-ಇವೆರಡು ಅತ್ಯಂತ ಹೆಚ್ಚಿನ ಜನರ ಲಕ್ಷ್ಯವನ್ನು ಸೆಳೆದಿವೆ ಹೆಚ್ಚಿಗೆ ಬರಗಾಲ ಪ್ರದೇಶದಲ್ಲಿ ಹರಿಯುವಂಥ ಈ ನದಿಗಳಿಂದ ಲಕ್ಷಾಂತರ ಎಕರೆ ಭೂಮಿಗಳಿಗೆ ಉಪಕಾರವಾಗುತ್ತದೆ ಎಂಬುದನ್ನು ಸರ್ಕಾರದವರು ಈಗಾಗಲೇ ಮನಗಂಡಿದ್ದಾರೆ. ಸರ್ಕಾರದವರು ಹೆಚ್ಚಿಗೆ ದೃಷ್ಟಿ ಹರಿಸಿ, ಅಲ್ಲಿಯ ಕೆಲಸ ಹೆಚ್ಚಿನ ಪ್ರಗತಿಯಿಂದ ವಿಳಂಬವಿಲ್ಲದ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯದ ಸೂಚನೆ ಮಾಡಬಯಸುತ್ತೇನೆ.

ಎರಡನೇಯದಾಗಿ, ಈ ಬರಗಾಲ ಪರಿಹಾರಕ್ಕಾಗಿ ಬಾವಿಗಳನ್ನು ತೋಡಿಸುವ ಕೆಲಸವನ್ನು ಎಷ್ಟೋ ರೀತಿಯಿಂದ ಪ್ರಾರಂಭ ಮಾಡಿದ್ದಾರೆ. ನಮ್ಮ ಇವತ್ತಿನ ಕಂದಾಯ ಮಂತ್ರಿಗಳು ಕೇಂದ್ರದಲ್ಲಿದ್ದಾಗ ನಮಗೆ ಕೋಟ್ಯಂತರ ರೂಪಾಯಿ ಕೊಟ್ಟು ಅನೇಕ ಬಾವಿಗಳನ್ನು ತೋಡಿಸಿದರು ಈಗ ಮತ್ತೆ ವರ್ಷ ವರ್ಷ ಆ ಕೆಲಸ ನಡೆಯುತ್ತಾ ಇದೆ. ಆದರೆ ಇಷ್ಟಕ್ಕೆ ಪ್ರಶ್ನೆ ನಿಲ್ಲುವುದಿಲ್ಲ. ದೊಡ್ಡ ದೊಡ್ಡ ಯೋಜನೆಗಳಿಗಿಂತ ಸಣ್ಣ ಯೋಜನೆಗಳಿಗೆ ಹೆಚ್ಚಾಗಿ ಲಕ್ಷ್ಯ ಕೊಟ್ಟರೆ ಅದಕ್ಕಿಂತ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಭೂಮಿಗಳು ಸಾಗುವಳಿಯಾಗುವುದಕ್ಕೆ ಅನುಕೂಲವಾಗುತ್ತದೆ.ಈ ದೃಷ್ಟಿಯಿಂದ ನೀರಾವರಿ ಭಾವಿಗಳು ಹೆಚ್ಚು ಹೆಚ್ಚಾಗಿ ನಮ್ಮ ರಾಜ್ಯದಲ್ಲಿ ಆಗಬೇಕು.ಆ ದೃಷ್ಟಿಯಿಂದ ಸರ್ಕಾರದವರು ಎಲ್ಲಿಲ್ಲಿ ನೀರಾವರಿ ಬಾವಿಗಳಾಗುವ ಸಂಭವವಿದೆಯೋ ಅಲ್ಲೆಲ್ಲಾ ಕೊಡಲು ಪ್ರಯತ್ನ ಮಾಡಬೇಕು. ಉದಾಹರಣೆಗೆ ರೋಣ ತಾಲ್ಲೂಕಿನೊಳಗೆ ಸುಮಾರು 2 ವರ್ಷದಲ್ಲಿ 200 ಭಾವಿಗಳು ವೇಳ್ಯಕ್ಕೆ ಆದವು. ಆದರೂ ಇನ್ನೂ 200 ಬಾವಿಗಳು ಆಗುವ ಸಂಭವವಿದೆ. ಈ ದೃಷ್ಟಿಯಿಂದ ಅಲ್ಲಿ ಮತ್ತೊಂದು ಅಡಚಣೆ ಏನೆಂದರೆ ಅದು ಕಂದಾಯ ಮಂತ್ರಿಗಳಿಗೆ ಗೊತ್ತಿರಬಹುದು. ರೋಣ ತಾಲ್ಲೂಕಿನೊಳಗಿರುವ ಗಜೇಂದ್ರಗಡ ಭಾಗ ಸರಂಜಾಮ ಭಾಗದೊಳಗೆ ಒತ್ತಾಯದಿಂದ ಬಾವಿ ಮಂಜೂರು ಮಾಡುವುದು ಸಾಧ್ಯವಿರಲಿಲ್ಲ. ಈಗ ಸುದೈವದಿಂದ ಇನಾಂದಾರು ಮಾಡಿದ ರಿಟ್ ಅವರಿಗೆ ವಿರುದ್ಧವಾಗಿ ಆಗಿದೆ. ಅದು ಸರ್ಕಾರಕ್ಕೆ ಅನುಕೂಲವಾಗಿದೆ. ಇದೇ ಸಮಯವನ್ನು ಬೇಗ ಉಪಯೋಗಿಸಿ ರೈತರ ಮಾಲ್ಕಿ ಹಕ್ಕನ್ನು ಹೆಚ್ಚಿಸಲಿಕ್ಕೆ ಏರ್ಪಾಡು ಮಾಡಬೇಕು ಅಭಾವ ಪರಿಸ್ಥಿತಿ ಹೋಗಬೇಕಾದರೆ ಮೊದಲು ಭೂಮಿಯಲ್ಲಿ ಬೆಳೆ ಬೆಳೆಯತಕ್ಕ ರೈತನಿಗೆ ಅದು ತನ್ನ ಸ್ವಂತ ಭೂಮಿ ಎಂಬ ಭಾವನೆ ಬರಬೇಕು.

ಭೂಮಿ ತನ್ನದು ಎನ್ನುವ ಭಾವನೆ ಬಾರದಿದ್ದರೆ ರೈತ ಚೆನ್ನಾಗಿ ಕೆಲಸ ಮಾಡುವುದಿಲ್ಲ. ಇದಕ್ಕಾಗಿಯೇ ಶಕ್ಯವಿದ್ದ ಎಲ್ಲ ಇನಾಂಗಳನ್ನೂ ರದ್ದು ಮಾಡಿ ಉಳುವವನೇ ಒಡೆಯನಾಗಬೇಕು. ಎನ್ನುವ ಮಾತನ್ನು ಇಲ್ಲಿ ಒತ್ತಿ ಹೇಳದೇ ಇರಲಾರೆ.ಇನಾಮ ಗ್ರಾಮಗಳಲ್ಲಿ ಅನೇಕ ಪ್ರಶ್ನೆಗಳು, ಹೇಗೆ ವಿಳಂಬವಾಗುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಹೋದಸಲ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಹಂಚಿನಾಳ ಮತ್ತು ಕೆಲವು ಗ್ರಾಮಗಳಲ್ಲಿ ಇನಾಂ ರದ್ದಿಯಾತಿಯಾಯಿತು. ಅವನ್ನು ಸರಕಾರದವರು ರೆಜುಮು ಮಾಡಿದರು. ರೆಜುಮ ಮಾಡಿದ ಪ್ರಕಾರ ರೈತರ ಹೆಸರುಗಳನ್ನು ಹಚ್ಚಬೇಕೆಂದು ಪ್ರಯತ್ನ ನಡೆಯಿತು. ಆರು ತಿಂಗಳು ಆದರೂ ಹಚ್ಚಲಿಕ್ಕಾಗಿಲ್ಲ. ಇದರಲ್ಲಿ ಶ್ರೀಮಂತರ ಕೈ ಇರುತ್ತದೆ ಎನ್ನುವುದು ಗೊತ್ತು ಬಡವರಾಗಿದ್ದರೆ ಆಶಕ್ತಿ ಇರುವುದಿಲ್ಲ. ಚಾಕಚಕ್ಯತೆ ಇರುವುದಿಲ್ಲ. ಶ್ರೀಮಂತರ ಹತ್ತಿರ ಎಲ್ಲ ಇರುತ್ತವೆ. ಆ ಕಾರಣದಿಂದ ರೈತರಿಗೆ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಕೊಟ್ಟಿಲ್ಲ, ಮಂತ್ರಿಗಳ ಮನಸ್ಸಿನಲ್ಲಿ ಅಪೇಕ್ಷೆ ಇದ್ದರೆ ತೀರಿತು, ಅದರಂತೆ ಯಂತ್ರ ಕೆಲಸ ಮಾಡಬೇಕು ಎನ್ನುವಂತೆ ಸರ್ಕಾರದ ಧೋರಣೆಯನ್ನು ಆ ಯಂತ್ರ ಅನುಸರಿಸಬೇಕು ಎನ್ನುವ ರೀತಿಯಲ್ಲಿ

ಕೆಲಸ ಮಾಡಬೇಕು. ನಾನು ಕೂಡಲೇ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಮೊನ್ನೆ ಹೈಕೋರ್ಟಿನಲ್ಲಿದ್ದ ರಿಟ್ ಅರ್ಜಿ ಒಂದು ಟೆಕ್ನಿಕಲ್ ಕಾರಣಕ್ಕಾಗಿ ಸರ್ಕಾರದ ವಿರುದ್ಧವಾಗಿದೆ. ಸರ್ಕಾರದವರು ಪುನಃ ಇದರ ಪರಿಶೀಲನೆ ನಡೆಸಿದ್ದಾರೆ. ಆ ಬಗ್ಗೆ ರಿಪೋರ್ಟ ಇಷ್ಟು ಹೊತ್ತಿಗೆ ಬಂದಿರಬಹುದು ದಯವಿಟ್ಟು ಅಂಥ ಪ್ರಶ್ನೆಗಳನ್ನೆಲ್ಲ ಮುಗಿಸಿ ಎಲ್ಲ ಇನಾಂ ಹಳ್ಳಿಗಳಲ್ಲಿಯೂ ರೈತರು ಆ ಭೂಮಿಯ ಮಾಲೀಕರು ಎನ್ನುವುದನ್ನು ರಿಕಾರ್ಡ ಆಫ್ ರೈಟ್ಸ್‌ನಲ್ಲಿ ನಮೂದಿಸಬೇಕು, ಸುಪ್ರೀಂ ಕೋರ್ಟಿಗೆ ಹೇಳುತ್ತಾರೆ, ಇನ್ನೊಂದು ಕೋರ್ಟಿಗೆ ಹೋದರು ಎಂದು ವಿಳಂಬ ಮಾಡದೇ ಸರ್ಕಾರದವರು ತಮ್ಮ ಪಾಲಿನ ಕಾರ್‍ಯವನ್ನು ಹೆಚ್ಚಿನ ರೆಪ್ರೆಟೇಷಿಸ್‌ಂಗೆ ಆಸ್ಪದವಿಲ್ಲದ ಹಾಗೆ ಮಾಡಿ ತೀವ್ರ ರೈತರ ಮೌಲ್ಯ ಮಾಡಬೇಕು ಎಂದು ಮೊದಲನೆಯದಾಗಿ ಹೇಳುತ್ತೇನೆ.

ಇನ್ನು ಚಿಕ್ಕ ನೀರಾವರಿಯಲ್ಲಿ ಪಂಪ್‌ಸೆಟ್‌ಗಳ ಬಗ್ಗೆ ಹೇಳಬೇಕಾದರೆ ನಮ್ಮ ವ್ಯವಸಾಯ ಮಂತ್ರಿಗಳು ಪಂಪ್‌ಸೆಟ್‌ಗಳನ್ನೆಲ್ಲ ಪುಕ್ಕಟೆಯಾಗಿ ಒಂದು ವಿಧವಾದ ರೀತಿಯಲ್ಲಿ ಹಂಚಬೇಕೆಂದು ಘೋಷಣೆ ಮಾಡಿದರು. ತತ್ಪರಿಣಾಮವಾಗಿ ಏನಾಗುತ್ತಿದೆ ಎಂದರೆ ಪಂಪ್‌ಸೆಟ್ ಸಿಕ್ಕುತ್ತದೆಂದು ಒಂದು ತಾಲ್ಲೂಕಿನಿಂದ ಒಂದು ನೂರು,ಎರಡುನೂರು, ಮೂರುನೂರು ಅರ್ಜಿಗಳು ಬಂದಿದ್ದರೆ ಅದನ್ನು ಪಡೆಯುವ ವ್ಯವಸ್ಥೆ ಚಕ್ರವ್ಯೂಹದ ಕೋಟೆಯೊಳಗೆ ಅಭಿಮನ್ಯು ಹೋಗಿ ಹಿಂದಕ್ಕೆ ಬರುವುದು ಕಷ್ಟವಾದಂತೆ -ಬಹಳ ಸುತ್ತುವರಿ ಹಾಕಿದ ಹಾಗೆ ಇದೆ. ಪಂಪ್‌ಸೆಟ್ ಬೇಕು ಎಂದು ಒಬ್ಬ ಅರ್ಜಿ ಕೊಟ್ಟರೇ ತೀರಿತು, ಮತ್ತೆ ಅದರ ಉದ್ದರಿ, ಉಸಾಬರಿ, ಬೇಡ ಎಂದು ಹೇಳುವಂತಾಗುತ್ತದೆ. ಎಷ್ಟು ಪಂಪ್‌ಸೆಟ್ ಕೊಟ್ಟಿದ್ದಾರೆ, ಯಾವ ಯಾವ ಜಿಲ್ಲೆಗೆ ಎಷ್ಟು ಹಂಚಿದ್ದಾರೆ, ಎಂದು ಹೇಳಿದರೆ ನಮ್ಮ ಸರ್ಕಾರಕ್ಕೂ ನಿರಾಶೆಯಾಗಬಹುದು. ಇದರಿಂದ ಪೂರ್ಣ ಪ್ರಯೋಜನವಾಗಿಲ್ಲವೆಂದು, ಪಂಪ್‌ಸೆಟ್‌ಗಳನ್ನು ಕೊಡಲು ಮಾಡಿರುವ ನಿಯಮಗಳನ್ನು ಸಡಿಲ ಮಾಡಬೇಕು. ಸಾಕಷ್ಟು ಪಂಪ್‌ಸೆಟ್‌ಗಳನ್ನು ಕೊಳ್ಳಲು ಬೇಕಾದ ಹಣ ವನ್ನು ಅವರು ತಮ್ಮ ಕಡೆ ಇಟ್ಟುಕೊಂಡಿದ್ದಾರೆಯೋ ಇಲ್ಲವೋ ಅದು ಅವರಿಗೆ ಗೊತ್ತು ನನಗೆ ಗೊತ್ತಾದಂತ ಬೇರೆ ಬೇರೆ ಜಿಲ್ಲೆಯೊಳಗೆ ಎಕ್ಸಿಕ್ಯೂಟಿವ್ ಆಫೀಸರ್ಸ್‌ರವರಿದ್ದಾರೆ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೆಲವು ಕಡೆ ಒಳ್ಳೆಯವರಿದ್ದಾರೆ, ಬಾಕಿ ಕಡೆಗಳಲ್ಲಿ ಕೆಲವರು ಬೇಕಾದಂಥ ರೀತಿಯಲ್ಲಿ ವಿಳಂಬವಾಗುವುದಕ್ಕೆ ಕಾರಣರಾಗಿದ್ದಾರೆ. ಅದಕ್ಕಾಗಿಯೇ ಜಿಲ್ಲಾವಾರು ಅಂಕೆಗಳನ್ನು ತರಿಸಿದರೆ ಪಂಪ್‌ಸೆಟ್‌ಗಳ ಸಲುವಾಗಿ ಎಷ್ಟು ಅರ್ಜಿಗಳು ಬಂದವು ಅವುಗಳಲ್ಲಿ ಎಷ್ಟು ವಿಲೇವಾರಿಯಾಗಿವೆ, ಮತ್ತು ಕಡಿಮೆಯಾಗಿ ವಿಲೇವಾರಿಯಾಗಿದ್ದರೆ ಏಕೆ ಆಯಿತು, ಎಲ್ಲೆಲ್ಲಿ ಪಕ್ಷಪಾತ ಮಾಡುತ್ತಾರೆ, ಎಂಬ ವಿಚಾರಗಳೆಲ್ಲ ತಿಳಿಯುತ್ತದೆ.

ಮುಖ್ಯವಾಗಿ ನಾನು ಇಲ್ಲಿ ಹೇಳಬೇಕಾದುದು ಏನೆಂದರೆ ಇದರಂತೆಯೇ ಟ್ರಾಕ್ಟರ ಮೊದಲಾದವುಗಳನ್ನು ಕೊಡುವ ವಿಷಯ ಇದರಲ್ಲಿ ಬಹಳ ಅವರ್ಣೀಯ ವಿಳಂಬವಾಗಿದೆ ಅವುಗಳನ್ನು ಜಾಗ್ರತೆ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ ಒಳ್ಳೆಯದಾದೀತು ಎಂದು ನನಗನ್ನಿಸುತ್ತದೆ.

ವಿಶೇಷವಾಗಿ ನಾನು ಬರಗಾಲ ಪ್ರದೇಶಕ್ಕೆ ಸಂಬಂಧಪಟ್ಟ ಕೆಲವು ಮಾತುಗಳನ್ನು ಹೇಳುತ್ತೇನೆ. ಬಿಜಾಪೂರ ಜಿಲ್ಲೆಯ ದಕ್ಷಿಣ ಭಾಗ ಮತ್ತು ಧಾರವಾಡ ಜಿಲ್ಲೆಯ ಉತ್ತರಭಾಗ ಇವು ಸಾಮಾನ್ಯವಾಗಿ ಹೊಂದಿಕೊಂಡಿರುತ್ತವೆ. ಇದೆಲ್ಲ ಬರಗಾಲ ಪ್ರದೇಶವೆನ್ನುವುದು ಒಪ್ಪುವಂಥ ಮಾತು, ಅದರಲ್ಲಿ ಭಿನ್ನ ಪ್ರಶ್ನೆಯೇ ಇಲ್ಲ. ಇಂಥಾದರಲ್ಲಿ ಸಹಿತ ಅನೇಕ ಅನಿಶ್ಚಿತ ರೀತಿಯಿಂದ ದೌರ್ಜನ್ಯಗಳು ನಡೆಯುತ್ತವೆ. ಒಂದು ಉದಾಹರಣೆ ಹೇಳುವುದಾದರೆ ಕಂದಾಯ ಮಂತ್ರಿಗಳ ಎದುರಿಗೆ ನಡೆದದ್ದನ್ನೇ ಹೇಳುತ್ತೇನೆ. ಅದನ್ನು ಹೇಳದಿದ್ದರೆ ಆತ್ಮ ವಂಚನೆಯಾದೀತು ಎಂದು ಹೇಳುತ್ತೇನೆ. ಧಾರವಾಡ ಜಿಲ್ಲೆಯೊಳಗೆ ಬರಗಾಲ ಪ್ರಶ್ನೆಯನ್ನು ಚರ್ಚೆಮಾಡಿದಾಗ, ಮಾನ್ಯ ಮಂತ್ರಿಗಳ ಸಮ್ಮುಖದೊಳಗೆ ಮುಖ್ಯವಾಗಿ ಕೂಡಿದಂಥ ಆ ಸಭೆಯೊಳಗೆ ಏನಾಯಿತು ಎಂದರೆ ಯಾವ ಯಾವ ತಾಲ್ಲೂಕಿನ ಪರಿಸ್ಥಿತಿ ಏನು ಎಂದು ಚರ್ಚೆಯಾದ ಮೇಲೆ, ರೋಣ ತಾಲ್ಲೂಕಿನ ಪರಿಸ್ಥಿತಿ ಬಂತು. ಆ ಪರಿಸ್ಥಿತಿಯೊಳಗೆ ಧಾರವಾಡ ಜಿಲ್ಲೆಯ ಡೆಪ್ಯೂಟಿ ಕಮೀಶನರು ಮತ್ತು ಬೆಳಗಾಂ ಕಮೀಷನರ್ ರು ಹಾಜರಿದ್ದರು. ಮಂತ್ರಿಗಳು ಚೇರ್‌ಮನ್ನರಿದ್ದರು. ಅಲ್ಲಿ ರೋಣ ತಾಲ್ಲೂಕಿಗೆ ಕಮೀಷನರ್‌ರು ಹಾಜರಿದ್ದರು. ಮಂತ್ರಿಗಳು ಚೇರ್‌ಮನ್ನರಿದ್ದರು. ಅಲ್ಲಿ ರೋಣ ತಾಲ್ಲೂಕಿಗೆ ಅರ್ಧ ಕಂದಾಯ ಮಾಫೀ ಕೊಡುತ್ತೇನೆಂದು ಜಿಲ್ಲಾಧಿಕಾರಿಗಳು ಹೇಳಿದರು. ಆಗ ನಾನು ಅಲ್ಲಿಯ ಆರು ಹಳ್ಳಿಗಳಲ್ಲಿ ಎರಡು ಹಪ್ತೆ ವಸೂಲ್ಮಾಡುವ ಪರಿಸ್ಥಿತಿ ಇದೆ, ಕೇಳಿಕೊಳ್ಳಿ ಎಂದು ಹೇಳಿದೆ. ಡೆಪ್ಯೂಟಿ ಕಮೀಷನರು ತಹಶೀಲ್ದಾರರನ್ನು ಕೇಳಿದರು, ಅವರು ಹೌದು ಎಂದರು, ಆಮೇಲೆ ಡೆಪ್ಯೂಟಿ ಕಮೀಷನರು ಹೇಳಿದರು ಆ ಆರ್ಡರ್ ಮಾಡಿದ್ದಲ್ಲ, ಪುನಃ ರಿಕಮಂಡ ಮಾಡಿ ಕಳುಹಿಸಿದ್ದೇವೆ, ಇಡೀ ತಾಲ್ಲೂಕಿಗೆ ಅರ್ಧ ಮಾಫಿ ಆಗುತ್ತದೆ ಅಂದರು ಈ ಎಲ್ಲ ಮಾತು ಕಂದಾಯ ಮಂತ್ರಿಗಳ ಸಮಕ್ಷಮ ಡಿವಿಜನಲ್ ಕಮೀಷನರ ಸಮಕ್ಷಮ ಡೆಪ್ಯೂಟಿ ಕಮೀಷನರು ಹೇಳುತ್ತಾರೆಂದರೆ ನಾವು ಏನು ತಿಳಿದುಕೊಂಡೆವು ಎಂದರೆ ಇಡೀ ತಾಲ್ಲೂಕಿಗೆ ಅರ್ಧ ಮಾಫಿ ಆಯಿತು ಎಂದು ಆದರೆ ಡೆಪ್ಯೂಟಿ ಕಮೀಷನರ್ ಮಾಡಿದ ರಿಕಮಂಡೇಶನ್ ಡಿವಿಜನಲ್ ಕಮೀಷನರ್ ಕಡೆಯಿಂದ ಟರ್ನಡೌನ್ ಆಗಿ ಎರಡು ಹತ್ತೆ ವಸೂಲ್ಮಾಡಬೇಕು ಎಂದು ಬಂತು. ರೈತರೆಲ್ಲ ಬಿಗಿ ಹಿಡಿದರು, ಏನೇನೋ ತೊಂದರೆಯಾಯಿತು. ಸರ್ಕಾರಕ್ಕೆ ಅಪೀಲು ಹಾಕಿ ಕಂದಾಯ ಮಂತ್ರಿಗಳನ್ನು ಭೇಟಿ ಮಾಡಿದೆವು. ಸ್ಟೇ ಕೊಡಬಹುದು ಎನ್ನುವ ಅಭಿಪ್ರಾಯ ವ್ಯಕ್ತವಾಯಿತು ದುರ್ದೈವ, ಅನಿಷ್ಟಕರ ಪ್ರಸಂಗ ಎಂದು ತಿಳಿಯುತ್ತೇನೆ-ಸರ್ಕಾರದ ಅಪ್ಪಣೆಯಾಯಿತು ಕಂದಾಯ ಮಂತ್ರಿಗಳ ಸಮಕ್ಷಮದಲ್ಲಿ ಡಿವಿಜನಲ್ ಕಮೀಷನರ ಸಮಕ್ಷಮದಲ್ಲಿ ಬಾಯಿಮಾತಿನಲ್ಲಿ ನಿಮ್ಮ ತಾಲ್ಲೂಕಿಗೆ ಅರ್ಧ ಆಯಿತು ಎಂದು ಹೇಳಿ ಹೊರಗೆ ಬಂದರು ಆದರೆ ಕಡೆಗೆ ಹೀಗಾಯಿತು ನಾವು ಏನು ಅರ್ಥ ಮಾಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲ ಹೀಗೆ ಏಕೆ ಆಗುತ್ತದೆ? ಇದರ ಬಗ್ಗೆ ಸೀರಿಯಸ್ ಆಗಿ ಆಲೋಚನೆ ಮಾಡಬೇಕು ಇದು ಪ್ರಜಾಪ್ರಭುತ್ವ "ಯಥಾ ರಾಜ ತಥಾ ಪ್ರಜಾ" ಎಂದು ಮಾನ್ಯ ಸದಸ್ಯರು ಹೇಳಿದರು ಈಗ ರಾಜ್ಯ ಉಳಿದಿಲ್ಲ, ರಾಜ ನಮ್ಮ ದೇಶದಲೆಲ್ಲ "ಯಥಾ ಪ್ರಜಾ ತಥಾ ಸ್ಥಿತಿ" ಎಂದು ಯೋಚನೆ ಮಾಡಬೇಕು. ಸರ್ಕಾರದಿಂದ ಹೊರಟಂಥ ಸೂಚ್ಯ ಶಬ್ದ

ಸಹಿತ ಅದು ಕಾರ್ಯಶೀಲವಾಗಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ನೋಡಬೇಕು ಎನ್ನುವಂಥ ಮಾತನ್ನು ಇಲ್ಲಿ ಹೇಳಿ ರೋಣ ತಾಲ್ಲೂಕಿನ ದಕ್ಷಿಣ ಭಾಗ, ಗದಗ್ ತಾಲ್ಲೂಕಿನ ಉತ್ತರ ಭಾಗ, ಶಿರಹಟ್ಟಿ, ಮುಂಡರಗಿ, ನರಗುಂದ ಇಲುಲೆಲ್ಲ ಅಭಾವ ಪರಿಸ್ಥಿತಿ ಇದೆ. ಆ ಕಡೆ ತಾವು ಲಕ್ಷ್ಯ ಕೊಡುತ್ತೀರೆಂದು ತಿಳಿಯುತ್ತೇನೆ. ಇದಕ್ಕೆ ಮುನ್ನ ನಾನು ಹೇಳಿದ ವಿಷಯಗಳ ಬಗ್ಗೆ ಸರ್ಕಾರದವರು ತೀವ್ರ ಗಮನ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಹೇಳುತ್ತೇನೆ, ಆವತ್ತಿನ ಸಭೆಯಲ್ಲಿ ನಡೆದಂಥ ವಿಷಯ ನನ್ನ ಆಯುಷ್ಯವಿರುವತನಕ ಮರೆಯಲಾರೆ, ಇದನ್ನು ಕೊಡೋಣ ಎಂದು ನುಡಿದಿದ್ದರಿಂದ ಇಷ್ಟು ತೊಂದರೆಯಾಯಿತು. ಈ ರೀತಿ ವಚನ ಭಂಗಮಾಡಿದ್ದನ್ನು ನಾನು ಎಲ್ಲಿಯೂ ನೋಡಲಿಲ್ಲ.

**ಶ್ರೀ ಎಂ.ವಿ. ಕೃಷ್ಣಪ್ಪ:** ನೀವು ಬೇರೆಯವರೊಡನೆ ಮಾತನಾಡುತ್ತಿದ್ದೀರಿ ನನ್ನ ಮುಂದೆ ಆ ವಿಷಯ ಮಾತನಾಡಲಿಲ್ಲ ನನ್ನ ಮುಂದೆ ಚರ್ಚೆ ನಡೆದಿದ್ದರೆ ಖಂಡಿತವಾಗಿ ಕೊಡಿಸುತ್ತಿದ್ದೇನು.

**ಶ್ರೀ ಎ.ಜೆ. ದೊಡ್ಡಮೇಟಿ:** ಹಾಗಾದರೆ ನನ್ನ ಬೆನ್ನು ಏಕೆ ಚಪ್ಪರಿಸಿದಿರಿ? ಇದನ್ನು ನಿಮ್ಮ ಸೆಕ್ರೆಟರಿಯವರಿಗೆ ಎಕ್ಸ್‌ಪ್ಲೇನ್ ಮಾಡಿದ್ದೇನೆ, ನಾಲ್ಕಾರು ಸಲ ನಾನು ಅವರಿಗೆ ಫೋನ್ ಮಾಡಿದ್ದೇನೆ. ಈಗಿನ ಪರಿಸ್ಥಿತಿಯಲ್ಲಿ ಉಳಿದದ್ದನ್ನು ಸಸ್ಪೆನ್‌ಷನ್ ಮಾಡಬೇಕು. ಏನಾದರೂ ಮಾಡಿ ಸರಕಾರದ ಗೌರವ, ಜನತೆಯ ಗೌರವ ಉಳಿಸಬೇಕು, ಈ ವಿಷಯಕ್ಕೆ ನನಗೆ ಮಾತನಾಡಲು ಅಪ್ಪಣೆ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

## ಧಾರವಾಡ ಜಿಲ್ಲೆಯ ಬರಗಾಲ

**ಶ್ರೀ ಎ.ಜೆ. ದೊಡ್ಡಮೇಟಿ:** (ಇ) ಭಾಗಕ್ಕೆ ನಿಜವಲ್ಲ ಎಂದು ಹೇಳಿದ್ದೀರಿ ಇದಕ್ಕೆ ಏನಾದರೂ ಪುರವಣಿ ಜೋಡಿಸುತ್ತೀರಾ ಅಥವಾ ಅಷ್ಟಕ್ಕೆ ಬಿಡುತ್ತೀರಾ?

**ಶ್ರೀ ಎಂ. ವಿ. ಕೃಷ್ಣಪ್ಪ:** 'ನೋ' ಎಂದರೆ ಅರ್ಥವಾಗುತ್ತದೆ

**ಶ್ರೀ ಎ.ಜೆ. ದೊಡ್ಡಮೇಟಿ:** 'ನೋ' ಎಂದರೆ ಇಲ್ಲ ಎಂದು ಅರ್ಥವಾಗುತ್ತದೆ ನಾನು ಆವತ್ತು ಆ ಸಭೆಯಲ್ಲಿ ಉಪಸ್ಥಿತನಿದ್ದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ:

**ಶ್ರೀ ಎಂ.ವಿ. ಕೃಷ್ಣಪ್ಪ:** ತಾವೂ ಇದ್ದೀರಿ, ಅಡಿಷನಲ್ ಡೆಪ್ಯೂಟಿ ಕಮೀಷನರು ಯಾರು ವಾಗ್ದಾನ ಮಾಡಿದರು ಎಂದು ಹೇಳುತ್ತಿರೋ ಅವರೂ ಇದ್ದರು, ಅನೇಕ ಮಾನ್ಯ

ಸದಸ್ಯರೂ ಇದ್ದರು. ನಾನು ಮಂತ್ರಿಯಾಗಿರುವಾಗ ಅಲ್ಲಿ ಅನೇಕರು ನನಗೆ ಕೆಲವು ವಿಷಯಗಳನ್ನು ಹೇಳುತ್ತಿದ್ದರು, ನಾನು ಕೇಳುತ್ತಿದ್ದೆ. ನೀವು ಮತ್ತು ಅಡಿಷನಲ್ ಡೆಪ್ಯೂಟಿ ಕಮೀಷನರೂ ಮಾತನಾಡುತ್ತಿದ್ದೀರಿ. ನೀವು ಏನು ಕೇಳಿದಿರೋ ಅವರು ಏನು ಹೇಳಿದರೋ ನನಗೆ ಗೊತ್ತಿಲ್ಲ. ತಾವು ಸಂತೋಷವಾಗಿದ್ದೀರಿ. ಏನು ನಮಗೆ ಸಂತೋಷವಾಯಿತೇ ಎಂದು ಹೇಳಿದ್ದಕ್ಕೆ ಆಯಿತು ಎಂದು ಹೇಳಿದಿರಿ ನಾನು ಬಂದುಬಿಟ್ಟೆ ಅಷ್ಟೆ.

**ಶ್ರೀ ಎ.ಜಿ. ದೊಡ್ಡಮೇಟಿ:** 'ಇಲ್ಲ' ಎಂದರೆ ನಾನು ಸುಳ್ಳು ಕೇಳಿದ್ದೇನೆ ಎಂದಾಗುತ್ತದೆ.

**ಸಭಾಪತಿ:** ಅದನ್ನು ಅಲ್ಲಿಯೇ ಬಿಡುವುದು ಅತ್ಯುತ್ತಮ ಹಾಗೂ ಮತ್ತೊಂದು ಪ್ರಶ್ನೆಯಿಂದ ಈ ವಿಷಯ ಮುಂದುವರೆಸೋಣ.

**ಶ್ರೀ ಎ.ಜಿ. ದೊಡ್ಡಮೇಟಿ:** ನೆನಪಿಲ್ಲ ಎಂದು ಹೇಳಿದ್ದರೆ....

**ಅಧ್ಯಕ್ಷರು:** ಅವರು ಹೇಳಿದರು ನನಗೆ ಗೊತ್ತಿಲ್ಲ..... ಎಂದು

**ಶ್ರೀ ಎಚ್.ಆರ್. ಕೇಶವಮೂರ್ತಿ:** ಒಂದು ಪಾಯಿಂಟ್ ಆಫ್ ಆರ್ಡರ್ ಸ್ವಾಮಿ ಸಭೆಯಲ್ಲಿ ಹೆಸರನ್ನು ಹೇಳಿದರೆ ಹೆಸರು ಹೇಳಬಾರದು ಎಂದು ಹೇಳುತ್ತಾರೆ. ಹೆಸರನ್ನು ಹೇಳದೆ ಇದ್ದಾಗ ಮಾನ್ಯ ಮಂತ್ರಿಗಳು ಹೆಸರನ್ನು ಹೇಳಿ ಎನ್ನುತ್ತಾರೆ.

**ಶ್ರೀ ಬಿ.ಡಿ. ಜತ್ತಿ:** ಈ ವಿಷಯಗಳು ನ್ಯಾಯಾಲಯದಲ್ಲಿ ಇವೆ. ಆದರು ಮತ್ತೆ ಎ.ಬಿ. ಮತ್ತು ಸಿ. ಎಂದು ದೂರು ಕೊಡಬಹುದು, ಒಂದು ವೇಳೆ ಮಾನ್ಯ ಸದನವು ಈ ಅಂಶಗಳ ಬಗ್ಗೆ ತಿಳಿದುಕೊಳ್ಳಲು ಬಯಸಿದರೆ ಮಾತ್ರ, ಇಲ್ಲವಾದರೆ ಅದರ ಆವಶ್ಯಕತೆಯಿಲ್ಲ.

**ಶ್ರೀ ಬಿ. ಚನ್ನಬೈರೇಗೌಡ:** ಇನ್ನು ವರ್ಗಾವರ್ಗಿಗಳ ವಿಷಯ ಸ್ವಾಮಿ. ಈ ದೇಶದಲ್ಲಿ ನಡೆಯತಕ್ಕ ರೆವೆನ್ಯೂ ಇನ್‌ಸ್ಪೆಕ್ಟರುಗಳಿಂದ ಹಿಡಿದು ಡೆಪ್ಯೂಟಿ ಕಮೀಷನರ್ ಡಿವಿಜನಲ್ ಕಮೀಷನರ್‌ವರೆಗೆ ಕೆಲವು ಕಾಂಗ್ರೆಸ್ಸಿನವರ, ಸ್ವಪಕ್ಷದ ಜನರ ಒತ್ತಡಕೋಸ್ಕರ ವರ್ಗಾ ವರ್ಗಿಗಳು ನಡೆಯುತ್ತವೆ. ಕೆಲವು ದಿನಗಳ ಹಿಂದೆ ಡೆಪ್ಯೂಟಿ ಕಮೀಷನರುಗಳ ವರ್ಗಾವಣೆ ಸಂಬಂಧದಲ್ಲಿ ನಡೆಯುತ್ತವೆ. ಕೆಲವು ದಿನಗಳ ಹಿಂದೆ ಡೆಪ್ಯೂಟಿ ಕಮೀಷನರ್‌ಗಳ ವರ್ಗಾವಣೆ ಸಂಬಂಧದಲ್ಲಿ ಮಂತ್ರಿಮಂಡಲದಲ್ಲಿ ತೀರ್ಮಾನವಾಗಿ, ಆ ತೀರ್ಮಾನ ಹೊರಬಂದ ಕೂಡಲೇ ಕೆಲವು ಕಾಂಗ್ರೆಸ್ಸಿಗರು ಬಂದ ರೆವೆನ್ಯೂ ಮಂತ್ರಿಗಳಲ್ಲಿ ಹೇಳಿಕೊಂಡದ್ದರಿಂದ ಅವರು ಆ ವರ್ಗಾವಣೆಯನ್ನು ತಡೆ ಹಿಡಿದು ಕ್ಯಾನ್ಸಲ್ ಮಾಡಿದ್ದಾರೆ. ಕೋಲಾರದಿಂದ ಬೆಂಗಳೂರು, ಬೆಂಗಳೂರಿನಿಂದ ಇನ್ನೊಂದು ಕಡೆ ಹೀಗೆ ವರ್ಗವಾಗಿದ್ದ ಡೆಪ್ಯೂಟಿ ಕಮೀಷನರುಗಳಿಗೆ ಸಂಬಂಧಿಸಿದ ಆರ್ಡರನ್ನು ತಡೆ ಹಿಡಿದಿದ್ದಾರೆ. ಇದರ ಪರಿಣಾಮವೇನಾಗುತ್ತದೆ? ಆ ಡೆಪ್ಯೂಟಿ ಕಮೀಷನರುಗಳಿಗೆ ಸಂಬಂಧಿಸಿದ ಆರ್ಡರನ್ನು ತಡೆ ಹಿಡಿದಿದ್ದಾರೆ. ಇದರ ಪರಿಣಾಮವೇನಾಗುತ್ತದೆ? ಆ ಡೆಪ್ಯೂಟಿ ಕಮೀಷನರ್ ಹತ್ತಿರ ಸದಸ್ಯರುಗಳು ಕೆಲವರು

1740-9

ಪ್ರಭಾವ ಬೆಳೆಸಿಕೊಂಡು ಆ ಮೂಲಕ ಚಿಕ್ಕ ಅಧಿಕಾರಿಗಳ ಹತ್ತಿರ ಪ್ರಭಾವವನ್ನು ಬೆಳೆಸಿಕೊಂಡು ಜನಸಾಮಾನ್ಯರ ಮೇಲೆ ಪ್ರಭಾವವನ್ನು ಬೀರಿ ತಮ್ಮ ಇಫ್ಲೂಯನ್ಸ ಬೆಳೆಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದನ್ನೇ ಕಂಡು ಹಿಡಿಯುವುದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ.

ಹೀಗೆಯೇ ಸರ್ಕಾರವು ಕಾಂಗ್ರೆಸ್ ಪಕ್ಷವನ್ನು ಇತರ ವಿಚಾರಗಳಲ್ಲಿಯೂ ಬಲಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದೆ. ಕಳೆದ ವರ್ಷ ಸದಸ್ಯರು ಚೇರ್ಮನ್ ಕಮಿಟಿಗಳನ್ನು ಮಾಡಿದರು ಅದರಲ್ಲಿ ಒಂದು ನೀತಿ ಇಲ್ಲ ವಿಧಾನ ಸಭಾ ಸದಸ್ಯರು ಚೇರ್ಮನ್ ಆಗಿರಬೇಕು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಚೇರ್ಮನ್ನರಾಗಿರಬೇಕು ಎಂದು ಮಾಡಿದರು. ಕಾಂಗ್ರೆಸ್ ಪಕ್ಷದವರು ವಿಧಾನ ಸಭಾ ಸದಸ್ಯರಾಗಿ ಇಲ್ಲದೇ ಇರುವ ಕಡೆ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರನ್ನು ಈ ಕಮಿಟಿಗಳಿಗೆ ಚೇರ್ಮನ್ನರಾಗಿ ಮಾಡಿದರು. ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಸರ್ಕಾರದವರು ಬೇರೆ ರೀತಿಯಾಗಿ ಮಾಡಿದರು. ಅಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ವಿಧಾನಸಭಾ ಸದಸ್ಯರಾಗಲೇ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಲೀ ಇಲ್ಲದ್ದರಿಂದ ಬೇರೆ ತಾಲ್ಲೂಕಿನವರನ್ನು ತಂದು ಸ್ಕಾಲರ್‌ಶಿಪ್ ಕಮಿಟಿಗೆ ಚೇರ್ಮನ್ನರಾಗಿ ಮಾಡಿದ್ದಾರೆ. ಈ ಸರ್ಕಾರ ನಡೆಸತಕ್ಕ ಇಂಥ ಪಕ್ಷಪಾತವನ್ನು ತಡೆಗಟ್ಟುವುದಕ್ಕೆ ವಿಶೇಷ ಅಧಿಕಾರವುಳ್ಳ ಒಂದು ಹೈ ಪವರ್ ಕಮಿಟಿಯನ್ನು ನೇಮಿಸಬೇಕು ಎನ್ನುವುದು ಈಗ ತಂದಿರುವ ನಿರ್ಣಯದ ಉದ್ದೇಶವಾಗಿದೆ.

ಖಾದಿ ಬೋರ್ಡ್ ಪ್ರಕರಣದ ಬಗ್ಗೆ ಈಗಾಗಲೇ ಸಭೆಯ ಮುಂದೆ ಅನೇಕ ವಿಚಾರಗಳನ್ನು ನನ್ನ ಮಾನ್ಯ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಖಾದಿ ಬಹಳ ಪವಿತ್ರವಾದುದು ಎಂದು ಹೇಳುತ್ತಿದ್ದಾರೆ. ಈ ಖಾದಿಗೆ ಗೌರವ ಮನ್ನಣೆ ಕೊಡುತ್ತಿದ್ದಾರೆ. ಅಂಥ ಪವಿತ್ರವಾದ ಖಾದಿಗೆ ಖಾದಿ ಬೋರ್ಡ್ ಮೂಲಸ್ಥಾನವಾಗಿದೆ. ಈ ಖಾದಿ ಬೋರ್ಡಿನಲ್ಲಿ ಐದು ಲಕ್ಷ ರೂಪಾಯಿ ದುರುಪಯೋಗವಾಗಿದೆ ಎಂದು ನಾವು ಕಳೆದ ಅಧಿವೇಶನದಲ್ಲಿ ಸಹ ಹೇಳಿದೆವು. ಈ ಸಾರಿಯೂ ಹೇಳಿದ್ದೇವೆ. ಅದರಲ್ಲಿ ನಡೆಯತಕ್ಕ ಅನ್ಯಾಯಗಳನ್ನು ಸಹ ಹೇಳಿದ್ದೇವೆ. ನಮ್ಮ ರಾಜ್ಯದಲ್ಲಿ ಖಾದಿ ಉಪಯೋಗಿಸತಕ್ಕ ಜನ ಸುಮಾರು ಎರಡು ಲಕ್ಷ ಇರಬಹುದು. ಅವರಿಗೋಸ್ಕರ ಖಾದಿಯನ್ನು ತರಿಸಿ ಆ ಬಗ್ಗೆಯ ಮೇಲೆ ರಿಬೇಟ್ ಸಹ ಕೊಡುತ್ತಿದ್ದೀರಿ. ದೇಶದ ಹಣವನ್ನು ಕೊಡತಕ್ಕ ಖಾದಿ ಬೋರ್ಡಿನಲ್ಲಿ ಇಂಥ ಅನ್ಯಾಯ ನಡೆದಿದೆ. ಲಂಚರುಷುವತ್ತುಗಳು ನಡೆದಿವೆ. ಇದನ್ನು ತಡೆಗಟ್ಟುವುದಕ್ಕೆ ಈ ಸರ್ಕಾರದಿಂದ ಆಗಿಲ್ಲ. ಆದುದರಿಂದ ಒಂದು ಕಮಿಟಿಯನ್ನು ನೇಮಕ ಮಾಡಬೇಕು ಎಂದು ನಾವು ಹೇಳುತ್ತಿದ್ದೇನೆ.

ಭಾರತದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಡಿ. ಸಂಜೀವಯ್ಯನವರೇ ಅನ್ಯಾಯವಾಗಿ ದುಡ್ಡು ಸಂಪಾದನೆ ಮಾಡಿರುವುದು, ಅನ್ಯಾಯವಾಗಿ ಆಸ್ತಿ ಮಾಡಿರುವುದನ್ನು ಕಂಡು ಹಿಡಿಯುವುದಕ್ಕೋಸ್ಕರ ಕಾಂಗ್ರೆಸ್ ಮಂತ್ರಿಗಳು ಲೆಕ್ಕ ಕೊಡಬೇಕೆಂದು ಹೇಳಿದಾರೆ ಇವತ್ತಿನ

ದಿವಸ ನಾವೇನೂ ಹೊಸದಾಗಿ ಒಂದು ಕಮಿಟಿಯನ್ನು ಮಾಡಿ ಅದರಲ್ಲಿ ನಮ್ಮನ್ನು ಸೇರಿಸಿ ಎಂದು ಕೇಳುತ್ತಾಇಲ್ಲ. ಎಲ್ಲಾ ದೇಶಗಳಲ್ಲೂ ಇಂತಹ ಕಮಿಟಿಯ ಅವಶ್ಯಕತೆ ಇದೆ ಎಂದು ಹೇಳುತ್ತಾ ಇದ್ದಾರೆ ಅದಕ್ಕೆ ಹೆಚ್ಚು ಅಧಿಕಾರ ಕೊಡಬೇಕು ಮತ್ತು ಅವರ ತೀರ್ಮಾನಕ್ಕೆ ಸರ್ಕಾರದವರು ಮನ್ನಣೆ ಕೊಡಬೇಕು. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಲಂಚಗುಳಿತನ ಮಾಡತಕ್ಕ ಅಧಿಕಾರಿಗಳು ಮತ್ತು ರಾಜಕಾರಣಿಗಳನ್ನು ಶಿಕ್ಷೆ ಮಾಡುವುದಕ್ಕೆ ಹೆಚ್ಚು ಅನುಕೂಲಗಳಿಲ್ಲ ಎಂದು ಹೇಳುತ್ತಾ ಇದ್ದರು. ಅದಕ್ಕೆ ತಕ್ಕಂತಹ ಶಾಸನ ಇಲ್ಲ ಎಂದು ಅವರು ಅಭಿಪ್ರಾಯ ಪಟ್ಟರು ರಷ್ಯಾ ದೇಶದಲ್ಲಿ ಮೂರುತಿಂಗಳ ಹಿಂದೆ ಕೆಲವು ಜನ ಅಧಿಕಾರಗಳನ್ನು-6 ಜನರನ್ನು - ಇಂತಹ ಕೆಲಸ ಮಾಡಿದ್ದಕ್ಕಾಗಿ ಗುಂಡಿನಿಂದ ಹೊಡೆದು ಸಾಯಿಸಿದ್ದಾರೆ, ಹಿಂದೆ ಪಾಕಿಸ್ಥಾನದಲ್ಲಿ ಕೂಡ ಒಬ್ಬ ಸೆಷನ್ಸ್ ಜಡ್ಜರನ್ನು ಅಕ್ರಮವಾಗಿ ಟಿ.ಎ. ತೆಗೆದುಕೊಂಡಿದ್ದರೆಂದು ಡಿಸ್‌ಮಿಸ್ ಮಾಡಿದರು. ಅಂತಹ ಪ್ರಸಂಗಗಳೂ ಕೂಡಾ ನಡೆದಿವೆ. ಈಗ ನಮ್ಮಲ್ಲಿರತಕ್ಕ ನಿಯಮಗಳ ಪ್ರಕಾರ ಸಿ.ಸಿ.ಎ. ರೂಲ್ಸ್ ಅನುಸರಿಸಿ ಯಾವುದಾದರೂ ಒಬ್ಬ ಅಧಿಕಾರಿಯ ಮೇಲೆ ಕ್ರಮ ತೆಗೆದು ಕೊಳ್ಳಬೇಕಾದರೆ ನಾಲ್ಕೈದು ತಿಂಗಳು ಆಗುತ್ತದೆ. ಅಷ್ಟರೊಳಗೆ ಆ ಅಧಿಕಾರಿ ಶಾಸನ ಸಭೆಯ ಮೆಂಬರುಗಳ ಪಾದಗಳನ್ನು ಹಿಡಿದುಕೊಂಡು ಮಂತ್ರಿಗಳ ಮೇಲೆ ಒತ್ತಾಯ ಹಾಕಿ ಆತನ ಮೇಲೆ ತೆಗೆದುಕೊಳ್ಳಬೇಕಾಗಿರತಕ್ಕ ಕ್ರಮ ತೆಗೆದುಕೊಳ್ಳದಂತೆ ಮಾಡಿರತಕ್ಕ ನೂರಾರು ನಿದರ್ಶನಗಳು ಇವೆ. ನಿತ್ಯ ಇಂತಹ ಅನಾಚಾರಗಳನ್ನು ಮಾಡುತ್ತಿರುವಂತಹ ಕಾಂಗ್ರೆಸ್ ಸರ್ಕಾರದಲ್ಲಿ ನಡೆಯತಕ್ಕ ಅನ್ಯಾಯಗಳನ್ನು ನಿರ್ಮೂಲ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಕೇಳಿರತಕ್ಕ ಈ ನಿರ್ಣಯವನ್ನು ಒಪ್ಪಿಕೊಳ್ಳಿ, ಇದಕ್ಕೆ ಸರ್ವಾನುಮತದಿಂದ ಅಂಗೀಕಾರ ಮಾಡಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎ.ಜಿ. ದೊಡ್ಡಮೇಟಿ(ರೋಣ):** ಸ್ವಾಮಿ ಈ ನಿರ್ಣಯ ಏನು ತಂದಿದ್ದಾರೆ ಇದರ ಮೇಲೆ ನನ್ನ ಕೆಲವು ಅಭಿಪ್ರಾಯಗಳನ್ನು ಹೇಳಲಿಕ್ಕೆ ಅಪೇಕ್ಷೆ ಮಾಡುತ್ತೇನೆ. ಈ ನಿರ್ಣಯುವನ್ನು ಮೊದಲು ಹಿಂದಿನ ಸಲ ನಾನೇ ತಂದದ್ದು ನಿಜ, ಅದನ್ನು ಸೂಚಿಸಲಿಲ್ಲ ಎಂಬ ಮಾತೂ ನಿಜ. ಅದೇ ನಿರ್ಣಯುವನ್ನು ಇತರ 35 ಜನ ಕಳುಹಿಸಿರುವುದೂ ನಿಜ ಆದರೆ ನಾನು ನಿರ್ಣಯ ತಂದುದರ ಹಿಂದಿನ ಉದ್ದೇಶ ಮತ್ತು ಈಗ ಈ ನಿರ್ಣಯವನ್ನು ಉಪಯೋಗಿಸಿಕೊಳ್ಳುವುದರೊಳಗೆ ಸೌಮ್ಯ ಇದೆಯೇ ಎಂಬುದನ್ನು ತಾವು ವಿಚಾರ ಮಾಡಬೇಕು, ಅದಕ್ಕೂ ಇದಕ್ಕೂ ಸೌಮ್ಯ ಇಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ದೇಶದ ಯಾವುದೇ ಸಮಸ್ಯೆಯನ್ನು ರಾಜಕಾರಣಿಗಳು ಅಥವಾ ರಾಜಕೀಯ ಪಕ್ಷಗಳು ಬಳಸಿಕೊಳ್ಳುವುದು ಒಂದು ಭ್ರಷ್ಟಾಚಾರ ಎಂದು ನಾನು ಹೇಳುತ್ತೇನೆ. ಪಕ್ಷ ಆಗಲಿ ರಾಜಕಾರಣಿಯಾಗಲೀ ಬಳಸಿಕೊಳ್ಳಬಾರದು ಈ ನಿರ್ಣಯದೊಳಗೆ ಏನು ಹೇಳಿದೆ ಎಂದರೆ ಸರ್ಕಾರದ ಹಾಗೂ ಸರ್ಕಾರದ ಪೂರ್ಣ

ಆಡಳಿತಕ್ಕೆ ಒಳಪಡದ ಅರ್ಧ ಆಡಳಿತಾತ್ಮಕ ಹಾಗೂ ಸಾಂಘೀಕ ಸಂಸ್ಥೆಗಳಲ್ಲಿರತಕ್ಕ ದುರಾಚಾರ ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರ ಇವು ಮೂರು ಒಂದೇ ಮಾತಿಗೆ ಸೇರಿದ್ದು ಒಂದೇ ಮಾತಿನಲ್ಲಿ ಭ್ರಷ್ಟಾಚಾರ ಎಂದರೆ ಇದೆಲ್ಲಾ ಬರುತ್ತದೆ ಎಂದು ತಿಳಿದುಕೊಳ್ಳುತ್ತೇನೆ. ಆದರೆ ಕಾನೂನು ದೃಷ್ಟಿಯಿಂದ ಅವು ಬೇರೆ ಬೇರೆ ಇರುವ ಕಾರಣಕ್ಕಾಗಿ ಈ ಮೂರು ಶಬ್ದಗಳನ್ನೂ ಇಲ್ಲಿ ಉಪಯೋಗಿಸಲಾಗಿದೆ ಎಂದು ತಿಳಿದುಕೊಳ್ಳುತ್ತೇನೆ. ಅದ್ದರಿಂದ ಇಲ್ಲಿ ಭ್ರಷ್ಟಾಚಾರ ಎಂದು ಯಾವ ಯಾವ ಶಬ್ದ ಉಪಯೋಗ ಮಾಡುತ್ತೇನೆಯೋ ಆಗೆಲ್ಲಾ ಈ ಮೂರು ಮಾತುಗಳೂ ಸೇರುತ್ತವೆ ಎಂದು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ ಇದಕ್ಕೆ ಪೂರ್ವದಲ್ಲಿ ಭ್ರಷ್ಟಾಚಾರ ಇದೆ, ಸಾಕಾದಷ್ಟು ಇದೆ, ಜನರು ರೋಸಿಹೋಗುವಷ್ಟು ಇದೆ ಎಂಬುದರಲ್ಲಿ ಬಹುಶಃ ಎರಡು ಅಭಿಪ್ರಾಯವಿಲ್ಲ ಆದರೆ ಇದಕ್ಕೆ ಕಾರಣ ಕೇವಲ ಸರ್ಕಾರ ಅಥವಾ ಕಾಂಗ್ರೆಸ್ ಪಕ್ಷ ಎಂದು ಎನ್ನುವುದಕ್ಕಿಂತ ಇದಕ್ಕೆ ಕಾರಣ ಸಾಮಾನ್ಯವಾಗಿ ಸರ್ಕಾರದ್ದೂ ಉಂಟು, ಶಾಸನ ಸಭಾ ಸದಸ್ಯರದು ಉಂಟು ಇನ್ನುಳಿದ ಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರು ಯಾರ‍್ಯಾರು ಇದ್ದಾರೆ ಅವರೆಲ್ಲರೂ ಇದಕ್ಕೆ ಕೆಲ ಕೆಲವು ಅಂಶಾತ್ಮಕವಾಗಿ ಜವಾಬ್ದಾರಿಯನ್ನು ಹೊರಬೇಕಾಗಿದೆ ಕೇವಲ ಸರ್ಕಾರದ ಮೇಲೆ ಇದು ನಿಂತಿಲ್ಲ ಆದರೆ ಸರ್ಕಾರ ಈ ಜವಾಬ್ದಾರಿಯನ್ನು ಹೊರದೇ ಹೋದರೆ ಭ್ರಷ್ಟಾಚಾರ ನಿರ್ಮೂಲವಾಗುವುದಿಲ್ಲ. ಆ ಕಾರಣಕ್ಕಾಗಿ ಈ ಪ್ರಶ್ನೆಯನ್ನು ವಿಚಾರ ಮಾಡುತ್ತಾ ಹೋದರೆ ಶಾಸ್ತ್ರೀಯವಾಗಿ ಈ ಪ್ರಶ್ನೆಯನ್ನು ಹೇಗೆ ಬಿಡಿಸಬೇಕು ಎಂಬುದನ್ನು ವಿಚಾರ ಮಾಡಬೇಕೆ ಹೊರತು ಕೇವಲ ಪಕ್ಷದ ದೃಷ್ಟಿಯಿಂದ ಅಥವಾ ರಾಜಕೀಯ ದೃಷ್ಟಿಯಿಂದ ವಿಚಾರ ಮಾಡುವುದು ಸರಿಯಲ್ಲ, ಶಾಸ್ತ್ರೀಯವಾಗಿ ವಿಚಾರ ಮಾಡಿನೋಡಿದರೆ ಏನು ಕಾಣುತ್ತದೆ? ಈ ದೇಶದಲ್ಲಿ ಬರೀ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ ಹಿಂದೂಸ್ಥಾನದ ಬೇರೆ ಬೇರೆ ರಾಜ್ಯಗಳಲ್ಲಿ ಇವತ್ತು ಈ ಪ್ರಶ್ನೆ ಬಹಳ ದೊಡ್ಡದಾಗಿ ವ್ಯಾಪಕವಾಗಿದೆ. ಅದನ್ನು ನೋಡಿದರೆ ನಮ್ಮ ದೇಶದಲ್ಲಿ ಇದು ಕಡಿಮೆ ಇದೆ ಎಂದು ಹೇಳಬಹುದು ಒಂದು ಉದಾಹರಣೆ ಹೇಳುವುದಾದರೆ ಉತ್ತರ ಕರ್ನಾಟಕದಲ್ಲಿ ಕಾರವಾರ ಜಿಲ್ಲೆಯನ್ನು ನೋಡಿ ಅಲ್ಲಿ ಲಂಚಗುಳಿತನ ಅಥವಾ ಭ್ರಷ್ಟಾಚಾರ ಬಹುಮಟ್ಟಿಗೆ ಕಡಿಮೆ ಇದೆ. ಎಂದು ಹೇಳಬಹುದು ಇದಕ್ಕೆ ಕಾರಣವೇನು? 1921 ರಿಂದ ಅಲ್ಲಿ ಅನೇಕ ಬಗೆಯ ಸತ್ಯಾಗ್ರಹಗಳಾಗಿ ಜನತೆಯಲ್ಲಿ ಆಂದೋಳನಗಳಾಗಿ ವಿಶೇಷತಃ ರೈತರು ಬಹಳಷ್ಟು ಸೋತಿದ್ದಾರೆ ಇಂತಹ ಭ್ರಷ್ಟಾಚಾರ ಮಾಡುವಂತಹ ತ್ರಾಣ ಅಲ್ಲಿನ ಅಧಿಕಾರಿಗಳಿಗೂ ಇಲ್ಲ, ರಾಜಕಾರಣಿಗಳಿಗೂ ಇಲ್ಲ ಅಂತಹ ಒಂದು ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಆ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಇವತ್ತು ಭ್ರಷ್ಟಾಚಾರದೊಳಗೆ ಎರಡು ವಿಭಾಗಗಳನ್ನು ಮಾಡಬಹುದು, ಒಂದು ಆಡಳಿತಾತ್ಮಕ ಭ್ರಷ್ಟಾಚಾರ ಮತ್ತೊಂದು ರಾಜಕೀಯ ಭ್ರಷ್ಟಾಚಾರ, ರಾಜಕೀಯ ಭ್ರಷ್ಟಾಚಾರ ಎನ್ನುವುದರಲ್ಲಿ ಸಂಸ್ಥೆಗಳು ಬರುತ್ತದೆ. ಸಹಕಾರ ಸಂಸ್ಥೆಗಳವರು ಬರುತ್ತಾರೆ ಕಾರ್ಪೋರೇಟ್ ಬಾಡೀಸ್ ಅವರು ಬರುತ್ತಾರೆ ರಾಜಕೀಯದ ವ್ಯವಹಾರದಲ್ಲಿ ಇದ್ದ ಪುಢಾರಿಗಳು ಬರುತ್ತಾರೆ.

**ಶ್ರೀ ಕೆ.ಪಿ. ರೇವಣ್ಣ ಸಿದ್ದಪ್ಪ:** ಕಾರವಾರ ಜಿಲ್ಲೆಯಲ್ಲಿ ಆ ತರಹ ಏನೂ ಇಲ್ಲ ಎಂದು ಹೇಳಿದಿರಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ನವರು 50 ಸಾವಿರ ರೂಪಾಯಿಗಳನ್ನು ಫಂಡಿಗೆ ಕೊಡಬೇಕಾದರೆ ಯಾವ ರೀತಿ ಕೊಟ್ಟರು?

**ಶ್ರೀ ಎ.ಜೆ. ದೊಡ್ಡಮೇಟಿ:** ಆ ಪ್ರಶ್ನೆಯೇ ಬೇರೆ ಇಲ್ಲಿ ಪ್ರಶ್ನೆ ಏನಿದೆ ಎಂದರೆ ಜನ ಸಾಮಾನ್ಯರೊಳಗೆ ಹೆಚ್ಚಿನ ಜಾಗ್ರತೆ ಎಲ್ಲೆಲ್ಲಿ ಇದೆ ಅಲ್ಲೆಲ್ಲಾ ಭ್ರಷ್ಟಾಚಾರ ಕಡಿಮೆ ಇದೆ ಎನ್ನುವುದು ಒಂದು ಅಂಶ ಅದನ್ನು ಮಾತ್ರ ನಾನು ಇಲ್ಲಿ ಹೇಳಿದೆ ಅಷ್ಟೆ ಇನ್ನು ಆಡಳಿತಾತ್ಮಕ ಭ್ರಷ್ಟಾಚಾರ ಇವೆರಡೂ ಒಂದಕ್ಕೊಂದಕ್ಕೆ ಸ್ನೇಹ ಇದೆ ಎರಡೂ ಒಂದಕ್ಕೊಂದು ತಳಕು ಆಗಿದೆ ಒಂದು ಬಿಟ್ಟು ಇನ್ನೊಂದು ಇರುವುದಿಲ್ಲ ಒಂದು ರೂಪಾಯಿನ ಎರಡು ಮಗ್ಗಲು ಇವು ಹೀಗೆ ಮೊದಲನೇ ಮುಖ ಪೋಲಿಟಿಕಲ್ ಭ್ರಷ್ಟಾಚಾರ, ಎರಡನೇ ಮುಖ ಆಡಳಿತ ಭ್ರಷ್ಟಾಚಾರ ಆದುದರಿಂದ ಮೊದಲು ಪೊಲಿಟಿಕಲ್ ಭ್ರಷ್ಟಾಚಾರ ನಿಲ್ಲದೇ, ಈ ಆಡಳಿತ ಭ್ರಷ್ಟಾಚಾರ ನಿಲ್ಲುವುದಿಲ್ಲ. ಹಾಗೆ ಅದನ್ನು ನಿಲ್ಲಿಸುತ್ತೇವೆಂದು ಹೇಳತಕ್ಕದ್ದು ಶಾಸ್ತ್ರೀಯವಾದ್ದೂ ಅಲ್ಲ ಅದೊಂದು ಕೇವಲ ಭ್ರಮೆ ಎಂತ ಹೇಳಬಹುದು. ಇದೊಂದು ದೊಡ್ಡ ರಾಷ್ಟ್ರೀಯ ರೋಗ ನಾವು ಈ ದಿವಸ ಮಲೇರಿಯಾ, ಕಾಲರಾ, ಕ್ಷಯ, ಇತ್ಯಾದಿ ರೋಗಗಳನ್ನು ತಡೆಗಟ್ಟುವಂತೆ ಇದನ್ನು ತಡೆಗಟ್ಟಲು ಖಂಡಿತಾ ಸಾಧ್ಯವಿಲ್ಲ, ಏಕೆಂದರೆ ಇದೊಂದು ಅಂಥಾ ದೊಡ್ಡ ರಾಷ್ಟ್ರೀಯ ಸಾಂಕ್ರಾಮಿಕ ಜಾಡ್ಯ ಇದು ನಿಲ್ಲಬೇಕಾಗಿದ್ದರೆ ರಾಷ್ಟ್ರೀಯ ಶೀಲ ಹೆಚ್ಚಬೇಕು. ಅದು ಹೊರತು ಇದು ಸಾಧ್ಯವೇ ಇಲ್ಲ, ಈ ದೇಶಕ್ಕೆ ಯಾವ ಆಡಳಿತವೇ ಬರಲೀ ಆ ಕಮ್ಯುನಿಜಮ್ಮೇ ಬರಲೀ ಅಥವಾ ಇನ್ನಾವ ಇಜಂಗಳೇ ಬರಲಿ ಇದನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಈ ರೋಗ ಕ್ಯಾಪಿಟಲಿಜಂನಲ್ಲೂ ಇದೆ. ಆ ಸೋಷಿಯಲಿಜಂನಲ್ಲೂ ಇದೆ. ಆದುದರಿಂದ ಈ ಪಕ್ಷ ಹೋಗಿ ಆ ಪಕ್ಷ ಬರಲಿ ಇದು ಹೋಗುತ್ತೆ, ಈ ಭ್ರಷ್ಟಾಚಾರ ನಿಲ್ಲುತ್ತೆ ಎಂತ ಯಾರಾದರೂ ಭಾವಿಸಿದ್ದರೆ ಕೇವಲ ಅದೊಂದು ಭ್ರಮೆಯೇ ಸರಿ, ಈ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಪುಢಾರಿಗಳಿದ್ದಾರೆ. ಎಲ್ಲಡೆಗಳಲ್ಲೂ ಈ ಭ್ರಷ್ಟಚಾರ ಇದ್ದೇ ಇದೆ ಆದರೆ ಈ ದಿವಸ ಈ ಭ್ರಷ್ಟಾಚಾರದ ಬಗ್ಗೆ ಎಷ್ಟು ಜನ ಸದಸ್ಯರುಗಳು ಮಾತನಾಡಿದ್ದಾರೋ ಅಷ್ಟು ಜನಗಳಾದರೂ ಒಂದು ನಿಯತ್ತಿನಿಂದ ನಡೆಯಲು ನಿರ್ಧಾರ ಮಾಡಿದ್ದೇ ಆದರೆ ಅಲ್ಲಿಗೆ 100 ಕ್ಕೆ 15 ರಷ್ಟು ಈ ಭ್ರಷ್ಟಾಚಾರ ಕಡಿಮೆಯಾಯಿತೆಂದು ಧಾರಾಳವಾಗಿ ಹೇಳಬಹುದು. ಈ ರಾಷ್ಟ್ರೀಯ ಶೀಲ ಬೆಳೆಯದ ಹೊರತು ಈ ಅನೀತಿಗಳು ನಿಲ್ಲಲು ಸಾಧ್ಯವೇ ಇಲ್ಲ. ಇನ್ನಾದರೂ ನಾವು ಈ ಎಚ್ಚೆತ್ತುಕೊಂಡು ಈ ರಾಷ್ಟ್ರೀಯ ಶೀಲವನ್ನು ಹೆಚ್ಚಿಸಿ ಕೊಳ್ಳದಿದ್ದರೆ ಮುಂದೆ ನಮಗಿನ್ನೂ ಬಹಳ ಕಷ್ಟಗಳು ಬರುತ್ತವೆ. ಆದರೆ ಈ ವಿಚಾರದಲ್ಲಿ ಮೊನ್ನೆ ತಾನೇ ಕೇಂದ್ರದಲ್ಲಿ ಶ್ರೀ ನಂದಾ ಅವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಸ್ಥಾಪಿಸಲಾಯಿತೆಂದು ಕೇಳಿದೆ. ಈ ಹಿಂದೆ ಶ್ರೀ ಸಂತಾನಂ ಅವರು ಈ ವಿಚಾರದಲ್ಲಿ ಒಂದು ವರದಿಯನ್ನು ಕೊಟ್ಟಿದ್ದರು. ಆದರೆ ಈಗ ಈ ನಂದಾ ಅವರ ಕಮಿಟಿಯನ್ನು ಕೇವಲ

ಒಂದು ಎಚ್ಚರಿಕೆಗಾಗಿ ಮಾಡಿದ್ದಾರೆಂದು ತಿಳಿಯುತ್ತೇನೆ ಆದರೆ ಇದೂ ಕೂಡ ನಾನಾಗಲೇ ಹೇಳಿದಂತೆ ಶಾಸ್ತ್ರೀಯವಾದ ಮಾರ್ಗವಲ್ಲ. ಆದುದರಿಂದ ಇದೂ ಕೂಡ ಅರ್ಧ ಪರಿಣಾಮಕಾರಿಯ ಹೊರತು ಪೂರ್ಣ ಪರಿಣಾಮಕಾರಿಯಲ್ಲ. ಕಾರಣ, ಆಡಳಿತದಲ್ಲಿರತಕ್ಕ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬೇಕಾದರೆ ಮೊದಲು ರಾಜಕೀಯದಲ್ಲಿರತಕ್ಕ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬೇಕು. ಈ ಮಾತು ಸೂರ್ಯನಷ್ಟು ಸತ್ಯವಾದದ್ದು, ಪ್ರಕಾಶವಾದದ್ದು, ಆದುದರಿಂದ ಮೊದಲು ರಾಜಕೀಯ ಭ್ರಷ್ಟಾಚಾರ ಹೋಗದೇ ಆಡಳಿತದಲ್ಲಿರತಕ್ಕ ಭ್ರಷ್ಟಾಚಾರ ಎಂದಿಗೂ ಕಡಿಮೆ ಆಗುವುದಿಲ್ಲ ಆದುದರಿಂದ ನಂದಾ ಕಮೀಟಿಯವರು ತಾತ್ಕಾಲಿಕವಾಗಿ ಇದನ್ನು ವಿಚಾರ ಮಾಡುತ್ತಿರಬಹುದೆಂದು ನಾನು ಭಾವಿಸಿದ್ದೇನೆ. ಇದಕ್ಕೆ ಸಂಪೂರ್ಣವಾಗಿ ರಾಜಕೀಯ ಪುಢಾರಿಗಳ ಸಹಕಾರವಿದೆ. ಹೀಗೆ ಈ ಪುಢಾರಿಗಳ: ಪ್ರಾಬಲ್ಯ ಎಲ್ಲ ಕಡೆಗಳಲ್ಲೂ ಇದೆ. ಎಲ್ಲ ಪಕ್ಷಗಳಲ್ಲೂ ಇದೆ. ಈ ಹಿಂದೆ ಕಾಂಗ್ರೆಸ್ಸಿನಲ್ಲಿರತಕ್ಕ ಸದಸ್ಯರುಗಳಲ್ಲೆ ಒಂದು ಸೂಚನೆ ಬಂತು. ಅದೇನೆಂದರೆ, ಪ್ರತಿಯೊಬ್ಬರೂ ತಮ್ಮ ತಮ್ಮ ಉತ್ಪನ್ನ ಮತ್ತು ಆಸ್ತಿಪಾಸ್ತಿಗಳು ಎಷ್ಟೆಷ್ಟಿವೆಂಬುದನ್ನು ತಿಳಿಸಬೇಕು ಎಂದು ಆದರೆ ಆ ರೀತಿ ಒಂದು ಪಟ್ಟಿಕೊಟ್ಟುಬಿಟ್ಟರೆ ಅವರೆಲ್ಲರೂ ಪ್ರಾಮಾಣಿಕರಾಗಿಬಿಟ್ಟರು, ಅಥವಾ ಅಲ್ಲಿಗೆ ಈ ಸಂಸ್ಥೆ ಪೂರ್ಣವಾಗಿ ಶುದ್ಧಿಯಾದಂತಾಯಿತು ಎಂದು ನಾನು ಹೇಳುವುದಿಲ್ಲ. ನಾನು ಸಹಾ 2 ವರ್ಷಗಳ ಲೆಕ್ಕವನ್ನು ಕಳುಹಿಸಿಕೊಟ್ಟೆನು. ಅನಂತರ ನಾನು ಅದನ್ನು ಕಳುಹಿಸುವುದನ್ನು ನಿಲ್ಲಿಸಿ ಬಿಟ್ಟೆ ಏಕೆಂದರೆ ಅದು ಪರಿಣಾಮಕಾರಿಯಾಗಲಿಲ್ಲ. ವಿಫಲವಾಯಿತು. ಆ ಲೆಕ್ಕಾಚಾರ ಮಾಡಬೇಕಾಗಿದ್ದರೆ 1947 ನೇ ಆಗಸ್ಟಿನ ಹಿಂದೆ ಯಾವ ಯಾವ ವ್ಯಕ್ತಿಗೆ ಅಂದರೆ ಈ ಕಾಂಗ್ರೆಸ್ ಸಂಸ್ಥೆಯಲ್ಲಿರುವ ವ್ಯಕ್ತಿಗಳಿಗೆ ಎಷ್ಟೆಷ್ಟು ಆಸ್ತಿ ಇತ್ತು. ಈಗ ಎಷ್ಟು ಆಸ್ತಿ ಇದೆ ಎಂಬುದನ್ನು ತುಲನೆ ಮಾಡಿದರೆ ಅದರಲ್ಲಿ ಒಂದು ನ್ಯಾಯವಿದೆ. ಆದರೆ 1947 ರಿಂದ ಇತ್ತೀಚಿಗೆ ಯಾರೂ ಆಸ್ತಿಯನ್ನು ಸಂಪಾದನೆ ಮಾಡಿಕೂಡದು ಎಂದು ನನ್ನ ವಾದವಲ್ಲ. ಆದರೆ ಆ ಸಂಪಾದನೆ ದಾರಿ ನ್ಯಾಯವಾದದ್ದಾಗಿರಬೇಕು ಎಂದು ಹೇಳುತ್ತೇನೆ. ಸಂಪಾದನೆ ಮಾಡಿದ್ದರೆ ಅವರು ಆ ಸಂಪಾದನೆಯನ್ನು ವ್ಯಾಪಾರದಲ್ಲಿ ಮಾಡಿದರೇ, ಅಥವಾ ಕೈಗಾರಿಕೆಯಲ್ಲಿ ಮಾಡಿದರೇ ಅಥವಾ ಇನ್ನಾವ ದಾರಿಯಿಂದ ಉತ್ಪನ್ನ ಮಾಡಿದರೆಂಬುದನ್ನು ಅವರು ಸ್ಪಷ್ಟೀಕರಿಸಬೇಕು ಇದಕ್ಕಾಗಿ ಸ್ಪೆಷಲ್ ಕಾನೂನನ್ನೇ ಮಾಡಬೇಕೆಂದು ಹೇಳುತ್ತೇನೆ. 1947 ರಲ್ಲಿ ಅಗದೀ ಬಡವರಾಗಿದ್ದವರು ಈ ದಿವಸ ಶ್ರೀಮಂತರಾಗಿರಬಾರದೆಂದು ನಾನು ಹೇಳುತ್ತಿಲ್ಲ ಆದರೆ ನಾನು ಹೇಳುವುದು ಯಾವ ರೀತಿ ಸಂಪಾದನೆ ಮಾಡಿದರು ಎಂಬುದು ಮುಖ್ಯ. ಆದರೆ ನಾನು ಕೇಳುವುದು ಆ ಹಣವನ್ನು ಯಾವ ರೀತಿ ಸಂಪಾದನೆ ಮಾಡಿದರು ಎಂಬುದು ಮುಖ್ಯ ಆದರೆ ಈ ಹಿಂದೆ ಮಾತನಾಡಿದ ಶ್ರೀ ಮಂಜಪ್ಪನವರು ಹೇಳಿದ ಹಾಗೆ ಯಾವನೂ ಸಹಿತ ಹಾಗೆ ದುಡ್ಡು ಕೊಡುವುದಿಲ್ಲ. ಆದರೆ ಈ ದಿವಸ ಇದಕ್ಕೆ ಒಂದು ಉದಾಹರಣೆ ತೋರಿಸುವಷ್ಟು ಇದು ಉಳಿದಿಲ್ಲ. ಈ ಜಡ್ಡು ಶರೀರಾದ್ಯಂತವೂ ವ್ಯಾಪಿಸಿಕೊಂಡಿದೆ. ನಮ್ಮಗಳ ಶರೀರವೆಲ್ಲಾ ಅಷ್ಟು ವಿಷಮಯವಾಗಿದೆ ಇದನ್ನು ತಿಳಿಸಲು

ನನಗೆ ಬಹಳ ಸಂಕಟವಾಗುತ್ತದೆ. ಅದುದರಿಂದ ಇದಕ್ಕೆ ಒಂದು ಉದಾಹರಣೆ ಕೊಡತಕ್ಕ ಅಗತ್ಯವಾದರೂ ಎಲ್ಲಿದೆ? ಈ ದಿವಸ ಆ ಪೋಲಿಸರ ಹಣೆಬರಹ ಏನಿದೆಯೋ ಅದೇ ಹಣೇ ಬರಹ ಧರ್ಮದರ್ಶಿಗಳದೂ ಇದೆ. ಸಂಸ್ಥೆಗಳ ಹಣೆಬರಹ ಅದೇ ಅದೆ ಮಠ ಮಾನ್ಯಗಳ ಹಣೇಬರಹವೂ ಅದೇ ಇದೆ ಇದನ್ನೆಲ್ಲಾ ನೋಡಿದರೆ ಕದಾಜಿತ್ ಇದು ಹೀಗೆ ಮುಂದುವರಿದಲ್ಲಿ ಇನ್ನು ಈ ವಿಚಾರದಲ್ಲಿ ಯಾರ ಉಸಾಬರಿಯೂ ಬೇಡ ಎಂದು ಹೇಳಿ ಸುಮ್ಮನೆ ಅಡಿಗೆ ಮನೆಯಲ್ಲಿ ಕೀಲಿ ಹಾಕಿಕೊಂಡು ಇರಬೇಕಾಗುತ್ತದೆ. ಈಗ್ಗೆ ಕೆಲವು ದಿನಗಳ ಹಿಂದೆ ಎಷ್ಟು ಜನ ಕಾಂಗ್ರೇಸ್ಸೇತರರು ಹೆಲ್ತ್ ಮಿನಿಷ್ಟ ಹತ್ತಿರ ಒಂದು ಸೀಟುಗಳಿಗೆ ಅವರನ್ನು ಕಾಡಿಲ್ಲಾ? ಇದೊಂದು ರಾಜಕೀಯ ರೋಗ. ಗೋಧಿ ಹೊಲಕ್ಕೆ ರೋಗ ಬಡಿದರೆ ಆ ಸುತ್ತಮುತ್ತಿನ ಗೋಧಿ ಹೊಲಗಳಿಗೆಲ್ಲಾ ಆ ರೋಗ ವ್ಯಾಪಿಸುವಂತೆ ಇದೂ ಅದೇ ನಮೂನೆಯಲ್ಲಿ ಹೋಗುತ್ತಿದೆ. ಆದುದರಿಂದ ನಾವು ಇದನ್ನು ತಡಗಟ್ಟಬೇಕಾಗಿದ್ದರೆ ಶಾಸ್ತ್ರೀಯವಾಗಿ ಇದನ್ನು ವಿಚಾರ ಮಾಡಬೇಕು. ಸಾಲದುದಕ್ಕೆ ದೇಶದಲ್ಲಿ ದೊಡ್ಡ ಬಡತನ ಬೇರೆ ಈ ದಿನ ಇಲ್ಲಿ ಸಾಹುಕಾರರು ಮಾಡುತ್ತಿರುವುದನ್ನು ನೋಡಿ ಬಡವನೂ ಅದೇ ದಾರಿಗೆ ಹೋಗುತ್ತಿದ್ದಾನೆ.

ಈ ದೃಷ್ಟಿಯಿಂದ ವಿಚಾರ ಮಾಡುವುದನ್ನು ತಿಳಿದೇ ಇವೊತ್ತು ನಮ್ಮ ಕೊನೆಯ ಉಪಾಯ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಸರಕಾರ ಬೇಕು ಎನ್ನುವುದು. ಈಗಿರುವ ಸ್ಥಿತಿ ಬದಲಾವಣೆಯಾಗಲೇ ಬೇಕು.ಆ ರೀತಿಯ ಸಮಾಜ ರಚನೆಯಾಗಬೇಕು. ಇವೊತ್ತು ನಾವೆಲ್ಲರೂ ನೋಡಿದಂತೆ ಲ್ಯಾಂಡು ರಿಫಾರಂನ್ನು ಇಲ್ಲಿ ಜಾರಿಗೆ ತರಬೇಕೆಂದು ಎಷ್ಟೋ ದಿವಸಗಳಾದರೂ ಅದು ಅನೇಕ ಕಾರಣಗಳಿಂದಾಗಿ ಅದನ್ನು ಇನ್ನೂ ಜಾರಿಗೆ ಕೊಡಲಾಗಲಿಲ್ಲ ಇದಕ್ಕೆ ನಮ್ಮಲ್ಲಿ ಕೆಲವರು ಎಲ್ಲ ರೈತರ ಮನೆಗೂ ಹೋಗಿ ಅವರ ಜಮೀನನ್ನು ಕಸಿದು ಕೊಳ್ಳುತ್ತಾರೆ. ಅದಕ್ಕಾಗಿ ಇಂತಹ ಕಾನೂನುಗಳನ್ನು ತರುತ್ತಾರೆನ್ನುವ ಕಾರಣ ಬೇರೆ ಕೊಡುತ್ತಿದ್ದಾರೆ ಹೀಗೆ ಇದನ್ನು ಇವೊತ್ತು ವಿಚಾರ ಮಾಡಿ ನೋಡಿದರೆ ಸಮತಾವಾದ ಸಮಾಜದ ವ್ಯವಹಾರ ಎನ್ನುವುದು ಎಲ್ಲಿಂದ ಬರಬೇಕು? ಲಂಚ ನಿರ್ಮೂಲನ ಮತ್ತು ಭ್ರಷ್ಟಾಚಾರ ಹೋಗುವುದಕ್ಕೆ ಏತಸ್ವದ್ಯೆ ಕೆಲವು ಮಿತಿಗಳನ್ನು ನಾವು ಮಾಡಬೇಕಾಗುತ್ತದೆ. ಮೊದಲು ಏನೇನು ಮಾಡಬೇಕು ಎಂಬುದನ್ನು ಜವಾಬುದಾರಿಯುಳ್ಳ ಜನರಾದವರು ತಾವೇ ಸ್ವಲ್ಪ ಇನಿಷಿಯೇಟಿವ್ ತೆಗೆದುಕೊಳ್ಳಬೇಕು. ಇನ್ನಾರಾದರೂ ಇನಿಯೇಟಿವ್ ತೆಗೆದುಕೊಂಡರೂ ಅಡ್ಡಿ ಇಲ್ಲ, ಕನಿಷ್ಟ ನಮ್ಮೊಬ್ಬರಿಂದ ಇವೆಲ್ಲ ನಡೆಯುವ ಕೆಲಸವಲ್ಲ. ಪೂರ್ವದಲ್ಲಿ ಬಡತನದಲ್ಲಿದ್ದವನೂ ತನ್ನ ಪ್ರಭಾವಶಾಲಿಯಾದ ನಡೆಡೆಗಳಿಂದ ಇಂದು ಶ್ರೀಮಂತರನ್ನಾಗಿ ಮಾಡಲು ಈ ದೇಶ ಹೊರಟಿಲ್ಲ, ಆ ರೀತಿಯಾಗುವಂತೆ ಮಾದಬಾರದು ಆದರೆ ಇಲ್ಲಿ ಒಂದು ಮಾತು ಹೇಳಬಹುದು. ಮದರಾಸಿನಲ್ಲಿ ಹಿಂದೆ ಚೀಫ್ ಮಿನಿಸ್ಟರಾಗಿದ್ದವರನ್ನು ನಾವೆಲ್ಲ ನೋಡಿದ್ದೇವೆ. ಆ ಮನುಷ್ಯನನ್ನು ನಾವು ನೋಡಿದರೆ, 1947 ನೇ ಇಸವಿಯಲ್ಲಿ ಏನು ಪಂಚೆ ಉಡುತ್ತಿದ್ದರೊ ಇಂದೂ ಅದೇ ಆ ತರದ ಪಂಚೆ ಉಡುತ್ತಿದ್ದಾರೆ. ಹಿಂದೆ ಯಾವ ತರದ ಬನೀನು

ಹಾಕಿಕೊಂಡಿದ್ದರೋ ಇವೊತ್ತು ಕೂಡ ಅದೇ ತರದ ಬನೀನು ಹಾಕುತ್ತಿದ್ದಾರೆ. ಹಿಂದೆ ಯಾವ ಮನೆಯಲ್ಲಿ ವಾಸವಾಗಿರುತ್ತಿದ್ದರೋ ಇವೊತ್ತು ಅದೇ ರೀತಿಯ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ನಾನು ನಮ್ಮವರನ್ನು ತೆಗೆಯಬೇಕೆಂದು ಹೇಳುತ್ತಿಲ್ಲ. ಸದಾ ಜೀವನ ನಡೆಸುತ್ತಿರುವವರು ಎಂದು ಹೇಳಿದೆ. ಇದರೊಳಗೆ ನಾವು ಪ್ರತಿಯೊಬ್ಬರೂ ವಿಚಾರ ಮಾಡೋಣ ಹಾಗೆ ವಿಚಾರ ಮಾಡುವಾಗ ಏನು ಅನಿಸುತ್ತದೆ ಎಂದರೆ ಯಾವನೋ ಒಬ್ಬ ಶಕ್ತಿ ಇರುವವನು ಏರೋಪ್ಲೇನಿನಲ್ಲಿ ಹೋಗುತ್ತಾನೆ ಎಂದು ಅದೇ ರೀತಿ ಬಡವನಾಗಿರುವವನು ಹೋಗಲು ಸಾಧ್ಯವಿಲ್ಲ ಹೀಗೇ ಒಬ್ಬರಿಗೊಬ್ಬರಲ್ಲಿ ಅಸೂಯೆಯಿಂದ ಇರುವಂತಹ ಜೀವನವನ್ನು ನಿರ್ಮಾಣ ಮಾಡಬಾರದು ಆ ದೃಷ್ಟಿಯಿಂದ ನಮ್ಮ ಜಗತ್ತಿನೊಳಗೆ ಶಿಸ್ತು ಬೇಕು ಹಾಗೆ ಹೇಳುವಾಗ ಯಾರೋ ಒಬ್ಬರು ಒಂದೆರಡು ಬಂಗಲೆಗಳನ್ನು ಮಾಡಿಕೊಂಡರೆ ಅದು ತಪ್ಪೇನು ಆಗುವುದಿಲ್ಲ. ಹಿಂದೆ ಸ್ವಾಭಾವಿಕವಾಗಿ ಬಡವನಾಗಿದ್ದವನ ಪರಿಣಾಮುವನ್ನು ವಿಚಾರ ಮಾಡೋಣ. ಎಲ್ಲ ಶಾಸನಸಭಾ ಸದಸ್ಯರೂ ವಿಚಾರ ಮಾಡೋಣ. ಹಾಗೆ ವಿಚಾರ ಮಾಡುವಾಗ ನಾವು ಅನೇಕ ವಿಚಾರಗಳನ್ನು ನೋಡುತ್ತೇವೆ. ಶಾಸನ ಸಭೆಯ ಎರಡೂ ಅಂಗಗಳು ಹಾಗೂ ಕೊನೆಯಲ್ಲಿ ಮಂತ್ರಿಗಳಾಗಿರುವವರೂ ಕೂಲಂಕುಷವಾಗಿ ಎಲ್ಲವನ್ನೂ ವಿಚಾರ ಮಾಡಬೇಕು. ಈ ರಾಜ್ಯದಲ್ಲಿ ಮಂತ್ರಿಗಳು ಎಷ್ಟು ಜವಾಬುದಾರರಾಗಿದ್ದಾರೋ ಅಷ್ಟೇ ಶಾಸನ ಸಭೆಯ ಸದಸ್ಯರುಗಳು ಅವರು ಯಾವುದೇ ಪಕ್ಷದವರಾಗಿರಲಿ ಜವಾಬು ದಾರಿಯುಳ್ಳವರಾಗಿದ್ದಾರೆ. ಇವರೊಳಗೆ ಈ ಪ್ರಶ್ನೆಯನ್ನೂ ವಿಚಾರ ಮಾಡಬೇಕಾಗಿದೆ. ಇದನ್ನು ತಾವೆಲ್ಲರೂ ಕೆಲವೊಂದು ರಾಜಕೀಯ ಕಾರಣದ ಕನ್ನಡಕವನ್ನು ಹಾಕಿಕೊಂಡು ನೋಡಲು ಹೋಗಬಾರದು. ಇದಕ್ಕೆ ಪರಿಹಾರೋಪಾಯ ಕಾಣದೆ ಸುಮ್ಮನೆ ದೊಡ್ಡ ದೊಡ್ಡ ಅಧಿಕಾರಿಗಳನ್ನು ಶಿಕ್ಷೆ ಮಾಡುವುದು ಮಹತ್ವದ ಪ್ರಶ್ನೆಯಲ್ಲ ರಾಷ್ಟ್ರಕ್ಕೆ ಹಾನಿಯನ್ನುಂಟುಮಾಡಿ ರಾಷ್ಟ್ರದ ಹಣ ಪೋಲಾಗದಂತಿರಲು ಏನು ಕಾರ್ಯಕ್ರಮ ತೆಗೆದುಕೊಳ್ಳಬಹುದೋ ಅದನ್ನು ತೆಗೆದುಕೊಳ್ಳಬೇಕು. ಈ ಪಕ್ಷದವರು ಒಂದು ಕಮಿಟಿ ಆ ಪಕ್ಷದವರು ಒಂದು ಕಮಿಟಿ ಮಾಡಿಕೊಳ್ಳೋಣ ಇಲ್ಲಿ ನೀವು ನಿಮ್ಮ ಪಕ್ಷದ ಚುನಾವಣೆಯಲ್ಲಿ ಟಿಕೆಟ್ಟು ಕೊಡುವಾಗ ಹಿಂದೆ ಆತನ ಚರಿತ್ರೆ ಹೇಗಿತ್ತು ಅವನ ನಡತೆಹೇಗಿತ್ತು ಎನ್ನುವುದನ್ನೆಲ್ಲಾ ವಿಚಾರಿಸಿ ಅಂತಹವರಿಗೆ ಟಿಕೆಟ್ಟು ಕೊಡುವ ವ್ಯವಸ್ಥೆ ಮಾಡಬೇಕು. ಅಂತಹವನ ಪರ್ಸನಲ್ ಲಯಾಬಿಲಿಟಿ ಮೇಲೆ ಅವನನ್ನು ಪಕ್ಷಕ್ಕೆ ಸೇರಿದಂತೆ ಹುರಿಯಾಳನ್ನಾಗಿ ನಿಲ್ಲಿಸಿ ಅಂತಹವರನ್ನು ಚುನಾಯಿಸಬೇಕು. ಅಂತಹವರು ಚುನಾಯಿತರಾಗಿ ಬಂದರೆ ಅವರು ಯಾವ ಒಂದು ತರದ ಸಂಶಯ ಟೀಕೆಗಳಿಗೆ ಸಿಕ್ಕಬಾರದು. ಪ್ರತಿಯೊಂದು ಪಕ್ಷಕ್ಕೂ ಸೇರಿದಂತೆ ಬದ್ಧನಾಗಿರಬೇಕು ಎನ್ನುವುದು ಮೊದಲನೇ ಪ್ರಶ್ನೆ ಅದನ್ನು ಮಾಡುತ್ತಿಲ್ಲ. ನಿಮ್ಮ ನಿಮ್ಮ ಸರಕಮ್‌ಸ್ಟನ್ಸಿಸ್ ಅನ್ನು ಅನುಸರಿಸಿಕೊಂಡು ಆರಿಸಿ ಬರಬೇಕೆಂದು ಯಾರೇ ಆಗಲಿ ಆತನ ಹಿಂದಿನ ಚರಿತ್ರೆ ಮತ್ತು ನಡತೆಯನ್ನು ವಿಚಾರ ಮಾಡದೇ ನಿಮ್ಮ ನೀತಿಯನ್ನು ಅನುಸರಿಸಿ ಮಾಡುತ್ತಾರೆ. ಹೀಗೆ ಗುಂಪುಗಳಾಗಿ ಗುಂಪಿನ ಗೆಳೆಯರುಬಹಳವಾಗುತ್ತಿದ್ದಾರೆ ಈಗ ಬೆಳೆಯುತ್ತಿರುವ ಬ್ಯಾಂಕುಗಳನ್ನು ನೋಡುವುದಾದರೆ

ಸೋಷಿಯಲಿಸ್ಟಿಕ್ ಪ್ಯಾಟರ್ನು ಎನ್ನುವುದು ಹೋಗಿ ಕ್ಯಾಪಿಟಲಿಸ್ಟಿಕ್ ರೀತಿಯಂತೆ ಆಗುತ್ತಿದೆ. ಇದನ್ನು ಸರಕಾರ ರಿವ್ಯೂ ಮಾಡುತ್ತಿಲ್ಲ. ನಮ್ಮ ದೇಶದಲ್ಲಿ ಇವೊತ್ತು ಹಾಗೆ ಮಾಡಿ ನೋಡಿದರೆ ನಮಗೆ ಇದರ ಮಹತ್ವ ತಿಳಿಯುತ್ತದೆ ಅನೇಕ ರೀತಿಯಲ್ಲಿ ದೊಡ್ಡ ದೊಡ್ಡ ಜಮೀನುದಾರರು, ವ್ಯಾಪಾರಸ್ಥರು ನಾನಾರೀತಿಯ ದೊಡ್ಡ ಹುದ್ದೆಗಳಲ್ಲಿರುವ ಉದ್ಯೋಗಸ್ಥರು ಆಗಿರುವವರನ್ನು ವಿಚಾರ ಮಾಡಿ ಅವರ ಮೇಲೆ ಒಂದು ವಜ್ರಮುಷ್ಟಿ ಇರಬೇಕು. ಈ ಸಂದರ್ಭದಲ್ಲಿ ಈ ಸಭೆಯಲ್ಲಿ ನಮ್ಮೆದುರಿಗೆ ಕಾಣುತ್ತಿರುವ ಇಬ್ಬರು ಮಹಾ ನಾಯಕರುಗಳು ಏನು ಆದರ್ಶಗಳನ್ನು ತೋರಿದರೋ ಆ ರೀತಿ ಹೋಗುವುದಾದರೆ ಆಗ ಅಧಿಕಾರದಲ್ಲಿರುವ ಯಾರಾದರೂ ಆಗಲಿ ಇಂತಹ ನಿರ್ಣಯ ಮಾಡುವುದಕ್ಕೆ ಸಾಧ್ಯ, ಇದು ಪಕ್ಷದ ವಿಚಾರವಲ್ಲ ರಾಜ್ಯಂಗದ ವಿಚಾರವಲ್ಲ. ಆದರೆ ಕೇಂದ್ರ ಸರ್ಕಾರದವರು ಒಂದು ರೀತಿಯ ವಜ್ರಮುಷ್ಟಿಯಿಂದ ಅಧಿಕಾರ ಮಾಡಲಿಕ್ಕೆ ಬೇಕು.ಅವರು ಸತ್ಯ ಮಾರ್ಗದಲ್ಲಿ ನಡೆಯುತಕ್ಕ ವ್ಯಕ್ತಿ ಎಂದು ತಿಳಿದು ಕೊಂಡು ಅವರಂತೆ ಸತ್ಯ ನಿಷ್ಠೆಯ ಮಾರ್ಗದಲ್ಲಿ ನಡೆಯುತಕ್ಕ ವ್ಯಕ್ತಿ ಎಂದು ತಿಳಿದುಕೊಂಡು ಅವರಂತೆ ಸತ್ಯ ನಿಷ್ಠೆಯ ಮಾರ್ಗದಿಂದ ಹೋಗಲಿಕ್ಕೆ ಕಾರಣವಾಗುತ್ತದೆ. ಹಾಗೆ ಸತ್ಯ ನಿಷ್ಠೆಯಿಂದ ಹೋಗುವುದು ಬೇಡವೆಂದು ಮನಸ್ಸಿಗೆ ತಗಲಿರುವುದರಿಂದ ನಮ್ಮ ಜಾತಿಯವರಿಗೆ ಇಂತಹ ಕೆಲಸ ಕೊಡುತ್ತೇವೆ. ಅಧಿಕಾರವಿರುವುದರಿಂದ ಬೇಕಾದ್ದನ್ನು ಮಾಡುತ್ತೇವೆ ಎಂದು ಮಾಡುತ್ತಿರುವುದರಿಂದ ಭ್ರಷ್ಟಾಚಾರಗಳು ಹೆಚ್ಚುತ್ತಿವೆ. ಭ್ರಷ್ಟಾಚಾರಗಳಿಂದಾಗಿ ಅನೇಕರು ಪ್ರಸಿದ್ಧಿಗೇನೋ ಬರುತ್ತಿದ್ದಾರೆ, ಜನತೆಯಲ್ಲೂ ಇದು ಬರುತ್ತಿದೆಯೇ ಹೇಗೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನುವುದನ್ನು ಅವರೇ ವಿಚಾರ ಮಾಡಿಲ್ಲ ಇದರ ಬಗ್ಗೆ ಸರಕಾರ ಏನು ಧೈರ್ಯ ತೋರಿಸುತ್ತದೆ ಎನ್ನುವುದರ ಬಗೆಗೂ ಏನೂ ವಿಚಾರ ಮಾಡಿಲ್ಲ, ಇದು ವ್ಯಕ್ತಿಗಳ ಪ್ರಶ್ನೆಯಲ್ಲ.

ಕಾಲರಾ ಬಂದಾಗ , ಅದು ಪ್ರತ್ಯಕ್ಷವಾಗಿ ವ್ಯಕ್ತಿಗೆ ಬಂದಿದೆ ಅಂತಾ ತಿಳಿದುಕೊಳ್ಳಬಾರದು. ಅದು ದೇಶಕ್ಕೆ ಬಂದದ್ದು ಅಂದುಕೊಳ್ಳಬೇಕು ಗೃಹ ಮಂತ್ರಿ ನಂದಾರವರು ಭ್ರಷ್ಟಾಚಾರವನ್ನು ತೊಡೆದು ಹಾಕಲು ಈಗ ಕ್ರಮಗಳನ್ನು ಯೋಚಿಸುತ್ತಿದ್ದಾರೆ. ಇದನ್ನು 1947 ನೇ ಇಸವಿಯಲ್ಲಿಯೇ ಆಲೋಚನೆ ಮಾಡಿದ್ದರೆ ಬಹಳ ಸುಲಭವಾಗಿ ತಡೆಯಬಹುದಾಗಿತ್ತು ಈಗ ಏನಾಗಿದೆಯೆಂದರೆ ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡರು ಎಂಬ ಗಾದೆಯಂತೆ ಆಗಿದೆ, ಅದು ಅಷ್ಟು ಬೆಳೆದು ನಿಂತಿದೆ ಯಾರಾದರೂ ಅದಕ್ಕೆ ಅಡ್ಡ ಬಂದರೆ ಅವರನ್ನೆ ತಿನ್ನುತ್ತೇನೆ ಅನ್ನುವಷ್ಟು ಪ್ರಭಾವಶಾಲಿಯಾಗಿದೆ ಈ ಭ್ರಷ್ಟಾಚಾರದ ಸ್ವರೂಪ, ಇಂಥ ಹೊತ್ತಿನೊಳಗೆ ಅಧಿಕಾರದಲ್ಲಿರತಕ್ಕಂಥವರು ಅಧಿಕಾರದಲ್ಲಿ ಉಳಿದಿರುವುದೇ ಮಹತ್ವದ ವಿಷಯವಲ್ಲ. ಕದಾಚಿತ್ ಯಾರೂ ಅಧಿಕಾರದಲ್ಲಿ ಉಳಿಯುವ ಸಂಭವವೇ ಇಲ್ಲ ಅನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು ಈ ದೃಷ್ಟಿಯಿಂದ ಮಂತ್ರಿಗಳು ಕನಿಷ್ಟ ಹೀಗೆ

ಮಾಡಬೇಕು. ನೀವು ನನ್ನ ಕೂಡ ಸ್ನೇಹ ಮಾಡುವಾಗ ನನ್ನ ನಡತೆ ವಿಚಾರ ಮಾಡಿ ನಾನು ಎಂತಹವನು ಅನ್ನುವುದನ್ನು ತಿಳಿದುಕೊಳ್ಳಬೇಕು ನಿಮ್ಮ ಜೊತೆ ಸ್ನೇಹ ಮಾಡುವವರು ಶಾಸನಕರ್ತರಾಗಿರಲಿ ಹೊರಗಿನ ವರಾಗಿರಲಿಯಾರೇ ಆಗಿರಲಿ ಅವರ ವಿಶಿಷ್ಟ ಗುಣಗಳನ್ನು ತಿಳಿದುಕೊಂಡಿರುವುದು ಒಳ್ಳೆಯದು ನಿಮಗೆ ಸಂಶಯ ಬಂದಲ್ಲಿ ನಿಮ್ಮ ಕೈಯಿಂದ ಅವುಗಳನ್ನು ನಿರ್ಣಯ ಮಾಡುವುದೂ ಕಷ್ಟ ಅವರು ಒಳ್ಳೆಯವರೆ, ಕೆಟ್ಟವರೆ, ಎಂದು ತಿಳಿದುಕೊಳ್ಳುವುದಕ್ಕೂ ಆಗುವುದಿಲ್ಲ, ಅದೂ ಗೊತ್ತಿದೆ. ಆದರೆ ಕೆಲವರು ಏನೇನೋ ಕಾರ್ಯಕ್ಕಾಗಿ ಉದ್ದೇಶ ಇಟ್ಟುಕೊಂಡು ನಿಮ್ಮನ್ನು ನೋಡುತ್ತಿರುತ್ತಾರೆ. ಅವರು ನಿಮ್ಮ ಒಳ ಕೊಠಡಿಯೊಳಗೆ ಬಂದು ನಿಮ್ಮ ಜೊತೆ ರೊಟ್ಟಿ ತಿಂದು ಬಂದು ಬಿಟ್ಟಿದನ್ನು ನೋಡಿ ಬಿಟ್ಟರೆ ಖಾಸಗಿ ಜನಕ್ಕೆ ಅವರು ಪ್ರಭಾವಶಾಲಿಗಳು, ನಿಮ್ಮ ಮನಸ್ಸನ್ನು ಒಲಿಸಿಕೊಳ್ಳಬಲ್ಲರೆಂದು ಭಾವನೆ ಬರುತ್ತದೆ ಹೀಗೆ ನೀವು ಸದರ ಕೊಡುವುದು ಸ್ವಾರ್ಥಾಭಿಲಾಷೆಗಳಿಗೆ ಒಳ್ಳೆಯ ಅಮ್ಯಾನಿಷನ್ ನೀವು ಯಾವ ಪಕ್ಷವನ್ನೇ ಮಾಡಿಕೊಳ್ಳಿ ಯಾವ ಗುಂಪನ್ನೇ ಮಾಡಿಕೊಳ್ಳಿ ಅದರಲ್ಲಿ ನನಗೆ ಇಂಟರೆಸ್ಟ್ ಇಲ್ಲ ನನಗೆ ಯಾವ ನಾಮಿನೇಶನ್ನು ಆಗಬೇಕಾಗಿಲ್ಲ. ನಾನು ನಿಮ್ಮ ಹತ್ತಿರ ಬರುವುದಿಲ್ಲ. ನಾಮಿನೇಶನ್ ಮಾಡುವ ಹೊತ್ತಿನಲ್ಲಿ ಅದು ಸ್ಕೂಲು ಬೋರ್ಡಿಗೆ ಇರಲಿ ಬ್ಯಾಂಕಿಗೆ ಇರಲಿ ಮತ್ತೊಂದಕ್ಕೆ ಇರಲಿ ನಾಮಿನೇಶನ್ ಮಾಡುವ ಮನುಷ್ಯ ಎಂತಹ ನಡತೆ ಯವನು ಎಂದು ದೀರ್ಘವಾಗಿ ವಿಚಾರ ಮಾಡಿ ನೀವು ನಡತಯ ಬಗ್ಗೆ ತೃಪ್ತಿಹೊಂದಿದ ಮೇಲೆ ಒಬ್ಬ ಮನುಷ್ಯನನ್ನು ನಾಮಿನೇಟ್ ಮಾಡಿದರೆ ಕನಿಷ್ಟ ಪಕ್ಷ ನಿಮ್ಮ ಮೇಲೆ ಬರತಕ್ಕ ಆರೋಪಗಳು ಶೇಕಡವಾರು ಸಂಖ್ಯೆ ಕಡಿಮೆಯಾಗುತ್ತದೆ, ನೀವು ಒಬ್ಬ ಮನುಷ್ಯನನ್ನು ಹತ್ತಿರ ಸೇರಿಸುವಾಗ ನೇಮಕ ಮಾಡುವಾಗ, ಅವನು ಭ್ರಷ್ಟಾಚಾರಿಯೋ ಅಲ್ಲವೇ ಎನ್ನುವುದನ್ನು ನಿಶ್ಚಿತ ಮಾಡಿ ಕೊಳ್ಳಬೇಕು.ಪ್ರಾಮಾಣಿಕನಾಗಿದ್ದರೆ ಅವನ ಉಳಿದ ಕ್ವಾಲಿಫಿಕೇಶನ್ನುಗಳು ಹೆಚ್ಚು ಕಡಿಮೆ ಇದ್ದರೂ ಸಾಕು ಮಂತ್ರಿಗಳು ನೀವು ಹೇಳುವುದು ಒಪ್ಪುತ್ತೇವೆ. ಏನು ಮಾಡುವುದು ಪ್ರತಿಷ್ಠಿತರು ಒಂದು ಪಠ ಮಾಡುತ್ತಾರೆ ಕುತ್ತಿಗೆಗೆ ಚೂರಿ ಹಾಕುತ್ತಾರೆ, ಆವಾಗ ಈಲ್ಡ್ ಆಗಬೇಕಾಗುತ್ತದೆಂದು ಹೇಳುವುದು ಸರಿಯಲ್ಲ-ಯಾವತ್ತೂ ಒತ್ತಾಯ ಬಂದು ಹೀಗೆ ಅವಕ್ಕೆ ಶರಣಾಗತವಾದರೆ ಕಾಂಗ್ರೆಸ್ಸೇ ಇರಲಿ, ನಾನ್ ಕಾಂಗ್ರೆಸ್ಸೇ ಇರಲಿ,ಅದರ ಪರಿಣಾಮವೇನಾಗುತ್ತದ? ಅದರ ಪರಿಣಾಮ ಇಡೀ ಸಮಾಜದ ಮೇಲೆ ಆಗುತ್ತದೆ. ಇವತ್ತು ನೀವು ಹೆದರಬೇಡಿ ನಿಮ್ಮ ಜಾತಿಯವರೇ ಇರಲಿ ಬೇರೆ ಜಾತಿಯವರೇ ಇರಲಿ ಒಳ್ಳೆಯವರಿದ್ದರೆ ಪುರಸ್ಕಾರ ಕೊಡಿರಿ, ಕೆಟ್ಟವರಿದ್ದರೆ ಅಲಕ್ಷ್ಯ ಮಾಡಿರಿ. ಪೊಲಿಟಿಕಲ್ ಕರಪ್ಷನ್ ತಪ್ಪಿಸಿ ಮೊನ್ನೆ ಅಧ್ಯಕ್ಷತೆಯಲ್ಲಿ ಸತ್ಯಸಭಾ ಒಂದು ಕಮಿಟಿ ನೇಮಿಸಿದರು ಇದು ಅಧಿಕಾರೇತರ ಕಮೀಟಿ ನಾನೂ ಈ ಶಾಸನಕರ್ತರು ಮುಂತಾದವರ ಬಗ್ಗೆ ನಿಯಮಗಳು ಮತ್ತು ಅವರು ತೆಗೆದುಕೊಳ್ಳಬೇಕಾದ ಪ್ರತಿಜ್ಞೆಗಳ ಬಗ್ಗೆ ಬರೆದು ಇಟ್ಟಿದ್ದೇನೆ ಅವರುಗಳಿಗೆ ತರಬೇತಿ ಕೊಟ್ಟು ಅವರು ಭ್ರಷ್ಟಾಚಾರದಲ್ಲಿ ತೊಡಗುವುದಿಲ್ಲ ಎನ್ನುವ ನಿರ್ಧಾರಕ್ಕೆ ಬರುವ ಜನರನ್ನಾಗಿ ಮಾಡಬೇಕು. ದೇಶದ ಪ್ರಥಮ ಶತ್ರು ಚೈನ ಎಂದು ಹೇಳುತ್ತಿದ್ದರೆ, ನಾವು ಅದನ್ನು ಎರಡನೇ ಶತ್ರು ಎಂದು ಈಗ ಹೇಳಬೇಕು, ದೇಶದ ಪ್ರಥಮ ಶತ್ರು ಭ್ರಷ್ಟಾಚಾರ ಇವತ್ತು ನಮ್ಮಲ್ಲಿ ಅದಿಲ್ಲದಿದ್ದರೆ ರಾಜ್ಯ ಸುರಕ್ಷಿತವಾಗಿರುತ್ತದೆ.

ನಾವು ಅದನ್ನು ವಿಚಾರ ಮಾಡಬೇಕು ಮೊದಲನೆ ಮಾತು ಎಂದರೆ, ಸರ್ಕಾರಕ್ಕಾಗಲೀ, ನಮಗಾಗಲಿ, ನಿಮಗಾಗಲಿ ಜವಾಬ್ದಾರಿ ಜನ ಯಾರು ಈ ಭ್ರಷ್ಟಾಚಾರಕ್ಕೆ ಒಳಪಟ್ಟಿದ್ದಾರೋ ಅಂಥ ಮುಖಂಡರನ್ನು ಸ್ವಲ್ಪ ದೂರ ಇಡುವುದಕ್ಕೆ ಪ್ರಯತ್ನ ಮಾಡೋಣ, ಇವತ್ತು ನಮ್ಮ ಆತ್ಮ ಏನು ನಿರೀಕ್ಷಣೆ ಮಾಡುತ್ತದೋ ಅದನ್ನು ಮಾಡಬೇಕು. ನನ್ನ ಜನ, ನನ್ನ ಮತ, ನನ್ನ ಆಸ್ತಿ ಬೆಳಸಬೇಕು ನಾನು ಪ್ರಯೋಜನ ಹೊಂದಬೇಕು ಎಂಬ ದೃಷ್ಟಿಬೇಡ, ಎರಡನೇಯವರಿಗೆ ಬುದ್ಧಿ ಹೇಳುವುದು ಹಗುರ,ಆದರೆ ತಾನು ಅದರಂತೆ ನಡತೆ ಇಟ್ಟುಕೊಳ್ಳುವುದು ಬಹಳ ಕಠಿಣ,ನಮ್ಮನ್ನು ನಾವೇ ಅಗ್ನಿ ಪರೀಕ್ಷೆ ಮಾಡಿಕೊಳ್ಳುವುದಕ್ಕೆ ಸಿದ್ಧರಾಗೋಣ, ಕಠಿಣವಾದರೂ ನಮ್ಮನ್ನು ನಾನೇ ಪರೀಕ್ಷೆಮಾಡಿಕೊಳ್ಳುವುದಕ್ಕೆ ಸಿದ್ಧರಾಗೋಣ ಸತ್ಯವಾಗಿದ್ದರೆ ನಿಶ್ಚಿತವಾಗಿ ಜಯಸಿಗುತ್ತದೆ ಇದು ಎಂದಿಗೂ ಸುಳ್ಳಾಗುವುದಿಲ್ಲ, ಇದುಶತಃ ಸಿದ್ಧಾಂತ, ಅದ್ದರಿಂದ ಈ ಭ್ರಷ್ಟಾಚಾರವನ್ನು ಶಾಸ್ತ್ರೀಯುವಾಗಿ ವಿಚಾರ ಮಾಡಬೇಕು, ಸೃಷ್ಟಿ ನಮ್ಮ ಸಲುವಾಗಿ ಕಾಯುವುದಿಲ್ಲ ನಮಗೆ ಬೇಕೋ ಬೇಡವೋ ಸತ್ಯದ ಕಡೆಗೆ ಎಳೆಯುತ್ತದೆ ನಾವು ಪ್ರಮಾಣಿಕರಾಗಿದ್ದರೆ ನಮ್ಮನ್ನು ಕೆಲವು ಜನರು ಬಿಟ್ಟು ಹೋಗುತ್ತಾರೆ ಎಂಬ ದೃಷ್ಟಿಯಿಂದ ವಿಚಾರ ಮಾಡುವುದಿಲ್ಲ. ಈ ಕಾರಣಕ್ಕಾಗಿ ಶ್ರೀಮಾನ್ ನಂದಾರವರ ಕಮಿಟಿಯಿಂದ ನಮ್ಮ ಉದ್ದೇಶ ಪೂರ್ತಿಯಾಗುವುದಿಲ್ಲ ಸರಕಾರದವರು ಯಾವ ರೀತಿ ಒಂದು ಕಮಿಟಿ ಮಾಡಬೇಕು ಎಂದು ಬರೆದು ಕಳುಹಿಸುತ್ತೇವೆ ನಾಲ್ಕು ಮಂದಿ ಸೇರಿ ವಿಚಾರ ಮಾಡಿ ನೋಡಬೇಕು, ನಾನು ಅದರ ಜವಾಬ್ದಾರಿ ಹೊರಲಿಕ್ಕೆ ಸಿದ್ಧನಿದ್ದೇನೆ. ಎಲ್ಲ ಭ್ರಷ್ಟಚಾರ ಹುಟ್ಟಲಿಕ್ಕೆ ಹತ್ತಿದೆಯೋ ಅಲ್ಲಿ ಏನು ಮಾಡಬೇಕೆಂಬ ಬಗ್ಗೆ ಕಾನೂನು ಮಾಡಿಕೊಳ್ಳಿ, ಇದರೊಳಗೆ 12 ಮಂದಿ ರಾಜಕೀಯ ಪುಢಾರಿಗಳನ್ನು ಹಿಡಿದು ಜೈಲಿನೊಳಗೆ ಹಾಕಿ,ಅದರಿಂದ ಎಷ್ಟು ಪರಿಣಾಮವಾಗುತ್ತದೆಂದು ನೋಡಿ ಆದರೆ ಅದಕ್ಕೆ ಕಾನೂನು ಆಧಾರಬೇಕು. ಅವರನ್ನು ಹಿಡಿಯುವುದು ಇರಲಿ ಅವರಿಗೆ ಸನ್ಮಾನ ಸಿಕ್ಕದಂತೆ ಇರಲಿ, ಮೊದಲನೆಯದಾಗಿ, ಯಾರನ್ನು ಸಂಘ ಸಂಸ್ಥೆಗಳಿಗೆ ಸಮಿತಿಗಳಿಗೆ ನೇಮಿಸುತ್ತಿರೋ ಅವನು ಒಳ್ಳೆಯವನೋ, ಸತ್ಯವಂತನೋ ಒಂದು ವಿಶಾಲ ಭಾವನೆ ಉಳ್ಳವನೋ, ಜಾತಿ ಮತ ಪಕ್ಷದ ಭಾವನೆ ಇಲ್ಲದೇ ಎಲ್ಲರನ್ನು ಸಹೋದರ ಭಾವನೆಯಿಂದ ನೋಡುತ್ತಾನೆಯೋ ಇಲ್ಲವೋ ಎಂದು ವಿಚಾರ ಮಾಡುವುದಿಲ್ಲ ತದ್ವಿರುದ್ಧ ದಿಕ್ಕಿನಲ್ಲಿ ವಿಚಾರ ಮಾಡಿ ನಮ್ಮ ಸಮಾಜಕ್ಕೆ ತೊಂದರೆ ಮಾಡುತ್ತಾರೆ ಜನರು ಸ್ವಲ್ಪ ಬುದ್ಧಿವಂತರಾಗಬೇಕಾಗುತ್ತದೆ. ಜನರು ಪೂರ್ತಿ ಬುದ್ಧಿವಂತರಾಗದ ಹೊರತು ಏನೂ ಪ್ರಯೋಜನವಾಗುವುದಿಲ್ಲ. ಈ ದೃಷ್ಟಿಯಿಂದ ವಿಚಾರ ಮಾಡುವ ಹೊತ್ತಿನೊಳಗೆ ರಾಜಕೀಯ ಭ್ರಷ್ಟಾಚಾರದ ಜನರಿಂದ ನಾವು ಸ್ವಲ್ಪ ಆಪ್ತರಾಗಿದ್ದರೆ ಮುಂದೆ ಒಳ್ಳೆಯದಾಗುತ್ತದೆ. ಸಾಧ್ಯವಾದಷ್ಟೂ ಅಧಿಕಾರಿಗಳ ವರ್ಗಾವರ್ಗಿಯಲ್ಲಾಗಲೀ ಅಥವಾ ಅವರ ನೇಮಕದಲ್ಲಾಗಲಿ ಸರ್ಕಾರವನ್ನೂ, ಮಂತ್ರಿಗಳನ್ನು ಭೇಟಿ ಮಾಡುವುದನ್ನು ಬಿಡಬೇಕು, ಯಾರಿಗಾದರೂ ಅನ್ಯಾಯವಾಗಿದ್ದರೆ ಬರೆದು ತಿಳಿಸೋಣ ಅದನ್ನು ಸರಿಪಡಿಸದೆ ಇದ್ದರೆ ಈ ಸಭೆಯಲ್ಲಿ ಚರ್ಚೆ ಮಾಡೋಣ ಆ ಮೇಲೆ ನೋಡಿರಿ ಏನಾಗುತ್ತದೆ ಎನ್ನುವುದನ್ನು.

ನಾನು 1936 ರಿಂದ ಇವತ್ತಿನವರೆಗೂ ಶಾಸನ ಸಭಾ ಸದಸ್ಯನಾಗಿದ್ದೇನೆ.ನಾನು ಏನಾದರೂ ಇಂಥವರಿಗೆ ನೇಮಿಸಿರಿ ಇಂಥವರಿಗೆ ವರ್ಗ ಮಾಡಿರಿ ಎಂದೇನಾದರೂ ಹೇಳಿದ್ದರೆ ರಾಜೀನಾಮೆ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಈ ವಿಚಾರಗಳನ್ನೆಲ್ಲ ಒಳ್ಳೆಯ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಇವತ್ತು ಅನೇಕ ಕೃತ್ಯಗಳಿಗೆ ಶಾಸನ ಸಭೆ ಜವಾಬ್ದಾರಿಯಾಗಿದೆ ನಾವು ಇಂಟರ್ ಫಿಯರ್ ಮಾಡುವುದನ್ನು ಬಿಡಬೇಕು. ಅವರಷ್ಟಕ್ಕೆ ಅವರನ್ನು ಬಿಡೋಣ, ತಪ್ಪು ಮಾಡಿದರೆ ತಪ್ಪು ಮಾಡುತ್ತಿದ್ದೀರಿ ಎಂದು ಸ್ಪಷ್ಟವಾಗಿ ಹೇಳೋಣ, ಆದರೆ ಬೆಗ್ಗಿಂಗ್ ಪಾಲಿಸಿ ಬೇಡ. ನೀವು ಆಡಳಿತ ನಡೆಸುವುದಕ್ಕೆ ಜವಾಬ್ದಾರರಿದ್ದೀರಿ,ಹೀಗೆ ನಡೆಸುವುದರಿಂದ ಆಡಳಿತ ಚೆನ್ನಾಗಿ ಆಗುವುದಿಲ್ಲ ಎಂದು ಹೇಳಿರಿ ಅದನ್ನು ಹೇಳುವ ಹೊತ್ತಿನೊಳಗೆ ಕರಪ್ಟ್ ಅಧಿಕಾರಿಗಳನ್ನು ಯಾವತ್ತೂ ಸಪೋರ್ಟ ಮಾಡಬೇಡಿರಿ.

ಒಂದು ಕೋರ್ಟಿಗೆ ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡುವಾಗ ಅನೇಕ ಅಂಶಗಳನ್ನು ಗಮನಿಸಬೇಕು ಸಾಮಾನ್ಯವಾಗಿ ದೇಶದೊಳಗೆ ಇರುವ ಚೀಫ್ ಜಸ್ಟಿಸ್ ಕರೆ ಮನುಷ್ಯ ಇರಬೇಕು, ಎನ್ನುವುದು ನನ್ನ ಅಭಿಪ್ರಾಯ, ಅಷ್ಟು ಪ್ರಾಮಾಣಿಕ ನಮಗೆ ಸಿಕ್ಕುವುದಿಲ್ಲ ಎಂದು ಕೇಳಬಹುದು. ಬಹಳ ದೂರ ರಾಜ್ಯದಿಂದ ಅತ್ಯಂತ ನುರಿತಂಥ, ನಿಷ್ಪಪಕ್ಷಪಾತದಿಂದ ಕೂಡಿರುವ ಹೆಸರಾಂತ ಒಬ್ಬರು ಚೀಫ್ ಜಸ್ಟಿಸ್ ಆಗಿ ಇರುವುದು ಅತ್ಯವಶ್ಯ, ಹೀಗೆ ಹೇಳಿದರೆ ಕೆಲವರು ಟೀಕೆ ಮಾಡುತ್ತಾರೆ. ಇಲ್ಲಿಯವರು ಮತ್ತೊಂದು ಕಡೆ ಹೋಗಲಿ ಮನುಷ್ಯ ಸ್ವಭಾವಕ್ಕೆ ನಾವು ಒಂದೊಂದು ಆದರ್ಶವನ್ನು ಪಾಲಿಸಬೇಕು. ಅವರಲ್ಲಿ ತಪ್ಪೇನೂ ಇಲ್ಲ. ಇವತ್ತು ಅನೇಕ ರೀತಿಯಿಂದ ಎಲ್ಲ ಮಾತನ್ನೂ ಸಭೆಯಲ್ಲಿ ಹೇಳುವುದು ಬಹಳ ಕಷ್ಟ.

ನಾನು ಇವತ್ತು ಒಬ್ಬ ಶಾಸನ ಸಭಾ ಸದಸ್ಯನಾಗಿ ಒಬ್ಬ ಮನುಷ್ಯನಾಗಿ ಮಾನವೀಯತೆಯ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಈ ದೃಷ್ಟಿಯಿಂದ ನಾವು ವಿಚಾರ ಮಾಡಿ ಎಲ್ಲ ಪ್ರಶ್ನೆಗಳ ಕಡೆಗೆ ಗಮನಕೊಟ್ಟರೆ.

ಇವತ್ತು ನಾನು ಭಾಷಣ ಮಾಡಬೇಕೆಂದು ಬಂದಿದ್ದೇನೆ. ನನಗೆ ಏನೂ ಆಗುವುದಿಲ್ಲ ಒಂದು ವೇಳೆ ಭಾಷಣ ಮಾಡುವಾಗ ಹಾರ್ಟ ಫೇಲ್ ಆಗುವುದಾದರೆ ಅದು ಭ್ರಷ್ಟಾಚಾರವನ್ನು ತೊಡೆಯುವುದಕ್ಕೆ ಒಂದು ಸಾಧನೆಯಾಗುತ್ತದೆಂದು ನಾನು ಭಾವಿಸುತ್ತೇನೆ. ಆದರೆ ಹಾಗೇನೂ ಆಗುವ ಸಂಭವವಿಲ್ಲ. ಗಾಂಧೀಜಿಯವರು ಸತ್ತಿದ್ದರೂ ಕೂಡ ಅವರು ಹಾಕಿ ಕೊಟ್ಟ ಸತ್ಯ ಮತ್ತು ಅಹಿಂಸೆ ಇವು ಉಳಿದುಕೊಂಡಿವೆ.

ಆದುದರಿಂದ ಈಗ ನಾವು ಏನು ಮಾಡಬೇಕು ಎಂದು ವಿಚಾರ ಮಾಡಿದರೆ ಸರ್ಕಾರದವರು ಇದರ ಪರಿಹಾರಕ್ಕೆ ಒಂದು ಕಮೀಟಿಯನ್ನು ಮಾಡಬೇಕಾದ ಅವಶ್ಯಕತೆ ಕಾಣುವುದಿಲ್ಲಾ ಸಂತಾನಂ ಕಮಿಟಿಯ ಶಿಫಾರಸ್ಸುಗಳ ಮೇರೆಗೆ ಏನೊಂದು ಕಮಿಟಿಯನ್ನು ಮಾಡಿದ್ದಾರೆ ಅದು ಲಿಮಿಟೆಡ್ ಅಧಿಕಾರವುಳ್ಳದು, ಕೇಂದ್ರದವರೂ ಕೂಡ ಎಲ್ಲ ಆಲೋಚನೆ ಮಾಡಿದ್ದಾರೆ ಅದರ ವ್ಯಾಪ್ತಿಯನ್ನು ಅವರು ಬೆಳೆಸಿಕೊಳ್ಳಲಿ ಇದನ್ನು ಆಡಳಿತಾತ್ಮಕವಾಗಿ ತೆಗೆಯುವುದು ಸಾಧ್ಯವಿಲ್ಲ. ಅದರ ಬೇರು ತೆಗೆಯಬೇಕು. ನಮ್ಮ ಸಮಾಜ ಕಾರ್ಯಕರ್ತರು,

ಮುಖಂಡರುಗಳು ಈ ಬಗ್ಗೆ ಸಾಕಷ್ಟು ಪ್ರಚಾರ ಮಾಡಬೇಕು. ಅವರೂ ಮನುಷ್ಯರೇ ಅವರ ಹೃದಯ ಪರಿವರ್ತನೆಯಾಗುವುದಿಲ್ಲವೆಂದಲ್ಲ ಇಂಥ ಪ್ರಚಾರ ಮಾಡಿದರೆ ಬಹಳ ದೊಡ್ಡ ದೊಡ್ಡ ಆಸ್ತಿಗಳಿಸಿರತಕ್ಕ ಪುಢಾರಿಗಳು, ಅಧಿಕಾರಿಗಳು ಅನ್ನಬಹುದು ಆ ರೀತಿ ಸಂಪಾದನೆ ಮಾಡಿರುವ ಆಸ್ತಿಯನ್ನು ರಾಜ್ಯಕ್ಕೆ ತೆಗೆದುಕೊಳ್ಳಿ ಎಂದು? ಇಂಥ ಒಂದು ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡಬೇಕು. ಆದುದರಿಂದ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಿ, ಈಗ ವಾಪಸ್ಸು ತೆಗೆದುಕೊಂಡರೆ ಅದರಿಂದ ಹೆಚ್ಚಿನ ಪರಿಣಾಮವಾಗುತ್ತದೆ, ಒಳ್ಳೆಯ ಪರಿಣಾಮವಾಗುತ್ತದೆ. ನನಗೆ ಆಶಯವಿದೆ ಕೇಂದ್ರ ಸರ್ಕಾರದವರು ನಡೆಸಿದರೆ ನಮ್ಮವರೂ ನಡೆಸುತ್ತಾರೆ ಆ ಹೊತ್ತಿನೊಳಗೆ 'Who is who' ಎಂದು ತಾವು ತಿಳಿದುಕೊಳ್ಳಬಹುದು ಯಾರ ಯಾರ ಯೋಗ್ಯತೆ ಏನು ಎಂದು ತಿಳಿದುಕೊಳ್ಳಬಹುದು ಈ ಕಾರಣಕ್ಕಾಗಿ ನಾವು ತಡೆದು ಆಲೋಚನೆ ಮಾಡೋಣ ಇಲ್ಲದಿದ್ದರೆ ಏನಾಗುತ್ತದೆ ಎನ್ನುವುದನ್ನು ಆಗಲೇ ಹೇಳಿದ್ದೇನೆ.

ಸಮಾಜವಾದ ಬೇಕು, ಜಾತಿ ಹೋಗಬೇಕು, ಜಾತಿಯತೆ ಹೋಗಬೇಕು ಎಂದು ಬಾಯಲ್ಲಿ ಹೇಳುತ್ತೇವೆ, ಆದರೆ ಜಾತಿ ಇರುತ್ತದೆ ಹಾವು ಇರಬೇಕು ಹಾವಿನ ವಿಷ ಹೋಗಬೇಕು ಎಂದರೆ ಹೇಗೆ ಆಗುತ್ತದೆ, ಸಕಾರದವರು ಇಂಥದಕ್ಕೆ ಕೆಲವು ಕ್ರಮ ತೆಗೆದುಕೊಳ್ಳಲಿ ವಿಜಾತಿಯಲ್ಲಿ ಲಗ್ನವಾದರೆ ಸರ್ಕಾರಿ ನೌಕರಿ ಕೊಡುವುದಕ್ಕೆ ಏನಾದರೂ ಸವಲತ್ತು ಕೊಡುವುದಕ್ಕೆ ಪ್ರಯತ್ನ ಮಾಡಿರಿ ಆ ದೃಷ್ಟಿಯಿಂದ ನಾವು ವಿಚಾರ ಮಾಡೋಣ ನಮಗೆ ಬೇಕೊ, ನಿಮಗೆ ಬೇಕೋ, ನಮಗೆ ಬೇಡವೋ ನಿಮಗೆ ಬೇಡವೋ ಇನ್ನು ಕೆಲವು ಕಾಲದೊಳಗೆ ಈ ಭ್ರಷ್ಟಾಚಾರ, ಈ ಜಾತಿ ಎರಡೂ ಸಮಾಧಿಯಾಗಬೇಕು, ಏಕೆಂದರೆ ಇದು ಅಂಥ ರೋಗ, ಅಂದಮೇಲೆ ಇದಕ್ಕೆ ಮರಣ ಬರಲೇಬೇಕು ಇದು ಏಕೆ? ಏನು? ಎನ್ನುವುದೆಲ್ಲ ಸೃಷ್ಟಿ ನಿಯಮ.

**ಮಧ್ಯಾಹ್ನ 12-00**

ಇನ್ನು ಕಾನೂನುಗಳನ್ನು ಮಾಡುವ ವೇಳೆಗೆ ಯಾವ ಯಾವ ಅಪಮಾರ್ಗದಿಂದ ದುಡ್ಡನ್ನು ಗಳಿಸುತ್ತಾರೆ, ಅಂತಹ ಮಾರ್ಗಗಳು ಯಾವ ಯಾವುವು ಇವೆ ಎಂಬುದನ್ನು ನೋಡೋಣ, ಆಗ ಪುನರಾಲೋಚನೆ ಮಾಡೋಣ, ಈಗ ಯಾವ ಯಾವ ಕಾನೂನುಗಳು ಇವೆ, ಅವುಗಳನ್ನು ದೇಶದ ಒಂದು ಸಾಮೂಹಿಕ ಪ್ರಶ್ನೆ ಬಂದಾಗ ಬದಲಾವನೆ ಮಾಡುವುದು ಅವಶ್ಯಕ ಎಂದು ಕಂಡುಬಂದರೆ ಬದಲಾವಣೆ ಮಾಡೋಣ, ನಾವು ಸರಿಯಾಗಿ ನಡೆಯೋಣ ಮತ್ತು ಸರಿಯಾಗಿ ಕೆಲಸ ಮಾಡೋಣ ಆದ್ದರಿಂದ ದಯಮಾಡಿ ಎಲ್ಲರಿಗೂ ಹೇಳುತ್ತೇನೆ ಇದರಲ್ಲಿ ರಾಜಕಾರಣೆಗಳನ್ನು ದೂರಬೇಡಿರಿ, ಚುನಾವಣೆಯ ಪ್ರಚಾರದ ದೃಷ್ಟಿಯಿಂದ ಪ್ರಚಾರ ಮಾಡಬೇಡಿರಿ-ಒಳ್ಳೆಯ ರಾಜ್ಯ ಕಟ್ಟೋಣ, ರಾಜ್ಯ ಸುಧಾರಿಸಲಿಲ್ಲ ಒಂದು ವ್ಯಾಖ್ಯಾಕ್ಕೆ ಎಂದರೆ ಕ್ರಾಂತಿ ಅನಿವಾರ್ಯವಾಗುತ್ತದೆ ಎಂದ ಕೊನೇ ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

# ಉತ್ತರ ಕರ್ನಾಟಕದ ದೇವದಾಸಿಯರಿಗೆ ಇನಾಮ ಭೂಮಿ ನೀಡಿಕೆ

**ಶ್ರೀ ಎ.ಜೆ. ದೊಡ್ಡಮೇಟಿ:** ಧಾರವಾಡ ಜಿಲ್ಲೆಯಲ್ಲಿ 335 ಎಕರೆ 18 ಗುಂಟೆ ಜಮೀನು ದೇವದಾಸಿಯರಿಗೆ ಕೊಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಗದಗ್ ಮತ್ತು ನರಗುಂದ ತಾಲ್ಲೂಕುಗಳಿಗೆ ಸಂಬಂಧಪಟ್ಟ ಹಾಗೆ ಎಷ್ಟಿದೆ ಎಂದು ಹೇಳುತ್ತಾರೆಯೇ?

**ಶ್ರೀ ಎಂ.ವಿ. ಕೃಷ್ಣಪ್ಪ:** ದೇವದಾಸಿ ಇನಾಂ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ದೇವದಾಸಿ ಇನಾಂ ಇದೆ. ಪೂಜೆ ಮಾಡುವುದಕ್ಕೆ ನಂದಾದೀಪ ಉಳಿಸುವುದಕ್ಕೆ, ನಾಟ್ಯ ಮತ್ತು ಸಂಗೀತ ನಡೆಸುವವರಿಗೆ, ಭಜಂತ್ರಿಯವರಿಗೆ ಹೀಗೆ ಇನಾಂ ಜಮೀನುಗಳನ್ನು ಕೊಟ್ಟಿರುತ್ತಾರೆ. ಇದನ್ನೆಲ್ಲ ಕ್ಲಾಸ್ ಮೂರಲ್ಲಿ ದೇವಸ್ಥಾನ ಇನಾಂ ಎಂದು ಹಾಕುತ್ತಾರೆ. ದೇವದಾಸಿ ಇನಾಮ ಎನ್ನುವುದಕ್ಕೆ ಪ್ರತ್ಯೇಕ ಲೆಕ್ಕಗಳಿಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ಹಾಗಲ್ಲ, ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ದೇವದಾಸಿಗಳಿಗೆ ಜಮೀನು ಕೊಟ್ಟಿದ್ದು ಎಷ್ಟು ಎಂದು ನಾನು ಪ್ರಶ್ನೆ ಕೇಳಿದ್ದೆ.

**ಶ್ರೀ ಎಂ.ವಿ.ಕೃಷ್ಣಪ್ಪ:** ದೇವದಾಸಿ ಕೆಲಸ ಮಾಡುವುದಕ್ಕೆ ಇನಾಂ ಕೊಟ್ಟಿಲ್ಲ ಯಾವ ಯಾವ ದೇವಸ್ಥಾನದಲ್ಲಿ ಪೂರ್ವಕಾಲದಿಂದ ನಾಟ್ಯ ಮತ್ತು ಸಂಗೀತ ನಡೆದುಕೊಂಡು ಬರುತ್ತಾ ಇತ್ತೋ ಅದಕ್ಕೆ ಮಾತ್ರ ಅಂತಹ ಇನಾಂತಿಗಳನ್ನು ಕೊಟ್ಟಿದ್ದಾರೆ, ದೇವದಾಸಿ ಕೆಲಸಕ್ಕೆ ಇನಾಂತಿ ಕೊಟ್ಟಿಲ್ಲ ಮತ್ತು ಅದಕ್ಕೆನೇ ಸಪರೇಟ್ ಅಕೌಂಟ್ಸ ಇಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ದೇವದಾಸಿಗಳಿಗೆ ಮಂಜೂರು ಮಾಡಿರುವ ಜಮೀನು ಎಷ್ಟು ಇದೆ ಎಂದು ನಾನು ಪ್ರಶ್ನೆ ಕೇಳಿದ್ದೆ, ಇದರ ಬಗ್ಗೆ ಯಾವುದಾದರೂ ವಿವರ ಇದ್ದರೆ ಹೇಳಿ, ಇಲ್ಲದೆ ಇದ್ದರೆ ತರಿಸಿ ಅನಂತರ ಹೇಳಿ.

**ಶ್ರೀ ಎಂ.ವಿ. ಕೃಷ್ಣಪ್ಪ:** ದೇವಸ್ಥಾನದ ಹೆಡ್ಡಿಂಗ್‌ನಲ್ಲಿ ಕೆಲವು ಇರುತ್ತವೆ. ವೇಶ್ಯೆಯರಿಗೆ ಎಂದರೆ ಅದನ್ನು ಪೂಜಾರಿಗಳ ಹೆಸರಿನಲ್ಲಿ ಬರೆದಿರುತ್ತಾರೆ. ಕೆಲವು ಭಜಂತ್ರಿ ಭಾರಿಸುವವರ ಹೆಸರಿನಲ್ಲಿ ಇರುತ್ತವೆ, ಇನ್ನು ಕೆಲವು ಕಸ ಗುಡಿಸುವವರ ಹೆಸರಿನಲ್ಲಿ ಇರುತ್ತವೆ. ಹೀಗೆ ದೇವಸ್ಥಾನದ ಹೆಡ್ಡಿಂಗ್‌ನಲ್ಲಿ ಯಾವ ದೇವದಾಸಿಗೆ ಕೊಟ್ಟಿರುತ್ತಾರೆ. ಆ ದೇವದಾಸಿಯರ ಹೆಸರಿನಲ್ಲಿ ಇನಾಂತಿ ಇರುತ್ತದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಇನಾಂತಿ ಇರುತ್ತದೆ, ಅದಕ್ಕೆ ನನ್ನ ಪ್ರಶ್ನೆ ಏನೆಂದರೆ ಆ ರೀತಿ ಕೊಟ್ಟಿರುವ ಸಾವಿರಾರು ಎಕರೆ ಜಮೀನು ಎಷ್ಟೋ ಕಡೆ ಹಾಳಾಗಿದೆ ಮತ್ತು ಪರರ ವಶವಾಗಿದೆ. ಆ ಕಾರಣಕ್ಕಾಗಿ ಇದನ್ನು ಎದ್ದು ಮಾಡಬೇಕೆಂದು ಹಿಂದೆ ಕಡಿದಾಳ್

ಮಂಜಪ್ಪನವರು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಹೇಳಿದ್ದಕ್ಕೆ ಅವರು ರದ್ದು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು, ಆ ಬಗ್ಗೆ ಏನು ಮಾಡಿದ್ದೀರಿ?

ಅಧ್ಯಕ್ಷರು: ಕಡಿದಾಳ್ ಮಂಜಪ್ಪನವರೇ?

**ಶ್ರೀ ಎ.ಜೆ. ದೊಡ್ಡಮೇಟಿ:** ಹೌದು

**ಅಧ್ಯಕ್ಷರು:** ಅವರು ಏನೂ ಮಾಡಲಿಲ್ಲವೇ?

**ಶ್ರೀ ಎ.ಜೆ. ದೊಡ್ಡಮೇಟಿ:** ಏನೂ ಮಾಡಲಿಲ್ಲ (ನಗು)

**ಶ್ರೀ ಎಂ.ವಿ. ಕೃಷ್ಣಪ್ಪ:** ಧಾರವಾಡದ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ ಮತ್ತು ನರಗುಂದದ ಮಾಹಿತಿ ಬೇಕಾದರೆ ತರಿಸಿ ಕೊಡುತ್ತೇನೆ.

**ಶ್ರೀ ಕೆ. ಲಕ್ಕಪ್ಪ:** ಬೆಳಗಾಂನಲ್ಲಿ 19 ಎಕರೆ 14 ಗುಂಟೆ ಎಂದು ಹೇಳಿದ್ದೀರಿ, ಧಾರವಾಡದಲ್ಲಿ 335 ಎಕರೆ 13 ಗುಂಟೆ ಇದೆ, ಇವೆಲ್ಲಾ ಯಾರ ಹೆಸರಿನಲ್ಲಿ ಮತ್ತು ಯಾರ ಸ್ವಾಧೀನದಲ್ಲಿ ಇವೆ?

**ಶ್ರೀ ಎಂ.ವಿ. ಕೃಷ್ಣಪ್ಪ:** ಮಾನ್ಯ ಸದಸ್ಯರಿಗೆ ಬೇಕಾದರೆ ದೇವದಾಸಿ ಹೆಸರು ತರಿಸಿಕೊಡುತ್ತೇನೆ (ನಗು)

**ಶ್ರೀ ಎನ್. ಹುಚ್ಚಮಾಸ್ತಿಗೌಡ:** ಕಾರವಾರ ಜಿಲ್ಲೆಯಲ್ಲಿ ಬಹಳ ಜಾಸ್ತಿ ಇರುವುದಕ್ಕೆ ಕಾರಣವೇನು? ಯಾರ ಪ್ರೇರಣೆಯಿಂದ ಈ ಪದ್ದತಿ ಜಾರಿಯಾದದ್ದು ಎಂಬುದನ್ನು ಹೇಳಬಲ್ಲಿರಾ

(ಉತ್ತರ ಇಲ್ಲ)

**ಶ್ರೀ ಸಿದ್ದಯ್ಯ ಕಾಶೀಮಠ್:** 355 ಎಕರೆ ಜಮೀನು ದೇವದಾಸಿಗಳಿಗೆ ಇನಾಂ ಗ್ರಾಂಟ್ ಮಾಡಲಾಗಿದೆ. ಈ ಗ್ರಾಂಟು ಮೊದಲಿನಿಂದಲೂ ಇತ್ತೇ?

**ಶ್ರೀ ಎಂ.ವಿ. ಕೃಷ್ಣಪ್ಪ:** ನಾವು ಗ್ರಾಂಟ್ ಮಾಡುವುದಕ್ಕೆ ನಮಗೆ ಇರತಕ್ಕ ಅಧಿಕಾರವನ್ನೇ ತೆಗೆದುಕೊಂಡುಬಿಟ್ಟಿದ್ದಿರೀ ಆದ್ದರಿಂದ ನಾವು ಆ ರೀತಿ ಇನಾಂ ಗ್ರಾಂಟು ಮಾಡುವುದಕ್ಕೆ ಸಾಧ್ಯವೇ ಇಲ್ಲ ನಾವು ಸಂವಿಧಾನ ಚೌಕಟ್ಟಿನೊಳಗೆ ಇನಾಂಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ. ನಾವು ಕೇವಲ ಇನಾಂಗಳನ್ನು ತೆಗೆದು ಹಾಕಬಹುದು. ಹಿಂದೆ ಪುರಾತನ ಕಾಲದಿಂದ ಬಂದಿರತಕ್ಕ ಇನಾಂತಿಗಳ ವಿಷಯ ಅವರು ಕೇಳುತ್ತಾ ಇರುವುದು, ನಾನು ಮೊದಲೇ ಹೇಳಿದ ಹಾಗೆ ಟೆಂಪಲ್ ಇನಾಂಸ್, ಸರ್ವೀಸ್ ಇನಾಂಸ್ ಎಂದು ಬೇರೆ ಬೇರೆ ಹೆಡ್ಡಿಂಗ್‌ನಲ್ಲಿ ಬರೆದಿರುತ್ತಾರೆ. ಹೆಂಗಸರ ಹೆಸರಿನಲ್ಲೂ ಜಮೀನು ಇರಬಹುದು, ದೇವದಾಸಿಗಳಿಗೆ ಎಂದು ಒಂದು ಪ್ರತ್ಯೇಕ ಐಟಂ ಇಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** (ಅ) ಪ್ರಶ್ನೆಗೆ ಉತ್ತರವಾಗಿ ಬೆಳಗಾಂನಲ್ಲ 4 ಎಕರೆ 3 ಗುಂಟೆಗಳನ್ನು ಪುನಃ ಮಂಜೂರು ಮಾಡಲಾಗಿದೆ ಎಂದು ಹೇಳಿದ್ದೀರಿ. ಆ ಜಮೀನನ್ನು ಯಾವ ಕಾನೂನಿನ ಪ್ರಕಾರ ವಾಪಸ್ಸು ತೆಗೆದುಕೊಂಡಿದ್ದೀರಿ?

**ಶ್ರೀ ಎಂ.ವಿ. ಕೃಷ್ಣಪ್ಪ:** ಬೇರೆ ಬೇರೆ ರೀತಿಯ ಗ್ರಾಂಟ್ ಇರುತ್ತವೆ. ಸರ್ವೀಸ್ ಇನಾಂಸ್ ರದ್ದು ಮಾಡುವುದಕ್ಕಾಗುವುದಿಲ್ಲ. ಯಾರಿಗೆ ಸರ್ವೀಸ್ ಇನಾಂ ಗ್ರಾಂಟ್ ಇರುತ್ತದೆಯೋ ಅದೆಲ್ಲಾ ಹಾಗೇಯೇ ಇರುತ್ತದೆ. ಕಾನೂನು ಪ್ರಕಾರ ಟೆಂಪಲ್ ಇನಾಂ ರದ್ದು ಮಾಡುವುದಕ್ಕೆ ಸುರು ಮಾಡಿಲ್ಲ.

**ಶ್ರೀ ಜಿ.ವಿ. ಗೌಡ:** ದೇವದಾಸಿಗಳಿಗೆ ಇನಾಂತಿ ಜಮೀನುಗಳನ್ನು ಹಿಂದೆ ಕೊಟ್ಟಿರಲ್ಲಾ ಆಗ ಅದಕ್ಕೆ ಏನು ಸೇವೆಯನ್ನು ಅವರಿಂದ ತೆಗೆದುಕೊಂಡು ಅವನ್ನು ಮಂಜೂರು ಮಾಡಿದ್ದಾರೆ?

**ಶ್ರೀ ಎಂ.ವಿ.ಕೃಷ್ಣಪ್ಪ:** ಪೂರ್ವಕಾಲದಲ್ಲಿ ದೇವಸ್ಥಾನಗಳಲ್ಲಿ ನಾಟ್ಯ ಮತ್ತು ಸಂಗೀತ ನಡೆಯುತ್ತಾಇತ್ತು ಆ ಸೇವೆಯನ್ನು ಅವರಿಂದ ತೆಗೆದುಕೊಳ್ಳುತ್ತಾ ಇದ್ದರು ಅದಕ್ಕಾಗಿ ಕೊಟ್ಟಿದ್ದಾರೆ

**ಶ್ರೀ ಜಿ.ವಿ. ಗೌಡ:** ಅವರು ಅದನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದರೆ ಅದನ್ನು ಈಗ ಏಕೆ ವಜಾ ಮಾಡಬೇಕು.

**ಶ್ರೀ ಎಂ.ವಿ. ಕೃಷ್ಣಪ್ಪ:** ನಾಟ್ಯ ಸಂಗೀತ ಇವುಗಳಿಗಾಗಿ ಅವನ್ನು ಕೊಟ್ಟಿದ್ದಾರೆ ಉತ್ತರ ಕರ್ನಾಟಕದಲ್ಲಿ ಅವರನ್ನು ದೇವದಾಸಿಗಳೆಂದು ಕರೆಯುತ್ತಾರೆ, ಮೈಸೂರು ಸಂಸ್ಥಾನದಲ್ಲೂ ಸಹ ಅವಕ್ಕೆ ಭಾವಾ ಇನಾಂಗಳೆಂದು ಕರೆಯುತ್ತಾರೆ ದಕ್ಷಿಣಮೈಸೂರಿನಲ್ಲಿ ಅದು ಇದೆ ಅದನ್ನೇ ಮುಂದುವರಿಸಿಕೊಂಡು ಹೋಗುತ್ತಾ ಇದ್ದಾರೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ನನಗೆ ತಿಳಿದಿರುವ ಹಾಗೆ ಯಾವ ದೇವಸ್ಥಾನದಲ್ಲೂ ನೃತ್ಯ ಸಂಗೀತ ಅವರುಗಳಿಂದ ನಡೆಯುತ್ತಾ ಇಲ್ಲ ಆದರೆ ದಕ್ಷಿಣ ಭಾರತದಲ್ಲಿ ಮಧುರ ದೇವಸ್ಥಾನದಲ್ಲಿ ದೇವರ ಉತ್ಸವ ನಡೆಯುವಾಗ ನಾಟ್ಯ ಮಾಡಿಕೊಂಡು ಮುಂದೆ ಹೋಗುತ್ತಾ ಇರುತ್ತಾರೆ.

**ಶ್ರೀ ಇ. ನಾರಾಯಣ ಗೌಡ:** ಈ ವ್ಯವಸ್ಥೆ ನಿಂತು ಹೋಗಿ ಅವರಲ್ಲಿ ಬಹಳ ಜನ ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಒಂದು ಸಮಿತಿಯನ್ನು ರಚನೆ ಮಾಡಿ ಅವರಿಗೆ ಏನಾದರೂ ಒಂದು ಪರಿಹಾರವನ್ನು ಮಾಡಿ ಕೊಡುತ್ತೀರಾ?

**ಶ್ರೀ ಎ.ಜೆ. ದೊಡ್ಡಮೇಟಿ:** ನಾಲ್ಕು ವರ್ಷಗಳ ಕೆಳಗೆ ಈ ಅಸೆಂಬ್ಲಿಯಲ್ಲಿ ಈ ದೇವದಾಸಿಗಳಿಗೆ ಕೊಟ್ಟಿರತಕ್ಕ ಇನಾಂತಿಯನ್ನು ರದ್ದು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಅದನ್ನು ಎಂದು ಕಾರ್ಯಗತ ಮಾಡುತ್ತೀರ?

**ಶ್ರೀ ಎಂ.ವಿ.ಕೃಷ್ಣಪ್ಪ:** ಖಾಯಂ ಆಗಿಯೇ ಅದನ್ನು ಜಾರಿಗೆ ತರುತ್ತೇವೆ ಮೊದಲು ಬೇರೆ ಇನಾಂತಿಗಳು ರದ್ದು ಆದ ಮೇಲೆ ಕಡೆಯಲ್ಲಿ ಅವಶ್ಯಕತೆ ಇದ್ದರೆ ಈ ಇನಾಂತಿಗಳನ್ನೂ ರದ್ದು ಮಾಡುತ್ತೇವೆ.

**ಶ್ರೀ ಎ.ಜೆ. ದೊಡ್ಡಮೇಟಿ:** ನನ್ನ ಭಾವನೆಯಲ್ಲಿ ಇದು ಆಲಕ್ಷ್ಯವೇ ಹೊರತು ಮತ್ತೆ ಬೇರೆ ಯಾವ ಟೆಕ್ನಿಕಲ್ ಕಾರಣಗಳೂ ಇಲ್ಲ. ಹಳೇ ಮೈಸೂರಿನ ದೇವಸ್ಥಾನಗಳ ಇನಾಂತಿಗಳು ರದ್ದು ಆಗಿವೆ, ಹಾಗಿರುವಾಗ ಉತ್ತರ ಕರ್ನಾಟಕದ್ದಕ್ಕೆ ಏನು ತೊಂದರೆ ಇದೆಯೋ ಗೊತ್ತಿಲ್ಲ ನಿಶ್ಚಿತ ಅವಧಿಯಲ್ಲಿ ಇದು ಹೋಗಬೇಕು ಇದು ಅನಾವಶ್ಯಕ ಕೇವಲ ಶೇಷ ಉಳಿದಿದೆ.

**ಶ್ರೀ ಎಂ.ವಿ. ಕೃಷ್ಣಪ್ಪ:** ಈ ವ್ಯವಸ್ಥೆಯಿಂದ ತಾವು ಹೇಳುವ ರೀತಿಯಲ್ಲಿ ಏನಾದರೂ ತೀವ್ರವಾದ ಪರಿಣಾಮವಾಗುವಂತಹ ಪರಿಸ್ಥಿತಿ ಇದ್ದರೆ ಅದನ್ನು ಪರಿಶೀಲನೆ ಮಾಡಿ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುವುದಕ್ಕೆ ಭರವಸೆ ಕೊಡುತ್ತೇನೆ.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ:** ಈ ವಿಷಯದಲ್ಲಿ ನಮ್ಮ ಸ್ನೇಹಿತರು ಬಹಳ ಉಗ್ರವಾಗಿದ್ದಾರೆ ಆ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವೇನು? ಸ್ವಾಮಿ ಈ ದೇವದಾಸಿಗಳಿಗೆ ಕೊಟ್ಟಿರುವ ಜಮೀನು ಬಹಳ ಅತ್ಯಲ್ಪ ಅವರಲ್ಲೂ ಬಹಳ ಜನ ನಿರುದ್ಯೋಗಿಗಳಾಗಿದ್ದಾರೆ ಆದ್ದರಿಂದ ಅವರಿಗೆ ಈ ಜಮೀನುಗಳನ್ನು ಬಿಟ್ಟರೆ ಅದರಿಂದ ದೇಶಕ್ಕೆ ಆಗತ್ಯಕ್ಕೆ ಅನಾಹುತವೇನು?

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ:** ಈ ಅಲ್ಪ ಸ್ವಲ್ಪ ಜಮೀನುನ್ನು ಅವರಿಗೆ ಬಿಟ್ಟರೆ ಅದರಿಂದ ಸರ್ಕಾರಕ್ಕೆ ಅಥವಾ ದೇಶಕ್ಕೆ ಆಗತಕ್ಕ ಅನಾಹುತವೆ?

**ಶ್ರೀ ಎಂ.ವಿ. ಕೃಷ್ಣಪ್ಪ :** ಅದು ಪಾಲಿಸಿ ಮ್ಯಾಟರ್ ಎಷ್ಟೇ ಅತ್ಯಲ್ಪ ಆಗಲಿ ದೊಡ್ಡದು ಆಗಲಿ

**ಶ್ರೀ ಡಿ.ಎಂ. ಸಿದ್ದಯ್ಯ:** ಈಗ ಯಾವ ದೇವಸ್ಥಾನದಲ್ಲೂ ದೇವದಾಸಿಯಲ್ಲ ಆ ಜಮೀನುಗಳನ್ನೆಲ್ಲಾ ದೇವಸ್ಥಾನದ ಅರ್ಚಕರು ಇನ್ನಿತರರೂ ದುರುಪಯೋಗಪಡಿಸಿಕೊಂಡಿದ್ದಾರೆ. ಅಂಥ ಜಮೀನುಗಳನ್ನೇಲ್ಲಾ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಆ ಜಮೀನನ್ನು ಜಮೀನಿಲ್ಲದ ಜನಗಳಿಗೆ ಹಂಚುತ್ತಾರೆಯೇ?

**ಶ್ರೀ ಎಂ.ವಿ. ಕೃಷ್ಣಪ್ಪ:** ಸರ್ಕಾರದ ಕಡೆಗೆ ಬಂದು ಹಿಂದಿನ ಜಮೀನ್ದಾರರಿಗೆ ಜಮೀನಿದ್ದಿದ್ದರೆ ಅವರೇ ಸರ್ಕಾರಕ್ಕೆ ಅವರೇ ಇಂತಿಷ್ಟು ಕಂದಾಯ ಕಟ್ಟಿಕೊಂಡು ಜಮೀನನ್ನು ಅನುಭವಿಸಿಕೊಂಡು ಹೋಗಬಹುದೆಂದು ಮಾಡಲಾಗಿದೆ. ಆದರೆ ಅವರಿಗೆ ಆ ಹಿಂದಿನ ರಿಯಾಯಿತಿಗಳಿರುವುದಿಲ್ಲ ಅಷ್ಟೇ.

1740-10

**ಶ್ರೀ ಕೆ. ಲಕ್ಕಪ್ಪ:** ಕೆಲವು ಪಟೇಲ್ ಶ್ಯಾನುಭೋಗರ ಸರ್ವೀಸ್ ಇನಾಂಗಳು ಬೇರೆಯವರಿಗೆ ಅವರ ಸುಪರ್ದಿನಲ್ಲಿರುತ್ತವೆ. ಅಂಥ ಜಮೀನುಗಳನ್ನು ವಾಪಸ್ಸು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿರಾ?

**ಶ್ರೀ ಎಂ.ಪಿ. ಕೃಷ್ಣಪ್ಪ :** ಅಂಥ ಕೆಲವು ನಿರ್ದಶನಗಳು ನನ್ನ ಗಮನಕ್ಕೂ ಬಂದಿವೆ. ಆದರೆ 12 ವರ್ಷದ ಲಿಮಿಟೇಶನಲ್ಲಿದ್ದರೆ ಮಾತ್ರ ಸರ್ಕಾರ ಕ್ರಮಕೈಗೊಳ್ಳಲು ಬರುತ್ತದೆ.

**ಶ್ರೀ ಡಿ.ಎಂ. ಸಿದ್ದಯ್ಯ:** ದೇವಸ್ಥಾನಗಳಲ್ಲಿ ಈ ಎಲ್ಲಿಯೂ ದೇವದಾಸಿಯರಿಲ್ಲ, ಅರ್ಚಕರು ಆ ಜಮೀನುಗಳನ್ನು ದುರುಪಯೋಗ ಮಾಡುತ್ತಿದ್ದಾರೆ ಅಂಥ ಜಮೀನುಗಳನ್ನು ಜಮೀನಿಲ್ಲದವರಿಗೆ ಕೊಡಿಸಲು ಪ್ರಯತ್ನ ಮಾಡುತ್ತಿರಾ ಎಂದು ನಾನಾಗಲೇ ಪ್ರಶ್ನೆಕೇಳಿದೆ.

**ಶ್ರೀ ಎಂ.ಎ. ಕೃಷ್ಣಪ್ಪ:** ನಮ್ಮ ಹಳೇ ಮೈಸೂರಿನಲ್ಲಿ ಅಂಥ ನಿದರ್ಶನಗಳು ಬಹಳ ಕಡಿಮೆ, ಉತ್ತರ ಕರ್ನಾಟಕದಲ್ಲಿ ಕೆಲವು ಇರಬಹುದು ಅದನ್ನು ಪರಿಶೀಲನೆ ಮಾಡುತ್ತೇವೆ.

**ಶ್ರೀ ಎ.ಜಿ. ದೊಡ್ಡಮೇಟಿ:** ನನ್ನ ಪ್ರಶ್ನೆಗೆ ಸರ್ಕಾರದವರು ಏನು ಆಶ್ವಾಸನೆ ಕೊಟ್ಟರು?

## ಘನತೆವೆತ್ತ ರಾಜ್ಯಪಾಲರಿಗೆ ವಂದನೆ

**ಶ್ರೀ ಎ.ಜಿ. ದೊಡ್ಡಮೇಟಿ (ರೋಣ):** ಸ್ವಾಮಿ, ನಿನ್ನೆ ನಾನು ಮಾತನಾಡುವ ಕಾಲಕ್ಕೆ, ರಾಜ್ಯಪಾಲರು ಭ್ರಷ್ಟಾಚಾರದ ನಿವಾರಣೋಪಾಯದ ಬಗ್ಗೆ ಏನೂ ನಿರ್ದಿಷ್ಟವಾದ ಸೂಚನೆನ್ನು ತಮ್ಮ ಭಾಷಣದಲ್ಲಿ ಮಾಡಲಿಲ್ಲ ಎಂದು ಹೇಳಿದೆ. ನಮ್ಮ ದೇಶದಲ್ಲಿ ಈ ಭ್ರಷ್ಟಾಚಾರದ ನಿವಾರಣೋಪಾಯಗಳನ್ನು ಕೇಂದ್ರದವರು ಕೈಗೊಂಡಿದ್ದಾರೆ. ಕೇಂದ್ರದವರು ಕೈಗೊಂಡ ಈ ನಿವಾರಣೋಪಾಯಗಳು ಸಾಕಷ್ಟು ತೃಪ್ತಿಕರವಾಗಲಿಲ್ಲ ಎನ್ನುವ ಮಾತನ್ನು ಅವರು ಕೇಳಬಹುದಾಗಿತ್ತು. ಸರ್ಕಾರದವರು ಈ ದಿಶೆಯಲ್ಲಿ ಯಾವ ನಿರ್ಧಾರಕ್ಕೆ ಬಂದಿದ್ದಾರೆ ಎನ್ನುವುದು ನಿಶ್ಚಿತವಿಲ್ಲ. ನಿನ್ನೆ ಪ್ರಶ್ನೋತ್ತರ ಕಾಲದಲ್ಲಿ ಗ್ರಹ ಮಂತ್ರಿಗಳು ರಾಜಕೀಯ ಭ್ರಷ್ಟಾಚಾರದ ಬಗ್ಗೆ ಒಂದು ಸಮಿತಿಯನ್ನು ನೇಮಿಸಬೇಕು ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆಂದು ಹೇಳಿದರು. ಅಧಿಕಾರಿಗಳ ಭ್ರಷ್ಟಾಚಾರಕ್ಕಿಂತಲೂ ಅಧಿಕಾರೇತನ ಭ್ರಷ್ಟಾಚಾರ ಬೃಹತ್ ಸ್ವರೂಪ ತಾಳಿದೆ ಎಂದು ಹಲವು ಸಲ ಈ ಸಭೆಯಲ್ಲಿ ನಾನು ಹೇಳಿದ್ದೇನೆ. ಅಧಿಕಾರೇತರು ಸ್ಪಷ್ಟವಾಗಿ, ನಿರ್ಮಲಚಿತ್ತರಾಗಿ, ಸಚ್ಚರಿತ್ರರಾಗಿ ರಾಜಕೀಯ ಭ್ರಷ್ಟಾಚಾರವನ್ನು ನಿವಾರಿಸಿದರೆ ಅಧಿಕಾರಿಗಳ ಭ್ರಷ್ಟಾಚಾರವನ್ನು ನಿವಾರಿಸುವುದರಲ್ಲಿ ವೇಳೆ ಹಿಡಿಯುವುದಿಲ್ಲ ಎನ್ನುವ ಮಾತನ್ನು ಹೇಳುವುದು ಸಹ ತಮಗೆಲ್ಲರಿಗೂ ಒಪ್ಪಿಗೆಯ ಮಾತಾಗಿದೆ. ಆ ಬಗ್ಗೆ ಸಹ ಅವರು ನಿರ್ದಿಷ್ಟವಾಗಿ ಹೇಳಬೇಕಾಗಿತ್ತು.

ಈ ಬಗ್ಗೆ ಅವರು ನಿರ್ದಿಷ್ಟವಾಗಿ ಹೇಳಬೇಕಾಗಿತ್ತು. ಇದನ್ನೇಕೆ ಹೇಳುತ್ತಿದೇನೆಂದರೆ, ನಮ್ಮ ದೇಶದ ಹೊರಗಿರುವ ನಮ್ಮ ಶತ್ರುಗಳಾದ ಚೈನ ಮತ್ತು ಪಾಕಿಸ್ತಾನಗಳಿಂದ ನಮಗಾಗಬಹುದಾದ ತೊಂದರೆಗಿಂತ ಹೆಚ್ಚಾಗಿ ನಮ್ಮ ದೇಶದೊಳಗಿರುವ ಅನಾಚಾರ ಮತ್ತು ಭ್ರಷ್ಟಾಚಾರಗಳಿಂದ, ಅಶುದ್ಧ ನಡವಳಿಕೆಯಿಂದ ಹೆಚ್ಚಾಗಿ ನಮ್ಮ ದೇಶದೊಳಗಿರುವ ಅನಾಚಾರ ಮತ್ತು ಭ್ರಷ್ಟಾಚಾರಗಳಿಂದ, ಶುದ್ಧ ನಡವಳಿಕೆಯಿಂದ ಹೆಚ್ಚಿನ ಅನಾಹುತ ಆಗುವ ಸಂಭವವಿದೆ. ಈ ಕಾರಣಕ್ಕಾಗಿ ಇದಕ್ಕೆ ಹೆಚ್ಚು ಗಮನಕೊಡಬೇಕು. ನಾವು ಎಷ್ಟೋವೇಳೆ ಭ್ರಷ್ಟಾಚಾರದ ವಿಷಯವನ್ನು ಮಾತನಾಡುತ್ತೇವೆ ಆರೆ ಸಾಧಾರಣವಾಗಿ ನಮಗೆ ತಿಳಿದೋ ತಿಳಿಯದೆಯೋ ಇದನ್ನು ತಡೆಗಟ್ಟುವ ಪ್ರಯತ್ನದಲ್ಲಿ ನಮಗೆ ಸೋಲಾಗಿದೆ. ನಾವು ನಮ್ಮ ದೇಶವನ್ನು ರಕ್ಷಣೆ ಮಾಡುವುದಕ್ಕಾಗಿ ದೇಶದಲ್ಲಿ ಭ್ರಷ್ಟಾಚಾರವನ್ನು ನಿವಾರಿಸಲು ಒಂದು ಸರಿಯಾದ ವ್ಯವಸ್ಥೆ ಮಾಡುವುದು ಅಗತ್ಯ. ಈ ದೃಷ್ಟಿಯಿಂದ ಪ್ರಯತ್ನ ಮಾಡಿದರೆ ಇನ್ನು ಕೆಲ ದಿವಸಗಳಲ್ಲಿ ಯಾವುದೇ ಪಕ್ಷ ಅಥವಾ ವ್ಯಕ್ತಿ ಎಂಬ ಭೇದವಿಲ್ಲದೆ ರಾಜಕೀಯದಲ್ಲಿ ಭ್ರಷ್ಟಾಚಾರಕ್ಕೆ ತುತ್ತಾಗಲು ಅವಕಾಶವಿಲ್ಲವಾಗುವುದು.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ (ಸಿರಾ):** ಮಾನ್ಯ ಸದಸ್ಯರು ನಾವು ಎನ್ನುತ್ತಾರೆ ಈ ಸಭೆ ಸದಸ್ಯರೆಲ್ಲರಿಗೂ ಅನ್ವಯಿಸಿ ಹಾಗೆ ಹೇಳುತ್ತಾರೋ ಅಥವಾ ಬರಿಯ ಕಾಂಗ್ರೆಸ್‌ನವರಿಗೆ ಅದು ಅನ್ವಯಿಸುತ್ತದೆಯೋ ಗೊತ್ತಿಲ್ಲ. ನಾನಂತೂ ಆ ಗುಂಪಿಗೆ ಸೇರಿಲ್ಲ. ಈ ಸಭೆಯ ಸದಸ್ಯರಲ್ಲಿ ನಾನೂ ಸೇರಿದ್ದೇನೆಂದು ಅಧ್ಯಕ್ಷರು ಹೇಳಿದರು. ನಾನು ಎನ್ನುವ ಪದದ ವ್ಯಾಜ್ಯ ಬಹಳವಾಗಿದೆ. ನಾವು ಎಂದರೆ ಅಧಿಕಾರದಲ್ಲಿರುವವರಲ್ಲದೆ ಈ ಸಭೆಯ ಸದಸ್ಯರು ಎಂದಾದರೆ ಆವರಲ್ಲಿ ಅಧ್ಯಕ್ಷರೂ ಸೇರುತ್ತಾರೆ. ಆದುದರಿಂದ ಈಗ ಮಾತಾಡುತ್ತಿರುವ ಸದಸ್ಯರು ಸ್ವಲ್ಪ ಎಚ್ಚರಿಕೆಯಿಂದ ಮಾತನಾಡಬೇಕು-ಇಂಥವರಿಗೆ ಅನ್ವಯಿಸುತ್ತದೆ ಎಂದು ಹೇಳಬೇಕು.

**ಶ್ರೀ ಎ.ಜೆ. ದೊಡ್ಡಮೇಟಿ:** ಇಂಥವರಿಗೇ ಅನ್ವಯಿಸುತ್ತಿದೆ ಎಂದು ಹೇಳುವುದು ಶಿಷ್ಟಾಚಾರವಲ್ಲ. ನನ್ನ ಮನಸ್ಸಿನಲ್ಲಿ ಯಾವುದೇ ವ್ಯಕ್ತಿಯಿಲ್ಲ. ಸಮಾಜದಲ್ಲಿ ಭ್ರಷ್ಟಾಚಾರ ಬಹಳವಾಗಿದೆ. ಇದರಲ್ಲಿ ಕಾಂಗ್ರೆಸ್‌ನವರಿರಬಹುದು. ಅಧಿಕಾರಿಗಳಿರಬಹುದು. ಇತರರೂ ಇರಬಹುದು. ಸರಳ ಸ್ವಭಾವದ ಪ್ರಾಮಾಣಿಕರು ಮೂಲೆಗುಂಪಾಗುವ ಸಂಭವವಿದೆ ಹಿಂದೆ ಆದಿಕರ್ಣಾಟರು ಮತ್ತು ಆದಿದ್ರಾವಿಡರನ್ನು ನಮ್ಮ ಸಮಾಜದಲ್ಲಿ ಕೆಲವರು ದೂರವಿಟ್ಟದ್ದರು ಹಿಂದೆ ಬೀಳಿಸಿದರು. ಆ ರೀತಿ ಸರಳ ಸ್ವಭಾವದ ಪ್ರಾಮಾಣಿಕರು ಹೀನ ಸ್ಥಿತಿಗೆ ಬರುವ ಸಂಭವವಿದೆ. ಆದುರಿಂದ ಈಗಲೇ ಇದನ್ನು ತಪ್ಪಿಸಲು ತಕ್ಕ ಪ್ರಚಾರ ಕೆಲಸ ಮಾಡಬೇಕು. ಎಚ್ಚೆತ್ತು ಕೆಲಸ ಮಾಡಬೇಕು. ಬೇರೆ ಬೇರೆ ಪಕ್ಷಗಳಲ್ಲಿರುವ ಇಂಥ ಭ್ರಷ್ಟಾಚಾರೀ ಜನರು ಸಂಘಟನೆಗೊಂಡು ಪ್ರಾಮಾಣಿಕರನ್ನು ಎದುರಿಸುವ ಸಂಭವವಿದೆ. ಆದ ಕಾರಣ ದೂರ ದೃಷ್ಟಿಯಿಂದ ಇದನ್ನು ವಿಚಾರ ಮಾಡಿ ಈ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಕೂಡಲೇ ಕೈಕೊಳ್ಳಬೇಕೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಬೇಕಾಗಿತ್ತು.

ಬೇರೆ ವಿಷಯಗಳನ್ನು ಹೇಳಬೇಕಾದರೆ, ಸಹಕಾರದ ಬೆಳವಣಿಗೆಯ ಬಗ್ಗೆ ನಮ್ಮ ರಾಜ್ಯಪಾಲರು ಹೇಳಿದ್ದಾರೆ. ಮಂತ್ರಿಗಳು ಬೇರೆ ಬೇರೆ ಕಡೆ ಈ ಬಗ್ಗೆ ಹೇಳಿದ್ದಾರೆ. ಸಹಕಾರಿ ಚಳುವಳಿಯಲ್ಲಿ ಸಂಪೂರ್ಣವಾಗಿ ಸರಕಾರಿ ನಿಯಂತ್ರಣವನ್ನು ತಪ್ಪಿಸಿ ಇದು ಪ್ರತ್ಯೇಕವಾಗಿರುವಂತೆ ಮಾಡಬೇಕೆಂದು ಹೇಳಿದ್ದಾರೆ ಆದರೆ ಸರಕಾರಿ ಶಾಖೆ ಅಥವಾ ಆಡಳಿತದಲ್ಲಿ ಈಗಾಗಲೇ ಏನು ನಡೆದಿದೆ ಎನ್ನುವುದನ್ನು ಅವರು ವಿಚಾರ ಮಾಡಬೇಕು. ಇದುವರೆಗೆ ಸಹಕಾರ ಕ್ಷೇತ್ರದಲ್ಲಿ ಸರಕಾರದ ಹಾಗೂ ಶಾಸನಭೆಗಳ ನಿಯಂತ್ರಣವಿದ್ದರೂ ಅಲ್ಲಿ ಅನೇಕ ಅನ್ಯಾಯಗಳು ನಡೆಯುತ್ತವೆಂದು ಹೇಳುತ್ತಾರೆ. ಹೀಗಿರುವಾಗ ಸಹಕಾರ ಕ್ಷೇತ್ರದಲ್ಲಿ ಯಾವ ವಿಧವಾದ ಸಹಕಾರಿ ನಿಯಂತ್ರವಿಲ್ಲವಾದರೆ ಅದು ಯಾವ ಗತಿ ಮುಟ್ಟೀತು ಎಂಬುದನ್ನು ಯೋಚನೆ ಮಾಡಬೇಕು. ಏನೋ ಭಾಷಾವೇಶದಲ್ಲಿ ತಾತ್ವಿಕವಾದದ ಮೇಲೆ ಈ ಕ್ಷೇತ್ರವನ್ನು ಪ್ರತ್ಯೇಕಪಡಿಸುವುದು ಸರಿಯಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ನೀರಾವರಿ ಬಾವಿಗಳ ಬಗ್ಗೆ ಸರಕಾರದವರು ಅನೇಕ ಉಪಾಯಗಳನ್ನು ಕೈಗೊಂಡಿದ್ದಾರೆ. 250 ಲಕ್ಷ ರೂಪಾಯಿಗಳಲ್ಲಿ 40 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲಾಗಿದೆಯೆಂದು ಹೇಳಿದ್ದಾರೆ. ಈ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ ಈಗ ಎರಡುವರೆ ಅಥವಾ ಮೂರು ಸಾವಿರ ರೂಪಾಯಿಗಳನ್ನು ಒಂದೊಂದು ಬಾವಿಗೆ ಸರಕಾರದವರು ಸಾಲ ಕೊಡುತ್ತಿದ್ದಾರೆ. ಇದಕ್ಕೆ ಬಡ್ಡಿ ಹಾಕಿ ಹತ್ತು ಕಂತುಗಳಲ್ಲಿ ವಸೂಲು ಮಾಡುತ್ತಿದ್ದಾರೆ. ಇದರಲ್ಲಿ ಅನೇಕ ಲೋಪದೋಷಗಳಿವೆ. ಈ ಬಾವಿಗಳಲ್ಲಿ ಎಷ್ಟು ಪೂರ್ತಿಯಾಗಿದೆ, ಎಷ್ಟು ಕೆಟ್ಟು ಹೋಗಿವೆ ಎಂದು ವಿಚಾರ ಮಾಡಿದರೆ ಶೇಕಡ 25 ರಷ್ಟಾದರೂ ನಿರುಪಯೋಗವಾಗಿವೆ ಎನ್ನುವುದಕ್ಕೆ ಏನೂ ಅಡ್ಡಿವಿಲ್ಲ. ಸರಕಾರ ಒಂದು ಕ್ರಮನ್ನನುಸರಿಸಬೇಕು. ಸರಕಾರ ಈ ಹಣವನ್ನು ಸಾಲವೆಂದು ಕೊಡಬಾರದು. ದೊಡ್ಡ ದೊಡ್ಡ ನೀರಾವರಿ ಜಲಾಶಯಗಳನ್ನು ಕಟ್ಟಿದಾಗ ಹೇಗೆ ಬೆಟರ್‌ಮೆಂಟ್ ಲೆವಿ ಎಂದು ಹಾಕುತ್ತಾರೋ ಹಾಗೆ ಹಾಕಬೇಕು. ಐದಾರು ಎಕರೆ ತೋಟ ಮಾಡುವುದಕ್ಕೆ ಒಂದು ಬಾವಿಗೆ ಧನ ಸಹಾಯ ಮಾಡುತ್ತೀರಿ. ದೊಡ್ಡ ನೀರಾವರಿಗೆ ಬೆಟರ್‌ಮೆಂಟ್ ಲೆವಿ ಹೇಗೆ ಹಾಕುತ್ತಾರೆ ಹಾಗೆ ಆರು ಎಕರೆ ತರಿ ಅಥವಾ ತೋಟ ಮಾಡಿದರೆ ಒಂದು ಎಕರೆಗೆ 500 ರೂಪಾಯಿಯಂತೆ ಬೆಟರ್‌ಮೆಂಟ್ ಲೆವಿ ಹಾಕಿ ಅದನ್ನು 25 ಕಂತುಗಳಲ್ಲಿ ವಸೂಲು ಮಾಡುವ ಮಾರ್ಗವನ್ನು ಏಕೆ ಸಣ್ಣ ನೀರಾವರಿಗೆ ಅನುಸರಿಸಬಾರದೆಂಬುದನ್ನು ಯೋಚನೆ ಮಾಡಬೇಕು ಇದರಿಂದ ಬಡ್ಡಿ ಉಳಿತಾಯವಾಗುವುದಲ್ಲದೆ ಹಣದ ಸದುಪಯೋಗವಾಗುತ್ತದೆ. ಯಾರು ಮಾಡಿದ್ದಾರೆ ಯಾರು ಮಾಡಿಲ್ಲ ಎನ್ನುವುದನ್ನು ತನಿಖೆ ಮಾಡುವುದಕ್ಕೂ ಅವಕಾಶವಾಗುತ್ತದೆ ಈ ದೃಷ್ಟಿಯಿಂದ ಸರಕಾರ ಈ ಸೂಚನೆಯನ್ನು ನಿಜವಾಗಿಯೂ ಆಲೋಚನೆ ಮಾಡಬೇಕಾಗಿದೆ. ಪಂಪ್‌ಸೆಟ್ಟುಗಳನ್ನು ಹಂಚುವ ವಿಚಾರದಲ್ಲಿ ಸಾಮಾನ್ಯವಾಗಿ ಉದಾರವಾದ ಧೋರಣೆಯನ್ನು

ಅನುಸರಿಸುತ್ತಿದ್ದಾರೆ. ಆದರೆ ಪಂಪ್‌ಸೆಟ್‌ಗಳನ್ನು ನಾವೇ ಕೊಡುತ್ತೇವೆ ಬೇಕಾದವರು ತೆಗೆದುಕೊಳ್ಳಬಹುದು ಎಂದು ಅಧಿಕಾರ ವರ್ಗದ ಮೂಲಕ ಡಂಗುರ ಸಾರಿದರು ಎಷ್ಟನ್ನು ಹಂಚಿದ್ದಾರೆಂದು ನೋಡಬೇಕು. ಹಂಚಿರುವುದು ಏನೂ ಸಾಲದು, ಮತ್ತು ವಿಳಂಬ ಬಹಳವಾಗಿದೆ. ಇದಕ್ಕೆ ಕಾರಣವೇನೆಂದು ಶೋಧನೆ ಮಾಡಬೇಕು ಮತ್ತು ವಿಳಂಬವಿಲ್ಲದಂತೆ ವ್ಯವಸ್ಥೆ ಮಾಡಬೇಕು. ಪಂಪುಸೆಟ್ಟುಗಳು ಬೇಗ ರೈತರ ಕೈಸೇರುವಂತೆ ಮಾಡಬೇಕು.

ಭೂ ಸುಧಾರಣೆಯ ಕಾಯಿದೆಯ ವಿಚಾರದಲ್ಲಿ ರಾಜ್ಯಪಾಲರು ಹೇಳಿದ್ದಾರೆ. ಕೇಂದ್ರ ಸರಕಾರಲ್ಲಿ ಇದಕ್ಕಿರುವ ಕೆಲವು ಅಡ್ಡಿ ಆತಂಕಗಳನ್ನು ದೂರ ಮಾಡುವ ಪ್ರಶ್ನೆ ಇದೆ, ಬೇಗ ಕಾರ್ಯಗತ ಮಾಡುತ್ತೇವೆಂದು ಹೇಳಿದ್ದಾರೆ. ಬೇಗ ಎನ್ನುವುದು ಯಾರ ಕೈಗೂ ಸಿಕ್ಕದೆ ಇರುವ ಸತ್ಯವಾಗಿದೆ. ಬೇಗ ಎನ್ನುವ ಪದ ಸರಕಾರಕ್ಕೆ ಒಂದು ಶಾಪ ಎಂದು ಕಾಣುತ್ತದೆ. ಈ ಬಗ್ಗೆ ಒಂದು ರೀತಿಯಲ್ಲಿ ಜನರಲ್ಲಿ ಸಂಶಯ ಮೂಡಿರುವುದು ನಿಜ. ಇದನ್ನು ರಾಜಕೀಯ ಕಾರಣಗಳಿಂದ ಉತ್ಪ್ರೇಕ್ಷೆ ಮಾಡುವುದು ಬೇಡ. ವಿಚಾರ ಮಾಡಿ ನೋಡಿದರೆ ಭೂಸುಧಾರಣೆ ಜಾರಿಗೆ ಬರುತ್ತದೆಯೇ ಇಲ್ಲವೆ ಬಂದರೂ ಯಾವಾಗ ಬರುತ್ತದೆ ಎಂಬ ಸಂಶಯ ಜನತೆಯಲ್ಲಿ ಮೂಡಿದೆ. ಗೇಣಿದಾರರ ರಕ್ಷಣೆ ಕಾನೂನಿಗೆ ವರ್ಷ ವರ್ಷಕ್ಕೆ ಜೀವದಾನ ಕೊಡುತ್ತಿರುವುದಾಗಿದೆ. ಇಂತಹ ಜೀವದಾನ ಕೊಡುವ ಕಾನೂನನ್ನು ಮತ್ತೊಂದು ಸಾರಿ ತರುವುದಿಲ್ಲ. ಭೂಸುಧಾರಣೆಯನ್ನು ಜಾರಿ ತರುತ್ತೇವೆಂಬ ಅಶ್ವಾಸನೆಯನ್ನು ಜನರಿಗೆ ಕೊಡಬೇಕು.

ಕಂದಾಯ ಶಾಖೆಯಲ್ಲಿ ಇನಾಂ ಸೆಕ್ಷನ್ ಎಂದು ಇದೆ. ಅಲ್ಲಿ ವಿಲಕ್ಷಣವಾದ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಸೆಕ್ರೆಟರಿಯಟ್‌ನಲ್ಲಿ ಈ ಇಲಾಖೆಯ ಸಂಘಟನೆ ಮಾಡಿ ಬಹಳ ಬುದ್ಧಿವಂತಿಕೆಯಿಂದ ಕೆಲಸ ನಡೆಯಬೇಕಾಗಿದೆ. ನಿಷ್ಠೆಯಿಂದ ಜಾಗರೂಕತೆಯಿಂದ ಸತತ ಪರಿಶ್ರಮದಿಂದ ಕೆಲಸ ಮಾಡತಕ್ಕಂಥ ಪಿನ್‌ಸಿಆರ್ ಅಧಿಕಾರಿಗಳು, ಸೆಕ್ರೆಟರಿ, ಅಂಡರ್ ಸೆಕ್ರೆಟರಿಗಳು ಇರಬೇಕು ಎಂದು ಹೇಳಬೇಕಾಗಿದೆ. ಇನಾಮ ಸೆಕ್ಷನ್ನಿನಲ್ಲಿ ಇನಾಮ ಗ್ರಾಮಗಳ ಬಗ್ಗೆ ಕ್ರಮ ತಂದ ಕೊಳ್ಳುವ ವಿಚಾರದಲ್ಲಿ ಅನೇಕ ಪ್ರಶ್ನೆಗಳು ಸರಕಾರದ ಮುಂದೆ ಬಂದಿವೆ ಆದರೆ ಯಾವುದೂ ಈವರೆಗೆ ಪರಿಹಾರವಾಗಿಲ್ಲ. ಉತ್ತರ ಕರ್ನಾಟಕದಲ್ಲಿರುವ ದೇವಸ್ಥಾನಗಳ ಇನಾಮ ಭೂಮಿಗಳ ಪ್ರಶ್ನೆ ಸರಕಾರದ ಮುಂದೆ ಬಂದಿದೆ. ಆದರೂ ಈ ಸಂಬಂಧದಲ್ಲಿ ಒಂದು ಮಸೂದೆಯನ್ನು ಸಭೆಯ ಮುಂದೆ ಈವರೆಗೆ ಮಂಡಿಸಿಲ್ಲ. ಯಾವುದೋ ಒಂದು ವೆಸ್ಟಡ್ ಇಂಟೆಸ್ಟ್ ಮೂಲಕ ಇವೆಲ್ಲ ವಿಳಂಬಗೊಳ್ಳುತ್ತಿವೆ ಎಂದು ಕಾಣುತ್ತದೆ. ಆದುದರಿಂದ ಇನಾಂ ಸೆಕ್ಷನಿನಲ್ಲಿ ವಿಶೇಷ ಕಾಳಜಿಯಿಂದ ಅತ್ಯಂತ ಅಂತ:ಕರಣಪೂರ್ವಕವಾಗಿ ಕೆಲಸ ಮಾಡತಕ್ಕಂಥ ಜನರನ್ನು ನೇಮಿಸಬೇಕೆಂದು ಈ ಸಮಯದಲ್ಲಿ ಹೇಳಲು ಬಯಸುತ್ತೇನೆ.

ಇನ್ನು ಕೃಷ್ಣಾ ಗೋದಾವರಿ ನದಿ ನೀರು ಹಂಚಿಕೆಯ ಬಗ್ಗೆ ಪ್ರಸ್ತಾಪ ಮಾಡಿರುವುದಕ್ಕಾಗಿ ರಾಜ್ಯಪಾಲರವರನ್ನು ಅಭಿನಂದಿಸುತ್ತೇನೆ, ಕಾರವಾರ ರೈಲು ಮಾರ್ಗ ವಿಚಾರವಾಗಿ ಹೇಳುವಾಗ್ಗೆ ಇನ್ನೂ ಕೆಲವು ರೈಲುಮಾರ್ಗ ಪ್ರಸ್ತಾಪ ಮಾಡುತ್ತಾರೆಂದು ನಿರೀಕ್ಷಿಲಾಗಿತ್ತು. ಕಾರವಾರ-ಹುಬ್ಬಳ್ಳಿ, ಗದಗ್-ರಾಯಚೂರು ರೈಲು ಮಾರ್ಗ ತೆಗೆದುಕೊಳ್ಳುವ ಬಗ್ಗೆ ಯಾವ ಸಲಹೆ ಇಲ್ಲ. ಈ ವಿಚಾರದಲ್ಲಿ ಈ ಶಾಸನ ಸಭೆಯಲ್ಲಿ ಒಂದು ನಿರ್ಣಯ ಮಂಜೂರು ಆಗಿದೆ. ಈ ಕೆಲಸ ಕೈಕೊಳ್ಳಲು ಕೇಂದ್ರ ಸರಕಾರದ ಮೇಲೆ ನಮ್ಮ ರಾಜ್ಯ ಸರಕಾರ ಒತ್ತಾಯ ಮಾಡಿದ್ದಾರೆಯೇ? ಈ ವಿಚಾರ ಪ್ರಸ್ತಾಪ ಮಾಡಿ ಸರಕಾರದ ಅಭಿಪ್ರಾಯ ಹೇಳಿದ್ದರೆ ಚೆನ್ನಾಗಿತ್ತು. ಇನ್ನೂ ಅನೇಕ ಮಾತುಗಳನ್ನು ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ರಸ್ತೆ ಸಾರಿಗೆ ವಿಷಯ ಪ್ರಸ್ತಾಪ ಮಾಡಿದ್ದರೂ ಈ ಬಗ್ಗೆ ಸರಕಾರ ನಿಶ್ಚಿತ ಧೋರಣೆ ಏನು ಎಂಬುದನ್ನು ಸ್ಪಷ್ಟವಾಗಿ ಹೇಳಿರುವುದಿಲ್ಲ. ಈ ರೀತಿ ಇರುವುದರಿಂದ ಮೂಲಭೂತ ಧೋರಣೆಗೆ ಎಲ್ಲ ಕೊಡಲಿ ಪೆಟ್ಟು ಬೀಳುತ್ತದೆಯೋ ಎಂಬ ಭಾವನೆ ಬರುತ್ತದೆ. ಆದುದರಿಂದ ಸರಕಾರದ ನಿಶ್ಚಿತ ನಿಲುಮೆ ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಬರೀ ಬಸ್ ರಾಷ್ಟ್ರೀಕರಣ ಮಾಡುವುದರಿಂದ ಸಮಾಜವಾದೀ ಸಮಾಜ ರಚನೆಯ ಕಾರ್ಯ ಪೂರ್ತಿಯಾಗುವುದಿಲ್ಲ. ಏಕೆಂದರೆ ಸಮಾಜದಲ್ಲಿ ಒಬ್ಬನಿಗೆ ತಿಂಗಳಿಗೆ 30 ರೂಪಾಯಿ ಸಂಪಾದನೆ ಇದ್ದು ಇನ್ನೊಬ್ಬನಿಗೆ 3000 ರೂ. ಸಂಪಾದನೆ ಇರುವುದಾದರೆ ಯಾವ ರಾಷ್ಟ್ರೀಕರಣದಿಂದಲೂ ಧ್ಯೇಯ ಸಾಧನೆಯಾಗಲಾರದು ಸಂಬಳದಲ್ಲಿಯು ಅಂತರ ಹೆಚ್ಚಿಗೆ ಇರಕೂಡದು. ಈ ಮೂಲಭೂತ ತತ್ವವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

ಇನ್ನು ಶಿಕ್ಷಣ ಇದು ಸಹ ರಾಷ್ಟ್ರೀಕರಣವಾಗಬೇಕು. ಶ್ರೀಮಂತರ ಮೇಲೆ ಕರ ಹಾಕಿ ಹಣ ಪಡೆದು ಶಿಕ್ಷಣ ಸೌಲಭ್ಯ ಎಲ್ಲರಿಗೂ ದೊರೆಯುವ ಹಾಗೆ ಮಾಡಬೇಕಾದುದು ಅತ್ಯಗತ್ಯ. ಎಲ್ಲ ಮಟ್ಟದ ಶಿಕ್ಷಣ ಉಚಿತವಾಗಿ ಎಲ್ಲರಿಗೆ ದೊರೆಯುವಂತಾಗಬೇಕು.

ರಾಜ್ಯಪಾಲರವರ ಭಾಷಣದಲ್ಲಿ ಇನ್ನೂ ಕೆಲವು ವಿಷಯಗಳನ್ನು ಪ್ರಸ್ತಾಪಿಸಿ ಹೇಳಬೇಕಾಗಿತ್ತು. ಭ್ರಷ್ಟಾಚಾರದ ವಿಚಾರದಲ್ಲಿ ಸರಕಾರದವರು ಅನಿರ್ದಿಷ್ಟ ಧೋರಣೆಯನ್ನು ಬಿಟ್ಟುಕೊಡಬೇಕು. ಧೈರ್ಯದಿಂದ ಇದನ್ನು ಕಾರ್ಯಗತ ಮಾಡಲು ಪ್ರಯತ್ನ ಮಾಡಬೇಕಾದುದು ಅಗತ್ಯ.

ನವ ಮೈಸೂರು ರಾಜ್ಯ ರಚನೆಯಾಗಿ ಏಳು ವರ್ಷಗಳಾದವು. ರಾಜ್ಯದ ಹೆಸರು ಕರ್ನಾಟಕ ಎಂದು ಆಗಬೇಕಾಗಿದೆ. ರಾಜ್ಯದ ಹೆಸರು ಕರ್ನಾಟಕ ಎಂದು ಆಗಬೇಕಾಗಿದೆ. ರಾಜ್ಯದ ಹೆಸರು ಕರ್ನಾಟಕ ಎಂದು ಮಾಡುವ ಬಗ್ಗೆ ನಿರ್ಧಾರವಾಗಿ

ಹೇಳಬೇಕಾಗಿತ್ತು. ಏಕೆಂದರೆ ನಮ್ಮ ರಾಜ್ಯಪಾಲರವರು ನಮ್ಮ "ಕರ್ನಾಟಕ ರತ್ನ ಸಿಂಹಾಸನಾಧೀಶ್ವರರಾಗಿದ್ದಾರೆ." ಅವರು ಏನು ಆಲೋಚನೆ ಮಾಡಿದ್ದಾರೆ ಎಂಬುದನ್ನು ಭಾಷಣದಲ್ಲಿ ಹೇಳಿದ್ದರೆ ಇನ್ನೂ ಹೆಚ್ಚು ಸಂತೋಷವಾಗುತ್ತಿತ್ತು.

ಇದಲ್ಲದೇ ಪಾನನಿರೋಧದ ಬಗ್ಗೆ ಸರಕಾರದ ಸ್ಪಷ್ಟಧೋರಣೆ ಏನು ಎಂಬುದನ್ನು ಹೇಳಬೇಕಾಗಿತ್ತು. ಈ ವಿಚಾರದಲ್ಲಿ ಸಂದೇಹ ಇರಕೂಡದು. ಒಂದು ಸಮಿತಿ ರಚನೆಯಾಗಿದೆ ಆದರೂ ಸರಕಾರದ ನಿಶ್ಚಿತ ಧೋರಣೆಯನ್ನು ಹೇಳಬೇಕಾಗಿತ್ತು. ಸರಕಾರದ ಸ್ಪಷ್ಟವಾದ ನೀತಿ ಏನು ಎಂಬುದನ್ನು ಹೇಳಿದ್ದರೆ ಚೆನ್ನಾಗಿತ್ತು. ಭ್ರಷ್ಟಾಚಾರ ನಿರ್ಮೂಲನ ಬಗ್ಗೆ ತೀವ್ರ ಕ್ರಮ ಕೈಕೊಳ್ಳಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಂಡು ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

## ಮಲಪ್ರಭಾ ನೀರಾವರಿ ಯೋಜನೆ

**ಶ್ರೀ ಎ.ಜಿ. ದೊಡ್ಡಮೇಟಿ (ರೋಣ):** ಸ್ವಾಮಿ, ಈಗ ನಮ್ಮ ಮುಂದೆ ಇರುವ ಬೃಹತ್ ನೀರಾವರಿ ಯೋಜನೆ, ಸಾಮಾನ್ಯ ಆಡಳಿತ, ಮಧ್ಯಮ ತರಗತಿ ನೀರಾವರಿ ಮುಂತಾದ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸಮರ್ಥಿಸುತ್ತಾ ಸರಕಾರಕ್ಕೆ ಕೆಲವು ಸಲಹೆಗಳನ್ನು ಕೊಡುತ್ತೇನೆ ಬೃಹತ್ ನೀರಾವರಿ ಯೋಜನೆಯಲ್ಲಿ ಮಲಪ್ರಭಾ ಯೋಜನೆ ಕೆಲಸ ನಡೆದಿದೆ. ಮುಂಬಯಿ ಸರಕಾರದಲ್ಲಿದ್ದಾಗ್ಗೆ ಆ ಬಗ್ಗೆ ಅನೇಕ ರೀತಿ ಒತ್ತಾಯ ತರಲಾಯಿತು. ಈಗ ಕೆಲವು ಕಟ್ಟಡ ಕಾಲುವೆಗಳ ರಚನೆ ಕೆಲಸ ಆಗುತ್ತಾ ಇದೆ. ಈ ಯೋಜನೆಯ ನೀರಿನ ಸಹಾಯ ಮುಖ್ಯವಾಗಿ ಬರಗಾಲ ಪೀಡಿತ ಪ್ರದೇಶಕ್ಕೆ ಉಪಯೋಗವಾಗುತ್ತದೆ. ನವಲಗುಂದ, ಬಾದಾಮಿ, ರೋಣ ತಾಲ್ಲೂಕುಗಳಿಗೆ ನೀರು ಉಪಯೋಗವಾಗುತ್ತದೆ. ಈ ದೃಷ್ಟಿಯಿಂದ ಬರಗಾಲ ಪೀಡಿತ ಪ್ರದೇಶದ ಜನರ ಕೂಗು ನಿಲ್ಲುವಂತೆ ನೀರಾವರಿ ಯೋಜನೆ ಮಾಡಬೇಕು. ಯಾವ ದಿವಸ ಈ ಮಲಪ್ರಭಾ ಯೋಜನೆ ಕೆಲಸ ಪೂರ್ತಿಯಾಗುವುದೋ ಅಂದು ಅವರ ತೊಂದರೆ ಮುಕ್ತಾಯವಾಗುತ್ತದೆ. ಈ ಬಗ್ಗೆ ಸರಕಾರ ಒಂದು ಆಶ್ವಾಸನೆ, ಭರವಸೆಕೊಡಬೇಕು. ಕೃಷ್ಣಾಮೇಲ್ದಂಡೆ ಯೋಜನೆ ಬಗ್ಗೆ ಅನೇಕ ವಿವಾದ ನಡೆದಿದೆ. ಸರಕಾರದ ನಿಲುವನ್ನು ಮುಖ್ಯ ಮಂತ್ರಿಗಳು ಒಂದು ಹೇಳಿಕೆ ಕೊಟ್ಟು ಅತ್ಯಂತ ಸ್ಪಷ್ಟಪಡಿಸಿದ್ದಾರೆ. ಆಲಮಟ್ಟಿ ಹಾಗೂ ನಾರಾಯಣಪುರ ಎರಡೂ ಸ್ಥಳಗಳಲ್ಲಿ ಒಮ್ಮೆಲೆ ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಕೆಲವು ಸಲ ಸರಕಾರ ಅಪೇಕ್ಷೆ ಮಾಡಿದ ರೀತಿಯಲ್ಲಿ ಅದನ್ನು ಸಾಧಿಸಲು ಶಕ್ತಿ ಇಲ್ಲದೇ ಹೋಗಬಹುದು. ಅಥವಾ ಮೇಲಿನ ಒತ್ತಾಯದಿಂದ ಕಾರ್ಯ ನಿರ್ವಹಿಸದೇ ಹೋಗುವ ಸಂಭವ ಇರುತ್ತದೆ. ಸರಕಾರ ಜನತೆಗೆ ಈಗಾಗಲೇ ಆಶ್ವಾಸನೆ ಕೊಟ್ಟಿದೆ. ಆದುದರಿಂದ ಕನಿಷ್ಟ ಪಕ್ಷ ಯಾರಿಗೂ ನ್ಯಾಯವಾಗದ ಹಾಗೆ ಎರಡೂ ಕಡೆ ಅಣೆಕಟ್ಟು ಕಟ್ಟುವುದಕ್ಕೆ ಪ್ರಾರಂಭ ಮಾಡುವ ಹಾಗೆ ದಕ್ಷತೆ ವಹಿಸಬೇಕೆಂದು ಹೇಳುತ್ತೇನೆ.

ಇನ್ನು ಕಾವೇರಿ ಯೋಜನೆ, ಹಾರಂಗಿ ಹಾಗೂ ಕಂಬದ ಕಡೆ ಯೋನೆ ಬಗ್ಗೆ ಆಂದೋಲನ ನಡೆದಿದೆ. ಈ ಯೋಜನೆ ಪುನ: ಪರಿಶೀಲನೆ ಮಾಡಿ ಯೋಜನೆ ಕೈಕೊಳ್ಳಬೇಕು ಮತ್ತು ಕೆಲಸ ಪ್ರಾರಂಭಿಸುವುದು ಒಳ್ಳೆಯದು ಎಂದು ಹೇಳಲು ಅಪೇಕ್ಷಿಸುತ್ತೇನೆ.

ಆಡಳಿತ ವಿಚಾರದಲ್ಲಿ ಕೆಲವು ಮಾತು ಹೇಳಲು ಬಯಸುತ್ತೇನೆ. ಆಡಳಿತದಲ್ಲಿ ವಿಳಂಬವಾಗುತ್ತದೆ ಅಂದರೆ ರೆಡ್‌ಟೇಪಿಜಂ ಸಾಕಷ್ಟು ಇದೆ. ಇದನ್ನು ಯಾರೂ ಅಲ್ಲಗಳೆಯಲಾರರು ಕಾಗದ ಪತ್ರಗಳು ಬಹಳ ತಡವಾಗಿ ಮುಂದೆ ಸಾಗುತ್ತವೆ. ಈಗ ಅತ್ಯುತ್ತಮ ಚೀಫ್ ಸೆಕ್ರೆಟರಿಯವರು ದೊರೆತಿದ್ದಾರೆ. ಆದರೂ ಕೂಡ ಈ ರೀತಿ ತಡವಾಗುವುದು ಏಕೆ ಹಿಡಿತದಲ್ಲಿ ಬರುವುದಿಲ್ಲ? ರೆಡ್‌ಟೇಪಿಜಂ ನಿವಾರಣೆ ಮಾಡುವುದಕ್ಕೆ ಮುಖ್ಯಮಂತ್ರಿಗಳು ಎಲ್ಲ ಇಲಾಖೆಯ ಸೆಕ್ರೆಟರಿಗಳನ್ನು ಆರಿಸಿ ಆಲೋಚನೆ ಮಾಡಿ ಒಂದು ರಿಪೋರ್ಟ ತರಿಸುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಇದೇ ವಿಧಾನಸೌಧದ ಮೇಲಂತಸ್ತಿನಲ್ಲಿರುವ ನಾನಾ ಇಲಾಖೆಗಳಲ್ಲಿ ಎಷ್ಟೋ ಜನ ಕಾರಕೂನರು ಕೆಲಸವಿಲ್ಲದೆ ಸುಮ್ಮನೆ ಕುಳಿತಿರುತ್ತಾರೆ. ಕೆಲರು ಚಹಾ, ಕಾಫಿ, ಕುಡಿಯುವುದಕ್ಕೂ ಚುಟ್ಟಾ ಸೇದುವುದಕ್ಕೂ ಹೊರಗೆ ಹೋಗುತ್ತಾರೆ ಎಲ್ಲಿ ಹೋಗಿದ್ದಾರೆಂದು ಕೇಳಿದರೆ ಕಾಫಿ ಕುಡಿಯುವುದಕ್ಕೆ ಹೋಗಿದ್ದಾರೆಂದು ಹೇಳುತ್ತಾರೆ ಸರ್, ತಿಂಡಿ ತಿನ್ನುವುದಕ್ಕೆ ಹೊರಗೆ ಹೋಗಿದ್ದಾರೆ ಸರ್ ಎಂದು ಬರೀ ಸರ್ ಸೇರಿಸಿ ಮಾತನಾಡುತ್ತಾರೆ. ಸೆಕ್ರೆಟೇರಿಯೇಟ್‌ನಲ್ಲಿ ಕಾರಕೂನರು ಸೂಪರ್‌ವೈಜರ್ಸಗಳು ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ನೋಡಬೇಕು, ಕೆಲವು ಕಡೆ ಅವಶ್ಯಕತೆಗಿಂತ ಹೆಚ್ಚು ಜನ ಕೆಲಸ ಮಾಡಲು ಇದ್ದಾರೆ, ಕೆಲವು ಕಡೆ ಕೆಲಸ ಹೆಚ್ಚು ಇದ್ದರೂ ಕೆಲಸ ಮಾಡತಕ್ಕಂಥ ಕೈಗಳು ಕಡಿಮೆ ಇವೆ. ಇದನ್ನು ಸರಿಪಡಿಸಬೇಕಾದುದು ಅವಶ್ಯಕ ಎಂದು ನನಗೆ ಅನಿಸುತ್ತದೆ. ಆಡಳಿತಕ್ಕೆ ದುಡ್ಡು ಇಲ್ಲ, ಪಿ.ಡಬ್ಲ್ಯೂ.ಡಿ.ಗೆ. ಹೆಚ್ಚು ದುಡ್ಡು ಬೇಕಾಗಿದೆ. ಇವರನ್ನು ಸರಿಪಡಿಸಿದರೆವೆಷ್ಟೂ ದುಡ್ಡು ಸಿಗುತ್ತದೆ. ಇನ್ನೊಂದು ಮಾತು, ಅದು ಕ್ರಾಂತಿಕಾರಕವಾದರೂ ಆಲೋಚನೆ ಮಾಡಬೇಕು. ಆದರಿಂದ ದುಡ್ಡಿನ ಉಳಿತಾಯವಾಗಬಹುದು ಎಂದು ಹೇಳಲು ಅಪೇಕ್ಷೆ ಮಾಡುತ್ತೇನೆ. ನಮ್ಮ ಮಂತ್ರಿ ಮಂಡಲದವರು ದೊಡ್ಡ ದೊಡ್ಡ ಬಂಗಲೆಗಳಲ್ಲಿ ಇದ್ದಾರಲ್ಲಾ, ಇವುಗಳಿಗೆ ಸಂಬಂಧಿಸಿದಂತೆ ಇನ್ನೂ ಮೂರು ವರ್ಷಗಳೊಳಗೆ ಒಂದು ಯೋಜನೆ ಮಾಡಿ " ಲೆಜಿಸ್ಲೇಟರ್ಸ್ ಹೋಂ" ಹಾಗೆ ಮಿನಿಸ್ಟರ್ ಹೋಂ ಮಾಡಿ ಎಲ್ಲಾ ಮಿನಿಸ್ಟರುಗಳು ಒಂದೇ ಕಡೆ ಇರುವಂತೆ ಮಾಡಿ ಅವರನ್ನು ಚಿಕ್ಕ ಚಿಕ್ಕ ಬಂಗಲೆಗೆ ಹಾಕಿ ಅವರ ಮಧ್ಯದಲ್ಲಿ ಒಂದು ದೊಡ್ಡ ಬಂಗಲೆಯನ್ನು ಗೌಡನ ಚಾವಡಿ ಇದ್ದ ಹಾಗೆ ಮುಖ್ಯ ಮಂತ್ರಿಗಳಿಗೆ ಕಟ್ಟಿಸಿಬಿಡಿ ಅಲ್ಲಿ ಮಂತ್ರಿಮಂಡಳ ಕೂಡಲಿಕ್ಕೆ ಆಲೋಚನೆ ಮಾಡಲಿಕ್ಕೆ ಅವಕಾಶ ಮಾಡಿ. ಈಗ ಅವರುಗಳಿರುವ ಭಾರಿ ಬಂಗಲೆಗಳನ್ನುಮಾರಿ ಅಥವಾ ಇನ್ನು ಯಾವುದಕ್ಕಾದರೂ ಉಪಯೋಗ ಮಾಡಿ ಇದು ಒಳ್ಳೆದಾದೀತು. ಹೀಗೆ ಮಾಡಿದರೆ ರಾಜ್ಯಕ್ಕೆ ದುಡ್ಡು

ಉಳಿತಾಯವಾಗುವುದಲ್ಲದೆ, ಲೆಜಿಸ್ಲೇಟರುಗಳ ಮನಸ್ಸಿನಮೇಲೂ ಹತ್ತಿದ್ದೇವೆ ಎಂಬ ಭಾವನೆ ಬರುವುದು.

ದೂರ ನಿಂತು ನಮ್ಮ ಜನರಲ್ಲಿ ಪ್ರತ್ಯೇಕ ಭಾವನೆ ನೌಕರರ ಸೀನಿಯಾರಿಟಿ ಲಿಸ್ಟ್ ಆಗದೇ ಇರುವುರಿಂದ ಬೆಳೆಯುತ್ತಾ ಇದೆ. ಅವರು ನಮ್ಮಗಳ ಮನೆಗೆ ಹಿಂಸೆ ಮಾಡುತ್ತಾರೆ, ನಾನು ಅವರಿಗೆ ಕಟ್ಟುನಿಟ್ಟಾಗಿ ಹೇಳಿಬಿಡುತ್ತೇನೆ, ನನ್ನನ್ನು ಅವರ್‍ಯಾರು ಭೇಟಿ ಮಾಡಕೂಡದುದೆಂದು. ಕ್ಷಯ ರೋಗವಿದೆ ಭೇಟಿಯಾಗಲಿಕ್ಕೆ, ಅಪೇಕ್ಷೆ ಇಲ್ಲ, ಎಂದು ಸ್ವಲ್ಪ ಜನರು ಬೋರ್ಡು ಹಾಕಿದ ಹಾಗೆ ಹಾಕಬೇಕು. ಆದರೆ ಈ ಸೀನಿಯಾರಿಟಿ ಲಿಸ್ಟ್ ಒಮ್ಮೆ ಒಳ್ಳೆಯದೇ, ಕೆಟ್ಟದ್ದೇ ಕೊನೆಯ ನಿರ್ಣಯ ಮಾಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ತೆರಿಗೆ ಬಾಕಿ ವಸೂಲಿ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಈ ಸೇಲ್ಸ್ ಟ್ಯಾಕ್ಸ್ ಇನ್ ಕಂಟ್ಯಾಕ್ಸ್ ಅನೇಕ ದೊಡ್ಡವರು ಕೊಟ್ಟಿಲ್ಲ. ತೆರಿಗೆ ಬಾಕಿಯನ್ನು ಕಡ್ಡಾಯವಾಗಿ ವಸೂಲು ಮಾಡಿದೆ, ಕೋಟ್ಯಾಂತರ ರೂಪಾಯಿ ವಸೂಲಾಗುವ ಸಂಭವವಿದೆ.

ದೊಡ್ಡಮೇಟಿಯವರ ರಾಜ್ಯದ ಬಗ್ಗೆ ಕಳಕಳಿ

**ಅಧ್ಯಕ್ಷರು-**ಇವೊತ್ತು ಕಂದಾಯ ವಸೂಲಿ ಇಲಾಖೆ ಡಿಮ್ಯಾಂಡಿಲ್ಲ.

ಇರುವುದು.

**ಶ್ರೀ ಎ.ಜೆ. ದೊಡ್ಡಮೇಟಿ:** ಆಡಳಿತಕ್ಕೆ ದುಡ್ಡು ಸಿಗಲಿ ಅನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ ಇಷ್ಟು ತನಕ ಅದರ ಮೇಲೆ ಎಲ್ಲರೂ ಮಾತನಾಡಿದರು.

ಶ್ರೀ ಬಿ.ಡಿ. ಜತ್ತಿ: ನೀವು ಬುದ್ದಿವಂತರು ಮಾತನಾಡಬಾರದು

**ಅಧ್ಯಕ್ಷರು:** ತಾವು ಇಬ್ಬರೂ ಬುದ್ದಿವಂತರು ಎನ್ನುವುದನ್ನು ನಾನು ಒಪ್ಪುತ್ತೇನೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಕಂದಾಯ ಇಲಾಖೆಯಲ್ಲಿ ಲ್ಯಾಂಡ್ ರಿಫಾರ್ಮ್ಸ್ ಬೇಗಬರಬೇಕು. ಅಲ್ಲದೆ ಆ ಇಲಾಖೆಯಲ್ಲಿ ವರ್ಗಾವರ್ಗಿ ಅನಾವಶ್ಯಕವಾಗಿ ಆಗಬಾರದು ಕೆಲವೊಂದು ಪುಡಾರಿಗಳು ತಮ್ಮ ಮಾತನ್ನು ಡೆಪ್ಯೂಟಿ ಕಮೀಶನರು ಕೇಳದಿದ್ದರೆ ಆ ಡೆಪ್ಯೂಟಿ ಕಮಿಷನರು ಅಲ್ಲಿಂದ ವರ್ಗವಾಗಬೇಕು ಅನ್ನುತ್ತಾರೆ. ಮತ್ತೆ ಕೆಲವು ಕಡೆ ಅನ್ಯಾಯವಾಗಿ ಆಫೀಸರುಗಳ ಮೇಲೆ ಆರೋಪಿಸುತ್ತಾರೆ. ಕೆಲವು ಕಡೆ ಅನ್ಯಾಯವಾಗಿ ಉಳಿಸಲಿಕ್ಕೆ ಪ್ರಯತ್ನ ಮಾಡುತ್ತಾರೆ. ಒಂದು ಮಾತು ಸ್ಪಷ್ಟವಾಗಿ ಹೇಳುತ್ತೇನೆ. ಜಿಲ್ಲಾ ಕಲೆಕ್ಟರು (ಅಥವಾ ಡೆಪ್ಯೂಟಿ ಕಮಿಷನರು) ಹೇಗಿರಬೇಕೆಂದರೆ ಯಾರ ಮಾತನ್ನೂ ಕೇಳದೇ ಇರುವವರು, ನ್ಯಾಯವಾಗಿ ನಡೆಯುವವರು ಮತ್ತು ಜನರೊಂದಿಗೆ ಹೊಂದಿಕೊಂಡು ಹೋಗುವವರಾಗಿರಬೇಕು. ಈ ಎಲ್ಲಾ ಮೂರು ಗುಣಗಳುಳ್ಳವರು ಡೆಪ್ಯೂಟಿ ಕಮೀಷನರುಗಳಾಗಿ ಬರಬೇಕು. ಜಿಲ್ಲಾ ಕಲೆಕ್ಟರನ್ನು ನೇಮಿಸುವಾಗ, ಈ ರೀತಿ ಮುಖ್ಯಮಂತ್ರಿಗಳು ಖುದ್ದಾಗಿ ಪರಿಶೀಲನೆ ಮಾಡಿ,

ಮಾಡಬೇಕು ಇನ್ನು ಮುಂದೆ ಸರಕಾರ ಇದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂದು ಹೇಳಲು ಇಚ್ಛಿಪಡುತ್ತೇನೆ.

ಇನ್ನು ವಿದ್ಯುತ್ ಮಂಡಳಿಯ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರ ಹಿತದೃಷ್ಟಿಯಿಂದ ಹೆಚ್ಚಿನ ಬದಲಾವಣೆಗಳನ್ನು ಮಾಡಬೇಕು. ವಿದ್ಯುತ್ ಮಂಡಳಿ ಕೆಲಸದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಪಂಪು ಸೆಟುಗಳು, ತೋಟಪಟ್ಟಿಗಳ ದೃಷ್ಟಿಯಿಂದ ಸಾಕಷ್ಟು ಪ್ರಗತಿಯಾಗಿಲ್ಲ. ಮೊನ್ನೆ ಇದರ ಬಗ್ಗೆ ಒಂದು ಪ್ರಶ್ನೆಗೆ ಉತ್ತರ ಹೇಳುತ್ತಾ, ಧಾರವಾಡ ಜಿಲ್ಲೆಯೊಳಗೆ 200 ಅರ್ಜಿ ಬಂದರೂ, ಮೂರು ವರ್ಷವಾದರೂ, 30ಕ್ಕೆ ಸಹ ಸಹಾಯವಾಗಿಲ್ಲ, ಹಣ ಲ್ಯಾಪ್ಸ್ ಆಗಿಹೋಯಿತು ಎಂದು ಹೇಳಿದರು. ಇಕ್ಕೆ ಏನು ಕಾರಣವೇನೆಂದು ತಾವು ಚೌಕಾಶಿ ಮಾಡಿ ಉತ್ತರ ಹೇಳಬೇಕಾಗುತ್ತದೆ. ಈ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಹಳ್ಳಿಗರಿಗೆ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಬೇಕಾದಂತ ಬೇಡಿಕೆಯನ್ನು ಮಂಜೂರು ಮಾಡಲಿಕ್ಕೆ ಅವರ ಒಬ್ಬ ಪ್ರತಿನಿಧಿ ಇರುವುದನ್ನು ಪರಿಶೀಲನೆ ಮಾಡಬೇಕು; ಆದಾದರೆ ನಿಮ್ಮ ತಲೆ ಭಾರ ಕಡಿಮೆಯಾದೀತು ಎಂದು ಹೇಳಲಿಕ್ಕೆ ಅಪೇಕ್ಷಿಸುತ್ತೇನೆ.

ಇನ್ನು ಆಡಳಿತ ವೆಚ್ಚ ಕಡಿಮೆಯಾಗುವ ದೃಷ್ಟಿಯಿಂದ ಸಣ್ಣ ಪುಟ್ಟ ಮಾತುಗಳಿಗೆ ಸುಪ್ರೀಂ ಕೋರ್ಟಿಗೆ ಹೋಗುವುದನ್ನು ಸರಕಾರ ಸ್ವಲ್ಪ ಹೆಚ್ಚು ಜಾಗರೂಕತೆಯಿಂದ ಆಲೋಚನೆ ಮಾಡಬೇಕು. 20 ಸಾವಿರ ರೂಪಾಯಿ ಉಳಿಸಲಿಕ್ಕೆ ಹೋಗಿ 40 ಸಾವಿರ ರೂಪಾಯಿ ಖರ್ಚಾಗುತ್ತದೆ. 10 ಸಾವಿರ ರೂಪಾಯಿ ಉಳಿಸಲಿಕ್ಕೆ ಹೋಗಿ 20 ಸಾವಿರ ರೂಪಾಯಿ ಖರ್ಚು ಮಾಡುತ್ತೀರ, ಕೇವಲ ಒಂದು ಪ್ರತಿಷ್ಠೆಗಾಗಿ ಅಪೀಲು ಹೋಗಿ ಸಹಸ್ರಾರು ರೂಪಾಯಿ ಖರ್ಚು ಮಾಡು ಸಂಭವವಿರುತ್ತದೆ. ಉದಾಹರಣಾರ್ಥವಾಗಿ ಕೆಲವು ಲೆಕ್ಚರರುಗಳ ಪರ ಹೈಕೋರ್ಟಿನವರು ತೀರ್ಮಾನ ಕೊಟ್ಟಿದ್ದಾರೆ. ಆ ತೀರ್ಮಾನದ ವಿರುದ್ಧ ಸುಪ್ರೀಂ ಕೋರ್ಟಿಗೆ ನಮ್ಮ ಸರಕಾರ ಹೋಗಬೇಕೆಂದಿದೆ ಎಂದು ನಾನು ಕೇಳಿದೆ. ಲೆಕ್ಚರರುಗಳಿಗೆ ತಾವು ಪೇಗಾಗಿ ಕೊಡುವ ಖರ್ಚನ್ನು, ಸುಪ್ರೀಂ ಕೋರ್ಟಿಗೆ ಕೊಡುತ್ತೀರ, ಅದರಿಂದ ಪ್ರಯೋಜನವೆಷ್ಟು? ಈ ದೃಷ್ಟಿಯಿಂದ ಶಕ್ಯವಿದ್ದಷ್ಟು ಸುಪ್ರೀಂ ಕೋರ್ಟಿಗೆ ಹೋಗಬೇಡಿ ಅತ್ಯಂತ ಅವಶ್ಯವಿದ್ದರೆ ಹೋಗಬೇಕು.

ಇನ್ನು ಕೊನೆಯದು ಅತ್ಯಂತ ಮಹತ್ವದ್ದು, ಅದು ಏನೆಂದರೆ ನಮ್ಮ ದೇಶದಲ್ಲಿ ಅನೇಕ ರೀತಿಯಿಂದ ಪ್ರತ್ಯೇಕತಾ ಭಾವನೆಯನ್ನು ಕೆಲವರು ಬೆಳೆಸುತ್ತಾ ಇದ್ದಾರೆ. ಇದನ್ನು ನಿರ್ಮೂಲ ಮಾಡಲು ಮುಖ್ಯಮಂತ್ರಿಗಳಿಗೆ ಮಾತ್ರ ಸಾಧ್ಯ ಎಂದು ಹೇಳಲು ಅಪೇಕ್ಷೆ ಮಾಡುತ್ತೇನೆ. ಅವರು ಮನಸ್ಸು ಮಾಡಿ ಈ ಒಂದು ವಿಷಯದಲ್ಲಿ ಜನರ ಮನಸ್ಸಿನಲ್ಲಿರುವ ಸಂದೇಹ ಮಾಡುವ ಭಾವನೆಯನ್ನು ನಿವಾರಣೆ ಮಾಡುವ ಶಕ್ತಿ ಅವರಲ್ಲಿ ಮಾತ್ರ ಇದೆ. ಅವರ ವಿಷಯದಲ್ಲಿ ವಿರೋಧ ಪಕ್ಷದವರಾಗಲಿ, ಕಾಂಗ್ರೆಸ್ ಪಕ್ಷದವರಾಗಲಿ, ದೇಶದ ಸಾಮಾನ್ಯ ಜನರಲ್ಲಾಗಲಿ ಸಾಕಷ್ಟು ಗೌರವ, ಪ್ರೀತಿ, ಆದರ ಇದೆ. ತಮ್ಮ ಸಾಮರ್ಥ್ಯದ ಬಗ್ಗೆ ಜನರಿಗೆ ಪೂರ್ಣ ನಂಬಿಕೆ ಇದೆ. ತಾವು ಇದರ ಬಗ್ಗೆ ಹೆಚ್ಚು ವೇಳೆಯನ್ನು ತೆಗೆದುಕೊಂಡು

ಆಲೋಚನೆ ಮಾಡಬೇಕು. ಮತ್ತು ಈ ಪ್ರತ್ಯೇಕತಾ ಮನೋಭಾವನೆ ಇಲ್ಲದಂತೆ ಪ್ರಯತ್ನ ಮಾಡಬೇಕು ಎಂದು ಅಪೇಕ್ಷೆ ಮಾಡುತ್ತೇನೆ. ಜನರಲ್ಲಿದ್ದಂಥ ಸಂದೇಹಗಳು ಪುನಃ ಉಚ್ಚಾರ ಮಾಡಲಿಕ್ಕೂ ಮನಸ್ಸು ಮಾಡಕೂಡದು. ಏಕೆಂದರೆ ಉಚ್ಚಾರ ಮಾಡಲಾರದ ಮಾತುಗಳಿವೆ. ನೀವು ಈ ವಿಷಯಕ್ಕೆ ಲಕ್ಷ್ಯ ಕೊಡಲು, ತಾವು ಕೆಲವು ಇಲಾಖೆಗಳನ್ನು ಬೇರೆಯವರಿಗೆ ಬಿಟ್ಟುಕೊಡಬೇಕು ತತ್‌ಪ್ರಯುಕ್ತ ನಿಮ್ಮಲ್ಲಿ ಸಮರ್ಥಮಂತ್ರಿಗಳಿದ್ದಾರೆ. ಅವರಿಗೆ ನಿಮ್ಮ ಪೋರ್ಟ್ ಫೋಲಿಯೋಗಳನ್ನು ಒಪ್ಪಿಸಿ, ಈ ಕಾರ್ಯವನ್ನು ಕೇವಲ ನಾಲ್ಕಾರು ತಿಂಗಳೊಳಗೆ ಅಥವಾ ಮುಂದಿನ ಅಸೆಂಬ್ಲಿ ಅಧಿವೇಶನ ಕೂಡುವ ಪೂರ್ವದಲ್ಲಿ ಸಾಧಿಸಬೇಕು. ಇನ್ನೊಮ್ಮೆ ಯಾರ ಬಾಯಿನಲ್ಲಿಯೂ ಈ ಪ್ರತ್ಯೇಕ ಮನೋಭಾವನೆಯ ಮಾತು ಹೊರಡಬಾರದು. ಈ ಕ್ರಮ ತೆಗೆದುಕೊಳ್ಳಿ ಆಡಳಿತ ದೃಷ್ಟಿಯಿಂದ ಬೃಹತ್ ಕರ್ನಾಟಕ ಒಂದಾಗಬೇಕು, ಬೃಹತ್ ಕರ್ನಾಟಕ ಭದ್ರವಾಗಬೇಕು, ಬೃಹತ್ ಕರ್ನಾಟಕ ಶುಚಿಯಾಗಬೇಕು, ರುಚಿಯಾಗಬೇಕು ಬೃಹತ್ ಕರ್ನಾಟಕ ಬೇರೆ ದೇಶಗಳಿಗೆ ಮಾರ್ಗದರ್ಶಕವಾಗಬೇಕು ಅದನ್ನು ಮಾಡುವ ಸಾಮರ್ಥ್ಯ ಇವರೊಬ್ಬರಿಗೆ ಮಾತ್ರ ಸಾಧ್ಯವಿದೆ. ಆ ದೃಷ್ಟಿಯಿಂದ ಈ ಎಲ್ಲಾ ಮಾತುಗಳನ್ನು ಹೇಳಿದ್ದೇನೆ ಒಂದು ದೊಡ್ಡ ಗಿಡದ ಬುಡದಲ್ಲಿ ಅನೇಕ ಹುಲ್ಲುಗಳು ಬರುತ್ತವೆ ಅನ್ನುವುದು ಬುದ್ಧನ ಕಾಲದಿಂದ ಶಂಕರಾಚಾರ್ಯರ ಕಾಲದಿಂದ, ಬಸವಣ್ಣನವರ ಕಾಲದಿಂದ ನಮ್ಮ ಅನುಭವಕ್ಕೆ ಬಂದ ಮಾತು. ಕೆಲವು ಘಟನೆಗಳು ತಿಳಿಯದೆಯೇ ತಿಳಿದೇ ಸಂಭವಿಸಿವೆ. ಆದ್ದರಿಂದ ಯಾರು ಒಳ್ಳೆಯವರು ಯಾರು ಕೆಟ್ಟವರು ಯಾರು ಯಾರು ಯೋಗ್ಯರು ಎಂದು ನೋಡಿ, ಯೋಗ್ಯರನ್ನು ಯೋಗ್ಯ ಕೆಲಸದಲ್ಲಿ ತೊಡಗಿಸುವಂತೆ ಮಾಡಿ ಈ ಪ್ರತ್ಯೇಕವಾದ ಮನೋಭಾವನೆ ಹೋಗಲಿಕ್ಕೆ ಇದು ಅತ್ಯವಶ್ಯಕ. ಹಿಂದೆ ತಪ್ಪು ಮಾಡಿದಿರಿ. ಅವತ್ತೆ ಎಲ್ಲಾ ಮಾತು ಆಗಿ ಹೋಗಿತ್ತು. ಒಮ್ಮೆ ಈ ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ಹೆಸರು ಬಂದಿದ್ದರೆ ಪ್ರತ್ಯೇಕ ಮನೋಭಾವ ಮುಕ್ತಾಯವಾಗಿ ಹೋಗುತ್ತಿತ್ತು. ಹಿಂದೆ ಈ ಪ್ರಶ್ನೆ ಬಂದಾಗ ಹೆಸರು ಕರ್ನಾಟಕ ಎಂದು ಬದಲಾಗಿದ್ದರೆ, ಈ ಸಮಸ್ಯೆಯು ಬರುತ್ತಲೇ ಇರಲಿಲ್ಲ.

ಭ್ರಷ್ಟಾಚಾರ ನಿವಾರಣೆ ದೃಷ್ಟಿಯಿಂದಲೂ ಸಹ ಪ್ರತ್ಯೇಕವಾದ ಕೆಲಸ ಕೈಗೊಳ್ಳಬೇಕು ವಿಜಿಲೆನ್ಸ್ ಕಮಿಷನ್ನೇ, ಸದಾಚಾರ ಸಮಿತಿಯಾಗಿ ಮಾಡಿ, ಯೋಗ್ಯ ರೀತಿಯೊಳಗೆ ಒಂದು ಒಳ್ಳೆಯ ಕೆಲಸ ಮಾಡಬೇಕು. ಆದರೆ ಕೇಂದ್ರದಲ್ಲಿ ಮಾಡುವ ಒಳ್ಳೆಯ ಕೆಲಸಕ್ಕೂ ಲಕ್ಷ್ಯಕೊಡಬೇಕು. ಕಾರಣ ತಾವು ಬಲ್ಲಿರಿ. ಒಟ್ಟಿನಲ್ಲಿ ಕೇಂದ್ರಕ್ಕೂ ಸಹ ಮಾರ್ಗದರ್ಶಕರು ಆಗಿದ್ದೀರಿ ಅನ್ನುವ ರೀತಿಯಲ್ಲಿ ನೀವು ಈ ಕೆಲಸಕ್ಕೆ ಗಟ್ಟಿಗರು ಆಗಿದ್ದಿರಿ. ಹಿಂದೆಯೇ ಒಮ್ಮೆ ಹೇಳಿದ್ದೇನೆ. ಮುಕ್ಕಣ್ಣ ಬಂದರೂ ಕೂಡ ಅಚಲರಾಗುವಂತಹ ವಿಜಿಲೆನ್ಸ್ ಕಮಿಷನರನ್ನು ನೇಮಕ ಮಾಡಬೇಕು. ಅದಕ್ಕೆ ಸಹಾಯಕರಾದ ಸದಾಚಾರ ಸಮಿತಿಯನ್ನು ಬೇಗನೇ ರಚಿಸಬೇಕೆಂದು ಹೇಳಿ ತಮ್ಮ ಈ ಬೇಡಿಕೆಗೆ ನನ್ನ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸಲು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ.

# ಆಯವ್ಯಯ ಪಟ್ಟಿ 1965-66

**ಶ್ರೀ ಎ.ಜೆ. ದೊಡ್ಡಮೇಟಿ:** ಈ ಆಯವ್ಯಯ ಪಟ್ಟಿಯ ಸಾಮಾನ್ಯ ಸ್ವರೂಪವನ್ನು ನಾನು ಸ್ವಾಗತಿಸಿ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಈಗ ಇದರಲ್ಲಿ ಮುಂದಿನ ವರ್ಷಕ್ಕೆ 4 ಕೋಟಿ ರೂಪಾಯಿಗಳ ಕೊರತೆಯನ್ನೂ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ಒಳಗೆ ಇನ್ನೂ ಹೆಚ್ಚಿನ ಕೊರತೆ ಬರುತ್ತದೆ ಎಂದು ಸೂಚನೆ ಕೊಟ್ಟಿದ್ದಾರೆ. ಈ ಕೊರತೆಯ ಹಣವನ್ನು ಯಾವ ರೀತಿ ತುಂಬಬೇಕು ಎನ್ನುವ ಬಗ್ಗೆ ಮುಂದಿನ ವರ್ಷ ಒಂದು ತರಹ ತೆರಿಗೆ ಬರಬಹುದು ಎಂಬ ಸೂಚನೆಯನ್ನು ಅವರ ಭಾಷಣದಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಇನ್ನೊಂದು ಸ್ಪಷ್ಟವಾದ ಕಾಣುವಂತಹ ಮಾತು ಎಂದರೆ, ಕಂದಾಯವನ್ನು ಪುನರ್ ವಿಮರ್ಶೆ ಮಾಡುವುದರಿಂದ ಮೂರುವರೆ ಕೋಟಿ ರೂಪಾಯಿಗಳು ಬರಬಹುದೆಂದು ಹೇಳಿದ್ದಾರೆ. ಮೂರುವರೆ ಕೋಟಿ ರೂಪಾಯಿಗಳನ್ನು ರೈತರಿಗೆ ಕಂದಾಯವನ್ನು ಹೆಚ್ಚು ಮಾಡುವುದರ ಮೂಲಕ ದೊರಕಿಸಿಕೊಳ್ಳುವುದು, ಅದು ಒಂದು ಬೇರೆ ವಿಷಯ, ರೈತರು ಕಂದಾಯನ್ನು ಜಾಸ್ತಿ ಕೊಡಬೇಕು. ಆದರೆ ಅದರ ಪ್ರತಿಫಲ ಅವರಿಗೆ ಯಾವ ರೀತಿ ದೊರೆಯುತ್ತದೆ ಎಂಬುದನ್ನು ನಾವು ಸ್ವಲ್ಪ ವಿಚಾರ ಮಾಡಬೇಕಾಗಿದೆ. ವ್ಯವಸಾಯದ ಬಗ್ಗೆ ಅವರು ಮಾಡಿರತಕ್ಕ ಸೂಚನೆಗಳನ್ನು ನೋಡಿದರೆ ಅದು ಎಷ್ಟರಮಟ್ಟಿಗೆ ರೈತನಿಗೆ ಮುಟ್ಟುತ್ತದೆ ಎಂಬುದನ್ನು ವಿಚಾರ ಮಾಡಬೇಕು. ಅವರು ಆಹಾರಧಾನ್ಯಗಳ ಉತ್ಪತ್ತಿ ಕಡಿಮೆಯಾಗಿದೆ ಎಂದು ಸೂಚನೆಯನ್ನು ಕೊಟ್ಟಿದ್ದಾರೆ. ಹೆಚ್ಚು ಆಹಾರ ಉತ್ಪಾದನೆಯನ್ನು ಮಾಡಬೇಕಾದರೆ ವ್ಯವಸಾಯ ಅಭಿವೃದ್ಧಿ ಹೊಂದಬೇಕು, ವ್ಯವಸಾಯ ಅಭಿವೃದ್ಧಿ ಹೊಂದಬೇಕಾಗಿದ್ದರೆ ಏನು ಮಾಡಬೇಕೆಂದರೆ ವ್ಯವಸಾಯದ ಒಂದು ಉದ್ಯೋಗ ಅಭಿವೃದ್ಧಿಯಾಗಬೇಕು. ಆದ್ದರಿಂದ ಅದಕ್ಕಾಗಿ ಕೆಲವೊಂದು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆಯೇ ಹೇಗೆ ಎನ್ನುವುದನ್ನು ನಾವು ತಿಳಿಯಬೇಕಾಗಿದೆ. ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ವ್ಯವಸಾಯದ ವಿಷಯದಲ್ಲಿ ಏನೇನು ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಳ್ಳಬೇಕಾಗಿತ್ತೋ ಅದನ್ನು ಕೈಗೊಂಡಿಲ್ಲ ಬೇಸಾಯಗಾರರು ಹೊಸ ಹೊಸ ಬಗೆಯ ಬೆಳೆಗಳನ್ನು ವರ್ಷಕ್ಕೆ ಎರಡು ಮೂರು ಸಲ ತೆಗೆಯಬೇಕಾಗುತ್ತದೆ ಮತ್ತು ಬರೀ ವ್ಯವಸಾಯದಿಂದಲೇ ಸ್ವಾವಲಂಬಿಯಾಗಿ ತನ್ನ ಜೀವನವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಅವನು ಅದರ ಜೊತೆಗೆ ಮತ್ತೆ ಯಾವುದಾರರೂ ಒಂದು ಉದ್ಯೋಗವನ್ನು ಹೊಂದಬೇಕು ಮತ್ತು ರೈತರು ಆಧುನಿಕ ರೀತಿಯಲ್ಲಿ ವ್ಯವಸಾಯವನ್ನು ಮಾಡುವುದಕ್ಕೆ ಬೇಕಾದ ಸೌಕರ್ಯವನ್ನು ಸರ್ಕಾರದವರು ಒದಗಿಸಿಕೊಡಬೇಕು. ದಿವಂಗತರಾದ ಶ್ರೀ ಪಂಡಿತ್ ಜವಹರ್‌ಲಾಲ್‌ನೆಹರೂ ಅವರು ಯಾವುದಾದರೂ ಒಂದು ಹಳ್ಳಿಗೆ ಹೋದರೆ ಅಲ್ಲಿ ವ್ಯವಸಾಯ ಮುಂದುವರಿದಿದೆಯೇ ಇಲ್ಲವೇ ಹೇಗೆ ಎಂಬುದನ್ನು ನೋಡಬೇಕಾದರೆ ಅಲ್ಲಿ ರೈತ ಉಪಯೋಗಿಸತಕ್ಕಂಥ ಗುಳವನ್ನು ನಾನು ಮೊದಲು ನೋಡುತ್ತೇನೆಂದು

ಹೇಳುತ್ತಿದ್ದರಂತೆ, ಹಾಗೆ ಇನ್ನು ಮುಂದೆ ವ್ಯವಸಾಯ ಆಧುನಿಕ ರೀತಿಯಲ್ಲಿ ನಡೆಯಬೇಕಾದರೆ ಅದಕ್ಕೆ ಅಗತ್ಯವಾಗಿ ಬೇಕಾದ ಯಂತ್ರಗಳನ್ನು ಪಡೆಯಯಬೇಕು. ಈಗ ಸರ್ಕಾರದವರು ರೈತರಿಗೆ ಟ್ರ್ಯಾಕ್ಟರು, ಬುಲ್ಡೋಜರು ಮುಂತಾದ ಯಂತ್ರಗಳನ್ನೇನು ಕೊಡುತ್ತಿದ್ದಾರೆಯೋ ಅದು ಸಾಲದು, ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿಯೂ ಒಂದೊಂದು ಟ್ರ್ಯಾಕ್ಟರು ಮತ್ತು ಬುಲ್ಡೋಜರರುಗಳನ್ನು ಇಟ್ಟು ಅವುಗಳ ಸೌಕರ್ಯ ರೈತರಿಗೆ ದೊರೆಯುವಂತೆ ಮಾಡಬೇಕು. ಹಳೆಯ ಮೈಸೂರು ಪ್ರದೇಶದಲ್ಲಿ ಸಹಕಾರ ಸಂಘಗಳಾಗಲೀ, ಸರಕಾರದವರಾಗಲೀ ಕೆಲವು ಕಡೆ ಟ್ರಾಕ್ಟರುಗಳನ್ನು ಮತ್ತು ಬುಲ್ಡೋಜರುಳನ್ನು ಇಟ್ಟು ಅವುಗಳ ಸೌಕರ್ಯವನ್ನು ರೈತರಿಗೆ ಒದಗಿಸುತ್ತಿದಾರೆ. ಆದರೆ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಪ್ರದೇಶದಲ್ಲಿ ಈ ತರಹ ವ್ಯವಸ್ಥೆ ಮಾಡಿರುವುದು ಕಡಿಮೆ, ಈ ದೃಷ್ಠಿಯಿಂದ ವಿಚಾರ ಮಾಡಿ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿಯೂ ಟ್ರಾಕ್ಟರು ಬುಲ್ಡೋಜರು ಮತ್ತು ಸುಧಾರಿತ ಬೀಜಗಳು, ಮುಂತಾದ ವ್ಯವಸಾಯದ ಉಪಕರಣಗಳು ಸಿಕ್ಕುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕು ವ್ಯವಸಾಯ ಇಲಾಖೆ ಎಷ್ಟೋ ಕೆಲಸಗಳನ್ನು ಮಾಡುತ್ತಿದೆ ಎಂದು ಹೇಳುತ್ತಾರೆ. ನನಗೆ ಗೊತ್ತಿರುವ ಹಾಗೆ ವ್ಯಪಸಾಯ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಬಹಳ ಮಟ್ಟಿಗೆ ಆದಕ್ಕಾಗಿ ನಿಗಾವಹಿಸುತ್ತಿದ್ದಾರೆ ಎಂಬುದು ಗೊತಾಗುವುದಿಲ್ಲ. ಈ ವಿಷಯದಲ್ಲಿ ಬಹಳ ಕಡೆ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗಳಲ್ಲಿ ಚರ್ಚೆಯಾಗುತ್ತಿದೆ. ಇವರು ವಿಫಲರಾಗಿದ್ದಾರೆ ಇದಕ್ಕೆ ಕಾರಣವನ್ನು ಬಹಳ ಗಂಭೀರವಾಗಿ ವಿಚಾರ ಮಾಡಬೇಕು. ಒಟ್ಟಿನ ಮೇಲೆ ವ್ಯವಸಾಯದ ಬದಲಾವಣೆ ಬಗ್ಗೆ ಗಂಭೀರವಾದ ರೀತಿನೀತಿಯನ್ನು ಹಾಕಬೇಕು, ಇಲ್ಲದಿದ್ದರೆ ದೊಡ್ಡ ಗಂಡಾಂತರವಾದೀತು ಎಂದು ಇಲಾಖೆ ತಿಳಿಯಬೇಕಾಗಿದೆ.

ಲ್ಯಾಂಡ್ ಮಾರ್ಟಗೇಜ ಬ್ಯಾಂಕುಗಳ ಕಾರ್ಯಕ್ಷೇತ್ರವನ್ನು ವಿಸ್ತಾರ ಮಾಡಬೇಕು. ವಿಸ್ತಾರ ಮಾಡಿ, ಲ್ಯಾಂಡ್‌ಮಾರ್ಟಗೇಜ ಬ್ಯಾಂಕುಗಳ ಮೂಲಕವಾಗಿ ಹಳ್ಳಿಯ ಜಮೀನುಗಳ ಉತ್ತಮಗೊಳ್ಳುವುಕ್ಕೆ ಸರಿಯಾದಂಥ ವ್ಯವಸ್ಥೆಯನ್ನು ಮಾಡುವುದು ಅವಶ್ಯಕ.

ರಾಷ್ಟ್ರೀಕರಣ ಮತ್ತು ಸಮಾಜವಾದ ಬಗ್ಗೆ ನಮ್ಮ ಸ್ನೇಹಿತರು ಎಷ್ಟೋ ಜನ ಮಾತನಾಡಿದ್ದಾರೆ, ವಿದ್ಯಾಭ್ಯಾಸದೊಳಗೆ, ಮುಖ್ಯವಾಗಿ ಉಚ್ಚ ಶಿಕ್ಷಣದ ಸಹಾ ರಾಷ್ಟ್ರೀಕರಣವಾದರೆ ನಮ್ಮ ಸಹಕಾರ ಹೆಚ್ಚು ಯಶಸ್ವಿಯಾಗುವ ಸಂಭವವಿದೆ. ಏತಕ್ಕೆಂದರೆ ಒಬ್ಬ ವೈದ್ಯ (ಡಾಕ್ಟರ್) ನಾಗಬೇಕಾದರೆ ತಾಂತ್ರಿಕತಜ್ಞನಾಗಬೇಕಾದರೆ 20-25-30 ಸಾವಿರ ರೂಪಾಯಿ ಖರ್ಚ ಮಾಡಿ ಡಾಕ್ಟರಾಗಿ ಕಾಲೇಜಿನಿಂದ ಹೊರಗೆ ಬಂದ ಸಮಯದಲ್ಲಿ ಹಳ್ಳಿಗಳಲ್ಲಿ ಕೆಲಸ ಮಾಡಲು ಒಳಗಾಗುವ ಸಂಭವವಿದೆ. ಅವನು 25 ಸಾವಿರ ರೂಪಾಯಿ ಹೊರೆ ಹೊತ್ತು ಬಂದಿರುತ್ತಾನೆ.

ಅವನಿಗೆ ಇಲ್ಲಿ ಹಣ ಮಡಿಯುವ ಚಟ ಹೆಚ್ಚು ಗಮನವಿರುತ್ತದೆ, 25 ಸಾವಿರ ರೂಪಾಯಿಗೆ ಬಡ್ಡಿ ಒಂದು ವರ್ಷಕ್ಕೆ ಎಷ್ಟು ಆಗುತ್ತದೆ. 6 ಪರ್ಸೆಂಟಿನಂತೆ? ಆ ಮನುಷ್ಯ 25 ಸಾವಿರ ರೂಪಾಯಿ ಸಾಲ ತೀರಿಸಿ, ತನ್ನ ಹಿಂದಿನ ಸ್ಥಿತಿಯನ್ನು ಪಡೆಯಬೇಕಾದರೆ, ನಮ್ಮ ರಕ್ತ ಹೀರಲಿಕ್ಕೆ ಶುರು ಮಾಡುತ್ತಾನೆ. ಆ ಡಾಕ್ಟರು ನಿರ್ವಾಹವಿಲ್ಲದೆ ಈ ರೀತಿ ಕ್ರಮವನ್ನು ಅನುಸರಿಸಬೇಕಾಗಿದೆ. ಈ ಕಾರಣಕ್ಕಾಗಿ ಉಚ್ಚ ಶಿಕ್ಷಣ ರಾಷ್ಟ್ರೀಕರಣವಾದರೆ, 25 ಸಾವಿರ ರೂಪಾಯಿ ಭಾರ ಡಾಕ್ಟರ ಮೇಲೆ ಇರುವುದಿಲ್ಲ. ಇಂಥ ಉಚ್ಚಶಿಕ್ಷಣ ಪ್ರಜೆಗಳ ದೇಹಾರೋಗ್ಯಕ್ಕೆ ಸಂಬಂಧಪಟ್ಟುದು, ಇದರ ಮತ್ತು ತಾಂತ್ರಿಕ ಶಿಕ್ಷಣದ ಬಗ್ಗೆ ಸರ್ಕಾರದವರು ಆಯಾ ವಿದ್ಯಾರ್ಥಿಗಳಿಗೆ ಹೆಚ್ಚಿನ ವೆಚ್ಚ ಬೀಳದಂತೆ ಏನಾದರೂ ಯೋಚನೆ ಮಾಡುವುದು ಅವಶ್ಯ.

ಇದರ ಹೊರತಾಗಿ, ಈಗ ಹೊಸ ತೆರಿಗೆಗಳು ಯಾವರೀತಿ ಬರುತ್ತಿವೆ ಅನ್ನುವುದರ ಬಗ್ಗೆ ಹೇಳಬೇಕಾಗಿದೆ. ರೈತರ ಮೇಲೆ, ಪುನರ್ವಿಮರ್ಶಿತ ಕಂದಾಯ ಯೋಜನೆಯಿಂದ ಮೂರೂವರೆ ಕೋಟಿ ಮೇಲೆ ಬೀಳಲಿದೆ. ಇದರ ಪ್ರತಿಕ್ರಿಯೆ ಏನು, ಇದು ಯಾವ ರೀತಿ ಹಂಚಲ್ಪಡುತ್ತದೆ ಎಂದು ಹೇಳುವ ತತ್ಪೂರ್ವದಲ್ಲಿ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳುತ್ತೇನೆ. ಭೂಸುಧಾರಣೆ ಇಲ್ಲದ ಹೊರತು ಈ ಕಂದಾಯ ವಿಮರ್ಶೆ ಮಾಡುತ್ತೇವೆನ್ನುವುದು ಅರ್ಥವಿಲ್ಲದ ಮಾತು, ಭೂಸುಧಾರಣೆ ಮೊದಲು ತರಲಿ, ಸಂವಿಧಾನದ 17ನೇ ಕಲಮು ತಿದ್ದುಪಡಿಯಾಗಬೇಕೆಂದು ಹೇಳುತ್ತಿದ್ದರು. 17ನೆ ಕಲಮು ತಿದ್ದುಪಡಿಗಾಗಿ ಒಂದು ವರ್ಷ ಆಗಿಹೋಯಿತು. ಆದರೆ ಇವತ್ತಿನ ತನಕ ಇಲ್ಲಿ ಏಕೆ ತಿದ್ದುಪಡಿ ತರಲಿಲ್ಲ ಎಂಬುದಕ್ಕೆ ಉತ್ತರ ಹೇಳುತ್ತೀರ? ಮೊನ್ನೆ ಹೇಳಿರುವಂತೆ ಜುಲೈ 1ನೇಯ ತಾರೀಖಿನಿಂದ ಜಾರಿಗೆ ತರುತ್ತೇವೆಂದು ಅದು ನಿಶ್ಚಿತವೊ? ಇದು ಗಣಪತಿ ಮದುವೆ ಹಾಗೆ ಆಗಿದೆ. ಇದು ಮತ್ತೆ ಮುಂದಕ್ಕೆ ಹೋಗುತ್ತೊ ಗೊತ್ತಿಲ್ಲ. ಇಂಥ ವಿಧಾನವು ಸರಿಯಲ್ಲ, ವ್ಯವಸಾಯದ ಉತ್ಪತ್ತಿ ಮತ್ತು ರಾಷ್ಟ್ರದ ಸಂಪನ್ಮೂಲಗಳನ್ನು ಹೆಚ್ಚು ಮಾಡಬೇಕು. ಆಗ ತೆರಿಗೆ ಸರ್ಕಾರಕ್ಕೆ ಹೆಚ್ಚು ಪ್ರಮಾಣದಲ್ಲಿ ಬರುತ್ತದೆ. ರಾಷ್ಟ್ರದ ಉತ್ಪತ್ತಿ ಮುಖ್ಯವಾಗಿ ಬೇಸಾಯ ಮೂಲಕ ಬರುವ ಉತ್ಪತ್ತಿ ಹೆಚ್ಚಾಬೇಕು ಎಂಬ ಮೂಲಭೂತವಾದ ತತ್ವವನ್ನು ಅವರು ಮರೆಯಬಾರದು ಈ ದೃಷ್ಟಿಯಿಂದ ಇವತ್ತು ಕ್ರಮಗಳನ್ನು ಅವರು ಅನುಸರಿಸಬೇಕು. ಹೊಸ ಕರಗಳಿಗೆ ಕೊರತೆಯನ್ನು ತುಂಬಿಕೊಳ್ಳುವುದಕ್ಕೆ ಅನೇಕ ಕ್ರಮವನ್ನು ಅನುಸರಿಸಬಹುದು. ಕರ್ಮದ ಭಾವನೆಯಿಂದ ವಿಚಾರ ಮಾಡಬೇಕು ಈ ಸಂಬಂಧದಲ್ಲಿ ಒಂದು ವಿಚಾರ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಪಾನ ನಿರೋಧ ನೀತಿ ನಮ್ಮ ದೇಶದಲ್ಲಿದೆ. ಎಲ್ಲಾ ಜಿಲ್ಲೆಗಳಲ್ಲೂ ಒಂದೇ ಪದ್ಧತಿ ತಂದು, ವ್ಯವಸ್ಥಿತ ರೀತಿಯಲ್ಲಿ ಒಂದು ಏನಾದರೂ ಮಾಡಬೇಕು. ಇಲ್ಲದಿದ್ದರೆ, ಈ ನೀತಿಯನ್ನು ಪುನರ್ವಿಮರ್ಶಿಸಿ ಒಂದು ಹೆಚ್ಚಿನ ರೀತಿಯಲ್ಲಿ ಉತ್ಪತ್ತಿ ಬರುವ ಹಾಗೆ ಮಾಡಬೇಕು. ಇದನ್ನು ನಮ್ಮ ಸಂಪನ್ಮೂಲ ದೃಷ್ಟಿಯಿಂದ ವಿಚಾರ ಮಾಡಬೇಕು. ಕಳ್ಳಪೇಟೆಯಿಂದ ಮೋಸಗಾರಿಕೆ ಹಣಗಳಿಸುತ್ತಿದ್ದಾರೆ. ಕಳ್ಳಪೇಟೆಯಿಂದ ಹಣ ಸಂಪಾದಿಸುವುದು ನಮ್ಮ ದೇಶದಲ್ಲಿ ಸಾಕಷ್ಟು ಇದೆ ಅನ್ನುವುದು ಜನಜನಿತವಾದ ವಿಷಯ, ನಮ್ಮ ರಾಜ್ಯದಲ್ಲಿಯೂ ಇದೆ. ಅನ್ನುವುದು ಮೊನ್ನೆ ಶೋಧನೆ ನಡೆಸಿದ ವರದಿಗಳಿಂದ ಗೊತ್ತಾಗಿದೆ. ಇಲ್ಲಿಯು ಬಚ್ಚಿಟ್ಟ ಹಣ ಸಿಕ್ಕಿದೆ

ಎಂದು ಹೇಳುತ್ತಾನೆ. ನಮ್ಮ ರಾಜ್ಯದಲ್ಲಿ ಭಾರಿ ಭಾರಿ ನಗರಗಳಲ್ಲಿ ಇಂಥ ಬಚ್ಚಿಟ್ಟ ಹಣ ಸಿಕ್ಕಿರುವ ಉದಾಹರಣೆಗಳಿವೆ. ಈ ಹಣದಲ್ಲಿ ಕೇಂದ್ರಕ್ಕೆ ಎಷ್ಟರಮಟ್ಟಿಗೆ ಹೋಗುತ್ತದೆ? ಅದರಲ್ಲಿ ನಮ್ಮ ರಾಜ್ಯಕ್ಕೂ ಏನಾದರೂ ಬರುತ್ತದೆಯೇ ಅನ್ನುವುದನ್ನು ಅವರು ಆಲೋಚನೆ ಮಾಡಬೇಕು ಈ ಹಣದೊಳಗೆ ನಮಗೆ ಏನಾದರೂ ಅಂಶ ದೊರೆಯುವಂತೆ ಮಾಡಿಕೊಂಡರೆ ಖೋತಾ ನಮ್ಮ ರಾಜ್ಯ ಬಜೆಟ್ಟಿನಲ್ಲಿ ಬೀಳಲಿಕ್ಕಿಲ್ಲ, ಕಳ್ಳ ಬೇಟೆಯಲ್ಲಿ ಹೆಚ್ಚು ದುಡ್ಡು ತುಂಬಿದೆ.

**ಒಬ್ಬ ಮಾನ್ಯ ಸದಸ್ಯರು-** ನಮ್ಮ ಸಂಸ್ಥಾನದಲ್ಲಿ ಉಂಟೋ? ಯಾವ ಪಕ್ಷದಲ್ಲಿ?

**ಶ್ರೀ ಎ.ಜೆ. ದೊಡ್ಡಮೇಟಿ:** ಸಾಕಷ್ಟು ಉಂಟು, ನಮ್ಮ ಸಂಸ್ಥಾನದಲ್ಲೂ ಉಂಟು ಎಲ್ಲ ಪಕ್ಷಗಳಲ್ಲಿಯೂ ಉಂಟು. ಎಲ್ಲ ಜನಗಳಲ್ಲಿಯೂ ಉಂಟು, ಅದು ಎಲ್ಲಾ ಒಂದೇ ಪಕ್ಷದಲ್ಲಿ ಇದೆಯೆಂದು ತಿಳಿದುಕೊಳ್ಳಬೇಡಿ. ಈ ಬಗ್ಗೆ ಸಾಕಷ್ಟು ಕಠೋರ ನೀತಿ ಅನುಸರಿಸಿ, ನಿರ್ದಾಕ್ಷಿಣ್ಯದಿಂದ ಎಲ್ಲೆಲ್ಲಿ ಕಳ್ಳಪೇಟೆಯಲ್ಲಿ ಕೆಟ್ಟ ರೀತಿಯಲ್ಲಿ ಗಳಿಸಿದ ದುಡ್ಡಿದೆಯೋ ಅದನ್ನು ಹೊರಗೆ ತೆಗೆಯುವುದಕ್ಕೆ ಸರ್ಕಾರ ಪ್ರಯತ್ನ ಪಟ್ಟರೆ ಅನೇಕ ತೆರಿಗೆಯ ಭಾರ ಕಡಿಮೆಯಾಗುವ ಸಂಭವವಿದೆ.

ನಾನು ಹಿಂದೆಯೂ ಹೇಳಿದ್ದೇನೆ. ಮತ್ತೆಯೂ ಹೇಳುತ್ತೇನೆ. ಹಿಂದಕ್ಕೆ ಒಮ್ಮೆ ಸ್ಥಿರ ಆಸ್ತಿ (ಇಮ್ಮೂವಬಲ್ ಪ್ರಾಪರ್ಟಿ) ಮೇಲೆ ಕರ ಹಾಕುವ ಒಂದು ಬಿಲ್ಲು ಎಲ್ಲಾ ಅಧಿ ಕಡೆಯಲ್ಲಿ ಮಾಡದೇ ನಿಲ್ಲಿಸಲಾಯಿತು. ಏಕೋ, ಕಾರಣ ತಿಳಿಯಲಿಲ್ಲ. ಇವತ್ತು ಪ್ರತ್ಯಕ್ಷ ರೈತನ ಮೇಲೆ ಬೀಳತಕ್ಕ ತೆರಿಗೆಗಳನ್ನು, ಕಂದಾಯವನ್ನು ಪುನರ್ವಿಮರ್ಶೆ ಮಾಡಬೇಕು. ಇದು ಅನೇಕ ಶ್ರೀಮಂತರ ಮೇಲೆ ದೊಡ್ಡ ದೊಡ್ಡವರು ಲಕ್ಷ ಲಕ್ಷಗಟ್ಲೆ ಸಂಪಾದಿಸಿ, ಹೆಚ್ಚು ಹೆಚ್ಚಾಗಿ ಕಟ್ಟಡಗಳನ್ನು ಕಟ್ಟಿಸಿ ವೈಭವದಿಂದ ಇರತಕ್ಕಂಥ ಶ್ರೀಮಂತರ ಮೇಲೆ ಬೀಳತಕ್ಕ ಕರ, ಅದು ಸ್ಥಿರ ಆಸ್ತಿಗಳ ಮೇಲೆ ಬೀಳತಕ್ಕಂಥ ಕರ, ಅದು ನಗರವಾಸಿಗಳ ಮೇಲೆ ಬೀಳುವಂಥಾದ್ದು, ಆದ್ದರಿಂದ ಆ ಟ್ಯಾಕ್ಸನ್ನು ಮಾಡಲಿಕ್ಕೆ ನಮ್ಮ ಸರ್ಕಾರ ಭಯಪಡಬಹುದು ಎನ್ನುವ ಭಾವನೆ ಇದೆ ಇವತ್ತು ಸ್ಥಿರ ಆಸ್ತಿ ಮೇಲೆ ಹಾಕಬೇಕೆಂದಿರುವ ಕರವನ್ನು ರದ್ದು ಮಾಡಬಾರದು, ಮಸೂದೆಯನ್ನು ಕ್ರಾಸ್‌ಮಾಡಬಾರದು, ಅದನ್ನು ಹಾಕುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಕಟ್ಟಡ ಕರ ಎಂದು ಮಾಡಿದರು. ಅದು ಹೈಕೋರ್ಟಿಗೆ ಹೋದ ಕೂಡಲೆ ಅದರ ಅವತಾರ ಸಮಾಪ್ತಿಯಾಯಿತು. ಮತ್ತೆ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಈ ಸ್ಥಿರ ಆಸ್ತಿ ಕರ ಬಂದರೆ ಅವರಿಗೆ ಮೂರೂವರೆ ಕೋಟಿ ರೂಪಾಯಿ ತನಕ ಬರುತ್ತದೆ. ಆದ್ದರಿಂದ ಸಂಪನ್ಮೂಲಗಳು ಹೆಚ್ಚುವ ಸಂಭವಿದೆ ಅದು ಪ್ರತ್ಯಕ್ಷ ಶ್ರೀಮಂತರ ಮೇಲೆ ಬೀಳುವುದು, ಬಡವರ ಮೇಲೆ ಬೀಳುವ ಕರವಲ್ಲ. ಅಂಥ ಕರವನ್ನು ಉಪಯೋಗಿಸಿಕೊಂಡು, ಅದನ್ನು ನಿರ್ದಾಕ್ಷಿಣ್ಯವಾಗಿ ಜಾರಿಗೆ ಕೊಡುವ ಕ್ರಮವನ್ನು ತರಬೇಕೆಂದು ಸ್ಪಷ್ಟವಾದ ಸಲಹೆ ಕೊಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಈ ರೀತಿಯಾಗಿ ವಿಚಾರ ಮಾಡುವ ಹೊತ್ತಿಗೆ, ಸರ್ಕಾರದವರು ನಮ್ಮ ಸಂಪನ್ಮೂಲಗಳನ್ನು ಬೆಳೆಸುವುದಕ್ಕೆ 4ನೇಯ ಯೋಜನೆಯನ್ನು ಒಳ್ಳೆಯ ರೀತಿಯಿಂದ ಯಶಸ್ವಿಗೊಳಿಸಬೇಕು. ಮಲಪ್ರಭಾ ಮುಂತಾದ ಯೋಜನೆಗಳಿಗೆ ಈಗ ಸಾಕಷ್ಟು ಹಣವನ್ನು ಒದಗಿಸಿಲ್ಲ. ಹೀಗಾದರೆ ನಾಲ್ಕನೆಯ ಯೋಜನೆಯೊಳಗೆ ಅದು ಎಷ್ಟರ ಮಟ್ಟಿಗೆ ಮುಂದುವರಿಯುತ್ತದೆ? ಈ ವರ್ಷ ಐವತ್ತು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅದು ಮಲಪ್ರಭಾ ಯೋಜನೆಗೆ ಏನೂ ಸಾಲದು; ಕಟ್ಟಡಕ್ಕೆ ಸಾಕಾಗುವುದಿಲ್ಲ. ಈ ಪ್ರಕಾರ ಹೋದರೆ, ಇನ್ನು 10 ವರ್ಷದ ಮೇಲೆ ಮಲಪ್ರಭಾ ಮುಗಿಯಬಹುದು ಇದೇ ರೀತಿಯಿಂದ ಉಳಿದ ಯೋಜನೆಗಳೂ ಇರಬಹುದು. ನಿರ್ದಯದಿಂದ ಶ್ರೀಮಂತರನ್ನು ಕೆಳಗೆ ಇಳಿಸದೇ ಹೋದರೆ ನಮ್ಮ ದೇಶದ ಕಲ್ಯಾಣವಾಗುವುದಿಲ್ಲ. ನಿಜವಾದ ಸಮಾಜ ಶಕ್ಯವಾಗುವುದಿಲ್ಲ. ಸಮಾಜವಾದ ಸಮಾಜವನ್ನು ಸೃಷ್ಟಿ ಕಾಣುವ ದೃಷ್ಟಿಯಿಂದ ಆಲೋಚನೆ ಮಾಡಬೇಕು.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಹಣಕಾಸಿನ ಸಚಿವರ ಭಾಷಣವನ್ನು ಇಂಗ್ಲಿಷ್‌ನಲ್ಲಿ ಓದಿದೆ. ಅವರ ಕನ್ನಡದ ಭಾಷಣವನ್ನು ಪೂರ್ತಿ ಎರಡು ಸಲ ಓದಿದೆ, ಅದು ಸುಂದರವಾದ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಅವರು ಅದನ್ನು ಓದಲಿಲ್ಲ. ಇಂಥ ಸುಂದರವಾದ ಭಾಷೆಯಲ್ಲಿ ಸ್ವಭಾಷೆಯಲ್ಲಿ ಇರುವ ಬಜೆಟ್‌ಭಾಷಣವನ್ನು ಓದುವುದು ಬಿಟ್ಟು ಅಂಗ್ರೇಜಿ ಭಾಷೆಯೊಳಗಿರುವ ಬಜೆಟ್ ಸ್ಪೀಚನ್ನು ಓದಿದು ಎಷ್ಟರಮಟ್ಟಿಗೆ ಸರಿಯೋ ಏನೋ ವಿಚಾರ ಮಾಡಬೇಕು. ಮುಂದಿನ ಸಲವಾದರೂ ದಯೆಯಿಟ್ಟು ಶ್ರೀ ಜತ್ತಿಯುವರು ಓದುವಾಗ ಕನ್ನಡ ಭಾಷೆಯ ಪ್ರತಿಯನ್ನೇ ಉಪಯೋಗಿಸಬೇಕು, ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮಾತನಾಡಲು ಇಷ್ಟು ಅವಧಿ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಟಿ.ಎನ್. ಮಾದಪ್ಪಗೌಡ (ನಾಗಮಂಗಲ) ಸ್ವಾಮಿ, ಇಲ್ಲಿಯವರೆಗೆ ನನ್ನ ಮಾನ್ಯ ಮಿತ್ರರುಗಳು ಅನೇಕರು ಸೂಚಿಸಿದರು ನಾವು ಯಾರಿಗೆ ನಮ್ಮ ಕಷ್ಟ ಸುಖಗಳನ್ನು ಹೇಳಬೇಕೋ ಮತ್ತು ಈ ಬಡ್ಜೆಟಿನ ಮೇಲೆ ವ್ಯಾಖ್ಯಾನ ಮಾಡಬೇಕೋ, ಬೇಡವೋ ಗೊತ್ತಾಗುತ್ತಿಲ್ಲ. ಇಲ್ಲಿ ಈಗ ಒಬ್ಬರು ಡೆಪ್ಯೂಟಿ ಮಿನಿಸ್ಟರು ಶ್ರೀಮಾನ್ ಗಫಾರ್‌ಸಾಹೇಬರು ಒಬ್ಬರನ್ನು ಬಿಟ್ಟೆ ಮಂತ್ರಿಗಳು ಎಲ್ಲಿ ಹೋಗಿದ್ದಾರೋ ಏನೋ ನಮಗೆ ಗೊತ್ತಾಗುತ್ತಿಲ್ಲ. ತಾವು, ನೀವು ಮಾತನಾಡಬೇಕೆಂದು ಅಪ್ಪಣೆ ಕೊಡಿಸಿದಿರಿ. ನಾವು ಮಾಡಿದ ಭಾಷಣದ ಪ್ರತಿಗಳನ್ನಾದರೂ ಸಂಬಂಧಪಟ್ಟ ಮಂತ್ರಿಗಳು ಓದಿ ನೋಡುತ್ತಾರೋ ಇಲ್ಲವೋ ಗೊತ್ತಿಲ್ಲ ಅಂತೂ ನಾವು ಹೇಳುವುದೆಲ್ಲಾ ಬರೀ ಅರಣ್ಯ ರೋಧನವಾಗುತ್ತಿದೆ ಎಂದು ನನಗೆ ಭಾಸವಾಗುತ್ತದೆ. ತಾವು ಮಾತನಾಡಬೇಕೆಂದು ಅಪ್ಪಣೆ ಕೊಡಿಸಿರುವುದರಿಂದ ನನಗೆ ಕೊಟ್ಟಿರುವ ಅಲ್ಪ ಕಾಲಾವಧಿಯಲ್ಲಿ ಎರಡು ಮೂರು ವಿಚಾರಗಳ ಬಗ್ಗೆ ಇಲ್ಲಿ ನಾನು ಮಾತನಾಡಲು ಇಷ್ಟಪಡುತ್ತೇನೆ.

ಇದರಲ್ಲಿ ಮೊದಲನೆಯದಾಗಿ ಆಹಾರ ಪರಿಸ್ಥಿತಿಯ ವಿಚಾರದಲ್ಲಿ ಹೇಳುವುದಾದರೆ ದೇಶದಲ್ಲಿ ಆಹಾರದ ಹಾಹಾಕಾರದ ಪರಿಸ್ಥಿತಿ ಏನಿತ್ತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಈಗಾಗಲೇ ಸುಗ್ಗಿ ಕಾಲ ಕಳೆದು ದಿವಸ ಬಂದದ್ದು ಹೊರಕ್ಕೆ ಸಾಗಿ ಹೋಗುತ್ತಿದೆ. ಸರಕಾರದವರು ಬೇಕಾದಷ್ಟು ದವಸ ಧಾನ್ಯಗಳನ್ನು ಕೋಠಿಗಟ್ಟಲೆ ಖರೀದಿ ಮಾಡಿ ದಾಸ್ತಾನು ಮಾಡಿದ್ದೇವೆ ಎಂದು ಹೇಳಿದ್ದಾರೆ. ಈಗ ಮಿಲ್ಲುಗಳಲ್ಲಿ ಪ್ಯಾಕು ಮಾಡಿರುವಂತಹ ಅಕ್ಕಿಯ ಕೆಲವು ಸ್ಯಾಂಪಲ್ಲುಗಳನ್ನು ಮಾನ್ಯ ಮಂತ್ರಿಗಳ ಜೊತೆಗೆ ಕಳುಹಿಸಿ ಕೊಡುತ್ತೇನೆ. ಅದನ್ನು ಅವರು ನೋಡಲಿ ಎಂದು. ಇದನ್ನು ನೋಡಿದರೆ ಜನರೇ ಆಗಲಿ ಇದನ್ನು ತಿನ್ನುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಎಮ್ಮೆಗಳಿಗೂ ಅಥವಾ ದನಗಳಿಗೂ ಹಾಕಲು ಸಾಧ್ಯವಿಲ್ಲದಂತಹ ಧಾನ್ಯಗಳನ್ನು ಜನ ತಿನ್ನಬೇಕೆಂದು ಹೇಳುತ್ತಿರುವ ವರ್ತಕರನ್ನು ತಾವು ನೋಡಬೇಕೆಂದು ಇಲ್ಲಿ ತಮ್ಮ ಕಡೆಗೆ ಕಳುಹಿಸುತ್ತೇನೆ. ಇದನ್ನು ಜನ ಹೇಗೆ ತಿಂದುಕೊಂಡು ಹೋಗಿ ಹೇಗೆ ಜೀವನ ಮಾಡಬೇಕೋ ನನಗೆ ಗೊತ್ತಿಲ್ಲ. ಈ ದೇಶದಲ್ಲೇನೋ ವ್ಯವಸಾಯ ಮಾಡುವ ರೈತರಿಗಾಗಿ ಬೇಕಾದಷ್ಟು ಧಾನ್ಯವನ್ನು ಖರೀದಿ ಮಾಡುತ್ತಿದ್ದೇವೆ ಎಂದು ಮಾನ್ಯ ಮುಖ್ಯ ಅರ್ಥ ಮಂತ್ರಿಗಳು ಇಲ್ಲಿ ಹೇಳುತ್ತಿದ್ದಾರೆ. ಖರೀದಿ ಮಾಡತಕ್ಕ ವಿಧಾನ ನೋಡಿದರೆ ಬರಿ ಅಧಿಕಾರಿಗಳ ಸಂಬಳ ಸಾರಿಗೆಗಳಿಗೋಸ್ಕರ ಎಂದು ಕಾಣುತ್ತದೆ. ಇಲ್ಲಿ ಸರಕಾರ ಬಂದು ಹಾಕಿಕೊಂಡಿರುವ ಬಹಳ ಜನ ಬಡವರ ಉದ್ದೇಶಕ್ಕಾಗಿ ಎಂದು ಹೇಳುತ್ತಿದ್ದೇವೋ ಅದಕ್ಕನುಸಾರವಾಗಿ ಬೇಸಾಯ ಮಾಡುವವರಿಗೆ ಅವರ ಪ್ರದೇಶದಲ್ಲಿ ಬೆಳೆದಿದ್ದನ್ನು ಬೇರೆ ಕೊಡುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ಆಲೋಚನೆ ಮಾಡಬೇಕಾಗಿದೆ. ಒಂದೊಂದು ಜಿಲ್ಲೆಯಲ್ಲಿಯೂ ಜಿಲ್ಲಾಧಿಕಾರಿಗಳೆಂದು ಇದ್ದಾರೆ, ಇವರ ಕೈ ಕೆಳಗೆ ಐದಾರು ಜನರು ಅಸಿಸ್ಟೆಂಟ್ ಕಮೀಷನರುಗಳೆನ್ನುವ ಅಧಿಕಾರಿಗಳಿದ್ದಾರೆ. ಇವರೆಲ್ಲರೂ ಆಯಾ ಜಿಲ್ಲೆಯಲ್ಲಿ ಪ್ರವಾಸ ಹೋಗಿ ಅಲ್ಲಿರುವ ಜನತೆಗಳ ಕಷ್ಟ ಸುಖಗಳನ್ನು ತಿಳಿದುಕೊಂಡು ಅಲ್ಲಿ ಕಂಡು ಬರತಕ್ಕ ನ್ಯೂನ್ಯತೆಗಳನ್ನು ತಿದ್ದಲು ಪ್ರಯತ್ನ ಮಾಡಬೇಕೆಂದು ಇದ್ದರೂ ಕೂಡ ಈ ಅಧಿಕಾರಿಗಳು ಯಾವಾಗಲೋ ಒಂದು ಸಾರಿ ಟಿ.ಬಿ. ಗೆ ಬಂದು ಅಲ್ಲಿರುವ ತಾಲ್ಲೂಕು ಆಫೀಸಿಗೆ ಹೋಗಿ ದಸ್ತಾವೇಜುಗಳ ಬಳಿ ಇರುವ ಕಾಗದಗಳು ಎಷ್ಟು ದಿನಗಳಿಂದ ಕೊಳೆಯುತ್ತಿವೆ ಮತ್ತು ಅದಕ್ಕೆ ಕಾರಣವೇನು ಎನ್ನುವುದನ್ನು ನೋಡದೆ ಸುಮ್ಮನೆ ಪ್ರವಾಸ ಹೋಗಿದ್ದೆನೆಂದು ಡೈರಿ ಬರೆದು ಬಂದು ಬಿಡುತ್ತಾರೆ. ಒಂದೊಂದು ತಾಲ್ಲೂಕು ಆಫೀಸಿನಲ್ಲಿಯೂ ಕೂಡ ಹೋಗಿ ನೋಡಿದರೆ ಜನತೆಯ ಕಾಗದಗಳು ಎಷ್ಟೋ ಕಾಲದಿಂದಲೂ ಫೈಸಲಾಗದೆ ಹಾಗೆ ಉಳಿದಿವೆ. ಇದಕ್ಕೆ ಕಾರಣವೇನು ಎನ್ನುವುದನ್ನು ಮೇಲಾಧಿಕಾರಿಗಳು ಹೋಗಿ ತನಿಖೆ ಮಾಡಿಕೊಂಡು ಬರುವುದಿಲ್ಲ. ಹೀಗಾಗಿ ಎಷ್ಟೋ ಫೈಲುಗಳು ಹಾಗೆ ಇತ್ಯರ್ಥವಾಗದೆ ಉಳಿದಿವೆ. ನಮ್ಮ ಭಾಗಲ್ಲಿ ಪ್ಯಾಕೇಜು ಸ್ಕೀಮನ್ನು ಜಾರಿಗೆ ತರಬೇಕೆಂದು ಸರಕಾರದವರು ತಂದಿದ್ದಾರೆ. ಇದು ಜನತೆಗೆ ಬಹಳ ಅನುಕೂಲವಾಗಿದೆ. ಇದರ ಬಗ್ಗೆ ಸ್ಟ್ಯಾಟಿಸ್ಟಿಕ್ಸ್‌ನ್ನು ಕಲೆಕ್ಟು ಮಾಡಬೇಕು.

1740-11

# ಗೋವಾ ಯಾವ ರಾಜ್ಯದಲ್ಲಿ ಸೇರ್ಪಡೆಯಾಗಬೇಕೆಂಬ ಬಗೆಗೆ ಒಂದು ಚಿಂತನೆ

**ಶ್ರೀ ಎ.ಜೆ. ದೊಡ್ಡಮೇಟಿ:** ಸ್ವಾಮಿ, ಈ ನಿರ್ಣಯವನ್ನು ನಾನು ಕೇವಲ ಕನ್ನಡಿಗನೆಂಬ ಭಾವನೆಯಿಂದ ಮಂಡಿಸುತ್ತಾ ಇಲ್ಲ. ನಾನು ಅಥವಾ ನಾವು ಮೊದಲು ಭಾರತೀಯರು, ನಂತರ ಕನ್ನಡಿಗರು ಅಥವಾ ಮಹಾರಾಷ್ಟ್ರೀಯರು ಎಂಬ ದೃಷ್ಟಿಯಿಂದ ವಿಚಾರ ಮಾಡಬೇಕು. ಅರ್ಥಾತ್ ಈ ನಿರ್ಣಯವನ್ನು ಪರಿಶೀಲನೆ ಮಾಡುವಾಗ್ಗೆ ನಾವು ಭಾರತೀಯ ಪ್ರಜೆಗಳು ಎಂಬುವ ಒಂದು ದೃಷ್ಟಿನ್ನು ಮರೆಯದೇ, ವಿಚಾರ ಮಾಡಬೇಕಾಗಿದೆ.

**ಶ್ರೀ ವಿ.ಎಸ್. ಪಾಟೀಲ್:** ಮಾನ್ಯ ಸದಸ್ಯರು ಅದನ್ನು ಸಂಪೂರ್ಣವಾಗಿ ಅರ್ಥ ಮಾಡಿ ಕೊಳ್ಳುವದಕ್ಕೋಸ್ಕರ ಇಂಗ್ಲಿಷ್‌ನಲ್ಲಿ ಮಾತನಾಡಲು ನಾವು ವಿನಂತಿಸುತ್ತೇವೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಅವರು ನನ್ನ ಜೊತೆಯಲ್ಲಿ ಮುಂಬೈ ಅಸೆಂಬ್ಲಿಯಲ್ಲಿ ಇದ್ದರು.

**ಶ್ರೀ ವಿ.ಎಮ್. ಡಿಯೋ (ಗುಬ್ಬಿ):** ತಕ್ಷಣ ಕನ್ನಡ ಭಾಷಣವನ್ನು ಇಂಗ್ಲಿಷ್‌ನಲ್ಲಿ ಭಾಷಾಂತರ ಮಾಡಲು ವ್ಯವಸ್ಥೆ ಮಾಡಬೇಕು.

**ಸಭಾಪತಿ:** ಸಭಾಸದನಕ್ಕೆ ತೊಂದರೆ ಕೊಡಬಾರದು. ಮಾನ್ಯ ಸದಸ್ಯರು ಅವರ ಆಸನದಲ್ಲಿ ಇಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ಸ್ವಾಮಿ, ಭಾರತದ ಹಿತಕ್ಕೆ ಮತ್ತು ಭಾರತದ ಗೌರವಕ್ಕೆ ಭಾರತದ ಒಗ್ಗಟ್ಟಿಗೆ ಮಹಾರಾಷ್ಟ್ರ ಸಭೆಯವರು ನಿರ್ಣಯಿಸಿದ ನಿರ್ಣಯ ಯಾವ ರೀತಿ ಆತಂಕವಾಗಿದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ, ಅದನ್ನು ನಾವು ವಿಚಾರ ಮಾಡಿದ್ದೆ ಆದರೆ.....

**ಅಧ್ಯಕ್ಷರು:** ನನ್ನ ಅಭಿಪ್ರಾಯದ ಪ್ರಕಾರ ಮಹಾರಾಷ್ಟ್ರದವರು ಏನು ಮಾಡಿದ್ದಾರೆ ಎಂಬುದನ್ನು ಹೆಚ್ಚಾಗಿ ವಿವರಿಸುವುದು ಬೇಡ. ಅವರು ಹೇಳಿದ ವಾದ ಸರಿಯೋ ಇಲ್ಲವೋ ಎಂದು ಉತ್ತರ ಕೊಡಲಿಕ್ಕೆ ಅವರು ಇಲ್ಲಿ ಇಲ್ಲ. ಆದ್ದರಿಂದ ನಮ್ಮ ಅಭಿಪ್ರಾಯ ಏನಿದೆ ಅದಕ್ಕೆ ಕುರಿತಾಗಿ ಅಂಕಿಅಂಶ ಹೇಳಬಹುದೇ ವಿನಾ ಮಹಾರಾಷ್ಟ್ರವರು ಏಕೆ ಮಾಡಿದರು ಎಂದು ಹೇಳುವುದು ಬೇಡ. ಎಲ್ಲಿ ಏನು ಸಂಭವಿಸಿದೆ ಎಂಬ ಬಗ್ಗೆ ನಾವು ಕೇವಲ ಪತ್ರಿಕಾ ವರದಿಯ ಮೇಲೆ ಅವಲಂಬನ ಆಗಲೇಬಾರದು. ನಾವು ಘಟನೆಗಳ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡ ನಂತರ ಮುಂದುವರೆಸಬೇಕು.

**ಶ್ರೀ ಎ.ಜೆ. ದೊಡ್ಡಮೇಟಿ:** ನಾನು ಮಹಾರಾಷ್ಟ್ರ ವಿಧಾನ ಮಂಡಲಗಳಿಗೆ ನಮ್ಮ ವಿಧಾನ ಮಂಡಲಕ್ಕೆ ಎಷ್ಟು ಗೌರವವನ್ನು ಹೊಂದಿದ್ದೇನೆಯೋ ಅಷ್ಟೇ ಗೌರವವನ್ನು ಹೊಂದಿದ್ದೇನೆ. ಆ ದೃಷ್ಟಿಯಿಂದ ಆ ವಿಧಾನ ಮಂಡಲಗಳ ಬಗ್ಗೆ ಸಂಪೂರ್ಣ ಗೌರವವನ್ನು ಸೂಚಿಸಿ ಮಹಾರಾಷ್ಟ್ರ ಸರ್ಕಾರ ಯಾವ ಧೋರಣೆಯನ್ನುಸರಿಸಿ ನಿರ್ಣಯವನ್ನು ಮಾಡಿಕೋ ಅದನ್ನು ಈ ನಿರ್ಣಯದಲ್ಲಿ ಸೂಚಿಸಲಾಗಿದೆ. ಮಹಾರಾಷ್ಟ್ರದ ಗೋವೆಯ ಬೇಡಿಕೆಯ ಬಗ್ಗೆ ಅನುಸರಿಸಿದ ನೀತಿಯ ಯಾವ ರೀತಿಯಿಂದಲೂ ಸಮರ್ಥನೀಯವಲ್ಲ, ಇಷ್ಟೇ ಅಲ್ಲ. ಅದು ಸಂಪೂರ್ಣ ಅಸಮರ್ಥನೀಯ ಎಂಬುದನ್ನು ಹೇಳಲಿಕ್ಕೆ ನಾನು ಮೊದಲು ಅಪೇಕ್ಷಿಪಡುತ್ತೇನೆ ಮಹಾರಾಷ್ಟ್ರದ ನಿರ್ಣಯದಲ್ಲಿ ಅವರು ಗೋವೆಯನ್ನು ಈ ಮುಂದಿನ ಕಾರಣಗಳಿಗಾಗಿ ಮಹಾರಾಷ್ಟ್ರದ ನಿರ್ಣಯದಲ್ಲಿ ಅವರು ಗೋವಯನ್ನು ಈ ಮುಂದಿನ ಕಾರಣಗಳಿಗಾಗಿ ಮಹಾರಾಷ್ಟ್ರದಲ್ಲಿ ಸೇರ್ಪಡೆ ಮಾಡಬೇಕೆಂದು ಹೇಳಿದ್ದಾರೆ. ಅದರಲ್ಲಿ ಮುಖ್ಯವಾದ ಕಾರಣವೆಂದರೆ ಗೋವೆ ಆರ್ಥಿಕ ಪುನರುತ್ಥಾನವಾಗಬೇಕಾದರೆ ಮಹಾರಾಷ್ಟ್ರದಲ್ಲಿ ಅದು ಸೇರಬೇಕು. ಗೋವಾ ಭೌಗೋಲಿಕವಾಗಿ ಸಮಗ್ರವಾಗಿ ಅದಕ್ಕೆ ಅವಿಭಾಜ್ಯವಾಗದೆ. ಭಾಷೆಯ ದೃಷ್ಟಿಯಿಂದ ಸಂಸ್ಕೃತಿಯ ದೃಷ್ಟಿಯಿಂದ ಗೋವಾ ಮಹಾರಾಷ್ಟ್ರದೊಡನೆ ಸಮನ್ವಯ ಹೊಂದಿದೆ. ನಾಲ್ಕನೆಯದು ಮೊನ್ನೆ ನಡೆದ ಚುನಾವಣೆಗಳ ಫಲಿತಾಂಶ ಗೋವೆಯು ಮಹಾರಾಷ್ಟ್ರದೊಡನೆ ಸಮ್ಮಿಲನವಾಗುವುದಕ್ಕೆ ಅನುಮತಿಯನ್ನು ಇತ್ತಿದೆ. ಹೀಗೆ ಕೆಲವು ಕಾರಣಗಳನ್ನು ಕೊಟ್ಟು ಅಲ್ಲಿ ಆ ನಿರ್ಣಯನ್ನು ಮಾಡಿದ್ದಾರೆ. ಆ ಕಾರಣಗಳಲ್ಲಿ ಎಷ್ಟು ಶಕ್ತಿ ಇದೆ ಎಂಬುದನ್ನು ನಾವು ನೋಡುವಾ.

ಸ್ವಾಮಿ, ಆರ್ಥಿಕ ಪುನರುತ್ಥಾನದ ಬಗ್ಗೆ ವಿಚಾರಿಸಿದಲ್ಲಿ ಗೋವೆಯ ಒಂದು ವೇಳೆ ಮಹಾರಾಷ್ಟ್ರದಲ್ಲಿ ವಿಲೀನವಾದರೂ ಕೂಡ ಅದರ ಆರ್ಥಿಕ ಪುನರುತ್ಥಾನ ಮಹಾರಾಷ್ಟ್ರ ಸರಕಾರದಿಂದ ಆಗುವಂತಿಲ್ಲ ಅದು ಮಹಾರಾಷ್ಟ್ರಕ್ಕೆ ಅಷ್ಟು ಅಗತ್ಯದ ಕೇಂದ್ರವಾಗಿ ಇಲ್ಲ. ಗೋವೆಯು ತನ್ನ ಆರ್ಥಿಕ ನೀತಿಯನ್ನು ರೂಪಿಸಿಕೊಳ್ಳುವಾಗ ಯಾವ ಪ್ರದೇಶದಲ್ಲಿ ತನ್ನ ವ್ಯಾಪಾರ ಉದ್ಯಮಗಳಿಗೆ ಸ್ವಾಭಾವಿಕ ಅನುಕೂಲವಿದೆ ಎಂಬುದನ್ನು ಅದು ನೋಡಬೇಕಾಗುತ್ತದೆ. ಈ ದೃಷ್ಟಿಯಿಂದ ಪರಿಶೀಲಿಸಿದರೆ ಈ ನಕ್ಷೆಯನ್ನು ನೋಡಿದರೆ ಗೋವೆಯು ಮಹಾರಾಷ್ಟ್ರಕ್ಕೆ ಮತ್ತು ಕರ್ನಾಟಕಕ್ಕೆ ಎಷ್ಟು ಎಷ್ಟು ಹೊಂದಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ (ಹಾಗೆ ಹೇಳಿ ಕೈಲಿ ನಕಾಶೆಯನ್ನು ತೋರಿಸಿದರು) ನೂರಕ್ಕೆ 80 ಅಂಶ ಕರ್ನಾಟಕಕ್ಕೆ ಹೊಂದಿಕೊಂಡು ಕೇವಲ ಶೇಕಡ 2 ರಷ್ಟು ಮಾತ್ರ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿದೆ. ಅದು ರತ್ನಗಿರಿಯ ಮೂಲಕ ಈ ರೀತಿ ಇರುವಾಗ ಮಹಾರಾಷ್ಟ್ರ ಸರಕಾರ ಯಾವ ರೀತಿಯಲ್ಲೂ ಸಹಾಯ ಮಾಡಲು ಸಾಧ್ಯವಾಗಲಾರದು. ನಿಮಗೆ ಸಹಾಯ ಮಾಡುತ್ತೇವೆ ಆರ್ಥಿಕ ಸಹಾಯ ಮಾಡುತ್ತೇವೆ, ಉದ್ಧಾರ ಮಾಡುತ್ತೇವೆ, ಸ್ವರ್ಗ ತರುತ್ತೇವೆ ಎಂದು ಮುಂತಾಗಿ ಮಹಾರಾಷ್ಟ್ರದವರು ಹೇಳಿದ್ದಾರೆ. ಆದರೆ ಅದು ಎಷ್ಟು ಮಟ್ಟಿಗೆ ನಿಜ;

ಹಾಗೂ ಸಾಧ್ಯ ಎಂಬುದನ್ನು ನೋಡಬೇಕಾಗಿದೆ. ಸಹಾಯ ಮಾಡಬೇಕೆಂಬ ಇಚ್ಛೆ ಇದ್ದರೂ ಅವರಿಗೆ ಸಾಧ್ಯವಿಲ್ಲ. ಯಾಕೆಂದರೆ ಗೋವ ಮಹಾರಾಷ್ಟ್ರದ ಪಾಲಿನ ಕೂಡಿ. ಆದರೆ ಕರ್ನಾಟಕದಲ್ಲಿ ಗೋವೆ ವಿಲೀನವಾಗುವುದರಿಂದ ಅದರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ. ಗೋವೆ ಕರ್ನಾಟಕದ ಆಯಕಟ್ಟಿನ ಸ್ಥಳವಾಗಿ ಅದರ ಅನಿವಾರ್ಯ ಬಂದರು ಆಗಿದೆ. ಗೋವೆಯ ಬಂದರು ಪೂರ್ವದಲ್ಲಿ ಕನ್ನಡ ನಾಡಿನ ಸಂಪರ್ಕದ ಬಂದರಾಗಿತ್ತು ಈ ಮೂಲಕ ಕರ್ನಾಟಕ ವ್ಯವಹಾರ ನಡೆಯಬೇಕಾಗಿತ್ತು. ಹಾಗೆ ನಡೆಸಲು ಗೋವೆ ಅತ್ಯಂತ ಅವಶ್ಯಕವಾಗಿತ್ತು. ಇಂದು ಮುಂದೂ ಅನಿವಾರ್ಯ. ಅನಾದಿ ಕಾಲದಿಂದಲೂ ಕೂಡ ಗೋವೆಗೆ ನಮ್ಮ ರಾಜ್ಯದಿಂದ ರಸ್ತೆ ಸಂಪರ್ಕವಿಲ್ಲದಿರುವಾಗಲೂ ಕೂಡ ಎತ್ತು ಕತ್ತೆ ಮೇಲೆ ಮತ್ತು ಗಾಡಿ ಬಂಡಿಗಳಲ್ಲಿ ಗೋವೆಗೆ ಸಾಮಾನು ಸಾಗಾಣಿಕೆ ನಡೆಯುತ್ತಿತ್ತು. ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳ ಮೂಲಕ ಗೋವೆಗೆ ಹೋಗಬೇಕಾಗಿತ್ತು. ಆದರೆ ಮಹಾರಾಷ್ಟ್ರದಿಂದ ಗೋವಾಕ್ಕೆ ಸಾಮಾನು ಸಾಗಾಣಿಕೆ ಇರುತ್ತಿರಲಿಲ್ಲ. ಗೋವೆ ಆರ್ಥಿಕವಾಗಿ ಬೆಳವಣಿಗೆಯಾಗಬೇಕಾದರೆ ಮತ್ತು ಸಾಂಸ್ಕೃತಿಕವಾಗಿ ಅದರ ವೈಶಿಷ್ಟ್ಯ ಉಳಿಸಿಕೊಳ್ಳಬೇಕಾದರೆ ಕರ್ನಾಟಕದೊಡನೆ ಗೋವಾ ವಿಲೀನವಾಗಬೇಕಾದ್ದು ಅವಶ್ಯ. ಮಹಾರಾಷ್ಟ್ರದ ಮಿತ್ರರು ಭೌಗೋಳಿಕವಾಗಿ ಗೋವಾ ಮಹಾರಾಷ್ಟ್ರದ ಅವಿಭಾಜ್ಯ ಪ್ರದೇಶ ಎಂದು ಹೇಳಿದ್ದಾರೆ. ಶೇಕಡ 20 ರಷ್ಟು ಹೊಂದಿದ ಭೂಮಿ ಹೇಗೆ ಅವಿಭಾಜ್ಯವಾಗಬಲ್ಲದು? ಉಳಿದ ಶೇಕಡ 80 ಭಾಗ ಹೊಂದಿದ ಗೋವೆ ಕರ್ನಾಟಕದ ಅವಿಭಾಜ್ಯ ಪ್ರದೇಶವಾಗಿದೆ. ಈ ದೃಷ್ಟಿಯಿಂದ ಅವಿಭಾಜ್ಯವೆಂದು ಮಹಾರಾಷ್ಟ್ರದವರು ಹೇಳುವುದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಆ ವಾದ ನಿಲ್ಲುವುದಿಲ್ಲ. ಇನ್ನು ಭಾಷಾ ದೃಷ್ಟಿಯಿಂದ ಕೊಂಕಣಿ ಭಾಷೆ, ಮರಾಠಿಯ ಉಪಭಾಷೆ ಎಂದು ಮಹಾರಾಷ್ಟ್ರದವರು ಹೇಳುತ್ತಾರೆ. ಅದು ನಿಜವಾಗಿಯೂ ಸರಿಯಲ್ಲ. ಈ ಕಾರಣವನ್ನು ಪ್ರತಿಪಾದಿಸಿ ಕೊಂಕಣಿ ಮಾತನಾಡುವವರು ಮರಾಠಿಯವರು ಎಂದು ಹೇಳುವುದು ಸುತರಾಂ ಸರಿಯಲ್ಲ. 1960ನೆಯ ಇಸವಿ ಅಂಕಿಸಂಖ್ಯೆ ನೋಡಿದರೆ ಕೊಂಕಣಿ ಮಾತನಾಡುವವರು 97,227 ಜನರಿದ್ದು ಮರಾಠಿ ಮಾತನಾಡುವವರು 9,142 ಜನರಿದ್ದಾರೆ. ಹೀಗೆ ಪ್ರತ್ಯೇಕ ಅಸ್ತಿತ್ವ ಹೊಂದಿದ್ದನ್ನು ನೋಡಿದರೆ ಕೊಂಕಣಿ, ಮರಾಠಿಯ ಉಪಭಾಷೆಯಲ್ಲ ಎಂಬುದು ಸ್ವಯಂವೇದ್ಯವಾಗುತ್ತದೆ. ಕೊಂಕಣಿಗೆ ಪ್ರತ್ಯೇಕ ಸಂಸ್ಕೃತಿ ಉಂಟು, ಮಹಾರಾಷ್ಟ್ರದೊಂದಿಗೆ ಗೋವಾ ಸೇರಿದರೆ ಅದು ಉಳಿಯುವುದಿಲ್ಲ ಏಕೆಂದರೆ ಕೊಂಕಣಿ ನಿಲ್ಲಿಸಿ ಮರಾಠಿಯ ಉಪಭಾಷೆ ಎಂದು ಮಹಾರಾಷ್ಟ್ರೀಯರು ಹೇಳುತ್ತಿದ್ದಾರೆ. ಕೊಂಕಣಿ ನಿಲ್ಲಿಸಿ ಮರಾಠಿ ಭಾಷೆಯನ್ನೇ ಉಪಯೋಗಿಸಿ ಎಂದು ನಾಳೆ ಅವರು ಕೊಂಕಣಿಯವರಿಗೆ ಹೇಳಬಹುದು. ಒತ್ತಾಯ ಮಾಡಬಹುದು. ಕೊಂಕಣಿಯು ಕನ್ನಡದ ಉಪಭಾಷೆ ಎಂದು ನಾವು ಹೇಳುವುದಿಲ್ಲ. ಅದು ಸ್ವತಂತ್ರವಾಗಿ ಬೆಳೆದ ಭಾಷೆಯು ಲಿಪಿ ಯೋಚನೆ ಮಾಡಿರಲಿಕ್ಕಿಲ್ಲ, ಅನೇಕರು ಕನ್ನಡವನ್ನು ಕೆಲವರು ದೇವನಾಗರಿಯನ್ನು ಅದರ ಲಿಪಿಯಾಗಿ

ಬಳಸುತ್ತಾರೆ. ಪೋರ್ಚುಗೀಸರು ಬಂದ ಮೇಲೆ ರೋಮನ್ ಲಿಪಿ ಬಳಸಿಕೊಂಡಿದ್ದಾರೆ. ಇದನ್ನೆಲ್ಲಾ ನೋಡಿದರೆ ಜಗತ್ತಿನ ಯಾವ ನ್ಯಾಯಾಸ್ಥಾನದಲ್ಲಿ ನಿರ್ಣಯ ಮಾಡುವುದಾದರೂ ಮರಾಠಿ ಉಪಭಾಷೆ ಕೊಂಕಣಿ ಯಾಗುವುದಿಲ್ಲವೆಂದು ನಿರ್ಣಯಿಸ ಬಹುದಾಗಿದೆ. ಇದಕ್ಕಿರುವ ನಾನಾ ಕಾರಣಗಳನ್ನು ಬೇಕಾದರೆ 4 ಗಂಟೆ ಕಾಲ ನಾನು ಚರ್ಚೆ ಮಾಡಬಹುದು. ಆದರೆ ಈಗ ಅಷ್ಟು ವೇಳೆ ಇಲ್ಲ. ಹೀಗೆ ಭಾಷೆಯ ದೃಷ್ಟಿಯಿಂದ ಸಾಮೀಪ್ಯದ ಸಂಬಂಧವನ್ನು ಹೇಳುವುದು ಸತ್ಯಕ್ಕೆ ದೂರವಾದ ಮಾತು ಇದನ್ನು ಸಭೆಯು ವಿಚಾರ ಮಾಡಬೇಕು. ನಿರ್ವಿಕಾರಿ ದೃಷ್ಟಿಯಿಂದ ಸತ್ಯಶೋಧನೆ ಮಾಡಿದರೆ ಭೌಗೋಳಿಕವಾಗಿಯಾಗಲಿ, ಭಾಷಾದೃಷ್ಟಿಯಿಂದಾಗಲಿ ಗೋವೆ ಮಹಾರಾಷ್ಟ್ರಕ್ಕೆ ಸೇರಬೇಕೆಂಬುದು ಸಾಧ್ಯವಿಲ್ಲದಂಥ ಮಾತು, ಮಹಾರಾಷ್ಟ್ರಕ್ಕೆ ಬೇರೆ ಬೇರೆ ಬಂದರುಗಳುಂಟು ಮುಂಬಯಿ ಅಂಥ ಒಂದು ದೊಡ್ಡ ಬಂದರವಾಗಿದೆ. ಆದ್ದರಿಂದ ಗೋವೆ ಜನರು ಮಹಾರಾಷ್ಟ್ರಕ್ಕೆ ಸೇರಿದರೆ ಮುಂದೆ ಅವರಿಗೆ ನಷ್ಟವೆಂಬುದು ಶತಸಿದ್ಧ. ಯಾಕೆಂದರೆ ತನ್ನ ಬಂದರಿನ ಮೂಲಕವೇ ಗೋವೆಯು ಮುಖ್ಯವಾಗಿ ಸಂಪತ್‌ಸಾಧನೆ ಮಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ಗೋವೆಯವರೇ ಮಹಾರಾಷ್ಟ್ರ ವಿಲೀನವನ್ನು ವಿರೋಧಿಸುತ್ತಾರೆ ಅದು ಮಹಾರಾಷ್ಟ್ರದಲ್ಲಿ ಬಾಲದ ತುದಿ ಆಗುವುದರಿಂದ ಆರ್ಥಿಕವಾಗಿ ದುರ್ಲಕ್ಷ್ಯವಾಗುವುದು ಸಹಜ. ಮುಂಬಯಿಯಂಥ ದೊಡ್ಡ ಬಂದರನ್ನು ಬಿಟ್ಟು ಗೋವೆಗೇಕೆ ಅವರು ಬರುತ್ತಾರೆ ಬರುವುದಿಲ್ಲ. ನಾವು ದಿನಬೇಗಾದರೆ 10 ಮೈಲಿ ದೂರದಲ್ಲಿರುವುದರಿಂದ ಗೋವೆಗೆ ಹೋಗಬೇಕಾಗುತ್ತದೆ. ಆ ಕಾರಣದಿಂದ ಗೋವೆಯವರು ತಮ್ಮ ಆರ್ಥಿಕ ಬೆಳವಣಿಗೆಯನ್ನು ಬಯಸುವುದಾದರೆ ಕರ್ನಾಟಕದಲ್ಲಿ ಉಳಿಯಲು ಅವರು ಮನಸ್ಸು ಮಾಡಬೇಕು. ಆ ದೃಷ್ಟಿಯಿಂದ ಅವರು ವಿಚಾರ ಮಾಡಬೇಕು.

**ಅಧ್ಯಕ್ಷರು:** ಇದ್ದರೆ ನಾನೊಬ್ಬನೇ,

**ಶ್ರೀ ಎ.ಜೆ. ಬೋಡ್ಡಮೋಟೆ:** ಒಬ್ಬ ಪ್ರಮುಖರು, ಬಹಳ ಜವಾಬ್ದಾರಿ ಇದ್ದವರು ಗೋವಾ ಚುನಾವಣೆಯಲ್ಲಿ ಕಾಂಗ್ರೆಸ್‌ ವತಿಯಿಂದ ಪ್ರಚಾರದ ಸಲುವಾಗಿ ಹೋದಾಗ ಅವರ ಭಾಷಣದಲ್ಲಿ ಹೇಳಿದ್ದು ಹೀಗಿದೆ. ವಿಲೀನೀಕರಣಕ್ಕೆ ಬದ್ಧರಾಗಿ ಚುನಾವಣೆಯಲ್ಲಿ ಬೇಡುತ್ತಿದೆ ಈ ಗೋಮಾಂತಕ ಮಹಾರಾಷ್ಟ್ರ ಪಕ್ಷ ಆದರೆ ನನ್ನ ಭಾವನೆಯೂ ಸಹ ಅದೇ. ಗೋವೆ ಮಹಾರಾಷ್ಟ್ರದೊಡನೆ ಒಂದೇ ತೀರಬೇಕು. ಈ ಬಗ್ಗೆ ನಮ್ಮ ನಿಮ್ಮ ನಡುವೆ ಭಿನ್ನ", ಇಂಥ ಮಾತುಗಳು ಇಂದು ಅತ್ಯಂತ ಉಚ್ಚ ಸ್ಥಾನದಲ್ಲಿದ್ದವರ ಬಾಯಿಂದ ಬಂದಿವೆ. ಅದರ ಪರಿಣಾಮ ಏನಾಯಿತು? ಕಾಂಗ್ರೆಸ್ಸಿಗೆ ಮತ ಕೊಡಬೇಕು ಎನ್ನುವವರ ಮೇಲೆ ಎಂದರೆ ಕಾಂಗ್ರೆಸ್ಸಿಗೆ ಮತ ಕೊಟ್ಟರೂ ಅಷ್ಟೇ ಗೋಮಾಂಕ ಮಹಾರಾಷ್ಟ್ರ ಪಕ್ಷಕ್ಕೆ ಮತ ಕೊಟ್ಟರೂ ಅಷ್ಟೆ. ಕಾಂಗ್ರೆಸ್ಸಿನ ಮುಖಂಡರೇ ಹೀಗೆ ಹೇಳುವಾಗ ಕಾಂಗ್ರೆಸ್ಸಿಗೆ ಮತ ಕೊಡುವುದರಲ್ಲಿ ಪ್ರಯೋಜನವಿಲ್ಲ ಅವರಿಗೆ ಮತ ಕೊಟ್ರೂ ಅಷ್ಟೇ, ಗೋಮಾಂತಕ ಮಹಾರಾಷ್ಟ್ರ ಪಕ್ಷಕ್ಕೆ ಮತ ಕೊಟ್ರೂ ಅಷ್ಟೇ, ಕಾಂಗ್ರೆಸ್ಸಿನ ಮುಖಂಡರೇ ಹೀಗೆ ಹೇಳುವಾಗ ಕಾಂಗ್ರೆಸ್ಸಿಗೆ ಮತ ಕೊಡುವುದರಲ್ಲಿ ಪ್ರಯೋಜನವಿಲ್ಲ. ಅವರಿಗೆ ಮತ ಕೊಟ್ಟರೆ ಮಹಾರಾಷ್ಟ್ರದೊಂದಿಗೆ ಸೇರಿಸುತ್ತಾರೆ ಎನ್ನುವ ಭಾವನೆ ಅಲ್ಲಿಯ ಜನರಿಗೆ ಬಂತು. ಕಾರಣ ಅವರು ಯುನೈಟೆಡ್ ಗೋವನ್ಸ್ ಅಥವಾ

ಸ್ವತಂತ್ರರಿಗೆ ಮತವನ್ನು ಕೊಟ್ಟರು. ಈ ರೀತಿ ಮತದಾರರ ಮನಸ್ಸಿನ ಪರಿಣಾಮವಾಯಿತು. ಇದರ ಹೊರತಾಗಿ ಕಾಂಗ್ರೆಸ್ ಸಲುವಾಗಿ ಪ್ರಚಾರಕ್ಕೆ ಗೋವೆಗೆ ಬಂದಂಥ ಮಹಾರಾಷ್ಟ್ರದ ಕಾಂಗ್ರೆಸ್ ಬಂಧುಗಳು ಇಂದು ಗೋವೆಯಲ್ಲಿ ಮುಖ್ಯಮಂತ್ರಿಯಾಗಿ ಇರುವವರು ಮನೆಯಲ್ಲಿಯೇ ಉಳಿದುಕೊಂಡು ಕೆಲಸ ಮಾಡಿದರೆಂದು ಜನ ಆಡುತ್ತಿದ್ದಾರೆ. ಇದರ ಪರಿಣಾಮ ಜನರ ಮನಸ್ಸಿನ ಮೇಲೆ ಏನಾಗಬಹುದು ಎಂಬುದು ತಮಗೆಲ್ಲ ಗೊತ್ತಿದೆ. ಚುನಾವಣೆಯ ರಂಗದಲ್ಲಿ ಯಾವ ರೀತಿ ಇರಬೇಕು ಎನ್ನುವುದು ಎಲ್ಲರಿಗೂ ಗೊತ್ತಿದೆ. ನಾನೂ ಮತ್ತು ಶ್ರೀಕೃಷ್ಣ ಅವರು ಎಷ್ಟೇ ಸ್ನೇಹಿತರಾಗಿದ್ದರೂ ಚುನಾವಣೆಯ ಕಾಲಕ್ಕೆ ಯಾವುದೇ ಕಾರಣಕ್ಕೆ ನಾವೀರ್ವರೂ ಒಂದೇ ಕಾರನ್ನು ಹತ್ತಿದರೆ ಜನರು ದಿಗಿಲುಗೊಳ್ಳುತ್ತಾರೆ. ಚುನಾವಣೆ ರೀತಿ ಅದು, ಇಂಥ ಅನೇಕ ರೀತಿಯ ಕಾರಣದಿಂದ ಅಲ್ಲಿಯ ಕಾಂಗ್ರೆಸ್ ಸೋಲಲು ಪ್ರಬಲ ಕಾರಣವಾಯಿತು. ಅಲ್ಲದೇ ಗೋವಾ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಮೊನ್ನೆ ಬೆಂಗಳೂರಿನಲ್ಲಿ ಬೀಡು ಬಿಟ್ಟಾಗ ಅತ್ಯಂತ ಸ್ಪಷ್ಟವಾಗಿ ಹೇಳಿದ್ದಾರೆ. "ಯಾವ ಕಾರಣಕ್ಕಾಗಿಯೂ ಗೋವೆ ಮಹಾರಾಷ್ಟ್ರದೊಡನೆ ವಿಲೀನವಾಗುವ ಪ್ರಶ್ನೆ ಇಲ್ಲ. ಅದು ಸ್ವತಂತ್ರವಾಗಿ ಉಳಿಯುವುದಕ್ಕೆ ಅವಕಾಶವನ್ನು ಬೇಡುತ್ತೇನೆ. ದಯವಿಟ್ಟು ಹೊರಗಿನ ಯಾವ ರಾಜ್ಯಗಳೂ ನಮ್ಮ ಭಾಗವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಡಿ" ಎಂದು ಹೇಳಿದರು, ಇನ್ನು ಚುನಾವಣೆ ಲೆಕ್ಕದ ವಿವರ ಹೇಗಿದೆ ಎಂಬುದನ್ನು ನೋಡೋಣ.

**ಶ್ರೀ ಸಿಜಿ. ಮಕ್ಕಣ್ಣಪ್ಪ:** ಇದಲ್ಲಿ ಕೇಂದ್ರ ಸಚಿವರು ಒಬ್ಬರು ಹಾಕಿದ್ದಾರೆಂದು ಹೇಳುತ್ತಿದ್ದಾರಲ್ಲಾ?

**ಶ್ರೀ ಎ.ಜೆ. ದೊಡ್ಡಮೇಟಿ:** ಮಾನ್ಯ ನನ್ನ ಸ್ನೇಹಿತರು ಆ ರೀತಿ ಹೇಳಿದರೂ ಅಷ್ಟೇ, ನಾನು ಹೀಗೆ ಹೇಳಿದರೂ ಅಷ್ಟೆ, ಅದಿರಲಿ ಆದರೆ ಚುನಾವಣೆ ಅಲ್ಲಿ ನಡೆದಾಗ ಯಾವ ರೀತಿ ಅಂಕಿ ಅಂಶಗಳಿದ್ದುವು ಎಂಬುದನ್ನು ಸ್ವಲ್ಪ ಮಟ್ಟಿಗೆ ಲೆಕ್ಕ ತೆಗೆದುಕೊಂಡು ನೋಡೋಣ ಚುನಾವಣೆಯಲ್ಲಿ ಒಟ್ಟು ರಿಕಾರ್ಡ ಅದ್ದು 2 ಲಕ್ಷ 49 ಸಾವಿರ ಮತಗಳು, ಅದರಲ್ಲಿ ಆ ರಾಜ್ಯದ ಆಡಳಿತ ಪಕ್ಷಕ್ಕೆ ಮತಗಳು ಸಿಕ್ಕಿದ್ದು 1 ಲಕ್ಷ 9 ಸಾವಿರ. ಅವರು 30 ಸ್ಥಾನಗಳಲ್ಲಿ 14 ಸ್ಥಾನಗಳನ್ನು ಮಾತ್ರ ಪಡೆದಿದ್ದಾರೆ. ಆದರೆ ಮತಗಳ ಲೆಕ್ಕಾಚಾರ ನೋಡಿದರೆ ಹೇಗೆ ಅಷ್ಟು ಮತಗಳನ್ನು ಅವರು ಪಡೆದರು, ಯಾವ ರೀತಿ ಅಷ್ಟು ಸ್ಥಾನಗಳನ್ನು ಹೊಂದಿದರು ಎಂಬುದನ್ನು ಈಗಾಗಲೇ ಬಹಳ ಸೌಮ್ಯವಾಗಿ ಹೇಳಿದ್ದೇನೆ. ಸುಮಾರು 1 ಲಕ್ಷ 40 ಸಾವಿರ ಜನರು ಆಡಳಿತ ಪಕ್ಷದ ವಿರುದ್ಧ ಅರ್ಥಾತ್ ಮಹಾರಾಷ್ಟ್ರದೊಡನೆ ವಿಲೀನವಾಗುವುದಕ್ಕೆ ಅಭಿಪ್ರಾಯಪಟ್ಟಿದ್ದಾರೆ ಈ ಒಂದು ಲಕ್ಷ 9 ಸಾವಿರ ಜನರು ಒಂದು ಲಕ್ಷ 40 ಸಾವಿರ ಜನರ ಅಭಿಪ್ರಾಯನ್ನು ಒಗಲಾಯಿಸಬೇಕೆಂದು ಅಭಿಪ್ರಾಯಪಡುವುದು ಯಾವ ಪ್ರಜಾಪ್ರಭುತ್ವ ರಾಜ್ಯದ ಲಕ್ಷಣವೆಂಬುದನ್ನು ನಾವು ವಿಚಾರ ಮಾಡಬೇಕಾಗಿದೆ.

ಇನ್ನು ಮಹಾರಾಷ್ಟ್ರ ವಿಧಾನ ಮಂಡಲಗಳ ನಿರ್ಣಯ ವಿಚಾರದಲ್ಲಿ ಗೋವಾದ ಮುಖಂಡರ ಮನಸ್ಸಿನ ಮೇಲೆ ಏನೇನು ಪರಿಣಾಮವಾಗಿದೆ ಎಂಬುದನ್ನು ಮಾನ್ಯ ಸದಸ್ಯರು ಈಗ ನೋಡಬಹುದು. ನಿನ್ನೆ ಹಿಂದೂ ಪತ್ರಿಕೆಯಲ್ಲಿ ಈ ರೀತಿ ಸುದ್ದಿ ಬಂದಿದೆ. ಗೋವಾ ಯುವಕ ಲೀಗಿನವರು ಮಹಾರಾಷ್ಟ್ರಕ್ಕೆ ಒಂದು ತಂತಿಯನ್ನು ಕಳುಹಿಸಿದ್ದಾರೆ ದಯಮಾಡಿ ಸದಸ್ಯರು ಕೇಳಬೇಕು ಅದು ಈ ರೀತಿ ಇದೆ.

ಮಹಾರಾಷ್ಟ್ರದ ನಿರ್ಣಯ ಈ ರೀತಿ ಇದೆ. ಈ ಪ್ರತಿಕ್ರಿಯೇಯನ್ನು ವಿಚಾರ ಮಾಡಿಯೇ ಇಲ್ಲ. ನಮ್ಮ ನೆರೆಯ ಬಂಧುಗಳು ಇನ್ನು ಐತಿಹಾಸಿಕ ಕಾರಣವೆಂದರೆ ಯಾವ ಇತಿಹಾಸವೂ ಮಹಾರಾಷ್ಟ್ರವನ್ನು ಬೆಂಬಲಿಸುವಂಥ ಘಟನೆಗಳು ಗೋವಾದಲ್ಲಿ ಈ ಮೊದಲು ನಡೆಯಲಿಲ್ಲ. ಮಹಾರಾಷ್ಟ್ರ ಮತ್ತು ಗೋವಾ ನಡುವೆ ಯಾವ ಇತಿಹಾಸ ಸಂಬಂಧೂ ಇಲ್ಲ. ತದ್ವಿರುದ್ಧವಾಗಿ ಕರ್ನಾಟಕಕ್ಕೆ ಮತ್ತು ಗೋವಾಕ್ಕೆ 2 ಸಾವಿರ ವರ್ಷಗಳ ಸಂಬಂಧವಿದೆ ಇತಿಹಾಸವಿದೆ ಅದನ್ನು ನಾನು ಹೇಳುತ್ತೇನೆ. ಏನೆಂದರೆ ಐತಿಹಾಸಿಕ ದೃಷ್ಟಿಯಿಂದ ಇದನ್ನು ವಿಚಾರ ಮಾಡುವುದಾದರೆ 1190 ರಿಂದ 1312 ರವರೆಗೆ ಕದಂಬರು, 1312 ರಿಂದ 1370ರ ವರೆಗೆ ಮಲ್ಲಿಕಾಪೂರ್, 1370 ರಿಂದ 1498ರ ವರೆಗೆ ವಿಜಯನಗರದವರು, 1498 ರಿಂದ 1510 ರ ವರೆಗೆ ಬಿಜಾಪೂರ ಅದಿಲಷಾಹಿಗಳವರು, 1510 ರಿಂದ ಪೋರ್ಚುಗೀಸರು, ಅಲ್ಲಿ ರಾಜ್ಯಾಡಳಿತ ಮಾಡಿದರು. ಈ ಮಧ್ಯ ನಮ್ಮೆಲ್ಲರಿಗೂ ಪೂಜ್ಯರಾಗಿದ್ದಂಥ ಶ್ರೀ ಶಿವಾಜಿ ಮಹಾರಾಜರು ಒಂದು ಸಾರಿ ಗೋವಾಕ್ಕೆ ಬಂದು ಹೋದರೆಂಬುದು ನಿಜ. ಇಷ್ಟು ಸಂಪರ್ಕ ಇತಿಹಾಸ ಬಿಟ್ಟರೆ ಮತ್ತೆ ಇನ್ನೇನೂ ಇಲ್ಲ. ಇವರು ಅಲ್ಲಿಗೇಕೆ ಬಂದರು ಎಂಬುದು ನನಗೆ ಗೊತ್ತಿಲ್ಲ. ಒಂದು ಸಾರಿ ಅಲ್ಲಿಗೆ ಅವರು ಬಂದು ಹೋದರು ಎಂಬ ಅಂಶವೊಂದನ್ನುಳಿದು ಇನ್ನು ಯಾವ ಇತಿಹಾಸದ ಸಂಬಂಧವೂ ಮಹಾರಾಷ್ಟ್ರದ್ದು ಗೋವಾದೊಡನೆ ಇಲ್ಲ. ಆದರೆ ಗೋವೆ ಮಹಾರಾಷ್ಟ್ರದಲ್ಲಿಯೇ ಉಳಿಯಬೇಕೆಂಬ ಅವರ ಹಟವನ್ನು ನೋಡಿದಲ್ಲಿ ಅದು ಒಂದು ಆಕ್ರಮಣಕಾರೀ ಪ್ರವೃತ್ತಿಯೇ ಹೊರತು ಮತ್ತೆ ಏನೂ ಅಲ್ಲ. ನಿನ್ನೆ ವಿಧಾನ ಪರಿಷತ್ತಿನಲ್ಲಿ ಮಾತನಾಡುತ್ತಾ ನಮ್ಮ ಮುಖ್ಯಮಂತ್ರಿಗಳು ಈ ಬಗ್ಗೆ ಇಷ್ಟು ಏಕೆ ಅವಸರ ಅವರು ಮಾಡುವುದು ನನಗೆ ತಿಳಿಯುವುದಿಲ್ಲವೆಂದು ಹೇಳಿದ್ದಾರೆ. ಆ ವಸರದ ಬಗ್ಗೆ ನಾನು ತಿಳಿದ ಕೆಲವು ಅಂಶಗಳನ್ನು ಹೀಗೆ ಹೇಳಬಯಸುತ್ತೇನೆ. ಈ ರೀತಿಯಾದ ಅವಸರಕ್ಕೆ ಎರಡು ಪ್ರಬಲವಾದಕಾರಣಗಳಿವೆ. ದಿವಂಗತ ಪಂಡಿತ ಜವಾಹರ್‌ಲಾಲ್ ನೆಹರೂ ಅವರ ಅಭಿಪ್ರಾಯಕ್ಕೆ ಅನುಸರಿಸಿ ಗೋವಾದವರು 10 ವರ್ಷ ಸ್ವತಂತ್ರವಾಗಿರಿಸಿದರೆ ನಂತರ ಯಾವ ಕಾರಣದಿಂದಲೂ ಗೋವೆ ತನಗೆ ದೊರಕುವುದಿಲ್ಲವೆಂಬುದು ಒಂದು ಕಾರಣವಾದರೆ ಇನ್ನೂ ಒಂದು ಅತ್ಯಂತ ಪ್ರಬಲವಾದ ಕಾರಣವಿದೆ ಗೋವಾ ಈಗ ಪಡೆದುಕೊಂಡರೆ ಬೆಳಗಾವಿ ಮತ್ತು ಕಾರವಾರ ಭಾಗಗಳನ್ನು ಕೇಳಲಿಕ್ಕೆ ಹೆಚ್ಚಿನ ಬಲ ಬರುತ್ತದೆ ಎಂಬುದು ಎರಡನೆಯ ಕಾರಣ. ಸರ್ಕಾರದವರು ಈ ಎರಡನೆ ಕಾರಣದ ಬಗ್ಗೆ ಹೆಚ್ಚು ಗಮನ ಕೊಟ್ಟ

ಮೊದಲು ಗೋವಾ ಭಾಗವನ್ನು ಕಾಯ್ದುಕೊಂಡು ಬೆಳಗಾವಿ ಕಾರವಾರ ಭಾಗಗಳನ್ನು ರಕ್ಷಿಸುವುದಕ್ಕೆ ಪ್ರಯತ್ನ ಪಡಬೇಕು. ಇಲ್ಲದಿದ್ದರೆ ಕರ್ನಾಟಕಕ್ಕೆ ಬಹಳ ತೊಂದರೆಯಾಗುತ್ತದೆಂಬುದನ್ನು ನಮ್ಮ ಸರ್ಕಾರದವರು ಈಗಲೇ ಗಂಭೀರವಾಗಿ ವಿಚಾರ ಮಾಡುವುದು ಅಗತ್ಯ. ಹೀಗ ಗಂಭೀರ ವಿಚಾರ ಮಾಡಿ ನೋಡಿ ಗೋವೆಯ ರಕ್ಷಣೆಯ ಬಗ್ಗೆ ಸರಕಾರ ಸಿದ್ಧವಾಗಿರಬೇಕು. 7 ಲಕ್ಷ ಜನಸಂಖ್ಯೆ 1,312 ಚದುರ ಮೈಲಿಗಳಷ್ಟು ವಿಸ್ತೀರ್ಣ ಇರತಕ್ಕ ಗೋವೆ ಭೌಗೋಲಿಕವಾಗಿ ಕರ್ನಾಟಕದ ಅವಿಭಾಜ್ಯ ಭುಜ ಸ್ಥಾನದಲ್ಲಿದ್ದು ನಮ್ಮ ನಾಡಿಗೆ ಭೂಷಣಪ್ರಾಯವಾಗಿರುತ್ತದೆ. ಗೋವೆ ಒಂದು ಮಾರ್ಗದರ್ಶನ ಪಡೆಯುವಂಥ ರಾಜ್ಯವಾಗಿರುತ್ತದೆ. ಏಕೆಂದರೆ ಅಲ್ಲಿ ವಿಶಾಲ ಸಂಸ್ಕೃತಿ ಇದೆ. ಅನೇಕ ಮಹತ್ವ ಸಂಪನ್ಮೂಲಗಳು ಇವೆ. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಸಹ ಗೋವೆಯನ್ನು ನಾವು ಉಳಿಸಬೇಕು. ಬೆಳೆಸಬೇಕೆ ಹೊತ್ತು ಅದನ್ನು ಈಗಲೇ ಸಮುದ್ರಕ್ಕೆಸೆದು ಸರ್ವನಾಶಕ್ಕೆ ಗುರಿ ಮಾಡಬಾರದೆಂಬುದೇ ನಮ್ಮ ಮನೋಭಾವ, ಅದು ವಿಲೀನವಾಗುವುದಾದರೆ ನಮ್ಮ ಕರ್ನಾಟಕದಲ್ಲಿ ಸೇರ್ಪಡೆಯಾಗಲಿ ಅದರ ನಿಜ ಕಲ್ಯಾಣವಿದೆ ಗೋವಾವನ್ನು ಮಹಾರಾಷ್ಟ್ರದಲ್ಲಿ ಕೂಡಿಸಿದರೆ ಗೋವೆಯ ಆರ್ಥಿಕ ದೃಷ್ಟಿಯಿಂದ ನೀರಸವಾಗುತ್ತದೆ ಸಾಂಸ್ಕೃತಿಕ ದೃಷ್ಟಿಯಿಂದ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತದೆ ಈ ಎಲ್ಲಾ ಮಾತುಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ ಗೋವಾ ಮಹಾರಾಷ್ಟ್ರಕ್ಕೆ ಸೇರುವ ಬಗ್ಗೆ ಯಾವ ಸಮರ್ಥನೀಯ ಕಾರಣವೂ ಇರುವುದಿಲ್ಲ. ಈಗಾಗಲೇ ಗೋವಾ ಜನರು ಈ ವಿಚಾರದಲ್ಲಿ ಬಹಳ ಗಾಬರಿಯಾಗಿದ್ದಾರೆ. ಗೋವಾ ಮುಖಂಡರಾದ ಡಾ: ಅರೇಲ್ ಮುಂಡೋಕರು ಈ ವಿಷಯದ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಈ ಸಭೆಯ ಅಧ್ಯಕ್ಷರ ಅಪ್ಪಣೆ ಪಡೆದು ಓದಿ ಹೇಳುತ್ತೇನೆ. ಅದು ಈ ರೀತಿ ಇದೆ.

ಗೋವಾ ಜನರ ಮನೋಭಾವನೆಯನ್ನು ಕೆಡಿಸಿದಂತೆ ಮಹಾರಾಷ್ಟ್ರದವರು ಈ ಬಗ್ಗೆ ವಿಚಾರ ಮಾಡಬೇಕಾಗಿತ್ತು. ಮಹಾರಾಷ್ಟ್ರದಲ್ಲಿ ನಿಶ್ಚಲವಾದ ನ್ಯಾಯ ಬುದ್ಧಿ ಇದ್ದರೆ ಅವರು ಗೋವಾ ಪ್ರಶ್ನೆಯನ್ನು ಈಗ ಎತ್ತಕೂಡದು, ಮಹಾರಾಷ್ಟ್ರದವರ ಕೀರ್ತಿ ಇನ್ನೂ ಬೆಳೆಯಬೇಕು. ಈ ದೃಷ್ಟಿಯಿಂದ ಅವರು ಇದನ್ನು ವಿಚಾರ ಮಾಡಬೇಕು. ಮಹಾರಾಷ್ಟ್ರದವರು ನನ್ನ ಮಿತ್ರರಿದ್ದಾರೆ. ಮಹಾರಾಷ್ಟ್ರಕ್ಕೆ ನನ್ನ ಮಗಳನ್ನು ಕೊಟ್ಟಿದ್ದೇನೆ. ಅಲ್ಲಿ ನನ್ನ ಸಂಬಂಧವಿದೆ.

**ಶ್ರೀ ಸಿ.ಕೆ. ಮುಕ್ಕಣ್ಣಪ್ಪ:** ಸ್ವಾಮಿ ಹೆಣ್ಣು ಕೊಟ್ಟು ತಂದರೆ ರಾಜ್ಯವನ್ನು ಬದಲಾಯಿಸುತ್ತಾರೆಯೇ?

**ಶ್ರೀ ಅ.ಜೆ. ದೊಡ್ಡಮೇಟಿ:** ಮಹಾರಾಷ್ಟ್ರ ಮಾನಸಿಕವಾಗಿ ಇನ್ನೂ ಎತ್ತರವಾಗಿ ಬೆಳೆಯಬೇಕು. ಅದು ಇನ್ನೂ ಉನ್ನತವಾಗಿ ವಿಚಾರಿಸಬೇಕು. ಮಹಾರಾಷ್ಟ್ರದವರು ತಮ್ಮ ಘನವೆತ್ತ ಹೆಸರನ್ನು ಸಾರ್ಥಕ ಮಾಡಿಕೊಳ್ಳಬೇಕು. ಆ ರೀತಿ ಆಗಬೇಕಾದರೆ ಅವರು ಒಂದು ವಿಶಾಲ ಮನಸ್ಸು ಮಾಡಬೇಕು. ಇಲ್ಲದೇ ಹೋದರೆ ನಿಶ್ಚಯವಾಗಿ ಮಹಾರಾಷ್ಟ್ರದವರು ಅವರ ಹೆಸರಿನ ಸಾರ್ಥಕತೆಯನ್ನು ಪಡೆಯುವುದಿಲ್ಲವೆಂದು ನಾನು ಹೇಳುತ್ತೇನೆ. ಈ

ದೃಷ್ಟಿಯಿಂದ ಅವರು ವಿಚಾರ ಮಾಡಿದಾಗ್ಗ ನಾವು ಅದನ್ನು ಅನುಕರಣೆ ಮಾಡುತ್ತೇವೆ ಇನ್ನು ನಮ್ಮ ವಾದ ಸಮರ್ಥನೆಯನ್ನು ನಾನು ಸಿದ್ಧಪಡಿಸುವಲ್ಲಿ ಐತಿಹಾಸಿಕ ದೃಷ್ಟಿಯಿಂದ ಯಾವ ಯಾವ ರೀತಿಯಿಂದ ಗೋವಾ ಕರ್ನಾಟಕಕ್ಕೆ ಸಂಬಂಧ ಇದೆ ಎನ್ನುವುದನ್ನು ನಾನು ಹೇಳಿದ್ದೇನೆ. ಭೌಗೋಳಿಕವಾಗಿ ನಕ್ಷೆಯಲ್ಲಿ ತೋರಿಸಿರುವ ರೀತಿಯಲ್ಲಿ ಗೋವಾ 100ಕ್ಕೆ 80 ಭಾಗ ಕರ್ನಾಟಕಕ್ಕೆ ಹೊಂದಿಕೊಂಡಿದೆ. 20 ಭಾಗ ಮಾತ್ರ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿದೆ. ಆರ್ಥಿಕ ದೃಷ್ಟಿಯಿಂದ ಕೂಡಾ ಗೋವಾ ಕರ್ನಾಟಕದೊಡನೆ ವ್ಯಾಪಾರೋದ್ಯಮವನ್ನು ಎಂದಿನಿಂದಲೂ ಬೆಳೆಸಿಕೊಂಡಿದೆ. ಗೋವಾದಲ್ಲಿ ನನ್ನ ಲಿಪಿಗಳಿವೆ, ನನ್ನ ಮಿತ್ರರು ಅಲ್ಲಿ ಯಾವ ಯಾವ ಶಾಲೆಗಳು ಎಷ್ಟೆಷ್ಟು ಇವೆ ಎಂದು ಕೇಳಿದರು. ಅದರ ಸಂಖ್ಯೆಯನ್ನು ಬೇಕಾದರೆ ಹೇಳುತ್ತೇನೆ. ಇತ್ತೀಚೆಗೆ ಹೊಸ ಸರ್ಕಾರ ಬಂದ ಮೇಲೆ ಬದಲಾವಣೆಯಾಗಿದೆಯೋ ಏನೋ ನನಗೆ ಗೊತ್ತಿಲ್ಲ ಸ್ವಾಭಾವಿಕವಾಗಿ ಅವರು ತನಗೆ ಅನುಕೂಲವಾಗುವಂತೆ ಮಾಡಿಕೊಂಡಿರಬಹುದು. ತತ್ ಪೂರ್ವದಲ್ಲಿ 1959ನೆಯ ಇಸವಿಯ ಅಂಕಿ ಸಂಖ್ಯೆಗಳ ಪ್ರಕಾರ ಪೋರ್ಚುಗೀಸ್ ಭಾಷೆಯನ್ನು ಕಲಿಯತಕ್ಕ ವಿದ್ಯಾರ್ಥಿಗಳ ಸಂಖ್ಯೆ 19, 253, ಇಂಗ್ಲಿಷ್ ಕಲಿಯತಕ್ಕ ವಿದ್ಯಾರ್ಥಿಗಳ ಸಂಖ್ಯೆ 12,865 ಮರಾಠಿಯನ್ನು ಕಲಿಯತಕ್ಕ ವಿದ್ಯಾರ್ಥಿಗಳ ಸಂಖ್ಯೆ 13,314, ಕನ್ನಡವನ್ನು ಕಲಿಯತಕ್ಕವರ ಸಂಖ್ಯೆಯನ್ನು ಈಗ ನಾವು ತೆಗೆದುಕೊಂಡು ಬರಬೇಕಾಗಿದೆ. ಇಲ್ಲಿ ನಾನು ಭಾಷಾ ದೃಷ್ಟಿಯಿಂದ ಮಾತನಾಡುವುದಿಲ್ಲ.

(MR. VICE CHAIRMAN (Sri P.F.D'Mellow) in the Chair)

**ಶ್ರೀ ಎ.ಜೆ. ದೊಡ್ಡಮೇಟಿ:** ನಮ್ಮ ಮಹಾರಾಷ್ಟ್ರ ಸ್ನೇಹಿತರು ಬಾಧಿಸಿದಂತೆ ಇಂದೇ ನಾವು ಗೋವೆಯನ್ನು ಕರ್ನಾಟಕದೊಳಗೆ ವಿಲೀನವಾಗಬೇಕು ಎಂದು ನಾವು ಕೇಳುವುದಿಲ್ಲ. ನಮ್ಮ ನಿರ್ಣಯ ಸ್ಪಷ್ಟವಾಗಿದೆ. ಇನ್ನು 10 ವರ್ಷಗಳವರೆಗೆ ಗೋವಾ ತಾನೇ ತಾನಾಗಿ ಬೆಳೆಯಬೇಕು, ಅದು ತನ್ನ ಅಭಿವೃದ್ಧಿಯನ್ನು ಹೊಂದಬೇಕು. ಅಭಿವೃದ್ಧಿಯನ್ನು ಹೊಂದಿದ ನಂತರ ಅದು ಮಹಾರಾಷ್ಟ್ರಕ್ಕೆ ಸೇರಬೇಕೋ, ಕರ್ನಾಟಕಕ್ಕೆ ಸೇರಬೇಕೋ ಅಥವಾ ಅದು ಸ್ವತಂತ್ರವಾಗಿ ಉಳಿಯಬೇಕೋ ಎಂದು ಮೂರು ಪ್ರಶ್ನೆಗಳಲ್ಲಿ ಅವರು ತಮಗೆ ತೋರಿದ್ದನ್ನು ಅರಿಸಿಕೊಳ್ಳಬೇಕು. ಇದು ಬಲಾತ್ಕಾರದ ಪ್ರಶ್ನೆಯಲ್ಲ ಬಲಾತ್ಕಾರವನ್ನು ನಾವು ಮಾಡುವುದಿಲ್ಲ. ಬಲಾತ್ಕಾರ ತತ್ವವನ್ನು ನಾವು ಸಂಪೂರ್ಣವಾಗಿ ವಿರೋಧಿಸುತ್ತೇವೆ. ಇಂದು ಅವರನ್ನು ಯಾರು ಬಲಾತ್ಕಾರ ಮಾಡುತ್ತಾರೆ ಎನ್ನುವುದನ್ನು ತಜ್ಞರೇ ನೋಡಿಕೊಳ್ಳಬೇಕು. ಐತಿಹಾಸಿಕವಾಗಿ ಹೇಳುವುದಾದಲ್ಲಿ ಇನ್ನೊಂದು ದಾಖಲೆ ಇದೆ. ಕೇಂದ್ರ ಸರ್ಕಾರದವರು ಸ್ಟೋರಿ ಆಫ್ ಗೋವಾ ಎನ್ನುವ ಒಂದು ಪುಸ್ತಕವನ್ನು ಪ್ರಸಿದ್ಧ ಮಾಡಿದ್ದಾರೆ ಅದರಲ್ಲಿ ಗೋವಾ ಚರಿತ್ರೆಯನ್ನು ಬರೆದಿದ್ದಾರೆ. ಅದರಲ್ಲಿ ಒಂದು ಮಾತು ಇದೆ. ಅದು ಈ ರೀತಿ ಇದೆ.

ಗೋವಾದ ಪೂರ್ವ ಜನಾಂಗವು ದ್ರಾವಿಡನ್ ಜನಾಂಗದ ಅಂಗವಿದ್ದು ಅದನ್ನು ಕನ್ನಡಿಗ ಎಂದು ಕರೆಯುತ್ತಾರೆ. ಎಂದು. ಇಂಥಾ ಅನೇಕ ಉದಾಹರಣೆಳನ್ನು ಇನ್ನು ಕೊಡಬಹುದು. ಆದರೆ ಆ ಬಗ್ಗೆ ನಮ್ಮವರು ಸರಿಯಾಗಿ ಶೋಧಿಸಿಲ್ಲ ಹಾಗೂ ಒಳ್ಳೆಯ ಪ್ರಚಾರ ಮಾಡಿಲ್ಲ. ಇದು ಪ್ರಚಾರಯುಗ, ಈ ಪ್ರಚಾರ ಯುಗವನ್ನು ಅನುಸರಿಸಿ ನಾವು ನಡೆಯುತ್ತಿಲ್ಲ. ಈ ಆಲಸ್ಯ ಒಳ್ಳೆಯದೋ ಕೆಟ್ಟದೋ ಅದನ್ನು ಸರ್ಕಾರ ನಿರ್ಣಯ ಮಾಡಬೇಕು. ಅಂದೇ ನಮ್ಮ ಬೇಡಿಕೆ ಹಿಂದಿನ ಬೆಂಚಿನಲ್ಲಿ ಕುಳಿತುಕೊಂಡಿದೆ. ಅದು ಸ್ವಾಭಾವಿಕ. ಅನೇಕ ವೇಳೆ ಬಹಳ ಜೊಬ್ಬಾಟ ಮಾಡುವವರು ಗದ್ದಲಾಡುವವರು ಮುಂದೆ ಬರುತ್ತಾರೆ. ದೊಡ್ಡವರಾಗುತ್ತಾರೆ, ಲಾಭವನ್ನು ಹೊಂದುತ್ತಾರೆ. ಸತ್ಯವಂತರು ನೀತಿವಂತರು ಹಿಂದೆ ಉಳಿಯುತ್ತಾರೆ. 'ಸತ್ಯಮೇವ ಜಯತೇ' ಎನ್ನುವ ಹಾಗೆ ಕೊನೆಗೆ ಸತ್ಯಕ್ಕೆ ಜಯದೊರೆಯುತ್ತದೆ. ಗೋವಾ ಜನತೆಯ ಅಭಿವೃದ್ಧಿಯಾಗಬೇಕೆಂಬುದೇ ನಮ್ಮ ನಿರ್ಣಯದ ಅರ್ಥಗರ್ಭಿತ ಇಷ್ಟೆ ಗೋವಾ ಜನರ ಮನೋ ಅಭಿಪ್ರಾಯಕ್ಕೆ ಮನ್ನಣೆ ಕೊಡಲೇಬೇಕು. ಈ ಹಿನ್ನೆಲೆಯಲ್ಲಿ ವಿಷಯಗಳನ್ನು ನಾವು ಇಲ್ಲಿ ವಿಚಾರ ಮಾಡಬೇಕಾಗಿದೆ.

ಇದುವರೆಗೂ ನಾನು ಗೋವೆ ವಿಸ್ತೀರ್ಣ ಮತ್ತು ಜನಸಂಖ್ಯೆ ವಿಚಾರ ಹೇಳಿದ್ದೆ ಆ ಜನ ಸಂಖ್ಯೆಯಲ್ಲಿ ಕೊಂಕಣಿಯವರು ಎಷ್ಟು, ಮರಾಠಿಗಳು ಎಷ್ಟು ಎನ್ನುವುದನ್ನೂ ಸಹ ಹೇಳಿದೆ. ಇನ್ನು ಅದರ ಭೌಗೋಳಿಕ ಸಂಬಂಧವನ್ನೂ ತೋರಿಸಿದೆ, ಆರ್ಥಿಕ ಸಂಬಂಧವನ್ನು ವಿವರಿಸಿದೆ-ಎಲ್ಲ ರೀತಿಯಿಂದಲೂ ಅದು ಕರ್ನಾಟಕಕ್ಕೆ ಹೆಚ್ಚು ಸಂಬಂಧವಿದೆ. ಆರ್ಥಿಕ ಸಂಬಂಧವನ್ನು ವಿವರಿಸಿದೆ-ಎಲ್ಲ ರೀತಿಯಿಂದಲೂ ಅದು ಕರ್ನಾಟಕಕ್ಕೆ ಹೆಚ್ಚು ಸಂಬಂಧವಿದೆ. ಅದು ಎಲ್ಲಿ ವಿಲೀನವಾಗಬೇಕು ಎನ್ನುವ ಪ್ರಶ್ನೆಯನ್ನು ನ್ಯಾಯ ಬುದ್ಧಿಯಿಂದ, ಸತ್ಯ ಮಾತಿನಿಂದ ವಿಚಾರ ಮಾಡಿದರೆ ಅದು ಕರ್ನಾಟಕದೊಳಗೆ ವಿಲೀನವಾಗುವುದು ಯೋಗ್ಯವೆಂದು ಯಾವ ನಿಷ್ಪಕ್ಷೀಯನ್ನೇ ಆಗಲೀ ನಿರ್ಣಯ ಕೊಡಬಹುದು. ಇಷ್ಟು ಯೋಗ್ಯವಾದ ಸಂಬಂಧ ಪ್ರಬಲ ಕಾರಣಗಳಿದ್ದರೂ ಅದು ಕರ್ನಾಟಕದೊಳಗೆ ಈಗಲೇ ಸೇರಬೇಕೆಂದು ನಾವು ಒತ್ತಾಯಪಡಿಸುವುದಿಲ್ಲ. ಏಕೆಂದರೆ ನಾವು ನಮ್ಮ ರಾಜ್ಯವನ್ನು ವಿಸ್ತಾರ ಮಾಡುವುದಕ್ಕೆ ಅಪೇಕ್ಷೆಪಡುವುದಿಲ್ಲ. ಯಾವ ರಾಜ್ಯವನ್ನು ನಾವು ತೆಗೆದುಕೊಳ್ಳಬೇಕಾದರೂ ಆ ರಾಜ್ಯಾಭಿಪ್ರಾಯ ಬಹಳ ಮುಖ್ಯ. ಹಾಗೆ ಗೋವಾ ರಾಜ್ಯ ಬೆಳೆಯಲಿ, ದೊಡ್ಡದಾಗಲಿ ತನ್ನದೇ ಕರ್ನಾಟಕದವರು ಮಹಾರಾಷ್ಟ್ರದೊಡನೆ ಸಂಪರ್ಕವಿಟ್ಟುಕೊಳ್ಳಲಿ, ಮಹಾರಾಷ್ಟ್ರದವರು ಕರ್ನಾಟಕದವರೊಡನೆ ಸಂಪರ್ಕವನ್ನಿಟ್ಟುಕೊಳ್ಳಲಿ ಸದ್ಭಾವನೆ ಬೆಳೆಯಲಿ ನ..ೃ ಸದ್ಯಕ್ಕೆ ಗೋವೆಯ ತಂಟ..‌ ಇಳಿಯುವುದು ಬೇಡ, ಪಾಪ ನಿನ್ನೆ ಮೊನ್ನೆಮುಕ್ತವಾದ ಎಳೆಯ ಗೋ.ವೆಯ ಬಗ್ಗೆ ಬಲಾತ್ಕಾರ ಮಾಡಿದಲ್ಲಿ ಕೈ ಹಿಡಿದು ಎಳೆದಾಡಿದಲ್ಲಿ ಅದು ಪೋಲೀಸ್ ಇಲಾಖೆಗೆ ಒಪ್ಪಿಸುವ ಪ್ರಕರಣವಾಗುತ್ತದೆ ಅರ್ಥಾತ್ ಬಲಾತ್ಕಾರದ ಮಗುವೆ ಬೇಡವೆಂದು ನಾನು ಈಗ ಹೇಳುತ್ತೇನೆ. ..ಈಗ ಮಹಾರಾಷ್ಟ್ರ ಸರ್ಕಾರದ ನೀತಿ ಈ ರೀತಿಯದಾಗಿದೆ.

ಇದನ್ನು ಪವಿತ್ರ ಪ್ರಜಾಪ್ರಭುತ್ವ ಒಪ್ಪುವುದೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇದನ್ನು ವಿಚಾರ ಮಾಡಬೇಕಾದುದು ಕೇಂದ್ರ ಸರ್ಕಾರ. ಕೇಂದ್ರ ಸರ್ಕಾರ ಇಂತಹ ಬಲತ್ಕಾರಕ್ಕೆ ಬಾಕಿ ಪುನರಾಲೋಚನೆ ಮಾಡಬೇಕೆಂದು ನಿರ್ಣಯಕ್ಕೆ ಬಂದಿರುವುದರ ಕಾರಣ ನಮಗೇನೂ ತಿಳಿಯಲಾರದಂಥ ವಿಷಯವಾಗಿದೆ. ಬಹಳ ದೊಡ್ಡ ಸ್ಥಾನದಲ್ಲಿ ಮಹಾರಾಷ್ಟ್ರದ ಪ್ರಮುಖರು ಇರುವುದು ಕಾರಣವೋ ಇವೆಲ್ಲವನ್ನು ನಾವು ವಿಚಾರ ಮಾಡಬೇಕು. ಉಪಾಯ ಹುಡುಕಬೇಕು ಅದಿಲ್ಲದೇ, ಸುಮ್ಮನೇ ಇಂಥ ನಿರ್ಣಯುಗಳನ್ನು ಸ್ವೀಕರಿಸುವುದರಿಂದ ಏನೂ ಸಾಧನೆಯಾಗಲಾರದು. ಈ ಸಭೆಯಲ್ಲಿ ಸ್ವೀಕರಿಸಬಹುದಾದ ಈ ನಿರ್ಣಯದ ಪ್ರಕಾರ ಗೋವಾನ್ನು ಕಾಪಾಡುವುದು ಈ ಸರ್ಕಾರದ ಜವಾಬ್ದಾರಿ ಇದೆ. ಆದರೆ ಮಹಾರಾಷ್ಟ್ರದವರ ಹಟಮಾರಿತನಕ್ಕೆ, ಅಕ್ರಮಣಶೀಲ ಪ್ರವೃತ್ತಿಗೆ ಕೇಂದ್ರ ಸರ್ಕಾರದವರೇನಾದರೂ ಮಣಿದರೆ ಇಲ್ಲಿಯ ರಾಜ್ಯ ಭಾರ ಮಾಡುವುದು ಬಹಳ ಕಷ್ಟವಾಗುತ್ತದೆ. ಈ ವಿಚಾರವನ್ನು ಕೇಂದ್ರ ಸರ್ಕಾರದವರಿಗೆ ರಾಜ್ಯ ಸರ್ಕಾರದವರು ತಿಳಿಸಬೇಕು. ಇಂಥ ಕಾಲದಲ್ಲಿ ಸೌಮ್ಯವಾದರೆ ಅನೇಕ ರೀತಿಯ ಬಲಾತ್ಕಾರ ಪ್ರವೃತ್ತಿಗಳು ಸಹ ಮುಂದೆಯೆ ನಡೆಯುತ್ತವೆ, ಎಂಬುದನ್ನು ನಾವೆಲ್ಲ ಗಮನಿಸಬೇಕು. ಕೇಂದ್ರ ಸರ್ಕಾರದವರು ಈ ವಿಷಯದಲ್ಲಿ ಖಂಡಿತವಾಗಿ ಮಹಾರಾಷ್ಟ್ರದತ್ತ ಮನಸ್ಸನ್ನು ಕೊಡಬಾರದಂಬುದಾಗಿ ನಾನು ಪುನಃ ಹೇಳಬಯಸುತ್ತೇನೆ. ಪಂಡಿತ ಜವಾಹರಲಾಲ್ ನೆಹರು ಅವರ ವಾರಸುದಾರರೆಂದು ಹೇಳಿಕೊಳ್ಳುವ ಕೇಂದ್ರ ಸರ್ಕಾರದವರು ಈಗ ತಮಗೆ ಯಜಮಾನರ ಹಾಗೆ ಇದ್ದಂತೆ ಶ್ರೀ ನೆಹರೂ ಅವರ ಮಾತಿಗೆ ಈಗ ವಿರೋಧವಾಗಿ ಹೋಗುತ್ತಿರುವುದು ಬಹಳ ಶೋಚನೀಯವಾಗಿದೆ. ಶ್ರೀ ನೆಹರೂ ಅವರ ಸ್ಮಶಾನ ಯಾತ್ರೆ ಮುಗಿದ ಕೆಲವೇ ಕಾಲದಲ್ಲಿಯೇ ಅವರ ಧೋರಣೆಯ ವಿರುದ್ಧ ವರ್ತನೆಯನ್ನು ಕೇಂದ್ರದವರು ತೋರಿಸುತ್ತಿರುವುದಾದಲ್ಲಿ, ಅವರ ಅಭಿಪ್ರಾಯಕ್ಕೆ ವಿರೋಧನ್ನು ವ್ಯಕ್ತಪಡಿಸುವುದಾದರಲ್ಲಿ ಕೇಂದ್ರದವರು ಈ ನೆಹರೂ ರವರು ವಾರಸುದಾರರು ಹೇಗೆ ಆಗುತ್ತಾರೆಂದು ನಾನು ಇಲ್ಲಿ ಪ್ರಶ್ನೆಮಾಡಬಯಸುತ್ತೇನೆ. 1 ವರ್ಷಗಳವರೆಗೆ ಗೋವೆಯು ಸಮಾಚಾರಕ್ಕೆ ಹೋಗುವುದು ಮಹಾರಾಷ್ಟ್ರದರಿಗೂ ಬೇಡ ಕರ್ನಾಟಕವರಿಗೂ ಬೇಡ, ಗೋವಾದವರೇ ಒಂದು ಅಭಿಪ್ರಾಯವನ್ನು ಹೊಂದಲಿ ಹಾಗೂ ರೂಪಿಸಿಕೊಳ್ಳಲಿ ಅಭಿಪ್ರಾಯವನೇ ನಾವು ಎಲ್ಲರೂ ಒಪ್ಪಬೇಕು ಎಂಬುದೇ ಈ ತೀರ್ಮಾನವಾಗಿದೆ. ನನ್ನ ಅನೇಕ ಸ್ನೇಹಿತರುಗಳು ಇನ್ನೂ ಅನೇಕ ವಿಚಾರಗಳನ್ನು ಹೇಳುವರಿದ್ದಾರೆ. ಕೊನೆಯವಾಗಿ ನಾನು ಹೇಳುವುದೇನೆಂದರೆ ಸರ್ಕಾರದ ಅಭಿಪ್ರಾಯ ಈ ನಿರ್ಣಯದ ಬಗ್ಗೆ ಬೇಗನೇ ಇತ್ಯರ್ಥಕ್ಕೆ ಬರುವುದು ಒಳ್ಳೆದು ಹೆಚ್ಚು ವೇಳೆ ಕಳೆದು ಈ ವಿಚಾರವನ್ನು ಚರ್ಚೆ ಮಾಡುವುದು ಅನಾವಶ್ಯಕ, ಶ್ರೀಮಾನ್ ಗಾಂಜೀ ವೀರಪ್ಪನವರು ತಮ್ಮ ನಿರ್ಣಯವನ್ನು ಮಂಡಿಸಬಹುದಾಗಿತ್ತು ಇವತ್ತಿನ ದಿವಸ ಇಂತಹ ಬದಲಾವಣೆಗಳಾಗುತ್ತಿರುವ ಪರಿಸ್ಥಿತಿನುಗುಣವಾಗಿ ಈ ನಿರ್ಣಯವನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡದ್ದಾಗಿದೆ. ಗೋವೆ ಕರ್ನಾಟಕದೊಡನೆ

ವಿಲೀನವಾಗುವುದರಿಂದ ಬಹಳ ಒಳ್ಳೆಯದಾಗುತ್ತದೆಂದು ನಾನು ಹಿಂದೆ ಹೇಳಿದ್ದೇನೆ. ಕಾರಣಗಳನ್ನು ಇನ್ನು ಹೆಚ್ಚು ಹೇಳೋಣವೆಂದರೆ ಅಷ್ಟು ವೇಳೆ ಇಲ್ಲ. ನಾನು ಈ ವಿಚಾರವನ್ನು 3 ದಿನಗಳವರೆಗೂ ಸರಿಯಾದ ಅಂಕಿ ಸಂಖ್ಯೆಗಳಿಂದ ವಾದಿಸಬಹುದಾಗಿತ್ತು. ಆದರೆ ಅದಕ್ಕೆ ಇದು ಸ್ಥಳವಲ್ಲ. ಇತಿಹಾಸ, ಭೌಗೋಳಿಕ ಆರ್ಥಿಕ ಆಧಾರಗಳ ಮೇಲೆ ವಿಚಾರ ಮಾಡಿದ್ದೆ ಆದರೆ ಖಂಡಿತವಾಗಿ ಗೋವಾ ಮುಂದೆ ಕರ್ನಾಟಕದೊಳಗೇ ಕೂಡಬೇಕಾಗಿದೆ ಪ್ರಬಲವಾದ ಈ ಕಾರಣಗಳಿರುವುದರಿಂದ ಅದು ಕರ್ನಾಟಕದೊಳಗೆ ಸೂಕ್ತ ಕಾಲದಲ್ಲಿ ವಿಲೀನವಾಗಬೇಕು. [illegible]ನಲ್ಲಿ ಈ ನಿರ್ಣಯವನ್ನು ಹಾಗೂ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದವರು ಪರಿಶೀಲಿಸಿದ ನಂತರವೂ ಗೋವಾ ಮಹಾರಾಷ್ಟ್ರಕ್ಕೆ ಸೇರಬೇಕೆಂದು ತೀರ್ಮಾನ ಮಾಡಿದರೆ ಅದು ದುರ್ದೈವಿ ಘಟನೆಯನ್ನು ಕರ್ನಾಟಕವು ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ಇಷ್ಟು ಹೇಳಿ ನನಗೆ ಈ ನಿರ್ಣಯದ ಮೇಲೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

## ಸಹಕಾರಿ ಸಂಘಗಳಿಗೆ ರಿಬೇಟು

**ಶ್ರೀ ಕೊಂಡಜ್ಜಿ ಬಸಪ್ಪ:** ಅದಕ್ಕೆ ಕೊಡತಕ್ಕ ಹಣ ಪೂರ್ತಿ ಕೇಂದ್ರ ಸರ್ಕಾರದಿಂದ ಬರುತ್ತದೆ. ಇಂತಹ ಯೋಜನೆಗಳಿಗೆ ಇಷ್ಟಿಷ್ಟು ಹಣ ಎಂದು ಬರುತ್ತದೆ. ಅದಕ್ಕೆ ಸಾಕಾಗುವಷ್ಟು ಹಣ ಇರಲಿಲ್ಲ. ಕ್ಲೈಮ್ಸ್ ವಿಪರೀತವಾಗಿತ್ತು. ಇತ್ತೀಚೆಗೆ ಅವರ ಸರ್ಕಾರದವರು 7 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈ ವರ್ಷದ ಅಂತ್ಯದಲ್ಲಿ ಎಂದರೆ 31ನೇ ತಾರೀಖು ಅದರಲ್ಲಿ ಅರ್ಧ ಭಾಗ ಹಣವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇನ್ನು ಉಳಿದ ಹಣವನ್ನು ಕೊಡುವ ವಿಷಯದಲ್ಲಿ ಮುಂದಿನ ವರ್ಷ ಆಲೋಚನೆ ಮಾಡೋಣ ಎಂದುಕೊಂಡಿದ್ದೇವೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಈ ಸಹಕಾರ ಸಂಘಗಳಿಗೆ ಸರ್ಕಾರದವರು ಕೊಡಬೇಕಾಗಿರುವ ರಿಬೇಟ್ ಹಣ ಒಂದು ಲಕ್ಷ 48 ಸಾವಿರ ಚಿಲ್ಲರೆ ರೂಪಾಯಿಗಳು ಎಂದು ಹೇಳಿದ್ದೀರಿ. ಈಗ ಅದರ ಬಗ್ಗೆ 7 ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿದೆ ಎಂದು ಹೇಳಿದಿರಿ, ಅವರಿಗೆ ಕೊಡಬೇಕಾಗಿರತಕ್ಕ ಮೊತ್ತವನ್ನು ನೋಡಿದರೆ ಬಹಳ ಕಡಿಮೆ ಇದೆ, ಇದರಲ್ಲಿ ಏನೋ ಸ್ವಲ್ಪ ವ್ಯತ್ಯಾಸ ಕಾಣುತ್ತಿದೆ ಅಲ್ಲವೇ?

**ಶ್ರೀ ಕೊಂಡಜ್ಜಿ ಬಸಪ್ಪ:** ನಾನು ಹೇಳಿದ ಮೊತ್ತ ಪೂರ್ತಿ ರಾಜ್ಯಕ್ಕೆ ಸಂಬಂಧಪಟ್ಟದ್ದು, ಮಾನ್ಯ ಸದಸ್ಯರು ಕೇಳಿದ್ದು ಎರಡು ಡಿಸ್ಟ್ರಿಕ್ಟುಗಳಿಗೆ ಸಂಬಂಧಪಟ್ಟದ್ದು.

**ಶ್ರೀ ಎ.ಜೆ. ದೊಡ್ಡಮೇಟಿ:** ಈ ಸಹಕಾರ ಸಂಘಗಳಿಗೆ ರಿಬೇಟ್ ಕೊಡುವ ಸಂಬಂಧದಲ್ಲಿ ಕೇಂದ್ರ ಸರ್ಕಾರದವರು ಕೆಲವು ಫಂಡು ಕೊಡುತ್ತಾರೆ. ರಾಜ್ಯ ಸರ್ಕಾರದವರು ಕೆಲವು ಫಂಡ್ ಕೊಡುತ್ತಾರೆ. ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದವರು ಎಷ್ಟು ಪರ್ಸೆಂಟ್ ಹಣವನ್ನು ಕೊಡುತ್ತಾರೆ, ಮತ್ತು ರಾಜ್ಯ ಸರ್ಕಾರದವರು ಎಷ್ಟು ಪರ್ಸೆಂಟ್ ಕೊಡುತ್ತಾರೆ?

**ಶ್ರೀ ರಾಮಕೃಷ್ಣ ಹೆಗಡೆ (ಅಭಿವೃದ್ಧಿ ಪಂಚಾಯಿತಿ ರಾಜ್ ಮತ್ತು ಸಹಕಾರ ಖಾತೆಗಳ ಮಂತ್ರಿಗಳು):** ಈ ಸಂಘಗಳಿಗೆ ಕೊಡತಕ್ಕ ರಿಬೇಟ್ ಹಣ [illegible] ಇದು ನಮಗೆ ಕೇಂದ್ರ ಸರ್ಕಾರದಿಂದ ಸೆಂಟ್‌ಪರ್ಸೆಂಟ್ ಸಿಕ್ಕುತ್ತದೆ. ಇದಕ್ಕೇನೂ ರಾಜ್ಯ ಸರ್ಕಾರದವರು ಹಾಕಬೇಕಾದಿಲ್ಲ. ಸೆಂಟ್ರಲ್ ಗೌರ್ನ್‌ಮೆಂಟಿನವರು ಏನು ಹಣವನ್ನು ಕೊಡುತ್ತಾರೆಯೋ ಅದು ಪ್ಲಾನಿನ್ ಸೀಲಿಂಗಿಗೆ ಒಳಪಟ್ಟಿರುತ್ತದೆ. ಈಗ 58 ಕೋಟಿ ರೂಪಾಯಿಗಳನ್ನು ಯೋಜನೆಗೋಸ್ಕರ ಎಂದು ಒದಗಿಸಿದ್ದರೆ ಅದರಲ್ಲಿ ರಿಬೇಟಿಗೋಸ್ಕರ ಇಷ್ಟು ಹಣ ಎಂದು ಒದಗಿಸಿರುತ್ತಾರೆ. ರಿಬೇಟ್ ಕೊಡುವುದಕ್ಕೆ ರಾಜ್ಯ ಸರ್ಕಾರದವರು 10 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಕೇಂದ್ರ ಸರ್ಕಾರದವರು ಸಹ 10 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಅವರು ಒಂದು ಸೀಲಿಂಗ್ ಫಿಕ್ಸ್ ಮಾಡಿರುತ್ತಾರೆ. ನಾವು ಬೇರೆ ಬೇರೆ ಬಾಬುಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ಅಗತ್ಯವಿದ್ದುದರಿಂದ ಆ ಬಾಬುಗಳಿಗೆ ಹೆಚ್ಚು ಹಣವನ್ನು ಒದಗಿಸಿ, ಒಂದು ಲಕ್ಷ ರೂಪಾಯಿಗಳನ್ನು ಮಾತ್ರ ಈ ರಿಬೇಟ್ ಕೊಡುವುದಕ್ಕೋಸ್ಕರ ನಾವು ಒದಗಿಸಿದ್ದೇವೆ. ಆ ಬಗ್ಗೆ ಈಗ ನಾವು ಕೊಡಬೇಕಾಗಿರುವುದು ಅರಿಯರ್ಸ್ 9 ಲಕ್ಷ ರೂಪಾಯಿಗಳಾಗುತ್ತದೆ. ಆದ್ದರಿಂದ ಈಗ ನಾವು ಮೊದಲು ಅದರಲ್ಲಿ ಅರ್ಧ ಹಣವನ್ನು ಎಂದರೆ 4 ಲಕ್ಷ ರೂಪಾಯಿ ಹೆಚ್ಚಿಗೆ ಹಣವನ್ನು [illegible] ಕೊಡುತ್ತೇವೆ.

## ಕಂದಾಯ ಇಲಾಖೆಗೆ ಸಂಬಂಧಿಸಿದ್ದು

**ಶ್ರೀ ಎ.ಕೆ. [illegible]:** ಸ್ವಾಮಿ ಈಗ ಈ ಸಭೆಯ ಮುಂದಿರುವ ಕಂದಾಯ ಶಾಖೆಯ ಬೇಡಿಕೆಗಳಿಗೆ ನಾನು ಒಪ್ಪಿಗೆಯನ್ನು ಕೊಡುತ್ತಾ ಈ ಇಲಾಖೆಯ ಸಲುವಾಗಿ ಕೆಲವು ಸೂಚನೆಗಳನ್ನು ಕೊಡಲಿಕ್ಕೆ ನಾನು ಅಪೇಕ್ಷೆ ಮಾಡುತ್ತೇನೆ. ಕಂದಾಯ ಶಾಖೆ ಎನ್ನುವುದು ಪೂರ್ವದಲ್ಲಿ ಬಹಳ ಮಹತ್ವದ ಶಾಖೆಯಾಗಿತ್ತು. ಒಂದು ರೀತಿಯಲ್ಲಿ ಹೇಳುವುದಾದರೆ, ಕಂದಾಯ ಶಾಖೆ ಎಂದರೆ ಸರ್ಕಾರ, ಸರ್ಕಾರ ಎಂದರೆ ಕಂದಾಯ ಶಾಖೆ ಎನ್ನುವ ಹಾಗಿತ್ತು. ತಹಶೀಲ್ದಾರರು ಮತ್ತು ಡೆಪ್ಯುಟಿ ಕಮೀಷನರುಗಳು ಸರ್ಕಾರದ ಒಂದು ಸ್ವರೂಪವಾಗಿದ್ದರು. ಈ ರೀತಿಯಾಗಿ ಕಂದಾಯ ಶಾಖೆ ಒಂದು ಮಹತ್ವವಾದ ಶಾಖೆಯಾಗಿತ್ತು. ಮಾನ್ಯ ಕಂದಾಯ ಮಂತ್ರಿಗಳು ಹೇಳಿದಂತೆ ಡೆವಲಪ್‌ಮೆಂಟ್ ಶಾಖೆ ಬಂದ ನಂತರ ಈ ಕಂದಾಯ ಶಾಖೆ ವೈವಿಧ್ಯತೆಯಿಂದ ಕೂಡಿದಂತಹ ಶಾಖೆಯಾಗಿದೆ ಎಂದು ಹೇಳಿದ್ದು ಸ್ವಲ್ಪ ಮಟ್ಟಿಗೆ ನಿಜ ಎಂದು ಕಾಣುತ್ತದೆ. ನಿಜವಾಗಿ ಕಂದಾಯ ಶಾಖೆ ಮತ್ತು ವ್ಯವಸಾಯ ಶಾಖೆ ಇವುಗಳು ಪರಸ್ಪರ ಅವಿಭಾಜ್ಯ ಹಿತ ಸಂಬಂಧವನ್ನು ಹೊಂದಿದವುಗಳಾಗಿರಬೇಕು. ಸಾಧಾರಣವಾಗಿ ವ್ಯವಸಾಯ ಮತ್ತು ಕಂದಾಯ ಶಾಖೆ ಇವೆರಡಕ್ಕೂ ಒಬ್ಬರೇ ಮಂತ್ರಿಗಳಿರುವುದು ಒಳ್ಳೆಯದೆಂದು ಕಾಣುತ್ತದೆ. ಇದು ಸ್ವಲ್ಪ ಆಲೋಚನೆ ಮಾಡಬೇಕಾದ ಪ್ರಶ್ನೆ. ಈ ಎರಡು ಖಾತೆಗಳೂ ಕೂಡ ಹೆಚ್ಚಾಗಿ ವ್ಯವಸಾಯಗಾರರಿಗೆ ಸಂಬಂಧಪಟ್ಟಿದ್ದು ಆಗಿರುವುದರಿಂದ ಈ

ಎರಡು ಖಾತೆಗಳನ್ನು ಒಬ್ಬರೇ ಮಂತ್ರಿಗಳು ವಹಿಸಿಕೊಂಡರೆ ಹೆಚ್ಚು ಪರಿಣಾಮಕಾರಿಯಾಗಿ, ಪ್ರಗತಿದಾಯಕವಾಗಿ, ಉತ್ತಮವಾದ ಪ್ರಗತಿಯನ್ನು ಸಾಧಿಸಿತು ಎಂದು ನಾನು ಹೇಳುತ್ತೇನೆ. ಬೇಕಾದರೆ ಈ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಒಬ್ಬರು ಉಪಮಂತ್ರಿಗಳನ್ನು ನೇಮಿಸಿಕೊಳ್ಳಬಹುದು. ಈ ರೀತಿಯಿಂದ ಇದನ್ನು ವಿಚಾರಮಾಡತಕ್ಕದ್ದು ಸೂಕ್ತ. ಈಗ ಮುಖ್ಯವಾಗಿ ಈ ಇಲಾಖೆ ಎದುರಿಸಬೇಕಾದ ಗಡಿಸಿದ ಪ್ರಶ್ನೆ ಎಂದರೆ ರಿವಿಜನ್ ಆಫ್ ಸೆಟ್ಲ್‌ಮೆಂಟ್ ಪ್ರಕಾರ ಕಂದಾಯವನ್ನು ಹಾಕುವುದು. ಈ ವಿಚಾರದಲ್ಲಿ ಬಹಳ ಮಟ್ಟಿಗೆ ಭಿನ್ನಾಭಿಪ್ರಾಯ ಇದೆ. ಈ ವಿಚಾರದಲ್ಲಿ ಈ ನಮ್ಮ ಸಭೆಯಲ್ಲಿರತಕ್ಕ ಪ್ರತಿಯೊಬ್ಬ ಸದಸ್ಯರದೂ ಒಂದೊಂದು ವಿಚಾರ ಇವೆ. ಭೂಕಂದಾಯದ ಸಮಸ್ಯೆ, ರಿವಿಜನ್ ಆಫ್ ಸೆಟ್ಲ್‌ಮೆಂಟ್ ಸಮಸ್ಯೆ ಪಕ್ಷದ ಸಮಸ್ಯೆ ಅಲ್ಲ. ಇದು ಎಲ್ಲಾ ರೈತರಿಗೂ ಒಂದಲ್ಲ ಒಂದು ರೀತಿಯಲ್ಲಿ ಒಂದು ಪರಿಣಾಮವನ್ನುಂಟು ಮಾಡತಕ್ಕ ಸಮಸ್ಯೆ ಈಗಾಗಲೇ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ತರಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆ ತುರ್ತು ಪರಿಸ್ಥಿತಿಯ ದೆಸೆಯಿಂದ ಹೆಚ್ಚು ಅವಸರವಾಗಿ ಈ ನಿರ್ಣಯವನ್ನು ಈ ಸಭೆಯ ಮುಂದೆ ತಂದಿದ್ದಾರೆ. ಆ ನಿರ್ಣಯವನ್ನು ಬಹಳ ಸಾವಧಾನದಿಂದ ಈ ಸಭೆಯಿಂದ ವಿಚಾರ ಮಾಡಬೇಕು. ಅದು ಎಲ್ಲಾ ರೈತರ ಮೇಲೆಯೂ ಒಂದು ಪರಿಣಾಮವನ್ನುಂಟು ಮಾಡುವುದರಿಂದ ಅದನ್ನು ಹೆಚ್ಚು ವಿಚಾರ ಪೂರಿತವಾದ ರೀತಿಯಲ್ಲಿ ಸ್ವಲ್ಪ ಸಾವಕಾಶವಾಗಿ ವಿಚಾರ ಮಾಡಬೇಕು. ಮತ್ತು ಉತ್ಪಾದನಾ ಪ್ರಶ್ನೆಯನ್ನೂ ಸ್ವಲ್ಪ ಗಮನದಲ್ಲಿಟ್ಟು ಇದನ್ನು ಮಾಡಬೇಕಾಗುತ್ತದೆ. ರಿವಿಜನ್ ಸೆಟ್ಲ್‌ಮೆಂಟ್ ಕಂದಾಯವನ್ನು ಅನುಕರಣೆ ಮಾಡಿರುವುದನ್ನು ಒಮ್ಮೆ ನೋಡಿದರೆ ಹಿಂದೆ ಸರ್‌ಚಾರ್ಜ್ ಏನು ಹಾಕಿದ್ದರೋ ಅದನ್ನ ಮುಂದುವರಿಸಿದ್ದರೆ ಚೆನ್ನಾಗಿತ್ತೋ ಏನೋ ಎನ್ನುವ ಭಾವನೆ ರೈತರಲ್ಲಿ ಬಂದಿದೆ. ಈ ಕಾರಣಕ್ಕಾಗಿ ಪ್ರಶ್ನೆ ಮುಂದುವರಿದಿರುವ ಮಟ್ಟಿಗೆ ಸರ್‌ಚಾರ್ಜ್ ತಾವು ಆಲೋಚನೆ ಮಾಡಿ, ರೆವಿನ್ಯೂ ಸೆಟಲ್‌ಮೆಂಟ್ ಬಗ್ಗೆ ಸ್ವಲ್ಪ ಶಾಸ್ತ್ರೀಯವಾಗಿ ಕೂಲಂಕಷವಾಗಿ, ಸಾವಕಾಶವಾಗಿ ವಿಚಾರ ಮಾಡುವುದು. ಅನುಕೂಲವೆಂದು ನನ್ನ ಅಭಿಪ್ರಾಯ. ಅದನ್ನು ವಿಚಾರ ಮಾಡಬೇಕು.

ಇನ್ನು ಒಂದು ಅತಿಶಯದ ಮಹತ್ವದ ಮಾತು ಈ ಇನಾಂಗಳು ಕಂದಾಯ ಶಾಖೆಗೆ ಸೇರಿವೆ. ಈ ಇನಾಂ ಸೆಕ್ಷನ್ ಇಲ್ಲದಂತೆ ಆಗಬೇಕಾದರೆ, ಇನಾಂಗಳೆಲ್ಲಾ ರದ್ದಾಗಬೇಕು ಇನಾಂ ಸೆಕ್ಷನ್ ಹೋಗುವಂತೆ ಮಾಡಲು ಇಷ್ಟು ಕಾಲದಲ್ಲಿ ಇದು ಹೋಗಬೇಕು ಎಂದು ಒಂದು ಕ್ರಮ ಹಾಕಿಕೊಳ್ಳಬೇಕು. ಅಷ್ಟರಲ್ಲಿ ಇನಾಂಗಳೆಲ್ಲಾ ಕಣ್ಮರೆಯಾಗಬೇಕು. ಇಂತಿಷ್ಟು ದಿವಸದಲ್ಲಿ ಇನಾಂಗಳಲ್ಲಾ ರದ್ದಾಗಿ, ಇನಾಂ ಎಂಬ ಶಬ್ದ ಕಂದಾಯ ಶಾಖೆ ಡಿಕ್ಷನರಿಯಲ್ಲಿ ಇರಬಾರದು. ಈ ಇನಾಂಗಳೆಲ್ಲಾ ಪೂರ್ತಿ ಹೋಗಿಬಿಡಬೇಕು. ಈ ಇನಾಂದಾರರೆಲ್ಲಾ ಕಷ್ಟಪಡದ ಆಬ್ಸೆಂಟಿ ಲ್ಯಾಂಡ್ ಲಾರ್ಡುಗಳು, ಯಾರೋ ರೈತರು ಕಷ್ಟಪಟ್ಟು ಬೀಜ ಬಿತ್ತಿ

ಬೆಳೆದ ಬೆಳೆಯನ್ನು ಸುಖವಾಗಿ ಕುಳಿತುಕೊಂಡು ಊಟ ಮಾಡುವ ಇನಾಂದಾರರು ಅದು ಇವತ್ತು ಸಮಾಜಕ್ಕೆ ಉಪಯುಕ್ತವಾದೀತೇ? ತಾವು ಪ್ರತಿಜ್ಞೆ ಮಾಡಿದ್ದೀರಿ ಸಮಾಜವಾದಿ ಸಮಾಜವನ್ನು ಮಾಡುತ್ತೇವೆಂದು, ಸಮಾಜವಾದಿ ಸಮಾಜ ಹಳ್ಳಿಗಳಲ್ಲಿ ಪರಿಣಾಮಕಾರಿಯಾಗಬೇಕಾದರೆ, ಯಾವನು ಉಳುಮೆ ಮಾಡುತ್ತಾನೋ ಅವನು ಆ ಭೂಮಿಯ ಮಾಲೀಕನಾಗಬೇಕು, ಒಡೆಯನಾಗಬೇಕು.

ಮೊನ್ನೆ ಕಂದಾಯ ಶಾಖೆಯ ಸಚಿವರು ಜುಲೈ 1ನೇ ತಾರೀಖಿನಿಂದ ಭೂಸುಧಾರಣೆ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಆದರೆ ದುರ್ದೈವದಿಂದ ಹಾಗೆ ಜಾರಿಗೆ ತರದ ಅನೇಕ ನಿದರ್ಶನಗಳಿವೆ. ನೀವು ಜನರ ಮನಸ್ಸನ್ನು ನಿಜವಾಗಿ ಗೆಲ್ಲಬೇಕಾದರೆ ನಿಮ್ಮ ಕಾನೂನುಗಳನ್ನು ಖಂಡ ತುಂಡಾಗಿ ಜಾರಿಗೆ ತರಬೇಕು, ಜುಲೈ 1ನೇ ತಾರೀಖಿನಿಂದ ಭೂಸುಧಾರಣೆಯಾಗುತ್ತದೆಂದು ಹೇಳಿದ್ದಾರೆ. ಭೂಸುಧಾರಣೆ ಕಾನೂನನ್ನು ಜಾರಿಗೆ ಕೊಡಬೇಕಾದರೆ, ಈ ಭೂಸುಧಾರಣೆ ಸಂಬಂಧದ ಕಾನೂನಿಗೆ ತಿದ್ದುಪಡಿಗಳನ್ನು ಇದೇ ಅಧಿವೇಶನದಲ್ಲಿ ಮಾಡಿಕೊಂಡರೆ, ಅದು ಜಾರಿಗೆ ಬಂದೀತು. ಯಾವ ಕಾರಣದಿಂದಲೋ ಈ ಅಧಿವೇಶನದಲ್ಲಿ ತಿದ್ದುಪಡಿಯನ್ನು ಪಾಸ್ ಮಾಡಿಕೊಳ್ಳಲಿಲ್ಲವೆಂದರೆ ಜುಲೈ 1ನೇ ತಾರೀಖಿಗೆ ಈ ಭೂಸುಧಾರಣೆ ಜಾರಿಯಾಗಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ವಿನಮ್ರಪೂರ್ವಕವಾಗಿ ಹೇಳುತ್ತೇನೆ. ಇದೇ ಅಧಿವೇಶನದೊಳಗೆ, ಒಂದೇ ದಿವಸದೊಳಗೆ ಆ ಕೆಲಸ ಆದೀತು. ಈ ಭೂಸುಧಾರಣೆ ತಿದ್ದುಪಡಿಯನ್ನು ಇದೇ ಅಧಿವೇಶನದೊಳಗೆ ಸ್ವೀಕಾರ ಮಾಡಬೇಕು. ಈಗ ಸ್ವಲ್ಪ ದಿವಸದೊಳಗೆ ತಾವು ಸರ್ಕಾರದವರು ಜುಲೈ 1ನೇ ತಾರೀಖಿನಿಂದ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳಿದಂಥ ಕಾನೂನು ಯಾವ ಕ್ರಮದೊಳಗೆ, ಯಾವ ಹಂತದೊಳಗೆ ಇದೆಯೆಂದು ಹೇಳಬೇಕು. ತಾವು ನಿಶ್ಚಿತವಾಗಿ ಇಂಥ ತಾರೀಖಿನೊಳಗೆ ಕಾಯಿದೆ ಪಾಸ್ ಮಾಡುತ್ತೇವೆ ಇಂಥತಾರೀಖಿನೊಳಗೆ ನೋಟೀಫಿಕೇಶನ್ ಹೊರಡಿಸುತ್ತೇವೆ. ಇಂಥ ತಾರೀಖಿನೊಳಗೆ ರೂಲ್ಸ್ ಮಾಡುತ್ತೇವೆಂದು ಒಂದು ಕಾಲಪಟ್ಟಿ ಇಟ್ಟುಕೊಳ್ಳಬೇಕು. ಜುಲೈ 1ನೇ ತಾರೀಖಿನಿಂದ ಜಾರಿಗೆ ಕೊಡುತ್ತೇವೆಂದು ಹೇಳಿ, ಜೂನ್ 31ನೇ ತಾರೀಖಿನತನಕ ಸುಮ್ಮನೆ ಕುಳಿತುಕೊಂಡು ಜುಲೈ ಒಂದರಂದು ಫಕ್ಕನೆ ಡಿಕ್ಲೇರ್ ಮಾಡುವುದು ಶಕ್ಯಿಲ್ಲ. ಇದನ್ನು ಯಾವ ಕ್ರಮದೊಳಗೆ, ಯಾವ ಹಂತದಲ್ಲಿ ತೆಗೆದುಕೊಳ್ಳುತ್ತೀರಿ. ಯಾವ ಯಾವ ದಿನಾಂಕ ಏನೇನು ಮಾಡುತ್ತೀರಿ ಎಂದು ಪೂರ್ವಭಾವಿಯಾಗಿ ವಿಚಾರ ಮಾಡಿ, ಮಾಡುವ ಕೆಲಸ ಇದು.

ಇನಾಂಗಳ ವಿಷಯದಲ್ಲಿ ಇನ್ನೂ ಸ್ವಲ್ಪ ಹೇಳಬೇಕಾಗಿದೆ ಈ ಇನಾಂಗಳನ್ನು ನಿರ್ದಿಷ್ಟವಾಗಿ ಯಾವ ದಿನಾಂಕ ರದ್ದು ಮಾಡುತ್ತೀರಿ, ಈ ಇನಾಂ ಸೆಕ್ಷ್ಯನ್ ಇಲ್ಲದಂತೆ ಎಂದಿಗೆ ಮಾಡುತ್ತೀರಿ ಎಂದು ಹಿಂದೆ ಈ ಶಾಸನ ಸಭೆಯೊಳಗೆ ನಾನು ಒಮ್ಮೆ ಪ್ರಶ್ನೆ

ಕೇಳಿದ ಹೊತ್ತಿಗೆ, ಅವತ್ತಿನ ಸರ್ಕಾರದವರು, ಹೇಳಿದ್ದಾರೆ, ಪ್ರಶ್ನೆ ಏನೆಂದರೆ ದೇವಸ್ಥಾನದ ಇನಾಂಗಳೂ, ದೇವದಾಸಿ ಇನಾಂಗಳೂ ಉತ್ತರ ಕರ್ನಾಟಕದೊಳಗೆ ಬಹಳ ಉಂಟು, ಈ ಇನಾಂಗಳನ್ನು 6 ವರ್ಷದೊಳಗೆ ರದ್ದು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಈ ತನಕ ಬಿಲ್ ಡ್ರಾಫ್ಟ್ ಆಗಿದೆಯೋ ಇಲ್ಲವೋ? ಉತ್ತರ ಕರ್ನಾಟಕದೊಳಗೆ ದೇವಸ್ಥಾನಗಳಿಗೆಂದು ಕಟ್ಟಿ ಜಮೀನಿನ ಅನೇಕ ಇನಾಂದಾರರು ಅಬ್ಸೆಂಟೀ ಆಗಿ ದುರುಪಯೋಗವಾಗುತ್ತಿವೆ.

ಅದೇ ರೀತಿಯಾಗಿ ಈ ಸರ್ವೆ ಸೆಟಲ್‌ಮೆಂಟ್ ಇಲಾಖೆಯಿಂದ ಬಹಳ ಅದ್ವಾನವಾಗಿದೆ. ಸರ್ವೆ ಸೆಟಲ್‌ಮೆಂಟ್ ಶಾಖೆಯವರಿಂದಲೇ ಬಹಳಷ್ಟು ಹಳ್ಳಿಗಳ ಸ್ಥಿತಿ ಅದ್ವಾನವಾಗಿರುವುದು ಅವರು ಹಳ್ಳಿಗೆ ಬಂದರೆಂದರೆ ಜಮೀನಿನಲ್ಲಿರುವ ಕಲ್ಲನ್ನು ಕಿತ್ತು ಈಚೆಕಡೆ ಹಾಕುವುದು, ಈಚೆಕಡೆ ಇರುವುದನ್ನು ಆಚೆಕಡೆ ಹಾಕುವುದು, ಹೀಗೆ ಏನೇನೋ ಮಾಡುತ್ತಾರೆ. ಇದರ ಫಲವಾಗಿ ಬಹಳ ಅದ್ವಾನವಾಗಿದೆ. ಸರ್ಕಾರದವರು ಇದರ ಬಗ್ಗೆ ಏನು ನಿಶ್ಚಿತವಾದಂಥ ಕಾರ್ಯಕ್ರಮ ಕೈಗೊಳ್ಳುತ್ತಾರೆಂದು, ಪರಿಣಾಮಕಾರಿಯಾಗಿ ಶಾಶ್ವತ ಉತ್ತರದಲ್ಲಿ ಹೇಳಬೇಕು ಎಂದು ಕೇಳುತ್ತೇನೆ.

ಅನೇಕ ಭೂಮಿಗಳನ್ನು ಪ್ರತ್ಯೇಕವಾಗಿ ಕೊಟ್ಟಿದ್ದಾರೆ. ಹರಿಜನರಿಗೆ ಅಸೈನ್ ಮಾಡಿ ಖಾತೆಗಳಿಗೆ ಯಾವುದೋ ಸಂತೃಪ್ತಿಗೆ ಕೊಟ್ಟಿದ್ದಾರೆ. ಅನೇಕ ಕಾರಣಗಳಿಂದ ಅವರು ಉಪಭೋಗಿಗಳಲ್ಲ, ಅವರಿಗೆ ಆ ಭೂಮಿ ಸಾಗುವಳಿ ಮಾಡುವುದಕ್ಕೆ ಆಗುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ, ಗದಗ, ಮುಂಡರಗಿ, ಗಜೇಂದ್ರಗಡದಲ್ಲಿ ರೈತರಿಗೆ ಭೂಮಿ ಕೊಟ್ಟಿದ್ದಾರೆ 2-3 ವರ್ಷದ ಬಾಗಾಯತು ಪ್ರಯತ್ನ ಮಾಡಿದರೂ ಅವರಿಗೆ ಧನ ಸಹಾಯ ಸಿಗಲಿಲ್ಲ. ಬೀಜ ಕೊಡುವುದು ಆಗುತ್ತಿಲ್ಲ. ಆದ್ದರಿಂದ ಸಾಲ, ಬೀಜ, ಗೊಬ್ಬರ ಕೊಟ್ಟು ಕಾಲ ವಿಳಂಬವಿಲ್ಲದೆ ಸಹಾಯ ಮಾಡಬೇಕು ಅತ್ಯವಶ್ಯಕವಾದ ಸಹಾಯವನ್ನು ಅವರಿಗೆ 2-3 ವರ್ಷದ ಬಾಗಾಯತು ಏನೂ ಮಾಡಲಿಲ್ಲ. ನಾನು ಈ ಬಗ್ಗೆ ರೆವಿನ್ಯೂ ಡೆಪ್ಯೂಟಿ ಕಮಿಶನರಿಗೆ ಆಗಿಂದಾಗ್ಗೆ ಬರೆದಿದ್ದೇನೆ. ಅವರು ಇನ್ನೂ ಈತನಕ ಉತ್ತರ ಕೊಟ್ಟಿಲ್ಲ. ಉತ್ತರ ಕೊಡುವ ಸ್ವಭಾವವೇ ಇಲ್ಲ. ಸರ್ಕಾರದವರಿಗೆ ಬರೆದರೆ ಒಂದು ಉತ್ತರ ಬರುತ್ತದೆ. ಡೆಪ್ಯೂಟಿ ಕಮೀಶನರು ಬಲಯುತರಾಗಿರಬೇಕು, ಯೋಗ್ಯರಾಗಿರಬೇಕು, ಪ್ರಾಮಾಣಿಕರಾಗಿರಬೇಕು. ಒಬ್ಬ ಜಿಲ್ಲೆಯ ಡೆಪ್ಯೂಟಿ ಕಮೀಶನರ ಕೆಲಸವನ್ನು ನೋಡಿದರೆ, ಅವರಿಗೆ ಏನೇನೋ ಬಾಬುಗಳನ್ನು ಕೊಟ್ಟಿದ್ದಾರೆ. ಅವತ್ತಿನ ದಿವಸ ಆಡಳಿತ ದೃಷ್ಟಿಯಿಂದ ಡೆವಲಪ್‌ಮೆಂಟ್ ವರ್ಕ್, ಮತ್ತು ಇನ್ನೂ ಅನೇಕ ಕಾರ್ಯಗಳನ್ನು ಅವರಿಗೆ ವಹಿಸಿದ್ದಾರೆ. ಅವರು ಯಾವುದಕ್ಕೂ ಸರಿಯಾಗಿ ನಿಗಾ ಕೊಡುವುದಕ್ಕಾಗುವುದಿಲ್ಲ. ಅದಿಗೆ ಡೆವಲಪ್‌ಮೆಂಟ್ ಕಮಿಟಿ ಚೇರ್ಮನ್‌ಗಿರಿ ಬೇರೆ. ಅವರಿಗೆ ವಿವಿಧ ಶಾಖೆಗಳ ಕೆಲಸವಿರುತ್ತದೆ. ಹೀಗಾಗಿ ಅನೇಕ ಕಾರ್ಯಗಳು ಕೇಂದ್ರವಾಗಿರುತ್ತಾರೆ. ಒಬ್ಬ ಡೆಪ್ಯೂಟಿ ಕಮೀಶನರು ಕೆಲವು ಜಿಲ್ಲೆಗಳಿಗೆ ಬಹಳ ಬುದ್ಧಿವಂತರೂ, ಅನುಭವಸ್ಥರೂ, ದಕ್ಷರೂ ಆದವರನ್ನು

ಡೆಪ್ಯೂಟಿ ಕಮೀಶನರಾಗಿ ವರ್ಗ ಮಾಡಬೇಕು. ಏಕೆಂದರೆ ಅಲ್ಲಿ ಪುಢಾರಿಗಳ ಕೈವಾಡ ಬಹಳವಿರುತ್ತದೆ. ಅಂಥ ಕಡೆಗೆ ಚತುರರಾದವರು ಕಲೆಕ್ಟರಾಗಿರಬೇಕು ಇಂಥ ಜಿಲ್ಲೆಗಳು ಅಂದರೆ ಧಾರವಾಡ, ಬಿಜಾಪೂರ ಚಿತ್ರದುರ್ಗವನ್ನೂ ಸೇರಿಸಿಕೊಳ್ಳಿ ಈ ಪಟ್ಟಿಗೆ. ಬಹಳ ಬುದ್ಧಿವಂತರೂ ರಾಜಕಾರಣಿಗಳೂ ಆದ ಜನ ಎಲ್ಲೆಲ್ಲಿರುತ್ತಾರೆ. ಅಲ್ಲಲ್ಲಿಗೆ ಬಹಳ ಬಲವಾದ, ಜಾಣರಾದ ಡೆಪ್ಯೂಟಿ ಕಮೀಶನರನ್ನು ಹಾಕಬೇಕು. ಬಲವಾದ ವಿಶೇಷ ಅನುಭವವುಳ್ಳ ಡೆಪ್ಯೂಟಿ ಕಮೀಶನರು ಬಂದ ಕೂಡಲೇ ಕೆಲವರಿಗೆ ತಲೆನೋವು ಬರುತ್ತದೆ. ಅವರ ಮೇಲೆ ಸಾವಿರಾರು ದೂರುಗಳನ್ನು ಮಂತ್ರಿಗಳಲ್ಲಿ ಹೇಳಿ ಅವರನ್ನು ಬೇಗ ಅಲ್ಲಿಂದ ವರ್ಗ ಮಾಡುವುದಕ್ಕೆ ಹತ್ತುತ್ತಾರೆ. ಅಂಥ ರಾಜಕಾರಣಿಗಳ ಮಾತಿಗೆ ಬೆಲೆಕೊಟ್ಟು ಅವರಿಗೆ ಬೇಕಾದ ಆಫೀಸರುಗಳನ್ನು ಇಟ್ಟು ನೀವು ರಾಜ್ಯ ಆಳಬೇಡಿ. ದೇವರು ನಿಮ್ಮನ್ನು ಆಳುವುದಕ್ಕೆ ಕಳುಹಿಸಿಲ್ಲ. ಶುದ್ಧವಾದ ಆಡಳಿತ ಮಾಡುವುದಕ್ಕಾಗದಿದ್ದರೆ ನೀವು ಅಧಿಕಾರದಲ್ಲಿರುವುದು ಬೇಡ. ಬೇಕಾದವರು ಆಳಲಿ, ಆಫೀಸರುಗಳ ಮೂಲಕ ನೀವು ರಾಜ್ಯಭಾರ ಮಾಡಿಕೊಂಡು ಹೋಗುವುದು ಬೇಡ. ನಮ್ಮ ಪಾಲಿಗೆ ರಾಜ್ಯ ಬಂದಿದೆ ಎಂದು ಅಶುದ್ಧ ರೀತಿಯಲ್ಲಿ ರಾಜ್ಯಾಡಳಿತ ನಡೆಸುವುದು ಸರಿಯಾದ ಹಾದಿಯಲ್ಲ. ಅದು ಈ ರಾಷ್ಟ್ರಕ್ಕೆ ಸರಿಯಾದ ಹಾದಿಯಲ್ಲ. ಈ ರೀತಿ ವಿಚಾರ ಮಾಡಿ ಎಲ್ಲೆಲ್ಲಿ ಆಡಳಿತ ಸರಿಯಾಗಿಲ್ಲವೋ, ಅಲ್ಲಿಗೆ ಸಮರ್ಥರೂ, ನ್ಯಾಯವರ್ತಿಗಳೂ ಪಕ್ಷಪಾತವಿಲ್ಲದ ಆಫೀಸರುಗಳನ್ನು ಹಾಕಿ ಕೆಲಸ ಮಾಡೋಣ.

ವಶೀಲಿಬಾಜಿ ಮುಂತಾದುವನ್ನು ಕಡಿಮೆ ಮಾಡಬೇಕಾಗಿದೆ. ಆಫೀಸರನ್ನು ವರ್ಗ ಮಾಡಿ ಈ ಕಲೆಕ್ಟರನ್ನು ಅಲ್ಲಿಗೆ ಹಾಕಿ, ಆ ಡೆಪ್ಯೂಟಿ ಕಮೀಶನನ್ನು ಇಲ್ಲಿ ಹಾಕಿ, ಈ ಪ್ರಾಂತ್ಯ ಆಫೀಸರನ್ನು ಬದಲಾಯಿಸಿ, ಯಾರೋ ಒಬ್ಬ ವ್ಯಕ್ತಿಯನ್ನು ತಮ್ಮಲ್ಲಿಗೆ ತಹಶೀಲ್‌ದಾರನಾಗಿ ವರ್ಗಮಾಡಿಕೊಡಿ ಎಂದು ಕೇಳುವ ಎಂ.ಎಲ್.ಎ.ಗಳ ಲಿಸ್ಟನ್ನು ಒಮ್ಮೆಗೇ ಮಾಡಿ, ಈ ಪರಕೆ ಪುಢಾರಿಗಳ ಲಿಸ್ಟ್ ಮಾಡಿ, ಈ ಎಂ.ಎಲ್.ಎ.ಗಳಲ್ಲಿ ಯಾರ್‍ಯಾರು ಎಷ್ಟೆಷ್ಟು ಸಲ ಆಫೀಸರುಗಳ ವರ್ಗಾವರ್ಗಿಗೆ ಬಂದಿದ್ದಾರೆ ಅಂತ. ತಯಾರಿಸಿ, ಯಾರು ಯಾರು ಎಂದು ಪರಿಜ್ಞಾನ ಇಟ್ಟುಕೊಂಡು ಆಯಾ ಮನುಷ್ಯನ ಯೋಗ್ಯತೆ ತಿಳಿದುಕೊಂಡು, ಅವನ ಮಾತಿಗೆ ಎಷ್ಟು ಬೆಲೆ ಕೊಡಬಹುದೆಂದು ನಿರ್ಧರಿಸಿಕೊಳ್ಳಿ, ಅದರ ಸೆಳವಳಿಕೆ ಇಲ್ಲದೆ, ಒಬ್ಬರ ಒತ್ತಾಯಕ್ಕೆ ಬಾಗಬಾರದು, ನೀವು ಸ್ವಲ್ಪ ಕಟುವಾಗಿರಬೇಕು. ಡೆಪ್ಯೂಟಿ ಕಮೀಶನರು ಬಲವಾಗಿರಬೇಕು. ಕಾರಣವಿದೆ, ಉದಾಹರಣೆಗೆ ಹೇಳುತ್ತೇನೆ. ಗಜೇಂದ್ರಗಡ ಪರಿಯಾದೊಳಗೆ, ರೋಣ ತಾಲ್ಲೂಕಿನೊಳಗೆ ಕುಂಟಜಿ ಮತ್ತು ನಗಸಿಕೊಪ್ಪ ಎಂಬ ಕಡೆ ಎರಡು ಚಿಕ್ಕ ನೀರಾವರಿಗಳನ್ನು ಕೈಗೊಳ್ಳಲಾಗಿದೆ. ಯಾರೋ ಒಬ್ಬರು ಆ ವ್ಯವಹಾರಕ್ಕೆ ಹರಕತ್ತು ಮಾಡಿದ್ದಾರೆ, ಮಣ್ಣು ತೆಗೆದುಕೊಳ್ಳುವುದಕ್ಕೆ ಹರಕತ್ತು ಮಾಡಿದರು ರೆವಿನ್ಯೂ ಡಿಪಾರ್ಟಮೆಂಟಿನವರು ಬಲಪ್ರಯೋಗ ಮಾಡಬೇಕಾಗಿತ್ತು, ಗಾಬರಿ ಬೀಳುತ್ತಾರೆ. ವಿಚಾರ ಮಾಡಿದ್ದರಲ್ಲಿ ತಾವು ಅಂಥ ನಿಶ್ಯಕ್ತ ಡೆಪ್ಯೂಟಿ

1740-12

ಕಮೀಶನರರನ್ನು ಅಲ್ಲಿಗೆ ಹಾಕಿದ್ದೀರಿ ಸರ್ಕಾರದ ಭೂಮಿ ಇನ್ನೂ ತನಕ ರೈತರಿಗೆ ಗ್ರಾಂಟ್ ಆಗಿಲ್ಲ. ಸರ್ಕಾರದ ಭೂಮಿ ಇದ್ದರೂ ಸಹಿತ, ಕಿರುಕುಳ ಕೊಟ್ಟ ಆಗತಕ್ಕಂಥ ಸರ್ಕಾರಿ ಕೆಲಸಕ್ಕೆ ತೊಂದರೆ ಮಾಡುತ್ತಾರೆ ಮತ್ತೆ ನಮ್ಮ ಗಜೇಂದ್ರಗಡದ ಸುತ್ತಮುತ್ತ ಸುಮಾರು 27 ಹಳ್ಳಿಗಳಿವೆ. ಇಲ್ಲಿರುವ ರೈತರಿಂದ ಆರುಪಟ್ಟು ಕಂದಾಯದಷ್ಟು ತೆಗೆದುಕೊಂಡು ಇವರಿಗೆ ರೀಗ್ರಾಂಟು ಮಾಡಬೇಕು ಇದಕ್ಕೆ ಹಿಂದೆ 1960ನೇ ಇಸವಿಯಲ್ಲಿ ಒಂದು ಸರ್‌ಕ್ಯುಲರನ್ನು ತೆಗೆದಿದ್ದರು. ಅದಾಗಿ ಆರು ತಿಂಗಳುಗಳ ಕಾಲ ಅಸೆಂಬ್ಲಿ ಅಧಿವೇಶನ ನಡೆದಾಗ ಇನ್ನೂ ಮೂರು ತಿಂಗಳಾಗಳಲ್ಲಿ ಇದರ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದವರು ಇಲ್ಲಿಯತನಕ ಯಾವ ಕೆಲಸಗಳೂ ಅಲ್ಲಿ ನಡೆದಿಲ್ಲ. ಇದು ಏಕೆ ಆಗಲಿಲ್ಲ? ಮತ್ತು ಕಾನೂನಿನಂತೆ ಏಕೆ ಜಾರಿಗೆ ಕೊಡಲಿಲ್ಲ? ಇದರಲ್ಲಿ ತಮಗೆ ಅನೇಕ ತೊಡಕುಗಳು ಬಂದುದರಿಂದ ಕಷ್ಟವಾಗಿದೆ ಎನ್ನುವುದನ್ನು ಒಪ್ಪುತ್ತೇವೆ. ಇದರಲ್ಲಿ ಕಂದಾಯ 12 ಪಟ್ಟು ಕೊಡಬೇಕೆಂದು ಇದೆ. ಇನ್ನೂ ಅನೇಕ ರೀತಿಯಾದ ತೊಂದರೆಗಳು ಆಗಿವೆ, ಆದಗೆ ಇದರಲ್ಲಿರುವ ನಿಮ್ಮ ಸ್ಪಿರಿಟ್ಟು ತಮ್ಮ ಉದ್ದೇಶಕ್ಕೆ ಅನುಗುಣವಾಗಿ ರೈತರಿಗೆ ಜಮೀನು ಹೋಗುತ್ತಿದೆಯೇ ಎನ್ನುವುದನ್ನು ನೋಡಬೇಕು ತಮ್ಮ ಜಿ.ಆರ್. ಬಗ್ಗೆ ಏನಾದರೂ ತೊಂದರೆ ಇದ್ದರೆ ಪುನಃ ಮತ್ತೆ ಇನ್ನೊಂದು ಜಿ.ಆರ್.ನ್ನು ಹೊರಡಿಸಿ ಇದರ ತಪ್ಪುಗಳನ್ನು ಸರಿ ಮಾಡಲು ವಿಚಾರ ಮಾಡಿ ಆದುದರಿಂದ ತಾವು ಆದಷ್ಟು ಮಟ್ಟಿಗೆ ಇದಕ್ಕೆ ಏನು ಸುಧಾರಣೆಗಳನ್ನು ಮಾಡಬೇಕೋ ಅದನ್ನು ಮಾಡಬೇಕು ಮತ್ತು ಭೂಸುಧಾರಣೆಯನ್ನು ಇದೇ ಅಧಿವೇಶನದಲ್ಲಿಯೇ ತರಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

## ಭೂಸುಧಾರಣೆ ಮಸೂದೆ ಮೇಲಿನ ಚರ್ಚೆ

**ಶ್ರೀ ಎ.ಜಿ. ದೊಡ್ಡಮೇಟಿ (ರೋಣ):** ಸ್ವಾಮಿ, ಮಾನ್ಯ ಕಂದಾಯ ಮಂತ್ರಿಗಳು ತಂದ ಭೂಸುಧಾರಣೆಯ ಮಸೂದೆಗೆ ನಾನು ತುಂಬಾ ಸ್ವಾಗತವನ್ನು ಕೊಡುತ್ತೇನೆ. ಇಲ್ಲಿ ಮಾತನಾಡಿದ ಅನೇಕ ಮಾನ್ಯ ಸದಸ್ಯರು ಈ ತಿದ್ದುಪಡಿ ಮಸೂದೆಗಿಂತ ಹಿಂದೆ ಹೋಗಿ ಮೂಲ ಕಾನೂನಿನ ಮೇಲೆ ಹೆಚ್ಚಾಗಿ ಮಾತಾಡಿದಂತೆ ಕಂಡು ಬರುತ್ತದೆ. ಅದು ಅಷ್ಟು ಅವಶ್ಯವಿತ್ತೋ ಇಲ್ಲವೋ ಗೊತ್ತಿಲ್ಲ. ಆದರೂ ಕೆಲವರು ಮೂಲತಃ ಭೂಸುಧಾರಣಾ ಕಾನೂನಿನ ವಿಷಯದಲ್ಲಿ ಕೆಲವು ತತ್ವಗಳನ್ನು ಗ್ರಹಿಸಿರುವ ಹಾಗೆ ಕಾಣಲಿಲ್ಲ. ಇದರ ಮೂಲ ತತ್ವ ಉಳುವವನೇ ಭೂಮಿಯ ಒಡೆಯನಾಗಬೇಕೆಂಬುದು, ಇಂದಲ್ಲ ನಾಳೆ ಅದನ್ನು ಜಾರಿಗೆ ತರಬೇಕೆಂಬುದು, ಆದರೆ ಈ ಪ್ರಶ್ನೆಯ ಕಡೆ ಹೆಚ್ಚಿನ ಗಮನ ಕೊಡದೆ ಇತರ ಪ್ರಶ್ನೆಗಳ ಕಡೆ ಹೆಚ್ಚು ಗಮನ ಹರಿಸಿ ಆ ಮೂಲಕ ಸಲಹೆಗಳನ್ನು ವ್ಯಕ್ತಪಡಿಸುವುದು ಸರಿಯಲ್ಲವೆಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮೂಲ ತತ್ವದ ಕೆಗೆ ನಮ್ಮೆದುರಿಗಿರುವ ತಿದ್ದುಪಡಿ ಮಸೂದೆ ಎಷ್ಟು ಮಟ್ಟಿಗೆ ಗಮನಕೊಟ್ಟಿದೆ, ಎಷ್ಟು ಸಹಾಯಕವಾಗುತ್ತದೆ ಎಂದು

ವಿಚಾರ ಮಾಡಬೇಕು. ಎಷ್ಟೋ ಜಮೀನುದಾರರು ಇದು ಕ್ರಾಂತಿಕಾರಕವಾದ ಕಾನೂನಲ್ಲ, ಇದರಿಂದ ರೈತರು ಉದ್ಧಾರವಾಗುವುದಿಲ್ಲ, ಇದೊಂದು ಬಗೆಯ ಮಧ್ಯಂತರ ರಾಜಿ ಸೂತ್ರದ ಪ್ರಕಾರ ತಂದ ಕಾನೂನು ಎಂದು ಹೇಳಬಹುದು. ಈ ಕಾನೂನನ್ನು ಹಿಂದೆ ಪಾಸು ಮಾಡಬೇಕಾದರೆ ಈ ಸಭೆಯಲ್ಲಿ ಎಷ್ಟೋ ಶ್ರಮವಾಯಿತು. ಪಾಪ ಕಡಿದಾಳ್ ಮಂಜಪ್ಪನವರು ಕಷ್ಟಪಟ್ಟು ಹೇಗೋ ಪಾಸು ಮಾಡಿಸಿಕೊಂಡರು. ಅನಂತರ 4-5 ವರ್ಷಗಳಿಂದ ಅನೇಕ ಕಾರಣಗಳಿಂದ ಇದನ್ನು ಜಾರಿಗೆ ತರಲು ತೊಂದರೆ ಆಯಿತು. ಆ ಮೇಲೆ ಜುಲೈ ಒಂದರ ವೇಳೆಗೆ ಇದನ್ನು ಜಾರಿಗೆ ತರುತ್ತೇವೆಂದು ಕಂದಾಯ ಮಂತ್ರಿಗಳು ಘೋಷಣೆ ಮಾಡಿ ಬಂದ ಸಣ್ಣ ಪುಟ್ಟ ಅಡಚಣೆ ಅಡ್ಡಿ ಆತಂಕಗಳನ್ನು ತಾಳ್ಮೆಯಿಂದ ಶಾಂತರೀತಿಯಿಂದ ಎದುರಿಸಿ ಈ ಮಸೂದೆಯನ್ನು ತಂದಿರುವುದು ಒಳ್ಳೆಯ ಪ್ರಗತಿಯ ಹೆಜ್ಜೆ. ಒಳ್ಳೆಯ ಕೆಲಸ ಎಂದು ಹೇಳಬಹುದು.

ಇನ್ನು ಇದರಲ್ಲಿರುವ ವಿವರಗಳನ್ನು ನೋಡೋಣ. 1961ನೇಯ ಇಸವಿ ನಂತರ ಆದ ವ್ಯವಹಾರಗಳನ್ನು ಮನ್ನಿಸುವುದಿಲ್ಲ ಎಂದು ತಿಳಿಸಿದ್ದಾರೆ, ಇದೊಂದು ರೀತಿಯಿಂದ ಸರಿಯಾಗಿದೆ ಎಂದು ಹೇಳಬಹುದು. ಆದರೆ ಇದು ಇಡೀ ರಾಜ್ಯದ ದೃಷ್ಟಿಯಿಂದ ಅಲ್ಲದಿದ್ದರೂ ಒಂದು ಭಾಗದ ದೃಷ್ಟಿಯಿಂದ ನೆಟ್ಟಗಿದೆ. ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಹಿಂದಿದ್ದ ಸೀಲಿಂಗಿಗಿಂತ ಹೆಚ್ಚಿಗೆ ಬಿಡುಗಡೆ ಮಾಡುವುದಕ್ಕೆ ಅಲ್ಲಿನ ಜಮೀನುದಾರರಿಗೆ ಅಧಿಕಾರವಿಲ್ಲ. ಇದು ನ್ಯಾಯಲ್ಲ ಎಂದು ಹೇಳುವ ಕೆಲವು ಸಂದರ್ಭಗಳಿವೆ. ಇದೊಂದು ತಾರತಮ್ಯ ಭಾವನೆಯನ್ನು ತೋರಿಸುತ್ತದೆಂಬ ವಾದವಿದೆ. ಆದರೆ ತಾರತಮ್ಯದ ಪ್ರಶ್ನೆ ಇಲ್ಲಿಲ್ಲ. ಇದು ಜಮೀನುದಾರರಿಗೆ ಕಾಠಿಣ್ಯತೆಲ್ಲ. ಒಮ್ಮೆ ಸಾಗುವಳಿದಾರರಿಗೆ, ರೈತರಿಗೆ ಕೊಟ್ಟ ಹಕ್ಕನ್ನು ಈ ಕಾಯಿದೆ ಮೂಲಕ ಮರಳಿ ಕಿತ್ತುಕೊಳ್ಳುವುದು ಸರಿಯಲ್ಲ ಎಂಬ ಧೋರಣೆಯಿಂದ ತಾರಮ್ಯ ಭಾವನೆ ಇದೆಯೆಂದು ಕಂಡರೆ ಅದು ಒಳ್ಳೆಯ ಮಾತು ಎಂದು ಹೇಳಬಹುದು. ಕಂದಾಯ ಮಂತ್ರಿಗಳು ಧೈರ್ಯ ಮಾಡಿದ್ದರೆ ಇದನ್ನು ತಪ್ಪಿಸಬಹುದಾಗಿತ್ತು. ಈಗ ಉತ್ತರ ಕರ್ನಾಟಕದಲ್ಲಿ 48 ಎಕರೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ವಕಾಶ ಏನಿದೆ ಅದನ್ನು ಹಳೆಯ ಮೈಸೂರು ಅಥವಾ ಇತರ ಕಡೆಗಳಲ್ಲಿರುವವರಿಗೆ, ಲಾವಣಿದಾರರಿಗೆ ಅನ್ವಯಿಸುವಂತೆ ಮಾಡಿದ್ದರೆ ಪಕ್ಷಪಾತವಿಲ್ಲದೆ ಸಮನ್ವಯ ದೃಷ್ಟಿಯಿಂದ ಮಾಡಿದಂತಾಗುತ್ತಿತ್ತು. ಏಕೆ ಇದಕ್ಕೆ ಧೈರ್ಯ ಮಾಡಲಿಲ್ಲವೋ ಗೊತ್ತಾಗುವುದಿಲ್ಲ. ವಿನಾಯಿತಿ ಪ್ರಶ್ನೆಯ ಮೇಲೆ ಬಹಳಷ್ಟು ಮಾತು ನಡೆದಿದೆ. 20 ದೇವಸ್ಥಾನಗಳಿಗೆ ವಿನಾಯಿತಿ ಇದೆ. ದೇವಸ್ಥಾನದ ಜಮೀನುಗಳನ್ನು ಲಾವಣಿದಾರರು ಧಡೂತಿ ಜನರು ಕೆಲವರು ಲಾವಣಿ ಹೆಸರಿನಲ್ಲಿ ದುರುಪಯೋಗಪಡಿಸಿಕೊಂಡ ಆ ಜಮೀನುಗಳನ್ನು ಸರಕಾರ ಹರಾಜು ಮಾಡಿ ದೇವರ ಹೆಸರಿನಲ್ಲಿ ಜಮಾ ಮಾಡುತ್ತಾರೆಂದು ಹೇಳುತ್ತಾರೆ. ಮಾತಿನಲ್ಲಿ ತಥ್ಯವುಂಟು, ಕೆಲವರು ಈ ಕಾನೂನನ್ನು ದುರುಪಯೋಗ ಮಾಡಿಕೊಂಡು ನೂರಾರು ಎಕರೆ ಜಮೀನನ್ನು ತಾವೇ ಇಟ್ಟುಕೊಂಡು ದೇಸ್ಥಾನದ ಸದುದ್ದೇಶಕ್ಕೆ ಚ್ಯುತಿ ತರುತ್ತಿದ್ದಾರೆ ಎಂಬ ವಾದವಿದೆ. ಅಂಥವರು

ಎಷ್ಟು ಮಂದಿ ಇದ್ದಾರೆ? ಕಂದಾಯ ಮಂತ್ರಿಗಳು ಇದಕ್ಕೆ ವಿವರ ಕೊಡಲಿಲ್ಲ. ಈ 20 ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ 5-10 ಎಕರೆ ಇರುವವರೆಷ್ಟು, ದಘೂತಿ ಅಸಾಮಿಗಳೆಷ್ಟು? ಈಗ ವಿನಾಯಿತಿ ತೆಗೆದುಕೊಳ್ಳಲಿ. ಆದರೆ ಕಾನೂನನ್ನು ಜಾರಿಗೆ ಕೊಡುವಾಗ, ಹರಾಜು ಹಾಕುವಾಗ 4 ಎಕರೆ, 5 ಎಕರೆ, 10 ಎಕರೆ, ಇರುವ ದೇವಸ್ಥಾನಗಳಿದ್ದರೆ ಅದಕ್ಕೆ ಸಂಬಂಧಪಟ್ಟವರಿಗೆ ತೊಂದರೆ ಮಾಡಬಾರದು. ದಘೂತಿ ಜನರು ಲಾವಣಿ ಹಕ್ಕನ್ನು ದುರುಪಯೋಗ ಮಾಡಿಕೊಳ್ಳುವುದು ನಿಜವಾದರೆ ಮಾತ್ರ ಅಂಥ ಜಮೀನನ್ನು ಮಾತ್ರ "ಪಬ್ಲಿಕ್ ಆಕ್ಷನ್‌ನ್ನಿ" ನಲ್ಲಿ ಹರಾಜು ಮಾಡಿ ಹಣ ದೇವಸ್ಥಾನಕ್ಕೆ ಜಮಾ ಮಾಡಬಹುದು. ಉಳಿದ ಸಣ್ಣಪುಟ್ಟ ಜಮೀನುಗಳಿಗೆ ವಿನಾಯಿತಿ ಕೊಟ್ಟಿರುವುದಕ್ಕೆ ಅದಕ್ಕೆ ಸಂಬಂಧಪಟ್ಟ ದೇವಸ್ಥಾನಗಳವರಿಗೆ ತೊಂದರೆ ಮಾಡಬಾರದು, ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಹೆಚ್ಚು ವಿವರಬೇಕು. ಇದನ್ನು ಬಹಳ ಸೂಕ್ಷ್ಮ ರೀತಿಯಿಂದ ಮತ್ತು ಸ್ವತಃ ವಿಚಾರ ಮಾಡಿ ಸೂಕ್ತ ಕ್ರಮ ಕೈಕೊಳ್ಳಬೇಕು. ನನ್ನ ವೈಯಕ್ತಿಕ ಅಭಿಪ್ರಾಯ ಈ ದೇವಸ್ಥಾನಗಳಿಗೆ ವಿನಾಯಿತಿ ಕೊಡುವುದರಲ್ಲಿ ಕೆಲವು ಅಗತ್ಯದ ಅನುಕೂಲತೆಗಳು ಆಗಬಹುದಾದರೂ ಕೆಲವೊಂದು ಆರೋಪಗಳು ಬರುತ್ತವೆ. ಆಮೇಲೆ ಇದೇ ರೀತಿ ಮಠಾಧಿಪತಿಗಳಿಗೂ ವಿದ್ಯಾ ಸಂಸ್ಥೆಗಳಿಗೂ ಏಕೆ ಹೀಗೆ ವಿನಾಯಿತಿ ಕೊಡಬಾರದು ಎಂಬ ಪ್ರಶ್ನೆ ಬರುತ್ತದೆ. ಬೇಕಾದರೆ ಏನಾದರೂ ಒಂದು ನಿಬಂಧನೆ ಮಾಡಿ ಈ ವಿನಾಯಿತಿಯನ್ನು ಷೆಡ್ಯೂಲ್ ಲಿಸ್ಟಿನಲ್ಲಿ ಕೈಬಿಟ್ಟರೆ ಒಳ್ಳೆಯದನ್ನು ವಿಚಾರ ಮಾಡಿ, ಬಿಟ್ಟರೆ ಹೆಚ್ಚು ಒಳ್ಳೆಯದು, ಇಲ್ಲದಿದ್ದರೆ ಬೇರೆ ಜನರಿಗೇಕೆ ಕೊಡಲಿಲ್ಲ ಎಂದು ಗಲಾಟೆ ಪ್ರಾರಂಭವಾಗುತ್ತದೆ. ಇದಕ್ಕೆ ಇಲ್ಲಿ ಉತ್ತರ ಕೊಡುವುದಲ್ಲದೆ ಹೊರಗೂ ಸಹ ಉತ್ತರ ಹೇಳಬೇಕಾಗುತ್ತದೆ ಈ ಪ್ರಶ್ನೆಯನ್ನು ವಿಚಾರ ಮಾಡಿ ನೋಡಿ.

ಈಗ ರಾಜ್ಯದೊಳಗೆ ಕಾಫಿ ಪ್ಲಾಂಟರುಗಳಿಗೆ ವಿನಾಯಿತಿನ್ನು ಕೊಟ್ಟಿದ್ದಾರೆ ಅದೇ ರೀತಿ ಅಡಕೆ ಮತ್ತು ತೆಂಗಿನ ತೋಟಗಳಿಗೆ ವಿನಾಯಿತಿ ಕೊಡಬೇಕೆಂದು ತೆಂಗು ಮತ್ತು ಅಡಕೆ ಬೆಳೆಯುವವರು ಕೇಳುತ್ತಾರೆ, ಕಾಫಿ ತೋಟಗಳಿಗೆ ಏಕೆ ವಿನಾಯಿತಿಯನ್ನು ಕೊಟ್ಟಿದಾರೆಂದು ಅದರಿಂದ ವಿದೇಶಿ ವಿನಿಮಯ ಬರುತ್ತದೆ, ದೊಡ್ಡ ಸಮುದಾಯದ ಮೇಲೆ ಸಾಗುವಳಿ ಮಾಡಬೇಕಾಗುತ್ತದೆ,ಅದಕ್ಕ ಅನೇಕ ತೊಂದರೆಗಳಿವೆ ಎಂದು ಹೇಳುತ್ತಾರೆ. ಇಷ್ಟೆ ಅಲ್ಲ ಇನ್ನೂ ಒಂದು ಮಾತನ್ನು ಸಹ ಹೇಳುತ್ತಾರೆ. ಕಾಫಿತೋಟಗಳನ್ನು ಯಾರಾದರೂ ಈಗಲೂ ಮಾಡುವವರಿದ್ದರೆ ಬೇಕಾದಷ್ಟು ಜಮೀನನ್ನು ಅವರಿಗೆ ಕೊಡುತ್ತೇವೆ ಎಂದು ಹೇಳುತ್ತಿರುವ ಮಾತುಗಳು ತಮ್ಮ ಲಕ್ಷಕ್ಕೆ ಬಂದಿವೆ. ಆ ವಿವರಗಳು ನನಗೆ ಸರಿಯಾಗಿ ಗೊತ್ತಿಲ್ಲ. ಇದರ ವಿರುದ್ಧ ಮಾತುಗಳೂ ಇವೆ. ಈಗ ಅಡಕೆ ಮತ್ತು ತೆಂಗಿನ ತೋಟಗಳಿಗೆ ವಿನಾಯಿತಿಕೊಡಬಾರದು ಎಂದು ನಿರ್ಧಾರ ಮಾಡಿರುವುದನ್ನು ಅತ್ಯಂತ ಹೃತ್ಪೂರ್ವಕವಾಗಿ

ಸ್ವಾಗತ ಮಾಡುತ್ತೇನೆ. ಅದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳಬೇಕು. ವಿನಾಯತಿಯನ್ನು ಕೊಡಲಿಕ್ಕೆ ಯಾವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆಯೋ ಆ ಉದ್ದೇಶ ವ್ಯರ್ಥವಾಗುವಂತೆ ಸಂಭವವಿದೆ.

ಜಮೀನ್ದಾರರಿಗೆ ಎರಡು ಸಾವಿರ ರೂಪಾಯಿ ಪರಿಹಾರ ಧನವನ್ನು ನಗದಾಗಿಕೊಡಬೇಕು ಎಂದು ಮಾಡಿದ್ದಾರೆ. ಇವತ್ತಿನ ಲೇಟೆಸ್ಟ್ ಫಿಗರ್ ಪ್ರಕಾರ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಎಷ್ಟು ಎಕರೆ ಜಮೀನಿಗೆ ಸರ್ಕಾರದವರು ಪರಿಹಾರ ಕೊಡುವ ಸಂಭವವಿದೆ. ಆದರಿಂದ ಎಷ್ಟು ಲಕ್ಷ ಅಥವಾ ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ ಎನ್ನುವುದನ್ನು ಸೂಚನೆ ಮಾಡಿದ ಕಾಲಕ್ಕೆ ಹೇಳಿದ ಹಾಗೆ ಕಾಣುವುದಿಲ್ಲ. ಇದನ್ನು ಹೇಳಬೇಕು. ಹಿಂದೊಮ್ಮೆ ಸೂಚನೆ ಕೊಟ್ಟಾಗ 10 ಸಾವಿರ ರೂಪಾಯಿನಂತೆ ಕೊಟ್ರೆ ಸುಮಾರು 50 ಕೋಟಿ ರೂಪಾಯಿ ಸರ್ಕಾರಕ್ಕೆ ಬೇಕಾಗುತ್ತದೆ ಎಂದು ಹೇಳಿದರು, ಇವತ್ತು ಆ ಭೂಮಿಗಳು ಉಳಿದಿರಲಿಕ್ಕಿಲ್ಲ. ಈಗ ಇರುವ ಭೂಮಿಗಳಿಗೆ 25 ಕೋಟಿ ರೂಪಾಯಿ ಕೊಡಬೇಕಾಗುತ್ತದೆ ಎಂದು ಹಿಡಿದುಕೊಂಡರೆ ಎರಡು ಸಾವಿರ ರೂಪಾಯಿ ಪ್ರಕಾರ ಎರಡುವರೆ ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ಎಂದು ಹಿಡಿದುಕೊಳ್ಳೋಣ. ಹತ್ತು ಸಾವಿರ ರೂಪಾಯಿವರೆಗೂ ನಗದು ಕೊಡಬೇಕು ಎಂದು ಹೇಳುಂಥ ಸ್ನೇಹಿತರು ಸರ್ಕಾರದ ಹತ್ತಿರ ಹಣವಿದೆಯೋ ಇಲ್ಲವೇ ಎಂದು ವಿಚಾರ ಮಾಡಿದರೆ ಗೊತ್ತಾಗುತ್ತಿತ್ತು. ಸರ್ಕಾರ ಎಲ್ಲಿಂದ ತಂದು ಕೊಡಬೇಕು? ಎರಡು ಸಾವಿರ ರೂಪಾಯಿ ಕೊಡಬೇಕೆಂದು ಮಿತಿ ಹಾಕಿರುವುದು ಸರ್ಕಾರದ ಔದಾರ್ಯ ಎಂದು ಹೇಳುತ್ತೇನೆ. ಔದಾರ್ಯವನ್ನು ಎಷ್ಟು ಮಟ್ಟಿಗೆ ಪಾಲಿಸುವುದಕ್ಕೆ ಸಮರ್ಥವಾಗುತ್ತದೆಯೋ ಗೊತ್ತಾಗುವುದಿಲ್ಲ. ಆ ಸಾಮರ್ಥ್ಯವನ್ನು ಈ ಸಭೆಯಲ್ಲಿ ವಿಷದೀಕರಿಸಬೇಕು ಎಂದು ಹೇಳುತ್ತಿದ್ದೇನೆ. ಎರಡು ಸಾವಿರ ರೂಪಾಯಿ ಪ್ರಕಾರ ರೊಕ್ಕದ ಪರಿಹಾರ ಕೊಡುವುದಕ್ಕೆ ಎಷ್ಟು ರೂಪಾಯಿ ಬೇಕಾಗುತ್ತದೆ. ಅದನ್ನು ಎಲ್ಲಿಂದ ಸಂಪಾದನೆ ಮಾಡುತ್ತಾರೆಂದು ಹೇಳಿದರೆ ನೆಟ್ಟಗೆ ಆದೀತು. ಎರಡು ಸಾವಿರ ರೂಪಾಯಿ ಕೊಡ ಕೊಡದೆ ಅವರಿಗೆಲ್ಲ ಬಾಂಡ್‌ಗಳನ್ನು ಕೊಟ್ಟರೆ ತಪ್ಪಲ್ಲ. ಅನೇಕ ಜನರು ಸಂಬಳ ಸಾರಿಗೆಗಳನ್ನು ಪಡೆಯುತ್ತ ಭೂಮಿಯನ್ನು ಪಡೆದುಕೊಂಡಿದ್ದಾರೆ. ಅಂಥವರಿಗೆ ಬಾಂಡ್ ಕೊಟ್ಟರೆ ತಪ್ಪಲ್ಲ. ಜಮೀನ್ದಾರರಿಗೆ, ಸರ್ಕಾರಿ ಅಧಿಕಾರಿಗಳಿಗೆ, ರೊಕ್ಕ ಕೊಟ್ಟರೆ ಬಹಳ ಮಂದಿ ಜಮೀನ್ದಾರರು ರೊಕ್ಕವನ್ನು ಖರ್ಚು ಮಾಡಿಕೊಂಡು ಊರಿಗೆ ಹೋಗುತ್ತಾರೆ. ಬಾಂಡ್ ರೂಪದಲ್ಲಿ ಕೊಟ್ಟರೆ ಅವರ ಮಕ್ಕಳು ಮೊಮ್ಮಕ್ಕಳು ಅದರ ಪ್ರಯೋಜನವನ್ನು ಮಾಡಿಕೊಳ್ಳುತ್ತಾರೆ. ಈ ಬಗ್ಗೆ ಕೂಡ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಉತ್ತರ ಕರ್ನಾಟಕದ ಜಮೀನ್ದಾರರಿಗೆ ಇದ್ದಂಥ ಪರಮಾವಧಿಯನ್ನು ಕೊಡಬೇಕು. ಈ ಒಂದು ಕಾಯಿದೆಯಿಂದ ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. 48 ಎಕರೆ ಪರಮಾಧಿ ಮಿತಿ ಏನಿದೆ ಅದನ್ನೇ ಕಡೆಗೆ ಅನ್ವಯಿಸಬೇಕೆಂದು ಹೇಳುತ್ತೇನೆ.

ಹಳ್ಳಿಗಳಿಗೆ ಮಾತ್ರ ಸಿಲಿಂಗ್ ಲಿಮಿಟ್ ಹಾಕುತ್ತೀರಿ ಆದರೆ ನಗರಗಳಿಗೆ ಏಕೆ ಬೇಡ ಎಂದು ಹೇಳುವುದು ನ್ಯಾಯವಾದ ಮಾತು, ನಗರಗಳಲ್ಲಿ ಎಷ್ಟೋ ಜನರು ಲಕ್ಷಾವಧಿ ರೂಪಾಯಿಗಳಿಸುವವರಿದ್ದಾರೆ, ಐದು ಹತ್ತು ಸಾವಿರ ರೂಪಾಯಿ ಬಾಡಿಗೆ ಬರುವಂಥ ಜನರಿದ್ದಾರೆ. ಸರ್ಕಾರಿ ನೌಕರರು ನೌಕರಿ ಮಾಡುವುದರ ಮೂಲಕ ಸಂಪಾದಿಸುವುದಲ್ಲದೆ ಜಮೀನುಗಳನ್ನು ಇಟ್ಟುಕೊಂಡಿದ್ದಾರೆ. ಅಂಥ ಜಮೀನುಗಳನ್ನು ಕಿತ್ತುಕೊಳ್ಳುವುದರಿಂದ ತೊಂದರೆ ಇಲ್ಲ. ಕೇವಲ ವ್ಯವಸಾಯದ ಮೇಲೆ ಅವಲಂಬಿಸಿರುವ ಜನರಿಗೆ ನಾಲ್ಕು ಎಕರೆ, ಎಂಟು ಎಕರೆ ಇದ್ದವರಿಗೆ ತೊಂದರೆಯಾಗುತ್ತದೆ. ಇದರಿಂದ ಸಾಮಾನ್ಯ ಹಿಡುವಳಿದಾರಿಗೆ ಸಣ್ಣ ಹಿಡುವಳಿದಾರನಿಗೆ ರಕ್ಷಣೆ ಕೊಡುವುದು ಅವಶ್ಯ. ಸಣ್ಣ ಹಿಡುವಳಿದಾರರಿಗೆ ರಕ್ಷಣೆ ಕೊಡುವ ಭರದಲ್ಲಿ ಶಾಶ್ವತವಾಗಿ ಸರ್ಕಾರ ಮತ್ತು ರೈತ ಇವರ ನಡುವೆ ಜಮೀನ್ದಾರ ವರ್ಗ ಸೂರ್ಯಚಂದ್ರರಿರುವವರೆಗೂ ಮುಂದುವರಿಯಬಹುದು ಎನ್ನುವ ಅನುಮಾನ ನಮಗೆ ಇದೆ. ಈ ರೀತಿ ಮಾಡಬಾರದು ಎಂದು ಹೇಳುತ್ತೇನೆ.

ಈ ಕಾನೂನು ಜಮೀನ್ದಾರರ ಹಿತ ಸಂಬಂಧಿಸಿದ್ದವರು ವಿರೋಧಿಸಿದ್ದು ದೊಡ್ಡ ತಪ್ಪು ಎಂದು ಹೇಳಲಾರೆ, ವ್ಯವಸಾಯಗಾರರೇ ರೈತರ ಹೆಸರಿನಲ್ಲಿ ವಿರೋಧ ಮಾಡಿದ್ದು ಆಶ್ಚರ್ಯವೆನಿಸುತ್ತದೆ. ಸ್ವತಂತ್ರ ಪಕ್ಷದವರು ಇದನ್ನು ವಿರೋಧಿಸಿದ್ದಾರೆ. ಆದರೆ ಸ್ವತಂತ್ರ ಪಕ್ಷದ ಒಬ್ಬ ಸದಸ್ಯರು ಈ ಮಸೂದೆಯನ್ನು ಬಹಳ ಉತ್ಸಾಹದಿಂದ ಸಮರ್ಥ ಮಾಡಿರುತ್ತಾರೆ. ಎಂದು ನಮಗೆ ಒಂದು ರೀತಿಯ ಸಂತೋಷ. ಸರ್ಕಾರದವರು ಹೆಚ್ಚು ವಿಳಂಬ ಮಾಡದೇ ನಗರಕ್ಕೂ ಸಹ ಒಂದು ಉತ್ಪತ್ತಿಯ ಮಿತಿಯನ್ನು ಜಾರಿಗೆ ತರಬೇಕು ಎಂದು ಒತ್ತಿ ಹೇಳುತ್ತೇನೆ. ಅಂಥ ಕಾನೂನನ್ನು ಬೇಗನೇ ತರಬೇಕು. ಹಿಂದೆ ಒಂದು ಕಾಯಿದೆಯನ್ನು ತಂದಿದ್ದರು ಪುನಃ ಆ ಕಾಯಿದೆಯನ್ನು ತರಬೇಕು ಎಂದು ಹೇಳುತ್ತಿದ್ದೇನೆ.

**ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ):** ಮಾನ್ಯ ಅಧ್ಯಕ್ಷರೆ, ಭೂ ಸುಧಾರಣಾ ತಿದ್ದುಪಡಿ ಮಸೂದೆಯ ಬಗ್ಗೆ ಚರ್ಚೆಯಾಗುತ್ತಿರುವ ಈ ಸಂದರ್ಭದಲ್ಲಿ ನನಗೆ ಕಂಡು ಬರುತ್ತಿರುವ ಕೆಲವು ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತಂದು, ಅದಕ್ಕೆ ತಕ್ಕ ತಿದ್ದುಪಡಿಯನ್ನು ತರಬೇಕು ಮತ್ತು ಎಲ್ಲರಿಗೂ ನ್ಯಾಯ ದೊರಕಿಸಿಕೊಡಬೇಕೆಂದು ಸೂಚಿಸಲು ನಿಂತಿದ್ದೇನೆ.

# ಕಪ್ಪತ್ತೇಶ್ವರ ಕ್ಷೇತ್ರ (ಪ್ರವಾಸಿ ತಾಣವಾಗಲಿ)

**ಶ್ರೀ ಎ.ಜೆ. ದೊಡ್ಡಮೇಟಿ:** ಉತ್ತರದಲ್ಲಿ ಮನವಿಗಳೇನೂ ಬಂದಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟ ಮನವಿಗಳನ್ನು ಒಂದು ವರ್ಷದ ಕೆಳಗೆ ನಾನೇ ಒಂದು ಡಿ.ಓ. ಲೆಟರನ್ನು ಸಂಬಂಧಪಟ್ಟ ಮಂತ್ರಿಯವರಿಗೆ ಬರೆದು ಅದರೊಂದಿಗೆ ಕಳಿಸಿದ್ದೆ. ಆ ಫೈಲನ್ನು ಏನಾದರೂ ಪರಿಶೀಲನೆ ಮಾಡಿ ಅದು ಸಿಕ್ಕರೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಒಂದು ವೇಳೆ ಸಿಕ್ಕದೆ ಇದ್ದರೆ ಇದನ್ನೇ ಸೂಚನೆಯನ್ನಾಗಿ ತಿಳಿದುಕೊಳ್ಳುತ್ತೀರಾ?

**ಶ್ರೀ ಡಿ. ದೇವರಾಜ ಅರಸ್:** ನಾನು ಹುಡುಕಿಸಿ ನೋಡಿದೆ. ಸಿಕ್ಕಲಿಲ್ಲ. ಕಪ್ಪತ್ತೇಶ್ವರ ಕ್ಷೇತ್ರವನ್ನೂ ಪರಿಶೀಲನೆ ಮಾಡಿಸಿ ನೋಡಿದೆವು. ಈಗ ಅದನ್ನು ಪ್ರವಾಸೀ ಕೇಂದ್ರವನ್ನಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಹಣವಿಲ್ಲದ್ದರಿಂದ ಸದ್ಯಕ್ಕೆ ನಮ್ಮ ಪ್ರೋಗ್ರಾಂನಲ್ಲಿಲ್ಲ ಸ್ವಾಮಿ.

**ಶ್ರೀ ಸಿ.ಜೆ. ಮಕ್ಕಣ್ಣಪ್ಪ:** ಯಾವುದಾದರೂ ಒಂದು ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾರ್ಪಾಡು ಮಾಡಬೇಕಾದರೆ ಅದಕ್ಕೆ ಇರಬೇಕಾದ ಸೌಲಭ್ಯಗಳು ಮತ್ತು ಆಕರ್ಷಣೆಗಳೇನು ಸ್ವಾಮಿ?

**ಶ್ರೀ ಡಿ. ದೇವರಾಜ್ ಅರಸ್:** ಆ ಸ್ಥಳ ಪುರಾತನವಾದುದಾಗಿರಬೇಕು. ಪ್ರಕೃತಿ ಸೌಂದರ್ಯದಿಂದ ಕೂಡಿರಬೇಕು. ಆಕರ್ಷಣೀಯ ಸ್ಥಳವಾಗಿರಬೇಕು. ಹಿಂದಿನಿಂದ ಅನೇಕ ಜನರು ಬಂದು ಹೋಗುವ ಜಾಗವಾಗಿರಬೇಕು, ವಾಹನ ಸೌಕರ್ಯಕ್ಕೆ ಸರಿಯಾದ ರಸ್ತೆಗಳಿರಬೇಕು, ಅಲ್ಲಿಗೆ ಹೋಗುವಂಥ ಜನ ಉಳಿದುಕೊಳ್ಳುವುದಕ್ಕೆ ಸೌಕರ್ಯವಿರಬೇಕು. ಅಲ್ಲಿಯ ಹವಾಗುಣ ಸಹ ಚೆನ್ನಾಗಿಬೇಕು. ಹೀಗೆ ನಾನಾ ಕಾರಣಗಳಿರುತ್ತವೆ. ಇವೆಲ್ಲನ್ನೂ ದೃಷ್ಟಿಯಲ್ಲಿಟ್ಟುಕೊಂಡು ಪ್ರವಾಸಿ ಕೇಂದ್ರವನ್ನಾಗಿ ಮಾಡುತ್ತೇವೆ. ಇದಲ್ಲದೇ ನಮ್ಮ ದೇಶದ ಪ್ರವಾಸಿಗರು ಮತ್ತು ಹೊರ ದೇಶಗಳ ಪ್ರವಾಸಿಗರು ಬರುತ್ತಾರೆ. ಈ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಪ್ರವಾಸಿ ಕೇಂದ್ರಗಳನ್ನು ತೆರೆಯಬೇಕಾಗುತ್ತದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಮಾನ್ಯ ಮಂತ್ರಿಯವರು ಹೇಳಿದ ವಿಷಯಗಳು ಕಪ್ಪತ್ತಗುಡ್ಡಕ್ಕೆ ಅನ್ವಯಿಸುತ್ತದೆ. ಆಂಧ್ರ ಪ್ರದೇಶದ ನಾಗಾರ್ಜುನ ಎಂಬುವವರು ಬಂಗಾರ ಮಾಡುವವರು ಈ ಗುಡ್ಡಕ್ಕೆ ಮಸಿ ಹಚ್ಚಿ ಅದನ್ನು ಬಂಗಾರವಾಗಿ ಮಾಡುತ್ತಿದ್ದರು ಎನ್ನುವ ಸ್ಥಳ ಪುರಾಣವಿದೆ. ಅಲ್ಲಿ ನಾನಾ ತರಹ ಔಷ್ಯವನಸ್ಪತಿಗಳಿವೆ, ಅಲ್ಲಿರುವ ನೀರು ಖನಿಜಗಳಿಂದ ಕೂಡಿದ್ದು ಎಲ್ಲಾ ರೋಗಗಳೂ ಗುಣವಾಗುತ್ತವೆ. ಇಷ್ಟೆಲ್ಲ ಇದ್ದರೂ ಅಲ್ಲಿ ಪ್ರವಾಸಿ ಕೇಂದ್ರ ಮಾಡುವ ಬಗ್ಗೆ ಚೌಕಾಶಿ ಮಾಡಿ ಏಕೆ ವಿಚಾರ ಮಾಡಬಾರದು?

**ಶ್ರೀ ಡಿ. ದೇವರಾಜ ಅರಸ್:** ಎಲ್ಲಿ ಚೌಕಾಶಿ ಮಾಡಿಸಿದ್ದೇವೆ ಅದಕ್ಕಿಂತಲೂ ಒಳ್ಳೆಯ ಸ್ಥಳಗಳು ಬೇಕಾದಷ್ಟಿವೆ. ಅಲ್ಲಿ ಚಿನ್ನ ಮಾಡುತ್ತಿದರು ಎಂದು ಮಾನ್ಯ ಸದಸ್ಯರು ಹೇಳಿದರು, ವಜ್ರವನ್ನು ತಯಾರು ಮಾಡುತ್ತಿದ್ದ ಗುಡ್ಡಗಳೂ ಇವೆ. ಆದರೆ ದುಡ್ಡಿಲ್ಲದೆ ಇರುವುದರಿಂದ ಸದ್ಯಕ್ಕೆ ನಿಲ್ಲಿಸಬೇಕಾಗಿ ಬಂದಿದೆ.

**ಶ್ರೀ ಕೆ.ಪಿ. ರೇವಣಸಿದ್ದಪ್ಪ:** ಸ್ಥಳ ಪುರಾಣ ಬಹಳ ಇರಬೇಕು, ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕಾದರೆ ಎಂದು ಹೇಳಿದರು, ಮುಳಬಾಗಲು ತಾಲ್ಲೂಕು ಗುಟ್ಟಹಳ್ಳಿಯಿಂದ ಎಂದು ಪ್ರವಾಸಿ ಕೇಂದ್ರವನ್ನು ಮಾಡಿದ್ದಾರೆ, ಅದಕ್ಕೆ ಸಂಬಂಧಪಟ್ಟ ಹಾಗೆ ಏನೇನು ಸ್ಥಳ ಪುರಾಣಗಳಿವೆ? ಅದಕ್ಕಿಂತ ಕಡಿಮೆ ಸ್ಥಳ ಪುರಾಣವೇ ಕಪ್ಪತ್ತಗುಡ್ಡಕ್ಕೆ ಸಂಬಂಧ ಹಾಗೆ ಇರುವುದು.

**ಶ್ರೀ ಎ.ಜೆ. ದೊಡ್ಡಮೇಟಿ:** ಈಗ ಹಣವಿಲ್ಲದ ಕಾರಣ ಪ್ರವಾಸಿ ಕೇಂದ್ರವನ್ನು ತೆಗೆಯುವುದಕ್ಕಾಗುವುದಿಲ್ಲ ಎಂದು ಹೇಳಿದರು. ಹಣ ಯಾವಾಗ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಹಣ ಬಂದ ಕೂಡಲೇ ಈ ಯೋಜನೆಯನ್ನು ಕೈಕೊಳ್ಳಲು ಸಿದ್ಧವಾಗಿರುವಂಥ ರೀತಿಯಲ್ಲಿ ಪ್ರಪೋಸಲ್ ಏಕೆ ಮಾಡಬಾರದು?

**ಶ್ರೀ ಡಿ. ದೇವರಾಜ ಅರಸ್:** ಕಪ್ಪತ್ತಗುಡ್ಡ ಪ್ರದೇಶದ ಪರಿಶೀಲನೆ ಮಾಡಿಸಿದ್ದೇವೆ ಅಲ್ಲಿಗೆ ಹೋಗಲು ಸದ್ಯಕ್ಕೆ ರಸ್ತೆ ಇಲ್ಲ, ಹೊಸದಾಗಿ ರಸ್ತೆ ಮಾಡಬೇಕಾಗಿದೆ ಅಲ್ಲಿ ಜನಗಳಿಗೆ ಇರುವುದಕ್ಕೆ ಸ್ಥಳವಿಲ್ಲ ಅಲ್ಲಿಗೆ ವರ್ಷದಲ್ಲಿ ನಾಲ್ಕೈದು ಸಾವಿರ ಜನ ಹೋಗುತ್ತಾರೆ ಎನ್ನುವ ವರದಿ ಬಂದಿದೆ. ಸ್ಥಳದ ಜನರನ್ನು ಹೆಚ್ಚು ಹೆಚ್ಚಾಗಿ ಆಕರ್ಷಿಸುತ್ತದೆ, ಆ ಸ್ಥಳವನ್ನು ಉತ್ತಮಪಡಿಸಿದರೆ, ಅಭಿವೃದ್ಧಿ ಇನ್ನೂ ಹೆಚ್ಚು ಜನರು ಬರಬಹುದು ಎಂದು ತಿಳಿದು ಬಂದಿದೆ. ಮೈಸೂರು ಪ್ರದೇಶದಲ್ಲಿ ಇಂಥ ಬೇಕಾದಷ್ಟು ಸ್ಥಳಗಳಿವೆ. ಅವುಗಳಿಗೆ ಆದ್ಯತೆಯನ್ನು ನಿಷ್ಕರ್ಷೆ ಮಾಡುವಾಗ ಕಷ್ಟವಾಗುತ್ತದೆ. ಈಗ ಸದ್ಯಕ್ಕೆ ಹೊರ ದೇಶಗಳಿಂದ ಬರುವ ಪ್ರವಾಸಿಗರ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಅದಕ್ಕೆ ನಮ್ಮಲ್ಲಿ ದುಡ್ಡಿಲ್ಲ ಆದರೂ ಕೂಡ ಇವನ್ನು ಹಂತ ಹಂತವಾಗಿ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಕೆ.ಪಿ. ರೇವಣಸಿದ್ದಪ್ಪ:** ಇದನ್ನು ತಾವು ವಿರಾಮಧಾಮ ಮಾಡಿಕೊಳ್ಳುವುದಾದರೆ ಆಗ ಟೂರಿಂಗ್ ಸೆಂಟರ್ ಮಾಡುವುದಕ್ಕೆ ಅವಕಾಶವಾಗುತ್ತಲ್ಲವೇ?

**ಶ್ರೀ ಸಿದ್ದಯ್ಯ ಕಾಶೀಮಠ್:** ಪ್ರವಾಸೀ ಕೇಂದ್ರವನ್ನಾಗಿ ಮಾಡಲು ಯೋಗ್ಯವಾಗಿರುವ ಸ್ಥಳಗಳನ್ನು ಪರಿಶೀಲಿಸಿ ಒಂದು ಪಟ್ಟಿ ತಯಾರಿಸುತ್ತಿರಾ?

ಶ್ರೀ ಡಿ. ದೇವರಾಜ್ ಅರಸ್: ಈಗ ಪರಿಶೀಲನೆ ಮಾಡಿರುವುದಕ್ಕೆ ಹಣವಿಲ್ಲ.

# ಭ್ರಷ್ಟಾಚಾರ ನಿರ್ಮೂಲನೆ

**ಶ್ರೀ ಎ.ಜೆ. ದೊಡ್ಡಮೇಟಿ:** ಮೊದಲನೇ ಪ್ರಶ್ನೆಗೆ ಉತ್ತರವಾಗಿ ರಾಜ್ಯದ ಜಾಗೃತ ಆಯೋಗದ ಕಮೀಷನರು ತಮ್ಮ ವಿದೇಶೀ ಪ್ರವಾಸವನ್ನು ಮುಗಿಸಿದ ನಂತರ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಬಗ್ಗೆ ಸರ್ಕಾರದವರಿಗೆ ಕೊಟ್ಟಿರುವ ವರದಿಯನ್ನು ಪರಿಶೀಲಿಸಲಾಗುತ್ತದೆ ಎಂದು ಹೇಳಿದ್ದಾರೆ. ಆ ವರದಿಯ ಸಾಮಾನ್ಯ ಸ್ವರೂಪ ಏನು, ಆ ವರದಿಯ ಸರ್ಕಾರಕ್ಕೆ ತಲುಪಿದೆಯೇ?

**ಶ್ರೀ ವೀರೇಂದ್ರ ಪಾಟೀಲ್:** ವಿಜಿಲೆನ್ಸ್ ಕಮಿಷನದಿಂದ ಚೀಫ್ ಸೆಕ್ರೆಟರಿಯವರಿಗೆ 1.11.1965ರಲ್ಲಿ ಒಂದು ಪತ್ರ ಬಂದಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ನಾನು ಕೇಳಿದ್ದು ವಿಜಿಲೆನ್ಸ್ ಕಮೀಷನ್ ಇಂತಿಂಥಾದ್ದು ಮಾಡಬೇಕು ಎಂದು ವರದಿಯಲ್ಲಿ ಕೊಟ್ಟಿದ್ದಾರೆಯೇ?

**ಶ್ರೀ ವೀರೇಂದ್ರ ಪಾಟೀಲ್:** ನಾನು ಹೇಳಿದೆ. 1.11.1965 ರಲ್ಲಿ ವಿಜಿಲೆನ್ಸ್ ಕಮೀಷನರು ಚೀಫ್ ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆದಿದ್ದಾರೆಂದು, ಅವರು ಅಂತರ ರಾಷ್ಟ್ರೀಯ ಸ್ಕೌಟ್ ಹಾಗೂ ಗೈಡ್ಸ್ ಕಾನ್‌ಫರೆನ್ಸಿಗೆ ಬ್ರೆಜಿಲ್ಲಿಗೆ ಹೋಗಿದ್ದರು. ಅವರು ಹಾಗೆಯೇ ಸ್ಕ್ಯಾಂಡಿನೇವಿಯಾಗೂ ಭೇಟಿ ನೀಡಿ ಅಲ್ಲಿ ಲಂಚಗುಳಿತನವನ್ನು ಮತ್ತು ಭ್ರಷ್ಟಾಚಾರವನ್ನೂ ಯಾವರೀತಿ ಕಡಿಮೆ ಮಾಡಬೇಕೆಂಬ ಬಗ್ಗೆ "ಓಂಬುಡ್ಸ್‌ಮನ್" ಪದ್ಧತಿಯನ್ನು ಸ್ಟಡಿಮಾಡಿಕೊಂಡು ಅಲ್ಲಿ ಏನಿದೆ, ನಮ್ಮ ದೇಶದಲ್ಲಿ ಏನು ಮಾಡಬೇಕೆಂಬ ಬಗ್ಗೆ ಚೀಫ್ ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಈ ವಿಷಯವು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಇದರ ಬಗ್ಗೆ ಒಂದೊಂದು ಸರ್ಕಾರ ಪ್ರತ್ಯೇಕವಾಗಿ ಮಾಡುವಂಥಾದ್ದಲ್ಲ. ಈ ವಿಚಾರವನ್ನು ಕೇಂದ್ರ ಸರ್ಕಾರದವರು ಈಗಾಗಲೇ ವಿಚಾರ ಮಾಡುತ್ತಿದ್ದಾರೆ. ಅವರು ಯಾವ ರೀತಿ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆಯೋ ಅದನ್ನು ನೋಡಿ ನಾನು ಅದರಂತೆ ಪರಿಪಾಲನೆ ಮಾಡುತ್ತೇವೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಭಾರತದ ದಂಡಪ್ರಕ್ರಿಯಾ ಸಂಹಿತೆಯ ಪ್ರಕಾರ ಅಧಿಕಾರೇತರ ಭ್ರಷ್ಟಾಚಾರ ಆಪಾದನೆ ಬಗ್ಗೆ ಕ್ರಮಗಳನ್ನು ತೆಗೆದುಕೊಂಡಿದ್ದೀರಾ?

**ಶ್ರೀ ವೀರೇಂದ್ರ ಪಾಟೀಲ್:** ಅನೇಕ ಜನ ಸೊಸೈಟಿಗಳ ಅಧ್ಯಕ್ಷರುಗಳು ಮುಂತಾದ ಅಧಿಕಾರೇತರ ಮೇಲೆ ಹಣದ ಅಪವ್ಯಯ ಮತ್ತು ಭ್ರಷ್ಟಾಚಾರದ ಆಪಾದನೆಗಳು ಬಂದಾಗ ಕರಪ್ಷನ್ ಆಕ್ಟ್ ಪ್ರಕಾರ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿದೆ. ಅನೇಕರನ್ನು ಪ್ರಾಸಿಕ್ಯೂಟ್ ಮಾಡಿದೆ. ಮತ್ತು ಅನೇಕರಿಗೆ ಶಿಕ್ಷೆಯಾಗಿದೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಇಂಡಿಯನ್ ಪಿನಲ್ ಕೋಡ್ ಪ್ರಕಾರ ಅಧಿಕಾರೇತರರ ಭ್ರಷ್ಟಾಚಾರವನ್ನು ತಡೆಯುವುದಕ್ಕೆ ಸಾಕಷ್ಟು ಸಾಮರ್ಥ್ಯವಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ವೀರೇಂದ್ರ ಪಾಟೀಲ್:** ಅಧಿಕಾರೇತರರು ಎಂದರೆ ಶಾಸಕರು, ಮಂತ್ರಿಗಳು ಮುಂತಾದವರೆಲ್ಲರೂ ಸೇರುತ್ತಾರೆ. ಅಧಿಕಾರೇತರರ ಮೇಲೆ ಲಂಚಗುಳಿತನ ಮತ್ತು ಭ್ರಷ್ಟಾಚಾರದ ಆಪಾದನೆಗಳು ಬಂದರೆ ಅವರಿಗೆ ಶಿಕ್ಷೆ ಮಾಡಬೇಕಾದರೆ ಯಾವುದಾದರೂ ಒಂದು ಕಾನೂನಿನ ಪ್ರಕಾರ ಅವರಿಗೆ ಶಿಕ್ಷೆ ಮಾಡಬೇಕಾಗುತ್ತದೆ. ಆದ್ದರಿಂದ ಶಾಸಕರು ಮಂತ್ರಿಗಳು ಮುಂತಾದ ಅಧಿಕಾರೇತರರಲ್ಲಿರುವ ಭ್ರಷ್ಟಾಚಾರ ನಿರ್ಮೂಲನಕ್ಕೆ ಕಾನೂನನ್ನು ಮಾಡುವುದಕ್ಕೆ ಬದಲು ಸೆಲ್ಫ್ ಇಂಪೋಜ್ಡ್ ಕೋಡ್ ಆಫ್ ಕಾಂಡಕ್ಟನ್ನು ಹಾಕಿಕೊಂಡು ಆ ರೀತಿ ಎಲ್ಲರೂ ನಡೆಯಬೇಕಾಗುತ್ತದೆ. ಇದರಲ್ಲಿ ಎಲ್ಲರೂ ಕರಪ್ಟ್ ಇದ್ದಾರೆ ಎಂದು ಮಾತನಾಡುವುದರಲ್ಲಿ ಅರ್ಥವಿಲ್ಲ.

## ವಂಶಪರಂಪರೆಯಾಗಿ ಬಂದಿರುವ ಹಳ್ಳಿಯ ಶಾನುಭೋಗ ಹಾಗೂ ಪಟೇಲರ ಅಧಿಕಾರ ಮೊಟಕುಗೊಳಿಸುವ ಕುರಿತು

**ಶ್ರೀ ಎ.ಜೆ. ದೊಡ್ಡಮೇಟಿ:** 1.2.1965 ರಿಂದ ಕಾನೂನು ಜಾರಿಗೆ ಬಂದಿದೆಯೆಂದು ತಾವು ಹೇಳಿದ್ದೀರಿ. ಅಂದರೆ ಒಂದು ವರ್ಷ ಒಂದು ತಿಂಗಳಾಯಿತು. ಕಾನೂನು ಜಾರಿಗೆ ಬಂದಮೇಲೆ ಅದು ಕಾರ್ಯತಃ ಜಾರಿಗೆ ಬರಲು ಎಷ್ಟು ಸಮಯವಾಗುತ್ತದೆ.

**ಶ್ರೀ ಎಂ.ವಿ. ಕೃಷ್ಣಪ್ಪ:** ತಮಗೆ ಗೊತ್ತಿದೆ. ಹೆರಿಡಿಟರಿ ರೈಟ್ಸ್ ಅಬಾಲಿಷ್ ಆಕ್ಟನ್ನು ಎನ್‌ಫೋರ್ಸ್ ಮಾಡಿದ ತಕ್ಷಣ ಪಟೇಲರು ಮತ್ತು ಶಾನುಭೋಗರು ಸೇರಿಕೊಂಡು ಹೈಕೋರ್ಟಿಗೆ ಹೋಗಿ ರಿಟ್ ಹಾಕಿದರು. ನಂತರ ಹೈಕೋರ್ಟಿನಿಂದ ನಾವು ಸುಪ್ರೀಂ ಕೋರ್ಟಿಗೆ ಹೋದೆವು. ಸುಪ್ರೀಂಕೋರ್ಟ್ ಸರ್ಕಾರದ ಪರವಾಗಿ ಜಡ್ಜ್‌ಮೆಂಟ್ ಕೊಟ್ಟರು ಜಡ್ಜ್‌ಮೆಂಟ್ ಕಾಪಿ ನಮಗೆ ಬರುವುದರಲ್ಲಿದೆ. ಈಗಾಗಲೇ ಕ್ರಮ ತಗದುಕೊಳ್ಳುತ್ತಿದ್ದೇವೆ. ಸುಮಾರು 8000 ಅಕೌಂಟೆಂಟರುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ 8000 ದಲ್ಲಿ 4000 ಜನಕ್ಕೆ ಟ್ರೈನಿಂಗ್ ಕೊಟ್ಟಿದ್ದೇವೆ. ಇನ್ನು 4000 ಜನಕ್ಕೆ ಟ್ರೈನಿಂಗ್ ಕೊಡಬೇಕಾಗುತ್ತದೆ. ಈಗ ಕಂದಾಯ ವಸೂಲಿಯ ಕಾಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲಿನ ಕಂತಿನ ವಸೂಲಿ ಪ್ರಾರಂಭವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ವಸೂಲಿಯನ್ನು ಮಧ್ಯಭಾಗದಲ್ಲಿ ಮಾಡಲು ಸ್ವಲ್ಪ ತೊಂದರೆಯಾಗುತ್ತದೆ. ಆದ್ದರಿಂದ ಸ್ವಲ್ಪದರಲ್ಲಿಯೇ 4 ಸಾವಿರಗಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ.

**ಶ್ರೀ ಎ.ಜೆ. ದೊಡ್ಡಮೇಟಿ:** ತಾವು ಕೊಟ್ಟಿರುವ ವಿವರಣೆಯನ್ನು ಶಾನುಭೋಗರ ಬಗ್ಗೆ ಮತ್ತು ಪಟೇಲರ ಬಗ್ಗೆ ವಿವರವಾಗಿ ಹೇಳಿದ್ದೀರಿ. ಆದರೆ ತೋಟಿ ತಳವಾರರ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ಬಗ್ಗೆ ವಿವರ ಕೊಟ್ಟಿಲ್ಲ. ಅವರನ್ನು ಯಾವ ರೀತಿ ನೇಮಿಸುತ್ತೀರಿ. ಅವರಿಗೆ ಯಾವ ರೀತಿ ಸಂಬಳ ಕೊಡುತ್ತೀರಿ.

**ಶ್ರೀ ಎಂ.ವಿ. ಕೃಷ್ಣಪ್ಪ:** ಹಿಂದಿನ ಸರ್ಕಾರದವರು ಶಾನುಭೋಗರು ಮತ್ತು ಪಟೇಲರ ಬಗ್ಗೆ ಮಾತ್ರ ಕ್ರಮ ಕೈಗೊಂಡಿದ್ದರು. ಅವರು ಮಾಡಿರುವ ಆಕ್ಟ್‌ನಲ್ಲಿ ತೋಟಿ ತಳವಾರ, ನೀರಗಂಟಿ ಇವರು ಬೇಕೆ ಬೇಡವೇ ಎಂಬುದನ್ನು ತಿಳಿಸಿಲ್ಲ. ಪಟೇಲರು ಮತ್ತು ಶಾನುಭೋಗರು ತಮಗೆ ಡಿಸ್ಕ್ರಿಮಿನೇಷನ್ ಆಯಿತು ಎಂದು ಹೈಕೋರ್ಟಿಂದ ತಡೆ ಆಜ್ಞೆ ತಂದರು. ಈಗ ಡಿಸ್ಕ್ರಿಮಿನೇಷನ್ ಆಗಿಲ್ಲ ಎಂದು ಆರ್ಡರ್ ಬಂದಿದೆ. ತಕ್ಷಣದಲ್ಲಿಯೇ ಪಟೇಲರನ್ನು, ಶಾನುಭೋಗರನ್ನು ರೀಪ್ಲೇಸ್ ಮಾಡಬೇಕಾಗಿದೆ. ತೋಟಿ, ತಳವಾರ, ನೀರಗಂಟಿಗಳು ವಂಶಪಾರಂಪರ್ಯವಾಗಿ ಬಂದಿದ್ದಾರೆ. ಅವರನ್ನು ಸಹ ತೆಗೆಯಬೇಕೇ ಅಥವಾ ಅವರವರ ಜಾಗಗಳಲ್ಲಿಯೇ ಮುಂದುವರೆಸಬೇಕೇ ಎಂಬುದು ತೀರ್ಮಾನವಾಗಿಲ್ಲ. ತೀರ್ಮಾನವಾಗುವವರೆಗೂ ಅವರೇ ಮುಂದುವರೆಯುತ್ತಾರೆ.

**ಶ್ರೀ ಕೆ.ಪಿ. ರೇವಣಸಿದ್ದಪ್ಪ:** ಇನ್ನೂ 4 ಸಾವಿರ ಜನಕ್ಕೆ ಟ್ರೈನಿಂಗ್ ಆಗಬೇಕು ಎಂದು ನಿನ್ನೆತಾನೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಿರುಪತಿ ಚೌರದ ಹಾಗೆ ಅಲ್ಲೊಂದು ಇಲ್ಲೊಂದು ಸ್ವಲ್ಪ ಮಾಡುವುದಕ್ಕಿಂತ ಪೂರ್ಣವಾಗಿ ಈ ಯೋಜನೆ ಕಾರ್ಯರೂಪಕ್ಕೆ ಬರಲು ಇನ್ನು ಇಷ್ಟು ಸಮಯವಾಗುತ್ತದೆ?

**ಶ್ರೀ ಎಂ.ವಿ. ಕೃಷ್ಣಪ್ಪ:** ಇವರು ತಿರುಪತಿಗೆ ಹೋಗಿ ಬಂದಿದ್ದಾರೆ. ತಿರುಪತಿಯಲ್ಲಿ ಚೌರ ಹೇಗೆ ಮಾಡುತ್ತಾರೆ ಎಂಬುದು ಅವರಿಗೆ ಗೊತ್ತು. ನಾವು ಯಾವ ರೀತಿ ಮಾಡಬೇಕು ಎಂಬುದು ನಮಗೆ ಗೊತ್ತಿದೆ. ಈಗಾಗಲೇ 4 ಸಾವಿರ ಜನಕ್ಕೆ ಟ್ರೈನಿಂಗ್ ಆಗಿದೆ. ಈಗ ಇರುವವರಲ್ಲಿ ಎಸ್.ಎಸ್.ಎಲ್.ಸಿ ಆದವರು ಇದ್ದರೆ ಅವರುಗಳು ಅದರ ಜಾಗದಲ್ಲೇ ಮುಂದುವರಿಯುತ್ತಾರೆ. ಟ್ರೈನಿಂಗ್ ಆದವರು ಕೆಲಸಕ್ಕೆ ಬರುತ್ತಿರುತ್ತಾರೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಉತ್ತರ ಕರ್ನಾಟಕ ಜಿಲ್ಲೆಯಲ್ಲಿರುವ ಅನೇಕ ಹಳ್ಳಿಗಳಲ್ಲಿ ಒಂದೊಂದು ಕಡೆ 8-10 ಜನ ತೋಟಿ, ತಳವಾರ ಇರುತ್ತಾರೆ. ಇವರುಗಳು ಶಾನುಭೋಗರ ಮನೆಯಲ್ಲಿ ಪಟೇಲರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಆದ್ದರಿಂದ ಇವರನ್ನು ಕೆಲಸದಿಂದ ತೆಗೆದುಹಾಕಬೇಕು ಮತ್ತು ಇವರನ್ನು ಕೆಲಸದಿಂದ ತೆಗೆಯಲು ಹಿಂದೆ ಮುಂದೆ ನೋಡಬಾರದು.

**ಶ್ರೀ ಎಂ.ವಿ. ಕೃಷ್ಣಪ್ಪ:** ತೋಟಿ ತಳವಾರರ ಜಾಗಕ್ಕೆ ಮತ್ತೆ ಯಾರನ್ನು ಎಂಬುದನ್ನು ಯೋಚನೆ ಮಾಡುತ್ತಿರುವುದರಿಂದ ಸದ್ಯಕ್ಕೆ ಅವರೇ ಮುಂದುವರೆಯುತ್ತಾರೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಸ್ವಾಮಿ, ಸೂಚಿತ ಏಕ ಸದಸ್ಯ ಆಯೋಗ ಅಕಾಲಿಕ ಎಂದು ನಾನು ಹೇಳುವುದಕ್ಕೆ ಕಾರಣ ದೇಶದಲ್ಲಿ ಇದಕ್ಕಿಂತಲೂ ಅತ್ಯಮೂಲ್ಯವಾದ ಬಹಳ ಮಹತ್ವವಾದ ಮತ್ತು ಜನ ಜೀವನದಲ್ಲಿ ನಿತ್ಯವೂ ಪರಿಣಾಮಕಾರಿಯಾದ ಅನೇಕ ಸಮಸ್ಯೆಗಳು ನಮ್ಮ ಎದುರಿಗಿದ್ದರೂ ಅದರ ಕಡೆಗೆ ಲಕ್ಷ ಕೊಡುತ್ತಿಲ್ಲ. ಪಾಕಿಸ್ತಾನ ಹಾಗೂ ಚೀನಾ ದೇಶಗಳ ಗಡಿಗಳಲ್ಲಿ ಗಂಭೀರವಾದ ಹೋರಾಟ ಮಾಡುತ್ತಿದ್ದರೂ ನಮ್ಮಿಂದ ಇನ್ನೂ ಏನೂ ಮಾಡಲಾಗಲಿಲ್ಲ. ದೇಶದಲ್ಲಿ ಅನ್ನಾಭಾವದ ಪ್ರಶ್ನೆ ಇನ್ನೂ ಕಳವಳ ಮಾಡುತ್ತಿದೆ. ಇಂತಹ ಅನೇಕ ಮಾತುಗಳು ಮತ್ತು ಇನ್ನೂ ದೇಶದ ಇತರ ಸಮಸ್ಯೆಗಳೂ ಮೇಲಿಂದ ಮೇಲೆ ಬರುತ್ತಿದ್ದರೂ ಅವನ್ನು ಹೊರತುಪಡಿಸಿ ಈ ಸಮಸ್ಯೆಗೇಕೆ ಮಹತ್ವ ಕೊಡಬೇಕು? ಆದೇಶದ ಅನ್ಯ ಸಮಸ್ಯೆಗೆ ಹಾಗೂ ರಾಷ್ಟ್ರದ ಅನ್ನ ಸಮಸ್ಯೆಗೆ ಕೈ ಹಾಕಿ ಕೆಲಸ ಮಾಡದೇ ಇರುವುದಿಂದ ಇದು ಅಕಾಲಿಕ ಎಂದು ನನ್ನ ಭಾವನೆ. ಇಂತಹ ಸಮಸ್ಯೆಗಳನ್ನು ತೆಗೆದುಕೊಳ್ಳುವ ವಿಚಾರ ಇದ್ದರೆ, ಇಂತಹ ಮಹತ್ವದ ಪ್ರಶ್ನೆಗಳನ್ನು ಶಾಂತ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾದಾಗ ತೆಗೆದುಕೊಳ್ಳಬಹುದು. ಇದರಿಂದ ಇದು ಅಕಾಲಿಕ ಎಂದು ನಾನು ಹೇಳುತ್ತಿರುವುದು. ಇದೇನೂ ಅಂತಹ ಮಹತ್ವದ ಪ್ರಶ್ನೆಯಲ್ಲ. ದೇಶದಲ್ಲಿ ರಾಜ್ಯಗಳ ಪುನರ್ ವಿಂಗಡನೆಯಾಗಿ ಹತ್ತು ವರ್ಷಗಳಾದವು. ಇನ್ನೂ ಎರಡು ಮೂರು ವರ್ಷಗಳಲ್ಲಿ ದೇಶದ ಇತರ ಮುಖ್ಯ ಸಮಸ್ಯೆಗಳನ್ನು ತೆಗೆದುಕೊಂಡು ಸಮಾಧಾನಕರವಾಗಿ ಅನ್ನು ವಿಚಾರ ಮಾಡಿದ್ದರೆ ಇದಕ್ಕೆ ಒಂದು ಪ್ರಸಂಗ ಎನ್ನಬಹುದಾಗಿತ್ತು. ಈಗ ಅಂತಹ ಯಾವ ಪ್ರಸಂಗವೂ ಇರಲಿಲ್ಲ. ಪ್ರಸಂಗ ನಿರ್ಮಾಣವಾದುದಾದರೂ ಹೇಗೆ? ಮುಂಬೈಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಸೇರಿದಾಗ್ಗೆ ಪೂಜ್ಯ ಸೇನಾಪತಿ ಬಾಪಟ ಅರು ಅಲ್ಲಿನ ಮುಖ್ಯಮಂತ್ರಿಗಳ ನಿವಾಸದ ಮುಂದೆ ಉಪವಾಸ ಕೈಗೊಂಡಿದ್ದಾರೆಂದು ಹೇಳಿ ಪ್ರಧಾನ ಮಂತ್ರಿಗಳನ್ನು ಕರೆದುಕೊಂಡು ಹೋಗಿ ತೋರಿಸಿ ಅಲ್ಲಿ ಮಹಾರಾಷ್ಟ್ರದವರು ಒಂದು ನಾಟಕ ಮಾಡಿದ ಹಾಗೆ ಮಾಡಿದರು. ಆ ತರಹ ನಾಟಕದೊಳಗೇ ಪ್ರಧಾನ ಮಂತ್ರಿಗಳ ಮನಸ್ಸನ್ನು ಕರಗಿಸಿದರು. ನಿಜವಾಗಿ ನಮ್ಮ ರಾಷ್ಟ್ರದ ಗಡಿ ಸಮಸ್ಯೆ ವಿಚಾರ ಮಾಡುವ ಹೊತ್ತಿಗೆ, ಅದರಲ್ಲೂ ರಾಜ್ಯದ ಬೌಂಡರಿ ಪ್ರಶ್ನೆ ಮೇಲೆ ಮಾತನಾಡುವ ಕಾಲದಲ್ಲಿ ನಮ್ಮ ರಾಷ್ಟ್ರದ ರಕ್ಷಣಾಮಂತ್ರಿಗಳು ಇದಕ್ಕೆ ಕೈ ಹಾಕಿದುದನ್ನು ನೋಡಿದರೆ ನನಗನ್ನಿಸುತ್ತದೆ. ರಾಷ್ಟ್ರದ ರಕ್ಷಣಾ ಮಂತ್ರಿಗಳಿಗೆ ಇನ್ನು ಮುಂದೆ ಮಹಾರಾಷ್ಟ್ರದ ಗಡಿ ವಿಸ್ತರಣಾ ಮಂತ್ರಿಯೆಂಬುದಾಗಿ ಕರೆಯುವುದು ನೆಟ್ಟಗೆ ಇರುತ್ತದೆ. ಈ ದೃಷ್ಟಿಯಿಂದ ಇದಕ್ಕಿಂತಲೂ ಹೆಚ್ಚಾಗಿ ಹೇಳುವುದೇನಿದೆ? ಅವರ ಮೊದಲನೆಯ ಜವಾಬ್ದಾರಿ ಕಾರ್ಯ ಮುಕ್ತಾಯವಾದನಂತರ ಈ ಕರ್ತವ್ಯಕ್ಕೆ ಕೈ ಹಾಕಿದ್ದರೆ ಬಹಳ ಚೆನ್ನಾಗಿತ್ತು. ರಕ್ಷಣಾ ಮಂತ್ರಿಗಳ ಪ್ರಭಾವ ಪರಿಚಯ ನನಗೆ ತುಂಬಾ ಉಂಟು. ಈ ದೃಷ್ಟಿಯಿಂದ ಅವರು ಈ ಕೆಲಸಕ್ಕೆ ಇಳಿದುದು ಆಶ್ಚರ್ಯವೇನೂ ಇಲ್ಲ. ಆದರೆ ನನಗೆ ದುಃಖ ಮಾತ್ರವಿದೆ. ಇನ್ನು ಇದು ಅವ್ಯವಹಾರಿಕ ಮತ್ತು ಅಪ್ರಾಸಂಗಿಕವಾದುದು ಎಂಬುದು ಹೇಗೆ ಅಂದರೆ....

# ಗಡಿ ಆಯೋಗದ ನೇಮಿಸುವ ಬಗೆಗೆ ಚರ್ಚೆ

**ಶ್ರೀಎ.ಜೆ. ದೊಡ್ಡಮೇಟಿ:** ಯಾವುದೇ ಒಂದು ಆಯೋಗವನ್ನೋ ಅಥವಾ ಕಮೀಟಿಯನ್ನೂ ಅಥವಾ ಕೋರ್ಟನ್ನೋ ನೇಮಿಸಬೇಕಾದರೆ ಅದರ ಎದುರಿಗೆ ಅದು ಯಾವ ಕೆಲಸ ಮಾಡಬೇಕೆಂಬ ಬಗ್ಗೆ ವಿವರ ಸಿದ್ಧವಾಗಿರಬೇಕು. ಕೆಲಸಕ್ಕಾಗಿ ಕಮೀಷನ್ನೋ ಅಥವಾ ಕಮೀಷನ್ನಿಗಾಗಿ ಕೆಲಸವೋ ಒಂದೂ ಅರ್ಥವಾಗುವುದಿಲ್ಲ ಇದೇ ರೀತಿ ಗಡಿಗಾಗಿ ಕಾರ್ಯವ್ಯಾಪ್ತಿಯೋಳಗೆ ಅಥವಾ ಕಾರ್ಯ-ವ್ಯಾಪ್ತಿಗೆ ಗಡಿಯೋ ಇದು ಗಡಿ ಆಯೋಗದ ರಚನೆಯ ಪ್ರಶ್ನೆಯ ಮೇಲೆ ಇರುತ್ತದೆ. ಯಾವ ಯಾವ ಕಾರ್ಯಗಳಿಗಾಗಿ ಕಮೀಟಿಯನ್ನು ನಿರ್ಮಾಣಮಾಡಬೇಕು ಎಂಬ ಬಗ್ಗೆ ಪೂರ್ತಿ ವಿವರಗಳನ್ನು ಮೊದಲೇ ಸಿದ್ದಪಡಿಸಿರಬೇಕು. ಈ ಆಯೋಗದ ಮಾತು ಅವ್ಯವಹಾರಿಕವಾಗಿದೆ ಎಂಬುದನ್ನು ಶ್ರೀಮಾನ್ ಸುಂತಣಕರ ಅವರೇ ಒಪ್ಪಿಕೊಂಡಿದ್ದಾರೆ. ಇವರ ಹಿನ್ನಲೆಯನ್ನು ನೋಡುವುದಾದರೆ ನಾವುಅಥವಾ ರಾಜಕೀಯ ನಿರ್ಣಯವೆಂದು ಏನು ಹೇಳುತ್ತೇವೋ ಅದು ಈಗ ಸ್ಪಷ್ಟವಾಗಿದೆ ಎಂಬುದು ಗೊತ್ತಾಗುತ್ತದೆ. ಈ ಮಾತನ್ನು ಕೇಂದ್ರ ಸರ್ಕಾರದವರು ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆಂದು ನನಗೆ ಕಾಣುತ್ತದೆ. ಏಕೆಂದರೆ ಮಹಾರಾಷ್ಟ್ರದ ಸದಸ್ಯರು ಅಲ್ಲಿ 66 ಮಂದಿ ಇದ್ದಾರೆ ಕರ್ನಾಟಕದವರು ಕೇವಲ 26 ಮಂದಿ ಇದ್ದಾರೆ ಇದರಲ್ಲಿಯೇ ಅವರ ಒಂದು ಸ್ಪಷ್ಟವಾದ ಮನೋಭಾವ ಎದ್ದು ಕಾಣುತ್ತಿದೆ. ಇಂಥಾದ್ದಕ್ಕೆ ರಾಜಕೀಯ ನಿರ್ಣಯವೆಂದು ಹೇಳಬಹುದು. ಈ ದೇಶದಲ್ಲಿ ಎಲ್ಲಾ ಸಮಸ್ಯೆಗಳನ್ನೂ ರಾಜಕೀಯ ನಿರ್ಣಯದ ರೂಪದಲ್ಲಿ ಎಲ್ಲರೂ ಪರಿವರ್ತನೆ ಮಾಡುತ್ತಿದ್ದಾರೆ. ಬಹುಶಃ ನಮ್ಮವರೂ ಸಹ ಅದನ್ನು ಮಾಡುತ್ತಿದ್ದಾರೆ. ಈ ರೀತಿ ರಾಷ್ಟ್ರದ ಸಮಸ್ಯೆಗಳನ್ನು ರಾಜಕೀಯ ನಿರ್ಣಯಕ್ಕೆ ಎಳೆದರೆ ಇಂದಲ್ಲ ನಾಳೆ ಪ್ರಜಾಪ್ರಭುತ್ವವನ್ನು ನಾವು ಕಳೆದುಕೊಳ್ಳುವ ಪ್ರಸಂಗ ಬಂದೀತು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ನಾನು ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ಒಂದು ದೃಷ್ಟಿಯಿಂದ ಈ ಪ್ರಶ್ನೆಯ ಗುಣಾವಗುಣಗಳನ್ನು ದೀರ್ಘವಾಗಿ ವಿಚಾರ ಮಾಡಬೇಕು. ಇದರಲ್ಲಿ ಏನಾದರೂ ಸತ್ಯಾಂಶವಿದೆಯೇ ಎಂಬುದನ್ನು ನೋಡುವುದೇ ಪ್ರಬುದ್ಧ ವಿಚಾರವೆಂದು ಹೇಳಬಹುದು. ಯಾವುದನ್ನೂ ವಿಚಾರ ಮಾಡದೆ ಸಂರಕ್ಷಣಾ ಮಂತ್ರಿಗಳು ಮಾಡಿದ ಹಾಗೆ ಮಹಾರಾಷ್ಟ್ರ ಮಂತ್ರಿಗಳು ಪಾರ್ಲಿಮೆಂಟಿನ ಸದಸ್ಯರು, ಇತರೇ ಜನರು ಸುಮ್ಮನೆ ಜೋರಾಗಿ ಕೂಗಾಡುತ್ತಿರುವುದು ಅಪ್ರಬುದ್ಧವಾದ ವಿಚಾರವಾಗುತ್ತದೆ. ಪ್ರಬುದ್ಧ ವಿಚಾರವೆಂದರೆ ಏನು ಅಂದರೆ ಯಾವನಾದರೂ ಒಂದು ಸಮಸ್ಯೆಯ ಬಗ್ಗೆ ಒಂದು ಸಾವಿರ ಜನ ಕೇಳಲಿ ಒಬ್ಬರೇ ಕೇಳಿರಿ ಕೇಳಿರತಕ್ಕ ಸಮಸ್ಯೆಯಲ್ಲಿ ಅರ್ಥವಿದೆಯೇ ಎಂಬುದನ್ನು ವಿಚಾರ ಮಾಡಬೇಕು. ಮಹಾರಾಷ್ಟ್ರ ಮತ್ತು ಮೈಸೂರು ಗಡಿ ಸಮಸ್ಯೆ ಈಗ ಎಷ್ಟರ ಮಟ್ಟಿಗಿದೆ ನಿಜವಾದ ಗಡಿ ಆಯೋಗಕ್ಕೆ ಪ್ರೋತ್ಸಾಹ ಕೊಡಬೇಕೇ ಅಥವಾ ಇನ್ನಾವುದಾದರ ಆಧಾರವಿದೆಯೇ ಎಂಬುದನ್ನು ಆಲೋಚನೆ ಮಾಡಬೇಕು ಆ ರಿತಿಯಲ್ಲಿ ಅವರು ಆಲೋಚನೆ ಮಾಡಿದ್ದರೆ ಈಗ ಈ

ರೀತಿಯಾದ ಪ್ರಸಂಗವುಂಟಾಗುತ್ತಿರಲಿಲ್ಲ. ಹಿಂದೆ ಪ್ರಧಾನ ಮಂತ್ರಿಗಳಾಗಿದ್ದಂತಹವರು ಮುಖರ್ಜಿಯವರು, ಮೋತಿಲಾಲ್ ಅವರು ಇಂತಹ ಪ್ರಶ್ನೆಗಳ ಬಗ್ಗೆ ಯಾವ್ಯಾವ ರೀತಿಯಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆಂಬುದನ್ನು ಮಹಾರಾಷ್ಟ್ರೀಯರು ಚೆನ್ನಾಗಿ ಓದಿಕೊಂಡು ನೋಡಿದ್ದರೆ ಇವತ್ತಿನ ದಿವಸ ಈ ಗಡಿ ಪ್ರಶ್ನೆಗೆ ಒಂದು ಆಯೋಗವನ್ನು ನೇಮಿಸುವ ವಿಚಾರಕ್ಕೆ ಹೋಗುತ್ತಿರಲಿಲ್ಲ. ವಿಷಯಗಳನ್ನು ಸರಿಯಾಗಿ ತಿಳಿದುಕೊಂಡು ಹೋಗಿ ಅಭ್ಯಾಸ ಮಾಡಿ ಈ ಪ್ರಶ್ನೆಯನ್ನು ಅವರು ವಿಚಾರ ಮಾಡಿದ್ದಾರೆಂದು ನನಗನ್ನಿಸುವುದಿಲ್ಲ ಇನ್ನು ಮುಂದಾದರೂ ಈ ವಿಚಾರಗಳನ್ನು ಅವರು ಓದಿಕೊಳ್ಳಬಹುದು. ಕೆಲವು ಸದಸ್ಯರು ಇಲ್ಲಿ ಮಾತನಾಡುತ್ತಾ ಇದು ರಾಜ್ಯಾಂಗಕ್ಕೇ ವಿರೋಧವಾಗಿದ ಕಾನೂನಿಗೆ ವಿರೋಧವಾಗಿದೆ. ಎಂಬುದಾಗಿ ಹೇಳುತ್ತಿದ್ದಾರೆ ಇದರ ಬಗ್ಗೆ ಆ ರೀತಿ ಏಕ ವಿಚಾರ ಮಾಡಬೇಕೆಂದು ನಾನು ಕೇಳಬೇಕಾಗಿದೆ. ಒಂದು ವೇಳೆ ಈಗ ನೇಮಿಸಬೇಕೆಂಬ ಗಡಿ ಆಯೋಗ ರಾಜ್ಯಾಂಗಕ್ಕೆ ವಿರೋಧವಾಗಿದ್ದರೆ ಸುಪ್ರೀಂ ಕೋರ್ಟಿಗೆ ಈ ಬಗ್ಗೆ ರಿಟ್ ಅರ್ಜಿಯನ್ನು ಹಾಕುವುದಕ್ಕೆ ಏನೇನೂ ತೊಂದರೆಯಿಲ್ಲ ಅದಕ್ಕೆ ನಾನು ಮೊದಲನೆಯವನಾಗುತ್ತೇನೆ. ರಿಟ್ ಅರ್ಜಿ ಹಾಕುವುದು ರಾಜ್ಯಾಂಗಕ್ಕೆ ವಿರೋಧವಾಗಿಯೇ ಎಂಬುದನ್ನು ನಾವು ಅನೇಕ ರೀತಿಯಲ್ಲಿ ವಿಚಾರ ಮಾಡಿ ನೋಡಿದರೆ ಇದು ಒಂದು ರೀತಿಯಿಂದ ರಾಜಕೀಯ ನಿರ್ಣಯವೇ ಆಗುತ್ತದೆಂಬುದು ಸ್ಪಷ್ಟವಾಗುತ್ತದೆ. ಸುಮಾರು ನಾಲ್ಕು ಕಾಂಗ್ರೆಸ್ ಅಧಿವೇಶನಗಳಿಂದ ಹಿಡಿದು ಇವತ್ತಿನವರೆಗೂ ಅನೇಕ ಆಯೋಗಗಳು ಪ್ರಶ್ನೆಯ ಬಗ್ಗೆ ಆಲೋಚನೆ ಮಾಡುತ್ತಲೇ ಇವೆ. 1924 ನೇ ಇಸವಿಯೊಳಗೆ ಕರ್ನಾಟಕ ಕಾಂಗ್ರೆಸ್ ಅಧಿವೇಶನಕ್ಕೆ ಪೂಜ್ಯ ಮಹಾತ್ಮಗಾಂಧಿಯವರನ್ನು ಕರೆಸಿದ್ದಾಗಲೂ ಗಾಂಧೀಜಿಯವರು ಬೆಳಗಾಂವದಲ್ಲಿ ತಮ್ಮ ಪಾದಗಳನ್ನು ಇಟ್ಟು ಬಂದಂಥ ಭೂಮಿ ಅದು ಪವಿತ್ರವಾದುದಾಗಿದೆ. ಆಗಲೇ ಕರ್ನಾಟಕದವರು ಬೆಳಗಾಂ ಬೇಕೆಂಬುದಾಗಿ ಅಪೇಕ್ಷೆ ಮಾಡಿದ್ದರು ಎಂಬುದಾಗಿ ನಾವು ಅರ್ಥ ಮಾಡಿಕೊಳ್ಳಬಹುದು 1934ನೇ ಇಸವಿ ಮಾರ್ಚ್‌ನಲ್ಲಿ ಮಹಾತ್ಮಗಾಂಧಿಯವರು ಕರ್ನಾಟಕಕ್ಕೆ ಪ್ರವಾಸ ಬಂದಾಗ ಆಗಲೂ ಬೆಳಗಾಂಗೆ ಹೋಗಿದ್ದರು. ಅವರು ಅಲ್ಲಿ ಭಾಷಣ ಮಾಡಿದಾಗ ಅವರ ಭಾಷಣದ ಭಾಷಾಂತರ ಕನ್ನಡದಲ್ಲಿ ಮಾಡಬೇಕೋ ಅಥವಾ ಮರಾಠಿಯಲ್ಲಿ ಮಾಡಬೇಕೋ ಎಂಬ ಪ್ರಶ್ನೆ ಬಂತು ಈ ಪ್ರಾಂತ್ಯ ಕರ್ನಾಟಕಕ್ಕೆ ಸೇರಿರುವುದರಿಂದ ಕನ್ನಡದಲ್ಲಿಯೇ ಅವರ ಭಾಷಣ ಭಾಷಾಂತರವಾಗಲಿ ಎಂದು ಮಹಾತ್ಮಗಾಂಧಿಯವರು ಹೇಳಿದ ಮೇಲೆ ಮಾನ್ಯ ಶ್ರೀ ಗಂಗಾಧರ ದೇಶಪಾಂಡೆಯವರು ಕನ್ನಡದಲ್ಲಿಯೇ ಅವರ ಭಾಷಣವನ್ನು ಭಾಷಾಂತರ ಮಾಡಿದರ ಅಲ್ಲಿ ಇನ್ನೊಂದು ಚಮತ್ಕಾರ ನಡೆಯಿತು. ಮಹಾತ್ಮಗಾಂಧಿಯವರು ಒಂದು ಹರಿಜನ ಕೇರಿಗೆ ಹೋಗಿದ್ದಾಗ ಅಲ್ಲಿನ ಹುಡುಗರು ಗಾಂಧೀ ಎಂಬುದಾಗಿ ಕನ್ನಡದಲ್ಲಿ ಸಹಿ ಮಾಡಬೇಕೆಂಬ ಪ್ರಶ್ನೆ ತೆಗೆದರು ಮರಾಠಿ ಹುಡುಗರು ಕೆಲವರು ಐದು ರೂಪಾಯಿಗಳನ್ನು ಕೊಡುತ್ತೇವೆ ಮರಾಠೀಯಲ್ಲಿಯೇ ಸಹಿ ಮಾಡಿ ಎಂದು ಗಾಂಧೀಜಿಯವರಿಗೆ ಹೇಳಿದರು ಆಗ ಗಾಂಧೀಜಿಯವರು ಅವರಿಗೆ ಎಂದು ಹೇಳಿ ಇದು ಕರ್ನಾಟಕಕ್ಕೆ ಸೇರಿದುದು, ಅದಕ್ಕೋಸ್ಕರ ಕನ್ನಡದಲ್ಲಿಯೇ ಸಹಿ ಮಾಡುತ್ತೇನೆ ಎಂದು ಹೇಳಿ

ಗಾಂಧೀ ಎಂದು ತಮ್ಮ ಹೆಸರನ್ನು ಬರೆದಿದ್ದಾರೆ 1934 ನೇ ಇಸವಿ ಮಾರ್ಚ್‌ನಲ್ಲಿ ಇವನ್ನೆಲ್ಲಾ ನಾನು ಕೆಲವು ಮೀಟಿಂಗ್‌ಗಳಲ್ಲಿ ಸ್ವತಃ ನೋಡಿದ್ದೇನೆ. ಇವತ್ತು ನಾನು ಮಹಾತ್ಮಾಗಾಂಧೀಯವರನ್ನುಸೇರಿಸಿಕೊಳ್ಳಬೇಕಾಗಿದೆ. ಮೋತಿಲಾಲ್ ನೆಹರೂ ಅವರು ನಮ್ಮ ಪ್ರಧಾನ ಮಂತ್ರಿಗಳ ಅಜ್ಜ. ಅವರು 1928 ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೇಸ್ ಕಮಿಟಿ ರಚನೆಯಾದಾಗಲೀ ಅವರು ಬೆಳಗಾಂ ಕರ್ನಾಟಕದೊಳಗೆ ಕೂಡಿದೆ ಎಂಬ ಮಾತನ್ನು ಆಡಿದ್ದರು.

ಇನ್ನು 1943 ನೇ ಇಸವಿಯೊಳಗೆ ಸ್ವತಂತ್ರ ಪಾರ್ಟಿಯ ಧುರೀಣರಾದ ಶ್ರೀಮಾನ್ ರಾಜಾಜಿಯವರು ಬೆಳಗಾಂಗೆ ಬಂದರು. ಆಗಲು ಇದೇ ಪ್ರಸಂಗ ನಡೆಯಿತು. ಆಗ ಅವರು ಕ್ವಿಟ್ ಇಂಡಿಯಾ ಚಳುವಳಿಯ ಪ್ರಚಾರ ಮಾಡಲಿಕ್ಕೆ ಬೆಳಗಾಂಗೆ ಬಂದಿದ್ದರು. ಆ ಸಮಯದಲ್ಲಿ ಸಹ ಮರಾಠಿ ಜನರು ಮರಾಠಿಯಲ್ಲಿ ಭಾಷಣ ಮಾಡಿ ಎಂದು ಕೂಗಾಡಿದರು. ಅವರು ನನಗೆ ಮರಾಠಿ ಬರುವುದಿಲ್ಲವೆಂದರು. ತಮ್ಮ ಇಂಗ್ಲಿಷ್ ಭಾಷಣವನ್ನು ಕನ್ನಡದಲ್ಲಿ ಭಾಷಾಂತರ ಮಾಡಬೇಕೋ ಇಲ್ಲವೇ ಮರಾಠಿಯಲ್ಲಿ ಭಾಷಾಂತರ ಮಾಡಬೇಕೋ ಎಂದು ಜಿಜ್ಞಾಸೆ ಬಂದಾಗ ತಾವು ಕರ್ನಾಟಕ ಪ್ರದೇಶದಲ್ಲಿ ಮಾತನಾಡುತ್ತಿರುವುದರಿಂದ ಕನ್ನಡಕ್ಕೆ ಭಾಷಾಂತರ ಮಾಡಬಹುದೆಂದು ಹೇಳಿದರು ಈ ಪ್ರಕಾರ ಇದು ನೂರಾರು ವರ್ಷಗಳಿಂದ ಹೇಳಿಕೊಂಡು ಬಂದಿರತಕ್ಕ ಪ್ರಶ್ನೆಯಾಗಿದೆ. ಇನ್ನು ಬೆಳಗಾಂನ ಇತಿಹಾಸವನ್ನು ನೋಡೋಣ. ಶ್ರೀಮಾನ್ ಗಾಂಧಿ ವೀರಪ್ಪನವರು ಕೆಲಮಟ್ಟಿಗೆ ಹೇಳಿದರು ಇನ್ನೂ ಸ್ವಲ್ಪ ಮಟ್ಟಿಗೆ ಅದನ್ನು ವಿವರಿಸಬೇಕು ಎಂದು ಕೊಂಡಿದ್ದೇನೆ ವಿವರಗಳು ಬೇಕಾದರೆ ಮಾನ್ಯ ಮಿತ್ರರು ಅದನ್ನು ತೆಗೆದು ನೋಡಬಹುದು. ಅದು 17 ನೇ ಮಾರ್ಚ್ 1818 ರ ಮುಂಬೈ ರೆಗ್ಯುಲೇಷನ್ ಕೋಡನ್ 21 ನೇ ಪುಟದಲ್ಲಿದೆ. ಏನೆಂದರೆ ಬ್ರಿಟೀಷರು ಈ ಪ್ರದೇಶವನ್ನು ಆಕ್ರಮಿಸಿಕೊಂಡ ನಂತರ ಜಿಲ್ಲೆಗಳನ್ನಾಗಿ ಮಾಡುವ ಪ್ರಸಂಗ ಬಂದಿತು. ಆಗ ಏನಾಯಿತೆಂದರೆ ಪುಣೆ ಮತ್ತು ಅಹಮದ್ ನಗರಗಳನ್ನು ಕೂಡಿಸಿ ಮಹಾರಾಷ್ಟ್ರ ಜಿಲ್ಲೆಯೆಂದು ಕರೆದರು.ಉಳಿದ ಕರ್ನಾಟಕ ಭಾಗವನ್ನೆಲ್ಲಾ ಒಂದೇ ಜಿಲ್ಲೆಯನ್ನಾಗಿ ಮಾಡಿದರು. ಬಾಂಬೆ ಕೋಡ, ವಾಲ್ಯೂಮ 28 ರಲ್ಲಿ ಜಿಲ್ಲಾ ಆಫ್ ಕರ್ನಾಟಕವೆಂದೇ ಇದೆ. ಆ ಜಿಲ್ಲಾ ಕರ್ನಾಟಕದಲ್ಲಿ ಏನೇನು ಕೂಡಿತ್ತೆಂದರೆ ಕಸಬಾ ಬೆಳಗಾಂ ಮತ್ತು ಇತರ ಪ್ರದೇಶಗಳು ಸೇರಿದ್ದವು ಧಾರವಾಡ ಜಿಲ್ಲೆಯೆಂದು ಬೇರೆ ಇರಲಿಲ್ಲ. 1891 ರಲ್ಲಿ ಅಲ್ಲಿ ಜನಸಂಖ್ಯೆ 2650 ಇದ್ದಿತು ತದನಂತರ ಅಂಗ್ರೇಜಿ ಲಾಡಾಯಿಯೊಳಗೆ ಮಹಾರಾಷ್ಟ್ರದವರು ವರ್ಚಸ್ಸು ಪಡೆದುಕೊಂಡು ಹಲವಾರು ಮರಾಠಿ ಸಂಸ್ಥಾನದ ಜನರು ಬಂದು ಬಂದು ಬೆಳಗಾಂನಲ್ಲಿ ನೆಲೆಸಿದರು. ಈ ಪ್ರಕಾರದಿಂದ ಬೆಳಗಾಂ ಜನರಿಂದ ತುಂಬಿತು. ನಂತರ ಜನಸಂಖ್ಯೆ ಜಾಸ್ತಿಯಾಗಿ 1899 ರಲ್ಲಿ ಬೆಳಗಾಂ ಪ್ರತ್ಯೇಕ ಜಿಲ್ಲೆಯಾಯಿತು. ತತ್‌ಪೂರ್ವದಲ್ಲಿ ಧಾರವಾಡ ಜಿಲ್ಲಾ ಕಸಬಾ ಬೆಳಗಾಂ ಎರಡೂ ಸೇರಿ ಜಿಲ್ಲಾ ಆಫ್ ಕರ್ನಾಟಕ ಆಗಿತ್ತು. ಇದನ್ನು ನಾವು ನಿರ್ಣಯ ಮಾಡುವುದಕ್ಕೆ ಆದೀತೆ?

ಇಷ್ಟೆಲ್ಲಾ ಹಿಂದಿನ ಇತಿಹಾಸವಿದೆ. ಬೆಳಗಾಂನೊಳಗೆ 97 ಸರ್ಕಾರಿ ಕಛೇರಿಗಳೀವೆ ಅವು ಯಾರಿಗಾಗಿ ಇವೆ? ಇಡೀ ಜಿಲ್ಲೆಗೋಸ್ಕರ ಇವೆ. ಅನೇಕ ಶಿಕ್ಷಣ ಸಂಸ್ಥೆಗಳು ಇವೆ. ಅನೇಕ ಸಾಂಸ್ಕೃತಿಕ ಸಂಸ್ಥೆಗಳು ಇವೆ. ಅನೇಕ ಔದ್ಯೋಗಿಕ ಸಂಸ್ಥೆಗಳು ಇವೆ. ಅವೆಲ್ಲಾ ಜಿಲ್ಲೆಯ ಸಂಸ್ಥೆಗಳಾಗಿವೆ. ಇದನ್ನೆಲ್ಲಾ ನಾವು ನೀವು ಸರಿಯಾಗಿ ತಿಳಿದುಕೊಳ್ಳಬೇಕು. ನಿಮ್ಮಲ್ಲಿ ಬೆಳಗಾಂ ಬಗ್ಗೆ ಅಭಿಮಾನವಿದ್ದರೆ, ಬೆಳಗಾಂ ಬೆಳೆಯಬೇಕು ಎಂದು ಭಯಕ್ಕೆ ಇದ್ದರೆ, ಕೇವಲ ಭಾಷೆಯ ದುರಾಭಿಮಾನಕ್ಕೆ ಒಳಗಾಗಬೇಡಿ, ಬೆಳಗಾಂ ಜನಸಾಮಾನ್ಯರ ಹಿತರಕ್ಷಣೆ ಮಾಡುವದೆಂದರೆ ಕಿಸಾನ್ ಕೂಲಿಗಾರರ ಪಕ್ಷ. ಜನಸಾಮಾನ್ಯರ ಸಲುವಾಗಿ ನಿಮಗೂ ನಮಗೂ ಯಾವ ವ್ಯತ್ಯಾಸವಿಲ್ಲ. ನಿಮ್ಮ ವ್ಯತ್ಯಾಸ ಬೇರೆ ನೀವು ಎಷ್ಟೋ ರೀತಿಯಿಂದ ತಲೆಯೊಳಗೆ ಸುಮ್ಮನೆ ಸಾಮ್ರಾಜ್ಯದ ಪ್ರಶ್ನೆ ಇರಿಸಿಕೊಂಡು ಹೋಗುತ್ತಿದ್ದೀರಿ. ಎಷ್ಟೋ ಕಡೆ ರಕ್ಷಣಾಮಂತ್ರಿಗಳು ಬಂದರೆ ಆಗ ಅವರನ್ನು ಶಿವಾಜಿಗೆ ಹೋಲಿಸಿ ಏನೇನು ಮಾಡುತ್ತೀರಿ. ಹಾಗೆ ಮಾಡುವುದು ಸರಿಯಾದುದಲ್ಲ ನನ್ನ ಅಭಿಪ್ರಾಯ ಕೇಳುವುದಾದರೆ ಶಿವಾಜಿ ದೈವ ಭಕ್ತ ಅವರ ಭಕ್ತಿಗೆ ನಾವು ನಮಸ್ಕಾರ ಮಾಡುತ್ತೇವೆ. ಆದರೆ ಶಿವಾಜಿಯ ಹೆಸರನ್ನು ಮಾತ್ರ ಇದರಲ್ಲಿ ತರಬೇಡಿಯೆಂದು ವಿನಂತಿ ಮಾಡುತ್ತಿದ್ದೇನೆ. ಈ ದೃಷ್ಟಿಯಿಂದ ಇದನ್ನು ನೀವೆಲ್ಲರೂ ವಿಚಾರ ಮಾಡಬೇಕಾದ್ದು ಅವಶ್ಯಕ ಅವರನ್ನು ಶಿವಾಜಿ ಮಹಾಪುರುಷನಿಗೆ ಹೋಲಿಸದೆ ಚೈನಾದ ಮಾವತ್ಸೆ ತುಂಗಗೆ ಬೇಕಾದರೆ ಹೋಲಿಸಿ, ಇದಕ್ಕೆ ನನ್ನ ಕಬೂಲಿ ಇದೆ. ನಿಶ್ಚಯವಾಗಿ ಇದರಲ್ಲಿ ನಿಮಗೆ ಜಯ ಸಿಕ್ಕುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಇನ್ನು ನಿಪ್ಪಾಣಿ ಮತ್ತು ಕಾರವಾರ ಕಾರವಾರದ ಬಗ್ಗೆ ಬಹಳ ಗಂಭೀರವಾಗಿ ವಿಚಾರ ಮಾಡುತ್ತಾ ಇಲ್ಲ. ಬೆಳಗಾಂನವರು ಮಾಸ್ಕ ಕದಂ ಅವರಿಗೆ ಕೈ ಕೊಡುತ್ತಾರೆ. ಸ್ವಲ್ಪ ದಿವಸ ತಾಳಿ ಈ ಕಾರಣಕ್ಕಾಗಿ ಕಾರವಾರದ ಬಗ್ಗೆ ಅಷ್ಟು ಒತ್ತಾಯ ಬಂದಿಲ್ಲ ಅಲ್ಲಿ ಒಂದು ಗುಂಪು ಕಟ್ಟುವುದಕ್ಕೋಸ್ಕರ ಇವರನ್ನು ಕೂಡಿದರು. ಬೆಳಗಾಂ ಕಿತ್ತುಕೊಂಡರೆ ಇವರನ್ನು ಕೈ ಬಿಡುತ್ತಾರೆ ದಯವಿಟ್ಟು ಬೆಳಗಾಂ ಪ್ರಶ್ನೆಯನ್ನು ಇನ್ನು ಮೇಲೆ ಎತ್ತಲಿಕ್ಕೆ ಹೋಗಬೇಡಿ ಹಿಂದೆಯೂ ಸಿಕ್ಕಲಿಲ್ಲ, ಮುಂದೆಯೂ ಸಿಕ್ಕುವುದಿಲ್ಲ. ಯಾವುದೇ ಮಹಾರಾಷ್ಟ್ರದ ಜನರು ಪಡೆಯಲಾರರು. ಇದು ಕನಸಿನ ಮಾತು ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಿ ಸಾವಿರ ಜನರು ಕೂಡಿ ಬಂದರೂ ಸಹ ಬೆಳಗಾಂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

interruptions

**ಶ್ರೀ ಎ.ಜೆ. ದೊಡ್ಡಮೇಟಿ:** ಇನ್ನು ಬೆಳಗಾಂಮಿನ ಹಿನ್ನೆಲೆಯನ್ನು ತಿಳಿದುಕೊಳ್ಳದೆ ಏಕಾ ಏಕಿ ಮಧ್ಯರಾತ್ರಿಯೊಳಗೆ ಜಗತ್ತೆಲ್ಲ ನಿದ್ರಿಸುವ ವೇಳೆಯಲ್ಲಿ ಬುದ್ಧದೇವ ದೇಶಾಂತರ ಹೋದ ವೇಳೆಗೆ ವರ್ಕಿಂಗ್ ಕಮಿಟಿಯನ್ನು ಕರೆದು ಏಕ ಸದಸ್ಯ ಆಯೋಗ ನೇಮಿಸಿದ್ದು ನೋಡಿದರೆ ನಿಶ್ಚಯವಾಗಿ ಯಾವ ರೀತಿಯಿಂದ ಬಂದಂಥ ವಿಪತ್ತು ಎಂದು

ಒಪ್ಪಿಕೊಳ್ಳಬೇಕಾಗಿದೆ. ಅದನ್ನು ಹೇಗೆ ಎದುರಿಸಬೇಕೆಂದು ಹೇಳುತ್ತೇನೆ. ಈ ಆಯೋಗ ರಚನೆ ಅಪ್ರಬುದ್ಧವಾದುದು, ಅಕಾರ್ಯಕವಾದುದು, ಅಪ್ರಾಸಂಗಿಕವಾದುದು, ವಿಚಾರ ಪೂರ್ಣವಾದುದಲ್ಲವೆಂದು ಹೇಳುತ್ತೇನೆ. ಆಂದೋಲನದ ಬಗ್ಗೆ ನಮ್ಮ ಮಿತ್ರರು ಏನೇನೋ ಅಪಕೀರ್ತಿಗಳನ್ನು ಕೊಟ್ಟರು. ಈ ಆಂದೋಳನ ನಿಶ್ಚಿತವಾಗಿ ಸ್ವಯಂಸ್ಫೂರ್ತಿಯಿಂದ ಮಾಡಿದ್ದಾಗಿದೆ ಈ ಗಡಿ ಆಯೋಗವನ್ನು ಸಮೂಲವಾಗಿ ವಿರೋಧ ಮಾಡಿದ್ದೇವೆ. ಕೆಲವರು ಅವಿವೇಕಕ್ಕಾಗಿ ಕೆಲವರು ಅಕಾರ್ಯಕ್ಕಾಗಿ, ಇನ್ನು ಕೆಲವರು ಅಪ್ರಾಸಂಗಿಕವಾಗಿ ವಿರೋಧ ಮಾಡಿದ್ದಾರೆ ಒಂದೇ ಕಾರಣಕ್ಕಲ್ಲ.

**ಶ್ರೀ ಜಿ.ವಿ. ಗೌಡ:** ಗಡಿ ಆಯೋಗಕ್ಕೆ ಧಿಕ್ಕಾರ ಎಂದು ನೀವೇ ಹೇಳಲಿಲ್ಲವೇ?

**ಶ್ರೀ ಎ.ಕೆ. ದೊಡ್ಡಮೇಟಿ:** ಅದು ಅಪ್ರಾಸಂಗಿಕ ಅಕಾರ್ಯಕ ಮತ್ತು ಅಪ್ರಬುದ್ಧವೆಂದು ಹೇಳುತ್ತೇನೆ. ಇದರೊಳಗೆ ಏನು ಬೇಕಾದರೂ ಅರ್ಥ ಮಾಡಿಕೊಳ್ಳಿ. ಹತ್ತು ವರ್ಷಗಳ ತನಕ ಸುಮ್ಮನೆ ಇದ್ದು ಈಗ ಅವರು ಈ ಗಡಿ ಸಮಸ್ಯೆಯನ್ನು ಎತ್ತಿರುವುದನ್ನು ನೋಡಿದರೆ ಶಿವಪೂಜೆಯಲ್ಲಿ ಕರಡಿಯನ್ನು ಬಿಟ್ಟಹಾಗೆ ಇದೆ ಈ ಕರಡಿಯ ಕೈಯಿಂದ ನಾವು ಹೇಗೆ ಪಾರಾಗಬೇಕು ಎಂಬುದನ್ನು ನಾವು ವಾಸ್ತವಿಕ ದೃಷ್ಟಿಯಿಂದ ಪರಿಶೀಲನೆ ಮಾಡಬೇಕು ಇದನ್ನು ನಾವು ರಾಜಕೀಯ ದೃಷ್ಟಿಯಿಂದ ಒಬ್ಬೊಬ್ಬರಿಗೊಬ್ಬರು ಮಾತನಾಡುವಿರಿ ಬೇಡ ಈ ಪ್ರಶ್ನೆಯನ್ನು ನಾವು ನಾಡಿನ ಹಿತದೃಷ್ಟಿಯಿಂದ ಪರಿಶೀಲನೆ ಮಾಡಬೇಕು. ಈಗ ಗಡಿ ಪ್ರಶ್ನೆಗೆ ಕಾಂಗ್ರೆಸ್ ಪಾರ್ಟಿ ಕಮ್ಯುನಿಸ್ಟ್ ಪಾರ್ಟಿ ಪಿ.ಎಸ್.ಪಿ. ಪಾರ್ಟಿ ಎಲ್ಲಾ ಪಾರ್ಟಿಗಳ ಒಂದೇ ಇದು ನಾಡಿನ ಪ್ರಶ್ನೆ ಇದನ್ನು ಎಲ್ಲರೂ ಕೂಡಿ ಆಲೋಚನೆ ಮಾಡೋಣ ಪಾಸ್ಕರರು ಏನು ಹೇಳಿದರು ಎಂದರೆ ಮದ್ರಾಸು ಮತ್ತು ಆಂಧ್ರದ ಮುಖ್ಯಮಂತ್ರಿಗಳು ಸೇರಿಕೊಂಡು ಈ ಗಡಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿದರು. ಅವರು ಹೇಳಿದ್ದನ್ನು ನಾನು ಸ್ವಾಗತಿಸುವುದಕ್ಕೆ ಸಾಧ್ಯವಿಲ್ಲ, ಪಾಟಸ್ಕರ ಸೂತ್ರವನ್ನು ಅನುಸರಿಸುವುದಕ್ಕೆ ಸಾಧ್ಯವಿಲ್ಲ ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವೆ ಕೆಲವು ಹಳ್ಳಿಗಳು ಬದಲಾವಣೆಗಳಾಗಬೇಕಾಗಿದೆ ಅದನ್ನು ನಾವು ಒಪ್ಪಿಕೊಂಡಿದ್ದೇವೆ ಇನ್ನು ಮುಂದೆಯೂ ನಾವು ಅದನ್ನು ಒಪ್ಪಿಕೊಳ್ಳುತ್ತೇವೆ ಇದಕ್ಕೆ ಇಂಥಾ ಹೋರಾಟವನ್ನು ಮಾಡತಕ್ಕ ಅವಶ್ಯಕತೆ ಇರಲಿಲ್ಲ ಇದಕ್ಕೆ ಮಧ್ಯರಾತ್ರಿಯಲ್ಲಿ ಮಾಡಿದಂಥಹ ನಿರ್ಣಯ ಅನಾವಶ್ಯಕ ಇದನ್ನು ಯಾವುದೋ ಒಂದು ರೀತಿಯಿಂದ ಹೊಂದಾಣಿಕೆ ಮಾಡಿಕೊಳ್ಳಬಹುದಿತ್ತು.

ಈ ಪ್ರಶ್ನೆಯ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ನಮ್ಮ ಇಬ್ಬರು ಸ್ನೇಹಿತರು ಬಹಳ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಪುನಃ ಅದನ್ನು ಪುನರುಚ್ಚಾರ ಮಾಡುವ ಕಾರಣ ಇಲ್ಲ ಮಹಾ ಮಹಾದೊಡ್ಡ ಮೇಧಾವಿಗಳಾದಂಥ ಮನುಷ್ಯರು ಈ ಗಡಿ ಆಯೋಗವನ್ನು ನೇಮಕ ಮಾಡುವುದು ಸರಿಯಲ್ಲ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದ ಇದನ್ನು

1740-13

ಅನಿರ್ದಿಷ್ಟಕಾಲದವರೆಗೆ ಮುಂದಕ್ಕೆ ಹಾಕಿದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ ನಾಗ ವಿದರ್ಭ ಆಂದೋಳನದ ನಾಯಕರಾದ ಶ್ರೀ ಅಣೆಯವರು ಬೆಳಗಾವಿ ಕರ್ನಾಟಕಕ್ಕೆ ಸೇರಿದ್ದು ಎಂದು ಹೇಳಿದ್ದಾರೆ. ಅವರು ಶ್ರೀಮಾನ್ ಸುಂತನಕರ್ ಅವರಿಗಿಂತ 100ಕ್ಕೆ 100 ಮರಾಠಿಗರು ಅವರು ಯಾವ ಕಾರಣಕ್ಕಾಗಿ ಹೇಳಿದ್ದಾರೆ ಎಂಬುದನ್ನು ಯೋಚನೆ ಮಾಡಬೇಕು ಈ ದ್ವೇಷದಿಂದ ಈಗ ಎತ್ತಿರತಕ್ಕಂಥ ಗಡಿ ಪ್ರಶ್ನೆ ಸರಿಯಿಲ್ಲ ಈಗ ಮಹಾರಾಷ್ಟ್ರದವರ ನಿಲುಮೆ ಏನಿದೆ ಅದನ್ನು ಯಾವ ವಿಚಾರವಂತರೂ ಒಪ್ಪುವುದಕ್ಕೆ ಸಾಧ್ಯವಿಲ್ಲ ಕರ್ನಾಟಕ ನಿಲುವು ಬಹಳ ಸ್ಪಷ್ಟವಾಗಿದೆ. ಕಾರವಾರ, ಬೆಳಗಾಂ, ನಿಪ್ಪಾಣಿ, ಇವುಗಳು ಯಾವಕ್ಕೂ ಆಯೋಗದವರು ಕೈ ಹಾಕುವಹಾಗಿಲ್ಲ ಕೇವಲ ಚಿಕ್ಕಪುಟ್ಟ ಹೊಂದಾಣಿಕೆಗಳಿಗೆ ನಾವು ಕುಳಿತುಕೊಂಡು ಮಾತನಾಡೋಣ. ಇದರಲ್ಲಿ ನಮ್ಮ ಸರ್ಕಾರದವರು ಕೆಲವು ತಪ್ಪುಗಳನ್ನು ಮಾಡಿದ್ದಾರೆ ಅದೇನೆಂದರೆ ಈಗ ಕಾಸರಗೋಡು ಮುಂತಾದ ಕರ್ನಾಟಕಕ್ಕೆ ಸೇರಬೇಕಾದ ಪ್ರದೇಶಗಳ ಬಗ್ಗೆ ಯಾವ ವಿಧವಾದ ಕ್ರಮವನ್ನು ತೆಗೆದುಕೊಳ್ಳದೆ ಅವುಗಳನ್ನು ಹಾಗೇಯೇ ಬಿಟ್ಟುಕೊಂಡು ಬಂದಿದ್ದಾರೆ. ಈಗ ಒಂದೊಂದು ಇಲಾಖೆಯ ಪೋರ್ಟಿಪೋಲಿಯೋವನ್ನು ಯಾವ ರೀತಿ ಒಬ್ಬೊಬ್ಬರು ಮಂತ್ರಿಗಳಿಗೆ ವಹಿಸಿದ್ದಾರೆಯೋ ಅದೇ ರೀತಿ ಈ ಸಮಸ್ಯೆಯನ್ನು ಒಬ್ಬರು ಮಂತ್ರಿಗಳಿಗೆ ವಹಿಸಿದ್ದರೆ ಅವರು ಆ ಕಾರ್ಯವನ್ನು ಮಾಡುತ್ತಿದ್ದರು ಆದರೆ ಹೊರಗಡೆ ಇರತಕ್ಕ ಕನ್ನಡ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸಿಕೊಳ್ಳತಕ್ಕಂಥ ಸಮರ್ಥ ರೀತಿಯ ಕಾರ್ಯವನ್ನು ಸರ್ಕಾರ ಮಾಡಿಲ್ಲ ನಿಜವಾಗಿಯೂ ಸರ್ಕಾರದವರು ಪ್ರಯತ್ನ ಮಾಡಿದ್ದರೆ ಅದು ಅನುಕೂಲವಾಗುತ್ತಿತ್ತು. ಅವು ಸಣ್ಣ ಪ್ರಶ್ನೆ ಆದರೂ ಕೂಡ ಅವು ಅದು ದೊಡ್ಡ ಪ್ರಶ್ನೆಯಾಗಿ ನಮ್ಮ ಮುಂದೆ ಹಾಗೇಯೇ ಉಳಿಯುತ್ತಿವೆ. ಆಂಧ್ರ ಮತ್ತು ಮೈಸೂರುಗಳ ಗಡಿ ಸಮಸ್ಯೆಯ ಬಗ್ಗೆ ಶ್ರೀ ಸಂಜೀವರೆಡ್ಡಿಯವರು ಏನು ಹೇಳಿದ್ದಾರೆಂಬುದು ನಮಗೆ ಗೊತ್ತಿದೆ. ಕಾಸರಗೋಡಿನ ಪ್ರಶ್ನೆ ಏನಾಗಿದೆ ಎಂಬುದು ನಮಗೆ ಗೊತ್ತಿದೆ ಹೀಗೆ ಅನೇಕ ಸಮಸ್ಯೆಗಳು ನಮ್ಮ ಕಣ್ಣು ಎದುರಿನಲ್ಲಿದೆ ಕೇರಳವಾಗಲೀ ಮದ್ರಾಸಾಗಲೀ ಆಂಧ್ರವಾಗಲೀ ನಾವು ನಾವೇ ಕುಳಿತುಕೊಂಡು ಗಾಂಭೀರ್ಯದಿಂದ ಮಾತನಾಡಿ ನಿಶ್ಚಯ ಮಾಡಬೇಕು. ಯಾವ ಆಯೋಗವನ್ನು ನೇಮಕ ಮಾಡುವುದು ನಿರರ್ಥಕ, ಇಂಥಾ ಪ್ರಶ್ನೆಯನ್ನು ಒಳ್ಳೆಯ ಮನೋಭಾವನೆಯಿಂದ ಬಗೆಹರಿಸಿಕೊಳ್ಳುವುದಕ್ಕೆ ಸಿದ್ಧರಾಗಬೇಕು ಕೇರಳಗಡಿ ಪ್ರಶ್ನೆಯ ಬಗ್ಗೆ ಅಲ್ಲಿನ ಸರ್ಕಾರದವರು ಅಲ್ಲಿ ಜನತಾಸರ್ಕಾರ ಬಂದ ಮೇಲೆ ಅದನ್ನು ವಿಚಾರ ಮಾಡಿಕೊಳ್ಳಿ ಎಂದು ಹೇಳಿದ್ದಾರೆ ಅವರು ಒಪ್ಪಿದ ತತ್ವದ ಪ್ರಕಾರ ಚುನಾವಣೆಯ ನಂತರ ಆಯೋಗವನ್ನು ನೇಮಿಸಬೇಕು.

**ಶ್ರೀ ಜಿ.ವಿ. ಗೌಡ:** ಈಗಾಗಲೇ ಆಯೋಗವನ್ನು ನೇಮಿಸುತ್ತೇವೆಂದು ಮೊನ್ನೆ ಪ್ರಧಾನ ಮಂತ್ರಿಗಳು ಹೇಳಿದ್ದಾರೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಅದು ಅಪ್ರಬುದ್ಧ ಅಪ್ರಾಸಂಗಿಕ ಅವ್ಯವಹಾರ ಈ ಬಗ್ಗೆ ಕೇಂದ್ರ ಸರ್ಕಾರದವರು ಮಾಡಿದಂತಹ ನಿರ್ಣಯ ಸರಿಯಲ್ಲ ಈ ಗಡಿ ಪ್ರಶ್ನೆಯ ಬಗ್ಗೆ ಕರ್ನಾಟಕದ ಮಟ್ಟಿಗೆ ನಾನು ಹೇಳುವುದಾದರೆ ಗಡಿ ಆಯೋಗ ರಚನೆ ಮಾಡುವುದು ಮಧ್ಯರಾತ್ರಿಯಲ್ಲಿ ಕಾಂಗ್ರೇಸ್ ಕಾರ್ಯ ಸಮಿತಿಯ ಮಾಡಿದಂಥಾದ್ದು ಕಾಂಗ್ರೆಸ್ ಕೂಟ ಕಡೆದ ಕಾಲ ಕೂಟ ವಿಷ. ಈ ಸಮುದ್ರಮಥನ ಕಾಲಕ್ಕೆ ಹುಟ್ಟಿದಂತಹ ವಿಷವನ್ನು ನುಂಗುವಂತೆಯೂ ಇಲ್ಲ ಉಗುಳುವಂತೆಯೂ ಇಲ್ಲ.

ನೀಲಕಂಠರಾಗಿ ಈ ಪ್ರಶ್ನೆಯನ್ನು ಎದುರಿಸಬೇಕು ನೀಲಕಂಠರಾಗಿ ಇದರ ಕಾರ್ಯ ವ್ಯಾಪ್ತಿಯನ್ನು ಬಗೆಹರಿಸಬೇಕು. ಕಾರ್ಯವ್ಯಾಪ್ತಿ ಯಾವ ರೀತಿ ಇರಬೇಕು? ಇದನ್ನು ನಮ್ಮ ಸರ್ಕಾರದವರು ಲಕ್ಷ್ಯದಲ್ಲಿಡಬೇಕು. ಸ್ವಲ್ಪ ಬರೆದು ತಂದಿದ್ದೇನೆ ಕಾರ್ಯ ವ್ಯಾಪ್ತಿ ಬಾಯಿಯಲ್ಲಿ ಹೇಳಿದರೆ ಹೆಚ್ಚು ಕಡಿಮೆ ಆದರೆ ಸ್ವಲ್ಪ ತೊಂದರೆ ಆದೀತು ಎಂದು ಹೇಳಿ ಬರೆದು ತಂದಿದ್ದೇನೆ ಅದನ್ನು ಓದುತ್ತೇನೆ.

1. 1961 ರ ಜನಗಣತಿಯ ಮೇರೆಗೆ ಕಂಡುಹಿಡಿಯಲ್ಪಟ್ಟ ಭಾಷಿಕ ಸಂಖ್ಯೆಗಳನ್ನೇ ಆಧಾರವಾಗಿ ತೆಗೆದುಕೊಳ್ಳಬೇಕು.

2. ರಾಜ್ಯ ಪುನರ್ರಚನಾ ಕಾನೂನಿನ್ವಯ ನಿರ್ಮಾಣಗೊಂಡ ಎರಡು ರಾಜ್ಯಗಳ ನಡುವಿನ ಸೀಮಾ ಪ್ರಶ್ನೆಯನ್ನು ಮಹಾರಾಷ್ಟ್ರವು ಎತ್ತಿರುವುದರಿಂದ ಆ ಎರಡು ಗಡಿಯಂಚುಗಳು ಕೂಡುವ ತಾಲ್ಲೂಕುಗಳ ಮೇರೆಯನ್ನಲ್ಲದೆ ಬೇರಾವ ಪ್ರದೇಶದ ವಿಚಾರವನ್ನು ಪರಿಶೀಲನೆಗೆ ತೆಗೆದುಕೊಳ್ಳಬಾರದು.

3. ಕೊಂಕಣಿಯು ಒಂದು ಸ್ವತಂತ್ರ ಮತ್ತು ಪ್ರತ್ಯೇಕ ಭಾಷೆಯಾಗಿದ್ದು ಅದಕ್ಕೆ ಮರಾಠಿ ಭಾಷೆಯ ಸಂಬಂಧವೇನೂ ಇರುವುದಿಲ್ಲ. ಹೀಗಿರುವಾಗ ಕೊಂಕಣಿ ಭಾಷೆಯ ಜನರನ್ನು ಮರಾಠಿ ಮಾತಾಡುವ ಜನರೆಂದು ಗ್ರಹಿಸಬಾರದು

4. ರಾಜ್ಯಪುನರ್ರಚನಾ ವಿಧೇಯಕವು ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ ನಿಷ್ಕರ್ಷಿಸದೆ ಸೀಮೆ ಅಥವಾ ಪ್ರದೇಶಗಳ ವಿಷಯದಲ್ಲಿ ಈಗ ಪರಿಶೀಲನೆಗೆ ಅವಕಾಶವಿರಬೇಕು ಪರಿಶೀಲಿಸಿ ನಿರ್ಣಯಿಸಲ್ಪಟ್ಟ ವಿಷಯಗಳಲ್ಲಿ ನಿಷ್ಕರ್ಷಿಸಲ್ಪಟ್ಟ ವಿಷಯಗಳೆಂದು ತಿಳಿದು ಅವುಗಳನ್ನು ಪುನಃ ಎತ್ತತಕ್ಕದ್ದಲ್ಲ.

5. ರಾಜ್ಯ ಪುನರ್ರಚನಾ ಆಯೋಗದವರು ಸ್ವೀಕರಿಸಿದ ತತ್ವಗಳನ್ನೇ ಈಗಲೂ ಸಹ ವಿವಾದಾತ್ಮಕ ವಿಷಯಗಳಿಗೆ ಅನ್ವಯಿಸಬೇಕು.

6. ಯಾವುದೊಂದು ರಾಜ್ಯದಲ್ಲಿ ಸೇರ್ಪಡೆಯಾದ ನಿಮಿತ್ತದಿಂದ ಒಂದು ಭಾಷೆಯ ಜನಕ್ಕೆ ಆಡಳಿತಯ ಅನಾನುಕೂಲತೆಯೋ ಅಥವಾ ಇನ್ನಾವುದೋ ತೊಂದರೆಯೋ

ಆಗಿರುತ್ತದೆಂಬ ಕಾರಣವೇ ಒಂದು ಹಳ್ಳಿಯನ್ನು ಇಲ್ಲವೆ ಪ್ರದೇಶವನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗಾಯಿಸುವಲ್ಲಿ ಮುಖ್ಯ ಅಂಶವಾಗಿರಬೇಕು ಆದರೆ ಅದೇ ವೇಳೆಯಲ್ಲಿ ಇನ್ನೊಂದು ಭಾಷೆಯ ಜನಕ್ಕೆ ಈ ವರ್ಗಾವಣೆಯಿಂದ ಆಗುವ ಅನಾನುಕೂಲತೆಗಳು ಕ್ಷುಲ್ಲಕವಾಗಿರಬೇಕು.

7. ಜನತೆಯ ಕಲ್ಯಾಣದ ವಿಷಯದ ದೃಷ್ಟಿಯಿಂದ ಮತ್ತು ನಿರ್ವಿಕಾರವಾಗಿ ಗಮನದಲ್ಲಿಟ್ಟುಕೊಂಡಿರಬೇಕು ಮತ್ತು ಅದೇ ನಿರ್ದೇಶಿತ ಅಂಶವಾಗಿರಬೇಕು (ಸ್ಥಳೀಯ ಕೆಲವೊಂದು ವರ್ಗದ ಜನರು ಮುಂದೆ ಮಾಡುತ್ತಿರುವ ಬೇಡಿಕೆಯನ್ನೇ ಜನತೆಯ ಆಕಾಂಕ್ಷೆಯೊಂದು ಗ್ರಹಿಸಬಾರದು ಅದು ಮನೋವೈಪರೀತ್ಯದಿಂದ ಬಂದದ್ದು, ಅದಕ್ಕೆ ಅಷ್ಟೊಂದು ಮಹತ್ವ ಕೊಡಬಾರದು)

8. ಜಿಲ್ಲೆಯು ಕೇಂದ್ರ ಸ್ಥಳಗಳನ್ನು ಆ ಜಿಲ್ಲೆಯು ಹಿನ್ನುಡಿಂಯೊಂದಿಗೇ ವರ್ಗಾಯಿಸಬೇಕಲ್ಲದೆ ಅದರಿಂದ ಬೇರ್ಪಡಿಸಬಾರದು.

9. ನಗರಗಳನ್ನು ಮತ್ತು ದೊಡ್ಡ ಪಟ್ಟಣಗಳನ್ನು ಭಾಷಿತ ಬಹುಮತ ಅಲ್ಪ ಮತದ ಹಿನ್ನಲೆಯಲ್ಲಿ ವಿಚಾರಿಸಬಾರದು. ಅವುಗಳನ್ನು ವಿಶೇಷ ರೀತಿಯಲ್ಲಿ ಪರಾಮರ್ಶೀಸಬೇಕು ನಗರಗಳ ಮೇಲೆ ಅವಲಂಬಿಸಿದ ಅವುಗಳ ಸುತ್ತಮುತ್ತಲಿನ ಪ್ರದೇಶದ ಹೊಂದಾಣಿಕೆಯನ್ನು ಅಂದರೆ ವ್ಯಾಪಾರೋಧ್ಯಮ ಕೈಗಾರಿಕೋಧ್ಯಮ ಕಸಬುಗಳು ಬ್ಯಾಂಕುಗಳು ವಿದ್ಯಾ ಸಂಸ್ಥೆಗಳು ಆಸ್ಪತ್ರೆ ಹಾಗೂ ಇನ್ನಿತರ ಆರ್ಥೀಕ ಕಟ್ಟು ಹೊಂದಾಣಿಕೆಗಳನ್ನು ಗಮನದಲ್ಲಿಟ್ಟುಕೊಂಡು ನಗರಗಳ ಪ್ರಶ್ನೆಯನ್ನು ವಿಚಾರಿಸಿಬೇಕು ಅವುಗಳನ್ನು ಆ ಪ್ರದೇಶದಿಂದ ಬೇರ್ಪಡಿಸುವುದರಿಂದ ಉಂಟಾಗಬಹುದು ಮೂಲೋತ್ಪಾಟನೆ ಮತ್ತು ಅದರ ಪರಿಣಾಮದಿಂದ ಉಂಟಾಗುವ ತೊಂದರೆಗಳು ಹಾಗೂ ಮೂಲೋತ್ಪಾಟನೆದಿಂದ ನಗರಕ್ಕೆ ಆಗಬಹುದಾದ ಹಾನಿಯನ್ನು ಹೆಚ್ಚು ಗಮನದಲ್ಲಿಟ್ಟುಕೊಳ್ಳಬೇಕೆ ವಿನಾ ಯಾವುದೊಂದು ಭಾಷೆಯ ಸಣ್ಣ ವರ್ಗವನ್ನು ತೃಪ್ತಿಪಡಿಸಲಿಕ್ಕೆ ಹೋಗಬಾರದು.

10. ಭಾಷಾ ತತ್ವ ಅರ್ಥಾತ್ ಜನತೆಯ ಇಚ್ಛೆಯ (ಜನತೆಯ ಇಚ್ಛೆಯನ್ನೇ ಭಾಷಾ ತತ್ವದ ಪರ್ಯಾಯ ರೂಪವಾಗಿ ಬಳಸಲಾಗುತ್ತದೆ) ಅಂಶವು ಆಡಳಿತ ಸೌಕರ್ಯದ ಅಂಶಕ್ಕೆ ಜಾಗ ಮಾಡಿಕೊಡಬೇಕು ಅಂದರೆ ಆಡಳಿತ ಅನುಕೂಲತೆಗೆ ಪ್ರಾಶಸ್ತ್ಯ ವಿರಬೇಕು.

11. ರಾಜ್ಯಪುನರ್ರಚನಾ ಕಾನೂನಿನ ಮೇರೆಗೆ ಎರಡೂ ರಾಜ್ಯಗಳ ನಡುವೆ ಎಳೆಯಲ್ಪಟ್ಟ ಮೇರೆಯ ಆಚೆ ಈಚೆಯ ಬದಿಯ ಹತ್ತು ಮೈಲಿನ ಪಟ್ಟಿಯನ್ನು ಪ್ರಸ್ತುತ ಪರಿಶೀಲನೆಯ ಕಕ್ಷೆಯಲ್ಲಿ ತೆಗೆದುಕೊಂಡು ಸಣ್ಣ ಪುಟ್ಟ ಹೊಂದಾಣಿಕೆ ಮಾಡಿಕೊಳ್ಳಬೇಕು. ಅಂಥ ಹೊಂದಾಣಿಕೆಗಳನ್ನು ಈ ಕೆಳಗೆ ಕಂಡ ಪ್ರಸಕ್ತಗಳಲ್ಲಿ ಮಾತ್ರ ಮಾಡಬಹುದು ಅಂದರೆ (ಅ) ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಬಂದ ಅನುಭವದ ಮೇರೆಗಳ ಏನಾದರೂ ತೊಂದರೆ

ತಾಪತ್ರಯ ಅಥವಾ ಹೊಂದಾಣಿಕೆಯ ಅವ್ಯವಸ್ಥೆ ಏನಾದರೂ ಕಂಡು ಬಂದಿರಬೇಕು (ಬ) ಎಲ್ಲೆಲ್ಲಿ ಆಡಳಿತದ ಅಗತ್ಯಗಳಿಂದಾಗಲಿ ಅಂಥ ಹೊಂದಾಣಿಕೆಯ ಅಪೇಕ್ಷಣೀಯವೆಂದು ಕಂಡು ಬಂದಿರಬೇಕು (ಕ) ಉಭಯ ಪಕ್ಷಗಳು ಅಂಥ ಹೊಂದಾಣಿಕೆಗೆ ಒಪ್ಪಿಕೊಂಡಿರಬೇಕು. ಮಹಾರಾಷ್ಟ್ರ ಮುಖ್ಯಮಂತ್ರಿಗಳು ಹೇಳಿಕೊಳ್ಳುತ್ತಾ ಬಂದಿದ್ದಾರೆ ಇದಕ್ಕೆ ಅವರ ಸರ್ಕಾರದ ಅತ್ಯಂತ ವಿರುದ್ಧವಾಗಿದೆ ಎಂಬು ಈ ಪ್ರಶ್ನೆ ಮತ್ತೆ ವರ್ಕಿಂಗ್ ಕಮೀಟಿಗೆ ಹೋಗುತ್ತದೆ. ಹೋದನಂತರ ಕಾಂಗ್ರೇಸ್ ಕಾರ್ಯಕಾರೀ ಸಮಿತಿಯವರು ಮತ್ತೆ ನಿರ್ಣಯ ಮಾಡುವುದಕ್ಕೆ ಕೈಗೆ ತೆಗೆದುಕೊಳ್ಳಬಾರದು ಇತ್ಯರ್ಥವಾದ ಪ್ರಶ್ನೆ ಯಾವುದು? ಇತ್ಯರ್ಥವಾಗದೇ ಇರುವ ಪ್ರಶ್ನೆ ಯಾವುದು ಎಂದು ನೋಡಬೇಕು ಇಲ್ಲದೇ ಹೋದರೆ ಇದನ್ನೇ ದೊಡ್ಡ ಸಮಸ್ಯೆಯಾಗಿ ತರಗೆದುಕೊಂಡಿದೆ ಬಾರ್ಡರ್ ಪ್ರಶ್ನೆ ಆಗುವುದಿಲ್ಲ ಅದು ರಾಜ್ಯ ಪುನರ್ವಿಂಗಡಣಾ ಪ್ರಶ್ನೆ ಆಗುತ್ತದೆ. ಬೆಳಗಾವಿ ನಿಪ್ಪಾಣಿ ತೆಗೆದು ಮತ್ತೊಂದು ರಾಜ್ಯ ಮಾಡಿರಿ ಎಂದು ಹೇಳಿದ ಹಾಗಾಗುತ್ತದೆ. ಬಾರ್ಡರ್ ಪ್ರಶ್ನೆ ಎಂದರೆ ಸಣ್ಣಪುಟ್ಟ ಹೊಂದಾಣಿಕೆಗಳು ಎಂದು ಅರ್ಥ ಇಬ್ಬರು ಮುಖ್ಯಮಂತ್ರಿಗಳಲ್ಲಿ ಇದರ ಬಗ್ಗೆ ಒಮ್ಮತ ಆಗದೇ ಇದ್ದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ಇದಕ್ಕೆ ಒಮದು ನಿರ್ಣಯ ಮಾಡುವುದಕ್ಕಾಗುವುದಿಲ್ಲ ಅದು ತೀತವಾಗುತ್ತದೆ. ಅವರು ಏನು ಮಾಡಬೇಕು ಎಂದರೆ 3 ಮಂದಿ 4 ಮಂದಿ ಬುದ್ಧಿವಂತರು, ತಿಳಿದವರು ತಮ್ಮಲ್ಲಿ ಯಾರು ಇದ್ದಾರೋ ಅವರನ್ನು ಒಳಗೊಂಡ ಒಂದು ಸಮಿತಿಯನ್ನು ಟರ್ಮ್ಸ್ ಆಫ್ ರೆಫರೆನ್ಸ್ ಮಾಡುವುದಕ್ಕೆ ನೇಮಿಸಿ ಟರ್ಮ್ಸ್ ಆಫ್ ರೆಫರೆನ್ಸ್ ಸಹ ಒಂದು ರೀತಿಯಿಂದ ಇಬ್ಬರು ಮುಖ್ಯಮಂತ್ರಿಗಳನ್ನು ಎದುರಿಗೆ ಇಟ್ಟುಕೊಂಡು ಇಬ್ಬರು ಒಪ್ಪುವ ರೀತಿಯಲ್ಲಿ ಗೊತ್ತು ಮಾಡಿ ಆ ರೀತಿ ನಿರ್ಣಯ ಮಾಡಬೇಕೇ ಹೊರತು ಅದು ಬಿಟ್ಟು ಏನಾದರೂ ಅವಸರ ಮಾಡಿ ಬೆಳಗಾಂ ತೆಗೆದುಕೊಳ್ಳಬೇಕು ಎಂದರೆ ಕೇಂದ್ರ ಸರ್ಕಾರ ಚೈನಾ ಪಾಕಿಸ್ಥಾನವನ್ನು ಎದುರಿಸಲು ಕಳುಹಿಸಿದುದಕ್ಕಿಂತ ಹೆಚ್ಚಿನ ಸೈನ್ಯವನ್ನು ಕಳುಹಿಸಬೇಕಾಗುತ್ತದೆ. ಈ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ ಕೇಂದ್ರ ಸರ್ಕಾರದವರು ಸ್ಪಷ್ಟವಾಗಿ ಕೇಳಲಿ ಇಲ್ಲಿ ಚೈನಾ ಪಾಕಿಸ್ಥಾನಕ್ಕೆ ಕಳುಹಿಸಿದುದಕ್ಕಿಂತಲೂ ಹೆಚ್ಚಿನ ಮಿಲಿಟರಿ ತರಬೇಕಾಗುತ್ತದೆ. ಇದು ಹುಡುಗಾಟಿಕೆ ಪ್ರಶ್ನೆ ಅಲ್ಲ. ಕೇಂದ್ರ ಸರ್ಕಾರದವರು ಇದಕ್ಕೆ ಒಪ್ಪಿದರೆ ದ್ರಾವಿಡ ಚಳುವಳಿಗೆ ಆಮಂತ್ರಣಕ್ಕೂ ಹಾಗಾಗುತ್ತದೆ. ಈ ಮಾತನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು ಈ ಕಾರ್ಯಕ್ಕೆ ಹುಚ್ಚು ಸಾಹಸಕ್ಕೆ ಕೈಹಾಕದೆ ಸಣ್ಣ ಸಣ್ಣ ಹೊಂದಾಣಿಕೆಗೆ ಕೈಹಾಕಲಿ ಇಲ್ಲದಿದ್ದರೆ ದೇಶದಲ್ಲಿ ವ್ಯಾಜ್ಯವಾಗುತ್ತದೆ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

# ಕರ್ನಾಟಕ ರಾಜ್ಯವೆಂಬ ನಾಮಕರಣಕ್ಕೆ ಶಿಫಾರಸ್ಸು

**ಶ್ರೀ ಎ.ಜೆ. ದೊಡ್ಡಮೇಟಿ:** ಅಧ್ಯಕ್ಷ ಮಹಾಶಯರೇ ಮೈಸೂರು ರಾಜ್ಯ ಎಂಬ ಈಗಿರುವ ಹೆಸರನ್ನು ಕರ್ನಾಟಕ ರಾಜ್ಯ ಎಂದು ಬದಲಾಯಿಸುಲು ಅವಶ್ಯಕವಾದ ಕ್ರಮಗಳನ್ನು ಕೂಡಲೇ ಕೈಕೊಳ್ಳಬೇಕೆಂದು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ.

**ಅಧ್ಯಕ್ಷರು:** ಮೈಸೂರು ರಾಜ್ಯ ಎಂಬ ಈಗಿರುವ ಹೆಸರನ್ನು ಕರ್ನಾಟಕ ರಾಜ್ಯ ಎಂದು ಬದಲಾಯಿಸಲು ಅವಶ್ಯಕವಾದ ಕ್ರಮಗಳನ್ನು ಕೂಡಲೇ ಕೈಕೊಳ್ಳಬೇಕೆಂದು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ಈ ನಿರ್ಣಯ ಮಂಡಿಸಲಾಗಿದೆ ಸಭೆಯಲ್ಲಿ ಇದು ಚರ್ಚೆಯಾಗಬಹುದು.

**ಶ್ರೀ ಎಸ್.ಎಂ. ಕೃಷ್ಣ (ಮದ್ದೂರು) :** ಈ ನಿರ್ಣಯ ಸುಮಾರು ಎರಡೂವರೆ ವರ್ಷಗಳ ಕೆಳಗೆ ಈ ಮಾನ್ಯ ಸಭೆಯ ಮುಂದೆ ಬಂದಿತ್ತು ವಿಪುಲವಾದಂತಹ ಕೆಲವು ಸಾರಿ ಭಾವೋದ್ರೇಕದಿಂದ ಕೂಡಿದಂತಹ ಚರ್ಚೆ ನಡೆದ ಮೇಲೆ ಈ ಸಭೆಯ ನಾಯಕರು ಒಂದು ನಿರ್ಣಯವನ್ನು ಮಂಡಿಸಿ ಈ ದೇಶದಲ್ಲಿ ತುರ್ತು ಪರಿಸ್ಥಿತಿ ಇರತಕ್ಕ ಈ ಸಂದರ್ಭದಲ್ಲಿ ಭಾವೋದ್ರೇಕವನ್ನುಂಟು ಮಾಡತಕ್ಕ ಇಂತಹ ಸಮಸ್ಯೆಗಳ ಬಗ್ಗೆ ಈ ರಾಜ್ಯದ ಗಮನವನ್ನು ಹರಿಸಬಾರದು ಎಂಬ ದೃಷ್ಟಿಯಿಂದ ಈ ಚರ್ಚೆಯನ್ನು ಇನ್ನಷ್ಟು ಕಾಲದವರೆಗೆ ಮುಂದೆ ಹಾಕಬೇಕೆಂಬ ಸೂಚನೆಯನ್ನು ಆಗ ವಿನಂತಿ ಮಾಡಿಕೊಂಡರು, ಅದನ್ನು ಈ ಸಭೆ ಒಮ್ಮತದಿಂದ ಒಪ್ಪಿ ಈ ಚರ್ಚೆಯನ್ನು ಮುಂದಕ್ಕೆ ಹಾಕಿದ್ದು ಆಯಿತು. ಈಗ ಶ್ರೀಮಾನ್ ದೊಡ್ಡಮೇಟಿಯವರು ಈ ನಿರ್ಣಯವನ್ನು ಮತ್ತೆ ಈ ಸಭೆಯ ಮುಂದೆ ಮಂಡಿಸುವುದಕ್ಕೆ ಉಪಕ್ರಮಿಸಿದ್ದಾರೆ. ನಾನು ಬಹಳ ಗಂಭೀರವಾಗಿ, ಬಹಳ ಜವಾಬ್ದಾರಿಯುತವಾಗಿ ಮತ್ತು ಬಹಳ ಕಳಕಳಿಯಿಂದ ಶ್ರೀಮಾನ್ ದೊಡ್ಡಮೇಟಿಯವರಿಗೆ ಪ್ರಾರ್ಥನೆ ಮಾಡುತ್ತೇನೆ. ಅಂದು ಮುಖ್ಯಮಂತ್ರಿಯವರು ಮಂಡಿಸಿದ ಸೂಚನೆಗೆ ಅಂದು ಏನು ಸಂದರ್ಭ ಅಂದಿನ ಸನ್ನಿವೇಶ ಏನಿತ್ತೋ ಆ ಸನ್ನಿವೇಶ ಇಂದೂ ಬದಲಾವಣೆಯಾಗಿಲ್ಲ. ಆ ಸನ್ನಿವೇಶಗಳೆಲ್ಲವೂ ಕೂಡ ಮುಂದುವರಿಯುತ್ತಲೇ ಇವೆ. ಆದ್ದರಿಂದ ಇಂದು ಮತ್ತೆ ಮೇಲಿಂದ ಮೇಲೆ ಸಂಪೂರ್ಣ ಕರ್ನಾಟಕವನ್ನು ಮಾಡಬೇಕೆಂದು ಕೆಲವರು ಯಾರು ಹೊರಟಿದ್ದಾರೆ ಅವರಿಗೆ ನಮ್ಮ ಸಹಾಯ ಬೇಕೆಂದು ಅಪೇಕ್ಷಿಸಪಡುವುದಾದರೆ ಇಂತಹ ನಿರ್ಣಯವನ್ನು ಮತ್ತೆ ಮತ್ತೆ ಈ ಸಭೆಯಲ್ಲಿ ತರತಕ್ಕ ಹವ್ಯಾಸವನ್ನು ಬಿಡಬೇಕೆಂದು ಶ್ರೀಮಾನ್ ದೊಡ್ಡಮೇಟಿಯವರಲ್ಲಿ ಪ್ರಾರ್ಥನೆ ಮಾಡಿ, ಈ ಸಭೆಯೂ ಕೂಡ ಇದನ್ನು ಬಹಳ ಕಳಕಳಿಯಿಂದ ಆಲೋಚನೆ ಮಾಡಬೇಕೆಂದು ಇಲ್ಲಿ ನೆರೆದಿರತಕ್ಕ ಎಲ್ಲರನ್ನೂ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಸ್ವಾಮಿ, 1957ನೇ ಇಸವಿ ಸೆಪ್ಟೆಂಬರ್ 29 ನೇ ತಾರೀಖಿನಿಂದ ಈ ಸುಮಾರು ಹತ್ತು ವರ್ಷದೊಳಗೆ ನನ್ನ ಸ್ನೇಹಿತರಾದಂತಹ ಶ್ರೀಮಾನ್ ಕೃಷ್ಣರವರ ಬಗ್ಗೆ ಬಹಳ ಗೌರವವಿದೆ.

**ಶ್ರೀ ಕೆ. ಲಕ್ಕಪ್ಪ:** ಅವರೊಬ್ಬರೇ ಏಕೆ?

**ಶ್ರೀ ಎ.ಜೆ. ದೊಡ್ಡಮೇಟಿ:** ಉಳಿದವರು ಬಗ್ಗೆಯೂ ಕೂಡ ಅಷ್ಟರ ಮಟ್ಟಿಗೆ ಗೌರವ ಅಭಿಮಾನ ಇದೆ ಅವರು ಪ್ರಗತಿಪರರು. ವಿಚಾರಶೀಲರು ಎಂದು ಹೇಳಿ ಅನೇಕ ವೇಳೆ ಮನವರಿಕೆ ಮಾಡಿಕೊಂಡಿದ್ದೇನೆ. ಮುಖ್ಯಮಂತ್ರಿಗಳು ಹಿಂದೆ ಮನವಿ ಮಾಡಿಕೊಂಡ ಸಮಯದಲ್ಲಿ ಚೈನಾ ಅಕ್ರಮಣವಾಗಿತ್ತು, ಅದು ಹಾಗೆ ಒಂದು ತಿಂಗಳು ಆಗಿತ್ತು ತುರ್ತು ಪರಿಸ್ಥಿತಿ ಇತ್ತು. ಈಗ ಪರಿಸ್ಥಿತಿ ಬದಲಾವಣೆಯಾಗಿ ಹೋಗಿದೆ ಇವತ್ತು ಆ ಪರಿಸ್ಥಿತಿ ಇಲ್ಲ ನಾವು ಇನ್ನು ಸ್ವಲ್ಪ ದಿವಸದಲ್ಲಿ ಬಹಳ ಮಹತ್ತವಾದ ಮತ್ತೊಂದು ಪ್ರಶ್ನೆ ವಿಚಾರ ಮಾಡುವುದು ಇದೆ. ಅದನ್ನು ಅವರು ಏಕೆ ಹೇಳಲಿಲ್ಲವೋ ಏನೋ ಗೊತ್ತಿಲ್ಲ ಅದು ಏನಾದರೂ ಆಗಲಿ ಎರಡು ರಾಜ್ಯ ಆಗಬೇಕೆಂಬ ಮಾತು ಆಗುವ ಮಾತಲ್ಲ ಹೋಗುವ ಮಾತಲ್ಲ ಎಂಬುದನ್ನು ಅವರು ತಿಳಿದಿರಬೇಕು ಇವತ್ತು ಆ ದೃಷ್ಟಿಯಿಂದ ನಾನು ಪಿ.ಎಸ್.ಪಿ. ನಾಯಕರಿಗೆ ವಿರೋಧ ಪಕ್ಷದಲ್ಲಿರತಕ್ಕ ಅನೇಕ ಪ್ರಗತಿಶೀಲ ನಾಯಕರಿಗೆ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ ಈ ರಾಜ್ಯದ ಪ್ರಗತಿ ಈ ರಾಜ್ಯಕ್ಕೆ ಭದ್ರ ಬುನಾದಿ ಇರಬೇಕಾದರೆ....

**ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ):** ಇವರ ಪಾರ್ಟಿಗೆ ಕರ್ನಾಟಕ ಎನ್ನುವಂಥ ಒಂದು ಹೆಸರುಳ್ಳ ಬೋರ್ಡ್ ಇರಬೇಕಾಗಿದ್ದರೆ ಅಂಥ ಒಂದು ಹೆಸರನ್ನು ಇಡೀ ದೇಶಕ್ಕೇಕೆ ಇಡಬಾರದು

**ಶ್ರೀ ಎ.ಜೆ. ದೊಡ್ಡಮೇಟಿ:** ಸ್ವಾಮಿ ಅವರು ತತ್ವವನ್ನು ಒಪ್ಪಿಕೊಂಡಿದ್ದಾರೆ ದೇಶದಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳೂ ಕೂಡ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿರಬೇಕು ಎಂಬುದನ್ನು ಒಪ್ಪಿಕೊಂಡಿದೆ ಎಂಬ ಅಂಶವನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೆನು ಕಳೆದ 10 ವರ್ಷಗಳಿಂದಲೂ ನಾವು ಇದಕ್ಕೆ ಶ್ರಮಿಸುತ್ತಿದ್ದೇವೆ ನಮ್ಮ ಕಾಂಗ್ರೆಸ್ಸಿನವರೇ ಇದಕ್ಕೆ ಕಲ್ಲು ಹಾಕುತ್ತಿದ್ದಾರೆಂಬುದಾಗಿ ಕೆಲವರು ಟೀಕೆ ಮಾಡುತ್ತಿದ್ದಾರೆ ಅಂಥಾ ಸಂದರ್ಭ ಬಂದಾಗ ಅದನ್ನು ಆಲೋಚನೆ ಮಡೋಣ.

**ಶ್ರೀ ಕೆ.ಪಿ. ರೇವಣಸಿದ್ದಪ್ಪ (ತಿಪಟೂರು):** ಇಲ್ಲಿ ಅವರು ವಿರೋಧ ಮಾಡುತ್ತಿಲ್ಲ ಲಾಂಜಿನಲ್ಲಿ ಹಾಗೆ ಮಾಡುತ್ತಾರೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಕಳೆದ ಸುಮಾರು 10 ವರ್ಷಗಳಲ್ಲಿ ನಾನು ಈ ಪ್ರಶ್ನೆಯನ್ನು ಎಷ್ಟೋ ಕಡಿಮೆ ಎಂದರೂ 8-10 ಸಲವಾದರೂ ಇಲ್ಲಿ ತಂದು

ಇದನ್ನು ಚರ್ಚೆ ಮಾಡಿದ್ದೇವೆ ಆದರ ಏನೇನೋ ಕಾರಣಾಂತರಗಳಿಂದ ಇದನ್ನು ಹೀಗೆ ಮುಂದಕ್ಕೆ ಹಾಕಿಕೊಳ್ಳುತ್ತಾ ಬಂದಿದ್ದೇವೆ ಈ ಹಿಂದೆ ಒಂದಾವರ್ತಿ ಈ ಪ್ರಶ್ನೆ ಇನ್ನೇನು ಐದು ನಿಮಿಷಗಳಲ್ಲಿ ತೀರ್ಮಾನವಾಗಿಬಿಡುತ್ತೆ ಅನ್ನುವಾಗ ಆ ದಿವಸ ಇಲ್ಲಿ ನಮ್ಮ ಮುಖ್ಯ ಮಂತ್ರಿಗಳೂ ಸಭೆಯಲ್ಲಿ ಹಾಜರಿದ್ದರು ಆಗೇನೂ ಈ ಎಮರ್ಜೆನ್ಸಿ ಪ್ರಶ್ನೆ ಇರಲಿಲ್ಲ ಅಷ್ಟರಲ್ಲಿ ನಮ್ಮ ಮುಖ್ಯ ಮಂತ್ರಿಗಳು ಇದರ ಬಗ್ಗೆ ಮಾತನಾಡತಕ್ಕವರು ಇನ್ನೂ ಕೆಲವರಿದ್ದಾರೆ ಆದುದರಿಂದ ಇದನ್ನು ಮುಂದುವರಿಸೋಣ ಎಂದುಬಿಟ್ಟರು ಅನಂತರ ಇದು ಹಾಗೇನ ಮುಂದುವರಿದುಕೊಂಡು ಬರುತ್ತಾ ಇರುವಾಗ್ಗೆ ಈ ಮಧ್ಯೆ ತುರ್ತು ಪರಿಸ್ಥಿತಿ ಬೇರೆ ಬಂತು ಆಗ ಇದನ್ನು ಮುಂದಕ್ಕೆ ಹಾಕಬೇಕೆಂದು ಹೇಳಿದರು ಈ ದಿವಸ ಆ ಪರಿಸ್ಥಿತಿಗಳ್ಯಾವುವೂ ಇರುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಏಕೆಂದರೆ ಈ ದಿವಸ ಪಂಜಾಬ್ ರಾಜ್ಯವನ್ನು ಎರಡು ಮಾಡುವುದಕ್ಕೆ ಹೊರಟಿದ್ದಾರೆ ಅದಕ್ಕೆಲ್ಲಾ ತುರ್ತು ಪರಿಸ್ಥಿತಿಯಿಲ್ಲ ಹಾಗೇ ಕರ್ನಾಟಕವನ್ನು ತುಂಡರಿಸಿ ಎರಡು ಮಾಡುವುದಕ್ಕೆ ಹೊರಟಿದ್ದಾರೆ ಅದಕ್ಕೆ ತುರ್ತು ಪರಿಸ್ಥಿತಿ ಇಲ್ಲ ಆದರೆ ನಾನು ಈ ದಿವಸ ಹೇಳಬೇಕೆಂದು ಇರತಕ್ಕ ವಿಚಾರದಲ್ಲಿ ಲಾಭ-ಲುಕ್ಸಾನು ಎರಡೂ ಇಲ್ಲದ್ದು ಅನರಲ್ಲಿ ಒಂದು ಮೂಲಭೂತ ಅಂಶವಿದೆ ಸ್ವಾಮಿ ಅಧ್ಯಕ್ಷರೇ ತಾವು ದಯವಿಟ್ಟು ಇದನ್ನು ಕೇಳಬೇಕು ಈ ದಿವಸ ಯಾರು ಈ ಕರ್ನಾಟಕ ಎಂಬ ಹೆಸರನ್ನು ವಿರೋಧ ಮಾಡುತ್ತಿದ್ದಾರೋ ಅವರೆಲ್ಲರೂ ಹಿಂದೆ ಈ ಹೆಸರನ್ನು ಈ ರಾಜ್ಯಕ್ಕಿಡಲು ಒಪ್ಪಿಕೊಂಡಿದ್ದಾರೆ ಆದರೆ ಮತ್ತೆ ಈ ದಿವಸ ಹೆಸರಿನಲ್ಲೇನಿದೆ ಎಂದು ಕೇಳುತ್ತಿದ್ದಾರೆ ಅದಕ್ಕೆ ನಾನು ಅದರಲ್ಲಿಯೂ ಒಂದು ಮಹತ್ವ ಅಡಗಿದೆ ಎಂದು ಹೇಳಲಿಚ್ಛಿಸುತ್ತೇನೆ. ಅದು ಹೇಗೆಂದರೆ ನಾವು ರಾಮ ಎಂಬ ಹೆಸರನ್ನು ಕೇಳಿದಾಗ ಒಂದು ಭಾವನೆ ಮನಸ್ಸಿನಲ್ಲಿ ಬಂದರೆ ರಾವಣ ಎಂದು ಹೇಳಿದಾಗ ಆ ಭಾವನೆಗೆ ತದ್ವಿರುದ್ಧವಾದ ಇನ್ನೊಂದು ಭಾವನೆ ಬರುತ್ತದೆ, ಹಾಗೇ ಮಹಾದೇವ ಎಂಬ ಹೆಸರನ್ನು ಕರೆದಾಗ ಮತ್ತೊಂದು ಭಾವನೆ ಬರುತ್ತದೆ, ಹೀಗೆ ಒಂದೊಂದು ಹೆಸರಿನಲ್ಲೂ ಒಂದೊಂದು ವಸ್ತುವಿನಲ್ಲೂ ಒಂದೊಂದು ಗುಣಗಳಿರುತ್ತವೆ.

**ಶ್ರೀ ಟಿ.ಎನ್. ಮಾದಪ್ಪಗೌಡ (ನಾಗಮಂಗಲ):** ಸ್ವಾಮಿ ನಾನೊಂದು ಕ್ರಿಯಾಲೋಪವನ್ನು ಸೂಚಿಸಬೇಕಾಗಿದೆ. ಅದೇನೆಂದರೆ 1956 ನೇ ಇಸ್ವಿಯಲ್ಲೇ ರಾಜ್ಯಗಳ ಪುನರ್ವಿಂಗಡಣೆಯಾದಾಗ ಆ ಎಸ್ಸಾರ್ಸಿ ರಿಪೋರ್ಟಿನಲ್ಲೇ ಈ ರಾಜ್ಯಕ್ಕೆ ಮೈಸೂರೆಂಬ ಹೆಸರಿರಬೇಕು ಎನ್ನುವುದಾಗಿ ಈಗಾಗಲೇ ತೀರ್ಮಾನವಾಗಿದೆ. ಹಾಗೆ ಒಂದಾವರ್ತಿ ತೀರ್ಮಾನವಾದ ವಿಷಯವನ್ನು ಮತ್ತೆ ಚರ್ಚೆ ಮಾಡಬಹುದೇ ಎಂಬುದೇ ನನ್ನ ಕ್ರಿಯಾರೂಪ.

**ಶ್ರೀ ಎ.ಜೆ. ದೊಡ್ಡಮೇಟಿ:** ಸ್ವಾಮಿ ಹೀಗೆ ಈ ಹೆಸರಿನಲ್ಲೂ ಒಂದು ಮಹತ್ವ ಉಂಟು. ಕರ್ನಾಟಕ ಎನ್ನುವುದು ಯಾರೊಬ್ಬರ ಸ್ವತ್ತೂ ಅಲ್ಲ. ಅದನ್ನು ಅನೇಕ ವೇಳೆ ಚರ್ಚೆ ಮಾಡಿ ಇಡಿ ಕರ್ನಾಟಕಕ್ಕೆ ಸಂಬಂಧಪಡತಕ್ಕ ಹೆಸರು ಇದಾದ ಕಾರಣ ಇದರಲ್ಲಿ ಮೈಸೂರು ಸಹಾ ಸೇರಿರುವುದರಿಂದ ಇದಕ್ಕೆ ಆ ಹೆಸರನ್ನು ಇಡತಕ್ಕದ್ದು ಸರಿಯೆಂಬುದಾಗಿ

ತೀರ್ಮಾನ ಮಾಡಿದ್ದಾರೆ. ಇದಕ್ಕೆ ಅನೇಕ ಮೂಲಾಧಾರಗಳುಂಟು. ಈ ದಿವಸ ಈ ನಗರದ ಚಾಮರಾಜಪೇಟೆಯಲ್ಲಿರತಕ್ಕ ಸಾಹಿತ್ಯ ಪರಿಷತ್ತು ಏನಿದೆ ಅದನ್ನು ಹಿಂದಿನ ಶ್ರೀಮಾನ್ ಯುವರಾಜರವರೇ ಸ್ಥಾಪನೆ ಮಾಡಿದ್ದು ಆ ಸಂಸ್ಥೆಯವರೂ ಕೂಡ ಇದಕ್ಕೆ ಸಾಂಸ್ಕೃತಿಕ ದೃಷ್ಟಿಯಿಂದಲೂ ಕರ್ನಾಟಕ ಎಂಬ ಹೆಸರೇ ಸರಿಯಾದುದು ಎಂದು ಹೇಳಿದ್ದಾರೆ. ಗೌರವಾನ್ವಿತರಾದಂಥ ನಮ್ಮ ಮೈಸೂರು ಅರಸರು ಕೂಡ ವಿಸ್ತೃತ ಕರ್ನಾಟಕ ಸಾಮ್ರಾಜ್ಯ ರತ್ನ ಸಿಂಹಾಸನಾಧೀಶ್ವರ ಎಂಬುದಾಗಿ ಕರೆಯಲ್ಪಡುತ್ತಿದ್ದರು. ಇಂಥ ಉದಾಹರಣೆಗಳು ಒಂದಲ್ಲಾ, ಎರಡಲ್ಲಾ ಮೂರಲ್ಲಾ ಅನೇಕ ಇರುತ್ತವೆ. ನಮ್ಮ ವಿರೋಧ ಪಕ್ಷದ ನಾಯಕರಾಗಿರಕ್ಕ ಶ್ರೀಮಾನ್ ಶಿವಪ್ಪನವರು ಅವರು ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಅದರ ನಾಮಕರಣ ಸಂಪೂರ್ಣ ಕರ್ನಾಟಕ ಪರಿಷತ್ತು ಎಂಬುದಾಗಿದೆ, ಅದಕ್ಕೆ ಇಂದಿನ ಅಧ್ಯಕ್ಷರು ಶ್ರೀ ಕಡಿದಾಳ್ ಮಂಜಪ್ಪನವರು.

**ಶ್ರೀ ಜೆ.ವಿ. ಗೌ (ಪಾಳ್ಯ):** ಅವುಗಳೆಲ್ಲಾ ಖಾಸಗೀ ಸಂಸ್ಥೆಗಳು. ಅವುಗಳಿಗೆ ಅವರು ಏನು ಬೇಕಾದರೂ ಹೆಸರುಗಳನ್ನು ಇಟ್ಟುಕೊಳ್ಳಬಹುದು. ಆದರೆ ಇಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಇಲ್ಲಿ ಒಂದು ಪಾರ್ಲಿಮೆಂಟು, ಶಾಸನ ಸಭೆ ಇತ್ಯಾದಿಗಳೆಲ್ಲಾ ಇರುತ್ತವೆ. ಈ ವಿಚಾರದಲ್ಲಿ ಮೈಸೂರು ಕಾಂಗ್ರೆಸ್‌ನವರು ಏನು ಕ್ರಮ ಕೈಗೊಂಡಿದ್ದಾರೆಂಬುದನ್ನು ಹೇಳಿ? ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯವರು ಶ್ರೀಮಾನ್ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಅರಸಿಕೆರೆಯಲ್ಲಿ ವಿಫಲವಾಗಿ ಚರ್ಚೆ ನಡೆಸಿ, ಕರ್ನಾಟಕವೆಂದು ಈ ರಾಜ್ಯಕ್ಕೆ ಹೆಸರು ಇಡಬೇಕೆಂದು ತೀರ್ಮಾನ ಮಾಡಿದ್ದಾರೆ. ನಾವು ಸಹ ಅದನ್ನು ಒಪ್ಪಿದ್ದೇವೆ. ಅದನ್ನು ಒಪ್ಪುವವರು ಎ.ಐ.ಸಿ.ಸಿ.ಯವರು.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ:** 10 ವರ್ಷವಾದ ಮೇಲೆ ಮಗುವಿಗೆ ನಾಮಕರಣ ಮಾಡಲು ಹೊರಟಿದ್ದಾರೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಇದಕ್ಕೆ ಬೇಕಾದರೆ ಒಂದು ಕಥೆಯನ್ನು ಹೇಳುತ್ತೇನೆ. ನಮ್ಮ ಸ್ನೇಹಿತರೊಬ್ಬರ ಮನೆಯಲ್ಲಿ ಒಂದು ಚಿಕ್ಕ ಹೆಣ್ಣು ಮಗು ಇತ್ತು. ಅದಕ್ಕೆ ಅವರು ಬೇಬಿ ಬೇಬಿ ಎಂದು ಕರೆಯುತ್ತಿದ್ದರು. ಆ ಮಗುವಿಗೆ 20 ವರ್ಷ ವಯಸ್ಸಾದ ಮೇಲೆ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿದರು. ಆ ಹುಡುಗಿಯ ಹೆಸರು ಸರೋಜಿನಿ ಎಂದು ಗಂಡನ ಮನೆಯವರು ಆ ಹೆಸರಿನಿಂದ ಕೂಗಿದಾಗ ಆ ಹುಡುಗಿ ಮಾತನಾಡಲಿಲ್ಲ. ನನ್ನ ಹೆಸರು ಸರೋಜನಿಯಲ್ಲ, ಬೇಬಿ ಎಂದು ಹೇಳಿದಳು. ನಂತರ ಹುಡುಗಿಯ ತಂದೆಯು ಬಂದು ಹೇಳಿದರು. ನಾವು ಹುಡುಗಿಯಾಗಿದ್ದಾಗ ನಿನಗೆ ಬೇಬಿ ಎಂದು ಕರೆಯುತ್ತಿದ್ದೆವು. ಈಗ ದೊಡ್ಡವಳಾಗಿದ್ದೀಯೇ, ಆದ್ದರಿಂದ ಸರೋಜಿನಿ ಎಂದು ಕರೆಯುತ್ತಾರೆಂದು. ಅದೇ ರೀತಿ ಮೊದಲು ಮೈಸೂರು ಚಿಕ್ಕದಾಗಿತ್ತು. ಆಗ ಮೈಸೂರು ಎಂಬ ಹೆಸರು ಸರಿಯಾಗಿತ್ತು. ಈ ದೊಡ್ಡದಾಗಿರುವುದರಿಂದ ಕರ್ನಾಟಕವೆಂದು ಕರೆಯುವುದು ಸೂಕ್ತ ಹಿಂದೆ 29.9.1957ರಲ್ಲಿ

ಈ ವಿಷಯದ ಬಗ್ಗೆ ಒಂದು ಮನವಿಪತ್ರ ಕೊಟ್ಟರು ಒಂದು ಭಾವನೆ ಇರಬೇಕಾದರೆ, ನಿಶ್ಚಿತವಾದ ಭಾವನೆ ಇರಬೇಕಾದರೆ ಕರ್ನಾಟಕವೆಂದು ಕರೆಯುವುದು ಸೂಕ್ತವೆಂದು ತಿಳಿಸಿದ್ದೆ.

**ಅಧ್ಯಕ್ಷರು:** ತಾವು ಕುಳಿತು ಬೇಕಾದರೆ ಮಾತನಾಡಿ: ಗಟ್ಟಿಯಾಗಿ ಮಾತ್ರ ಮಾತನಾಡಬೇಡಿ.

**ಶ್ರೀ ಎ.ಜೆ. ದೊಡ್ಡಮೇಟಿ:** ಅಧ್ಯಕ್ಷರ ಸೂಚನೆಗೆ ಕೃತಜ್ಞನಾಗಿದ್ದೇನೆ. ಹೆಚ್ಚು ಕಡಿಮೆ ಎಲ್ಲರೂ ಸಹ ಕರ್ನಾಟಕವಾಗಬೇಕೆಂದು ಒಪ್ಪಿದ್ದಾರೆ. ಎಲ್ಲಾ ಪಕ್ಷಗಳಾದ ಪಿ.ಎಸ್.ಪಿ; ಜನಸಂಘದರು, ಸ್ವತಂತ್ರ ಪಕ್ಷದವರು ಕರ್ನಾಟಕ ಎಂಬ ಹೆಸರಿಡುವುದಕ್ಕೆ ಒಪ್ಪಿದ್ದಾರೆ. ಎ.ಐ.ಸಿ.ಸಿ.ಗೆ ಕರ್ನಾಟಕವೆಂದು ಹೆಸರಿಸಬೇಕೆಂದು ಹೇಳಿ ಪ್ರದೇಶ ಕಾಂಗ್ರೆಸ್ ಕಮಿಟಿಯವರು ಶ್ರೀ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ತೀರ್ಮಾನ ಮಾಡಿ ನಿರ್ಣಯವನ್ನು ಕಳಿಸಿದ್ದಾರೆ. ಅವರು ಶಿಫಾರಸ್ಸು ಮಾಡುತ್ತಿದ್ದಾರೆ. ನಾವುಗಳು ಸಹ ಆ ಹೆಸರನ್ನು ಇಡಬೇಕೆಂದು ಕಾನೂನು ಬದ್ಧವಾಗಿ ಕೇಳಿದ್ದೇವೆ. ಎ.ಐ.ಸಿ.ಸಿ.ಯಿಂದ ಪಾರ್ಲಿಮೆಂಟಿಗೆ ಹೋಗುತ್ತದೆ. ಅವರು ಏನು ಮಾಡಬೇಕೋ ಅದನ್ನು ಮಾಡುತ್ತಾರೆ. ಹೊಸ ಹೊಸ ರಾಜ್ಯಗಳು ಮೈಸೂರಿಗೆ ಸೇರಿರುವುದರಿಂದ ಮೈಸೂರನ್ನು ಕರ್ನಾಟಕವೆಂದು ಕರೆಯುವುದು ಸೂಕ್ತವೆಂದು ಶ್ರೀ ನೆಹರೂ ರವರು ಹೇಳಿದರು.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ:** ಶ್ರೀ ನೆಹರೂರವರು ಏನೇನು ಆಶ್ವಾಸನೆ ಕೊಟ್ಟಿದ್ದರೋ ಅದನ್ನೆಲ್ಲಾ ಮಾಡಿದ್ದಾರೆಯೇ?

**ಶ್ರೀ ಎ.ಜೆ. ದೊಡ್ಡಮೇಟಿ:** ಹೇಳಿದ ವಿಷಯವನ್ನೇ ಮತ್ತೆ ಮತ್ತೆ ಹೇಳುವುದು ಸರಿಯಲ್ಲ. ಧಾರ್ ಕಮೀಷನ್‌ರವರು ಮತ್ತು ಗಡಿ ವಿಷಯವಾಗಿ ಯಾವ ಯಾವ ಕಮೀಷನ್‌ಗಳನ್ನು ನೇಮಕ ಮಾಡಿದ್ದರೋ, ಆ ಎಲ್ಲಾ ಕಮೀಷನಗಳ ರಿಪೋರ್ಟಿನಲ್ಲಿ ಕರ್ನಾಟಕವೆಂದೇ ಕರೆದಿದ್ದಾರೆ, ಬೇಕಾದರೆ ದಾಖಲೆಯನ್ನು ನೋಡಿ.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ:** ರುಂಡ ಮುಂಡ ಇಲ್ಲದೆ ಇರುವ ಮಗುವಿಗೆ ನಾಮಕರಣವೇಕೆಂದು ಕೇಳುತ್ತೇನೆ.

**ಶ್ರೀ ಎ.ಜೆ. ದೊಡ್ಡಮೇಟಿ:** ಕರ್ನಾಟಕ ಹೊರಗೆ ಇರುವ ಕನ್ನಡ ಪ್ರದೇಶಗಳವರು ಕರ್ನಾಟಕವೆಂದು ಹೆಸರಿಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಿಷ್ಠೂರ ರೀತಿಯಿಂದ ಪತ್ರಗಳನ್ನು ಕಳಿಸಿದ್ದಾರೆ. ಕಾಸರಗೋಡಿನವರು ನಿರ್ಣಯ ಮಾಡಿ ಕಳಿಸಿದ್ದಾರೆ. ಮಂಗಳೂರಿನವರೊಬ್ಬರು ನಿರ್ಣಯ ಕಳಿಸಿದ್ದರು. ಸರ್ಕಾರದವರು ಅನೇಕ ರೀತಿಯಿಂದ ಆಶ್ವಾಸನೆ ಕೊಟ್ಟ ಮೇಲೆ ಅವರು ಆ ನಿರ್ಣಯವನ್ನು ವಾಪಸ್ ತೆಗೆದುಕೊಂಡರು. ಈಗ ಸರ್ಕಾರದವರು ಅದಕ್ಕೆ ಉತ್ತರ ಕೊಡಬೇಕು. ಇಲ್ಲ ಆಶ್ವಾಸನೆ ಕೊಟ್ಟ ಮೆಂಬರ್ ಉತ್ತರ ಹೇಳಬೇಕು.

**ಶ್ರೀ ಬಿಡಿ. ಜತ್ತಿ (ಆಹಾರ ಶಾಖೆಯ ಮಂತ್ರಿಗಳು):** ಅಸೆಂಬ್ಲಿ ಮೆಂಬರ್‌ಗಳು ಸರ್ಕಾರದ ಒಂದು ಅಂಗ. ಸರ್ಕಾರ ಬೇರೆ, ಸದಸ್ಯರು ಬೇರೆ ಅನ್ನತಕ್ಕಂಥದ್ದು ತಪ್ಪು.

**ಶ್ರೀ ಎ.ಜೆ. ದೊಡ್ಡಮೇಟಿ:** 208 ಮಂದಿಯು ಅಸೆಂಬ್ಲಿ ಮೆಂಬರ್ ಎನ್ನುವುದು ಗೊತ್ತಿದೆ. ನಮಗೆ ತಾವು 26 ಮಂದಿ ಬೇರೆಯಲ್ಲ. ಅದಕ್ಕಾಗಿ ತಾವು ಏನು ವಿಚಾರ ಮಾಡಬೇಕೆಂದರೆ ಕೇವಲ ಕಾಸರಗೋಡ್, ಮಡಕಸಿರಾ......

**ಶ್ರೀ ಕೆ.ಪಿ. ಗದಗ:** ಯಾವ ವಿಷಯಕ್ಕೆ ತಿದ್ದುಪಡಿ ಎಂದರೆ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿ ಯಾವುದು ರಿಜೆಕ್ಟ್ ಆಯಿತೋ ಅದನ್ನು ಪುನಃ ಎತ್ತಬಾರದು ಎನ್ನುವಂಥಾದ್ದು. ಈಗ ಈ ಹೆಸರಿನ ಬಗ್ಗೆ ಪಾರ್ಲಿಮೆಂಟಿನಲ್ಲಿ ಸೂಚನೆಯಾಗಲೀ ಬಂದಿಲ್ಲ. ಅದಕ್ಕೆ ಅಸ್ಪದವಿಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ಪಾರ್ಲಿಮೆಂಟಿನಲ್ಲಿ ಪಂಜಾಬ್ ಮಾದರಿಯಾಗಬೇಕೇ? ನಾನು ಭಾಷಣ ಮಾಡುತ್ತಿರುವಾಗ ಮಾನ್ಯ ಸದಸ್ಯರು ರೂಲಿಂಗ್ ಕೊಟ್ಟಿದ್ದಾರೆ. (ನಗು) ಅದಕ್ಕೆ ನಾನು ಉತ್ತರ ಹೇಳಬೇಕು.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ:** ಈ ತರಹ ಈ ಸಭೆಯಲ್ಲಿ ಯಾವಾಗಲೂ ನಡೆಯಲಿ. ಅದಕ್ಕೋಸ್ಕರ ನಾನು ಮಾತನಾಡುತ್ತಿದ್ದೇನೆ. ಅವರು ಜಡ್ಜ್‌ಮೆಂಟ್ ಕೊಡುವುದು ಎಂದರೇನು, ಇದು ಹೊಸ ವಿಧಾನ. ಶ್ರೀಮಾನ್ ದೊಡ್ಡಮೇಟಿಯವರು ಈ ವಿಷಯುದಲ್ಲಿ ಉತ್ತರ ಕೊಡುವುದಾದರೆ ನಮ್ಮದು ಅಭ್ಯಂತರವಿಲ್ಲ.

**ಶ್ರೀ ಎ.ಜೆ. ದೊಡ್ಡಮೇಟಿ:** ನನ್ನ ಪ್ರಶ್ನೆ ಇಷ್ಟೇ ಮಾನ್ಯ ಶ್ರೀ ಪಾಟೀಲರು ಹೇಳಿದಂತೆ ನಾನು ಯಾವಾಗ ಪಾರ್ಲಿಮೆಂಟ್ ನಿರ್ಣಯ ತೆಗೆದುಕೊಂಡು ಅದನ್ನು ರಿ-ಓಪನ್ ಮಾಡಬಾರದು ಎಂದು ನನ್ನ ಭಾಷಣದಲ್ಲಿ ಹೇಳಿದ್ದರೆ ಅದನ್ನು ಬಿಟ್ಟುಕೊಡುವುದಕ್ಕೆ ನಾನು ತಯಾರು ಇದ್ದೇನೆ. ಅದು ಗೊತ್ತಿಲ್ಲದ ಯಾರೂ ಏನೂ ಮಾತನಾಡಬಾರದು. ನಾನು ಮಾತನಾಡುವಾಗ ಬಹಳ ಜಾಗರೂಕತೆಯನ್ನು ವಹಿಸಿದ್ದೇನೆ. ಎರಡನೆಯದಾಗಿ ಪಾರ್ಲಿಮೆಂಟ್ ತೀರ್ಮಾನ ಮಾಡುವುದನ್ನು ಪುನಃ ಬೇರೆ ಯಾರು ವಿಚಾರ ಮಾಡಬಾರದು. ಆದರೆ ಅದೇ ಪಾರ್ಲಿಮೆಂಟ್ ವಿಚಾರ ಮಾಡಬಹುದು. ಆ ಒಂದು ಕಾರಣಕ್ಕಾಗಿ ಆ ಪಾರ್ಲಿಮೆಂಟ್ ವಿಚಾರ ಮಾಡಬೇಕೆಂದು ಹೇಳುತ್ತಿದ್ದೇನೆಯೇ ಹೊರತು ಆ ಹೆಸರಿನಲ್ಲಿ ಡೆಲ್ಲಿ ಜೋಗುಳ ಹಾಡುವುದಕ್ಕೆ ನಾನು ಬರಲಿಲ್ಲ. ಆದ್ದರಿಂದ ನಾನು ಆದ್ದರಿಂದ ನಾನು ಈ ಪ್ರಶ್ನೆಯನ್ನು ಪಾರ್ಲಿಮೆಂಟಿನಲ್ಲಿ ವಿಚಾರ ಮಾಡಲಿ ಎಂದು ಹೇಳುತ್ತೇನೆ. ಅದರ ಬಗ್ಗೆ ಇಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆದಕಾರಣ ಅವರ ಹೇಳಿಕೆಯ ಅಂಶ ಸರಿಯಲ್ಲ.

## ||ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು||

ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು ||ಪ||

ರಾಜ್ಯಸ್ತ್ರರಿಗು ಪರಶುರಾಮು ನಮ್ಮನಾಡು
ಆ ಜಲಧಿಯನೆ ಜಿಗಿದ ಹನುಮನುಡಿಸಿದ ನಾಡು
ಓಜೆಯಿಂ ಮೆರೆದರಸುನಗಳ ಸಾಹಸದ ಗೂಡು
ತೇಜ ವನು ನಮಗೀವ ವೀರವೃಂದದ ಬೀಡು

ಲೆಕ್ಕಿಗ ತಾಕ್ಷರರು ಬೆಳೆದು ಮೆರೆದಿಹ ನಾಡು
ಜಕ್ಕಣನ ಶಿಲ್ಪಕಲೆಯ ಅಚ್ಚರಿಯು ಕರುಗೋಡು
ಚೊಕ್ಕ --ತಗಳ ಸಾರಿದರಿಗಿದು ನೆಲೆ ನೀಡು
ಚೊಕ್ಕಸದ ಕಣಜ ವೈ ವಿದ್ವತ್ತೆಗಳ ಕಾಡು

ಸಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು
ಕಾವೇರಿ ಗೋದೆಯರು ಮೈದೊಳೆವ ನಲುನಾಡು
ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆವನಾಡು
ಕಾವಗದುಗಿನ ವೀರ ನಾರಾಯಣನ ಬೀಡು

**- ಹುಯಿಲುಗೋಳ ನಾರಾಯಣರಾಯ**

# ಭಾಗ-3

# ಗಣ್ಯರ ಜೊತೆಗೆ ದೊಡ್ಡಮೇಟಿ ಅಂದಾನಪ್ಪನವರ ಸಂಪರ್ಕ

ಗುಡಿ ಗೋಪುರ ಹೊಂಗಳಸಕೆ
ಚೆಂಬೆಳಕಿನ ಕನ್ನಡ
ನಮ್ಮೆಲ್ಲರ ಮೈ ಮನಸಿನ
ಹೊಂಗನಸಿನ ಕನ್ನಡ

- ಚೆನ್ನವೀರ ಕಣವಿ

## ಮಹಾತ್ಮಾಗಾಂಧೀಜಿ

ಶ್ರೀ ದೊಡ್ಡಮೇಟಿಯುವರ ತಂತಿಗೆ ಉತ್ತರ ರೂಪವಾಗಿ ದಿ:1.10.41 ರಂದು ತಮ್ಮ ಸ್ವಹಸ್ತಾಕ್ಷರದಿಂದ ತಾಯಿಗೊಂದು ಅವರಿಗೊಂದು ಕಾರ್ಡು ಬರೆದರು

ಸೇವಾ ಗ್ರಾಮ

ಪ್ರೀಯು ಸಹೋದರೀ

ನಿನ್ನ ಕಾಯಿಲೆಯ ವಿಷಯವಾಗಿ, ನಿನ್ನ ಮಗನ ತಂತಿ ಬಂದಿದೆ. ನೀನು ಅವನ ಬಿಡುಗಡೆ ಬಯುಸುವುದಿಲ್ಲವೆಂದು ಕೇಳಿ ಹಿಗ್ಗಿದೆ. ಪರಮಾತ್ಮನಿನಗೆ ಶಾಂತಿ ಉತ್ಸಾಹಗಳನ್ನು ದಯುಪಾಲಿಸಲಿ ಅವನ ಬಯುಕೆ ಕೈಗೂಡುವುದು ನಮ್ಮದಲ್ಲ

ನಿಮ್ಮ ವಿಶ್ವಾಸಿಕ

**- ಎಂ. ಕೆ. ಗಾಂಧಿ**

ಪ್ರೀಯು ದೊಡ್ಡಮೇಟಿ,

ನಿಮ್ಮ ತಂತಿ ಕೈಸೇರಿದೆ ನಿವ ್ನ ನಿಶ್ಚಯುದ ವಿಷಯು ಕೇಳಿ ಸಂತೋಷವಾಯಿತು. ನಿಮ್ಮ ತಾಯಿಗೆ ಕಾಗ. ಬರೆದಿದ್ದೇನೆ.

ನಿಮ್ಮ
ಬಾಪು
(ಎಂ.ಕೆ. ಗಾಂಧಿ)

ಅದರಂತೆಯೇ ಅತ್ಯಂತ ಹಿರಿಯರಾಗಿದ್ದ ಶ್ರೀ ನಾರಾಯಣ ಜೋಶಿಯವರು (ಬೆಳಗಾವಿ)ಯಿಂದ ಶ್ರೀದೊಡ್ಡಮೇಟಿಯುವರಿಗೆ ಮಿತ್ರನೆಂದು ಅಭಿನಂದಿಸಿ ಕೆಲವು ಸೂಚನೆ ನೀಡುವ ಮೂಲಕ ಪತ್ರ ಬರೆದರು. "ಜಮಖಂಡಿಯ ವಾತಾವರಣವು ಸಹ ಸರಿಯಾಗಿಲ್ಲ, ರಾಜ ಪ್ರಜೆಗಳ ನಡುವೆ ಇರತಕ್ಕದ್ದು, ಸ್ನೇಹ ಸಂಬಂಧವು ಅಲ್ಲಿ ಇಲ್ಲ. ಅಲ್ಲಲ್ಲಿ ಬೆಂಕಿ ಕಿಡಿಗಳು ಬೀಳ ಹತ್ತಿವೆ, ಕೆಲವರ ಮೇಲೆ ರಾಜ ದ್ರೋಹ ಮೊದಲಾದ ಆರೋಪಗಳ ಬಗ್ಗೆ ಖಟ್ಲೆಗಳು ಅಗಿರುತ್ತವೆ. ಜಮಖಂಡಿ ಸಂಸ್ಥಾನದ ಬನ್ನಟ್ಟಿಯಲ್ಲಿ ಶ್ರೀ ಅಂಗಡಿ ಮೊದಲಾದವರು ಕೆಲವು ಪ್ರಸಂಗಗಳಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ಉಗ್ರ ಕಲ್ಪನೆಗಳನ್ನು ಜನತೆಯ ಸಭೆಯಲ್ಲಿ

ತುಂಬಿರುವ ಪರಿಸ್ಥಿತಿಯಲ್ಲಿ ನೀವು ಅಧ್ಯಕ್ಷರಾಗಿ ಹೋಗುವಿರಿ. ನಿಮ್ಮ ಮೇಲೆ ಜವಾಬ್ದಾರಿಯು ಹೆಚ್ಚಿನದುಂಟು ಸಭೆಗಳಲ್ಲಿ ಭಾಷಣ ಮಾಡುವಾಗ ಭಾವನಾ ಪ್ರಧಾನರಾಗಿ ಮಾತನಾಡುವುದು ನಿಮ್ಮ ಸ್ವಭಾವವಾಗಿದೆ ಎಂದು ನನ್ನ ಭಾವನೆ ....... ಕಡೆಯ ಮಾತು ಅಶಿಕ್ಷಿತ ಜನರೆಮಗೆ ಬೆಂಕಿ. ಅವರನ್ನು ಆಡಿಸುವುದೆಂದರೆ ಬೆಂಕಿಯ ಕೂಡ ಆಟವಾಡಿದಂತೆ ಇದನ್ನು ನೆನಪಿನಲ್ಲಿಟ್ಟುಕೊಂಡು ನಡೆಯಿರೆಂದು ನಮ್ರವಾದ ವಿನಂತಿ''

ರಾಮದುರ್ಗ ಸಂಸ್ಥಾನ ಮಂತ್ರಿ ಶ್ರೀ ಎಸ್.ಜಿ. ಗದಗ ನವರು ರಾಮದುರ್ಗ ಸರ್ಕಾರವು ಪ್ರಕಟಣೆಯನ್ನು ಹೊರಡಿಸಿ ಪ್ರಜಾ ಸಂಘವನ್ನು ಬೇಕಾಯ್ದೆಶೀರ ಎನ್ನುವುದನ್ನು ರದ್ದು ಪಡಿಸಿತ್ತಲ್ಲದೇ ತರುಣ ಕರ್ನಾಟಕ, ಕರ್ನಾಟಕ ಬಂಧು ಮತ್ತು ಪ್ರಜಾಮತ ಪತ್ರಿಕೆಗಳ ಮೇಲಿನ ನಿಬಂಧವನ್ನು ತೆಗೆದುಹಾಕಿತು. ತುರಂಗದಲ್ಲಿ ಇದ್ದ ಕೈದಿಗಳನ್ನು ಬಿಡುಗಡೆ ಮಾಡಿ, ತಲೆ ತಪ್ಪಿಸಿಕೊಂಡವರ ಮೇಲಿನ ವಾರಂಟನ್ನು ರದ್ದು ಪಡಿಸಿತು.

ಜಮಖಂಡಿ ಸಂಸ್ಥಾನದ ಮಂತ್ರಿ ಶ್ರೀ ಬಿ.ಡಿ. ಜತ್ತಿ ಯವರು ಇನ್ನು ಕುಂಚನೂರು ಗ್ರಾಮದ ಜನರನ್ನು ಜೇಲಿನಿಂದ ಬಿಟ್ಟಿಲ್ಲ. ಈ ದಿಶೆಯಲ್ಲಿ ಪ್ರಯತ್ನ ನಡೆದಿದೆ (30.5.1946) ಸಮಜಾಯಿಷಿಯ ಪ್ರಕಾರ ಕೆಲಸ ನಡೆಸಿದ್ದೇವೆ. ನಾಳೆ ಯಾವ ತರದ್ದೂ ತೊಂದರೆಯಾಗಬಾರದೆಂದು ಸಂಸ್ಥಾನಗಳ ಒಕ್ಕೂಟದ ಬಗ್ಗೆ ತಮ್ಮ ಧೋರಣೆಯನ್ನು ತಿಳಿಸಬೇಕೆಂದು ಕೇಳಿಕೊಂಡಿರುವರು.

## ಶ್ರೀ ಮುರಾರ್ಜಿ ದೇಸಾಯಿ

ಅವರು ಕಳಿಸಿದ ಗೊತ್ತುವಳಿಯು ಬೇರೆ ಸ್ವರೂಪದದ್ದು ಇದ್ದು ಕರ್ನಾಟಕ, ಮಹಾರಾಷ್ಟ್ರ, ಗುಜರಾತ ಪ್ರಾಂತಗಳ ರಚನೆಯು ಸಲುವಾಗಿ ಕೂಡಲೇ ಗಡಿ ನಿರ್ಣಾಯಕ ಸಮಿತಿಯನ್ನು ರಚಿಸಲು ಭಾರತ ಸರ್ಕಾರಕ್ಕೆ ಹಾಗೂ ಭಾರತ ಸರ್ಕಾರಕ್ಕೆ ಹಾಗೂ ಭಾರತ ಪ್ರಜಾ ಗಣತಂತ್ರದ ಅಧ್ಯಕ್ಷರಿಗೆ ಶಿಫಾರಸ್ಸು ಮಾಡಬೇಕೆನ್ನುವ ಆಶಯವನ್ನು ಹೊಂದಿದ್ದು 'ಶ್ರೀ ದೊಡ್ಡಮೇಟಿಯವರು' ಪ್ರಾಮಾಣಿಕವಾಗಿ ಈಡೇರಿಸಿಕೊಳ್ಳಲು ಹೊರಟಿರುವ ನಮ್ಮ ಧ್ಯೇಯ ಧೋರಣೆಗಳಿಗೆ ತಣ್ಣೀರು ಎರಚುವ ಕಾರ್ಯ ತರವಲ್ಲವೆಂದು ಮುರಾರ್ಜಿಯವರು ಪತ್ರ ಬರೆದಿದ್ದಾರೆ.

## ಹಿರಿಯರಾದ ಶ್ರೀ ದಿವಾಕರ ರಂಗರಾಯರು

''ಮನಸ್ಸಿನಲ್ಲಿಯ ನೋವಿನ ಮೂಲ ಕಾರಣವನ್ನು ತಿಳಿದುಕೊಳ್ಳದೇ ವಿಚಾರಯುಕ್ತ ಸಲಹೆಯನ್ನು ಕೊಡುವುದು ಕಠಿಣ:

## ರಾಷ್ಟ್ರ ಬಂಧು ಪತ್ರಿಕೆಯ ಸಂಪಾದಕ

ಕಡಂಗೋಡ್ಲು ಶಂಕರಭಟ್ಟ ನಿಷ್ಕಾಮ, ನಿರ್ಮಲ ಭಾವದಿಂದ ವ್ಯವಹರಿಸುವುದೇ ಈ ಸಂದರ್ಭದಲ್ಲಿ ಉಚಿತ ಬಾಹ್ಯ ವಾತಾವರಣದಲ್ಲಿ ಸಿಡಿಲು ಮಿಂಚುಗಳಿದ್ದರು, ಅಂತರಂಗವು ಪ್ರವೇಶಿಸದಂತೆ ತಡೆ" ಎಂದಿರುವರು.

ಅಂದಿನ ಮುಂಬೈ ಪ್ರಾಂತದ ಮುಖ್ಯಮಂತ್ರಿ ಶ್ರೀ ಬಿ.ಜಿ.ಖೇರ ಕನ್ನಡ ಮಾತನಾಡಲು ಬಲ್ಲವರು ದೊಡ್ಡಮೇಟಿಯವರಿಗೆ ಆಗಾಗ ನೆರವು ಕೊಡುತ್ತಿದ್ದರು ಅವರಿಗಾದ ಅವಸ್ಥೆಗೆ ಮುಖ್ಯಮಂತ್ರಿಗಳಿಗೂ ನೋವು ಎನಿಸಿತು.

ಯಾವ ಮನೆಯಲ್ಲಿ ಪ್ರಾದೇಶಿಕ ಭಾಷೆಗಳು ಮಾನ ಕಳೆದುಕೊಂಡಿದ್ದವೂ ಆ ಪ್ರಾದೇಶಿಕ ಭಾಷೆಗಳು ಅದೇ ಮನೆಯಲ್ಲಿ ಗೌರವದ ಉಡಿಯನ್ನು ತುಂಬಿಕೊಂಡವು. ಆಯಾ ಪ್ರದೇಶದ ತಾಯ್ನುಡಿಗಳು ಮುಂಬೈ ಅಸೆಂಬ್ಲಿಯ ಕಾರ್ಯಕಲಾಪಗಳಲ್ಲಿ ವರದಿಯಾಗುವುದಕ್ಕೆ ಈ ಯುವ ಕನ್ನಡಿಗ ರಾಜ ಮಾರ್ಗ ಮಾಡಿಕೊಟ್ಟ.

## ಜಮಖಂಡಿ ಸಂಸ್ಥಾನ ಪ್ರಜಾಪರಿಷತ್ತು
### 6ನೇಯ ಅಧಿವೇಶನ ಸಂಶಿ ಮೇ 1938

### ಶ್ರೀಮಾನ್ ಅಂದಾನಪ್ಪ ಜ್ಞಾನಪ್ಪಾ ದೊಡ್ಡಮೇಟಿ, ಎಮ್.ಎಲ್.ಎ.
### (ಮುಂಬಯಿ)
### - ಇವರ -

### ಅಧ್ಯಕ್ಷೀಯ ಭಾಷಣ

ಸ್ವಾಗತಾಧ್ಯಕ್ಷರೇ, ಬಂಧುಭಗಿನಿಯರೇ,

ತಾವೆಲ್ಲರೂ ನನ್ನನ್ನು ಪ್ರೇಮದಿಂದ ಅಧ್ಯಕ್ಷಪದಕ್ಕೆ ಆರಿಸಿದ್ದಕ್ಕಾಗಿ ನಾನು ತಮಗೆ ತುಂಬಾ ಕೃತಜ್ಞನಾಗಿದ್ದೇನೆ, ತಮ್ಮ ಪರಿಷತ್ತಿನ ಅಧ್ಯಕ್ಷನಾಗಲಿಕ್ಕೆ ಯಾವ ದೃಷ್ಟಿಯಿಂದ ವಿಚಾರ ಮಾಡಿದರೂ ನಾನು ಯೋಗ್ಯನಿರುವೆನೆಂಬ ಬಗ್ಗೆ ನನಗೇ ಸಂದೇಹ ಬರುತ್ತದೆ. ಯಾಕೆಂದರೆ ನಾನೇನು ಅಷ್ಟೊಂದು ವಿದ್ಯಾವಂತನಲ್ಲ. ಅದರಲ್ಲಿ ಸಂಸ್ಥಾನೀ ಪ್ರಜೆಗಳ ಸಮಸ್ಯೆಯಂಥ ಮಹತ್ವದ ವಿಷಯುವನ್ನು ಕೂಡ ಅಭ್ಯಾಸ ಮಾಡಿದವನಲ್ಲ. ತಮ್ಮ ಪರಿಷತ್ತಿನ ಹಿಂದಿನ ಅಧ್ಯಕ್ಷರಾದ ಶ್ರೀಮಾನ್ ನರಸಿಂಹ ಚಿಂತಾಮಣಿ ಕೇಳಕರ, ಕರ್ನಾಟಕದ ಸಿಂಹವೆಂದು ಹೆಸರುವೆತ್ತ ಶ್ರೀಮಾನ್ ಶ್ರೀನಿವಾಸರಾವ್ ಕೌಜಲಗಿ, ಮುಂಬೈಯ ಕಾಯಿದೆ ಮಂಡಲದ ಸದ್ಯದ ಉಪಾಧ್ಯಕ್ಷರಾದ, ಶ್ರೀಮಾನ್ ಜೋಶಿ ನಾರಾಯಣರಾಯರು ಮತ್ತು ಧಾರವಾಡದ

1740-14

ನಮ್ಮ ಶ್ರೀಮಾನ್ ಜೋಗ ವಿಶ್ವನಾಥರಾಯರು ಇಂಥ ಮಹನೀಯರು ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದಾರೆ.

ಇಂಥ ಮಹತ್ವದ ಸ್ಥಾನಕ್ಕೆ ನನ್ನನ್ನು ತಾವು ಆರಿಸಿದ್ದು ಕೇಲ ನನ್ನ ಮೇಲಿನ ತಮ್ಮ ಮಮತೆಯಿಂದ ಎಂದು ನಾನು ತಿಳಿಯುವೆನು. ಅಥವಾ ನಾನೊಬ್ಬ ರಾಷ್ಟ್ರೀಯ ಮಹಾಸಭೆಯ ನಮ್ರ ಕೆಲಸಗಾರನಿದ್ದುದರಿಂದ ನನ್ನನ್ನು ಗೌರವಿಸಿ ಅಪ್ರತ್ಯಕ್ಷ ರೀತಿಯಿಂದ ಕಾಂಗ್ರೆಸ್ಸಿನ ಮೇಲಿನ ತಮ್ಮ ಪೂಜ್ಯಭಾವನೆಯನ್ನು ತೋರಿಸಲು ಹೀಗೆ ಮಾಡಿದರೂ ಮಾಡಿರಬಹುದು. ಮತ್ತು ಆ ನಿಮ್ಮ ಮಮತೆಯ ಕರೆಯೇ ಈ ತಮ್ಮ ಬಿನ್ನಹಣೆಯನ್ನು ಮನ್ನಿಸಲು ಕಾರಣವಾಯಿತೆಂದು ನಾನು ಹೇಳುತ್ತೇನೆ.

## ಸಂಯುಕ್ತ ರಾಜ್ಯ ಘಟನೆ

ಬ್ರಿಟಿಷ್ ಸರಕಾವು ತನ್ನ ಭೇದನೀತಿಯನ್ನವಲಂಬಿಸಿ ನಮ್ಮಲ್ಲಿಯೇ ಕೃತ್ರಿಮ ಭೇದವನ್ನು ಕಲ್ಪಿಸಿ ಬ್ರಿಟಿಷ್ ಹಿಂದಿಯರೆಂದೂ ಹಿಂದೀ ಹಿಂದಿಯರೆಂದೂ ಎರಡು ಉಪಭಾಗಗಳನ್ನಾಗಿ ಮಾಡಿದೆ. ಸದ್ಯದ ಪರಿಸ್ಥಿತಿಯನ್ನು ನಾವು ಸೂಕ್ಷ್ಮ ರೀತಿಯಿಂದ ಪರಿಶೀಲಿಸಿದರೆ ತಮ್ಮ ಸಾಮ್ರಾಜ್ಯ ರಕ್ಷಣೆಗಾಗಿ ಈ ಬಗೆಯ ಭೇದ ಕಲ್ಪಿಸಲ್ಪಟ್ಟಿರುವುದೆಂದು ಹೇಳಬಹುದು. ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಬ್ರಿಟಿಷ್ ಭಾರತೀಯರಿಗಿಂತಲೂ ಸಂಸ್ಥಾನೀ ಪ್ರಜೆಗಳು ಬಹಳ ನಿಕೃಷ್ಟ ಸ್ಥಿತಿಯಲ್ಲಿದ್ದಾರೆಂದು ಹೇಳಬಹುದು. ಯಾಕೆಂದರೆ ನಾವು ಬ್ರಿಟಿಷ್‌ರೊಬ್ಬರ ದಾಸ್ಯದಲ್ಲಿಯೇ ಇದ್ದೇವೆ. ಆದರೆ ಅವರು ಮಾತ್ರ ದಾಸರ ದಾಸ್ಯದಲ್ಲಿ ತೊಳಲಾಡುತ್ತಿದ್ದಾರೆಂದು ದುಃಖದಿಂದ ಹೇಳಬೇಕಾಗಿದೆ. ಸದ್ಯದಲ್ಲಿ ನಿಶ್ಚಿತ ಪರಿಸ್ಥಿತಿಯಲ್ಲಿ ಯಾವ ವೇಳೆಗೆ ಏನಾದೀತೆಂದು ಹೇಳಲು ಬರುವಂತಿಲ್ಲ. ನಿಮ್ಮ ಮೊದಲನೆಯ ಅಧಿವೇಶನದ ಕಾಲಕ್ಕಿದ್ದ ಪರಿಸ್ಥಿತಿಗೂ ಸದ್ಯದ ಪರಿಸ್ಥಿತಿಗೂ ಅಂತರವಿದೆ. 1935ನೇ ಇಸ್ವಿಯ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಪ್ರಕಾರ ಸಂಸ್ಥಾನೀ ಪ್ರಜೆಗಳ ಮತ್ತು ಬ್ರಿಟಿಷ್ ಪ್ರಜೆಗಳ ಹಿತಸಂಬಂಧಗಳು ಒಂದು ರೀತಿಯಿಂದ ಕೂಡಿಸಲ್ಪಟ್ಟಿವೆಯೆಂದು ಹೇಳಬೇಕಾಗಿದೆ. ಇನ್ನು ಮೇಲೆ ಸಂಯುಕ್ತ ರಾಜ್ಯ ಘಟನೆಯು ಜಾರಿಯಲ್ಲಿ ಬಂದ ಮೇಲೆ ಫೆಡರಲ್ ಅಸೆಂಬ್ಲಿಯಲ್ಲಿ ಮತ್ತು ಫೆಡರಲ್ ಕೌನ್ಸಿಲ್‌ದಲ್ಲಿ ಬ್ರಿಟಿಷ್ ಭಾರತೀಯರೂ ಮತ್ತು ಹಿಂದೀ ಸಂಸ್ಥಾನಿರೂ ಕೂಡಿ ರಾಜ್ಯಕಾರಭಾರ ಮಾಡಬೇಕೆಂದು ಈ ಹೊಸ ಘಟನೆಯಲ್ಲಿ ಹೇಳ ಘಟನೆಯಲ್ಲಿ ಹೇಳಲ್ಪಟ್ಟಿದೆ. ನಾನು ಬೇಕಂತಲೇ ಸಂಸ್ಥಾನಿಕರೆಂದು ಅಂದದ್ದು,. ಯಾಕೆಂದರೆ ಹೊಸ ಘಟನೆಯ ಪ್ರಕಾರ ಸಂಸ್ಥಾನ ಪ್ರಜೆಗಳಿಗೆ ಅದರಲ್ಲಿ ಸ್ಥಾನವೇಯಿಲ್ಲ. ಸಂಸ್ಥಾನಿಕರು ತಮಗೆ ಇಷ್ಟವಿದ್ದವರನ್ನೇ ಕಳುಹಿಸಬಹುದು. ಅಂದ ಮೇಲೆ ಸಂಸ್ಥಾನಿಕರೇ ಫೆಡರಲ್ ಕಾಯದೇ ಮಂಡಳದಲ್ಲಿದ್ದಂತಾಗಲಿಲ್ಲವೇ? ಅಂದ ಮೇಲೆ ಸಂಸ್ಥಾನೀ ಪ್ರಜೆಗಳಿಗೆ ಪ್ರಾತಿನಿಧ್ಯವು ಹೇಗಿದ್ದಂತಾಯಿತು? ಅದಕ್ಕಾಗಿಯೇ ಕಾಂಗ್ರೆಸ್ಸು ಈ ರಾಜ್ಯ ಘಟನೆಯನ್ನು ಮುರಿಬಡಿಯಬೇಕೆಂದು ನಿರ್ಧರಿಸಿದೆ. ಮತ್ತು ಹರಿಪುರ

ಕಾಂಗ್ರೆಸ್‌ದಲ್ಲಿ ಕಾಂಗ್ರೆಸ್ಸಿಗೂ ಮತ್ತು ಸಂಸ್ಥಾನೀ ಪ್ರಜೆಗಳಿಗೂ ಇರುವ ಸಂಬಂಧವನ್ನು ಸ್ಪಷ್ಟ ಮಾಡಿದೆ. ಇದರಿಂದ ಕಾಂಗ್ರೆಸ್ಸಿನ ಸಹಾನುಭೂತಿಯು ದೊರೆತಿರುವುದಲ್ಲದೆ ಸ್ವತಂತ್ರ ರೀತಿಯಿಂದ ಆ ಸಂಸ್ಥಾನಗಳಲ್ಲಿಯ ಪರಿಸ್ಥಿತಿಗೆ ತಕ್ಕಂತೆ ಚಳವಳಿಯನ್ನು ಮುಂದೂಡಲು ಅವಕಾಶವು ಕಲ್ಪಿಸಲ್ಪಟ್ಟಿದೆ.

ಇಡೀ 1935ನೇ ಇಸ್ವಿಯ ಗವರ್ನಮೆಂಟ್ ಆಫ್ ಇಂಡಿಯಾ ಆ್ಯಕ್ಟ್‌ನಲ್ಲಿ ಸಂಸ್ಥಾನಿ ಪ್ರಜೆಗಳಿಗೆ ಸ್ಥಾನವಲ್ಲ. ಸಂಸ್ಥಾನಿರು ತಮ್ಮ ಹಿತ ಸಾಧಿಸುವವರನ್ನೇ ಆರಿಸಿ ಕಳಿಸುವರೆಂದು ಕನಸಿನಲ್ಲಿಯೂ ಸಹ ಎಣಿಲು ಅವಕಾಶವಿಲ್ಲ. ಮತ್ತು ತಮ್ಮ ನಿರಂಕುಶ ಪ್ರಭುತ್ವವು ಹಾಗೆಯೇ ಮುಂದುವರಿಯಬೇಕೆಂದು ಬ್ರಿಟಿಷ್ ಸರಕಾರ ಅಂಕಿತದಲ್ಲಿಯೇ ತಮಗೆ ಹಿತವಿದೆಯೆಂದೂ ತಿಳಿದವರು ಭಾರತಕ್ಕೆ ಎಷ್ಟರಮಟ್ಟಿಗೆ ಅನುಕೂಲರಾದಾರು? ಅವರಿಂದ ಭಾರತದೇಶಕ್ಕೆ ಹಾನಿಯೇ ವಿಶೇಷವಿರುವುದಲ್ಲದೆ ಲಾಭವು ಮಾತ್ರ ಏನೂ ಇಲ್ಲ.

ಸದ್ಯಕ್ಕೆ ಸಂಸ್ಥಾನಗಳಲ್ಲಿಯ ಆಡಳಿತವು ಹೇಗಿರುವುದೆಂಬುದು ಎಲ್ಲರಿಗೂ ತಿಳಿದ ಮಾತಾಗಿದೆ. ಸಂಸ್ಥಾನ ಆಡಳಿತವೆಂದರೆ ಸಾಮಾನ್ಯವಾಗಿ ನಿರಂಕುಶ ಪ್ರಭುತ್ವ ಉದ್ದಾಮ ಮತ್ತು ಉಚ್ಚ ಹಂಬಲ ವೃತ್ತಿ ಮತ್ತು ತಮ್ಮ ಪ್ರಜೆಗಳ ಸಂಬಂಧವಾಗಿರುವ ನಿಷ್ಕರುಣ ಬುದ್ಧಿ ಇವುಗಳ ಪ್ರದರ್ಶನವಾಗಿದೆ. ಇಂಥ ಸಂಸ್ಥಾನಿಕರ ಸಂಸ್ಥಾನಗಳ ಒಳಕಾರ ಭಾರದಲ್ಲಿ ಬ್ರಿಟಿಷ್ ಪ್ರಜೆಗಳು ಯಾವುದೇ ತರಹದಿಂದ ಕೈ ಹಾಕತಕ್ಕದ್ದಲ್ಲವಂತೆ. ಆರೆ ಸಂಸ್ಥಾನಿಕರು ಮಾತ್ರ ಬ್ರಿಟಿಷ್ ಹಿಂದುಸ್ಥಾನದ ಸಂಪೂರ್ಣ ಕಾರಭಾರದಲ್ಲಿ ಕೈ ಹಾಕಬಹುದಂತೆ, ಅಂದ ಮೇಲೆ ಇಂಥ ಪ್ರತಿಗಾಮೀ ಧೋರಣದ ಸಂಸ್ಥಾನಿಕರಿಂದ ಆರಿಸಿ ಕಳಿಸಲ್ಪಟ್ಟ ಪ್ರತಿನಿಧಿಗಳು ಬ್ರಿಟಿಷ್ ಭಾರತೀಯ ರಾಷ್ಟ್ರೀಯತೆಗೂ ಆಶೆ ಆಕಾಂಕ್ಷೆಗಳಿಗೂ ನಿಶ್ಚಯವಾಗಿ ಅಡ್ಡಿ ಬರುವರೆಂಬುದರಲ್ಲಿ ಸಂದೇಹವಿಲ್ಲ. ಇಷ್ಟರಲ್ಲಿಯೇ ಹಲವು ಸಂಸ್ಥಾನಿಕರು ಸಂಯುಕ್ತ ರಾಜ್ಯ ಘಟನೆಯಲ್ಲಿ ಸೇರಲು ಒಪ್ಪಿಕೊಂಡಿದ್ದಾರೆ. ಮತ್ತು ಇನ್ನು ಕೆಲದಿನಗಳಲ್ಲಿ ಉಳಿದವರೂ ಒಪ್ಪಿಕೊಳ್ಳಬಹುದು. ಮತ್ತು ಅದರಿಂದ ಅವರಿಗೆ ಹಾನಿ ಸಹ ಏನೂ ಇಲ್ಲ. ಮತ್ತು ಸಂಸ್ಥಾನಿಕರ ಈ ವೃತ್ತಿಯನ್ನು ನೋಡಿ ನನಗೊಂದು ಕತೆ ನೆನಪಾಗಿದೆ. ಅದನ್ನು ಇಲ್ಲೇ ಹೇಳಿದರೆ ಅಪ್ರಸ್ತುತವಾಗಲಿಕ್ಕಿಲ್ಲ.

ಒಬ್ಬ ಮನುಷ್ಯನು ಪ್ರವಾಸದಲ್ಲಿದ್ದಾಗ್ಗೆ ಆತನ ಬಳಿಯಲ್ಲಿದ್ದ ಅವಲಕ್ಕಿಯಲ್ಲ ತೀರಿ ತವಡು ಮಾತ್ರ ಅವರ ಹತ್ತರ ಉಳಿಯಿತು, ಮುಂದೇನು ಮಾಡಬೇಕೆಂಬ ಯೋಚನೆಯಲ್ಲಿದ್ದಾಗ ಮತ್ತೊಬ್ಬ ಪ್ರವಾಸಿಯು ಬಂದು ತನ್ನ ಅವಲಕ್ಕಿಯ ಗಂಟು ಬಿಚ್ಚಿ ತಿನ್ನಲಿಕ್ಕೆ ಕುಳಿತನು. ಅದನ್ನು ನೋಡಿ ಸಂತೋಷ ಭರಿತನಾಗಿ ಮೊದಲಿನ ಪ್ರವಾಸಿಯು ಅವನಿಗೆ ಹೇಳಿದ್ದೇನೆಂದರೆ ಆಯ್ಯ ನನ್ನ ಬಳಿಯಲ್ಲಿದ್ದ ಅವಲಕ್ಕಿಯಲ್ಲ ತೀರಿ ಹೋಗಿ ತವಡು ಮಾತ್ರ ಉಳಿದಿದೆ. ಆದರಿಂದ ನಿನ್ನ ಅವಲಕ್ಕಿಯಲ್ಲಿ ನನ್ನ ತವಡು ಕೂಡಿಸಿ ಇಬ್ಬರೂ ಕೂಡಿ ಊದಿ ತಿನ್ನುವಾ. 'ಈ ಕಥೆಯಲ್ಲಿಯ ತವಡು ಹತ್ತರವಿದ್ದವನಂತೆ ಸಂಯುಕ್ತ ಘಟನೆಯಲ್ಲಿ ಕೂಡಬೇಕೆನ್ನುವ

ಸಂಸ್ಥಾನಿಕನ ಗತಿಯಾಗಿದೆ. ಸಂಯುಕ್ತ ರಾಜ್ಯ ಘಟನೆಯು ಆ ಮೂಲಾಗ್ರ ತ್ಯಾಜ್ಯವಿರುವದೆಂದು ಕಾಂಗ್ರೆಸ್ಸು ನಿರ್ಧರಿಸಿದೆ. ಮತ್ತು ಅದನ್ನು ಮುರಿದೊಗೆಯಲಿಕ್ಕೆ ನಾವು ಬೇಕಾದಂಥ ಉಗ್ರ ಉಪಾಯ ಯೋಜನೆಗಳನ್ನು ಕೈಕೊಳ್ಳಲು ಸಿದ್ಧರಿರುವೆವೆಂದು ರಾಷ್ಟ್ರಾಧ್ಯಕ್ಷರಾದ ಬಾಬು ಸುಭಾಷಚಂದ್ರ ಭೋಸರು ಸಾರಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ, ಅದರಲ್ಲಿ ಸೇರಿ ಅದನ್ನು ಜಾರಿಯಲ್ಲಿ ಇರಬೇಕೆನ್ನುವ ಸಂಸ್ಥಾನಿಕರಿಗೆ ಮುಂದೆ ಹೆಜ್ಜೆ ಇಡುವ ಮೊದಲು ಮತ್ತೊಮ್ಮೆ ವಿಚಾರ ಮಾಡಬೇಕೆಂದು ನಾನು ನಮ್ರತೆಯಿಂದ ಅವರಿಗೆ ಎಚ್ಚರಿಕೆ ಕೊಡಬಯಸುತ್ತೇನೆ. ಸಂಸ್ಥಾನಿಕರು ತಮ್ಮ ಸಂಸ್ಥಾನವು ಬಹುಕಾಲ ಬಾಳಬೇಕೆಂದು ಇಚ್ಛಿಸುತ್ತಿದ್ದರೆ ತಮ್ಮ ಪ್ರಜೆಗಳ ಕಷ್ಟನಷ್ಟಗಳನ್ನೂ ಕುಂದುಕೊರತೆಗಳನ್ನೂ ತಿಳಿದುಕೊಂಡು ಅವುಗಳನ್ನು ದೂರೀಕರಿಸಬೇಕಲ್ಲದೆ ಬದಲಾಗುತ್ತಿರುವ ಸದ್ಯದ ಪರಿಸ್ಥಿತಿಯನ್ನುಲಕ್ಷಿಸಿ ವರಿಗೆ ತಮ್ಮ ತಮ್ಮ ಸಂಸ್ಥಾನದ ರಾಜ್ಯ ಭಾರದಲ್ಲಿ ಹೊಣೆಗಾರಿಕೆಯನ್ನು ಕೊಡಬೇಕಾದದ್ದು ಅವಶ್ಯವೆಂದು ನನಗನಿಸುತ್ತದೆ. ಮತ್ತು ಹಾಗೆ ಮಾಡದೆ ಹೊಸ ಸಂಯುಕ್ತ ರಾಜ್ಯ ಘಟನೆಯಲ್ಲಿ ಸೇರುವದೆಂದರೆ ಆವಿಚಾರದ ಅತಿರೇಕವೇ ಸರಿ.

## ಸಂಸ್ಥಾನಗಳಲ್ಲಿ ಹೊಣೆಗಾರ ರಾಜ್ಯ ಪದ್ಧತಿ

ಸಂಸ್ಥಾನಿಕರು ತಮ್ಮ ಸಂಸ್ಥಾನಗಳಲ್ಲಿ ಯಾವ ಪದ್ಧತಿಯನ್ನುಸರಿಸಬೇಕೆಂದು ಹೇಳಬೇಕಾಗಿಲ್ಲ. ಯಾಕೆಂದರೆ ಮಾರ್ಪಾಟದ ಸದ್ಯದ ಪ್ರಪಂಚದಲ್ಲಿ ರಾಜಪ್ರಭುತ್ವವು ಹೋಗಿ ಪ್ರಜಾಪ್ರಭುತ್ವವು ದಿನಂಪ್ರತಿ ಹೆಚ್ಚುತ್ತ ನಡೆದಿದ್ದು ಕಣ್ಣೆರೆದು ನೋಡುವ ಯಾವನಿಗಾದರೂ ಕಾಣುವಂತಿದೆ. ಅಂದಮೇಲೆ ಸಂಸ್ಥಾನಿಕರು ತಮ್ಮ ಸಂಸ್ಥಾನದ ಆಡಳಿತದಲ್ಲಿ ಪ್ರಜೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು. ಇನ್ನು ಮೇಲೆ ಸ್ವೈರವೃತ್ತಿಯ ಏಕತಂತ್ರ ಕಾರಭಾರಕ್ಕೆ ಅವಕಾಶವಿಲ್ಲೆಂಬುದನ್ನು ಅವರು ಮರೆಯ ಕೂಡದು. ಪ್ರಜೆಗಳಿಗೆ ತಮ್ಮ ಹಕ್ಕು ಬಾಧ್ಯತೆಯ ಅರಿವು ಉಂಟಾಗಿದೆ. ಇಂಥ ಪರಿಸ್ಥಿತಿಯಲ್ಲಿ ಅವರ ಆಕೆ ಅಕಾಂಕ್ಷೆಗಳನ್ನು ಈಡೇರಿಸದೆ ಇವುಗಳನ್ನು ಹಾಗೆ ಹತ್ತಿಕ್ಕ ಹತ್ತಿದರೆ ಯಾವ ವೇಳೆಗೆ ಅದು ಸ್ಫೋಟವಾದೀತೆಂದು ಹೇಳಲಾಗುವುದಿಲ್ಲ. ವಿಶ್ವಾಸದಿಂದ ವಿಶ್ವಾಸವೂ ಪ್ರೇಮದಿಂದ ಪ್ರೇಮವೂ ಉದ್ಭವಿಸುವದೆಂಬ ಮಾತನ್ನು ಸಂಸ್ಥಾನಿಕರು ನೆನಪಿನಲ್ಲಿಡಬೇಕು.

ನಿಮ್ಮ ಸಂಸ್ಥಾನಿಕರು ಈ ವಿಷಯದಲ್ಲಿ ಅಲ್ಪಮಟ್ಟಿಗೆ ಸುಧಾರಣೆ ಮಾಡಿದ್ದಾರೆಂದು ಸಮಾಧಾನದ ಮಾತಾಗಿದೆ. ಆದರೆ ಆದ ಸುಧಾರಣೆಯು ಸಾಕಷ್ಟಿಲ್ಲವೆಂದು ಹೇಳಬೇಕಾಗಿದೆ. ಆದ್ದರಿಂದ ಅದರಲ್ಲಿ ಅಮೂಲಾಗ್ರ ಸುಧಾರಣೆಯಾಗಲೇಬೇಕು. ನಿಮ್ಮ ಕಾಯದೇ ಮಂಡಲದಲ್ಲಿ ಎಲ್ಲ ಸದಸ್ಯರೂ ಪ್ರಜಾ ಜನರಿಂದ ಆರಿಸಲ್ಪಟ್ಟರಿರಬೇಕು. ಮತ್ತು ಆದರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಆರಿಸಲ್ಪಟ್ಟ ಸದಸ್ಯರೊಳಗಿನವರೇ ಇರಬೇಕು. ಮತ್ತು ರಾಜ್ಯ ಕಾರಭಾರದಲ್ಲಿ

ಆ ಕಾಯಿದೆ ಮಂಡಳಕ್ಕೆ ಯೋಗ್ಯ ಸ್ಥಾನವಿರಬೇಕು. ಮತ್ತು ಸದ್ಯದ ಪರಿಸ್ಥಿತಿಯನ್ನು ಲಕ್ಷಕ್ಕೆ ತಂದು ನಿಮ್ಮ ಸಂಸ್ಥಾನಿಕರು ಅದರಲ್ಲಿ ಪ್ರಜಾ ಜನರಿಗೆ ಸಂಪೂರ್ಣ ಸ್ವಾಯತ್ತತೆಯನ್ನು ಕಲ್ಪಿಸಿಕೊಡಬೇಕೆಂದು ನನ್ನ ನಮ್ರ ಸೂಚನೆ ಇದೆ. ತಮ್ಮ ಪ್ರಜೆಗಳಿಗೆ ಈ ತರಹದ ಹಕ್ಕು ಬಾಧ್ಯತೆಗಳನ್ನು ಕೊಡುವ ಸಂಬಂಧದಲ್ಲಿ ಅವರ ಮತ್ತು ಸಾಮ್ರಾಜ್ಯ ಸರಕಾರದವರ ನಡುವೆ ಆದ ಒಪ್ಪಂದಗಳು ಅಡ್ಡ ಬರುತ್ತಿವೆಯೆಂದು ಇತ್ತಿಚೆಗೆ ಹಲವು ಸಂಸ್ಥಾನಿಕರು ಹೇಳಿದ್ದನ್ನು ನೀವು ಕೇಳಿರಬಹುದು. ಆದರೆ ಒಪ್ಪಂದಗಳು ಯಾವ ರೀತಿಯಿಂದಲೂ ಅಡ್ಡಬರುವುದಿಲ್ಲವೆಂದು ಇಂಗ್ಲೆಂಡದಲ್ಲಿಯ ರಾಜಕಾರಣ ತಜ್ಞರು ಸ್ಪಷ್ಟ ಮಾಡಿದ್ದಾರೆ. ಆದ್ದರಿಂದ ಒಪ್ಪಂದಗಳ ಕುಂಟನೆವವನ್ನು ತೋರಿಸದೆ ತಮ್ಮ ಪ್ರಜಾ ಜನರಿಗೆ ರಾಜ್ಯ ಕಾರಭಾರದಲ್ಲಿ ಸಂಪೂರ್ಣ ಸ್ವಾಯತ್ತತೆಯನ್ನು ಕೊಟ್ಟು ತಮ್ಮ ಸಂಸ್ಥಾನದಲ್ಲಿ ಸುಖಶಾಂತಿಗಳು ನಲಿದಾಡುವಂತೆ ಮಾಡಬೇಕೆಂದು ಸಂಸ್ಥಾನಿಕರಿಗೆ ನನ್ನ ಆಗ್ರಹದ ವಿನಂತಿ ಅದೆ.

## ಪ್ರಜಾ ಜನರ ಮೂಲಭೂತ ಹಕ್ಕುಬಾಧ್ಯತೆಗಳು

ಯಾವ ರಾಜ್ಯ ಘಟನೆಯಲ್ಲಿಯೇ ಆಗಲಿ ಪ್ರಜೆಗಳ ಮೂಲಭೂತ ಹಕ್ಕುಗಳೆಂದು ಹಲವು ಹಕ್ಕುಗಳಿರುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ (1) ಭಾಷಣ ಸ್ವಾತಂತ್ರ್ಯ (2) ಮುದ್ರಣ ಸ್ವಾತಂತ್ರ್ಯ (3) ವ್ಯಕ್ತಿ ಸ್ವಾತಂತ್ರ್ಯ (4) ಮತ್ತು ಸಂಘ ಸ್ವಾತಂತ್ರ್ಯ ಹಕ್ಕುಗಳನ್ನು ಯಾವುದೇ ಸಂಸ್ಥಾನಿಕರರಾದರೂ ಮನ್ನಿಸಬೇಕು. ಯಾಕೆಂದರೆ ಶರೀರ ಧಾರಣೆಗೆ ಗಾಳಿ, ಬೆಳಕು ಮತ್ತು ಅನ್ನ ಇವು ಹೇಗೆ ಅವಶ್ಯವೋ ಹಾಗೆ ರಾಷ್ಟ್ರವಾಗಲೀ ರಾಜ್ಯವಾಗಲೀ ಸಂಸ್ಥಾನವಾಗಲೀ ಜೀವಂತವಿದೆಯೆಂದು ಹೇಳಬೇಕಾದರೆ ಈ ಹಕ್ಕುಗಳೂ ಪ್ರಜಾ ಜನರಿಗೆ ಅತ್ಯವಶ್ಯವಾಗಿದೆ. ಈ ಹಕ್ಕುಗಳಿಲ್ಲದ ಪ್ರಜಾ ಜನರೆಂದರೆ ಜೀವಂತ ಹೆಣಗಿದ್ದಂತೆ. ಇಂಥ ಅರಸರಾದರೂ ಹಾಗೆಯೇ ಸರಿ. ಯಾಕೆಂದರೆ ಭಾಷಣ ಸ್ವಾತಂತ್ರ್ಯವಿಲ್ಲದೆ ಹೋದರೆ ಪ್ರಜಾ ಜನರು ತಮ್ಮ ವಿಚಾರಗಳನ್ನೂ ಅಭಿಪ್ರಾಯಗಳನ್ನೂ ಆಳುವವರಿಗೂ ಆಳಲ್ಪಡುವವರಿಗೂ ತಿಳಿಸುವದೆಂತು? ಆಳಲ್ಪಡುವವರ ವಿಚಾರಗಳನ್ನೇ ತಿಳಿದ ಆಳಿಗರು ಆಳುವದೆಂತು? ಮತ್ತು ಇದೇ ಕಾರಣಕ್ಕಾಗಿಯೇ ಮುದ್ರಣ ಸ್ವಾತಂತ್ರ್ಯವು ಅವಶ್ಯವಾಗಿದೆ. ಮತ್ತು ಅದೇ ಕಾರಣದಿಂದ ವ್ಯಕ್ತಿ ಸ್ವಾತಂತ್ರ್ಯವು ಮತ್ತು ಸಂಘ ಸ್ವಾತಂತ್ರ್ಯವು ಅಗತ್ಯವಾಗಿವೆ. ಆದ್ದರಿಂದ ಪ್ರಜೆಗಳಿಗೆ ವರ ಜನ್ಮಸಿದ್ಧ ಮೂಲಭೂತ ಹಕ್ಕುಗಳನ್ನು ಸಂಸ್ಥಾನಿಕರು ಕೊಡಲೇಬೇಕು. ಒಂದು ವೇಳೆ ಅಷ್ಟೊಂದು ಉದಾರ ಬುದ್ಧಿಯು ಸಂಸ್ಥಾನಿಕರಲ್ಲಿ ಕಂಡು ಬರದಿದ್ದರೆ ಇತಿಹಾಸಗಳ ಪುನರಾವೃತ್ತಿಯಾಗಿ ಪ್ರಜಾಜನರಿಂದ ಅದು ಬಲಾತ್ಕಾರದಿಂದಲಾದರೂ ತೆಗೆದುಕೊಳಲ್ಪಡುವುದೆಂಬ ಮಾತನ್ನು ಸಂಸ್ಥಾನಿಕರು ನೆನಪಿನಲ್ಲಿಟ್ಟುಕೊಳ್ಳಬೇಕು.

ಜಮುಖಂಡಿ ಸಂಸ್ಥಾನದಲ್ಲಿ ಭಾಷಣ ಸ್ವಾತಂತ್ರ್ಯದ ಮೇಲೆ ಹಲವು ನಿಬಂರ್ಧಗಳಿರುವವೆಂದು ನಾನು ಬಲ್ಲೆನು; ಆ ನಿರ್ಬಂಧಗಳನ್ನು ಕೂಡಲೇ ದೂರಮಾಡಬೇಕಾಗಿ ಅವರಿಗೆ ವಿನಯದಿಂದ ಕೇಳಿಕೊಳ್ಳುತ್ತೇನೆ. ಮತ್ತು ಹಾಗೆಯೇ ಆ ನಿರ್ಬಂಧಗಳನ್ನು ಅವರು ಜಾರಿಯಲ್ಲಿಟ್ಟಿಲ್ಲ ಅದರಿಂದ ಸಂಸ್ಥಾನಕ್ಕೆ ಹಿತವೇನೂ ಆಗದೆ ತದ್ವಿರುದ್ಧವಾಗಿ ಅವರಿಗೆ ಅಹಿತವೇ ಆಗುವದೆಂದು ಇಲ್ಲಿ ನಾನು ಹೇಳಿದರೆ ಅಪ್ರಸ್ತುತವಾಗಲಿಕ್ಕಿಲ್ಲ. ರಾಜ್ಯಕಾರಭಾರವಲ್ಲಿ ಪ್ರಜೆಗಳಿಗೆ ಯೋಗ್ಯ ಹೊಣೆಗಾರಿಕೆಯನ್ನು ಕೊಟ್ಟರೆ ಇಬ್ಬರಿಗೂ ಸುಖವಿದೆ.

## ಕನ್ನಡ ಭಾಷೆಗೆ ಮನ್ನಣೆಬೇಕು

ಭಾಷಣ ಸ್ವಾತಂತ್ರ್ಯವೆಂದ ಕೂಡಲೇ ನಿಮ್ಮ ಸಂಸ್ಥಾನದಲ್ಲಿ ನಡೆದಿದ್ದ ಮತ್ತೊಂದು ಸಂಗತಿಯನ್ನು ದುಃಖದಿಂದ ಇಲ್ಲಿ ಉಲ್ಲೇಖಿಸಬೇಕಾಗಿದೆ. ಪ್ರಜೆಗಳ ಮಾತೃಭಾಷೆಯಲ್ಲಿಯೇ ಎಲ್ಲ ತರಹದ ವ್ಯವಹಾರ ಮಾಡಲಿಕ್ಕೆ ಅವರಿಗೆ ಆಸ್ಪದವಿರಬೇಕೆಲ್ಲದೆ ಅವರ ಆ ಭಾಷೆಯ ಅಭಿವೃದ್ಧಿಗಾಗಿ ಸಂಸ್ಥಾನಿಕರು ಸಕಲ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ಒತ್ತಾಯದಿಂದ ಪ್ರಜೆಗಳ ಮೇಲೆ ಪರಭಾಷೆಯನ್ನು ಹೇರುವುದು ಯುಕ್ತವಲ್ಲ. ಪ್ರಜೆಗಳ ಮಾತೃ ಭಾಷೆಯ ಅಭಿವೃದ್ಧಿಗಾಗಿ ಅವರು ಸಕ್ರಿಯ ಸಹಾಯ ಸಹಾನುಭೂತಿಗಳನ್ನೀಯದಿದ್ದರೆ ಸಂಸ್ಥಾನಿಕರು ಕರ್ತವ್ಯ ಚ್ಯುತರಾದಂತೆಯೇ ಸರಿ. ಜಮಖಂಡಿ ಸಂಸ್ಥಾನದಲ್ಲಿ ನೂರಕ್ಕೆ 75 ರಂತೆ ಕನ್ನಡ ಮಾತಾಡುವವರೂ, ಕನ್ನಡ ಬರೆಯುವವರೂ, ಕನ್ನಡ ಸಂಸ್ಕೃತಿಯುಳ್ಳವರೂ ಇದ್ದಾರೆ. ಈ ಬಹುಸಂಖ್ಯಾಕ ಪ್ರಜೆಗಳ ಕುಂದುಕೊರತೆಗಳನ್ನು ಕಿವಿ ಮೇಲೆ ಹಾಕಿಕೊಳ್ಳದೆ ನಿಮ್ಮ ಸಂಸ್ಥಾನಿಕರು ದುರ್ಲಕ್ಷಮಾಡುವುದನ್ನು ನೋಡಿ ನಿಜವಾಗಿಯೂ ನನಗೆ ಬಹಳ ವಿಷಾದವೆನಿಸುತ್ತದೆ. ಕನ್ನಡ ಭಾಷೆಯವು ನಿಮ್ಮ ಸಂಸ್ಥಾನದ ದರ್ಬಾರದ ಭಾಷೆಯಾಗಬೇಕಾದುದು ನ್ಯಾಯಸಮ್ಮತವು. ಆದರೆ ಅದನ್ನು ಬದಿಗೊತ್ತಿ ಅಲ್ಲಿ ಮರಾಠಿ ಭಾಷೆಯನ್ನು ಬಲಾತ್ಕಾರದಿಂದ ಹೇರುವುದನ್ನು ನೋಡಿ ಯಾವ ಕನ್ನಡಿಗನಿಗೆ ಸಹನವಾದೀತು? ಅದರಲ್ಲಿ ನನ್ನಂಥ ಕನಸಿನಲ್ಲಿ ಕೂಡ ಕನ್ನಡ ಕನ್ನಡವೆಂದು ಕೂಗುವ ಕನ್ನಡಿಗನಿಗೆ ಹೇಗನಿಸುತ್ತಿರಬಹುದು? ಜಮುಖಂಡಿ ಸಂಸ್ಥಾನಾಧಿಪತಿಗಳು ಇನ್ನು ಮೇಲಾದರೂ ಪ್ರಚಾರ ಬಿನ್ನಹಕ್ಕೆ ಕಿವಿಗೊಟ್ಟು ಸಂಸ್ಥಾನಲ್ಲಿಯೂ ದರ್ಬಾರದಲ್ಲಿಯೂ ಕನ್ನಡಕ್ಕೆ ಯೋಗ್ಯಸ್ಥಾನ ದೊರೆಯುವಂತೆ ಮಾಡಿ ತಮ್ಮಲ್ಲಿರುವ ಉದಾರಬುದ್ಧಿ ಮತ್ತು ಪ್ರಜಾವಾತ್ಸಲ್ಯವನ್ನು ತೋರ್ಪಡಿಸುವರೆಂದು ನಾನು ನಂಬಿದ್ದೇನೆ.

# ರೈತನ ಸ್ಥಿತಿ

ಬ್ರಿಟಿಷ್ ಸೀಮೆಯ ಯಾವುದೇ ಭಾಗದಲ್ಲಿಯಕ್ಕಿಂತಲೂ ಜಮಖಂಡಿ ಸಂಸ್ಥಾನದಲ್ಲಿ ತೆರಿಗೆಯ ಪ್ರಮಾಣವು ಬಹಳ ಹೆಚ್ಚಾಗಿರುವುದೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಮತ್ತು ಇಂತಹ ಸುಧಾರಣೆಯ ಕಾಲದಲ್ಲಿ ಸೀಮೆಯಲ್ಲಿರುವವರಿಗೇ ತೆರಿಗೆ ಕೊಡುವುದು ಕಷ್ಟ ಸಾಧ್ಯವೆಂದ ಮೇಲೆ ನಿಮ್ಮ ಸ್ಥಿತಿಯನ್ನು ನಾನು ಬೇರೆ ಹೇಳಬೇಕಾಗಿಲ್ಲ. ಇಂಥ ಸ್ಥಿತಿಯಲ್ಲಿ ಬಡರೈತನು ಕಂದಾಯವನ್ನು ಕೊಡುವ ಬಗೆ ಹೇಗೆ?

ಇನ್ನು ರೈತ ಹಾಗೂ ಸರಕಾರದ ಸಂಬಂಧವೇನಿರಬೇಕೆಂಬುದನ್ನು ನಾನು ಇಲ್ಲಿ ಸ್ವಲ್ಪ ವಿವೇಚಿಸುವೆನು. ವಾಸ್ತವಿಕವಾಗಿ ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಕೃಷಿಕರ ಹಿತ ಸಂಬಂಧಗಳಿಗೆ ಹೆಚ್ಚು ಪ್ರಾಧಾನ್ಯವಿರುವುದು ಅವಶ್ಯವು. ಹಾಗೂ ಅವರ ರಕ್ಷಣೆಯು ಹೊರೆಯಲ್ಲೂ ಸರಕಾರದ ಮೇಲಿರುವುದು. ರೈತರು ಹಗಲು ರಾತ್ರಿಗಳೆನ್ನದೆ ಬಿಸಲು ಮಳೆಯನ್ನದೆ ಹೆಂಡರು ಮಕ್ಕಳು ಸಹಿತರಾಗಿ ಹೊಲದಲ್ಲಿ ದುಡಿಯುತ್ತಿರುವುದರಲ್ಲಿ ಮಾನವ ಹಿತವೇ ಮುಖ್ಯವಿರುವುದಲ್ಲದೆ ವೈಯಕ್ತಿಯ ಸ್ವಾರ್ಥಾಭಿಲಾಷೆಯು ಇರುವುದಿಲ್ಲ. ಇಂಥ ತ್ಯಾಗ ಪೂರ್ಣ ವ್ಯವಸಾಯವು ನಮ್ಮ ರೈತರದು. ಆದುದರಿಂದಲೇ ಪ್ರಾಚೀನ ಕಾಲದಿಂದಲೂ ಒಕ್ಕಲತನವು ಉಚ್ಚವೆಂದು ಗಣಿಸಲ್ಪಡುತ್ತಿತ್ತೆಂಬುದು ಭಾರತೀಯ ಗ್ರಂಥಗಳಲ್ಲೆಲ್ಲ ಧಾರಳವಾಗಿ ಕಂಡು ಬರುವುದು.

ಆದರೆ ಇಂದಿನ ನಮ್ಮ ರೈತರ ಸ್ಥಿತಿಯು ಹೇಗದೆ ಇಂದಿನ ರೈತನಿಗೆ ಮಾನವರಿಗೆ ಅನ್ನವನ್ನು ಪೂರೈಸಬಲ್ಲ ರೈತನಿಗೆ-ಹೊಟ್ಟೆಗೆ ಅನ್ನವಿಲ್ಲ, ಮೈಯಲ್ಲಿ ಬಟ್ಟೆಯಿಲ್ಲ, ದನಕರುಗಳಿಲ್ಲ ಇಂಥ ವಿಷಮ ಪರಿಸ್ಥಿತಿಯಲ್ಲಿಯೂ ಭಾರತೀಯ ರೈತರು ಕೃಷಿತನವನ್ನು ಸಾಗಿಸುತ್ತಿರುವುದು ಅವರ ಧೈರ್ಯವನ್ನೂ ಸ್ಥೈರ್ಯವನ್ನೂ ತೋರಿಸುತ್ತದೆ. ಸಂರಕ್ಷಣೆ ಮಾಡುವ ಸರಕಾರೇ ಅವರ ರಕ್ತ ಹೀರುವವರಲ್ಲಿ ಮುಖ್ಯವಾಗಿದೆ ಅದು ಹಾಗೇಕೆ ಆಗಿದೆಯೆಂಬುದನ್ನು ನಾನು ಈ ಮೊದಲೇ ವಿವೇಚಿಸಿದಂತೆ ಸಾಮ್ರಾಜ್ಯಶಾಹಿ ಬ್ರಿಟಿಷ ಸರಕಾರವು ಹಿಂದುಸ್ಥಾನವನ್ನು ಸುಲಿದುಕೊಳ್ಳುವ ದೃಷ್ಟಿಯಿಂದ ಅಳುತ್ತಿರುವದೇ ನಮ್ಮ ರೈತರ ಇಂದಿನ ಸ್ಥಿತಿಗೆ ಕಾರಣವಾಗಿದೆ. ಹಿಂದೀ ಸಂಸ್ಥಾನಗಳಲ್ಲಿ ಕೂಡ ರಾಜ್ಯಭಾರವು ಇದೇ ದೃಷ್ಟಿಯಿಂದ ನಡೆಯುತ್ತಿರುವುದು.

ಬ್ರಿಟಿಶ ಹಿಂದುಸ್ಥಾನದಲ್ಲಿ ಬ್ರಿಟಿಷರು ಪ್ರತ್ಯಕ್ಷಾಗಿ ರೈತರಿಂದ ಹಣ ಹೀರುತ್ತಿದ್ದರೆ ಸಂಸ್ಥಾನಗಳಲ್ಲಿ ಅವರು ಸಂಸ್ಥಾನಿಕರ ಮುಖಾಂತರ ಸಂಸ್ಥಾನದ ರೈತರನ್ನು ಹೀರುತ್ತಿರುವರು.

ಹಾಗೂ ಸಂಸ್ಥಾನಿಕರಿಗೆ ರಾಜಾ ಮಹಾರಾಜರು-ಛತ್ರಪತಿ-ನವಾಬ ಮೊದಲಾದ ಆಕರ್ಷಕ ಬಿರುದಾವಳಿಗಳನ್ನು ಕೊಟ್ಟು ತಮ್ಮ ನಿರಂತರ ಗಮಾಸ್ತರನ್ನಾಗಿ ಮಾಡಿಕೊಂಡಿರುವವರು.

ಹಾಗೂ ಈ ಜೊಳ್ಳು ಪಟ್ಟಕ್ಕೆ ಮನಸೋತು ನಮ್ಮ ರಾಜ-ಮಹಾರಾಜರು ಬ್ರಿಟಿಷರನ್ನು ಸಾಮ್ರಾಜ್ಯಶಾಹಿಯನ್ನು ಸಂತುಷ್ಟಗೊಳಿಸುವದೊಂದೇ ತಮ್ಮ ಕರ್ತವ್ಯವೆಂದು ತಿಳಿದು ಅದರಂತೆ ಆಚರಿಸುತ್ತಿರುವಾಗ ಅವರಿಗೆ ತಮ್ಮ ರೈತರ ಪರಿವೆಯು ಹೇಗೆ ಉಳಿಯಬೇಕು ಬ್ರಿಟಿಷ ಸರಕಾರಕ್ಕೆ ಹೇರಳ ಕಪ್ಪ-ಕಾಣಿಕೆಗಳನ್ನು ಸಲ್ಲಿಸುತ್ತ ಸೈನ್ಯ ವೆಚ್ಚವನ್ನು ಹೊತ್ತು ತಮ್ಮ ದುಂದುಗಾರಿಕೆಗೆ ಹಣ ಹೇಗೆ ಉಳಿಸಬೇಕೆಂಬುದೊಂದೇ ಅವರ ಆಡಳಿತೆಯ ಗುಟ್ಟಾಗಿದೆ. ಪ್ರಜೆಗಳ ಮೇಲೆ ಎಲ್ಲ ವಿಧದ ಉದ್ಯೋಗಗಳಿಗೆ ಪ್ರತ್ಯಕ್ಷ ಅಪ್ರತ್ಯಕ್ಷ ಕರಹೇರಿ ಅವುಗಳನ್ನು ನಿರ್ದಯತನದಿಂದ ವಸೂಲ ಮಾಡುವುದೇ ಈ ಗುಮಾಸ್ತರ ಧ್ಯೇಯವಾಗಿದೆ. ಇಂಥ ಧ್ಯೇಯದ ಮೂಲಕ ಸಂಸ್ಥಾನದ ರೈತರ ಮೇಲೆ ಹೆಚ್ಚಿನ ಕರಭಾರವು ಬಿದ್ದಿದೆ. ತಾತ್ಪೂರ್ತಿಕವಾಗಿ ಬೆಳೆ-ಮಾರಾಟವು ಆಗಿಂದಾಗ್ಗೆ ಭೂಕಂದಾಯನ್ನು ಹೆಚ್ಚಿಗೆ ಮಾಡಿದರು. ಆದರೆ ಇಳಿದಾಗ ಮಾತ್ರ ಅದನ್ನು ಇಳಿಸುವ ಬುದ್ಧಿಯು ನಮ್ಮ ಸಂಸ್ಥಾನಾಧಿಪತಿಗೆ ಇಲ್ಲ. ಒಕ್ಕಲಿಗರ ಸೌಕರ್ಯಗಳನ್ನಂತೂ ಅವರು ಲಕ್ಷಿಸುವುದಿಲ್ಲ. ಹಳ್ಳಿಗಳ ಸುಖ-ದುಃಖಗಳ ಅರಿವು ಅವರಿಗಿರುವುದಿಲ್ಲ, ಜಮಖಂಡಿ ಸಂಸ್ಥಾನದಲ್ಲಿಯ ಭೂಕಂದಾಯವು ನೆರೆಹೊರೆಯ ಬ್ರಿಟಿಷ ಪ್ರಾಂತಗಳಿಗಿಂತ 2 ಪಟ್ಟು ಹೆಚ್ಚಾಗಿದೆಯೆಂದು ಕೇಳುತ್ತೇನೆ. ಆದರೆ ರೈತನಿಗೆ ಈ ಕರಕೊಡುವ ಸಾಮರ್ಥ್ಯವಿದೆಯೋ ಹೇಗೆಂಬುದನ್ನು ಅವರು ವಿಚಾರಿಸುವ ಗೊಡವೆಗೆ ಹೋಗುವುದಿಲ್ಲ. ತಮಗೆ ವಸೂಲ ಮಾಡುವ ಸಾಮರ್ಥ್ಯವಿದ್ದಷ್ಟು ತೆರಿಗೆ ಹೇರುವದು ತಮಗೆ ಅಧಿಕಾರವಿದೆಯೆಂದು ನಿಮ್ಮ ಸಂಸ್ಥಾನಿಕರು ತಿಳಿದುಕೊಂಡಿರುವಂತೆ ಕಾಣುತ್ತದೆ.

ಇಷ್ಟು ಧಾರವಾಡ ಕರವನ್ನು ಕೊಡುವ ರೈತನಿಗೆ ಯಾವ ಲಾಭಗಳಾಗಿರುವುವು? ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಬೇಕಾದರೆ ಸರಳವಾದ ಮಾರ್ಗವಿಲ್ಲ ಒಂದು ಹಳ್ಳಿಯಿಂದ ಮೂರೇ ಮೈಲಿನಲ್ಲಿರುವ ಒಂದು ಹಳ್ಳಿಗೆ ಮಳೆಗಾಲದಲ್ಲಿ ನಡೆಯುತ್ತ ಹೊರಟರೆ ಅದನ್ನು ಮುಟ್ಟಲು ಆರುತಾಸು ಹಿಡಿಯುವವು. ಇದು ರಸ್ತೆಯ ಸೌಕರ್ಯ ಶಿಕ್ಷಣವಂತೂ ದುರ್ಲಕ್ಷಿಸಲ್ಪಟ್ಟಿದೆ, ಆರೋಗ್ಯದ ಮಾತೇ ಇಲ್ಲ. ಹಳ್ಳಿಗಳಲ್ಲಿ ನೀರಿನ ತುಟಾರತೆಯ ಯಾವಾಗಲೂ ಇದ್ದೆ ಇದೆ.

ಸುಮಾರು 12 ಲಕ್ಷ ಉತ್ಪನ್ನವಿದ್ದ ಜಮಖಂಡಿ ಸಂಸ್ಥಾನದಲ್ಲಿ ಶಿಕ್ಷಣಕ್ಕೆ ಸುಮಾರು 75 ಸಾವಿರ, ಆರೋಗ್ಯಕ್ಕಾಗಿ 20 ಸಾವಿರ ಪಬ್ಲಿಕ್ ವರ್ಕ್ಸ್‌ಕ್ಕಾಗಿ 2ವರೆ ಲಕ್ಷ ವೆಚ್ಚಮಾಡಲಾಗುತ್ತಿದೆ. ಆದರೆ ಮಹಾರಾಜರ ವೆಚ್ಚ ಮೇಜವಾನಿಗಳ 1ವರೆ ಲಕ್ಷ ರೂಪಾಯಿಗಳು ವೆಚ್ಚವಾಗುತ್ತವೆ. ಅದರಂತೆ ಆಡಳಿತ ವೆಚ್ಚದ ಪ್ರಮಾಣವೂ ಉತ್ಪನ್ನದ ಪ್ರಮಾಣದಿಂದ ಹೆಚ್ಚಿದೆ. ಉದ್ಯೋಗ ವ್ಯವಹಾರಗಳಂತೂ ತೀರ ನಿಕೃಷ್ಟಾವಸ್ಥೆಯಲ್ಲಿವೆ.

## ಸಂಸ್ಥಾನದಲ್ಲಿ ಮಾಡಬಹುದಾದ ಸುಧಾರಣೆ

ಸಂಸ್ಥಾನಾಧಿಪತಿಗಳು ಮನಸ್ಸು ಮಾಡಿದರೆ ಪ್ರಜಾಜನರ ಅನೇಕ ಕಷ್ಟ ನಷ್ಟಗಳು ದೂರಾಗಬಹುದು, ಒಕ್ಕಲತನವು ಊರ್ಜಿತಾವಸ್ಥೆಯನ್ನು ಹೊಂದಬಹುದು. ಸಂಸ್ಥಾನದಲ್ಲಿಯ ನದಿಗಳಿಂದ ಬೆಳೆಗಳಿಗೆ ನೀರಿನ ಪೂರೈಕೆಯನ್ನು ಮಾಡಬಹುದು. ಇನ್ನೂ ಅನೇಕ ಸುಧಾಣೆಗಳನ್ನು ಮಾಡಬಹುದು. ಪ್ರಜಾಜನರ ಸಹಕಾದಿಂದ ರಾಜ್ಯಭಾರವನ್ನು ನಡೆಯಿಸಿದಲ್ಲಿ ಪ್ರಜೆಗಳ ತೊಂದರೆಯನ್ನು ಕಷ್ಟ ನಷ್ಟಗಳನ್ನು ಕಂಡು ಹಿಡಿದು ಅವುಗಳ ನಿವಾರಣೋಪಾಗಳನ್ನು ಶೋಧಿಸಲು ಸಾಧ್ಯವಾಗುವುದು.

## ಪ್ರಜೆಗಳಲ್ಲಿ ಜಾಗ್ರತೆ, ಶಿಸ್ತುಸಂಘಟನೆ ಬೇಕು

ಆದರೆ ಇವೆಲ್ಲವೂ ಸಾಧ್ಯವಾಗಬೇಕಾದರೆ ಪ್ರಜಾಜನರು ಜಾಗ್ರತರಾಗಬೇಕು. ಸಂಸ್ಥಾನಾಧಿಪತಿಗಳ ಉಚ್ಛೃಂಖಲ ವೃತ್ತಿಯನ್ನು ತಡೆಯುಲು ಸಿದ್ದರಾಗಬೇಕು. ಪ್ರಜಾಪ್ರಭುತ್ವ ಸರಕಾರವು ಸ್ಥಾಪಿತವಾಗುವಂತೆ ಸಂಸ್ಥಾನ ಪ್ರಜೆಗಳು ಹೋರಾಬೇಕು. ಹಾಗೂ ಅದಕ್ಕೋಸುಗ ಬೇಕಾದಂತಹ ಸ್ವಾರ್ಥತ್ಯಾಗ ಮಾಡಲು ಸಿದ್ಧರಾಗಬೇಕು. ನಿಮ್ಮ ನೆರೆಯ ಸಂಸ್ಥಾನವಾದ ಮೈಸೂರಿನಲ್ಲಿ ಪ್ರಜಾಜನರು ಈ ವಿಷಯಲ್ಲಿ ಹೇಗೆ ಮುಂದುವರಿಯುತ್ತಿರುವರೆಂಬುದನ್ನು ನೀನು ಕೇಳಿ ಓದಿ ತಿಳಿದಿರಬಹುದು. ಹಾಗೂ ವಿದುರಾಶ್ವತ್ಥದಲ್ಲಿ ಆನೇಕ ಮೈಸೂರ ಪ್ರಜೆಗಳು ಮಾಡಿದ ಪ್ರಾಣಬಲಿಯಿಂದ ಸಂಸ್ಥಾನಿಕರ ನಿರಂಕುಶವೃತ್ತಿಯ ಕಲ್ಪನೆಯಾಗದಿರದು, ಇಂತಹ ನಿರಂಕುಶ ವೃತ್ತಿಯನ್ನು ಸಂಸ್ಥಾನ ಪ್ರಜೆಗಳು ನಿರ್ಮೂಲ ಮಾಡಲು ಹೋರಾಡಬೇಕು.

## ಶಾಂತಿ ಮತ್ತು ಅಹಿಂಸಾ ತತ್ವಗಳನ್ನೇ ಅವಲಂಬಿಸಬೇಕು.

ಅಹಿಂಸಾಮಯ ಹಾಗೂ ಶಿಸ್ತು-ಸಂಘಟನಾತ್ಮಕ ಅಂದೋಲನದಿಂಲೇ ಈ ನಿರಂಕುಶ ವೃತ್ತಿಯು ತಲೆಬಾಗುವದೆಂದೂ ಜಮಖಂಡಿ ಸಂಸ್ಥಾನದ ಪ್ರಜೆಗಳು ಇದನ್ನರಿತುಕೊಂಡು ತಮ್ಮ ಹೋರಾಟವನ್ನು ಸಾಗಿಸುತ್ತ ತಮ್ಮ ಧ್ಯೇಯ ಸಾಧನೆಗಾಗಿ ಹೆಣಗಬೇಕೆಂದೂ ನಾನು ಅವರಿಗೆ ಸೂಚಿಸುತ್ತೇನೆ.

ಮತ್ತು ಮೇಲಿನ ಸಂಗತಿಗಳನ್ನು ಲಕ್ಷದಲ್ಲಿಟ್ಟುಕೊಂಡು ಆ ನಿಮ್ಮ ಪರಿಷತ್ತಿನಲ್ಲಿ ನೀವು ಮುಂದೆ ಕೈಕೊಳ್ಳಬೇಕಾದ ಕಾರ್ಯಕ್ರಮವನ್ನು ಯೋಗ್ಯರೀತಿಯಿಂದ ವಿಚಾರಮಾಡಿ ಅದರಂತೆ ಆರಿಸಬೇಕಾಗಿ ನನ್ನ ಪ್ರೇಮದ ಸೂಚನೆ ಇದೆ. ಮತ್ತು ನಿಮಗೆ ಅವಶ್ಯ ತೋರಿದಲ್ಲಿ ನನ್ನ ಹಾಯ ಸೇವೆಯು ಬೇಕಾಗಿದ್ದಲ್ಲಿ ನನ್ನ ಕೈಲಾದ ಮಟ್ಟಿಗೆ ನಿಮ್ಮೊಡನೆ ಕೆಲಸ ಮಾಡಲು ನಾನು ಒಮ್ಮನಸ್ಸಿನಿಂದ ಸಿದ್ಧನಿದ್ದೇನೆ.

ನೀವು ಈ ಪರಿಷತ್ತಿಗೆ ನನ್ನನ್ನು ಆರಿಸಿ ಗೌರವಿಸಿದ್ದಕ್ಕಾಗಿ ನಾನು ತಮ್ಮೆಲ್ಲರಿಗೆ ಮತ್ತೊಮ್ಮೆ ನನ್ನ ಕೃತಜ್ಞತೆಯನ್ನರ್ಪಿಸುತ್ತೇನೆ.

# ಗ್ರಂಥ ಋಣ

1) ದೊಡ್ಡಮೇಟಿ ಅಂದಾನಪ್ಪನವರು,
ಲೇ: ಜ್ಞಾನದೇವ ದೊಡ್ಡಮೇಟಿ,
ಪ್ರ: ವೀರಶೈವ ಅಧ್ಯಯನ ಸಂಸ್ಥೆ,
ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ (1980)

2) ಕರ್ನಾಟಕ ಏಕೀಕರಣ ಸಿದ್ಧಿ ಮತ್ತು ಸಾಧನೆ
ಲೇ: ಸೂರ್ಯನಾಥ ಯು. ಕಾಮತ್
ಪ್ರ: ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ
ಬೆಂಗಳೂರು (2003)

3) ದಿ.ದೊಡ್ಡಮೇಟಿಯವರ ದಿನಚರಿಯ ಪುಟಗಳು
(ಶ್ರೀ ದೊಡ್ಡಮೇಟಿ ಅಂದಾನಪ್ಪನವರೇ ಸ್ವ-ಹಸ್ತಾಕ್ಷರದಿಂದ ಬರೆದದ್ದು)

ಹಳ್ಳಿ-ಊರು, ನಗರ-ಜಿಲ್ಲೆ
ಮೊಗದ ಹೊಗರು ಕನ್ನಡಿ
ಎಲ್ಲ ದಿಸೆಗು ಚೆಲ್ಲುವರಿಂದ
ಚೈತನ್ಯದ ಭಾಗುದಿ

**ಚೆನ್ನವೀರ ಕಣವಿ**

# ಭಾಗ–4

## ಅಂದಾನಪ್ಪ ದೊಡ್ಡಮೇಟಿರವರ ಭಾವಚಿತ್ರ

1740-16



ಸಣ್ಣ ನೀರಾವರಿ ಸಚಿವರಾದಾಗ ಅಂದಾನಪ್ಪ ದೊಡ್ಡಮೇಟಿ "ಜಕ್ಕಲಿ" ಗೆ ಬನ್ನಿಮುಡಿಯ ಸಂದರ್ಭದಲ್ಲಿ ಬಂದಾಗ ಮನೆಯ-ಬಳಗದೊಂದಿಗೆ



ಕಾರ್ಯಾಲಯದಿಂದ..............................



ಸಚಿವ ಕೊಂಡಜ್ಜಿ ಬಸಪ್ಪನವರೊಂದಿಗೆ



ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೊಂದಿಗೆ



ರೋಣದ ಒಂದು ಸಮಾರಂಭದಲ್ಲಿ ನಿಜಲಿಂಗಪ್ಪನವರೊಂದಿಗೆ



ಶ್ರೀ ದೊಡ್ಡಮೇಟಿ ಅಂದಾನಪ್ಪನವರು 1968 ರಲ್ಲಿ ನೀರಾವರಿ ಮಂತ್ರಿಗಳಾಗಿದ್ದಾಗ ಬಿಜಾಪುರ ಜಿಲ್ಲೆಯ ಸಣ್ಣನೀರಾವರಿ ಯೋಜನೆಗಳಿಗೆ ಶಂಕುಸ್ಥಾಪನೆ ಮಾಡಿದ ಸಂದರ್ಭ



ಕನ್ನಡ ಚಿತ್ರನಟ ಶ್ರೀ ರಾಜ್‌ಕುಮಾರ್ ಅವರಿಗೆ 'ನಟಸಾರ್ವಭೌಮ' ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಸಚಿವ ದೊಡ್ಡಮೇಟಿ ಅಂದಾನಪ್ಪನವರು ರಾಜ್‌ಕುಮಾರ್ ಕುರಿತ 'ವರನಟ' ಪುಸ್ತಕವನ್ನು ಬಿಡುಗಡೆ ಮಾಡಿದ ಸಂದರ್ಭ.



ಶ್ರೀ ದೊಡ್ಡಮೇಟಿ ಅಂದಾನಪ್ಪನವರು 1953 ಜನವರಿಯಲ್ಲಿ ತಮ್ಮ ಗ್ರಾಮವಾದ ಜಕ್ಕಲಿಯಲ್ಲಿ ಸಂಘಟಿಸಿದ "ಕರ್ನಾಟಕ ನಿರ್ಮಾಣ ಶಿಬಿರ" ದಲ್ಲಿ ಪೂಜಿಸಲ್ಪಟ್ಟ ಮೊಟ್ಟಮೊದಲನೆಯ ಐತಿಹಾಸಿಕ ಕರ್ನಾಟಕ ಮಾತೆ ಶ್ರೀ ಭುವನೇಶ್ವರಿಯ ತೈಲವರ್ಣ ಚಿತ್ರ [ಪರಿಕಲ್ಪನೆ : ಶ್ರೀ ದೊಡ್ಡಮೇಟಿ ಅಂದಾನಪ್ಪ ಕಲಾವಿದ : ಶ್ರೀ ಸಿ.ಎನ್. ಪಾಟೀಲ. ಗದಗ]

# ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

## ಪ್ರಕಟಗೊಂಡ ಪುಸ್ತಕಗಳು

| ಕ್ರ.ಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ದರ |
|---|---|---|---|
| 1. | ಕೆ. ಹನುಮಂತಯ್ಯ | ಪ್ರೊ॥ ಎನ್.ಬಿ. ಪಂಗಣ್ಣಾಯ್ಯ ಹಾಗೂ ಇತರರು | 20–00 |
| 2. | ಎಸ್. ನಿಜಲಿಂಗಪ್ಪ | ಡಾ॥ ಸಂದೀಪ್ ಶಾಸ್ತ್ರಿ | 15–00 |
| 3. | ಶಾಂತವೇರಿ ಗೋಪಾಲಗೌಡ | ಪ್ರೊ॥ ಎನ್.ಬಿ. ಪಂಗಣ್ಣಾಯ್ಯ | 15–00 |
| 4. | ವೈಕುಂಠ ಬಾಳಿಗಾ | ಡಾ॥ ಪಿ. ಜೀವನ್ ಕುಮಾರ್ | 20–00 |
| 5. | ವೀರೇಂದ್ರ ಪಾಟೀಲ್ | ಡಾ॥ ಎಸ್.ಹೆಚ್. ಕವಂಟೆ ಹಾಗೂ ಇತರರು | 20–00 |
| 6. | ಕಡಿದಾಳ್ ಮಂಜಪ್ಪ | ಡಾ॥ ಎಸ್.ಹೆಚ್. ಕವಂಟೆ ಹಾಗೂ ಇತರರು | 15–00 |
| 7. | ಜಿ.ವಿ. ಹಳ್ಳಿಕೇರಿ | ಡಾ. ಆರ್.ಎಂ.ಎಲ್. ಪಾಟೀಲ್ | 15–00 |
| 8. | ಕೆ.ಎಸ್. ನಾಗರತ್ನಮ್ಮ | ಪ್ರೊ॥ ಎಸ್.ಬಿ. ಪಂಗಣ್ಣಾಯ್ಯ ಹಾಗೂ ಇತರರು | 15–00 |
| 9. | ಡಿ. ದೇವರಾಜ ಅರಸು | ಜೆ.ಎಸ್. ಸದಾನಂದ | 15–00 |
| 10. | ಕೆ.ಟಿ. ಭಾಷ್ಯಂ | ಡಾ. ವಿಘ್ನೇಶ್ ಎನ್. ಭಟ್ | 15–00 |
| 11. | ಕೆ. ಪುಟ್ಟಸ್ವಾಮಿ | ಜಿ. ದಕ್ಷಿಣಾ ಮೂರ್ತಿ | 15–00 |
| 12. | ಟಿ. ಸಿದ್ದಲಿಂಗಯ್ಯ | ಜಿ. ದಕ್ಷಿಣಾ ಮೂರ್ತಿ | 20–00 |
| 13. | ಜಗಳೂರು ಇಮಾಂ | ಜೆ.ಎಸ್. ಸದಾನಂದ | 15–00 |

1740-17

| | | | |
|---|---|---|---|
| 14. | ಕೆ.ಸಿ. ರೆಡ್ಡಿ | ಡಾ. ಸಂಧ್ಯಾರೆಡ್ಡಿ | 20–00 |
| 15. | ಬಿ.ವಿ. ಕಕ್ಕಿಲ್ಲಾಯ | ಎಂ.ಕೆ. ಭಂಡಿ | 20–00 |
| 16. | ಹೆಚ್.ಎಂ. ಚೆನ್ನಬಸಪ್ಪ | ಪ್ರೊ॥ ಬಿ.ಎಸ್. ಚಂದ್ರಯ್ಯ | 20–00 |
| 17. | ಬಿ. ರಾಚಯ್ಯ | ನಂಜಯ್ಯ ಹೊಂಗನೂರ್ | 20–00 |
| 18. | ಎಂ. ನಾಗಪ್ಪ | ಡಾ. ಎಂ.ಎಸ್., ಪಾಟೀಲ್ | 15–00 |
| 19. | ಜೆ.ಬಿ. ಮಲ್ಲಾರಾಧ್ಯ | ಡಾ. ಹೆಚ್.ಎಂ.ಪಂಚಾಕ್ಷರಯ್ಯ | 15–00 |
| 20. | ಗಂಗಾಧರ್ ನಮೋಶಿ | ಡಾ. ಕವಂಟೆ ಹಾಗೂ ಇತರರು | 15–00 |
| 21. | ಬಿ.ಡಿ. ಜತ್ತಿ | ಕೃಷ್ಣ ಕೊಲ್ಹಾರ ಕುಲಕರ್ಣಿ | 15–00 |
| 22. | ಆರ್. ಗುಂಡೂರಾವ್ | ಈಶ್ವರ ದೈತೋಟ | 20–00 |
| 23. | ಕೆ.ಎಚ್. ಪಾಟೀಲ್ | ಎಂ.ಕೆ. ಭಂಡಿ | 15–00 |
| 24. | ಅಜೀಜ್ ಸೇಠ್ | ಹೆಚ್.ಕೆ. ಬಾಲಸೂರಿ | 15–00 |
| 25. | ಸಿ.ಎಂ. ಆರ್ಮುಗಂ | ಹೆಚ್.ಕೆ. ಬಾಲಸೂರಿ | 15–00 |
| 26. | ಜೆ.ಹೆಚ್. ಪಟೇಲ್ | ಶೇಷಚಂದ್ರಿಕ | 30–00 |
| 27. | ಬಿ.ಎಲ್. ಸುಬ್ಬಮ್ಮ | ಡಾ. ಡಿ.ಎಸ್. ಜಯಪ್ಪಗೌಡ | 15–00 |
| 28. | ಟಿ.ಆರ್. ಶಾಮಣ್ಣ | ಎಲ್.ಎನ್. ಮುಕುಂದರಾಜ್ | 20–00 |
| 29. | ಎಸ್.ಡಿ. ಗಾಂವಕರ್ | ಮೋಹನ್ ವೆರ್ಣೇಕರ್ | 20–00 |
| 30. | ಎಂ.ಪಿ.ಎಲ್. ಶಾಸ್ತ್ರಿ | ಹಾರೋಗದ್ದೆ ಉಷಾ ರಮೇಶ್ ನಾಯಕ್ | 20–00 |
| 31. | ಎಸ್. ಶಿವಪ್ಪ | ಕೂಡ್ಲಿಗೆರೆ ಮಲ್ಲಿಕಾರ್ಜುನ | 30–00 |
| 32. | ಕಾಗೋಡು ಚಳವಳಿ | ಕೂಡ್ಲಿಗೆರೆ ಮಲ್ಲಿಕಾರ್ಜುನ | 15–00 |
| 33. | ಕೆ.ವಿ. ಶಂಕರಗೌಡ | ಜಗದೀಶ ಕೊಪ್ಪ | 20–00 |
| 34. | ಟಿ.ಎನ್. ನರಸಿಂಹಮೂರ್ತಿ | ಕೆ.ಜೆ. ಸುರೇಶ್ | 25–00 |
| 35. | ಎಸ್.ಆರ್. ಕಂಠಿ | ಮನು ಬಳಿಗಾರ್ | 30–00 |

| | | | |
|---|---|---|---|
| 36. | ಎಸ್.ಸಿ. ಮಲ್ಲಯ್ಯ | ಡಾ. ಟಿ.ಸಿ. ಪೂರ್ಣಿಮ | 20–00 |
| 37. | ಅಬ್ದುಲ್ ನಜೀರ್‌ಸಾಬ್ | ಮನು ಬಳಿಗಾರ್ | 30–00 |
| 38. | ಪಿ.ಎಂ. ನಾಡಗೌಡ | ಗಂಗಾಧರಯ್ಯ ಹಿರೇಮಠ | 30–00 |
| 39. | ಕೆ. ಪಟ್ಟಾಭಿರಾಮನ್ | ಸಂಜಯ್ ದೊರೆ | 20–00 |
| 40. | ಎಂ.ಎಸ್.ಕೃಷ್ಣನ್ | ಹೆಚ್.ಕೆ. ಬಾಲಸೂರಿ | 20–00 |
| 41. | ಎಂ.ವಿ. ಕೃಷ್ಣಪ್ಪ | ಜೆ.ಜಿ. ನಾಗರಾಜ್ | 15–00 |
| 42. | ಕೆ.ಎಚ್. ರಂಗನಾಥ್ | ಎಲ್.ಎನ್. ಮುಕುಂದರಾಜ್ | 20–00 |
| 43. | ರಾಮಕೃಷ್ಣ ಹೆಗಡೆ | ಶೂದ್ರ ಶ್ರೀನಿವಾಸ್ | 20–00 |
| 44. | ಸಿ. ಬೈರೇಗೌಡ | ಪ್ರಹ್ಲಾದರಾವ್ | 20–00 |
| 45. | ಎಸ್.ಎಂ. ಯಾಹ್ಯಾ | ಬಿ.ಎಂ. ಹನೀಫ್ | 20–00 |
| 46. | ಬಾಪುಗೌಡ ದರ್ಶನಾಪುರ | ಗಂಗಾಧರಯ್ಯ ಹಿರೇಮಠ | 20–00 |
| 47. | ಡಾ॥ ಎಚ್. ನರಸಿಂಹಯ್ಯ | ಪ್ರೊ॥ ಗಂಗಾಧರ ಮೂರ್ತಿ | 20–00 |
| 48. | ಕರ್ನಾಟಕ ಏಕೀಕರಣ ಮತ್ತು ನಾಮಕರಣ | ಡಾ. ಸಿ.ಆರ್. ಗೋವಿಂದರಾಜ್ | 15–00 |
| 49. | ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು ಸಂಪುಟ–1 | ಡಾ. ಎಂ.ಜಿ. ನಾಗರಾಜ್ | 15–00 |
| 50. | ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು ಸಂಪುಟ–2 | ಡಾ. ಎಂ.ಜಿ. ನಾಗರಾಜ್ | 25–00 |
| 51. | ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು ಸಂಪುಟ–3 | ಡಾ. ಎಂ.ಜಿ. ನಾಗರಾಜ್ | 25–00 |
| 52. | ಬಿ.ಎಂ. ಹೊರಕೇರಿ | ಡಾ. ಎಂ.ಎಸ್. ಪಾಟೀಲ | 20–00 |
| 53. | ಕೆ. ಕೆಂಚಪ್ಪ | ಚಂದ್ರಶೇಖರ ತಾಳ್ಯ | 20–00 |

1740-18

| | | | |
|---|---|---|---|
| 54. | ಕೇಶವರಾವ ನಿಟ್ಟೂರಕರ್ | ಡಾ. ಜಿ.ಬಿ. ವಿಸಾಜಿ | 20–00 |
| 55. | ಸರದಾರ ಶರಣಗೌಡ ಇನಾಂದಾರ | ಡಾ. ಬಿ.ವ್ಹಿ. ಮಲ್ಲಾಪುರ | 20–00 |
| 56. | ಬಸವರಾಜೇಶ್ವರಿ | ಪ್ರಹ್ಲಾದ ಬೆಟಗೇರಿ | 20–00 |
| 57. | ಕೊಲೂರು ಮಲ್ಲಪ್ಪ | ಗಂಗಾಧರಯ್ಯ ಹಿರೇಮಠ, ಡಾ. ದೇ.ಮಾ. ಪಾಟೀಲ | 20–00 |
| 58. | ದೇವೇಂದ್ರಪ್ಪ ಘಾಳಪ್ಪ ಜಮಾದಾರ | ಡಾ. ನಾಗಬಾಯಿ ಬಿ.ಬುಳ್ಳಾ | 20–00 |
| 59. | ಮೊಹಮ್ಮದ್ ಅಲಿ | ಪ್ರೊ। ಶಿವರಾಜ ಪಾಟೀಲ | 20–00 |
| 60. | ಬಿ. ಶ್ಯಾಮಸುಂದರ್ | ಗಂಧರ್ವ ಸೇನಾ | 20–00 |
| 61. | ಶಂಕರಶೆಟ್ಟಿ ಪಾಟೀಲ | ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ | 20–00 |

## ಭಾಷಾಂತರ ಪುಸ್ತಕಗಳು

| ಕ್ರ.ಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ದರ |
|---|---|---|---|
| 1. | ಡಾ॥ ಬಿ.ಆರ್. ಅಂಬೇಡ್ಕರ್ | ಭಾಷಾಂತರ ನಿರ್ದೇಶನಾಲಯ | 20–00 |
| 2. | ಡಾ॥ ರಾಂ ಮನೋಹರ ಲೋಹಿಯಾ | ಭಾಷಾಂತರ ನಿರ್ದೇಶನಾಲಯ | 15–00 |
| 3. | ವಿ.ಕೆ. ಕೃಷ್ಣಮೆನನ್ | ರಾಜ್ಯ ಭಾಷಾ ಆಯೋಗದ ಅಧ್ಯಕ್ಷರು | 20–00 |
| 4. | ಡಾ॥ ಶ್ಯಾಂಪ್ರಸಾದ್ ಮುಖರ್ಜಿ | ಭಾಷಾಂತರ ನಿರ್ದೇಶನಾಲಯ | 20–00 |
| 5. | ಶೇಕ್ ಮಹಮದ್ ಅಬ್ದುಲ್ಲಾ | ಭಾಷಾಂತರ ನಿರ್ದೇಶನಾಲಯ | 15–00 |
| 6. | ಡಾ॥ ರಾಜೇಂದ್ರ ಪ್ರಸಾದ್ | ಆರ್.ಕೆ. ಹುಡುಗಿ | 20–00 |
| 7. | ಭೂಪೇಶ್ ಗುಪ್ತ | ಆರ್.ಕೆ. ಹುಡುಗಿ | 20–00 |
| 8. | ಅನಂತಶಯನಂ ಅಯ್ಯಂಗಾರ್ | ಭಾಷಾಂತರ ನಿರ್ದೇಶನಾಲಯ | 15–00 |
| 9. | ರಾಜಕುಮಾರಿ ಅಮೃತ್‌ಕೌರ್ | ಕೆ.ಹೆಚ್. ಸಾವಿತ್ರಿ | 20–00 |
| 10. | ಡಾ॥ ಚಿಂತಾಮನ್ ಡಿ. ದೇಶಮುಖ್ | ಬೇಲೂರು ಸುದರ್ಶನ್ | 20–00 |
| 11. | ಪನಂಪಿಲ್ಲಿ ಗೋವಿಂದ ಮೆನನ್ | ಭಾಷಾಂತರ ನಿರ್ದೇಶನಾಲಯ | 15–00 |
| 12. | ಜೈ ಸುಖಲಾಲ್ ಹಾಥಿ | ಎಸ್. ಸುಮಿತ್ರ | 15–00 |
| 13. | ಎಸ್.ಎಂ. ಜೋಷಿ | ಕೆ.ಹೆಚ್. ಸಾವಿತ್ರಿ | 15–00 |
| 14. | ಡಾ॥ ಲಂಕಾ ಸುಂದರಂ | ಜವರಯ್ಯ | 15–00 |

ಸರ್ಕಾರಿ ಮುದ್ರಣಾಲಯ, ಕೆಂಗೇರಿ, ಬೆಂಗಳೂರು–59.